ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆ

(ಟಿವಿ ಮಾಧ್ಯಮದಲ್ಲಿ ನಿಯತಕಾಲಿಕವಾಗಿ ದುಡಿಯುತ್ತಿರುವ ಮಹಿಳೆಯರನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಶರಣಪ್ಪ ಅದ್ದೂರ

ಮಾರ್ಗದರ್ಶಕರು
ಡಾ.ಶೈಲಜ ಹಿರೇಮಠ
ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ೫೮೩ ೨೭೬
೨೦೧೮

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆ

(ಟಿವಿ ಮಾಧ್ಯಮದಲ್ಲಿ ನಿಯತಕಾಲಿಕವಾಗಿ ದುಡಿಯುತ್ತಿರುವ ಮಹಿಳೆಯರನ್ನು ಅನುಲಕ್ಷಿಸಿ)

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಶರಣಪ್ಪ ಅಡ್ನೂರ

ಮಾರ್ಗದರ್ಶಕರು

ಡಾ.ಶೈಲಜ ಹಿರೇಮಠ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ–೫೮೩೨೭೬

೨೦೧೮

ಸಂಶೋಧಕರ ಘೋಷಣಾ ಪತ್ರ

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆ (ಟಿವಿ ಮಾಧ್ಯಮದಲ್ಲಿ ನಿಯತಕಾಲಿಕವಾಗಿ ದುಡಿಯುತ್ತಿರುವ ಮಹಿಳೆಯರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೊಧನಾ ಮಹಾಪ್ರಬಂಧವನ್ನು ಡಾ.ಶೈಲಜ ಹಿರೇಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

31/01/2018

ದಿನಾಂಕ : ೩೧.೦೧.೨೦೧೮

ಸ್ಥಳ : ವಿದ್ಯಾರಣ್ಯ

(ಶರಣಪ್ಪ ಅಡ್ನೂರ)

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ,ಹಂಪಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಶರಣಪ್ಪ ಅಡ್ನೂರ ಇವರು ಸಿದ್ಧಪಡಿಸಿದ **ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆ (ಟಿವಿ ಮಾಧ್ಯಮದಲ್ಲಿ ನಿಯತಕಾಲಿಕವಾಗಿ ದುಡಿಯುತ್ತಿರುವ ಮಹಿಳೆಯರನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಸಂಶೊಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

31.01.2018

ಡಾ.ಶೈಲಜ ಹಿರೇಮಠ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ ,ಹಂಪಿ

ದಿನಾಂಕ : ೩೧.೦೧.೨೦೧೮

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅನುಬಂಧಗಳು :

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

1.1. ಅಧ್ಯಯನದ ಉದ್ದೇಶ

1.2. ಅಧ್ಯಯನದ ವ್ಯಾಪ್ತಿ

1.3. ಅಧ್ಯಯನದ ವೈಧಾನಿಕತೆ

1.4. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಮತ್ತು ಸ್ವರೂಪ

ಸಮಾನ ಹಕ್ಕು, ಸಮಾನ ಸ್ಥಾನಮಾನ ಮತ್ತು ಸ್ವಾತಂತ್ರ್ಯ ಇವು ಸ್ತ್ರೀವಾದದ ಮೂಲ ಕಲ್ಪನೆಗಳು. ಆದರೆ, ಪಿತೃಪ್ರಧಾನ ಸಂಸ್ಕೃತಿಯ ಈ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯನ್ನು ನಿರಂತರವಾಗಿ ಎರಡನೆಯ ದರ್ಜೆಯಲ್ಲಿಯೇ ಶಾಶ್ವತಗೊಳಿಸುವ ಹುನ್ನಾರ ಆಯಾ ಕಾಲಕ್ಕೆ ನಡೆಯುತ್ತಲೇ ಬಂದಿದೆ. ಹಾಗಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಹೆಣ್ಣು ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾಳೆ. ಈ 21ನೆಯ ಶತಮಾನದಲ್ಲೂ ಮಹಿಳೆಯರು ಇನ್ನೂ ತನ್ನತನದ ಅಸ್ತಿತ್ವಕ್ಕಾಗಿ ಹೋರಾಟ ಮಾಡುವಂತಹ ಅನಿವಾರ್ಯತೆ ಸೃಷ್ಟಿಯಾಗಿದೆ. ಇದೆಲ್ಲವೂ ಉದ್ದೇಶಪೂರ್ವಕವಾಗಿಯೇ ಮಾಡುತ್ತಿರುವ ಕುತಂತ್ರ ಎಂದು ಮಹಿಳಾಪರ ಹೋರಾಟಗಾರರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ವಿದ್ಯುನ್ಮಾನ ಮಾಧ್ಯಮದಲ್ಲಿಯೂ ಮಹಿಳೆಯರ ಮೇಲೆ ಹಲವಾರು ಮಾನಸಿಕ ಹಿಂಸೆಗಳು ನಡೆಯುತ್ತಿದ್ದರೂ ಅವುಗಳು ಹೊರಗಿನ ಪ್ರಪಂಚಕ್ಕೆ ಗೋಚರಿಸುತ್ತಿಲ್ಲ. ಇವುಗಳ ಹೊರತಾಗಿಯೂ ಕೆಲವು ಮಹಿಳೆಯರು ಈ ವಲಯದಲ್ಲಿ ಗಟ್ಟಿಯಾಗಿ ನೆಲೆಯೂರಿರುವುದು ಕಂಡುಬರುತ್ತದೆ.

ಮಾಧ್ಯಮವನ್ನು ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಪರಿಗಣಿಸಲಾಗಿದೆ. ಅತೀ ದೊಡ್ಡ ಮಟ್ಟದಲ್ಲಿ ಪ್ರಭಾವ ಬೀರುವಂತಹ ಗುಣ ಕೂಡ ಇದಕ್ಕಿದೆ. ಸಂವಿಧಾನದತ್ತವಾಗಿರುವ ಎಲ್ಲರಿಗೂ ಸಮಾನ ಹಕ್ಕನ್ನು ಬೋಧಿಸಬೇಕಿದ್ದ ಈ ಮಾಧ್ಯಮ ಕ್ಷೇತ್ರ ಕೂಡ ಇಂದು ಪುರುಷ ಪ್ರಾಬಲ್ಯದಿಂದ ಹೊರತಾಗಿಲ್ಲ. ವಿದ್ಯುನ್ಮಾನ ಮಾಧ್ಯಮವು ರಂಗಿನ ಪ್ರಪಂಚವಾಗಿ ಬದಲಾಗಿದ್ದು, ಟಿವಿ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರ ಬಗ್ಗೆ ಈಗಾಗಲೇ ಚರ್ಚೆಗಳು ನಡೆದಿವೆ. ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸ್ಥಾನಮಾನ, ಮಹಿಳೆಯರ ಪ್ರಗತಿ, ಸಮಾನ ಸ್ಥಾನದ

ನೆಲೆ, ಸಮಸ್ಯೆ, ಹೊಸ ಸವಾಲು ಮತ್ತು ಸಾಧ್ಯತೆಗಳನ್ನು ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸುವುದು ಪ್ರಸ್ತುತ ಅಗತ್ಯವಿದೆ.

ಅಂತಾರಾಷ್ಟ್ರೀಯ ಮಾಧ್ಯಮಗಳಂತೆಯೇ ಭಾರತೀಯ ಮಾಧ್ಯಮಗಳು ಕೂಡ ತಮ್ಮ ವಿಶಾಲ ಕಾರ್ಯವ್ಯಾಪ್ತಿ ಮತ್ತು ವಿಶಿಷ್ಟ ಕಾರ್ಯಾಚರಣೆಗಳಿಂದ ಗಮನ ಸೆಳೆಯುತ್ತಿವೆ. ಅದರಲ್ಲೂ ನೂತನ ಸಹಸ್ರಮಾನದಲ್ಲಿ ಅನೇಕ ಟೆಲಿವಿಷನ್ ವಾಹಿನಿಗಳು ದೇಶಾದ್ಯಂತ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿವೆ. ಅದರಂತೆಯೇ ಪ್ರಾದೇಶಿಕ ವಾಹಿನಿಗಳು ಕೂಡ ತಮ್ಮದೇ ಆದ ಕಾರಣಗಳಿಂದಾಗಿ ಗಮನ ಸೆಳೆಯುತ್ತಿವೆ. ರಾಷ್ಟ್ರೀಯ ಸುದ್ದಿವಾಹಿನಿಗಳಂತೆಯೇ ಸಮಾಜದ ಮೇಲೆ ಪ್ರಭಾವ ಬೀರುತ್ತಿವೆ. ಸದ್ಯ ಕರ್ನಾಟಕ ರಾಜ್ಯದಲ್ಲಿ ಸುಮಾರು 32ಕ್ಕೂ ಹೆಚ್ಚು ಟಿವಿ ಸುದ್ದಿವಾಹಿನಿಗಳು ಮತ್ತು ಮನರಂಜನೆ ವಾಹಿನಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕನ್ನಡ ಟಿವಿ ಸುದ್ದಿವಾಹಿನಿಗಳಲ್ಲಿ ಮಹಿಳಾ ಉದ್ಯೋಗಿಗಳ ಸ್ಥಾನಮಾನ, ಸಮಸ್ಯೆಗಳು ಮತ್ತು ಅವಕಾಶಗಳನ್ನು ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸುವುದು ಪ್ರಸ್ತುತ ಸಂಶೋಧನೆಯ ಪ್ರಧಾನ ಆಶಯವಾಗಿದೆ.

1.1. ಅಧ್ಯಯನದ ಉದ್ದೇಶ :

ವಿದ್ಯುನ್ಮಾನ ಮಾಧ್ಯಮ ಕುರಿತಂತೆ ಅಧ್ಯಯನವನ್ನು ಮಾಡಬೇಕೆಂದರೆ, ಇಲ್ಲಿ ಮಹಿಳೆಯರ ಕುರಿತು ಅಧ್ಯಯನಗಳನ್ನು ಮಾಡಲೇಬೇಕು. ಮಹಿಳೆಯನ್ನು ವ್ಯಾಪ್ತಿಯಾಚೆ ಇಡುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಗೇ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಬೇರೆ ಬೇರೆ ಕ್ಷೇತ್ರಗಳನ್ನು ಗಮನಿಸಿದರೆ ಆ ಕ್ಷೇತ್ರಗಳಲ್ಲಿ ಮಹಿಳೆಯರಿಗೆಂದೇ ಮೀಸಲಾತಿಯನ್ನು ನೀಡಲಾಗಿರುತ್ತದೆ. ಆದರೆ, ವಿದ್ಯುನ್ಮಾನ ಮಾಧ್ಯಮದಲ್ಲಿ ಮೀಸಲಾತಿ ಇಲ್ಲದೇ ಮಹಿಳೆಯರು ಹೆಚ್ಚು ಕೆಲಸ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಹಾಗಂತ, ಅಲ್ಲಿ ಆಕೆಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದಾರೆ, ಲಿಂಗ ಅಸಮಾನತೆಯ ತೊಲಗಿಸುವ ಪ್ರಯತ್ನ ಅಥವಾ ಅವಳ ಶ್ರೇಯೋಭಿವೃದ್ಧಿಗಾಗಿ ಹೊಸ ಆಶಯ ಎಂಬ ಆಶಾವಾದವನ್ನು ಹೊಂದುವಂತಿಲ್ಲ. ಅದರ ಹಿಂದಿರುವ ಉದ್ದೇಶ ಕೇವಲ ಗ್ರಾಹಕರನ್ನು ಸೆಳೆಯುವ ಏಕೈಕ ಮಾರ್ಗ. ಮಹಿಳೆ ಎಷ್ಟೇ ಪ್ರೌಢಿಮೆಯನ್ನು ಹೊಂದಿದ್ದರೂ, ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ, ಎಂಥದ್ದೇ ಪದವಿಯನ್ನು ಪಡೆದಿದ್ದರೂ, ಆರ್ಥಿಕವಾಗಿ ಸಬಲಳಾಗಿದ್ದರೂ, ಈ ತಂತ್ರಗಾರಿಕೆಯಲ್ಲಿ ಸಿಲುಕಿಕೊಳ್ಳಲೇಬೇಕು.

ವಿದ್ಯುನ್ಮಾನ ಮಾಧ್ಯಮವು ಇಂದು ಉದ್ಯಮವಾಗಿದೆ. ಈ ಉದ್ಯಮದಲ್ಲಿ ಮಹಿಳೆಯರಿಗೆ ದೊರೆತಿರುವ, ದೊರೆಯದಿರುವ ಉದ್ಯೋಗಗಳನ್ನು ಹಾಗೂ ಅವುಗಳ ಸ್ವರೂಪಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಹಾಗೆಯೇ ಅವುಗಳಿಗೆ ಇರುವ ಕಾರಣಗಳನ್ನು ವೃತ್ತಿ, ವಿದ್ಯುನ್ಮಾನ ಮಾಧ್ಯಮದ ನೆಲೆಯಿಂದ, ಸಾಮಾಜಿಕ ನೆಲೆಯಿಂದ ಶೋಧಿಸಲು ಪ್ರಯತ್ನಿಸಲಾಗುವುದು. ಹಾಗೆಯೇ ಈ ಅಧ್ಯಯನದಲ್ಲಿ ವಿದ್ಯುನ್ಮಾನ ಮಾಧ್ಯಮವನ್ನು ಸಾಂಸ್ಕೃತಿಕ ಸಂರಚನೆಯ ಘಟಕವಾಗಿ ಪರಿಭಾವಿಸಲಾಗಿದೆ. ಇಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ಹೇಗೆ ಬಳಸಿಕೊಳ್ಳುತ್ತಿದೆ. ಅದು ಮಹಿಳಾ ಸಮುದಾಯದ ಹಿನ್ನಡೆಗೆ ಹೇಗೆ ಕಾರಣವಾಗುತ್ತಿದೆ ಎನ್ನುವುದರ ಶೋಧವನ್ನು ನಡೆಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಟಿವಿ ಮಾಧ್ಯಮದಲ್ಲಿ ಸಂಖ್ಯೆಯಲ್ಲಿ ಮಹಿಳಾ ಉದ್ಯೋಗಿಗಳೇ ಪುರುಷರಿಗಿಂತ ಅಧಿಕವಾಗಿದ್ದಾರೆ. ಈ ಮಾಧ್ಯಮದಲ್ಲಿನ ಪುರುಷ ಕೇಂದ್ರಿತ ಉದ್ಯೋಗ ವಲಯವು ಮಹಿಳಾ ಕೇಂದ್ರಿತ ವಲಯವಾಗಿ ಬಹುದೊಡ್ಡ ತಿರುವು ಪಡೆದುಕೊಂಡಿದೆ ಎಂದು ಸಂಭ್ರಮಿಸಬೇಕೆ? ಅಥವಾ ಸಾಂಸ್ಕೃತಿಕ ಸಂಚಲನೆಯ ಘಟಕದ ರಾಜಕಾರಣವಾಗಿ ಪರಿಭಾವಿಸಬೇಕೆ? ಎನ್ನುವುದರ ಶೋಧವನ್ನು ಪ್ರಸ್ತುತ ಅಧ್ಯಯನ ನಡೆಸಿದೆ.

ಮಹಿಳಾ ಸಮುದಾಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಿಚಾರಗಳು–ವಿಷಯಗಳು ಇದ್ದರೂ, ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವಂತಹ ಮಹಿಳೆಯರ ಕುರಿತಾದ ವಿಷಯಗಳು ಪ್ರಮುಖವಾದ ಚರ್ಚಿತ ವಿಷಯಗಳೆಂದು ತಿಳಿದುಕೊಂಡೇ ಇಲ್ಲ. ಹಾಗಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಕುರಿತಾಗಿ ಸೂಕ್ಷ್ಮವಾದ ಸಂಶೋಧನೆಯ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮಾಧ್ಯಮ ಮತ್ತು ಮಹಿಳೆ ಎರಡನ್ನೂ ಪ್ರತ್ಯೇಕವಾಗಿ ವಿಂಗಡಿಸಿಕೊಂಡು ನೋಡಬೇಕಾದ ಅಗತ್ಯತೆ ಇರುವುದರಿಂದ ಇಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಾವವು ಮತ್ತು ಅವುಗಳು ಹೇಗೆ ಅವರಿಗೆ ಸವಾಲುಗಳಾಗಿ ಪರಿವರ್ತಿತಗೊಂಡಿವೆ ಎಂಬುದನ್ನು ಚರ್ಚಿಸುವ ಉದ್ದೇಶ ಹೊಂದಲಾಗಿದೆ.

ವಿದ್ಯುನ್ಮಾನ ಮಾಧ್ಯಮಗಳು ಮಹಿಳೆಯರನ್ನು ಹಲವು ಬಗೆಯಲ್ಲಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಮುಖ್ಯವಾಗಿ ಮಹಿಳೆಯರು ಮಾಧ್ಯಮಗಳಿಗೆ ಬಂಡವಾಳ**ವಾಗಿ** ಮಾರ್ಪಟ್ಟಿರುವುದರ ಹಿಂದಿನ ಧೋರಣೆಯನ್ನು ಅರಿಯುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮಾಧ್ಯಮಗಳು ಮಹಿಳೆಯರನ್ನು ಯಾವ ಬಗೆಯಲ್ಲಿ ಚಿತ್ರಿಸುತ್ತಿದ್ದಾರೆ, ಅವುಗಳು ಮಹಿಳಾ ವ್ಯಕ್ತಿತ್ವವನ್ನು ವಿರೂಪಗೊಳಿಸುತ್ತಿವೆಯಾ?

ಮಹಿಳೆಯರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ವಿದ್ಯುನ್ಮಾನ ಮಾಧ್ಯಮದ ಪಾತ್ರವೇನು ಎಂಬಂತಹ ಅಂಶಗಳನ್ನು ಗುರುತಿಸಿಕೊಂಡು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುವ ಉದ್ದೇಶವನ್ನು ಹೊಂದಲಾಗಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸಿಯೇ ಈ ವಲಯಕ್ಕೆ ಕಾಲಿಟ್ಟಿರುವುದು ಕಂಡುಬರುತ್ತದೆ. ಹಾಗಾಗಿ ಇವರು ಮಾಧ್ಯಮವನ್ನು ಪ್ರವೇಶಿಸುವ ಪೂರ್ವದಲ್ಲಿ, ಮಾಧ್ಯಮ ವಲಯಕ್ಕೆ ಪ್ರವೇಶ ಪಡೆದ ನಂತರ ಎದುರಿಸಿದ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುವ ಉದ್ದೇಶವನ್ನು ಹೊಂದಲಾಗಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿದೆಯೆ?, ಸಾಮಾಜಿ ಹಾಗೂ ಆರ್ಥಿಕ ಸಬಲೀಕರಣಕ್ಕೆ ಕಾರಣವಾಗಿದೆಯೇ ಎಂಬುದನ್ನು ತಿಳಿಯುವ ಉದ್ದೇಶವನ್ನು ಹೊಂದಲಾಗಿದೆ.

ವಿದ್ಯುನ್ಮಾನ ಮಾಧ್ಯಮಕ್ಕೆ ಸಂಬಂಧಿಸಿದಂತೆ ಇಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿಗಾಗಿ ಯಾವುದಾದರೂ ಕಾಯಿದೆ ಅಥವಾ ಕಾನೂನುಗಳು ಇವೆಯೇ? ಇದ್ದರೆ ಅವುಗಳನ್ನು ಒದಗಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತವರಿಗೆ ಪ್ರತ್ಯೇಕವಾದ ಕಾಯಿದೆ ಕಾನೂನುಗಳನ್ನು ರೂಪಿಸುವ ಅಗತ್ಯವಿದೆಯೇ ಎಂಬುದನ್ನು ವಿಶ್ಲೇಷಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

1.2 ಅಧ್ಯಯನದ ಮಹತ್ವ :

ಕನ್ನಡ ದೂರದರ್ಶನ ಮಾಧ್ಯಮಕ್ಕೆ ಮೂರು ದಶಕಗಳ ಇತಿಹಾಸವಿದೆ. ಅದರಲ್ಲೂ ಕನ್ನಡ ಸುದ್ದಿ ವಾಹಿನಿಗಳಿಗೆ ಒಂದೂವರೆ ದಶಕಗಳ ಇತಿಹಾಸವಷ್ಟೆ. ಕಳೆದ ಏಳೆಂಟು ವರ್ಷಗಳಲ್ಲಿ ಕರ್ನಾಟಕದಲ್ಲಿ ಟೆಲಿವಿಷನ್ ಮಾಧ್ಯಮ ಅಚ್ಚರಿಯ ರೀತಿಯಲ್ಲಿ ಬೆಳೆದು ನಿಂತಿದೆ ಮತ್ತು ಬೆಳೆಯುತ್ತಿದೆ. ಮನರಂಜನೆಯ ವಾಹಿನಿಗಳ ಜೊತೆ ಜೊತೆಗೆ ಸುದ್ದಿ ವಾಹಿನಿಗಳ ಸಂಖ್ಯೆಯೂ ಕನ್ನಡದಲ್ಲಿ ಹೆಚ್ಚುತ್ತಿವೆ. ಈಗಾಗಲೇ ಹದಿನಾಲ್ಕು ಸುದ್ದಿ ವಾಹಿನಿಗಳು ಪ್ರಸಾರ ಆರಂಭಿಸಿದ್ದರೆ, ಇನ್ನೂ ಐದು ಸುದ್ದಿ ವಾಹಿನಿಗಳು ಬರಲು ಸಿದ್ಧತೆ ನಡೆಸಿವೆ. ಹಾಗಾಗಿ ಮಾಧ್ಯಮ ಸಂಸ್ಥೆಗಳು ಬೆಳೆಯುವುದರ ಜೊತೆಗೆ ಅದರ ಉದ್ಯೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಸದ್ಯ ಕನ್ನಡ ಸುದ್ದಿ ವಾಹಿನಿಗಳಲ್ಲಿ ಅನೇಕ ಮಹಿಳಾ ಉದ್ಯೋಗಿಗಳು ತೆರೆಯ ಹಿಂದೆ ಮತ್ತು

ಮುಂದೆ ಕೆಲಸ ಮಾಡುತ್ತಿದ್ದಾರೆ. ಪ್ರಸ್ತುತ ಅಧ್ಯಯನವು ಟೆಲಿವಿಷನ್ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿಗಳ ಒಟ್ಟಾರೆ ಸ್ಥಿತಿಯನ್ನು ಕೇಂದ್ರೀಕರಿಸುತ್ತದೆ. ಟೆಲಿವಿಷನ್ ಮಾಧ್ಯಮದಲ್ಲಿನ ಮಹಿಳಾ ಉದ್ಯೋಗಿಗಳ ಪಾತ್ರ, ಕೆಲಸದ ವೈಖರಿ ಮತ್ತು ಪರಿಸ್ಥಿತಿ, ಕೆಲಸ ನಿರ್ವಹಿಸಲು ಅನುಕೂಲಕರ ವಾತಾವರಣ, ವೃತ್ತಿಗೆ ಸಂಬಂಧಿಸಿದ ಸವಾಲುಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಪ್ರಸ್ತುತ ಅಧ್ಯಯನವು ಮಹತ್ವದ್ದಾಗಿದೆ. ಸಂವಿಧಾನ ಹಕ್ಕುಗಳ ಅನುಷ್ಠಾನವನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ಸಾಧ್ಯಗೊಳಿಸುವ ಮಾರ್ಗವನ್ನು ಶೋಧಿಸುವ ಪ್ರಯತ್ನವು ಅಧ್ಯಯನದ ಮಹತ್ವವಾಗಿದೆ.

1.3 ಅಧ್ಯಯನದ ವ್ಯಾಪ್ತಿ

ಸಂವಹನ ಮಾಧ್ಯಮಗಳಲ್ಲಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಗೆ ಅದರದ್ದೇ ಆದ ಮಹತ್ವವಿದೆ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮ ಅಂದಾಕ್ಷಣ ಅದರ ವ್ಯಾಪ್ತಿ ತುಂಬಾ ವಿಸ್ತಾರವಾಗುತ್ತದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ರೇಡಿಯೋ, ಟಿ.ವಿ, ಇಂಟರ್‌ನೆಟ್, ಚಲನಚಿತ್ರ, ಉಪಗ್ರಹ ಟೆಲಿವಿಷನ್– ಹೀಗೆ ಅದು ವಿಸ್ತಾರ ವ್ಯಾಪ್ತಿ ಪಡೆದುಕೊಳ್ಳುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಟೆಲಿವಿಷನ್ ಕ್ಷೇತ್ರವನ್ನು ಅದರಲ್ಲೂ ಕನ್ನಡ ಸುದ್ದಿ ವಾಹಿನಿಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಖಾಸಗಿ ವಾಹಿನಿಗಳಾದ ಟಿವಿ 9, ಉದಯ ನ್ಯೂಸ್, ಸುವರ್ಣ ನ್ಯೂಸ್, ಸಮಯ ನ್ಯೂಸ್, ಜನಶ್ರೀ ನ್ಯೂಸ್, ಪಬ್ಲಿಕ್ ಟಿವಿ, ಬಿಟಿವಿ, ಪ್ರಜಾಟಿವಿ, ಕಸ್ತೂರಿ ನ್ಯೂಸ್, ಈ ಟಿವಿ ನ್ಯೂಸ್, ಸುದ್ದಿ ಟಿವಿ, ರಾಜ್ ನ್ಯೂಸ್, ದಿಗ್ವಿಜಯ ನ್ಯೂಸ್ ಮತ್ತು ಸರಕಾರಿ ಸ್ವಾಮ್ಯದ ದೂರದರ್ಶನವನ್ನು ಸಂಶೋಧನಾ ವ್ಯಾಪ್ತಿಗೆ ಒಳಪಡಿಸಲಾಗಿದೆ.

1.4 ಅಧ್ಯಯನದ ವೈಧಾನಿಕತೆ :

ಅನೌಪಚಾರಿಕ ಜನಪ್ರಿಯ ಮತ್ತು ಉಪಸಂಸ್ಕೃತಿಗಳ ಗುಣ ಲಕ್ಷಣಗಳನ್ನು ಹೊಂದಿರುವ ಮಾಧ್ಯಮ ಅಧ್ಯಯನ ಮುಖ್ಯವಾಹಿನಿಯ ಮಾನವಿಕಗಳಿಗಿಂತ ಭಿನ್ನವಾಗುತ್ತದೆ. ಜೊತೆಗೆ ಸಮಾಜದಲ್ಲಿರುವ ಮಿಡಿತಗಳನ್ನು ಇದು ಒಳಗೊಳ್ಳುತ್ತದೆ. ಈ ಮೂಲಕ ಇತರ ಸಾಂಪ್ರದಾಯಿಕ, ಸಾಮಾಜಿಕ, ಸಂಶೋಧನಾತ್ಮಕ ಮತ್ತು ಎಂಪಿರಿಕಲ್ ಅಧ್ಯಯನಗಳಿಗಿಂತ ಭಿನ್ನವಾಗಿರುವಂಥದ್ದು. ಹಾಗಾಗಿಯೇ ಮಾಧ್ಯಮ ಅಧ್ಯಯನ ಸಾಂಸ್ಕೃತಿಕ ಅಧ್ಯಯನದೊಂದಿಗೆ ನಿಕಟ ಸಂಬಂಧ ಕೂಡ ಹೊಂದಿದೆ. ಅದೇನೆ ಇದ್ದರೂ, ವ್ಯವಸ್ಥೆಯಲ್ಲಿರುವ ಹಲವು ಜ್ಞಾನ ಶಾಖೆಗಳು ಮಹಿಳೆಯನ್ನು ಒಂದು ವಸ್ತುವೆಂದು ಪರಿಗಣಿಸಿವೆಯೇ ಹೊರತು ಒಬ್ಬ ವ್ಯಕ್ತಿಯಾಗಿ ಅವುಗಳು ಕಂಡಿಲ್ಲ. ಅದು

ವಿದ್ಯುನ್ಮಾನ ಮಾಧ್ಯಮಕ್ಕೂ ಹೊರತಾಗಿಲ್ಲ. ಹೀಗಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆಯರ ಬದುಕಿನ ಸಂಕೀರ್ಣತೆಯನ್ನು ಅರಿಯಲು ಈವರೆಗೂ ಸಾಧ್ಯವಾಗಿಲ್ಲ.

ಮಹಿಳೆಯರ ಬದುಕಿನ ವಿವಿಧ ಆಯಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸಲು ಅವರ ಖಾಸಗಿ ಬದುಕಿನ ವಿವರಗಳಿಗೆ ಹೋಗುವುದು ಅತ್ಯಗತ್ಯ. ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳಾ ಉದ್ಯೋಗ ನೋವು, ನಲಿವು, ವೃತ್ತಿಯ ಸವಾಲು ಸಾಧ್ಯತೆಗಳನ್ನು ತಿಳಿಯಲು ವಿಶೇಷವಾಗಿ ಪ್ರಕರಣ ಅಧ್ಯಯನವನ್ನು ಸಂಶೋಧನಾ ಅಧ್ಯಯನದ ಭಾಗವಾಗಿ ಬಳಸಿಕೊಳ್ಳಲಾಗಿದೆ. ಜೀವನದ ಅನುಭವಗಳು ಮಾತಾದಾಗ ಸಂದರ್ಭ ಹಾಗೂ ಘಟನೆಗಳು ಹೆಚ್ಚು ಸ್ಪಷ್ಟತೆಯನ್ನು ಪಡೆಯುವುದರೊಂದಿಗೆ ಅಧ್ಯಯನದ ಹಾದಿ ಸುಗಮವಾಗಲು ಪುಷ್ಟಿ ನೀಡುತ್ತದೆ. ಇದು ಮಹಿಳಾ ಅಧ್ಯಯನದ ಸಂಶೋಧನಾ ವಿಧಾನದಲ್ಲಿ ಕಥನ ಕ್ರಮವಾಗಿ ಬಳಸಲ್ಪಡುತ್ತದೆ. ಅಂದರೆ, ಸಂದರ್ಶಿಸಿದ ವ್ಯಕ್ತಿಯ ಅನುಭವಗಳನ್ನು ಅವರದ್ದೇ ಮಾತುಗಳಲ್ಲಿ ದಾಖಲಿಸುವ ವಿಧಾನ ಇದಾಗಿದೆ. ಹೀಗೆ ಸಂಶೋಧನಾ ಅಧ್ಯಯನದ ಭಾಗವಾಗಿ ದಾಖಲಿಸಲಾದ ಪ್ರಕರಣ ಅಧ್ಯಯನದಲ್ಲಿ ಕಥನ ಕ್ರಮವನ್ನೇ ಬಹುವಾಗಿ ಅನ್ವಯಿಸಿಕೊಳ್ಳಲಾಗಿದೆ. ಒಟ್ಟಾರೆ ಈ ಮೇಲಿನ ಅಂಶಗಳ ಮೂಲಕ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆಯರ ಸಂಕೀರ್ಣ ಸ್ವರೂಪವನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನವು ಪ್ರಾಥಮಿಕ ಆಕರವಾದ ಕ್ಷೇತ್ರಕಾರ್ಯ ಮಾಹಿತಿಯನ್ನೇ ಹೆಚ್ಚಾಗಿ ಅವಲಂಬಿಸಿದೆ. ಹೀಗೆ ಕ್ಷೇತ್ರಕಾರ್ಯದ ಮೂಲಕ ಟೆಲಿವಿಷನ್ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಗಿದೆ. ಇದರ ಜೊತೆಗೆ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡಿರುವ ಮಾಜಿ ಉದ್ಯೋಗಿಗಳನ್ನು ಕೂಡ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಉದ್ಯೋಗಿಗಳಲ್ಲಿ ವಿಭಿನ್ನ ವಯಸ್ಸು, ಧರ್ಮ, ಕಾರ್ಯ ಕ್ಷೇತ್ರದವರು ಇರುವುದರಿಂದ ಅವರ ಅನುಭವಗಳು ಕೂಡ ವಿಭಿನ್ನವಾಗಿರುತ್ತವೆ. ಇವುಗಳನ್ನು ಗುರುತಿಸಲು ಸ್ತ್ರೀವಾದ ಸಂಶೋಧನಾ ವಿಧಾನಗಳು ಸಹಕಾರಿಯಾಗಿರುತ್ತವೆ. ಈ ಸಂದರ್ಭದಲ್ಲಿ ಸಂದರ್ಶನ, ಅವಲೋಕನ, ಪ್ರಶ್ನಾವಳಿ (ರಚಿತ/ಅರಚಿತ) ಮಾದರಿಗಳನ್ನು ಅನುಸರಿಸಲಾಗಿದೆ.

ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯನ್ನು ಅಂಕಿ ಸಂಖ್ಯೆಗಳಲ್ಲಿ ನಿರ್ದಿಷ್ಟಪಡಿಸಿಕೊಳ್ಳುವುದು ಮತ್ತು ಅವುಗಳನ್ನು ವಸ್ತುನಿಷ್ಠವಾಗಿ ವಿವರಿಸಿಕೊಳ್ಳಲಾಗಿದೆ. ಜೊತೆಗೆ ಕೆಲ ಮಾಹಿತಿಗಳನ್ನು ಪುಸ್ತಕ, ವರದಿ, ಲೇಖಗಳು, ಪತ್ರಿಕೆಗಳು ಮತ್ತು ಅಂತರ್ಜಾಲದ ಮೂಲಕ ಸಂಗ್ರಹಿಸಲಾಗಿದೆ. ಈ ಎಲ್ಲ ಮಾಹಿತಿಗಳನ್ನು ಗುಣಾತ್ಮಕ, ಪರಿಮಾಣಾತ್ಮಕ ಸಂಶೋಧನಾ

ವಿಧಾನಗಳನ್ನು ಮತ್ತು ಲೈಂಗಿಕತಾವಾದಿಯಲ್ಲದ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

1.5 ಅಧ್ಯಯನದ ಸ್ವರೂಪ :

ಈ ಮಹಾಪ್ರಬಂಧವು ಒಟ್ಟು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿದ್ದು, ಈ ಕೆಳಗಿನಂತೆ ಅವುಗಳ ಸ್ವರೂಪವನ್ನು ಸಂಕ್ಷಿಪ್ತಗೊಳಿಸಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆಯನ್ನು ಹಾಗೆಯೇ ಅಧ್ಯಯನದ ಸ್ವರೂಪವನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಎರಡನೇ ಅಧ್ಯಾಯ ಅಧ್ಯಯನಗಳ ತಾತ್ವಿಕ ಸಮೀಕ್ಷೆಯನ್ನು ನಡೆಸುತ್ತದೆ. ಈ ಅಧ್ಯಾಯದಲ್ಲಿ ವಿದ್ಯುನ್ಮಾನ ಮಾಧ್ಯಮ ಮತ್ತು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೆ ಸಂಬಂಧಿಸಿದಂತೆ ಇದುವರೆಗೆ ನಡೆದಿರುವ ಅಧ್ಯಯನಗಳು, ವರದಿಗಳು, ಪ್ರಕಟಗೊಂಡಿರುವ ಕೃತಿಗಳು, ಲೇಖನಗಳು, ದಿನಪತ್ರಿಕೆಗಳು, ಈಗಾಗಲೇ ಮಂಡನೆಗೊಂಡ ಸಂಶೋಧನೆಗಳನ್ನು ವಿಮರ್ಶಾತ್ಮಕವಾಗಿ ಸಮೀಕ್ಷೆಗೆ ಒಳಪಡಿಸಲಾಗಿದೆ.

ಅಧ್ಯಾಯ ಮೂರರಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಚಾರಿತ್ರಿಕ ಹಿನ್ನೆಲೆಯನ್ನು ಪರಿಶೀಲಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸದ ಹೊರತು, ವರ್ತಮಾನದ ಜೊತೆಗೆ ವಿಷಯದ ಮುನ್ನೋಟಗಳನ್ನು ಗ್ರಹಿಸುವುದು ಕಷ್ಟಸಾಧ್ಯ. ಹಾಗಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಚರಿತ್ರೆಗೆ ತನ್ನದೇ ಆದಂತಹ ಚಾರಿತ್ರಿಕ ಹಿನ್ನೆಲೆ ಇರುವುದು ಕಂಡು ಬರುತ್ತದೆ. ಇವು ವರ್ತಮಾನದ ಸಂಗತಿಗಳಿಗೆ ಬಹುಮುಖ್ಯವಾಗುತ್ತದೆ. ಈ ನೆಲೆಯಲ್ಲಿ ಟೆಲಿವಿಷನ್ ಸುದ್ದಿ ವಾಹಿನಿಗಳಲ್ಲಿ ಕೆಲಸ ಮಾಡುವ ಮಹಿಳೆಯರ ಕುರಿತಾದ ಚಾರಿತ್ರಿಕ ಅಂಶಗಳನ್ನು ಹಿನ್ನೆಲೆಯಾಗಿ ಗುರುತಿಸಿಕೊಳ್ಳುವುದು ಅಗತ್ಯವಾಗಿದೆ. ಹಾಗಾಗಿ ಈ ಅಧ್ಯಾಯದಲ್ಲಿ ಜಾಗತಿಕ ಟೆಲಿವಿಷನ್ ಮಾಧ್ಯಮದಲ್ಲಿ ದುಡಿಯುವ ಮಹಿಳೆ, ರಾಷ್ಟ್ರೀಯ ಟೆಲಿವಿಷನ್ ಮಾಧ್ಯಮದಲ್ಲಿ ದುಡಿಯುವ ಮಹಿಳೆ, ಪ್ರಾದೇಶಿಕ ಟೆಲಿವಿಷನ್ ಮಾಧ್ಯಮದಲ್ಲಿ ದುಡಿಯುವ ಮಹಿಳೆ ಮತ್ತು ಕನ್ನಡ ಟೆಲಿವಿಷನ್ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಚಾರಿತ್ರಿಕ ಅಂಶಗಳನ್ನು ವಿವರಿಸಿಕೊಳ್ಳಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಟೆಲಿವಿಷನ್ ಮಾಧ್ಯಮದಲ್ಲಿನ ಉದ್ಯೋಗಿಯಾಗಿ ಮಹಿಳಾ ಸ್ಥಾನ ಮಾನಗಳನ್ನು ಮತ್ತು ಉದ್ಯಮವಾಗಿ ಬದಲಾದಾಗ ಅದು ತನ್ನ ಮಹಿಳಾ

ಉದ್ಯೋಗಿಗಳನ್ನು ಹೇಗೆ ನೋಡಿಕೊಳ್ಳುತ್ತದೆ ಎನ್ನುವುದರ ಶೋಧವಿದೆ. ಇಂದು ಟೆಲಿವಿಷನ್ ಮಾಧ್ಯಮ ಕೇವಲ ಉದ್ಯಮವಾಗಿಯೂ ಉಳಿದುಕೊಂಡಿಲ್ಲ. ಮುಕ್ತ ಆರ್ಥಿಕ ನೀತಿ ಮತ್ತು ಉಪಭೋಗ ಸಂಸ್ಕೃತಿಯ ಒಂದು ಪರೋಕ್ಷ ಆಯುಧ ಕೂಡ ಆಗಿರುವುದನ್ನು ಈ ಅಧ್ಯಾಯದಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿದೆ.

ಮಾಧ್ಯಮ ಉದ್ಯಮವಾದ ಹಿನ್ನೆಲೆಯಲ್ಲಿ ಮಹಿಳೆಯರು ಮಾಧ್ಯಮದ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅನೇಕ ಸವಾಲುಗಳನ್ನು ಎದುರಿಸಬೇಕಾಗಿದೆ. ವೃತ್ತಿಯ ಪ್ರವೇಶಕ್ಕೆ ಒಂದು ಬಗೆಯ ತೊಂದರೆಯಾದರೆ, ಪ್ರವೇಶದ ಹಂತದಲ್ಲಿನ ಸಮಸ್ಯೆ ಮತ್ತೊಂದು ಬಗೆಯದ್ದು. ಪ್ರವೇಶದ ನಂತರವೂ ಆಕೆ ಸವಾಲುಗಳನ್ನು ಎದುರಿಸುತ್ತಲೇ ಉದ್ಯೋಗ ಮಾಡಬೇಕಾದ ಪರಿಸ್ಥಿತಿ ಇದೆ. ಅಲ್ಲದೇ, ಮಾಧ್ಯಮವು ಉದ್ಯಮವಾಗಿ ಬೆಳೆದಿರುವ ಹಿನ್ನೆಲೆಯಲ್ಲಿ ಮಾಧ್ಯಮದಲ್ಲಿ ಮಹಿಳೆಯ ಸಹಭಾಗಿತ್ವ ಕುರಿತಾದ ದೊಡ್ಡ ಪ್ರಶ್ನೆ ಎದ್ದಿದೆ. ಉದ್ಯಮವಾದಾಗ ಅವಳಿಗೆ ಸಿಕ್ಕಿರುವ, ಸಿಗುವ ಅವಕಾಶ ಯಾವವು? ಸ್ಥಾನಗಳೇನು ಅನ್ನುವ ಚರ್ಚೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆ ಕೇಂದ್ರಿತ ಮಾಧ್ಯಮ ಸಂಸ್ಥೆಗಳು ಮಹಿಳಾ ಉದ್ಯೋಗಿಗಳಿಗೆ ಕೊಡಬೇಕಾದ ಸ್ಥಾನ, ಹುದ್ದೆ, ಸಂಬಳ ಇತ್ಯಾದಿ ಸವಲತ್ತುಗಳನ್ನು ಕೊಡುತ್ತಿವೆಯಾ ಎಂಬ ಪ್ರಶ್ನೆಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆಯರ ಸಮಸ್ಯೆಗಳು ಮತ್ತು ಸವಾಲುಗಳನ್ನು ಉದ್ಯೋಗ ಕ್ಷೇತ್ರವನ್ನು ಅನುಲಕ್ಷಿಸಿ ಚರ್ಚಿಸಲಾಗಿದೆ. ಮುಖ್ಯವಾಗಿ ಈ ಅಧ್ಯಾಯದಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಎದುರಿಸಿದ ಮತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವಾಗ ಎದುರಾಗುವ ಸಮಸ್ಯೆಗಳು ಮತ್ತು ಉದ್ಯೋಗಕ್ಕೆ ಸೇರಿಕೊಂಡ ನಂತರ ಎದುರಾಗುವ ಸಮಸ್ಯೆಗಳು.. ಹೀಗೆ ಎರಡು ನೆಲೆಯಲ್ಲಿ ವಿಂಗಡಿಸಿ, ಇವುಗಳಲ್ಲಿ ಪುನಃ ಉಪ ವಿಭಾಗಗಳನ್ನಾಗಿ ಮಾಡಿಕೊಂಡು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಒಟ್ಟಾರೆಯಾಗಿ ಮಾಧ್ಯಮದಲ್ಲಿನ ಪಿತೃಪ್ರಧಾನ್ಯತೆ ಹಾಗೂ ಮಾಧ್ಯಮ ಉದ್ಯಮವಾದ ನಂತರ ಬಂಡವಾಳಶಾಹಿ ಪಿತೃಪ್ರಧಾನತೆಯ ಸಂಕೀರ್ಣ ಸ್ವರೂಪ, ಮಹಿಳಾ ಉದ್ಯೋಗಿಯಾಗಿ ಪ್ರವೇಶಿಸಲು ಸೃಷ್ಟಿಸಿದ ಸವಾಲುಗಳನ್ನು ಪರಿಶೀಲಿಸಲು ಪ್ರಯತ್ನಿಸಲಾಗಿದೆ.

ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರು ಪ್ರವೇಶಿಸುವಾಗ ವಯಸ್ಸು, ಗ್ಲಾಮರ್ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಉದ್ಯೋಗಕ್ಕೆ ಸೇರಿಕೊಂಡ ನಂತರ ಅವರು ಸಂಬಳ, ಹುದ್ದೆ,

ವೃತ್ತಿ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೇ ಆಫೀಸ್ ಮತ್ತು ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಕಿರುಕುಳದ ಸಮಸ್ಯೆ, ಧಾರ್ಮಿಕ ಕಾರಣಗಳಿಂದಾಗಿ ವೃತ್ತಿಯಲ್ಲಿ ಎದುರಿಸುವ ಸಮಸ್ಯೆಗಳು ಹೀಗೆ ನಾನಾ ಸಮಸ್ಯೆಗಳು ಮತ್ತು ಅದನ್ನು ಅವರು ಸವಾಲಾಗಿ ಸ್ವೀಕರಿಸಿ ಹೇಗೆ ವೃತ್ತಿಯಲ್ಲಿ ಮುಂದುವರಿಯುತ್ತಿದ್ದಾರೆಂದು ವಿವರಿಸಿಕೊಳ್ಳಲಾಗಿದೆ. ಈ ಅಧ್ಯಾಯವು ಮುಖ್ಯವಾಗಿ ಕ್ಷೇತ್ರ ಕಾರ್ಯದ ಮಾಹಿತಿಯನ್ನು ಅಧಿಕವಾಗಿ ಅವಲಂಬಿಸಿದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರನ್ನು ಸಂದರ್ಶಿಸಿ, ಅವರಿಂದ ಸಂಗ್ರಹಿಸಲಾದ ಮಾಹಿತಿಯನ್ನು ಸ್ತ್ರೀವಾದಿ ನೆಲೆಯಲ್ಲಿ ವಿವರಿಸಲಾಗಿದೆ. ವಿದ್ಯುನ್ಮಾನ ಮಾಧ್ಯಮದ ಪುರುಷ ಪ್ರಧಾನ ಸಂಕೀರ್ಣತೆಯನ್ನು ಹಾಗೂ ಅವುಗಳನ್ನು ದಾಟುವ ಮಹಿಳೆಯರ ಯಶೋಗಾಥೆಯನ್ನು ಪ್ರಸ್ತುತ ಅಧ್ಯಯನದಲ್ಲಿ ನಿರೂಪಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಆರರಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಎದುರಿಸುವ ಕೌಟುಂಬಿಕ ಸಂಘರ್ಷಗಳ ಬಗ್ಗೆ ಚರ್ಚಿಸಲಾಗಿದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಇಂದು ಅನೇಕ ಕೌಟುಂಬಿಕ ಸಂಘರ್ಷಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಕುಟುಂಬದವರ ವೃತ್ತಿ ನಿರಾಕರಣೆ, ಮದುವೆಯ ನಂತರ ಎದುರಿಸುವ ಸಂಘರ್ಷ, ತಾಯ್ತನದ ಸಂದರ್ಭದಲ್ಲಿ ವೃತ್ತಿ ನಿರ್ವಹಣೆಯಲ್ಲಿನ ಸಂಘರ್ಷ, ಜಾತಿ ಮತ್ತು ಧರ್ಮಗಳ ಕಾರಣದ ಸಂಘರ್ಷ ಇವುಗಳ ಜೊತೆಗೆ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ಹೊಸದೊಂದು ಸಂಘರ್ಷ ಶುರುವಾಗಿದೆ, ಅದು ಮದುವೆಯಾಗಬೇಕೆಂದಾಗ ಎದುರಿಸುವ ಸಂಘರ್ಷ. ಇವೆಲ್ಲವುಗಳ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಆರ್ಥಿಕ ಸಮಸ್ಯೆಗಳ ಕುರಿತಾಗಿದ್ದಾಗಿದೆ. ಆರ್ಥಿಕ ಸಮಸ್ಯೆಗಳಿಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರೂ ಹೊರತಾಗಿಲ್ಲ. ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ಮೇಲ್ನೋಟಕ್ಕೆ ಒಂದಿಷ್ಟು ಹಣ ಸಂಪಾದನೆಯಾದರೂ ಆ ಆದಾಯದಿಂದ ಬದುಕು ನಡೆಸಲು ಸಾಧ್ಯವಿಲ್ಲ ಅನ್ನುವಂತಾಗಿದೆ. ಕಡಿಮೆ ಆದಾಯಕ್ಕೆ ತಕ್ಕಂತೆ ಬದುಕನ್ನು ಹೊಂದಿಸಿಕೊಂಡರೂ, ಈ ಹೊಂದಾಣಿಕೆ ತಾತ್ಕಾಲಿಕ. ಮತ್ತೆ ಆದಾಯ ಕುಸಿತ ಕಾಣಬೇಕಾಗಿದೆ. ಈ ಕುಸಿತವು ಅವಳನ್ನು ಅಧೈರ್ಯಳನ್ನಾಗಿ ಮಾಡಿದೆ. ಜೊತೆಗೆ ಮಗಳಾಗಿ ತಂದೆಯನ್ನು, ಹೆಂಡತಿಯಾಗಿ ಗಂಡನನ್ನು ಮತ್ತು ತಾಯಿಯಾಗಿ ಮಗನನ್ನು ಅವಳು ಅವಲಂಬಿಸಿಕೊಂಡು ಬದುಕಬೇಕು ಎನ್ನುವ ನಂಬಿಕೆಯನ್ನು ಆಧುನಿಕ ಮಹಿಳೆಯರಲ್ಲೂ ಜೀವಂತವಾಗಿಟ್ಟಿದೆ. ವಿದ್ಯುನ್ಮಾನ ಮಾಧ್ಯಮದಲ್ಲಿ

ದುಡಿಯುವ ಮಹಿಳೆಯು ಆರ್ಥಿಕ ಸಮಸ್ಯೆಯ ವಿಷಯದಲ್ಲಿ ಹೈರಾಣಾಗಿದ್ದಾಳೆ. ಸಿಗುವ ಕಡಿಮೆ ಸಂಬಳದಲ್ಲಿ ಬದುಕನ್ನು ಸರಿದೂಗಿಸಲು ಒಂದು ಕಡೆ ಪ್ರಯತ್ನ ಪಡುತ್ತಿದ್ದರೆ, ಮತ್ತೊಂದು ಕಡೆ ಸಂಬಳವೇ ಸಿಗದೆ ಪರದಾಡುತ್ತಿದ್ದಾಳೆ. ಸರಿಯಾದ ವೇಳೆಗೆ ವೇತನ ಸಿಗದೇ ಇರುವ ಕಾರಣಕ್ಕಾಗಿ ವೃತ್ತಿಯನ್ನು ತೊರೆಯುವಂತಹ ನಿರ್ಧಾರಕ್ಕೂ ಬರುತ್ತಿದ್ದಾರೆ. ಅಲ್ಲದೇ, ಬೇರೆ ಕೆಲಸವನ್ನು ಮಾಡುವುದಕ್ಕೆ ಆಗದೇ ವಾಪಸ್ಸು ಮನೆಗೆ ಹೋಗಿರುವ ಪ್ರಕರಣಗಳು ಕಂಡು ಬಂದಿವೆ. ಆರ್ಥಿಕತೆಯ ಕಾರಣದಿಂದಾಗಿಯೇ ಮಹಿಳಾ ಉದ್ಯೋಗಿಗಳು ಮಾನಸಿಕ ಕಿರುಕುಳವನ್ನೂ ಅನುಭವಿಸುತ್ತಿದ್ದಾರೆ. ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿದೆ. ಅಧ್ಯಯನ ಕ್ಷೇತ್ರ ವ್ಯಾಪ್ತಿಯಲ್ಲಿ ಕಂಡು ಬಂದಿರುವ ಪ್ರಕರಣಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಎಂಟು ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯ ಆರೋಗ್ಯದ ಸಮಸ್ಯೆಯ ಕುರಿತಾಗಿದ್ದಾಗಿದೆ. ಭಾರತೀಯ ಸಂವಿಧಾನ ನೀಡಿರುವ ನಿರ್ದೇಶಕ ತತ್ವಗಳಲ್ಲಿ ಆರೋಗ್ಯದ ಹಕ್ಕು ಕೂಡ ಪ್ರಮುಖವಾದದ್ದು. ಆರೋಗ್ಯ ಹಕ್ಕಿನ ಬಗ್ಗೆ ಉಲ್ಲೇಖಿಸುವ ವಿಧಿಗಳು ಇವೆ. ಅದರನ್ವಯ ಸರ್ಕಾರವು ಎಲ್ಲೆಡೆ ಸಾರ್ವಜನಿಕ ಆರೋಗ್ಯ ಸೇವೆಯನ್ನು ಆರಂಭಿಸಬೇಕು. ಆರೋಗ್ಯ ಸೌಲಭ್ಯಗಳು ಒಳ್ಳೆಯ ಗುಣಮಟ್ಟದಿಂದ ಕೂಡಿರಬೇಕು. ಆರೋಗ್ಯ ಕೇಂದ್ರಗಳಲ್ಲಿ ಧರ್ಮ, ಜಾತಿ, ಲಿಂಗ ಅಥವಾ ಇನ್ನಾವುದೇ ತಾರತಮ್ಯ ಎಸಗಬಾರದು ಅಂತಿದೆ. ಆದರೆ, ಲಿಂಗ ತಾರತಮ್ಯವು ನಡೆಯುತ್ತಲೇ ಬರುತ್ತಿದೆ. ಈ ವಿಷಯದಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ ಕೂಡ ಹೊರತಾಗಿಲ್ಲ. ವೃತ್ತಿಗೆ ಸಂಬಂಧಿಸಿದಂತೆ ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳ ಕುರಿತಾಗಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಒಂಬತ್ತರಲ್ಲಿ ವಿದ್ಯುನ್ಮಾನ ಮಾಧ್ಯಮದ ಸಮಸ್ಯೆಯ ಸಂಕೀರ್ಣತೆಗಳನ್ನು ಮತ್ತು ಪರ್ಯಾಯ ಶೋಧಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಈ ಅಧ್ಯಾಯದಲ್ಲಿ ಸಾಂಪ್ರದಾಯಿಕ ಸಮಾಜದಲ್ಲಿನ ಮಹಿಳೆಯರು ಎದುರಿಸುತ್ತಿರುವ ಇಕ್ಕಟ್ಟುಗಳನ್ನು ಮತ್ತು ಅವುಗಳ ಸ್ವರೂಪಗಳನ್ನು ತಿಳಿಸಲಾಗಿದೆ. ಹಾಗೆಯೇ ಈ ಇಕ್ಕಟ್ಟುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕಾಯಿದೆ ಕಾನೂನುಗಳು ಮಹಿಳೆಯರ ಬದುಕಿನಲ್ಲಿ ಆಶಾದಾಯಕ ನಿರೀಕ್ಷೆಗಳನ್ನು ಮೂಡಿಸುತ್ತವೆ. ಹೀಗೆ ಮಹಿಳೆಯರು ವಿದ್ಯುನ್ಮಾನ ಮಾಧ್ಯಮದಲ್ಲಿನ ಎದುರಿಸುತ್ತಿರುವ ಸಮಸ್ಯೆಗಳಿಂದ ಹೊರಬರಲು ತಗೆದುಕೊಳ್ಳಬೇಕಾದ ಕ್ರಮಗಳೇನು ಎಂಬಂತಹ ಅಂಶಗಳನ್ನು ಸಂಶೋಧನಾ ಅಧ್ಯಯನದ ಫಲಿತಗಳನ್ನಾಗಿ ಗುರುತಿಸಲಾಗಿದೆ.

ಅಧ್ಯಾಯ – 2

ಅಧ್ಯಯನಗಳ ತಾತ್ವಿಕ ಸಮೀಕ್ಷೆ

2.1 ಪ್ರಾದೇಶಿಕ ಮಾಧ್ಯಮ ಕೇಂದ್ರಿತ ಅಧ್ಯಯನಗಳು

2.2 ಮಾಧ್ಯಮ ಮತ್ತು ಮಹಿಳಾ ಕೇಂದ್ರಿತ ಅಧ್ಯಯನಗಳು

2.3 ಉದ್ಯಮ ಮತ್ತು ಮಾಧ್ಯಮ ಕೇಂದ್ರಿತ ಅಧ್ಯಯನಗಳು

2.4 ಅಂತಾರಾಷ್ಟ್ರೀಯ ಮಾಧ್ಯಮ ಕೇಂದ್ರಿತ ಅಧ್ಯಯನಗಳು

2.5 ಈವರೆಗಿನ ಸಂಶೋಧನಾ ಕೃತಿಗಳು ಮತ್ತು ಆಕರಗಳು

ಅಧ್ಯಾಯ : ಎರಡು

ಅಧ್ಯಯನಗಳ ತಾತ್ವಿಕ ಸಮೀಕ್ಷೆ

ವಿದ್ಯುನ್ಮಾನ ಮಾಧ್ಯಮವು ಆಧುನಿಕ ಜಗತ್ತಿನ ಪ್ರಭಾವಶಾಲಿ ಮಾಧ್ಯಮವಾಗಿದೆ. ಹಿಂದೆಂದೂ ಕಾಣದಷ್ಟು ಚಲನಶೀಲತೆ ಈ ಕ್ಷೇತ್ರದಲ್ಲಿ ಇಂದು ಕಾಣತೊಡಗಿದೆ. ಬೃಹದಾಕಾರವಾಗಿ ಅದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿದ್ದರಿಂದ, ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಸಂಕುಚಿತಗೊಂಡ ಇಡೀ ಜಗತ್ತು ಒಂದು ಜಾಗತಿಕ ಹಳ್ಳಿಯಾಗಿದೆ. ಜನಪ್ರಿಯ ಮಾಧ್ಯಮವಾಗಿ ದಾಪುಗಾಲು ಇಡುತ್ತಲೇ ಸಾಗುತ್ತಿರುವ ಟಿವಿ ಮಾಧ್ಯಮದ ಕುರಿತಾಗಿ ಸಂಶೋಧನೆಗಳು ನಡೆದಿರುವುದು ತೀರಾ ಕಡಿಮೆ. ಅದರಲ್ಲೂ ಪ್ರಾದೇಶಿಕ ಚಾನೆಲ್‌ಗಳ ಬಗ್ಗೆ ಇನ್ನೂ ಕಡಿಮೆ. ಈಗಾಗಲೇ ನಡೆದಿರುವ ಸಂಶೋಧನೆಗಳು ಹೆಚ್ಚಾಗಿ ಮಾಧ್ಯಮಗಳ ಇತಿಹಾಸದ ಸುತ್ತಲೇ ಗಿರಕಿ ಹೊಡೆದಿವೆ. ವಿದ್ಯುನ್ಮಾನ ಮಾಧ್ಯಮಗಳಿಂದ ಸಮಾಜದ ಮೇಲೆ ಆಗುವ ಪರಿಣಾಮಗಳು ಹಲವಾರಿವೆ. ಆದರೆ ಈ ಪರಿಣಾಮಗಳೇ ಅಭಿವೃದ್ಧಿಪರವಾದಂಥವು ಎಂದು ಬಿಂಬಿಸುವುದರ ಮೂಲಕ ವಾಹಿನಿಗಳ ಆರ್ಥಿಕ ಹಿತವನ್ನು ಕಾಯ್ದುಕೊಳ್ಳಲಾಗುತ್ತಿದೆ. ಅಂದರೆ ಮಾಧ್ಯಮಗಳ ಮೇಲೆ ನಡೆದಿರುವ ಸಂಶೋಧನೆಗಳು ಅತೀ ವಿರಳದಲ್ಲಿ ಕಂಡುಬಂದರೂ ಸಹ ಅವುಗಳು ಕೊನೆಯಲ್ಲಿ ಮಾಧ್ಯಮಗಳ ಪರವಾಗಿಯೇ ನಿಲ್ಲುವುದನ್ನು ಕಾಣಬಹುದು. ಜೊತೆಗೆ ಈ ಅಧ್ಯಯನಗಳಾಗಲಿ ಅಥವಾ ಸಂಶೋಧನೆಗಳಾಗಲಿ ಯಾವುದೇ ಲಿಂಗಸೂಕ್ಷ್ಮತೆಯಿಂದ ಕೂಡಿದವುಗಳಾಗಿಲ್ಲ. ಇದಕ್ಕೆ ಕಾರಣವೂ ಇದೆ. ಮಾಧ್ಯಮ ಎಲ್ಲ ಹಂತದಲ್ಲಿಯೂ ಪುರುಷ ಪ್ರಧಾನ ಮೌಲ್ಯಗಳಿಂದ ಕೂಡಿದುದಾಗಿದೆ.

ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿನ ಉದ್ಯೋಗಕ್ಕೆ ತೆರೆದುಕೊಂಡು ಹಲವು ವರ್ಷಗಳೇ ಕಳೆದರೂ ಸಹ, ಮಹಿಳೆಯರ ಕುರಿತಾದ ಒಂದು ಸಮಗ್ರ ಸಂಶೋಧನೆಗಳು ಇಲ್ಲಿಯವರೆಗೂ ನಡೆದಿಲ್ಲವೆಂದೇ ಹೇಳಬಹುದು. ಕೆಲವು ಸಂಶೋಧನೆಗಳು ಮತ್ತು ಲೇಖನಗಳು

ಬಂದಿವೆಯಾದರೂ ಅವುಗಳು ಕೇವಲ ಪಾರ್ಶ್ವಿಕವಾದವುಗಳಾಗಿವೆ. ಹಾಗಾಗಿ ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿ ಉದ್ಯೋಗಿಯಾಗಿ ಎದುರಿಸುತ್ತಿರುವ ಸಮಸ್ಯೆಗಳು ಯಾವವು? ಯಾವ ಕಾರಣಕ್ಕಾಗಿ ಎದುರಿಸುತ್ತಿದ್ದಾರೆ? ಅವುಗಳನ್ನು ಪರಿಹರಿಸಿಕೊಳ್ಳಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬಿತ್ಯಾದಿ ಅಂಶಗಳ ಕುರಿತಂತೆ ಯಾವೊಂದು ಅಧ್ಯಯನಗಳು ನಡೆದಿರುವುದಿಲ್ಲ. ಆ ಕಾರಣಕ್ಕಾಗಿ ಇದುವರೆಗೂ ನಡೆದ ಅಧ್ಯಯನಗಳು ಏನನ್ನು ಗುರುತಿಸಿವೆ ಮತ್ತು ಅವುಗಳು ಯಾವುದನ್ನು ಪ್ರಧಾನಧಾರೆಗೆ ತಂದುಕೊಂಡು ಅಧ್ಯಯನವನ್ನು ಕೈಗೊಂಡಿವೆ ಎಂಬುದನ್ನು ಗುರುತಿಸುವುದು ಮತ್ತು ಅವುಗಳು ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಕುರಿತಾದ ಸಂಶೋಧನಾ ವಿಷಯಕ್ಕೆ ಎಷ್ಟು ಪೂರಕವಾಗಬಲ್ಲವೇ ಅಥವಾ ಇಲ್ಲವೇ ಎಂಬುದನ್ನು ತಿಳಿಯುವುದರ ಸಲುವಾಗಿ ಅಧ್ಯಯನಗಳ ಸಮೀಕ್ಷೆಯನ್ನು ಮಾಡಬೇಕಾದ ಜರೂರಿದೆ. ಹಾಗೆಯೇ ಈ ಮೂಲಕ ಪ್ರಸ್ತುತ ಅಧ್ಯಯನಕ್ಕೆ ದೊರೆಯಬಹುದಾದ ಒಳಹುಗಳು, ಸ್ಪಷ್ಟತೆಗಳು ಮತ್ತು ರೂಪಿಸಿಕೊಳ್ಳಬಹುದಾದ ಪ್ರಶ್ನೆಗಳು ಹಾಗೂ ಚೌಕಟ್ಟನ್ನು ಸ್ಪಷ್ಟಪಡಿಸಿಕೊಳ್ಳುವಲ್ಲಿ ಸಹಾಯಕವಾಗಲು ಸಮೀಕ್ಷೆಯನ್ನು ನಡೆಸಲಾಗಿದೆ.

2. 1 ಪ್ರಾದೇಶಿಕ ಮಾಧ್ಯಮ ಕೇಂದ್ರಿತ ಅಧ್ಯಯನಗಳು :

ನಾಗೇಶ್ ಹೆಗಡೆ ಸಂಪಾದಕತ್ವದಲ್ಲಿ "**ಮಾಧ್ಯಮ ಕರ್ನಾಟಕ'** ಕೃತಿಯು ಬೆಂಗಳೂರಿನ ಉದಯಭಾನು ಕಲಾಸಂಘ, ಉದಯಭಾನು ಉನ್ನತ ಅಧ್ಯಯನ ಕೇಂದ್ರದಿಂದ 2000 ಇಸವಿಯಲ್ಲಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಮಾಧ್ಯಮ ಕ್ಷೇತ್ರಕ್ಕೆ ಸಂಬಂಧಿಸಿದ 32 ಲೇಖನಗಳಿವೆ. ಈ ಕೃತಿಯ ಮಹತ್ವದ ಅಂಶಗಳು ಅಂದರೆ, ಈಗಾಗಲೇ ಮಾಧ್ಯಮ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಪತ್ರಕರ್ತರು ಮತ್ತು ಪತ್ರಕರ್ತೆಯರು ಮಾಧ್ಯಮದ ಹಲವು ಮಜಲುಗಳನ್ನು ಹಿಡಿದಿಟ್ಟಿದ್ದಾರೆ.

ಸಿದ್ಧ ಸೂತ್ರಗಳಾಚೆ ಸುದ್ದಿ ಮಾಧ್ಯಮದ ಬಗ್ಗೆ ಪತ್ರಕರ್ತ ರಮೇಶ್ ನಾಯಕ್ ಬರೆದಿದ್ದರೆ, ಮಾಧ್ಯಮವೆಂದರೆ ಲಾಭಾಯಾ ತಸ್ಮೈ ನಮಃ ಅಂತಾರೆ ಪತ್ರಕರ್ತ ಬಿ.ಕೆ.ಗಣೇಶ್. ಇವುಗಳ ಜತೆಗೆ ಅಪರಾಧ, ವಾಣಿಜ್ಯ, ಸಿನಿಮಾ, ಕ್ರೀಡೆ, ಗ್ರಾಮೀಣ, ಕೃಷಿ, ಪರಿಸರ ಹೀಗೆ ನಾನಾ ವಿಭಾಗಗಳ ವರದಿಗಾರಿಕೆಯ ಬಗ್ಗೆ ಈ ಕ್ಷೇತ್ರದಲ್ಲಿ ಪಳಗಿರುವ ಪತ್ರಿಕೋದ್ಯಮಿಗಳು ತಮ್ಮ ಅನುಭವಗಳನ್ನು ದಾಖಲಿಸಿದ್ದಾರೆ.

ಸಂಪಾದಕರಾದ ನಾಗೇಶ್ ಹೆಗಡೆ, ತಮ್ಮ ಮಾತಿನ ಪುಟಗಳಲ್ಲಿ ಬರೆದಂತೆ, "ಎಂಬತ್ತರ ದಶಕದಲ್ಲಿ ನಮ್ಮ ದೇಶಕ್ಕೆ ಟಿವಿ, ತೊಂಬತ್ತರ ದಶಕದಲ್ಲಿ ಕಂಪ್ಯೂಟರ್, ನಂತರದ ದಶಕದಲ್ಲಿ

ಇಂಟರ್‌ನೆಟ್, ಮೊಬೈಲ್ ಹೀಗೆ ಸಂವಹನ ಸಾಧನಗಳು ಬಂದಮೇಲೆ ಪತ್ರಕರ್ತ ಎಂಬ ಪದದಲ್ಲಿರುವ ಪತ್ರಕ್ಕೆ ನಾನಾ ರೂಪ ಬಂದಿದೆ' ಎಂದು ಹೇಳುವ ಮೂಲಕ ಮಾಧ್ಯಮದ ವಿಸ್ತಾರದ ಬಗ್ಗೆ ತಿಳಿಸುತ್ತಾರೆ.

ಇದರ ಜೊತೆಗೆ ಮಾಧ್ಯಮವು ಉದ್ಯಮವಾಗಿ ಬದಲಾದ ಬಗ್ಗೆ ತುಂಬಾ ವಿಷಾದದಿಂದಲೇ ತಮ್ಮ ಸಂಪಾದಕರ ಮಾತಿನಲ್ಲಿ ಬರೆದಿರುವ ನಾಗೇಶ್‌ರವರು "ಸಂಭ್ರಮವೋ ಸಂಕಟವೋ ಅಂತೂ ಮಾಧ್ಯಮರಂಗ ಇಂದು ಸಂಧಿಕಾಲದಲ್ಲಿದೆ. ಒಂದು ಸಮಾಜದ ಸಾಕ್ಷಿಪ್ರಜ್ಞೆಯಾಗಿ, ರಾಷ್ಟ್ರದ ಭವಿಷ್ಯವನ್ನು ಉಜ್ವಲಗೊಳಿಸುವ ನಿಟ್ಟಿನಲ್ಲಿ ಜನಾಭಿಪ್ರಾಯವನ್ನು ರೂಪಿಸಬೇಕಿದ್ದ ಮಾಧ್ಯಮಗಳು ಕ್ರಮೇಣ ದಿಕ್ಕು ಬದಲಿಸಿಕೊಂಡು ದುಡ್ಡಿದ್ದವರ ಕೈಗೊಂಬೆಯಾಗತೊಡಗಿದಂತಿವೆ. ಪತ್ರಿಕೆಗಳು ಭೋಗದ ವಸ್ತುಗಳಾಗತೊಡಗಿವೆ. ಚಾನೆಲ್‌ಗಳಿಗೆ ರಂಜನೆಯೇ ಪರಮೋದ್ದೇಶವಾಗತೊಡಗಿದೆ. ಸಂವಹನ ತಂತ್ರಜ್ಞಾನ ಎಲ್ಲರ ಕೈಗೆಟುಕುವಂತಿರುವಾಗ ವೈಯಕ್ತಿಕ ನೆಲೆಗಳಲ್ಲಿ ಬದಲಿ ಮಾಧ್ಯಮಗಳೂ ಚಿಗುರುತ್ತಿವೆ. ಹಾಗಾಗಿ ಪತ್ರಕರ್ತರ ಪಾತ್ರ ಪಾವಿತ್ರ್ಯವನ್ನು ನೆನಪಿಸಲು ಇದು ಪ್ರಶಸ್ತ ಸಮಯ" ಎಂದು ಎಚ್ಚರಿಕೆಯ ಮಾತುಗಳನ್ನೂ ಆಡಿದ್ದಾರೆ.

ಈ ಕೃತಿಯಲ್ಲಿ ವಿದ್ಯುನ್ಮಾನ ಮಾಧ್ಯಮಕ್ಕಿಂತ ಮುದ್ರಣ ಮಾಧ್ಯಮಕ್ಕೆ ಹೆಚ್ಚು ಮಹತ್ವ ಕೊಡಲಾಗಿದೆ. ವಿದ್ಯುನ್ಮಾನ ಮಾಧ್ಯಮದ ಬಗೆಗಿನ ಬೆರಳೆಣಿಕೆಯ ಬರಹಗಳಲ್ಲಿ ಶ್ರೀನಿಧಿ ಡಿ.ಎಸ್ ಅವರ "ದೃಶ್ಯ ಮಾಧ್ಯಮದ ಒಳಮನೆಯ ದೃಶ್ಯಗಳು' ಲೇಖನ ಟಿವಿ ಮಾಧ್ಯಮದ ಕೆಲ ಘಟ್ಟಗಳನ್ನು ವಿವರಿಸುವಲ್ಲಿ ಸಹಾಯವಾಗುತ್ತದೆ.

"ಹೊರಗೆ ಥಳಕು ಬಳುಕಾಗಿ ಕಾಣುವ, ಝುಗಮಗಿಸುವ ಈ ಟಿವಿ ಜರ್ನಲಿಸಂ ಜಗತ್ತಿನಲ್ಲಿ ಕೆಲಸ ಮಾಡಬೇಕೆಂದರೆ ಅತ್ಯಂತ ಸೂಕ್ಷ್ಮ ಮನಸ್ಸು ಮತ್ತು ಎಂತಹ ಸಂದರ್ಭದಲ್ಲೂ ಕೂಡ ತಾಳ್ಮೆ ಕಳೆದುಕೊಳ್ಳದೇ, ಒತ್ತಡವನ್ನೂ ನಿಭಾಯಿಸಿಕೊಂಡು ಹೋಗುವ ಶಕ್ತಿ ಇರಬೇಕು. ನ್ಯೂಸ್ ಚಾನೆಲ್‌ಗಳಲ್ಲಿ ವಿಪರೀತ ಸ್ಪರ್ಧೆ ಇದ್ದು, ಕ್ಷಣ ಕ್ಷಣಕ್ಕೂ ಮಾಹಿತಿ ಕಲೆ ಹಾಕಲು ಮತ್ತು ಅದನ್ನು ಮೊದಲು ಪ್ರಸಾರ ಮಾಡಬೇಕು ಎನ್ನುವ ಮನೋಭಾವ ಇರುವುದರಿಂದ ಅಲ್ಲಿನ ವೇಗಕ್ಕೆ ಹೊಂದಿಕೊಳ್ಳಲು ಆಗದಿದ್ದರೆ ಮೂಲೆಗುಂಪಾಗಬೇಕಾಗುತ್ತದೆ' ಹೀಗೆ ಸುದ್ದಿ ವಾಹಿನಿಗೆ ಹೊಸದಾಗಿ ಉದ್ಯೋಗ ಅರಸಿಕೊಂಡು ಬರುವವರಿಗೆ ಕೆಲಸದ ಬಗ್ಗೆ ಪರಿಚಯ ಮಾಡಿಕೊಡುತ್ತಾರೆ ಶ್ರೀನಿಧಿ. ಇದು ಒತ್ತಡದ ಜಗತ್ತು ಅನ್ನುವುದನ್ನೂ ಇಲ್ಲಿ ಸೂಕ್ಷ್ಮವಾಗಿ ಹೇಳುತ್ತಾರೆ.

ಇದೇ ಲೇಖನದಲ್ಲಿ ಸುದ್ದಿ ವಾಹಿನಿಗಳ ವಿವಿಧ ವಿಭಾಗಗಳ ಬಗ್ಗೆಯೂ ಪರಿಚಯ ಮಾಡಿಕೊಡುತ್ತಾರೆ. ಮೀಡಿಯಾದ ಭಾಷೆಯ ಬಗ್ಗೆಯೂ ಅವರು ಚರ್ಚೆ ಮಾಡುತ್ತಾರೆ. ಸುದ್ದಿ ವಾಹಿನಿಗಳ ಬಗ್ಗೆ ಹೇಳುತ್ತಲೇ, ಮನರಂಜನಾ ಚಾನೆಲ್‌ಗಳ ಬಗ್ಗೆಯೂ ಪ್ರಸ್ತಾಪ ಮಾಡುತ್ತಾರೆ.

ಈ ಕೃತಿಯಲ್ಲಿ ಮಾಧ್ಯಮ ಮತ್ತು ಮಾಧ್ಯಮದ ಬರವಣಿಗೆಯ ಬಗೆಗಿನ ಮಾಹಿತಿಯ ಹೊರತಾಗಿ, ಉದ್ಯೋಗಿಗಳ ಬಗ್ಗೆ ಮತ್ತು ಅವರ ಕಾರ್ಯವೈಖರಿಯ ಬಗ್ಗೆ ಉಲ್ಲೇಖಗಳು ಸಿಗುವುದಿಲ್ಲ. ಎನ್.ಗಾಯತ್ರಿ ದೇವಿ ಅವರು ಸಂಪಾದಕೀಯದ ಅಭಿವ್ಯಕ್ತಿ, ಘಂಟಾಘೋಷ ಎಂಬ ಲೇಖನ ಬರೆದಿದ್ದರೆ, ಗಂಡುಪಾಳಯದಲ್ಲಿ ಸ್ತ್ರೀಲೇಖ ಕುರಿತಾಗಿ ಎಚ್.ಹೇಮಲತಾ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಆರ್.ಪೂರ್ಣಿಮಾ ಅವರ ಅನುದಿನದ ಕಲಿಕೆ ಹೊಸತನದ ತುಡಿತ ಬರಹವಿದೆ.

ಎಚ್.ಹೇಮಲತಾ ಅವರ "ಗಂಡುಪಾಳಯದಲ್ಲಿ ಸ್ತ್ರೀಲೇಖ' ಬರಹದಲ್ಲಿ ಪತ್ರಿಕೋದ್ಯಮದಲ್ಲಿ ಮಹಿಳೆಯರು ಸಾಗಿ ಬಂದ ದಾರಿಯನ್ನು ಹಿಡಿದಿಟ್ಟಿದ್ದಾರೆ. ಮಾಧ್ಯಮವೆಂದರೆ ಅದೊಂದು ಗಂಡುಪಾಳಯ ಎಂದು ಗಟ್ಟಿಧ್ವನಿಯಲ್ಲಿಯೇ ಹೇಳುತ್ತಾರೆ.

"ಪುರುಷ ಪ್ರಧಾನ ಕ್ಷೇತ್ರವೆಂದೇ ಪರಿಗಣಿತವಾಗಿದ್ದ ಕಾಲದಲ್ಲಿ, ಹೆಜ್ಜೆ ಮೂಡದ ಹಾದಿಯಲ್ಲಿ ಮಹಿಳೆಯರು ಪಯಣ ಆರಂಭಿಸಿದಾಗ ಬೆರಳೆಣಿಕೆಯಷ್ಟಿದ್ದವರು, ತಮ್ಮ ಹೋರಾಟ ಮತ್ತು ಬರವಣಿಗೆಯ ಸತ್ವ ಮತ್ತು ಕೆಚ್ಚಿನಿಂದ ತಮ್ಮ ಅಸ್ತಿತ್ವವನ್ನು ಸಾರಿದ್ದಾರೆ. ಇಂದು ಪ್ರತಿ ಪತ್ರಿಕಾಲಯದಲ್ಲೂ ಬಹಳಷ್ಟು ಹೆಣ್ಣು ಮಕ್ಕಳು ಪುರುಷರಿಗೆ ಸರಿಸಮಾನಾಗಿ ಯಾವುದೇ ರಿಯಾಯತಿಗಳನ್ನು ಬೇಡದೆ ದುಡಿಯುತ್ತಿದ್ದಾರೆ. ಆದರೆ, ಇವರ ಈ ಹೋರಾಟದ ಹಾದಿ ಹೂವಿನ ಹಾಸಾಗಿರಲಿಲ್ಲ' ಎಂದು ಲೇಖಕಿ ಹೇಮಲತಾ ಅವರು ಹೇಳುತ್ತಾ, ಮಹಿಳೆಯರು ಮಾಧ್ಯಮದಲ್ಲಿ ಬೆಳೆದು ಬಂದ ರೀತಿಯನ್ನು ಬಣ್ಣಿಸುತ್ತಾರೆ.

ನಾಗೇಶ್ ಅವರ ಸಂಪಾದನೆಯಲ್ಲಿ ಮೂಡಿ ಬಂದಿರುವ ಈ ಕೃತಿಯು ಮಾಧ್ಯಮ ಪ್ರವೇಶ ಮಾಡುವವರಿಗೆ ಕೈಪಿಡಿಯಾಗಿ ಕೆಲಸ ಮಾಡುತ್ತದೆ. ಆದರೆ, ಬದಲಾದ ಮಾಧ್ಯಮ ಚೌಕಟ್ಟಿನ ಕುರಿತು ಚರ್ಚೆ ಮಾಡುವುದಿಲ್ಲ. ಮಾಧ್ಯಮದ ಭಾಷೆ ಮತ್ತು ಚಹರೆ ಎರಡೂ ಬದಲಾಗಿದೆ. ಆ ಕುರಿತು ಇಲ್ಲಿ ಬೆಳಕು ಚೆಲ್ಲಬೇಕಿತ್ತು. ಹಾಗೂ ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಕುರಿತಾದ ಯಾವೊಂದು ಬರಹಗಳು ಕಾಣಸಿಗುವುದಿಲ್ಲ. ಆದರೂ ಮಾಧ್ಯಮ ಇತಿಹಾಸ ಮತ್ತು ನಡೆದು ಬಂದ ಹಾದಿಯ ಬಗೆಗೆ ಹಾಗೂ ಒಟ್ಟು ಮಾಧ್ಯಮದ ಟಿಸಿಲುಗಳ

ಕುರಿತಾದ ಅಂಶಗಳು ಇಲ್ಲಿವೆ. ಈ ದೃಷ್ಟಿಯಿಂದ ಸಂಶೋಧನೆಗೆ ಕೆಲವು ಮಹತ್ವದ ಸಂಗತಿಗಳನ್ನು ಒದಗಿಸಿಕೊಡುತ್ತದೆ.

2.2. ಮಾಧ್ಯಮ ಮತ್ತು ಮಹಿಳಾ ಕೇಂದ್ರಿತ ಅಧ್ಯಯನಗಳು :

ವಿಜಯಕುಮಾರ್.ಹೆಚ್ ಅವರು ರಚಿಸಿರುವ "**ಮಾಧ್ಯಮ ಮತ್ತು ಮಾರುಕಟ್ಟೆ- ಮಹಿಳೆ**" ಎಂಬ ಕೃತಿಯು ಗೀತಾಂಜಲಿ ಪುಸ್ತಕ ಪ್ರಕಾಶನದಿಂದ 2012ರಲ್ಲಿ ಪ್ರಕಟಗೊಂಡಿದೆ. ಈ ಕೃತಿಯು ಬಹುಮುಖ್ಯವಾಗಿ ಮಾಧ್ಯಮ ಎಂಬುದು ಹೇಗೆ ಉದ್ಯಮವಾಗಿ ರೂಪುಗೊಂಡಿತು ಎಂಬ ಪ್ರಶ್ನೆಯನ್ನು ಮುಖ್ಯವಾಗಿಸಿಕೊಂಡು, ಈ ಮಾಧ್ಯಮದಲ್ಲಿ ಮಹಿಳೆಯರನ್ನು ಹೇಗೆ ಚಿತ್ರಿಸಲಾಗುತ್ತದೆ ಎಂಬುದನ್ನು ವಿವರಿಸುತ್ತಾ ಹೋಗುತ್ತಾರೆ. ಹಾಗೆಯೇ ಮಹಿಳೆಯರು ಈ ಬಗೆಯ ಮಾರುಕಟ್ಟೆ ಸಂಸ್ಕೃತಿಯಲ್ಲಿ ಅವರ ಅಸ್ತಿತ್ವವನ್ನು ಹೇಗೆ ಹರಣ ಮಾಡಿಕೊಳ್ಳುತ್ತಿದ್ದಾರೆಂಬ ವಿಷಯವು ಈ ಪುಸ್ತಕದಲ್ಲಿ ಮುಖ್ಯವಾಗಿ ಕಾಣುತ್ತದೆ.

ಈ ಕೃತಿಯಲ್ಲಿ ಲೇಖಕರು ಒಟ್ಟು ಐದು ಅಧ್ಯಾಯಗಳನ್ನಾಗಿ ಗುರುತಿಸಿಕೊಂಡಿದ್ದು, ದೃಶ್ಯ ಮಾಧ್ಯಮ, ಶ್ರವ್ಯ ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಮಹಿಳೆಯರನ್ನು ಲಾಭದ ಉದ್ದೇಶಕ್ಕಾಗಿ ದುಡಿಸಿಕೊಳ್ಳುತ್ತಿರುವ ಸಂಗತಿಯನ್ನು ಸವಿವರವಾಗಿ ತೆರೆದಿಡುತ್ತಾ ಹೋಗಿದ್ದಾರೆ. ಅದರಲ್ಲೂ ಮುಖ್ಯವಾಗಿ ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆ ಮತ್ತು ಜಾಹೀರಾತಿನ ಜೊತೆಗಿನ ಮಹಿಳಾ ನಂಟಿನ ಇತಿಹಾಸವೇ ಇಲ್ಲಿ ದಾಖಲಾಗಿದೆ.

ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ ರೂಪದರ್ಶಿಯರಿಗೆ ಸೌಂದರ್ಯವೇ ಮುಖ್ಯ ಮಾನದಂಡ. ಸೌಂದರ್ಯಕ್ಕೆ ಅಲ್ಲಿ ಹೆಚ್ಚಿನ ಆದ್ಯತೆ. ಮಹಿಳೆಯರು ಎಷ್ಟು ಸುಂದರವಾಗಿ ಕಾಣುತ್ತಾರೋ, ಅಷ್ಟು ಅವರಿಗೆ ಈ ಕ್ಷೇತ್ರದಲ್ಲಿ ಕೆಲಸ ಸಿಗುತ್ತದೆ ಎಂಬ ವಿವರಣೆ ಪುಸ್ತಕದಲ್ಲಿದೆ. ಈ ಮಾಧ್ಯಮಕ್ಕೆ ಮಹಿಳೆಯರ ಸೌಂದರ್ಯವೇ ಬಂಡವಾಳ ಅನ್ನುವ ಕಟುಸತ್ಯವನ್ನೂ ಲೇಖಕರು ನಾನಾ ರೀತಿಯ ಜಾಹೀರಾತುಗಳ ಉದಾಹರಣೆ ಕೊಡುತ್ತಾ ವಿವರಿಸಿದ್ದಾರೆ. ಇದರ ಜೊತೆಗೆ ಮಹಿಳೆಯರಿಗಾಗಿ ತರುವ, ಮಹಿಳೆಯರೇ ನಡೆಸುವ ಪತ್ರಿಕೆಗಳ ಬಗೆಗಿನ ವಿಮರ್ಶೆ ಕೂಡ ಇದೆ. ಅಂಕಣ ಬರಹ, ಸಂಪಾದಕೀಯದಂತಹ ಮುಖ್ಯ ವಿಭಾಗಗಳಲ್ಲಿ ಮಹಿಳೆಯರ ಸಮಸ್ಯೆಯ ಕುರಿತಾದ ಚರ್ಚೆಗಿಂತಲೂ, ಅಡುಗೆ, ಸೌಂದರ್ಯ ಇಂತಹ ವಿಷಯಗಳಿಗೆ ಪ್ರಾಧಾನ್ಯತೆ ನೀಡಿದ್ದನ್ನು ಉಲ್ಲೇಖಿಸಿದ್ದಾರೆ.

ಇನ್ನು ಕೃತಿಗೆ ಮುನ್ನುಡಿ ಬರೆದಿರುವ ಕುವೆಂಪು ವಿಶ್ವವಿದ್ಯಾನಿಲಯದ ಪ್ರೊ.ಕೇಶವ ಶರ್ಮ ಅವರು ಹೇಳುವಂತೆ, "ಈ ಪುಸ್ತಕದಲ್ಲಿ ಮೂರು ವಿಷಯಗಳಿವೆ. ಮಾರುಕಟ್ಟೆ, ಮಹಿಳೆ

ಮತ್ತು ಸಮೂಹ ಮಾಧ್ಯಮಗಳು ಅಂತ. ಈ ಕೃತಿಯ ಪ್ರಮುಖ ಆಸಕ್ತಿ ಇರುವುದೇ ಈ ಮೂರು ವಿಷಯಗಳ ಅಂತರ್‌ಸಂಬಂಧವೇನು? ಎಂದು ಚರ್ಚಿಸುವುದರಲ್ಲಿದೆ. ಹಿಂದಿನ ಕಾಲದಲ್ಲಿ ಮಹಿಳೆಗೂ ಮಾರುಕಟ್ಟೆಗೂ ಯಾವ ರೀತಿಯ ಸಂಬಂಧವೂ ಇರಲಿಲ್ಲ. ಆದರೆ, ಈಗ ಹಾಗಲ್ಲ. ಮಹಿಳೆಯ ಪ್ರಶ್ನೆಯು ಮಾರುಕಟ್ಟೆಯ ಜೊತೆಗೆ ಬೇರೆ ಬೇರೆ ಸಂಬಂಧವನ್ನು ಸೇರಿಸಿಕೊಂಡಿದೆ. ಮಹಿಳೆಯು ಮಾರುಕಟ್ಟೆಯೊಂದಿಗೆ ಇಟ್ಟುಕೊಂಡಿರುವ ಸಂಬಂಧಕ್ಕೆ ಎರಡು ವಿಧಗಳಿವೆ. ಬಂಡವಾಳವಾದವು ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಮಹಿಳೆಯನ್ನು ಬಳಸಿಕೊಳ್ಳುತ್ತದೆ. ಹಾಗೆಯೇ ಮಾರುಕಟ್ಟೆಯ ದೃಷ್ಟಿಯಲ್ಲಿ ಮಹಿಳೆಯು ಒಬ್ಬ ಗ್ರಾಹಕಳೂ ಹೌದು' ಎಂಬುದನ್ನು ತಿಳಿಸುತ್ತಾರೆ. ಅಂದರೆ, ಬಂಡವಾಳ ಶಾಹಿಗಳು ಮಹಿಳೆಯನ್ನು ದೇಹಮೂಲದಿಂದ ಗುರುತಿಸುವುದರ ಮೂಲಕ ಅದನ್ನು ತಮ್ಮ ಬಂಡವಾಳವನ್ನಾಗಿಸಿಕೊಂಡಿದ್ದಾರೆ. ಹಾಗಾಗಿಯೇ ಮಹಿಳೆಯರ ಬೌದ್ಧಿಕ ಮಟ್ಟ ಅಥವಾ ಬೌದ್ಧಿಕತೆಗೆ ಅಲ್ಲಿ ಯಾವುದೇ ಬೆಲೆ ಇಲ್ಲ. ಆಕೆಯ ಸೌಂದರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ ಎಂಬ ವಿಷಯಗಳನ್ನು ವಿಜಯಕುಮಾರ್ ಹೆಚ್ ತಮ್ಮ ಈ ಪುಸ್ತಕದಲ್ಲಿ ತಿಳಿಸುತ್ತಾರೆ.

ಡಾ.ಕವಿತಾ ರೈ ಅವರು ಈ ಕೃತಿಗೆ ಬೆನ್ನುಡಿ ಬರೆಯುತ್ತಾ, ಜಾಗತೀಕರಣದಲ್ಲಿ ಮಾಧ್ಯಮ ಹೇಗೆ ಬಿಕರಿಯಾಗಿದೆ ಮತ್ತು ಮಹಿಳೆಯನ್ನು ಅದು ಹೇಗೆ ದುಡಿಸಿಕೊಳ್ಳುತ್ತದೆ ಅನ್ನುವುದನ್ನು ಸೂಕ್ಷ್ಮವಾಗಿ ಹೇಳುತ್ತಾ, "ಜಾಹೀರಾತು, ಸಿನಿಮಾ ಪ್ರಪಂಚ ಮತ್ತು ರಿಯಾಲಿಟಿ ಶೋ ಮುಂತಾದ ಕ್ಷೇತ್ರಗಳು ಮಹಿಳೆಯರನ್ನು ದುಡಿಸಿ, ನಡೆಸಿಕೊಳ್ಳುವ ವಿಚಾರವಾಗಿ ಸೂಕ್ಷ್ಮಗ್ರಾಹಿತ್ವದ ಒಳನೋಟವೇ ಕೃತಿಯ ಪ್ರಮುಖ ಅಂಶ. ಜಾಗತೀಕರಣದ ಪ್ರಕ್ರಿಯೆ ಮಾರುಕಟ್ಟೆ ಕೇಂದ್ರವಾಗಿ ರೂಪಿತವಾಗುವ ಹಿನ್ನೆಲೆಯಲ್ಲಿ ಮಾಧ್ಯಮವೂ ಒಂದು ಸರಕಾಗಿ ಬಿಕರಿಯಾಗುವ ಸೊತ್ತು. ಮಾಹಿತಿ ತಂತ್ರಜ್ಞಾನವೂ ಕೂಡ ಲಾಭ ನಷ್ಟದ ವ್ಯಾಪಾರವಾಗಿ, ಹಣಗಳಿಕೆಯ ವಾಹಕವಾದಾಗ ಅದು ಮಹಿಳೆಯರನ್ನು ದುಡಿಸಿಕೊಳ್ಳುವ ಹುನ್ನಾರದ ಭಾಗವಾಗಿರುತ್ತದೆ' ಅನ್ನುವ ಚಿಂತನಾತ್ಮಕ ಚರ್ಚೆಯನ್ನು ಹರಿಬಿಟ್ಟಿದ್ದಾರೆ.

ಒಟ್ಟಾರೆಯಾಗಿ ಮಾಧ್ಯಮ ಎಂಬ ಉದ್ಯಮದಲ್ಲಿ ಮಹಿಳೆ ಹೇಗೆ ಚಿತ್ರಿಸಲ್ಪಡುತ್ತಿದ್ದಾಳೆ ಎಂಬುದನ್ನು ತಿಳಿಸುತ್ತಾರೆಯೇ ಹೊರತು, ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರ ಬದುಕಿನ ಚಿತ್ರಣವನ್ನು ಎಲ್ಲಿಯೂ ಮಾತನಾಡುವುದಿಲ್ಲ. ಆದರೆ, ಒಂದು ಮಾಧ್ಯಮ ಉದ್ಯಮವಾಗಿ ಮಾರ್ಪಾಡಾದಾಗ ಮಹಿಳೆಯನ್ನು ತನ್ನ ಬಂಡವಾಳದಂತೆ ಹೇಗೆ

ಬಳಸಿಕೊಳ್ಳುತ್ತದೆ ಎಂಬುದನ್ನು ತಿಳಿಯಲು ಸಹಕಾರಿಯಾಗಬಲ್ಲದು. ಈ ಕೃತಿಯು ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾದ ಅಂಶಗಳನ್ನು ಒದಗಿಸಿಕೊಡುತ್ತದೆ.

ಡಾ. ಎ.ಮೋಹನ ಕುಂಟಾರ್ ಅವರು ಬರೆದಿರುವ "**ಮಾಧ್ಯಮಗಳು ಮತ್ತು ಭಾಷಾಂತರ'** ಕೃತಿಯನ್ನು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ 2016ರಲ್ಲಿ ಪ್ರಕಟಿಸಿದೆ. ಈ ಕೃತಿಯ ಬಗ್ಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಮಲ್ಲಿಕಾ ಘಂಟಿ ಕೃತಿಯ ಮುನ್ನುಡಿಯಲ್ಲಿ ಬರೆದಂತೆ, ಭಾಷಾಂತರ ಮತ್ತು ಮಾಧ್ಯಮಕ್ಕೆ ಸಂಬಂಧಿಸಿ ಅಧ್ಯಯನ ಮಾಡುವವರಿಗೆ ಒಂದು ಕೈಪಿಡಿಯಂತಿದೆ. ಜಗತ್ತಿನ ಜ್ಞಾನವನ್ನು ಆಯಾ ಭಾಷೆಯ ಮೂಲಕ ಜನರಿಗೆ ತಲುಪಿಸಬೇಕಾದ ಮಹತ್ತರ ಜವಾಬ್ದಾರಿ ಮಾಧ್ಯಮಗಳಿಗೆ ಇರುವುದರಿಂದ ಈ ಕೃತಿಯು ಮಾಧ್ಯಮ ಲೋಕದ ಮಹತ್ವದ ಕೃತಿಯಾಗಿ ಪರಿಗಣಿಸಬಹುದು.

ಮಾಧ್ಯಮಗಳಲ್ಲಿ ಭಾಷೆಯೂ ಒಂದು ಪ್ರಮುಖವಾದ ಮಾನದಂಡ. ಬಹುಭಾಷೆ ಬಲ್ಲವರಿಗೆ ಇಲ್ಲಿ ಹೆಚ್ಚು ಮಾನ್ಯತೆ ನೀಡಲಾಗುತ್ತದೆ. ಭಾಷಾ ಶುದ್ಧಿಗೂ ಮಹತ್ವ ನೀಡಲಾಗುತ್ತಿದೆ. ವಿಶ್ವವೇ ಒಂದು ಕುಟುಂಬ ಆಗಿರುವುದರಿಂದ ಸ್ಥಳೀಯ ಭಾಷೆಯ ಜೊತೆಗೆ ಬೇರೆ ಬೇರೆ ಭಾಷೆಗಳನ್ನು ಕಲಿಯುವಂತೆ ತನ್ನ ಉದ್ಯೋಗಿಗಳಿಗೆ ಉತ್ತೇಜನವನ್ನೂ ಕೊಡುವ ಕೆಲಸ ಮಾಧ್ಯಮದಲ್ಲಿ ಆಗುತ್ತಿದೆ. ಅಲ್ಲದೇ, ಭಾಷಾಂತರ ಕೆಲಸಕ್ಕಾಗಿಯೇ ಉದ್ಯೋಗಿಗಳು ಇದ್ದಾರೆ. ಮಾಧ್ಯಮಕ್ಕೂ ಒಂದು ಭಾಷೆ ಇದೆ. ಈ ಎಲ್ಲ ವಿಷಯಗಳನ್ನು ಈ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ.

ಮಾಧ್ಯಮಗಳಲ್ಲಿ ಭಾಷಾಂತರ, ಮಾಧ್ಯಮ ಭಾಷಾಂತರದ ತಾತ್ವಿಕತೆ, ಮಾಧ್ಯಮ ಭಾಷಾಂತರದ ಸ್ವರೂಪ, ವಿವಿಧ ಹಂತಗಳು, ಬಹುಭಾಷಾ ಪ್ರದೇಶದಲ್ಲಿ ಏಕಭಾಷಾ ವರದಿ, ಮಾಧ್ಯಮ ಭಾಷಾಂತರ ಮತ್ತು ರಾಜಕಾರಣ, ಮಾಧ್ಯಮಗಳಲ್ಲಿ ಭಾಷಾಂತರ ಕಾರ್ಯ ಹೀಗೆ ಏಳು ಅಧ್ಯಾಯಗಳಲ್ಲಿ ಲೇಖಕರು ಮಾಧ್ಯಮದ ಭಾಷಾಂತರಗಳ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಒಟ್ಟಾರೆಯಾಗಿ ಮಾಧ್ಯಮದ ಕುರಿತಾಗಿ ಸಂಶೋಧನೆಯನ್ನು ನಡೆಸುವವರಿಗೆ ಈ ಕೃತಿಯು ಭಾಷೆಯ ನೆಲೆಯಲ್ಲಿ ಮತ್ತು ಭಾಷಾಂತರದ ನೆಲೆಯಲ್ಲಿ ಅಧ್ಯಯನ ಮಾಡಲು ತುಂಬಾ ಸಹಕಾರಿಯಾಗಿದೆ.

ಡಾ.ಬಿ.ಜಿ.ಕಲಾವತಿ ಬರೆದಿರುವ "**ಮಾಧ್ಯಮ ಮತ್ತು ಮಹಿಳೆ'** ಕೃತಿಯನ್ನು ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ 2010ರಲ್ಲಿ ಹೊರತಂದಿದೆ. ತನ್ನ ಅಸ್ತಿತ್ವಕ್ಕಾಗಿ ನಿರಂತರ

ಕ್ರಿಯಾಶೀಲತೆಯಿಂದ, ಅನೇಕ ತಂತ್ರಗಾರಿಕೆಗಳನ್ನು ಪ್ರಯೋಗಿಸುತ್ತಲೇ ಬಂದಿರುವ ಮಾಧ್ಯಮವು ಮಹಿಳೆಗೆ ಕೊಟ್ಟಿರುವ ಸ್ಥಾನ ಎಂಥದ್ದು ಅನ್ನುವ ಪ್ರಶ್ನೆಯನ್ನು ಕೃತಿಯು ಮುಂದಿಡುತ್ತದೆ.

ಮಾಧ್ಯಮ ಮತ್ತು ಮಹಿಳೆಯ ಕುರಿತಾಗಿ ಬರೆಯುತ್ತಾ, ಕೆಲ ಪ್ರಶ್ನೆಗಳನ್ನು ಓದುಗರ ಮುಂದಿಡುತ್ತಾರೆ. “ಮಾಧ್ಯಮದಲ್ಲಿ ಮಹಿಳೆಯ ಸಹಭಾಗಿತ್ವದ ಕುರಿತಾದ ಅದರಲ್ಲೂ ಮಾಧ್ಯಮ ಉದ್ಯಮವಾಗಿ ಬೆಳೆದಿರುವ ಸಂದರ್ಭದಲ್ಲಿ ಮಹಿಳೆಗೆ ದಕ್ಕಿರುವ ಅವಕಾಶಗಳು ಅಥವಾ ಸ್ಥಾನಗಳು ಯಾವ ಬಗೆಯವು? ಮಹಿಳೆಯರಿಗಾಗಿ, ಮಹಿಳಾ ವಿಷಯಗಳಿಗಾಗಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ ಎಷ್ಟು ಸಮಯ ಮತ್ತು ಸ್ಥಳ ಮೀಸಲಿರಿಸಿದೆ. ಜೊತೆಗೆ ಇವು ಪರಿಗಣಿಸುವ ಮಹಿಳಾ ವಿಷಯಗಳು ಯಾವ ಬಗೆಯವು? ಮಾಧ್ಯಮಗಳು ಮಹಿಳೆಯನ್ನು ಹೇಗೆ ಪ್ರತಿನಿಧೀಕರಣ ಮಾಡುತ್ತವೆ ಎಂಬುದು ಮತ್ತು ವಿದ್ಯುನ್ಮಾನ ಮಾಧ್ಯಮದ ಹಲವು ಚಾನೆಲ್‌ಗಳ ಮೂಲಕ ನಾಮುಂದು ತಾಮುಂದು ಎನ್ನುವಂತೆ ಹಲವು ಕಾರ್ಯಕ್ರಮಗಳ ಮೂಲಕ ಮಹಿಳೆಯನ್ನು ಪ್ರತಿನಿಧೀಕರಿಸುವ ಬಗೆ ಎಂಥದ್ದು?’ (ಪುಟ –1 ಮತ್ತು 2) ಎಂದು ಹಲವು ಜಿಜ್ಞಾಸೆಗಳನ್ನು ಮಾಧ್ಯಮ ಸಂಸ್ಥೆಗಳಿಗೆ ಕೇಳುತ್ತಾರೆ.

ಇದರ ಜೊತೆಗೆ ಮಾಧ್ಯಮಗಳು ಲಿಂಗಗಳನ್ನು ಪ್ರತಿನಿಧಿಸುವಲ್ಲಿ ಹೊಂದಿರುವ ಧೋರಣೆಯ ಕುರಿತಾಗಿಯೂ ಅವರು ಕಟುವಿಮರ್ಶೆ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮದಲ್ಲಿ ನಿರೂಪಕಿಯಾಗಿ ಕೆಲಸ ಮಾಡಲು ಇರುವ ಮಾನದಂಡಗಳ ಕುರಿತು ವಿಶ್ಲೇಷಿಸಿರುವ ಲೇಖಕಿ, "ವಿದ್ಯುನ್ಮಾನ ಮಾಧ್ಯಮದಲ್ಲಿನ ವಾರ್ತಾವಾಚಕಿಯರ ಮತ್ತು ನಿರೂಪಕಿಯರ ಅರ್ಹತೆಗಳೆಂದರೆ ಅದರಲ್ಲೂ ಮೊದಲ ಆದ್ಯತೆ ನೋಡಲು ಆಕರ್ಷಕರಾಗಿರಬೇಕು. ವಯಸ್ಸು 25 ಮೀರಿರಬಾರದು. ಆಮೇಲೆ ಉಳಿದೆಲ್ಲ ಅರ್ಹತೆ’ ಎಂದು ವಾಸ್ತವವನ್ನು ಕಟ್ಟಿಕೊಟ್ಟಿದ್ದಾರೆ.

ಸಾಮಾನ್ಯವಾಗಿ ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀ ಪುರುಷರ ಪ್ರಾತಿನಿಧ್ಯವನ್ನು ಗಮನಿಸಿದರೆ, ಬಹುತೇಕ ಕ್ಷೇತ್ರಗಳಲ್ಲಿ ಪುರುಷರದ್ದೇ ಪಾರುಪತ್ಯ. ಆದರೆ, ಜಾಹೀರಾತು ಕ್ಷೇತ್ರದಲ್ಲಿ ಹಾಗಿಲ್ಲ. ಮಹಿಳೆಯರ ಸಂಖ್ಯೆ ಹೆಚ್ಚಿದೆ. ಈ ಕುತೂಹಲದ ಬೆನ್ನು ಹತ್ತುವ ಡಾ. ಕಲಾವತಿ, ಬಂಡವಾಳಶಾಹಿ ತನ್ನ ಲಾಭದ ದೃಷ್ಟಿಯಿಂದ ಗ್ರಾಹಕರನ್ನು ಆಕರ್ಷಿಸಲು ಅವಳನ್ನು ಮಾರಾಟದ ಸರಕಾಗಿ ಬಳಕೆ ಮಾಡಿಕೊಳ್ಳುತ್ತಿರುವುದನ್ನು ಸ್ಪಷ್ಟ ಪಡಿಸುತ್ತಾರೆ. (ಪುಟ–4)

ಮಾಧ್ಯಮ ಮತ್ತು ಮಹಿಳೆ ಕೃತಿಯಲ್ಲಿ ಜಾಹೀರಾತಿನಲ್ಲಿ ಭಾಗವಹಿಸುವ ಮಹಿಳೆ, ಧಾರಾವಾಹಿಯಲ್ಲಿನ ಸ್ತ್ರೀ ಪಾತ್ರಗಳು ಮತ್ತು ಸಿನಿಮಾ ನಾಯಕಿಯರ ಚಿತ್ರಣದ ಬಗೆಗಿನ

ವಿವರಗಳಿವೆ. ಅಲ್ಲದೇ, ಮಹಿಳೆಯನ್ನು ಮಾಧ್ಯಮಗಳು ಹೇಗೆ ನೋಡುತ್ತವೆ ಅನ್ನುವ ಅಂಶಗಳು ಸಿಗುತ್ತವೆ. ಆದರೆ, ಅದೇ ಮಾಧ್ಯಮದಲ್ಲಿ ನಿಯತಕಾಲಿಕವಾಗಿ ಕೆಲಸ ಮಾಡುವ ಮಹಿಳೆಯ ಕುರಿತಾದ ಅಂಶಗಳು ಇಲ್ಲಿ ಸಿಗುವುದಿಲ್ಲ. ಆದರೆ, ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ ಮಹಿಳೆ, ಧಾರಾವಾಹಿ ಮತ್ತು ಸಿನಿಮಾದಲ್ಲಿ ನಟಿಸುವ ಮಹಿಳೆಯ ಕಾರ್ಯಕ್ಷೇತ್ರಕ್ಕೂ ಮತ್ತು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರ ಕ್ಷೇತ್ರಕ್ಕೂ ಒಂದಷ್ಟು ಸಾಮೀಪ್ಯಗಳಿವೆ. ಹಾಗಾಗಿ ಕೆಲ ಟಿಪ್ಪಣಿಗಳು ಸಂಶೋಧನೆಗೆ ನೆರವಾಗುತ್ತವೆ.

ಎಂ.ಜಯರಾಮ ಅಡಿಗ ಮತ್ತು ಡಿ.ಯಶೋದಾ ಜಂಟಿಯಾಗಿ ಸಂಪಾದನೆ ಮಾಡಿರುವ "**ಪತ್ರಕರ್ತೆಯ ಪುರಾವೆಗಳು**' ಪುಸ್ತಕವನ್ನು ಬೆಂಗಳೂರಿನ ಪ್ರೆಸ್‌ಕ್ಲಬ್ ಪ್ರಕಾಶನ 2013ರಲ್ಲಿ ಪ್ರಕಟಿಸಿದೆ. ಪತ್ರಕರ್ತೆಯರೇ ಸ್ವತಃ ತಮಗಾದ ಅನುಭವಗಳನ್ನು ದಾಖಲಿಸಿರುವ ಕನ್ನಡದ ಅಪರೂಪದ ಪುಸ್ತಕವಿದು. ಕನ್ನಡ ಟಿವಿ ಮತ್ತು ಮುದ್ರಣ ಮಾಧ್ಯಮಕ್ಕೆ ಹಲವು ವರ್ಷಗಳ ಇತಿಹಾಸವಿದ್ದರೂ, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರ ಕುರಿತು ಪುಸ್ತಕಗಳು ಹೆಚ್ಚಾಗಿ ಬಂದಿಲ್ಲ. ಹಾಗಾಗಿ ಇದು ಮಹತ್ವದ ಕೃತಿ ಅನಿಸುತ್ತದೆ.

ಸಂಪಾದಕರಲ್ಲಿ ಒಬ್ಬರಾದ ಡಿ.ಯಶೋದಾ ತಮ್ಮ ಮಾತಿನಲ್ಲಿ ಬರೆದುಕೊಂಡಿದ್ದು ಹೀಗೆ, ಪತ್ರಕರ್ತೆ ಎಂಬ ಪ್ರತ್ಯೇಕತೆ ವಾಸ್ತವವೆ? ಹಾಗೆ ಗುರುತಿಸುವುದು ಸರಿಯೇ? ಪತ್ರಕರ್ತೆಯ ಪತ್ರ್ಯೇಕತೆ ಅಥವಾ ಅಸ್ಮಿತೆ ಏನು? ಪತ್ರಕರ್ತೆ ಸರಿಸಮಾನಳಷ್ಟೇ ಅಲ್ಲ, ವಿಶೇಷಳೂ ಆಗಲು ಸಾಧ್ಯವೆ? ಪತ್ರಕರ್ತೆ ತನ್ನತನದ ವೈಶಿಷ್ಟ್ಯವನ್ನು ಹೇಗೆ ನಿರ್ವಹಿಸಲು ಸಾಧ್ಯ? ಸಾರ್ವತ್ರಿಕ ವಿಷಯಗಳಲ್ಲಿ ಪತ್ರಕರ್ತೆ ಎಷ್ಟು ಆಸಕ್ತಿ ವಹಿಸಬಹುದು? ಪತ್ರಕರ್ತೆಯ ವಿಶಿಷ್ಟ ದೃಷ್ಟಿಕೋನ ನಮ್ಮ ಪತ್ರಿಕೋದ್ಯಮದಲ್ಲಿ ಬಿಂಬಿತವಾಗುತ್ತದೆಯೆ? ಪತ್ರಕರ್ತೆಗೆ ಯಾವುದಾದರೂ ವಿಷಯ ಕ್ಷೇತ್ರ ಮೀಸಲು ಎನಿಸುತ್ತದೆಯೇ? ಈಗ ಪತ್ರಕರ್ತೆಗೆ ಇರುವ ಅವಕಾಶ, ಸವಾಲು ಏನು? ಮಾದರಿ ಪತ್ರಕರ್ತೆಯರು ಯಾರು? ಹೀಗೆ ಹಲವಾರು ಪ್ರಶ್ನೆಗಳನ್ನು ಹಾಕಿಕೊಳ್ಳುವುದರ ಮೂಲಕ ಇವುಗಳಿಗೆ ಉತ್ತರವನ್ನು ಕಂಡುಕೊಳ್ಳುವಲ್ಲಿ ಮುಂದಾಗಿದ್ದಾರೆ.

ಮಾಧ್ಯಮದ ನಾನಾ ವಿಭಾಗಗಳಲ್ಲಿ ಕೆಲಸ ಮಾಡುವ ಮತ್ತು ಈ ಹೊತ್ತು ಮಾಧ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ 21 ಜನ ಪತ್ರಕರ್ತೆಯರು ನಿರ್ಭೀತಿಯಿಂದ ತಮ್ಮ ಅನುಭವ ಕಥನಗಳನ್ನು ಇಲ್ಲಿ ದಾಖಲಿಸಿದ್ದಾರೆ. "ಮಾಧ್ಯಮಗಳಲ್ಲಿ ನಿರ್ಣಾಯಕ ಸ್ಥಾನದಲ್ಲಿ ಮಹಿಳೆಗೆ ಹೆಚ್ಚು ಅವಕಾಶ ಇಲ್ಲ' ಅನ್ನುವುದನ್ನು ಗಟ್ಟಿಧ್ವನಿಯಲ್ಲಿ ಹೇಳಿದ್ದಾರೆ. ಇಪ್ಪತ್ತೊಂದು ಪತ್ರಕರ್ತೆಯರಲ್ಲಿ ಸುದ್ದಿ ವಾಹಿನಿಗಳಲ್ಲಿ ಕೆಲಸ ಮಾಡುವ ವರದಿಗಾರ್ತಿ ವಿಜಯಲಕ್ಷ್ಮೀ ಶಿಬರೂರ್, ವಾರ್ತಾ

ವಾಚಕಿಯರಾದ ರಾಧಾ ಹಿರೇಗೌಡರ್, ರಾಧಿಕಾ ರಾಣಿ, ವೀಣಾ ಪೂಜಾರಿ ತಮ್ಮ ವಿಶಿಷ್ಟ ಅನುಭವಗಳನ್ನು ಇಲ್ಲಿ ದಾಖಲಿಸಿದ್ದಾರೆ.

"ಪತ್ರಿಕೋದ್ಯಮ ಹೆಚ್ಚು ಕಡಿಮೆ ಪುರುಷರೇ ಆಳುವ ಸಾಮ್ರಾಜ್ಯ. ಅಲ್ಲಿ ನಿರ್ವಹಿಸಲ್ಪಡುವ ಪ್ರಮುಖ ಹುದ್ದೆಗಳೆಲ್ಲಾ ಪುರುಷರಿಗೇ ಸೀಮಿತ. ಮಹಿಳೆಯರಿಗೆ ದೊರೆಯುವ ಹುದ್ದೆಗಳೆಂದರೆ ಡೆಸ್ಕ್‌ನಲ್ಲಿ ಉಪ ಸಂಪಾದಕಿ ಹುದ್ದೆ, ತಪ್ಪಿದರೆ ಸಂಸ್ಕೃತಿ, ಮಹಿಳೆ, ಆರೋಗ್ಯ ಕ್ಷೇತ್ರಗಳ ವರದಿಗಾರಿಕೆಯ ಸೌಭಾಗ್ಯ. ರಾಜಕೀಯ, ಅಪರಾಧ, ತನಿಖಾ ವರದಿ, ಕ್ರೀಡೆ, ವಾಣಿಜ್ಯ ಮುಂತಾದ ವರದಿಗಾರಿಕೆ ಮಹಿಳೆಯರಿಗೆ ದೂರದ ಬೆಟ್ಟ. ಆದರೆ, ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಂತೆ ಇಲ್ಲೂ ಬದಲಾವಣೆಯ ಗಾಳಿ ಬೀಸುತ್ತಿದೆ. ಆದರೂ ಬದಲಾವಣೆಯ ಗಾಳಿ ಅಂತಹ ದೊಡ್ಡ ಕ್ರಾಂತಿಯನ್ನೇನೂ ಮಾಡಿಲ್ಲ.' (ಪುಟ 22) ಎಂದು ತಾವು ಕೆಲಸ ಮಾಡುತ್ತಿರುವ ಕ್ಷೇತ್ರದ ಬಗ್ಗೆ ವಿಜಯಲಕ್ಷ್ಮಿ ಬರೆದಿದ್ದಾರೆ.

ಮಹಿಳೆ ಅನ್ನುವ ಕಾರಣಕ್ಕಾಗಿ ಕೈ ತಪ್ಪುತ್ತಿರುವ ಅವಕಾಶಗಳ ಕುರಿತು ರಾಧಾ ಹೀರೇಗೌಡರು ತಮ್ಮ ಲೇಖನದಲ್ಲಿ ಹೀಗೆ ಬರೆಯುತ್ತಾರೆ, "ಪತ್ರಕರ್ತೆ ಅನ್ನೋ ಕಾರಣಕ್ಕೆ ಕೇಂದ್ರ ಕಚೇರಿಯಿಂದ ಹೊರಗಿನ ಊರುಗಳಿಗೆ ಕಳುಹಿಸುವುದಿಲ್ಲ. ಜಿಲ್ಲಾ ವರದಿಗಾರ್ತಿಯಾಗಿ ಕೆಲಸ ಮಾಡುವ ಅವಕಾಶವಂತೂ ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಕಷ್ಟವೋ ಕಷ್ಟ. ಎಷ್ಟೇ ಬೋಲ್ಡ್ ಆಗಿದ್ರೂ ಹೆಣ್ಣು ಅನ್ನೋ ಕಾರಣಕ್ಕೆ ಕೆಲವೊಂದು ವಿಷಯಗಳ ಕವರೇಜ್‌ಗೆ ಕಳುಹಿಸುವುದಿಲ್ಲ. ಅನೇಕ ಬಾರಿ ವರದಿಗಾರ್ತಿಯರೇ ಹಿಂಜರಿಯೋದನ್ನ ನೋಡಿದ್ದೀನಿ. ಕಲಿಯುವ ಆಸಕ್ತಿ, ಕಲಿತದ್ದನ್ನು ಪ್ರಸ್ತುತಪಡಿಸುವುದನ್ನು ಕಲಿತರೆ, ಬಯಸುವ ಯಾವುದೇ ಅವಕಾಶ ತಡವಾಗಿಯಾದರೂ ಸಿಕ್ಕೇ ಸಿಗುತ್ತದೆ.' (ಪುಟ– 60) ಎಂದು ಬರೆಯುತ್ತಾರೆ.

ವೀಣಾ ಪೂಜಾರಿ ತಮ್ಮ ಹೆಚ್ಚು ಪರಿಶ್ರಮ ಕಡಿಮೆ ಮನ್ನಣೆ ಎಂಬ ಲೇಖನದಲ್ಲಿ ಮಹಿಳಾ ಪತ್ರಕರ್ತೆಯರ ರಾತ್ರಿಪಾಳಯ ಬಗ್ಗೆ ಚರ್ಚೆ ಮಾಡುತ್ತಾ, "ಪತ್ರಿಕೆ ಮತ್ತು ಚಾನೆಲ್‌ಗಳಲ್ಲಿ ತಡರಾತ್ರಿ ಕೆಲಸಗಳ ನೆಪ ಹೇಳಿ ಅವಕಾಶ ನೀಡದೆ ಮಹಿಳೆಯರನ್ನು ಕಡೆಗಣಿಸಲಾಗುತ್ತೆ. ಆದ್ರೆ ಗಮನಿಸಬೇಕಾದ ಅಂಶ ಅಂದರೆ ಮಹಿಳೆ ರಾತ್ರಿ ಪಾಳಯಾಗಲಿ, ತಡರಾತ್ರಿವರೆಗಿನ ಕೆಲಸಕ್ಕಾಗಿ ಹೆದರುವುದಿಲ್ಲ. ಬದಲಾಗಿ ಕೆಲಸ ನೀಡುವವರೆ ಹೆದರುತ್ತಾರೆ. ಇದಕ್ಕೆ ಕಾರಣ ಭದ್ರತೆ ಸಮಸ್ಯೆ ಅವರಲ್ಲಿನ ಈ ಹುಳುಕುಗಳನ್ನು ಮಹಿಳೆ ಅನ್ನುವ ಕಾರಣ ಕೊಟ್ಟು ಹೆಣ್ಣಿನ ತಲೆಗೆ ಕಟ್ಟುವ ಯತ್ನ ನಡೆಯುತ್ತೆ. ಈಗಾಗಲೇ ಸಾಕಷ್ಟು ಪತ್ರಿಕೆ ಮತ್ತು ಚಾನೆಲ್‌ಗಳಲ್ಲಿ ಮಹಿಳೆ ರಾತ್ರಿ ವೇಳೆ ಕೆಲಸ ನಿರ್ವಹಿಸುತ್ತಿದ್ದಾಳೆ' ಎಂದು ಉಲ್ಲೇಖಿಸಿದ್ದಾರೆ.

ಒಟ್ಟಾರೆ ಪತ್ರಕರ್ತೆಯ ಪುರಾವೆಗಳು ಕೃತಿಯಲ್ಲಿ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಕೆಲಸ ಮಾಡುವ ವರದಿಗಾರ್ತಿಯರ ನೋವುಗಳನ್ನು ಹಲವು ದೃಷ್ಟಿ ಕೋನದಲ್ಲಿ ವಿಶ್ಲೇಷಿಸಿದ್ದಾರೆ. ಮಹಿಳಾ ಉದ್ಯೋಗಿಗಳ ಅಧ್ಯಯನಕ್ಕೆ ಮತ್ತು ಸಂಶೋಧನೆಗೆ ಸಾಕಷ್ಟು ಅಂಶಗಳು ಸಹಾಯ ಮಾಡಬಲ್ಲವು.

2.3 ಉದ್ಯಮ ಮತ್ತು ಮಾಧ್ಯಮ ಕೇಂದ್ರಿತ ಅಧ್ಯಯನಗಳು :

ಡಾ.ಬಿ.ಕೆ.ರವಿ ಮತ್ತು ಸತ್ಯಪ್ರಕಾಶ್ ಎಂ.ಆರ್ ಜಂಟಿಯಾಗಿ ರಚಿಸಿರುವ "**ಮಾಧ್ಯಮ–ಉದ್ಯಮ**' ಕೃತಿಯನ್ನು ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರ 2008ರಲ್ಲಿ ಪ್ರಕಟಿಸಿದೆ. ಈ ಕೃತಿಯಲ್ಲಿ ಮಾಧ್ಯಮ ಹೇಗೆ ಉದ್ಯಮವಾಗಿ ಬದಲಾಗಿದೆ ಎಂಬ ಚರ್ಚೆ ಇದೆ. ಉದ್ಯಮವಾದ ನಂತರದ ಆತಂಕಗಳನ್ನೂ ಲೇಖಕರು ಹಿಡಿದಿಟ್ಟಿದ್ದಾರೆ.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಪ್ರೊ.ಎಸ್.ಜಿ ಸಿದ್ಧರಾಮಯ್ಯ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಮಾಧ್ಯಮ ಮತ್ತು ಉದ್ಯಮದ ಸ್ಪಷ್ಟತೆಯನ್ನು ಕೊಡುವುದು ಹೀಗೆ, "ಯಾವುದೇ ಕ್ಷೇತ್ರದ ಉದ್ಯಮಕ್ಕೆ ಲಾಭವಷ್ಟೇ, ಪ್ರಸಾರವಷ್ಟೇ, ಜನಪ್ರಿಯತೆಯಷ್ಟೇ ಮಾನದಂಡಗಳಲ್ಲ. ಇವೆಲ್ಲಕ್ಕಿಂತ ಮುಖ್ಯವಾಗಿ ಸಾಮಾಜಿಕ ಜವಾಬ್ದಾರಿ, ಸಾಂಸ್ಕೃತಿಕ ಮೌಲ್ಯನಿಷ್ಠತೆ, ಶೈಕ್ಷಣಿಕ ದೃಷ್ಟಿಗಾಂಭೀರ್ಯ ಇತ್ಯಾದಿಗಳು ವೃತ್ತಿಧರ್ಮದ ನೀತಿಸಂಹಿತೆಗಳಾಗಿ ಪಾಲನೆಗೆ ಒಳಗಾಗಬೇಕಾದ ಅಗತ್ಯವಿದೆ. ಲಾಭವಿಲ್ಲದ ವ್ಯಾಪಾರ ಕತ್ತೆಯ ಮೈ ತುರಿಸಿದಂತೆಯೇ ಎಂಬ ಕಠೋರ ವಾಸ್ತವದ ನಡುವೆಯೂ ಲಾಭ ಗಳಿಕೆಯ ಸ್ಪರ್ಧೆಯನ್ನು ಸಾಮಾಜಿಕ ಜವಾಬ್ದಾರಿಯೊಂದು ಪ್ರಧಾನ ಪಾತ್ರವಹಿಸಬೇಕಾದ ಅಗತ್ಯವಿರುತ್ತದೆ. ಸಮಾಜದಲ್ಲಿ ವ್ಯಕ್ತಿ ಗೌರವ, ವೈಯಕ್ತಿಕ ಬದುಕಿನ ಸೀಮಾರೇಖೆ, ಕುಟುಂಬ ಬದುಕಿನ ಸೀಮಾರೇಖೆ ಇವುಗಳು ಸಮುದಾಯದ ಬದುಕಿನಲ್ಲಿ ತಳುಕು ಹಾಕಿಕೊಂಡಾಗ ಅವುಗಳನ್ನು ಹೇಗೆ ನಿಭಾಯಿಸಬೇಕು ಎಂಬ ಸೂಕ್ಷ್ಮ ವಿವೇಚನೆ ಮಾಧ್ಯಮೋದ್ಯಮಕ್ಕೆ ಇರಬೇಕಾಗುತ್ತದೆ. ಈ ಎಚ್ಚರ ಉದ್ಯಮಶೀಲತೆಯ ಗುಣವಾಗಬೇಕು. ವೃತ್ತಿ ಧರ್ಮದ ನೀತಿ ಸಂಹಿತೆಯಾಗಬೇಕು' ಎಂದು ವಿಶ್ಲೇಷಿಸುತ್ತಾರೆ.

ಲಾಭವೇ ಪ್ರಧಾನವಾಗಿರುವ ಬೇರೆ ಬೇರೆ ಉದ್ಯಮಕ್ಕೂ ಮತ್ತು ಮಾಧ್ಯಮವು ಒಂದು ಉದ್ಯಮವಾಗಿ ಬದಲಾಗುವುದಕ್ಕೂ ಇರುವ ಸಂಬಂಧವನ್ನು ತುಂಬಾ ಸೂಕ್ಷ್ಮವಾಗಿ ಅಧ್ಯಕ್ಷೀಯ ನುಡಿಗಳಲ್ಲಿ ಆಡಿದ್ದಾರೆ. ಕೃತಿಕಾರರು ಈ ಕೃತಿಯಲ್ಲಿ ವಿದ್ಯುನ್ಮಾನ ಮಾಧ್ಯಮಗಳಾದ ಟೆಲಿವಿಷನ್, ರೇಡಿಯೋ, ಚಲನಚಿತ್ರೋದ್ಯಮ, ಅಂತರ್ಜಾಲ ಉದ್ಯಮಗಳ ಬಗ್ಗೆ ವಿಶ್ಲೇಷಿಸುತ್ತಾ

ಹೋಗಿದ್ದಾರೆ. ಸಮೂಹ ಮಾಧ್ಯಮಗಳು ಉದ್ಯಮಗಳಾದ ಈ ಸಂದರ್ಭದಲ್ಲಿ ಅವುಗಳ ಮೌಲ್ಯಮಾಪನದ ಕೆಲಸ ಕೂಡ ಈ ಕೃತಿಯಲ್ಲಿ ಆಗಿದೆ. ಅದರ ಜೊತೆಗೆ ಜೊತೆಗೆ ಮಾಧ್ಯಮದ ಬೆಳವಣಿಗೆ ಚರಿತ್ರೆಯನ್ನು ನಾವು ಕಾಣಬಹುದು. ಮಾಧ್ಯಮಗಳು ಉದ್ಯಮವಾದ ನಂತರ ತನ್ನ ವಸ್ತುನಿಷ್ಠತೆ ಉಳಿಸಿಕೊಂಡಿದೆಯಾ? ಜನಪರವಾಗಿದೆಯಾ? ಮಾಧ್ಯಮಕ್ಕೊಂದು ಸಿದ್ಧಾಂತ, ಚಹರೆ ಉಳಿದುಕೊಂಡಿದೆಯಾ? ಅದು ಏನಾಗಬೇಕಿತ್ತು, ಏನಾಗಿದೆ ಎಂಬ ಸ್ಥೂಲ ಅಧ್ಯಯನ ಇಲ್ಲಿದೆ.

ಇದು ದಿಢೀರ್ ಅಂತ ಆಗುವ ಪ್ರಕ್ರಿಯೆ ಅಲ್ಲ. ಎಲ್ಲಾ ಮಾಧ್ಯಮಗಳು ಏಕಕಾಲದಲ್ಲಿ ಬೆಳೆಯುತ್ತಿರುವುದರಿಂದ ಮಾಧ್ಯಮ ಮನರಂಜನಾ ಉದ್ದಿಮೆಗಳ ಬೆಳವಣಿಗೆಗೆ ಸ್ವಲ್ಪ ತೊಡಕುಂಟಾಗಿದೆ. ಟೆಲಿವಿಷನ್, ಪತ್ರಿಕೆಗಳು, ರೇಡಿಯೋ ಮತ್ತು ಇಂಟರ್‌ನೆಟ್ ಎಲ್ಲವೂ ಜೊತೆಜೊತೆಯಲ್ಲಿಯೇ ಬೆಳೆಯುತ್ತಿವೆ. ವಿದ್ಯುನ್ಮಾನ ಮಾಧ್ಯಮದ ಪ್ರಭಾವದಿಂದಾಗಿ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು ತಮ್ಮ ಸ್ವರೂಪವನ್ನೇ ಬದಲಿಸಿಕೊಳ್ಳುತ್ತಿವೆ. ರೇಡಿಯೋ ಮತ್ತು ಸಿನಿಮಾ ಕೂಡ ಈ ಪ್ರಭಾವದಿಂದ ಮುಕ್ತವಾಗಿಲ್ಲ. ಇದರಿಂದಾಗಿ ಆಯಾ ಮಾಧ್ಯಮಗಳು ತಂತಮ್ಮ ಸ್ಥಾನಗಳನ್ನು ಕಂಡುಕೊಳ್ಳಲು ಕೆಲ ಸಮಯ ಸ್ವಲ್ಪ ಕಷ್ಟವಾಗಬಹುದು' ಎಂಬ ಮಾತುಗಳನ್ನೂ ಲೇಖಕರು ಬರೆಯುತ್ತಾರೆ.

ಉದ್ಯಮವಾಗಿ ಬದಲಾದರೂ, ಈ ಎಲ್ಲ ಬದಲಾವಣೆಗಳ ನಡುವೆ ಮಾಧ್ಯಮಗಳಿಗೆ ಸಾಮಾಜಿಕ ಬದ್ಧತೆಯೂ ಇರಬೇಕಾಗುತ್ತದೆ ಅನ್ನುವುದು ಲೇಖಕರ ಆಶಯವಾಗಿದೆ. ಯಾಕೆ ಸಾಮಾಜಿಕ ಬದ್ಧತೆ ಇರಬೇಕು ಅನ್ನುವುದನ್ನೂ ಅವರು ಹೇಳುತ್ತಾ, "ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಾಧ್ಯಮಗಳು ವೇಗವರ್ಧಕವಾಗಿ ಕಾರ್ಯನಿರ್ವಹಿಸಬಲ್ಲವು. ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರವನ್ನೂ ವಹಿಸುತ್ತವೆ. ಭಾರತದಂತಹ ರಾಷ್ಟ್ರದಲ್ಲಿ ಸಾಮಾಜಿಕ ಸ್ವಾಸ್ಥ್ಯ ಕಾಯ್ದುಕೊಳ್ಳುವ ಗುರುತರ ಜವಾಬ್ದಾರಿ ಮಾಧ್ಯಮಗಳ ಮೇಲಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ನಿಷ್ಕ್ರಿಯಗೊಂಡರೆ ಜನತೆಯನ್ನು ಎಚ್ಚರಿಸುವ, ಅವರಲ್ಲಿ ಅರಿವು ಮೂಡಿಸುವ ಮಹತ್ತರ ಜವಾಬ್ದಾರಿಯನ್ನು ಮಾಧ್ಯಮಗಳು ನಿರ್ವಹಿಸಬೇಕಿದೆ. ಹಾಗಾಗಿ ಬದ್ಧತೆಯ ಪ್ರದರ್ಶನ ಈ ಮಾಧ್ಯಮದಲ್ಲಿ ಆಗಲೇಬೇಕು' (ಪುಟ– 9) ಎಂಬ ಅಭಿಪ್ರಾಯವನ್ನು ಲೇಖಕರು ಈ ಕೃತಿಯಲ್ಲಿ ಮಂಡಿಸಿದ್ದಾರೆ.

ಉದ್ಯಮವಾದ ಸ್ವರೂಪದ ಬಗ್ಗೆ ಹಲವು ರೀತಿಯಲ್ಲಿ ಚರ್ಚಿಸಿರುವ ಈ ಕೃತಿ ಬಿಡುಗಡೆಯಾಗಿದ್ದು ಹತ್ತು ವರ್ಷಗಳ ಹಿಂದೆ. ಅಲ್ಲಿಂದ ಉದ್ಯಮದಲ್ಲಿ ಇನ್ನೂ ಹಲವು

ರೀತಿಯಲ್ಲಿ ಬದಲಾಗಿದೆ. ವಿದೇಶಿ ಬಂಡವಾಳ ಕೂಡ ಈ ಮಾಧ್ಯಮಕ್ಕೆ ಹರಿದು ಬಂದಿದ್ದು, ಬಹುತೇಕ ಮಾಧ್ಯಮಗಳ ಮಾಲೀಕರು ಉದ್ಯಮಿಗಳಿದ್ದಾರೆ. ಅಲ್ಲದೇ, ರಾಜಕಾರಣಿಗಳು ಮತ್ತು ಆಯಾ ಪಕ್ಷಗಳ ಒಡೆತನದಲ್ಲೂ ಮಾಧ್ಯಮ ಸಂಸ್ಥೆಗಳು ಹುಟ್ಟಿಕೊಂಡಿವೆ. ಹಾಗಾಗಿ ಉದ್ಯಮಕ್ಕೆ ಮತ್ತೊಂದು ಆಯಾಮ ಸಿಕ್ಕಿದೆ. ಬೇರೆಯದ್ದೇ ಆದ ಅರ್ಥವ್ಯವಸ್ಥೆ ಸೃಷ್ಟಿಯಾಗಿದೆ. ಈ ಕೊರತೆಯು ಪುಸ್ತಕದಲ್ಲಿದೆ. ಇದರ ನಡುವೆಯೂ ಮಾಧ್ಯಮವು ಉದ್ಯಮವಾದ ಚರಿತ್ರೆಯ ಒಂದು ಹಂತ ದಾಖಲಾಗಿರುವುದರಿಂದ ಸಂಶೋಧನೆಗೆ ಉಪಯುಕ್ತವಾಗುವಂತಹ ಸಲಹೆಗಳು ಇಲ್ಲಿವೆ.

ಡಾ.ವಿಜಯಾ ಅವರ ಕೃತಿ "**ನುಡಿ ರಂಗೋಲಿ**' ಲೇಖನಗಳ ಸಂಗ್ರಹವನ್ನು ಬೆಂಗಳೂರಿನ ನಾಕುತಂತಿ ಪ್ರಕಾಶನ 2017ರ ಇಸವಿಯಲ್ಲಿ ಹೊರತಂದಿದೆ. ಹಿರಿಯ ಪತ್ರಕರ್ತೆ, ಹಲವು ಪುಸ್ತಕಗಳ ಸಂಪಾದಕಿ, ಮಹಿಳಾಪರ ಚಿಂತಕಿಯೂ ಆಗಿರುವ ವಿಜಯಾ ಅವರ 20 ಲೇಖನಗಳನ್ನು ಒಳಗೊಂಡಿರುವ ಕೃತಿಯಿದು.

ಈ ಇಪ್ಪತ್ತು ಲೇಖನಗಳಲ್ಲಿ ಬಹುತೇಕ ಮಹಿಳಾಪರ ಚಿಂತನೆಗಳನ್ನೇ ಪ್ರಧಾನವಾಗಿಟ್ಟುಕೊಂಡು ಬರೆದಿದ್ದಾರೆ. ಅದರಲ್ಲೂ ಸಮೂಹ ಮಾಧ್ಯಮದಲ್ಲಿ ಮಹಿಳೆ ಮತ್ತು ಸಮೂಹ ಮಾಧ್ಯಮ–ಮಹಿಳೆ ಲೇಖನಗಳು ಮಾಧ್ಯಮದಲ್ಲಿನ ಮಹಿಳೆಯ ಕುರಿತದ್ದಾಗಿವೆ.

ಸಮೂಹ ಮಾಧ್ಯಮಗಳು– ಮಹಿಳೆ ಲೇಖನದಲ್ಲಿ "ಯಾವ ಮಾಧ್ಯಮವನ್ನೂ ಮಹಿಳೆಯರ ಕುರಿತು ವಿಶೇಷ ಆಸ್ಥೆ ವಹಿಸುತ್ತಿದೆಯೆಂದು ಬೆರಳು ತೋರಿಸಿ ಹೇಳುವುದು ಕಷ್ಟ' (ಪುಟ –91) ಎಂಬ ಮಾತಿನ ಮೂಲಕವೇ ತಮ್ಮ ನುಡಿಗಳನ್ನು ಶುರು ಮಾಡುತ್ತಾರೆ ಲೇಖಕಿ.

'ಈ ಮಾಧ್ಯಮಗಳಲ್ಲಿ ಮಹಿಳೆಯ ಚಿತ್ರಣ ಅಥವಾ ಅಲ್ಲಿ ದುಡಿಯುವ ಮಹಿಳೆ ಕುರಿತಂತೆ ಯೋಚಿಸುವಾಗ ಎರಡು ಮೂರು ಹಂತಗಳನ್ನು ಗಮನದಲ್ಲಿಡಬೇಕಾಗುತ್ತದೆ. ಅಧಿಕಾರ ವರ್ಗ ಅಥವಾ ಸಹೋದ್ಯೋಗಿಗಳಿಂದ ಎದುರಾಗುವ ಆಂತರಿಕ ಹಿಂಸೆಯ ಬಗ್ಗೆ ಸಾಕಷ್ಟು ಚರ್ಚೆ ಆಗಿವೆ. ಆ ಸಂಬಂಧವಾಗಿ ಕಾನೂನುಗಳೂ ಬಂದಿವೆ. ಆದರೆ, ಇನ್ನೂ ಎಲ್ಲವೂ ಸರಿಯಾಗಿದೆ ಎಂದು ಅನಿಸುತ್ತಿಲ್ಲ. ದಿನ ಬೆಳಗಾದರೆ ಸುದ್ದಿ ಮಾಧ್ಯಮಗಳು ಈ ಕಿರುಕುಳ, ಹಿಂಸೆ ಕುರಿತು ವರದಿ ಮಾಡುತ್ತಲೇ ಇವೆ. ಕಾನೂನುಗಳನ್ನು ಮೀರಿ ಅಥವಾ ಜಾರಿಗೊಳಿಸಿ, ಜಾರಿಗೊಳಿಸುವಾಗಲೂ ಸ್ವಹಿತಾಸಕ್ತಿಗೆ ಬೇಕಾದಂತೆ ರೂಪಿಸಿಕೊಂಡಿರುವ ಉದಾಹರಣೆಗಳು ಸಾವಿರ ಸಾವಿರ' ಎನ್ನುತ್ತಾರೆ ಡಾ.ವಿಜಯ.

ಇದೇ ಕೃತಿಯಲ್ಲಿ ಬರುವ ಮತ್ತೊಂದು ಲೇಖನ ಸಮೂಹ ಮಾಧ್ಯಮದಲ್ಲಿನ ಮಹಿಳೆಯ ಕುರಿತದ್ದಾಗಿದೆ. ಈ ಮಾಧ್ಯಮಗಳು ಮಹಿಳೆಯನ್ನು ಹೇಗೆ ಪ್ರಕಟಸುತ್ತವೆ. ಹೇಗೆ ಪ್ರದರ್ಶಿಸುತ್ತವೆ ಮತ್ತು ಆಕೆ ಅಲ್ಲಿ ಹೇಗೆ ತೊಡಗಿಕೊಂಡಿದ್ದಾಳೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಮಾಧ್ಯಮದಲ್ಲಿ ಮಹಿಳೆ ಮಾರುಕಟ್ಟೆ ಮತ್ತು ಮಾಧ್ಯಮದ ನಡುವೆ ವಾಹಕವಾಗಿದ್ದಾಳೆ ಎಂದು ಹೇಳುತ್ತಲೇ, ಕೆಲ ಸೂಕ್ಷ್ಮ ವಿಚಾರಗಳನ್ನು ಓದುಗರೊಂದಿಗೆ ಹಂಚುತ್ತಾ ಹೋಗುತ್ತಾರೆ.

"ನಮ್ಮ ಹೋರಾಟ ಸಮೂಹ ಮಾಧ್ಯಮದಲ್ಲಿ, ಅದೂ ಕಲೆಯ ಹೆಸರಲ್ಲಿ ಹೆಣ್ಣು ಬಹುಸೂಕ್ಷ್ಮವಾಗಿ ಮತ್ತೆ ಮತ್ತೆ ಅದೇ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಹೇಗೆ ಬಳಕೆಯಾಗುತ್ತಾಳೆ ಎಂಬ ಕಡೆಗೆ ಗಮನಕೊಡಬೇಕಿದೆ. ಅವಳ ಈ ಎಚ್ಚರದ ಸ್ಥಿತಿಯನ್ನು ದಾರಿ ತಪ್ಪಿಸಲು ಥಟ್ಟನೆ ಪರಿಹಾರವಾಗದ ಸಮಸ್ಯೆಯಾಗಿಸುವಂಥ ಜಾಣ ತಿರುವು ಕೊಡುವ ಮೂಲಕ ಹೇಗೆ ಹಾದಿ ತಪ್ಪಿಸಲಾಗುತ್ತಿದೆ ಎಂಬುದರತ್ತ ಗಮನ ಹರಿಯಬೇಕೇನೋ' ಎನ್ನುತ್ತಾರೆ ವಿಜಯಾ.

ಮಾಧ್ಯಮದಲ್ಲಿ ಕೆಲಸ ಮಾಡುವವರು ತನ್ನ ಕ್ಷೇತ್ರದ ಬಗ್ಗೆ ಬರೆಯುವುದಕ್ಕೂ, ದೂರ ನಿಂತುಕೊಂಡು ಮಾಧ್ಯಮದ ಕುರಿತಾಗಿ ಹೇಳುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಡಾ.ವಿಜಯಾ ಇಲ್ಲಿ ಸ್ವತಃ ಹಲವು ದಶಕಗಳ ಕಾಲ ಇದೇ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ರೇಡಿಯೋ, ಟಿವಿ ಮತ್ತು ಪತ್ರಿಕೋದ್ಯಮ, ಸಿನಿಮಾ ರಂಗವನ್ನು ಹತ್ತಿರದಿಂದ ಬಲ್ಲವರಾಗಿದ್ದಾರೆ. ಹಾಗಾಗಿ ಮಾಧ್ಯಮದ ಒಳನೋಟ ಇಲ್ಲಿದೆ. ಇದು ಸಂಶೋಧನೆಗೆ ಆಕರವಾಗಬಲ್ಲ ಕೃತಿಯಾಗಿದೆ.

ಡಾ.ಎಚ್.ಎಸ್.ಶ್ರೀಮತಿ ಅವರ ಸಂಪಾದಕತ್ವದಲ್ಲಿ ಬಂದ **"ಮಹಿಳಾ ಅಧ್ಯಯನ'** ಸಂಪುಟ 2 ಸಂಚಿಕೆ 1, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 2000ರಲ್ಲಿ ಈ ಕೃತಿಯನ್ನು ಪ್ರಕಟಿಸಿದೆ. ವಿವಿಧ ಲೇಖಕಿ ಲೇಖಕರ ಎಂಟು ಲೇಖನಗಳನ್ನು ಇದು ಒಳಗೊಂಡಿದೆ. ಅದರಲ್ಲಿ ಎಂ.ಉಷಾ ಅವರು ಬರೆದಿರುವ ಟಿವಿ ಮತ್ತು ಮಹಿಳೆ ಲೇಖನವು ಟಿವಿಯಲ್ಲಿ ಕೆಲಸ ಮಾಡುವ ಮತ್ತು ಈ ಮಾಧ್ಯಮವು ಮಹಿಳೆಯನ್ನು ನೋಡುವ ಬಗೆಯ ಬಗ್ಗೆ ಕೇಂದ್ರೀಕೃತವಾಗಿದೆ.

ಟಿವಿ ಮತ್ತು ಮಹಿಳೆ ಎಂಬ ಲೇಖನದಲ್ಲಿ ಲೇಖಕಿ ಉಷಾ ಅವರು ಎರಡು ಪ್ರಶ್ನೆಗಳನ್ನು ಎತ್ತುವ ಮೂಲಕ ಶುರು ಮಾಡುತ್ತಾರೆ. ಸಮೂಹ ಮಾಧ್ಯಮಗಳ ಸಂದರ್ಭದಲ್ಲಿ ಮಹಿಳಾ ಅಧ್ಯಯನ ಎರಡು ಪ್ರಶ್ನೆಗಳನ್ನು ಪ್ರಧಾನವಾಗಿ ಎತ್ತುತ್ತದೆ. ಒಂದು ಸಮೂಹ

ಮಾಧ್ಯಮವನ್ನೊಂದು ಉದ್ಯಮವಾಗಿ ಪರಿಗಣಿಸುತ್ತ ಅಲ್ಲಿ ಮಹಿಳೆಯರಿಗೆ ದೊರಕದಿರುವ ಅವಕಾಶಗಳನ್ನು ಕುರಿತಾದ ಪ್ರಶ್ನೆ. ಎರಡು, ಸಮೂಹ ಮಾಧ್ಯಮವನ್ನೊಂದು ಸಾಂಸ್ಕೃತಿಕ ಸಂಚಲನೆಯ ಘಟಕವಾಗಿ ಭಾವಿಸಿ ಅಲ್ಲಿ ಮಹಿಳೆಯರ ದುರ್ಬಳಕೆಯಾಗುತ್ತಿರುವುದರ ಕುರಿತಾದ ಪ್ರಶ್ನೆ.

ಈ ಎರಡು ಪ್ರಶ್ನೆಗಳನ್ನು ಎತ್ತುವುದರ ಜೊತೆಗೆ ಟಿವಿ ಮಾಧ್ಯಮವು 'ಮಹಿಳೆಯರನ್ನು ಒಂದು ಉಪಭೋಗಿ ವಸ್ತುವಾಗಿ ಬಳಸಿಕೊಳ್ಳುವ ಸಂದರ್ಭವನ್ನು ನಿರ್ಮಿಸಿ, ಅದನ್ನೇ ಅವಕಾಶಗಳೆಂದು ಕರೆದು ನಂಬಿಸುತ್ತಿವೆ. ಅಲ್ಲದೆ ವ್ಯವಸ್ಥೆಯು ನಿರ್ಮಿಸುತ್ತಿರುವ ಇಂತಹ ಅವಕಾಶಗಳನ್ನು ಅತ್ಯುತ್ಸಾಹದಿಂದ ತಬ್ಬಿಕೊಳ್ಳುತ್ತಿರುವ ಪ್ರಜ್ಞಾವಂತ ಹೆಣ್ಣು ಮಕ್ಕಳ ದೊಡ್ಡ ದಂಡು ಈ ಸಂಗತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಿದೆ. ಹೆಣ್ಣಿನ ಬಳಕೆಯನ್ನೇ ಆಕೆಗೆ ನೀಡುವ ಅವಕಾಶವೆಂದು ಪ್ರತಿಪಾದಿಸುವ ವ್ಯವಸ್ಥೆ, ಆ ಮೂಲಕವೇ ಸೀಮೋಲ್ಲಂಘನ ಮಾಡಲು ಹೊರಟಿರುವ ಆಧುನಿಕ ಮಹಿಳೆ ಈ ಇಬ್ಬರ ಪೈಪೋಟಿಯ ಬೆಳವಣಿಗೆಯಿಂದಾಗಿ ಸಮೂಹ ಮಾಧ್ಯಮ ಮತ್ತು ಮಹಿಳೆ ಎಂಬ ಸಂಗತಿ ಈ ಹೊತ್ತು ಅತ್ಯಂತ ಸಂಕೀರ್ಣ ಸ್ವರೂಪವನ್ನು ತಾಳುತ್ತಿದೆ' (ಪುಟ 111) ಎಂದು ವಿಶ್ಲೇಷಿಸುತ್ತಾರೆ.

ಈ ಲೇಖನದಲ್ಲಿ ಈಗಾಗಲೇ ಟೆಲಿವಿಷನ್ ಮತ್ತು ಮಹಿಳೆ ಕುರಿತಂತೆ ನಡೆದ ಹಲವಾರು ಅಧ್ಯಯನಗಳ ಬಗ್ಗೆ ಪ್ರಸ್ತಾಪಿಸುವ ಲೇಖಕಿ, ನಡೆದಿರುವ ಬಹುತೇಕ ಅಧ್ಯಯನಗಳು ಟೆಲಿವಿಷನ್ ಉದ್ಯಮದ ಯಶಸ್ಸಿಗಾಗಿ ಕೈಗೊಂಡವುಗಳಾಗಿದ್ದು ಅವು ಮಹಿಳೆಯ ಪ್ರಧಾನ ಆಸಕ್ತಿಯನ್ನು ಟೆಲಿವಿಷನ್‌ನತ್ತ ಕೇಂದ್ರೀಕರಿಸುವುದರ ಸಾಧ್ಯತೆಗಳ ಹುಡುಕಾಟದಲ್ಲಿ ನಿರತವಾದುದ್ದಾಗಿವೆ ಎಂದು ಹೇಳುತ್ತಾರೆ. ಈ ಲೇಖನ ಮುದ್ರಣವಾಗಿದ್ದು 2000 ಇಸವಿಯಲ್ಲಿ. ಒಂದೂವರೆ ದಶಕಗಳ ಹಿಂದೆ. ಆದರೂ, ಈಗಲೂ ಸಂಶೋಧನೆಗಳು ಇದೇ ಮಾದರಿಯನ್ನೇ ಅನುಸರಿಸಿಕೊಂಡು ಬರುತ್ತಿವೆ. ಕಾರಣ, ಕ್ಷೇತ್ರಕಾರ್ಯಕ್ಕೆ ಹೋದ ಸಂಶೋಧಕರಿಗೆ ಮಹಿಳೆಯರು ಸ್ಪಂದಿಸುವ ರೀತಿ ಇನ್ನೂ ಬದಲಾಗಿಲ್ಲ. ಕ್ಷೇತ್ರ ಕಾರ್ಯದಲ್ಲಿ ಭಾಗವಹಿಸುವ ಅನೇಕ ಮಹಿಳೆಯರು ಸ್ವತಂತ್ರವಾಗಿ, ತಾವೊಬ್ಬರೇ ತಕ್ಷಣದಲ್ಲಿ ಉತ್ತರಿಸಲು ಹಿಂದೇಟು ಹಾಕುತ್ತಾರೆ. ಈ ಮಾದರಿಯ ಹೊರತಾದ ಕ್ಷೇತ್ರಕಾರ್ಯ ಮಾಡಲು ಸಂಶೋಧಕರಿಗೆ ಹೊಸ ಆಹ್ವಾನ ನೀಡಲು ಈ ಕೃತಿ ಪ್ರೇರೇಪಿಸುತ್ತದೆ. ಹೊಸ ಸಾಧ್ಯತೆಯ ಹೊಳವನ್ನೂ ಇದು ಕೊಡುತ್ತದೆ. ಹಾಗಾಗಿ ಟಿವಿ ಮತ್ತು ಮಹಿಳೆಯ ಒಳಗೊಳ್ಳುವಿಕೆಯ ಅನೇಕ ಪೂರಕ ಅಂಶಗಳನ್ನು ಲೇಖಕಿ ದಾಖಲಿಸುತ್ತಾ ಹೋಗಿದ್ದಾರೆ.

2.4 ಅಂತಾರಾಷ್ಟ್ರೀಯ ಮಾಧ್ಯಮ ಕೇಂದ್ರಿತ ಅಧ್ಯಯನಗಳು :

ಟುಚಮನ್ ಗಯೆ ಅವರ "**ದ ಸಿಂಬಾಲಿಕ ಅನಿಹಿಲೇಷನ್ ಆಫ್ ವಿಮೆನ್ ಬೈ ದಿ ಮಾಸ್ ಮೀಡಿಯಾ**" ಎಂಬ ಕೃತಿಯನ್ನು 1987ರಲ್ಲಿ ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ಲಂಡನ್ ಹೊರತಂದಿದೆ.

ಈ ಕೃತಿಯಲ್ಲಿ ಲೇಖಕರು ಮಾಧ್ಯಮಗಳಲ್ಲಿನ ಸ್ತ್ರೀವಾದವನ್ನು ವಿಶ್ಲೇಷಿಸುತ್ತಾ ಹೋಗಿದ್ದಾರೆ. ಸ್ತ್ರೀವಾದವನ್ನು ದುರುದ್ದೇಶಪೂರ್ವಕವಾಗಿ ಮಾಧ್ಯಮಗಳಲ್ಲಿ ನಗಣ್ಯಗೊಳಿಸಲಾಗಿದೆ. ಇದು ಹಾಗೆಯೇ ಮುಂದುವರಿಸಿಕೊಂಡು ಬಂದಿರುವ ಪ್ರವೃತ್ತಿಯನ್ನು ಮೌಲ್ಯಮಾಪನ ನಡೆಸಿದ್ದಾರೆ. ಮಾಧ್ಯಮದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದೆ, ಅವರಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುತ್ತಿವೆ ಎಂಬ ಭ್ರಮಾ ಲೋಕವನ್ನು ಈ ಮಾಧ್ಯಮ ಸೃಷ್ಟಿದೆ ಎಂದು ಹೇಳುವ ಲೇಖಕರು, ಮಹಿಳೆಯರು ಮಾಧ್ಯಮಗಳಲ್ಲಿ ಜವಾಬ್ದಾರಿಯುತ ಸ್ಥಾನಮಾನಗಳನ್ನು ಹೊಂದಿಲ್ಲ ಎನ್ನುವುದನ್ನು ವಿವರಿಸಿದ್ದಾರೆ.

ಮಹಿಳೆಯರಿಗೆ ತುರ್ತು ಸಂದರ್ಭದ ಕಾರ್ಯಗಳು ಮತ್ತು ಕ್ರೈಂ, ಪೊಲಿಟಿಕಲ್ ವಿಭಾಗದಂತಹ ಕ್ಷೇತ್ರಗಳಲ್ಲಿ ನಿರ್ವಹಣೆ ಮಾಡಲು ಸಾಧ್ಯವಿಲ್ಲವೆಂಬ ಪೂರ್ವಾಗ್ರಹ ಈ ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರಿಗೆ ಹೆಚ್ಚಾಗಿದೆ ಎಂದು ಸಂಶೋಧಕರು ವರದಿ ಮಾಡಿದ್ದಾರೆ. ಎಲ್ಲ ಕ್ಷೇತ್ರಗಳಲ್ಲೂ ಮತ್ತು ವಿಭಾಗಗಳಲ್ಲೂ ಕೆಲಸ ಮಾಡಲು ಮಹಿಳೆಯರು ಮುಂದೆ ಬಂದರೂ, ಸಕಾರಣ ಕೊಡದೇ ಅವರನ್ನು ದೂರಲಾಗುತ್ತಿದೆ ಎನ್ನುವ ಸಂಶೋಧಕರು, ಮಾಧ್ಯಮಗಳಲ್ಲಿ ಸವಾಲುಗಳನ್ನು ಸ್ವೀಕರಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಸಲಹೆ ನೀಡಿದ್ದಾರೆ.

ಮಾಧ್ಯಮಗಳಲ್ಲಿ ಸ್ತ್ರೀವಾದ ನಗಣ್ಯವಾಗಿರುವುದು ಕೇವಲ ಪ್ರಾದೇಶಿಕ ಚಾನೆಲ್‌ಗಳಲ್ಲಿ ಮಾತ್ರವಲ್ಲ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾಧ್ಯಮಗಳಲ್ಲೂ ಇದೆ ಅನ್ನುವುದು ಈ ಸಂಶೋಧನೆಯ ಮೂಲಕ ಕಂಡುಕೊಳ್ಳಲು ಸಹಾಯವಾಗಿದೆ. ಅಲ್ಲದೇ, ಹಲವು ದಶಕಗಳಿಂದಲೂ ಇದು ನಡೆದುಕೊಂಡು ಬರುತ್ತಿರುವುದು ಸಂಶೋಧನೆಗೆ ಪೂರಕವಾದ ವಿಷಯಗಳನ್ನೂ ಒದಗಿಸುತ್ತದೆ.

ಬೈರ್ಲೆ ಕೆರೊಲಿನ್ ಅವರ ಜಾಗತಿಕ ವರದಿಯು "**ಗ್ಲೋಬಲ್ ರಿಪೋರ್ಟ್ ಆನ್ ದ ಸ್ಟೇಟಸ್ ಆಫ್ ವಿಮೆನ್ ಇನ್ ದ ನ್ಯೂಸ್ ಮೀಡಿಯಾ**' ಹೆಸರಿನಲ್ಲಿ 2011 ಇಸವಿಯಲ್ಲಿ

ಪ್ರಕಟವಾಗಿದೆ. ಇಂಟರ್ ನ್ಯಾಷನಲ್ ವಿಮೆನ್ಸ್ ಮೀಡಿಯಾ ಫೌಂಡೇಷನ್, ವಾಷಿಂಗ್ಟನ್ ಡಿಸಿ ಇದರ ಪ್ರಕಾಶಕರು.

ಈ ವರದಿಯು ಮಾಧ್ಯಮಗಳಲ್ಲಿ ಮಹಿಳೆಯರ ಸ್ಥಾನಮಾನ ಕುರಿತಾಗಿ ಜಾಗತಿಕ ಮಟ್ಟದಲ್ಲಿ ಸಿದ್ಧವಾಗಿದೆ. ಜಗತ್ತಿನ ಮಾಧ್ಯಮಗಳಲ್ಲಿ ಒಟ್ಟಾರೆ ಮಹಿಳೆಯರು ಯಾವ ಪ್ರಮಾಣದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ ಎಂಬ ವರದಿ ಮಂಡನೆ ಇಲ್ಲಿದೆ.

"ಜಗತ್ತಿನ ಮಾಧ್ಯಮಗಳಲ್ಲಿ ಮಹಿಳೆಯರ ಸ್ಥಾನ ಆಶಾದಾಯಕವಾಗಿಲ್ಲ. ಒಟ್ಟಾರೆ 239 ದೇಶಗಳಲ್ಲಿ ಶೇ.12ರಷ್ಟು ಉನ್ನತ ಸ್ಥಾನಮಾನಗಳನ್ನು ಮಹಿಳೆಯರು ಗಳಿಸಿದ್ದು, ಆಡಳಿತ ಮಂಡಳಿಯಲ್ಲಿ ಈ ಸಂಖ್ಯೆ ಕಡಿಮೆ ಇದೆ. ಶೇ.26ರಷ್ಟು ಸ್ಥಾನಮಾನ ಮಾತ್ರ ಮಹಿಳೆಯರು ಇಲ್ಲಿ ಪಡೆದಿದ್ದಾರೆ. ಅಲ್ಲದೇ, ನೀತಿ ನಿರೂಪಣೆ ಹುದ್ದೆಗಳಲ್ಲಿ ಶೇ.27ರಷ್ಟು ಸ್ಥಾನಮಾನಗಳನ್ನು ಮಹಿಳೆಯು ಹೊಂದಿರುವುದಾಗಿ ಸಂಶೋಧಕರು ವರದಿ ಮಾಡಿದ್ದಾರೆ. ಏಷ್ಯಾ, ಲ್ಯಾಟಿನ್ ಅಮೆರಿಕ ಮೊದಲಾದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿಯೂ ಮಹಿಳೆಯು ಮಾಧ್ಯಮ ನಿರ್ವಹಣೆ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿಲ್ಲವೆಂದು ಅಧ್ಯಯನದ ವರದಿ ತಿಳಿಸುತ್ತದೆ.

ಉನ್ನತ ಹುದ್ದೆಯಲ್ಲಿ ಮತ್ತು ನೀತಿ ನಿರೂಪಣೆ ಹಾಗೂ ಆಡಳಿತ ನಿರ್ವಹಣೆಯಂತಹ ಸ್ಥಾನಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕರ್ತವ್ಯ ನಿರ್ವಹಿಸುವ ಅವಕಾಶ ಸಿಕ್ಕಾಗ ಮಾತ್ರ ಈ ಕ್ಷೇತ್ರದಲ್ಲಿ ಮಹಿಳೆಯರ ಅಭಿವೃದ್ಧಿಯಾಗಲು ಸಾಧ್ಯ ಎನ್ನುವುದು ಸಂಶೋಧಕರ ಸಲಹೆ. ಇದು ಭಾರತ ಮಟ್ಟದಲ್ಲೂ ಆಶಾದಾಯಕವಾಗಿಲ್ಲ. ಉನ್ನತ ಸ್ಥಾನದಲ್ಲಿ ಮಹಿಳೆಯರಿಗೆ ಅವಕಾಶ ಕೊಡದೇ ಇರುವ ಕಾರಣಕ್ಕಾಗಿ, ಈವರೆಗೂ ಮಾಧ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಸಂಪಾದಕಿಯನ್ನು ಕಾಣಲು ಸಾಧ್ಯವಾಗಿಲ್ಲ ಎನ್ನಬಹುದು. ಈ ಕುರಿತಂತೆ ಸಂಶೋಧನೆಗೆ ಹಲವು ಹೊಳವುಗಳನ್ನು ಈ ವರದಿ ನೀಡುತ್ತದೆ.

ಅಖಿಲೇಶ್ವರಿ.ಆರ್ ವಿದುರಕ್ಕಾಗಿ ಬರೆದಿರುವ **"ವಿಮೆನ್ ಜರ್ನಲಿಸ್ಟ್; ಸ್ಟಿಲ್ ವೇಟಿಂಗ್ ಇನ್ ದ ವಿಂಗ್ಸ್"** ಲೇಖನವು ಆಗಸ್ಟ್ 21ರ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಈ ಲೇಖನದಲ್ಲಿ ಲೇಖಕಿ ಭಾರತೀಯ ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರೀಕರಣವನ್ನು ಪರೀಕ್ಷಿಸಿದ್ದಾರೆ. ಎಲ್ಲ ಕ್ಷೇತ್ರಗಳಂತೆಯೇ ಮಾಧ್ಯಮ ಕೂಡ ಪುರುಷ ಪ್ರಧಾನ ವ್ಯವಸ್ಥೆಯನ್ನೇ ಅನುಕರಿಸಿಕೊಂಡು ಬಂದಿದೆ. ಮಹಿಳೆಯನ್ನು ಅದು ಎರಡನೇ ದರ್ಜೆಯ ಪ್ರಜೆಯನ್ನಾಗಿಯೇ ನೋಡುತ್ತಿದೆ.

ಹಾಗಾಗಿ ಭಾರತೀಯ ಮಾಧ್ಯಮ ಸಂಸ್ಥೆಗಳಲ್ಲಿ ಪುರುಷರು ನೀತಿ ನಿರೂಪಕರು, ಆಡಳಿತಗಾರರು, ನಿರ್ವಾಹಕರು ಮತ್ತು ಗ್ರಾಹಕರಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಹೇಳುತ್ತಾರೆ ಸಂಶೋಧಕರು.

ಪುರುಷರೇ ಮಾಧ್ಯಮಗಳ ಆಯಾಕಟ್ಟಿನ ಜಾಗವನ್ನು ಆಕ್ರಮಿಸಿಕೊಂಡಿರುವುದರಿಂದ ಮತ್ತು ನಿರ್ಣಾಯಕ ಸ್ಥಾನಗಳಲ್ಲಿ ಕೂತಿರುವುದರಿಂದ ಮಹಿಳೆಯರನ್ನು ಇಲ್ಲಿ ಧನಾತ್ಮಕವಾಗಿ ಪ್ರತಿಬಿಂಬಿಸಿಲ್ಲವೆಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಅಲ್ಲದೇ, ಮಾಧ್ಯಮ ಸಂಸ್ಥೆಯ ಮಾಲೀಕರು ಕೂಡ ಪುರುಷರೇ ಇದ್ದಾರೆ. ಮಾರುಕಟ್ಟೆಯ ವ್ಯವಸ್ಥೆಯನ್ನೂ ಪುರುಷರೇ ರೂಪಿಸುತ್ತಾರೆ. ಮಾಧ್ಯಮ ಇಂದು ಉದ್ಯಮವಾಗಿ ಬದಲಾದ ಹಿನ್ನೆಲೆಯಲ್ಲಿ ಮಹಿಳೆಯ ಚಿತ್ರಣವೇ ಬದಲಾಗುತ್ತಿದೆ. ಮಹಿಳೆಗೆ ಸಿಗಬೇಕಾದ ಸೂಕ್ತ ಸ್ಥಾನ ಸಿಗಲು ಉನ್ನತ ಹುದ್ದೆಗಳಲ್ಲಿ ಮಹಿಳೆಯರನ್ನು ಕಾಣಬೇಕು ಎಂಬ ಸಲಹೆ ನೀಡುತ್ತಾರೆ ಸಂಶೋಧಕರು.

ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ, ಅವರಾರೂ ಪ್ರಮುಖವಾದ ಸ್ಥಾನಗಳಲ್ಲಿ ಇಲ್ಲ. ಹಾಗಾಗಿ ಪರಿಣಾಮಕಾರಿಯಾಗಿ ಮಾಧ್ಯಮಗಳಲ್ಲಿ ಮಹಿಳೆಯರನ್ನು ಚಿತ್ರಿಸಲು ಅವಕಾಶ ಸಿಗುತ್ತಿಲ್ಲ ಎನ್ನುವುದು ಸಂಶೋಧಕರ ಮಾತು. ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲು ಹೆಚ್ಚಿನ ಸಮಯವನ್ನು ಮಹಿಳೆಯರಿಗೆ ಮೀಸಲು ಇಡಬೇಕು ಅನ್ನುವುದು ಸಂಶೋಧಕರ ಸಲಹೆ.

ಗುರು ಮಹೇಶ್ ಚಂದ್ರ ಬಿ.ಪಿ ಅವರ ಲೇಖನ **"ವಿಮೆನ್ ಅಂಡ್ ಮಾಸ್ ಮೀಡಿಯಾ ; ದ ಇಂಡಿಯನ್ ಸಿನೆರಿಯೋ"** ಕಮ್ಯುನಿಕೇಟರ್ ಸಂಚಿಕೆಯಲ್ಲಿ 2010ರ ಜನವರಿ– ಮಾರ್ಚ್ 5ರಂದು ಪ್ರಕಟಗೊಂಡಿದೆ. ಈ ಲೇಖನದಲ್ಲಿ ಭಾರತೀಯ ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ, ಚಿತ್ರಣ ಮತ್ತು ಅಭಿವೃದ್ಧಿ ಅವಕಾಶಗಳ ಕುರಿತಾದ ಮೌಲ್ಯಮಾಪನವಿದೆ. ಭಾರತೀಯ ಸಮೂಹ ಮಾಧ್ಯಮಗಳ ವ್ಯಾಪ್ತಿ ಹೆಚ್ಚಾಗಿದೆ. ಪ್ರಾದೇಶಿಕ ಚಾನೆಲ್‌ಗಳ ಬೆಳವಣಿಗೆ ಕೂಡ ಕಾಣುತ್ತದೆ. ಆಧುನಿಕ ಜಗತ್ತಿನ ಕೊಡುಗೆ ಆಗಿರುವ ಎಲೆಕ್ಟ್ರಾನಿಕ್ ಮಾಧ್ಯಮಗಳು ತನ್ನ ಚಹರೆಯನ್ನು ಹಿಗ್ಗಿಸಿಕೊಳ್ಳುತ್ತಲೇ ಇವೆ. ಆದರೂ, ಇಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಆಶಾದಾಯಕವಾಗಿಲ್ಲ ಅಂದಿದ್ದಾರೆ ಸಂಶೋಧಕರು.

ಈ ಮಾಧ್ಯಮ ಸಂಸ್ಥೆಗಳನ್ನು ಗುರು ಮಹೇಶ್ ಚಂದ್ರ ಬಿ.ಪಿ ಅನೌಪಚಾರಿಕ ವಿಶ್ವವಿದ್ಯಾನಿಲಯಗಳೆಂದೇ ಗುರುತಿಸುತ್ತಾರೆ. ಹಾಗಾಗಿ ಮಾಧ್ಯಮಗಳು ಮಹಿಳೆಯರಿಗೆ

ಅರ್ಥಪೂರ್ಣ ಶಿಕ್ಷಣ, ಮಾರ್ಗದರ್ಶನ ಮತ್ತು ಸಲಹಾ ಸೇವೆಗಳನ್ನು ಕೊಡುವುದರ ಮೂಲಕ ಅವರ ಸಬಲೀಕರಣಕ್ಕೆ ನಿರ್ಣಾಯಕ ಕೊಡುಗೆಗಳನ್ನು ನೀಡಬೇಕಿತ್ತು. ಅದು ಉದ್ಯಮವಾಗಿ ಬದಲಾಗಿದ್ದರಿಂದ ಮತ್ತು ಲಾಭಕೋರತನವೇ ಪ್ರಧಾನವಾಗಿ ಕಾಣುತ್ತಿರುವುದರಿಂದ ಮೇಲೆ ತಿಳಿಸಿದ ಯಾವ ಕೊಡುಗೆಗಳನ್ನೂ ಮಾಧ್ಯಮಗಳು ಮಹಿಳೆಗೆ ನೀಡಿಲ್ಲವೆಂದು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ.

ಮಹಿಳೆಯರನ್ನು ಬಿಟ್ಟು ಮಾಧ್ಯಮಗಳಿಲ್ಲ. ಮಹಿಳೆಯನ್ನು ಹೊರಗಿಟ್ಟು ಮಾಧ್ಯಮಗಳನ್ನು ನಡೆಸುವುದಕ್ಕೂ ಆಗುವುದಿಲ್ಲ. ಆದರೂ, ಮಾಧ್ಯಮ ಕ್ಷೇತ್ರಗಳಲ್ಲಿ ಮಹಿಳೆಯ ಭಾಗವಹಿಸುವಿಕೆ ಕಷ್ಟವಾಗುತ್ತಿದೆ. ನಾನಾ ಕಾರಣಗಳನ್ನು ನೀಡುವ ಮೂಲಕ ಮಹಿಳಾ ಶಕ್ತಿಯನ್ನು ಅಲ್ಲಗಳೆಯುವಂತಹ ತಂತ್ರಗಳನ್ನು ಹೆಣೆಯಲಾಗುತ್ತಿದೆ. ಮಹಿಳಾ ಶ್ರೇಯಸ್ಸಿಗಾಗಿ ಮಾಧ್ಯಮಗಳು ನಿರ್ಣಾಯಕ ಕೊಡುಗೆ ನೀಡಬೇಕಿತ್ತು. ಪುರುಷರೇ ತುಂಬಿಕೊಂಡಿರುವ ಕ್ಷೇತ್ರ ಇದಾಗಿದ್ದರಿಂದ ಅದು ಸಾಧ್ಯವಾಗುತ್ತಿಲ್ಲ. ಹಾಗಾಗಿ ಮಹಿಳಾ ಶ್ರೇಯಸ್ಸಿಗೆ ಮಾಧ್ಯಮಗಳು ಸ್ಥಾನ ನೀಡಬೇಕೆಂದು ಸಂಶೋಧಕರು ಸಲಹೆ ನೀಡಿದ್ದಾರೆ.

2.5. ಈವರೆಗಿನ ಸಂಶೋಧನಾ ಕೃತಿಗಳು ಮತ್ತು ಆಕರಗಳು

ಎಂ.ಕಲ್ಪನಾ ಅವರು ಡಾ.ಎಂ.ಎಸ್.ಸ್ವಪ್ನ ಅವರ ಮಾರ್ಗದರ್ಶನದಲ್ಲಿ "**ಕನ್ನಡ ಸುದ್ದಿ ವಾಹಿನಿಗಳಲ್ಲಿ ಮಹಿಳಾ ಉದ್ಯೋಗಿಗಳ ಸ್ಥಾನಮಾನ, ಸಮಸ್ಯೆಗಳು ಮತ್ತು ಅವಕಾಶಗಳು ; ಒಂದು ಅಧ್ಯಯನ**" ಎಂಬ ಶೀರ್ಷಿಕೆಯಲ್ಲಿ ಪಿಎಚ್‌ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಹಾಪ್ರಬಂಧವನ್ನು 2017ರಲ್ಲಿ ಸಲ್ಲಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಸಂಶೋಧಕರು ತಮ್ಮ ಅಧ್ಯಯನದ ಉದ್ದೇಶಗಳಲ್ಲಿ ಕನ್ನಡ ಟಿವಿ ಸುದ್ದಿ ವಾಹಿನಿಗಳ ಮಹಿಳಾ ಉದ್ಯೋಗಿಗಳ ಪ್ರಸ್ತುತ ವೃತ್ತಿ ತೃಪ್ತಿಯಲ್ಲಿ ಸಾಂಸ್ಥಿಕ ಪರಿಸರವನ್ನು ಅಧ್ಯಯನ ಮಾಡುತ್ತಿರುವುದಾಗಿ ಹೇಳಿದ್ದಾರೆ. ಅದರ ಜೊತೆಗೆ ಮಹಿಳಾ ಉದ್ಯೋಗಿಗಳ ವೃತ್ತಿಪರ ಪ್ರಗತಿಗೆ ಸಂಬಂಧಿಸಿದಂತೆ ಸಾಂಸ್ಥಿಕ ಅಂಶಗಳನ್ನು ಪರೀಕ್ಷಿಸುವುದಾಗಿ ಹೇಳಿದ್ದಾರೆ. ಅಲ್ಲದೇ, ಕನ್ನಡ ಟಿವಿ ಸುದ್ದಿ ವಾಹಿನಿಗಳ ಮಹಿಳಾ ಉದ್ಯೋಗಿಗಳ ವೃತ್ತಿಪರ ಭವಿಷ್ಯವನ್ನು ಸುಧಾರಿಸಲು ಅವಶ್ಯಕವಾದ ಕ್ರಮಗಳನ್ನು ಸೂಚಿಸುವುದು ಅಧ್ಯಯನದ ಹಿಂದಿರುವ ಉದ್ದೇಶವೆಂದು ಬರೆಯುತ್ತಾರೆ. ಹಾಗಾಗಿ ಈ ದೃಷ್ಟಿಕೋನದಲ್ಲಿಯೇ ಸಂಶೋಧನೆ ನಡೆಸಿದ್ದಾರೆ ಕಲ್ಪನಾ.

ಮಹಾಪ್ರಬಂಧದಲ್ಲಿ ಸಂಶೋಧಕರು ಕನ್ನಡ ಟಿವಿ ಸುದ್ದಿ ವಾಹಿನಿಗಳು, ಸಂಸ್ಥೆಯ ವ್ಯವಸ್ಥಿತ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ತಜ್ಞರೊಡನೆ ಸಮಾಲೋಚಿಸಿ, ಸೂಕ್ತ

ಕಾರ್ಯಸೂಚಿ ಮತ್ತು ಮಾನದಂಡಗಳನ್ನು ರೂಪಿಸಲು ಶಿಫಾರಸ್ಸನ್ನು ಮಾಡಿದ್ದಾರೆ. ಹಾಗೂ ಕನ್ನಡ ಟಿವಿ ಸುದ್ದಿವಾಹಿನಿಗಳು ಇಂದು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರ ಮಾಲೀಕತ್ವ, ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟಿರುವುದರಿಂದ ಟಿವಿ ಸುದ್ದಿ ವಾಹಿನಿಗಳ ನಿರ್ವಹಣೆಯಲ್ಲಿ ತಜ್ಞರಾದ ವ್ಯಕ್ತಿಗಳ ವಿವೇಚನಾತ್ಮಕ ನಾಯಕತ್ವದ ಅವಶ್ಯಕತೆ ಇದೆ ಎಂದು ಶಿಫಾರಸ್ಸು ಮಾಡುತ್ತಾರೆ.

ಅಲ್ಲದೇ, ಕನ್ನಡ ಟಿವಿ ಸುದ್ದಿ ವಾಹಿನಿಗಳು ಮಹಿಳಾ ಉದ್ಯೋಗಿಗಳಿಗೆ ಉತ್ತಮ ಉದ್ಯೋಗ ಭದ್ರತೆ, ವೃತ್ತಿ ತೃಪ್ತಿ ಮತ್ತು ವೃತ್ತಿ ಪ್ರಗತಿ ಅವಕಾಶಗಳನ್ನು ಒದಗಿಸಿದಾಗ ಮಹಿಳಾ ಉದ್ಯೋಗಿಗಳು ಹೆಚ್ಚಿನ ಪ್ರೀತಿ ಮತ್ತು ಜವಾಬ್ದಾರಿಗಳಿಂದ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಸಂಶೋಧಕಿ ಮಂಡಿಸಿದ್ದಾರೆ.

ಟಿವಿ ಮಾಧ್ಯಮದಲ್ಲಿ ದುಡಿವ ಮಹಿಳೆಯರ ಸ್ಥಿತಿಗತಿಯ ಕುರಿತಾದ ಸಂಶೋಧನೆಗಳು ತೀರಾ ಕಡಿಮೆ. ಆದರೆ ಬಹುತೇಕ ಮಾಧ್ಯಮ ಹಾಗೂ ದುಡಿಯುವ ಮಹಿಳೆಯರ ಕುರಿತಾದ ಚರಿತ್ರೆಯನ್ನು ಅವರಿಲ್ಲಿ ಕಟ್ಟಿಕೊಡುವ ಪ್ರಯತ್ನ ಇದಾಗಿರುವುದರಿಂದ ಸಂಶೋಧನೆಗೆ ಪೂರಕವಾಗಿ ಹಲವು ಸಂಗತಿಗಳನ್ನು ಗಮನಿಸಬಹುದು.

ಸಂಶೋಧನಾ ವಿದ್ಯಾರ್ಥಿ ಮಂಜುನಾಥ್ ಬಿ. ಅವರು ಎಂ.ಗಂಗಾಧರಪ್ಪ ಅವರ ಮಾರ್ಗದರ್ಶನದಲ್ಲಿ **"ಸ್ಟೇಟಸ್ ಆಫ್ ವರ್ಕಿಂಗ್ ವುಮೆನ್ ಜರ್ನಲಿಸ್ಟ್ ಇನ್ ಕರ್ನಾಟಕ – ಎ ಸ್ಟಡಿ"** ಎಂಬ ಸಂಶೋಧನಾ ಮಹಾಪ್ರಬಂಧವನ್ನು 2007ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಪಿಎಚ್‌ಡಿ ಪದವಿಗಾಗಿ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಕರ್ನಾಟಕದಲ್ಲಿ ನಿಯತಕಾಲಿಕವಾಗಿ ದುಡಿಯುವ ಮಹಿಳೆಯ ಕುರಿತಾದ ಹಲವು ಚಿತ್ರಗಳನ್ನು ಸಂಶೋಧಕರು ಈ ಸಂಶೋಧನಾ ಗ್ರಂಥದಲ್ಲಿ ಹಿಡಿದಿಟ್ಟಿದ್ದಾರೆ. ಮಹಿಳೆ ಮತ್ತು ದುಡಿಮೆಯಿಂದ ಶುರುವಾಗುವ ಸಂಶೋಧನೆ, ಇಂದು ಮಾಧ್ಯಮದಲ್ಲಿ ಮಹಿಳೆಯರ ಸ್ಥಿತಿಗತಿ ಹೇಗಿದೆ ಅನ್ನುವುದನ್ನು ವಿವರಿಸುತ್ತಾ ಹೋಗುತ್ತದೆ. ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮದಲ್ಲಿಯ ಮಹಿಳೆಯ ಸ್ಥಾನ, ಉದ್ಯೋಗ ಭದ್ರತೆ, ಆರೋಗ್ಯ ಹೀಗೆ ಹಲವು ವಿಷಯಗಳನ್ನು ಸಂಶೋಧನಾ ವ್ಯಾಪ್ತಿಗೆ ತರುತ್ತಾರೆ.

ಮಹಿಳಾ ಪತ್ರಕರ್ತೆಯರ ಸ್ಥಿತಿಗತಿಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಹಲವು ಪ್ರಶ್ನೆಗಳನ್ನು ಮಾಧ್ಯಮ ಸಂಸ್ಥೆಗಳಿಗೆ ಹಾಕಿದ್ದಾರೆ. ಮಹಿಳಾ ಉದ್ಯೋಗಿಗಳ ಸಂಖ್ಯೆ

ಮಾಧ್ಯಮದಲ್ಲಿ ಹೆಚ್ಚಾಗಬೇಕಾದರೆ, ಏನೆಲ್ಲ ಚರ್ಚೆಗಳು ನಡೆಯಬೇಕು ಅನ್ನುವುದರ ಬಗ್ಗೆಯೂ ಸಂಶೋಧಕರು ಬೆಳಕು ಚೆಲ್ಲುತ್ತಾರೆ.

ನಾಗರಾಜ ಜಮಖಂಡಿ ಅವರು ಎಂ.ಗಂಗಾಧರಪ್ಪ ಅವರ ಮಾರ್ಗದರ್ಶನದಲ್ಲಿ "**ಕನ್ನಡ ದೂರದರ್ಶನ ವಾಹಿನಿಗಳು : ಒಂದು ಅಧ್ಯಯನ**" ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್‌ಡಿ ಪದವಿಗಾಗಿ 2006ರಲ್ಲಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಕನ್ನಡ ದೂರದರ್ಶನ ವಾಹಿನಿಗಳ ಚರಿತ್ರೆಯನ್ನು ಮತ್ತು ಅವುಗಳು ಸಮಾಜದ ಮೇಲೆ ಬೀರಿರುವ ಪ್ರಭಾವವನ್ನು ವಿವರಿಸಿದ್ದಾರೆ.

ಕನ್ನಡ ದೂರದರ್ಶನ ವಾಹಿನಿಗಳು ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಿವೆ. ಅವುಗಳಿಂದ ಮಹಿಳೆಯರಿಗೆ ಏನೆಲ್ಲ ಪ್ರಯೋಜನ ಆಗುತ್ತಿದೆ. ಮತ್ತು ಮಹಿಳೆಯು ಟಿವಿ ಮಾಧ್ಯಮದಲ್ಲಿ ಹೇಗೆ ತೊಡಗಿಕೊಂಡಿದ್ದಾಳೆ ಎಂಬ ಹಲವು ಅಂಶಗಳನ್ನು ಸಂಶೋಧನಾ ಪ್ರಬಂಧದಲ್ಲಿ ತಂದಿದ್ದಾರೆ. ಇದರ ಜೊತೆ ಜೊತೆಗೆ ಮಹಿಳಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಕೆಲ ಸಲಹೆಗಳನ್ನೂ ಕೊಟ್ಟಿದ್ದಾರೆ.

ಈ ಪ್ರಬಂಧದಲ್ಲಿ ದೂರದರ್ಶನ ಬೆಳೆದು ಬಂದ ರೀತಿ ಮತ್ತು ಅದು ಸಮಾಜವನ್ನು ಆವರಿಸಿಕೊಂಡ ಪರಿಯ ಬಗ್ಗೆ ಹಲವು ಸಂಗತಿಗಳಿವೆ. ಇವುಗಳ ಜೊತೆಗೆ ಮಾಧ್ಯಮವೂ ಉದ್ಯಮವಾದ ಬದಲಾವಣೆಯ ಕುರಿತು ಸಂಶೋಧಕರು ಬೆಳಕು ಚೆಲ್ಲುತ್ತಾರೆ. ಉದ್ಯಮವಾದ ನಂತರ ಕಾರ್ಯಕ್ರಮದ ರೂಪುರೇಷೆಯಲ್ಲಾದ ಬದಲಾವಣೆಯನ್ನೂ ವಿವರಿಸುತ್ತಾರೆ.

ಡಾ.ಸುನಂದಾ ರಾ ಕುಲಕರ್ಣಿ ಬರೆದಿರುವ "**ಉದ್ಯೋಗಸ್ಥ ಮಹಿಳೆಯರು ಮತ್ತು ಆರೋಗ್ಯ**" ಪುಸ್ತಕವನ್ನು ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರವು 2012ರಲ್ಲಿ ಪ್ರಕಟಿಸಿದೆ. ಉದ್ಯೋಗಸ್ಥ ಮಹಿಳೆಯರ ಆರೋಗ್ಯದ ಬಗ್ಗೆ ಅನೇಕ ವಿವರಗಳು ಈ ಪುಸ್ತಕದಲ್ಲಿದ್ದು, ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಇಲ್ಲಿ ವಿವರಿಸುವ ಕೆಲಸವನ್ನು ಲೇಖಕಿ ಮಾಡಿದ್ದಾರೆ.

ಈ ಪುಸ್ತಕದ ಸಂಪಾದಕೀಯ ಮಾತುಗಳಲ್ಲಿ ಡಾ.ಸಿ.ಆರ್.ಚಂದ್ರಶೇಖರ್ ಆರೋಗ್ಯದ ಜೊತೆಜೊತೆಗೆ ಅವಳಿಗೆ ಉದ್ಯೋಗ ಸ್ಥಳದಲ್ಲಿ ಆಗುವ ಕಿರುಕುಳದ ಬಗ್ಗೆಯೂ ಪ್ರಸ್ತಾಪ ಮಾಡುತ್ತಾರೆ. "ಮಹಿಳೆಯು ತನ್ನ ಕೆಲಸದ ಸ್ಥಳದಲ್ಲಾಗುವ ಅನ್ಯಾಯವನ್ನು ಪ್ರತಿಭಟಿಸಿದರೆ, ಹಕ್ಕಿಗಾಗಿ ಗದ್ದಲ ಮಾಡಿದರೆ, ತಪ್ಪು ಮಾಡಿದವರನ್ನು ಹಿಡಿದು ಶಿಕ್ಷಿಸಿದರೆ, ಸೋಂಬೇರಿ,

ಲೇಟ್‌ಲತೀಫರಿಗೆ ಮೆಮೊ ಕೊಟ್ಟರೆ, ಲಂಚಪಡೆದವರನ್ನು ಗದರಿದರೆ, ಗಂಡುಬೀರಿ, ಲೇಡಿ ಹಿಟ್ಲರ್, ಬಜಾರಿ ಎನ್ನುವ ಬಿರುದು ಸಿಗುತ್ತದೆ. ಅದೇ ಗಂಡಿಗೆ ಇದೆಲ್ಲ ಆಗುವುದಿಲ್ಲ. ಈ ಎಲ್ಲ ಕಿರುಕುಳಗಳ ನಡುವೆಯೂ ಮಹಿಳೆ ಮುನ್ನಡೆಯುತ್ತಾ, ಹಲವು ರಂಗಗಳಲ್ಲಿ ಪುರುಷನಿಗೆ ಸರಿಸಮಾನವಾಗಿ ಅಥವಾ ಆತನನ್ನು ಮೀರಿಸಿ ಕೆಲಸ ಮಾಡುತ್ತಿದ್ದಾಳೆ" ಎಂದು ಬರೆಯುತ್ತಾರೆ.

ಈ ಕೃತಿಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಒಟ್ಟು ಹದಿನಾರು ಲೇಖನಗಳು ಇವೆ. ಉದ್ಯೋಗಸ್ಥ ಮಹಿಳೆಯರ ತೊಂದರೆ ಮತ್ತು ಆರೋಗ್ಯ. ಭೌತಿಕ ತೊಂದರೆ ಮತ್ತು ರಾಸಾಯನಿಕ ತೊಂದರೆಗಳು, ದೈಹಿಕ ಶ್ರಮದ ಕೆಲಸಗಳಿಂದ ಆಗುವ ತೊಂದರೆ, ಉದ್ಯೋಗಸ್ಥ ಸಂಸ್ಥೆಗಳು ಪಾಲಿಸಬೇಕಾದ ನಿಯಮಗಳು ಹೀಗೆ ಅನೇಕ ವಿಷಯಗಳನ್ನು ಡಾ. ಸುನಂದಾ ಕೃತಿಯಲ್ಲಿ ವಿವರಿಸುತ್ತಾ ಹೋಗುತ್ತಾರೆ.

ಇವುಗಳ ಜೊತೆ ಆರೋಗ್ಯಕ್ಕೆ ಸಂಬಂಧಪಟ್ಟ ಹಕ್ಕುಗಳ ಬಗ್ಗೆಯೂ ಲೇಖಕಿಯರು ಬರೆದಿದ್ದಾರೆ. "ಸ್ತ್ರೀಯರಿಗೆ ಅವರ ಆರೋಗ್ಯದ ಹಕ್ಕು ಇದೆ. ಆಫ್ರಿಕಾದಲ್ಲಿ ಅವರ ಜನನಾಂಗಗಳನ್ನು ಕೊಯ್ಯುತ್ತಾರೆ, ಅಫಘಾನಿಸ್ತಾನದಲ್ಲಿ ಹೆಣ್ಣುಮಕ್ಕಳಿಗೆ ಅನಾರೋಗ್ಯವಾದರೆ ಗಂಡನ ಜೊತೆಯಿಲ್ಲದೆ ಒಬ್ಬರೇ ವೈದ್ಯರನ್ನು ಕಾಣುವ ಹಕ್ಕು ಇಲ್ಲ. ಹೆಂಗಸರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಏನೇ ಹಕ್ಕುಗಳಿದ್ದರೂ ಅವರ ಮಾನಸಿಕ ದೈಹಿಕ ಆರೋಗ್ಯ ಸರಿಯಿರದಿದ್ದರೂ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಅಧಿಕಾರ ಗಂಡಸರ ಕೈಯಲ್ಲಿರುವುದರಿಂದ ಹೆಂಗಸರ ಆರೋಗ್ಯದ ಮೇಲೆ ಅಷ್ಟೊಂದು ಖರ್ಚು ಮಾಡಲು ಕೆಲವರು ತಯಾರು ಇರುವುದಿಲ್ಲ" (ಪುಟ 94) ಎಂದು ವಿಶ್ಲೇಷಿಸುತ್ತಾರೆ.

ಒಂದಷ್ಟು ಆರೋಗ್ಯ ಸಮಸ್ಯೆಗಳು ವೃತ್ತಿ ಕಾರಣದಿಂದಾಗಿಯೇ ಬರುತ್ತವೆ ಎಂದು ತಿಳಿಸುವ ಮೂಲಕ ಕೆಲವು ಸಮಸ್ಯೆಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ. ಈ ಅಂಶಗಳು ಸಂಶೋಧನೆಗೆ ಸಹಾಯಕವಾಗಲಿವೆ.

ಡಾ.ಚಂದ್ರಮತಿ ಸೋಂದಾರವರ "**ಚಿಪ್ಪೊಡೆದ ಮೌನ**' ಕೃತಿಯು ಮೈಸೂರಿನ ಅಭಿರುಚಿ ಪ್ರಕಾಶನದಿಂದ 2004ರಲ್ಲಿ ಪ್ರಕಟಗೊಂಡಿದ್ದು, ಮಹಿಳಾ ಉದ್ಯೋಗ, ಮಹಿಳಾ ಚಳವಳಿ ಸೇರಿದಂತೆ ಹನ್ನೊಂದು ಲೇಖನಗಳನ್ನು ಒಳಗೊಂಡಿರುವ ಕೃತಿ ಇದಾಗಿದೆ. ಈ ಹನ್ನೊಂದರಲ್ಲಿ "ಉದ್ಯೋಗಂ...?" (ಪುಟ–92) ಕುರಿತಾದ ಲೇಖನವೂ ಇದೆ.

ಮಹಿಳಾ ಉದ್ಯೋಗಕ್ಕೆ ಸಂಬಂಧಿಸಿದಂತೆ ಲೇಖಕರು ಮಹಿಳೆಯ ದುಡಿಮೆ, ಗಳಿಕೆ, ವಿರಾಮ, ಉದ್ಯೋಗದ ನಿವೃತ್ತಿ ಹಾಗೂ ಉದ್ಯೋಗದಲ್ಲಿರುವ ಮಹಿಳೆಯರ ಸ್ಥಿತಿಗತಿಯನ್ನು ಉಲ್ಲೇಖಿಸಿದ್ದಾರೆ. ಪುರುಷ ಪ್ರಧಾನ ಈ ವ್ಯವಸ್ಥೆಯಲ್ಲಿ ಮಹಿಳೆಯರ ದುಡಿಮೆ ಬಗ್ಗೆ ಈಗಾಗಲೇ ಬಂದ ಕತೆ ಮತ್ತು ಲೇಖನಗಳ ಸಾರವನ್ನೂ ಅವರು ಉಲ್ಲೇಖಿಸಿದ್ದಾರೆ. "ಹೆಂಗಸು ಮನೆಯಲ್ಲಿ, ಹೊಲಗದ್ದೆಗಳಲ್ಲಿ ಎಷ್ಟೇ ದುಡಿಯಲಿ. ಆ ದುಡಿಮೆಯನ್ನು ಕುಟುಂಬದ ಪುರುಷ ಸದಸ್ಯರು ಪರಿಗಣಿಸುವುದು ತೀರಾ ಅಪರೂಪ. ಮನೆಯ ಯಾವ ಬಗೆಯ ಆದಾಯವಿರಲಿ. ಅದರ ವಿನಿಯೋಗದ ಹಕ್ಕಿರುವುದು ಪುರುಷನಿಗೆ ಮಾತ್ರ" ಎಂದು ಹೇಳುವ ಮೂಲಕ ಪಿತೃಪ್ರಧಾನ ವ್ಯವಸ್ಥೆಯ ರಚನೆಯನ್ನು ಪ್ರಚುರಪಡಿಸುತ್ತಾರೆ.

ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರಲ್ಲಿ ಬಹುಪಾಲು ಮಹಿಳೆಯರ ಬದುಕು ಇಬ್ಬಗೆಯ ಕೆಲಸಕ್ಕೆ ಸಿಲುಕಿ ನಲುಗಿ ಹೋಗಿದೆ. ಅವಳು ಆಚೆಯೂ ದುಡಿದುಕೊಂಡು ಬರಬೇಕು. ಮನೆಯಲ್ಲೂ ಕೆಲಸ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿರುವ ಮಹಿಳೆಯರು ಈ ಕುರಿತು ಪ್ರಶ್ನೆ ಮಾಡುತ್ತಿದ್ದಾರೆ. ಆದರೂ, ಮನೆಗೆಲಸ ಮಾಡುವುದು ತಪ್ಪಿಲ್ಲ ಎಂದು ದುಡಿಯುವ ಮಹಿಳೆಯರ ಇಬ್ಬಗೆಯ ಕೆಲಸದ ಬಗ್ಗೆ ಈ ಲೇಖನದಲ್ಲಿ ಬೆಳಕು ಚೆಲ್ಲುತ್ತಾರೆ ಡಾ. ಚಂದ್ರಮತಿ ಸೋಂದಾ.

ಮಹಿಳೆ ಮತ್ತು ದುಡಿಮೆ, ಈ ಕುರಿತಾದ ತಾರತಮ್ಯ ಮತ್ತು ದುಡಿದ ಮಹಿಳೆಯೇ ಅದರ ಫಲವನ್ನು ಪಡೆಯುತ್ತಿದ್ದಾಳಾ ಎಂಬಿತ್ಯಾದಿ ಪ್ರಶ್ನೆಗಳನ್ನು ಈ ಲೇಖನದಲ್ಲಿ ಲೇಖಕಿ ಎತ್ತಿದ್ದಾರೆ. ಈಗಾಗಲೇ ಪ್ರಕಟಗೊಂಡ ಹಲವು ಕತೆಗಳಲ್ಲಿನ ದುಡಿಮೆಯ ಸಾರವನ್ನೂ ಲೇಖನದುದ್ದಕ್ಕೂ ಡಾ.ಚಂದ್ರಮತಿ ಬಳಸುತ್ತಾ ಹೋಗಿದ್ದಾರೆ. ಹಾಗಾಗಿ ಉದ್ಯೋಗಸ್ಥ ಮಹಿಳೆಯರ ಹಲವು ಸಮಸ್ಯೆಗಳು ಮತ್ತು ಅವರ ಸ್ಥಿತಿಗತಿಗಳನ್ನು ತಿಳಿಯುವಲ್ಲಿ ಈ ಪುಸ್ತಕ ನೆರವಾಗಬಲ್ಲದು.

ಡಾ.ಆಂಜನಪ್ಪ ಬಿ.ಹೆಚ್ ಅವರ **"ಮಹಿಳೆ ಮತ್ತು ದುಡಿಮೆ'** ಕೃತಿಯನ್ನು ಬೆಂಗಳೂರಿನ ಸೃಷ್ಟಿ ಪಬ್ಲಿಕೇಷನ್ 2006ರಲ್ಲಿ ಹೊರತಂದಿದೆ. ಇದು ಕುವೆಂಪು ವಿಶ್ವವಿದ್ಯಾನಿಯಲಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ ಕೃತಿರೂಪ ಎನ್ನುವುದು ವಿಶೇಷ.

ಮಹಿಳೆ ಮತ್ತು ದುಡಿಮೆಯ ಆಯಾಮಗಳನ್ನು ಈ ಕೃತಿಯಲ್ಲಿ ಹೇಳಿದ್ದಾರೆ ಸಂಶೋಧಕರು. ಆಧುನಿಕ ಕೈಗಾರಿಕಾ ವ್ಯವಸ್ಥೆಯಲ್ಲಿ ಮಹಿಳೆಯರನ್ನು ನಿಯೋಜಿಸಿಕೊಳ್ಳುವುದು

ಅನೇಕ ಸಮಸ್ಯೆಗಳನ್ನು ಉಂಟು ಮಾಡಿದೆ ಎನ್ನುವ ಸಂಶೋಧಕರು, ಅವುಗಳನ್ನು ಪಟ್ಟಿ ಕೂಡ ಮಾಡುತ್ತಾರೆ. ಯೋಜನಕಾರರು ಅಥವಾ ನಿಯೋಜಕರು ಸ್ತ್ರೀಯರನ್ನು ಎರಡನೇ ದರ್ಜೆ ಕಾರ್ಮಿಕರೆಂದು ಪರಿಗಣಿಸುತ್ತಾರೆ. ಮಹಿಳಾ ಉದ್ಯೋಗಿಗಳಿಗೆ ಬಹು ಸೀಮಿತ ಕಾನೂನಿನ ರಕ್ಷಣೆ ಇದೆ ಎಂದು ಪ್ರತಿಪಾದಿಸುತ್ತಾರೆ. ಅಭಿವೃದ್ಧಿ ಹೊಂದದ ಹಾಗೂ ಅಭಿವೃದ್ಧಿಶೀಲ ಸಮಾಜಗಳೆರಡಲ್ಲೂ ಮಹಿಳೆಯು ಪುರುಷರಿಗಿಂತ ಕಡಿಮೆ ಸಂಬಳ ಪಡೆಯುತ್ತಿದ್ದಾಳೆ. ಈ ತಾರತಮ್ಯ ನಿರಂತರವಾಗಿ ನಡೆಯುತ್ತಲೇ ಬಂದಿದೆ ಎಂದು ತಮ್ಮ ಸಂಶೋಧನೆಯಲ್ಲಿ ತಿಳಿಸುತ್ತಾರೆ.

ಮಹಿಳೆ ಮತ್ತು ದುಡಿಮೆ ಸಂಶೋಧನಾ ಗ್ರಂಥವು ಹತ್ತಿ ಹಿಂಜುವ ಮಹಿಳಾ ಕಾರ್ಮಿಕರ ಸಮಸ್ಯೆಗಳ ಸ್ವರೂಪ ಹಾಗೂ ಅದಕ್ಕಿರುವ ಕಾರಣಗಳನ್ನು ಗುರುತಿಸುವುದೇ ಆಗಿದ್ದರೂ, ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರ ಪರಿಸ್ಥಿತಿಯನ್ನು ಪ್ರತಿನಿಧಿಸುವಂತಿದೆ. ಕ್ಷೇತ್ರ ಯಾವುದೇ ಆಗಿದ್ದರೂ, ಕೆಲಸದ ಸ್ವರೂಪ ಭಿನ್ನವಾಗಿದ್ದರೂ ಸಮಸ್ಯೆಗಳು ಮಾತ್ರ ಒಂದೇ ರೀತಿಯದ್ದು ಅನ್ನುವ ಆತಂಕಕಾರಿ ವಿಷಯಗಳನ್ನು ಸಂಶೋಧಕರು ಕೃತಿಯಲ್ಲಿ ದಾಖಲಿಸಿದ್ದಾರೆ.

ದುಡಿಮೆಯ ವಿಚಾರದಲ್ಲಿ ಮಹಿಳೆ ಯಾವತ್ತೂ ಹಿಂದೆ ಬಿದ್ದಿಲ್ಲ. ಸಿಕ್ಕಿರುವ ಅವಕಾಶವನ್ನು ಸದುಪಯೋಗ ಪಡಿಸಿಕೊಂಡಿದ್ದಾಳೆ. ತನಗೂ ಎಲ್ಲ ಕೆಲಸವನ್ನು ಮಾಡುವ ಶಕ್ತಿ ಇದೆ ಅನ್ನುವುದನ್ನು ಸಾಬೀತು ಪಡಿಸಿದ್ದಾಳೆ. ಆದರೂ, ಹುದ್ದೆ ಮತ್ತು ಸಂಬಳದ ವಿಚಾರಕ್ಕೆ ಬಂದಾಗ, ಅವಳಿಗೆ ಅನ್ಯಾಯವಾಗುತ್ತಿದೆ. ಆಕೆಗೆ ಉದ್ಯೋಗ ಸಿಗುವುದರಿಂದ ಹಿಡಿದು, ನಿವೃತ್ತಿ ಹೊಂದುವತನಕ ಪ್ರತಿ ಹಂತದಲ್ಲೂ ಅವಳು ಕಷ್ಟಗಳನ್ನು ದಾಟಿಕೊಂಡೇ ಬರಬೇಕು. ನಿವೃತ್ತಿ ಪಡೆಯುತ್ತಾರೆ ಅನ್ನುವ ನಂಬಿಕೆಯೂ ಇರುವುದಿಲ್ಲ ಎಂದು ಸಂಶೋಧಕರು ಪ್ರತಿಪಾದಿಸಿದ್ದಾರೆ.

ಮಹಿಳಾ ಉದ್ಯೋಗಿಗಳ ಕಾನೂನು, ಸಂಘವಾಗಿ ಒಗ್ಗೂಡುವಿಕೆ, ಆರೋಗ್ಯ ಹೀಗೆ ಹಲವು ರೀತಿಯಲ್ಲಿ ಚರ್ಚಿಸಿರುವ ಸಂಶೋಧಕರು, ಮಹಿಳಾ ಕಾರ್ಮಿಕರ ಸಮಸ್ಯೆಗಳ ಸ್ಪಷ್ಟ ಚಿತ್ರಣ ನೀಡಿದ ನಂತರ ಆ ಸಮಸ್ಯೆಗಳಿಗೆ ಕಾರಣಗಳನ್ನೂ ತುಂಬಾ ಆಸ್ಥೆಯಿಂದ ಹುಡುಕಿದ್ದಾರೆ. ಕುಟುಂಬ, ಸಮಾಜ, ಕೆಲಸ ಮಾಡುವ ಸ್ಥಳ ಹೀಗೆ ಎಲ್ಲ ಹಂತಗಳಲ್ಲೂ ಮಹಿಳೆ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ದಾಖಲಿಸುತ್ತಾರೆ.

ಡಾ.ಕೆ.ಸರೋಜಾ ಅವರ "**ಮಹಿಳಾ ಆರೋಗ್ಯ ಒಂದು ಮರುಚಿಂತನೆ**' ಕೃತಿಯನ್ನು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 2008ರಲ್ಲಿ ಪ್ರಕಟಿಸಿದೆ. ಮಹಿಳಾ ಆರೋಗ್ಯವನ್ನು ಮಹಿಳಾ ಅಧ್ಯಯನದ ದೃಷ್ಟಿಯಲ್ಲಿ ನೋಡಿರುವುದು ಕೃತಿಯ ವಿಶೇಷತೆಗಳಲ್ಲೊಂದು. ಮಹಿಳೆಯರ ದೇಹ ಮತ್ತು ಮನಸ್ಸು ವಿಶಿಷ್ಟವಾದುದು. ಪ್ರಸ್ತುತ ಗ್ರಂಥದಲ್ಲಿ ಮನೋದೇಹಿಯಾದ ಮಹಿಳೆಯರ ಆರೋಗ್ಯದ ಬಗೆಗೆ ಸೂಕ್ಷ್ಮವೂ, ಸ್ಥೂಲವೂ ಆದ ವಿವರಗಳಿವೆ. ದೇಹದ ಸ್ವಾಸ್ಥ್ಯವು ಮನಸ್ಸಿನ ನೆಮ್ಮದಿಗೆ ಕಾರಣವಾಗುವ ಮತ್ತು ಈ ಕಾರಣದಿಂದಾಗಿ ಅವಳು ಕೆಲಸ ಮಾಡುವ ಸ್ಥಳದಲ್ಲಿಯೂ ಹಿಂಸೆ ಅನುಭವಿಸಬೇಕಾಗುವ ಸೂಕ್ಷ್ಮತೆಯನ್ನು ಕೃತಿಯಲ್ಲಿ ತಂದಿದ್ದಾರೆ. ಈ ಕೃತಿಯು ಭಾರತೀಯ ಮಹಿಳಾ ಆರೋಗ್ಯ, ಹದಿಹರೆಯದ ಹುಡುಗಿಯರ ಆರೋಗ್ಯ, ಮಹಿಳೆಯರ ಅಲಕ್ಷಿತ ಆರೋಗ್ಯ ಸಮಸ್ಯೆಗಳು, ಮಹಿಳೆ ಮತ್ತು ಮಾನಸಿಕ ಆರೋಗ್ಯ, ಸಾರ್ವಜನಿಕ ವಲಯದ ಯೋಜನೆಗಳು ಮತ್ತು ಮಹಿಳಾ ಆರೋಗ್ಯ ಹೀಗೆ ಏಳು ಅಧ್ಯಾಯಗಳನ್ನು ಒಳಗೊಂಡಿದ್ದು, ಆರೋಗ್ಯದ ಸಮಸ್ಯೆಗಳಿಂದಾಗಿ ಮಹಿಳೆಯು ಏನೆಲ್ಲ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಳೆಂದು ಚರ್ಚಿಸಿದ್ದಾರೆ. ಅದರಲ್ಲೂ ಜಾಗತೀಕರಣ ಸಂದರ್ಭದಲ್ಲಿ ಸ್ತ್ರೀ ಆರೋಗ್ಯ ಸಬಲೀಕರಣ ಎಂಥದ್ದು ಅನ್ನುವ ವಿವರವನ್ನೂ ಸೂಕ್ಷ್ಮವಾಗಿ ಕಟ್ಟಿಕೊಡುತ್ತಾ, ಉದ್ಯೋಗದಿಂದ ಬರುವಂತಹ ಆರೋಗ್ಯ ಸಮಸ್ಯೆಯನ್ನೂ ಅವರು ಚರ್ಚಿಗಿಡುತ್ತಾರೆ. ಆರೋಗ್ಯಕ್ಕೆ ಸಂಬಂಧ ಪಟ್ಟಿರುವ ಸರಕಾರದ ಯೋಜನೆ ಮತ್ತು ಅವುಗಳ ಸಾರ್ಥಕತೆಯ ಬಗ್ಗೆಯೂ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ಉದ್ಯೋಗಸ್ಥ ಮಹಿಳೆಯರಲ್ಲಿ ಆಯಾ ಉದ್ಯೋಗದ ಒತ್ತಡಗಳಿಂದಾಗಿ ಹಲವು ಆರೋಗ್ಯದ ಸಮಸ್ಯೆಗಳು ಕಾಡುತ್ತಿವೆ. ಅದನ್ನು ವೈದ್ಯಲೋಕ ಕೂಡ ಗುರುತಿಸಿದೆ. ಕೆಲಸದ ಒತ್ತಡದಿಂದಾಗಿ ಮಹಿಳೆಯರು ನಾನಾ ರೀತಿಯ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಅನೇಕ ರೀತಿಯಲ್ಲಿ ಪರಿಣಾಮ ಬೀರುತ್ತಿದೆ. ಇದರಿಂದಾಗಿ ಉದ್ಯೋಗ ಕಳೆದುಕೊಳ್ಳುವ ಭೀತಿ ಕೂಡ ಎದುರಾಗಿದೆ ಎನ್ನುವ ವಿಷಯವನ್ನು ಪ್ರಸ್ತುತಪಡಿಸಿದ್ದಾರೆ. ಆರೋಗ್ಯಕ್ಕೂ ಮತ್ತು ಉದ್ಯೋಗಕ್ಕೂ ಸಂಬಂಧವಿದೆ. ಹಾಗಾಗಿ ಈ ಕುರಿತಾದ ಇಲ್ಲಿನ ವಿಷಯಗಳು ಸಂಶೋಧನೆಗೆ ಸಹಾಯಕವಾಗಬಲ್ಲವು.

ಒಟ್ಟಾರೆಯಾಗಿ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕ ಮಾಹಿತಿಯನ್ನು ಸಂಗ್ರಹಿಸುವ ನಿಟ್ಟಿನಲ್ಲಿ ಈಗಾಗಲೇ ನಡೆದಿರುವ ಎಲ್ಲ ಬರಹ ಮತ್ತು ಅಧ್ಯಯನಗಳ ಸಮೀಕ್ಷೆಯಲ್ಲಿ ಕಂಡು ಬಂದಿರುವ ಅಂಶಗಳನ್ನು ಹಲವು ಹಂತಗಳಲ್ಲಿ ವಿವರಿಸಿಕೊಳ್ಳಲು

ಸಾಧ್ಯವಾಗಿದೆ. ಮುಖ್ಯವಾಗಿ ಮಾಧ್ಯಮದ ಹಲವು ಆಯಾಮಗಳನ್ನು ಪರಿಚಯಿಸುವುದು, ಮಾಧ್ಯಮ ವಲಯದ ಪ್ರವೇಶಕ್ಕೆ ಮಹಿಳೆಯರಿಗಿರುವ ಮಾನದಂಡಗಳು, ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸ್ಥಿತಿಗತಿಗಳನ್ನು ಗುರುತಿಸುವ ಅಧ್ಯಯನಗಳು, ದುಡಿಮೆಯ ಕ್ಷೇತ್ರವು ಒಡ್ಡುವ ಒತ್ತಡಗಳಿಂದಾಗಿ ಮಹಿಳೆಯರು ಎದುರಿಸುವ ಆರೋಗ್ಯದ ಸಮಸ್ಯೆಗಳು, ಮಾಧ್ಯಮ ವಲಯದಲ್ಲಿ ಇಂದಿಗೂ ಪುರುಷ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ, ವಿವಿಧ ಸ್ತರಗಳಲ್ಲಿ ಉದ್ಯೋಗವನ್ನು ಗಳಿಸಿರುವುದು ಹೀಗೆ ಮಾಧ್ಯಮವನ್ನು ಹಲವು ಹಂತಗಳಲ್ಲಿ ಪರಿಚಯಿಸುವ ಅಧ್ಯಯನಗಳು ಕಂಡುಬರುತ್ತವೆ.

ಮಾಧ್ಯಮದಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರ ಪ್ರಮಾಣ ಗಮನಾರ್ಹವಾಗಿದೆ. ಆದರೆ ಪ್ರಮುಖವಾದ, ನಿರ್ಣಾಯಕ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯೋಗಿಗಳ ಸಂಖ್ಯೆ ಕಡಿಮೆ ಇದೆ. ಲಾಭತರುವ ಹುದ್ದೆಗಳಲ್ಲಿ ಮಾತ್ರ ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆಯೆ ಹೊರತು ನಿರ್ಣಯ ತೆಗೆದುಕೊಳ್ಳುವಂತಹ ಹಕ್ಕುಗಳಿಂದ ಮಹಿಳೆಯರನ್ನು ಹೊರಗಿಟ್ಟಿರುವುದು ಸ್ಪಷ್ಟವಾಗುತ್ತದೆ. ದುಡಿಯುವ ಮಹಿಳೆಯರ ಸಾಮರ್ಥ್ಯಕ್ಕನುಗುಣವಾದ ಉದ್ಯೋಗದ, ಮನ್ನಣೆಯ ಹಕ್ಕುಗಳನ್ನು ಗುರುತಿಸುವ ಹಾಗೂ ಕೇಳುವ ಅಂಶಗಳು ಇಲ್ಲಿಯವರೆಗಿನ ಅಧ್ಯಯನಗಳಲ್ಲಿ ಕಂಡುಬಂದಿಲ್ಲ. ಕೇವಲ ಪರಿಚಯಾತ್ಮಕ ಮತ್ತು ಮಾಹಿತಿ ಒದಗಿಸುವ ನೆಲೆಯ ಅಧ್ಯಯನಗಳು ಕಂಡುಬಂದಿವೆ. ಮಾಧ್ಯಮದ ದುಡಿಮೆಯ ವಲಯಕ್ಕೆ ಮಹಿಳೆಯರ ಪ್ರವೇಶ ಒಂದು ನೆಲೆಯಾದರೆ, ಪ್ರವೇಶದ ನಂತರ ಅಸ್ತಿತ್ವದ ಉಳಿವಿಗಾಗಿ ಎದುರಿಸುವ ನಿರಾಕರಣೆಯ ಸವಾಲುಗಳು ಮತ್ತೊಂದು ನೆಲೆ. ಪ್ರಸ್ತುತ ಅಧ್ಯಯನದಲ್ಲಿ ಈ ವಲಯವು ಮಹಿಳೆಯನ್ನು ಒಳಗೊಳ್ಳುವ ಬಗೆಯನ್ನು ಅನಾವರಣಗೊಳಿಸಲಾಗುತ್ತದೆ. ಮಾಧ್ಯಮ ವಲಯದ ಗೋಚರತೆಯು ಮಹಿಳೆಯರಿಗೆ ಅವಕಾಶಗಳ ಮಹಾಪೂರವನ್ನೆ ಹರಿಸುತ್ತಿದೆ ಎಂದು ಕಾಣಿಸಿದರೂ ಅದರ ಅಗೋಚರ ನಿರ್ವಚನ ಭಿನ್ನವೇ ಆಗಿದೆ. ಅಂದರೆ ಧರ್ಮ, ಜಾತಿ ಮತ್ತು ವರ್ಗದ ಹಿನ್ನೆಲೆಯಲ್ಲಿ ಹಲವು ಸೂಕ್ಷ್ಮ ಆಯಾಮಗಳಲ್ಲಿ ಲಿಂಗತಾರತಮ್ಯದ ನೆಲೆಗಳು ರೂಪಿತವಾಗಿರುತ್ತವೆ ಎಂಬ ಸೂಕ್ಷ್ಮಗಳನ್ನು ಗಮನದಲ್ಲಿರಿಸಿಕೊಂಡು ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆಯನ್ನು ಮಾಡಲಾಗಿದೆ. ಈ ಕಾರಣಕ್ಕಾಗಿ ಇದುವರೆಗಿನ ಅಧ್ಯಯನಗಳಿಗಿಂತ ಪ್ರಸ್ತುತ ಅಧ್ಯಯನವು ಭಿನ್ನವಾಗಿದೆ. ಒಟ್ಟಾರೆಯಾಗಿ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿನ ಲಿಂಗಸಂಬಂಧಿ ಸೂಕ್ಷ್ಮಗಳನ್ನು ಮುಖ್ಯವಾಗಿ ಗಮನಿಸಲಾಗುವುದು. ಈ ಮಾಧ್ಯಮದಲ್ಲಿ

ದುಡಿಯುವ ಮಹಿಳೆಯರು ಎದುರಿಸುತ್ತಿರುವ ಅನಿವಾರ್ಯತೆಗಳನ್ನು ಗಮನಿಸಿ, ಮಾಧ್ಯಮ ಮತ್ತು ಮಹಿಳೆಯರ ಸಂವೇದನೆಯ ನಡುವಿನ ಸಂಘರ್ಷಗಳನ್ನು ಗುರುತಿಸುವ ಮತ್ತು ವಿಶ್ಲೇಷಿಸುವ ಸಾಧ್ಯತೆಯೆಡೆಗಿನ ಅಧ್ಯಯನ ಇದಾಗಿದೆ.

ಅಧ್ಯಾಯ – 3

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು : ಚಾರಿತ್ರಿಕ ನೆಲೆಯಲ್ಲಿ

3.1 ಜಾಗತಿಕ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು

3.2 ರಾಷ್ಟ್ರೀಯ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ

3.3 ಪ್ರಾದೇಶಿಕ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ

3.4 ಕನ್ನಡ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ (ದೂರದರ್ಶನ ಮತ್ತು ಖಾಸಗಿ ವಾಹಿನಿಗಳು)

ಅಧ್ಯಾಯ : 3

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ : ಚಾರಿತ್ರಿಕ ಹಿನ್ನೆಲೆ

ವಿದ್ಯುನ್ಮಾನ ಮಾಧ್ಯಮಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಭಾರತದಲ್ಲಿ ಬಾನುಲಿ ಸಂವಹನ ವ್ಯಾಪಕವಾಗಿ ಅಭಿವೃದ್ಧಿ ಕೂಡ ಹೊಂದಿದೆ. ಆಧುನಿಕ ಜಗತ್ತಿನ ಮಾಧ್ಯಮ (ಮಾಡರ್ನ್ ಮೀಡಿಯಾ) ಎಂದೇ ಕರೆಯಲ್ಪಡುವ ಟೆಲಿವಿಷನ್ ಮಾಧ್ಯಮ ಅಭಿವೃದ್ಧಿ ಹೊಂದುತ್ತಲೇ, ಜಗತ್ತನ್ನೇ ಒಂದು ಹಳ್ಳಿಯಂತಾಗಿಸಿದೆ. ಟೆಲಿವಿಷನ್ ಕ್ಷೇತ್ರ ಅಭಿವೃದ್ಧಿಯಾಗುತ್ತಿದ್ದಂತೆಯೇ ಉದ್ಯೋಗಿಗಳ ಸಂಖ್ಯೆ ಹೆಚ್ಚಾಯಿತು. ಮಾಧ್ಯಮವು ಉದ್ಯಮವಾಗಿ ಬದಲಾದಾಗ ಅದರ ಚಹರೆ ಕೂಡ ಮತ್ತೊಂದು ರೂಪು ಪಡೆದುಕೊಂಡಿತು. ಭಾವಾಭಿವ್ಯಕ್ತಿಯೇ ಮಾಧ್ಯಮದ ಗುಣವಾಗಬೇಕಿತ್ತು. ಮಾಧ್ಯಮದ ಆಶಯವೂ ಅದೇ ಆಗಿತ್ತು. ಆದರೆ ಉದ್ಯಮಿಗಳ, ರಾಜಕಾರಣಿಗಳ ಮತ್ತು ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿ ಇಂದು ಮಾಧ್ಯಮವು ಬಂಡವಾಳ ಹಾಕಿ ಲಾಭ ತೆಗೆಯುವ ಕ್ಷೇತ್ರವಾಗಿ ಮಾರ್ಪಟ್ಟಿದೆ. ಈ ನಡುವೆಯೂ ಸಮಾಜಮುಖಿಯಾಗಿ ಚಿಂತಿಸುವ ವಾಹಿನಿಗಳು ಇವೆ ಎನ್ನುವುದೇ ಸಮಾಧಾನದ ಸಂಗತಿ.

ಇಂತಹ ಕ್ಷೇತ್ರಗಳಲ್ಲಿ ಮಹಿಳೆಯರು ಉದ್ಯೋಗಸ್ಥರಾಗಲು ಸಾಧ್ಯವೆ? ಪುರುಷರೇ ತುಂಬಿರುವ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಮಹಿಳೆಗೂ ಒಂದು ಸ್ಥಾನವಿದೆಯಾ? ಎಂಬ ಪ್ರಶ್ನೆ ಮೂಡಿದ್ದಂತೂ ಸುಳ್ಳಲ್ಲ. ಈ ಕ್ಷೇತ್ರಕ್ಕೆ ಬರಲು ಮನಸು ಮಾಡಿದ್ದ ಮಹಿಳೆಯರಿಗೆ ರತ್ನಗಂಬಳಿಯಲ್ಲ, ನಗುಮುಖದಿಂದ ಕರೆದುಕೊಂಡಿದ್ದಾರೆ ಅನ್ನುವುದು ಕೂಡ ಅನುಮಾನ. ಮಹಿಳಾ ಚರಿತ್ರೆಯುದ್ದಕ್ಕೂ ಅವರು ಕಷ್ಟದ ಸಂಕೋಲೆಗಳನ್ನು ಮುರಿದುಕೊಂಡೇ ತಮಗೆ ದಕ್ಕಬೇಕಾಗಿದ್ದ ಹುದ್ದೆ, ಸಂಬಳ ಮತ್ತು ಸ್ಥಾನಮಾನ ಪಡೆದಿರುವ ಉಲ್ಲೇಖಗಳಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಾಧ್ಯಮ ಕ್ಷೇತ್ರಕ್ಕೆ ಬಂದಿದ್ದ ಮಹಿಳೆಯರನ್ನೇ ಉದಾಹರಣೆಯಾಗಿ ತಗೆದುಕೊಂಡು ನೋಡುವುದಾದರೆ ಕೇವಲ ಬೆರಳೆಣಿಕೆಯಷ್ಟೇ ಕಾಣಸಿಗುತ್ತಾರೆ. ಸ್ವಾತಂತ್ರ್ಯಾ ನಂತರ ಈ ಸ್ಥಿತಿಯಲ್ಲಿ ಮಾರ್ಪಾಡಾಗಿರುವುದನ್ನು ಮಹಿಳೆಯರ ಪ್ರವೇಶ ಸಂಖ್ಯೆಯ ಹೆಚ್ಚಳದಿಂದ ಗುರುತಿಸಬಹುದು. ಅಲ್ಲಿಯವರೆಗೂ ಮಾಧ್ಯಮದಲ್ಲಿ ಯಾವ ವಿಭಾಗಗಳು ಕೇವಲ ಪುರುಷರಿಗಷ್ಟೇ ಸೀಮಿತವಾಗಿದ್ದವೋ ಅಂತಹ ವಿಭಾಗಗಳಿಗೆ ಮಹಿಳೆಯರು ಮುತ್ತಿಗೆ ಹಾಕಿದರು. ತಮ್ಮಿಂದಲೂ ಈ ಕೆಲಸ ಮಾಡಲು ಸಾಧ್ಯವೆಂದು ತೋರಿಸಿದರು. ತಮ್ಮದೇ ಆದ ಸಾಮರ್ಥ್ಯದ ಮೂಲಕ ಮಾಧ್ಯಮದ ಮೊಗಸಾಲೆಯಲ್ಲಿ ಅವರು ತಮ್ಮ ಛಾಪು ಮೂಡಿಸಿದ್ದಾರೆ. ತಾವು ಪ್ರವೇಶಿಸಿದ ಕಚೇರಿಗಳಲ್ಲಿ ತಮ್ಮ ಅಸ್ಮಿತೆ ಮತ್ತು ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಎದೆಗುಂದದೆ ಮುಂದುವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಅಪರಾಧ ವರದಿಗಾರಿಕೆ, ಕ್ರೀಡೆ, ರಾಜಕೀಯ ವರದಿಗಾರಿಕೆ, ಬ್ಯುಸಿನೆಸ್ ಹೀಗೆ ಯಾವುದು ಕೇವಲ ಗಂಡಸರು ಮಾತ್ರ ಕಾರ್ಯನಿರ್ವಹಿಸಲು ಸಾಧ್ಯ ಎಂಬಂತೆ, ದುಡಿಮೆಯ ವಲಯ ಗಂಡಸರ ಸ್ವತ್ತು ಎನ್ನುವ ಪೂರ್ವಾಗ್ರಹ ಸೃಷ್ಟಿಸಿದ್ದರೋ ಅವುಗಳನ್ನೆಲ್ಲ ಮುರಿದುಹಾಕಿ ಮಹಿಳೆಯರು ಆ ವಿಭಾಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಹೊಸ್ತಿಲು ದಾಟಲು ಹಿಂದೇಟು ಹಾಕುತ್ತಿದ್ದ ಮಹಿಳೆಯರು, ಸ್ವಾತಂತ್ರ್ಯ ನಂತರ ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮಹಿಳೆಯರು ತೊಡಗಿಕೊಂಡಿದ್ದರು. ಹೆಣ್ಣು ಮಕ್ಕಳ ಆ ಧೈರ್ಯವೇ ಇತರ ಮಹಿಳೆಯರನ್ನು ಶಿಕ್ಷಕಿಯರನ್ನಾಗಿ ಮಾಡಿತು. ದಾದಿಯರಾದರು. ಬದುಕಿನ ಒಂದೊಂದೇ ಮೆಟ್ಟಿಲುಗಳನ್ನು ಹತ್ತುತ್ತಲೇ, ಮಹಿಳೆಯರಿಂದ ದೂರವಿಟ್ಟಿದ್ದ ಕ್ಷೇತ್ರಗಳತ್ತ ದಾಪುಗಾಲು ಹಾಕಿದರು. ಹೀಗೆ ಮಹಿಳೆಯರು ನಡೆದು ಬಂದಿದ್ದೇ ಈ ಮಾಧ್ಯಮಗಳತ್ತ.

ಅಂತಾರಾಷ್ಟ್ರೀಯ ಪತ್ರಿಕೋದ್ಯಮದಲ್ಲಿ, ಅದರಲ್ಲೂ ಮಹಿಳೆಯರ ಹೆಜ್ಜೆ ಗುರುತುಗಳನ್ನು ಹುಡುಕ ಹೊರಟಾಗ, ಅದರ ಬೇರುಗಳು ಜಾಗತಿಕ ಯುದ್ಧ ಸಂದರ್ಭಗಳ ಕಾಲದಲ್ಲಿ ಕಂಡು ಬರುತ್ತವೆ. ಪತ್ರಿಕೋದ್ಯಮ ಮಹಿಳೆಯರಿಗಲ್ಲ ಅನ್ನುವಾಗಲೇ ಮೊದಲನೇ ಮತ್ತು ಎರಡನೇ ಮಹಾಯುದ್ಧವನ್ನು ಲೆಕ್ಕಿಸದೆ ಮಹಿಳೆಯರು ಪತ್ರಿಕೋದ್ಯಮದತ್ತ ನುಗ್ಗಿದ್ದಾರೆ. ಯುದ್ಧದ ನೆಲದಲ್ಲಿ ನಿಂತು ವರದಿ ಮಾಡಿದ್ದಾರೆ. ಹಾಗಾಗಿ ಅವರ ಚರಿತ್ರೆ ಗಟ್ಟಿಗೊಂಡಿದೆ.

ಮಹಿಳೆಯರಿಗೆ ಒಂದು ಚರಿತ್ರೆ ಇದೆ; ಮಹಿಳೆಯರು ಚರಿತ್ರೆಯಲ್ಲಿ ಇದ್ದಾರೆ ಅನ್ನುವುದು ಅಮೆರಿಕಾದ ಖ್ಯಾತ ಇತಿಹಾಸತಜ್ಞ ಜರ್ಡಾತಾಲರ್ನರ್ ಮಾತು. ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರಿಗೂ ಒಂದು ಚರಿತ್ರೆ ಇದೆ. ಮಹಿಳೆಯರು ಆ ಚರಿತ್ರೆಯಲ್ಲಿ ಇದ್ದಾರೆ.

3.1 ಜಾಗತಿಕ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು

ಅದು ಮೊದಲನೆಯ ಮಹಾಯುದ್ಧದ ಸಂದರ್ಭ. ಟೆಲಿಗ್ರಾಫ್ ಮತ್ತು ಟೆಲಿಫೋನ್ ಮುಂಚೂಣೆಯಲ್ಲಿದ್ದ ಕಾಲವದು. ಮಾಧ್ಯಮ ಸಂಸ್ಥೆಗಳು ಈ ಮೂಲಕವೇ ತನ್ನ ಸುದ್ದಿಯನ್ನು ಹರಡುತ್ತಿದ್ದವು. ಇದೇ ಆಡಳಿತದ ಯಂತ್ರಕ್ಕೆ ತಲೆನೋವಾಗಿತ್ತು. ಟೆಲಿಗ್ರಾಫ್ ಮತ್ತು ಟೆಲಿಫೋನ್‌ನಲ್ಲಿ ಹಲವು ಸಂಶೋಧನೆಗಳು ಆದ ಪರಿಣಾಮದಿಂದಾಗಿ, 1930ರಲ್ಲಿ ಹೊಸ ತಂತ್ರಜ್ಞಾನವಾಗಿದ್ದ ರೇಡಿಯೋ ಮತ್ತು ದೂರದರ್ಶನಗಳು ಅಸ್ತಿತ್ವಕ್ಕೆ ಬಂದವು. ದಿ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಂಪೆನಿ 1932ರಲ್ಲಿ ತನ್ನ ಸೈನಿಕರನ್ನು ಮತ್ತು ತನ್ನ ಆಡಳಿತಾತ್ಮಕ ವಿಷಯಗಳನ್ನು ತಲುಪಿಸಲು ಅಲ್ಪ ತರಂಗದ ವ್ಯವಸ್ಥೆಯನ್ನು ಮಾಡಿಕೊಂಡಿತು. ಇದರ ಪರಿಣಾಮವಾಗಿ ಬಿಬಿಸಿಯು 1939–1945ರ ಅವಧಿಯಲ್ಲಿ ತನ್ನೆಲ್ಲಾ ದೇಶಗಳಲ್ಲಿ ಮಹಾಯುದ್ಧಗಳನ್ನು ಪ್ರಸಾರ ಮಾಡಿತು.

1950ರ ದಶಕದಿಂದ ತನ್ನ ಕಾರ್ಯವನ್ನು ಆರಂಭಿಸಿದ್ದ ರೇಡಿಯೋ ಮತ್ತು ಟೆಲಿವಿಷನ್ ನಂತರದ ದಿನಗಳಲ್ಲಿ ಯುರೋಪ್ ಮತ್ತು ಯುಎಸ್‌ಎಸ್‌ಆರ್‌ನಲ್ಲಿ ಹೊಸ ತಂತ್ರಜ್ಞಾನದೊಂದಿಗೆ ಮತ್ತಷ್ಟು ಬೆಳವಣಿಗೆ ಕಂಡವು.

ಮೊದಲ ಮತ್ತು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಮಾಧ್ಯಮಗಳಿಗೆ ಸ್ವತಂತ್ರವಾಗಿ ಕೆಲಸ ಮಾಡುವಂಥ ಪರಿಸರ ಇರಲಿಲ್ಲ. ತನ್ನ ವ್ಯವಸ್ಥೆಯನ್ನು ಟೀಕಿಸುತ್ತಿದ್ದ ಮತ್ತು ಯುದ್ಧೋನ್ಮಾದದಲ್ಲಿ ತೇಲುತ್ತಿದ್ದ ಹಿಟ್ಲರ್‌ನನ್ನು ಮಾಧ್ಯಮಗಳು ಕಟುವಾಗಿ ಟೀಕಿಸುತ್ತಿದ್ದವು. ಹಾಗಾಗಿ ಹಿಟ್ಲರ್ ಮಾಧ್ಯಮಗಳನ್ನು ನಿಯಂತ್ರಣದಲ್ಲಿ ಇಡಲು ಒಂದು ಸಚಿವಾಲಯವನ್ನೇ ಸ್ಥಾಪಿಸಿದ. ಆದರೂ, ಆತನನ್ನು ವಿರೋಧಿಸುವ ಶಕ್ತಿಗಳು ಬೆಳೆಯುತ್ತಲೇ ಇದ್ದವು. ಅದರಲ್ಲಿ ಮಹಿಳಾ ಪತ್ರಕರ್ತೆಯರೂ ಇದ್ದರು.

1940ರ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಸೈನಿಕರ ಜೊತೆ ಜೊತೆಯಾಗಿಯೇ ಹೊರಟ ಪುರುಷ ಪತ್ರಕರ್ತರ ಗುಂಪಿನಲ್ಲಿ ಮಹಿಳಾ ಪತ್ರಕರ್ತೆಯರು

ಇದ್ದರು. ಯುದ್ಧ ಭೂಮಿಯಲ್ಲಿ ನಿಂತುಕೊಂಡು ವರದಿ ಮಾಡುವುದು ಕಷ್ಟವಾಗಿದ್ದರೂ, ತಾವೂ ಯುದ್ಧ ವರದಿ ಮಾಡಬಲ್ಲೆವು ಎಂಬ ಆತ್ಮವಿಶ್ವಾಸ ಅವರಲ್ಲಿತ್ತು ಎಂಬಂತಹ ಮಾಹಿತಿಗಳು ದೊರಕುತ್ತವೆ.

ಸಿಬಿಎ ವಾಹಿನಿಯಲ್ಲಿ ಮೊದಲ ಮಹಿಳಾ ಪ್ರತಿನಿಧಿಯಾಗಿದ್ದ ಛಾಯಾಗ್ರಾಹಕಿ ಮತ್ತು ವಿಡಿಯೋಗ್ರಾಫರ್ ಅಮೆರಿಕಾದ ಮೇರಿ ಮಾರ್ವಿನ್ ಬ್ರೆಕಿನ್ರಿಡ್ಜ್ ಎರಡನೇ ಮಹಾಯುದ್ಧ ಸಂದರ್ಭದಲ್ಲಿ ಅತ್ಯುತ್ತಮವಾದ ವರದಿಗಳನ್ನು ಯುದ್ಧ ಭೂಮಿಯಿಂದಲೇ ನೀಡಿದರು. ಇದು ಎಲ್ಲರನ್ನೂ ಹುಬ್ಬೇರಿಸುವಂತೆ ಮಾಡಿತ್ತು. 1953ರಲ್ಲಿ ನಡೆದ ಕೊರಿಯನ್ ಯುದ್ಧದಲ್ಲೂ ಮಹಿಳಾ ವರದಿಗಾರ್ತಿಯರು ಪಾಲ್ಗೊಂಡಿದ್ದರು. ಮಹಿಳೆ ಅನ್ನುವ ಕಾರಣಕ್ಕಾಗಿ ಪತ್ರಕರ್ತೆ ಆರ್ಗರೇಟ್ ಹಿಗ್ಗನ್ಸ್‌ಗೆ ಯುದ್ಧ ಸಂದರ್ಭದಲ್ಲಿ ಸುದ್ದಿ ಮಾಡಲು ಸೇನೆಯು ನಿಷೇಧ ಹೇರಿತು. ಆ ಆದೇಶವನ್ನು ಧಿಕ್ಕರಿಸಿ ಅವರು ಸುದ್ದಿ ಮಾಡಿದರು. ಈ ಸಂದರ್ಭದಲ್ಲಿ ಸೇನೆಯು ಇವರನ್ನು ಜಪಾನಿಗೆ ಕಳುಹಿಸಲು ಸಿದ್ಧತೆ ಮಾಡಿಕೊಂಡಿತ್ತು. ಅದನ್ನು ಕೂಡ ನಿರಾಕರಿಸಿದರು. ಈ ಎಲ್ಲ ಸೇವೆಯನ್ನು ಗುರುತಿಸಿ ಇವರಿಗೆ 1951ರಲ್ಲಿ ಪ್ರತಿಷ್ಠಿತ ಪುಲ್ಬಿಜರ್ ಪ್ರಶಸ್ತಿ ಬಂತು. ಸಿಎನ್‌ಎನ್ ವಾಹಿನಿಗಾಗಿ ದೀರ್ಘಕಾಲದಲ್ಲಿ ಅಂತರರಾಷ್ಟ್ರೀಯ ವರದಿಗಾರ್ತಿಯಾಗಿ ಸೇವೆ ಸಲ್ಲಿಸಿದವರು ಕ್ರಿಶ್ಚಿಯನ್ ಅಮಾನ್ಪೋರ್. ಎಬಿಸಿ ನ್ಯೂಸ್‌ನಲ್ಲೂ ಒಂದಷ್ಟು ವರ್ಷಗಳ ಕಾಲ ಇವರು ಕೆಲಸ ಮಾಡಿದರು. ನ್ಯೂಸ್ ರೂಮ್‌ನಲ್ಲಿ ಮಹಿಳೆಯರು ಕೆಲಸ ಮಾಡದಂತಹ ದಿನಗಳಲ್ಲಿ ಅಮಾನ್ಪೋರ್ ಈ ಮಾಧ್ಯಮದಲ್ಲಿ ಗುರುತಿಸಿಕೊಂಡವರು. ಮಾಧ್ಯಮಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದ ಹಿಟ್ಲರ್ ಬಗ್ಗೆ ವರದಿ ಮಾಡಿ ಸಾಕಷ್ಟು ನೋವುಗಳನ್ನು ಅನುಭವಿಸಿದವರು ಡೊರೊಥಿ ಥಾಂಪ್ಸನ್. ಸಮಾಜಮುಖಿ ಚಿಂತನೆಯ ಪತ್ರಕರ್ತೆ ಎಂದೇ ಈಕೆ ಪ್ರಖ್ಯಾತರಾಗಿದ್ದರು. ಅಷ್ಟೇ ಅಲ್ಲದೆ 1930ರ ಸಮಯದಲ್ಲಿ ರೇಡಿಯೋದಲ್ಲಿ ಕೆಲಸ ಮಾಡಿದವರು. ಇವರು ತಮ್ಮ ಅಪರೂಪದ ಧ್ವನಿಯಿಂದ ಗಮನ ಸೆಳೆದವರು. 1961ರಲ್ಲಿ ಎನ್‌ಬಿಸಿ ವಾಹಿನಿಯಲ್ಲಿ ನಿರೂಪಕಿಯಾಗಿ ಕೆಲಸಕ್ಕೆ ಸೇರಿಕೊಂಡವರು ಬಾರ್ಬರಾ ವಾಲ್ಟರ್ಸ್. ಪುರುಷರೇ ತುಂಬಿ ತುಳುಕುತ್ತಿದ್ದ ವಾಹಿನಿಗಳಲ್ಲಿ ಇವರು ಅಪರೂಪದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದರು. ನಾನಾ ಕ್ಷೇತ್ರಗಳ ದಿಗ್ಗಜರನ್ನು ಸಂದರ್ಶನ ಮಾಡುತ್ತಿದ್ದ ಇವರು, ಈ ಕಾರಣಕ್ಕಾಗಿ ಹೆಚ್ಚು ಜನರನ್ನು ತಲುಪಿದರು. ಇದು ಅಲ್ಲಿನ ಪುರುಷ ಉದ್ಯೋಗಿಗಳಿಗೆ ಹಿಡಿಸಲಿಲ್ಲ. ಸಂಸ್ಥೆಯ ಮುಖ್ಯಸ್ಥರಿಗೆ ಹತ್ತಿರವಾಗಿದ್ದ ಕೆಲ ಪುರುಷ ನಿರೂಪಕರು, ಇವರ ಜನಪ್ರಿಯತೆ ನೋಡಲಾಗದೇ

ತಮ್ಮೊಂದಿಗೆ ಬಾರ್ಬರಾ ಅವರನ್ನು ಜಂಟಿಯಾಗಿ ಶೋ ನಡೆಸಲು ಒತ್ತಡ ತಂದರು. ಈ ಕಾರಣಕ್ಕಾಗಿ ಅವರು ಹಿಂಸೆಯನ್ನು ಅನುಭವಿಸಬೇಕಾಯಿತು.

1943ರಲ್ಲಿ ಮಾಧ್ಯಮ ಕ್ಷೇತ್ರಕ್ಕೆ ಕಾಲಿಟ್ಟವರು ಹೆಲೆನ್ ಥಾಮಸ್. ಆಗ ಮಹಿಳೆಯನ್ನು ರಾಜಕೀಯ ಕ್ಷೇತ್ರಗಳಲ್ಲಿ ಸುದ್ದಿ ಮಾಡಲು ಬಿಡುತ್ತಿರಲಿಲ್ಲ. ಅದನ್ನು ಎದುರಿಸಿ, ಜಾನ್ ಎಫ್ ಕೆನಡೆ ಅವರ ಅಷ್ಟೂ ಅಧ್ಯಕ್ಷೀಯ ಭಾಷಣವನ್ನು ಕವರ್ ಮಾಡಿದರು. ಅಲ್ಲದೇ ಅಮೆರಿಕಾದ ಶ್ವೇತ ಭವನದಲ್ಲಿ ನಡೆಯುತ್ತಿದ್ದ ಬಹುತೇಕ ಪತ್ರಿಕಾಗೋಷ್ಠಿಯಲ್ಲಿ ಇವರ ಹಾಜರಾತಿ ಇರುತ್ತಿತ್ತು. ಗ್ಲೋರಿಯಾ ಸ್ಟೀನೆಮ್ ಅಮೆರಿಕನ್ ಪತ್ರಕರ್ತೆಯಾಗಿ ಗುರುತಿಸಿಕೊಂಡಷ್ಟೇ ಸ್ತ್ರೀವಾದಿಯಾಗಿಯೂ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಅದರಲ್ಲೂ ದೂರದರ್ಶನಗಳಲ್ಲಿ ಇವರು ಮಹಿಳಾ ಹಕ್ಕುಗಳ ಬಗೆಗಿನ ವಕ್ತಾರಳಂತೆ ಕೆಲಸ ಮಾಡಿದ್ದಾರೆ. 1984ರಲ್ಲಿ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರಕ್ಕೆ ಕಾಲಿಟ್ಟವರು ಓಪ್ರಾ ವಿನಪ್ರ. ಎಬಿಸಿ ವಾಹಿನಿಯಲ್ಲಿ ಮೂಡಿ ಬರುತ್ತಿದ್ದ "ಎಮ್ ಚಿಕಾಗೋ' ಇವರ ಫೇಮಸ್ ಟಾಕ್ ಶೋ. ವಿವಾದಾತ್ಮಕ ಅನೇಕ ವಿಷಯಗಳನ್ನು ಚರ್ಚೆ ಮಾಡಿದ ಇವರಿಗೆ ಜೀವ ಬೆದರಿಕೆ ಪ್ರತಿರೋಧಗಳು ಬಂದಿದ್ದು ಇದೆ.

1980ರಲ್ಲಿ ಮಹಿಳೆಯರಿಗೆ ಪ್ರೈಮ್ ಟೈಮ್‌ನಲ್ಲಿ (ಸಂಜೆ 7 ರಿಂದ ರಾತ್ರಿ 11) ವಾರ್ತೆಗಳನ್ನು ಓದುವ ಅವಕಾಶ ನೀಡಿರಲಿಲ್ಲ. ಈ ವೇಳೆಯಲ್ಲಿ ಪ್ರಮುಖ ವಿಷಯಗಳ ಚರ್ಚೆ ನಡೆಯುತ್ತಿತ್ತು. ಅಭಿವ್ಯಕ್ತಿಗೂ ಅವಕಾಶ ನೀಡಲಾಗುತ್ತಿತ್ತು. ಅಲ್ಲದೇ, ಟಿವಿ ನೋಡುವ ಪ್ರೇಕ್ಷಕರ ಸಂಖ್ಯೆ ಹೆಚ್ಚಿರುವ ಕಾರಣಕ್ಕಾಗಿ ತುಂಬಾ ಜನಕ್ಕೆ ತಾವೂ ತಲುಪುತ್ತಿದ್ದರು. ಈ ಕಾರಣಗಳಿಂದಾಗಿ ಮಹಿಳೆಯನ್ನು ಈ ಸಮಯದಲ್ಲಿ ವಾರ್ತೆ ಓದಲು ಬಿಡುತ್ತಿರಲಿಲ್ಲ. ಇದರ ವಿರುದ್ಧ ಧ್ವನಿ ಎತ್ತಿದವರು ವಾಷಿಂಗ್‌ಟನ್‌ನಲ್ಲಿ ಸಿಬಿಎಸ್ ಚಾನೆಲ್‌ನಲ್ಲಿ ವಾರ್ತಾವಾಚಕಿಯಾಗಿದ್ದ ಕೋನಿ ಚುಂಗ್. 1980ರ ಸಂದರ್ಭದಲ್ಲಿ ರಾತ್ರಿ ಸುದ್ದಿ ಓದಲು ಮಹಿಳೆಯರಿಗೆ ಬಿಡುತ್ತಿರಲಿಲ್ಲ. ಸತತ ಹೋರಾಟದಿಂದಾಗಿ ರಾತ್ರಿ ಪಾಳಯದಲ್ಲಿ ಸುದ್ದಿ ಓದುವ ಅವಕಾಶ ಗಿಟ್ಟಿಸಿಕೊಂಡರು. ಬಾರ್ಬರ್ ವಾಲ್ಟರ್ಸ್ ನಂತರ ಇಂಥದ್ದೊಂದು ಸ್ಥಾನ ಪಡೆದ ಮಹಿಳಾ ಉದ್ಯೋಗಿ ಇವರು.

ಈ ಎಲ್ಲದರ ಫಲವಾಗಿಯೇ ಇಂದು ಅಂತರರಾಷ್ಟ್ರೀಯ ಮಟ್ಟದ ಟಿವಿಗಳಲ್ಲಿ ಮಹಿಳೆಯರು ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಪ್ರಮುಖ ಸ್ಥಾನ, ನಿರ್ಣಾಯಕ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕಾಣದಿದ್ದರೂ, ಸಂಖ್ಯೆಯಂತೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಹಿಂದೆಂದೂ ಕಾಣದಂತಹ ಹೆಚ್ಚು ಮಹಿಳೆಯರು ವಿದ್ಯುನ್ಮಾನ ಮಾಧ್ಯಮದಲ್ಲಿ ಇಂದು ಕೆಲಸ ಮಾಡುತ್ತಿದ್ದಾರೆ. ರಷ್ಯಾ ಸ್ವೀಡೆನ್‌ನಂತ ಕೆಲವು ದೇಶಗಳಲ್ಲಿ

ಮಹಿಳೆಯರ ಸಂಖ್ಯೆ ಇನ್ನೂ ಹೆಚ್ಚಿದೆ. ಗೋಬ್ಲಲ್ ಮೀಡಿಯಾ ಮಾನಿಟರಿಂಗ್ ಪ್ರಾಜೆಕ್ಟ್ (ಜಿಎಂಪಿಪಿ) ಪ್ರಕಾರ, 2005ರಿಂದ ಪ್ರತಿ ಐದು ವರ್ಷಗಳಿಗೊಮ್ಮೆ ಜಾಗತಿಕ ಸಮೀಕ್ಷೆ ನಡೆಸಲಾಗುತ್ತಿದೆ. 2015ರ ಹೊತ್ತಿನಲ್ಲಿ ದೂರದರ್ಶನದಲ್ಲಿ ಸುದ್ದಿ ನಿರೂಪಕಿಯರ ಸಂಖ್ಯೆ ಶೇಕಡಾ 57ರಷ್ಟಿದ್ದರೆ, ವರದಿಗಾರ್ತಿಯರ ಸಂಖ್ಯೆ ಶೇಕಡಾ 29ರಷ್ಟಿದೆ. ಜಗತ್ತಿನ ಮಾಧ್ಯಮಗಳಲ್ಲಿ ಮಹಿಳೆಯರು 239 ದೇಶಗಳಲ್ಲಿ ಶೇ.12ರಷ್ಟು ಉನ್ನತ ಸ್ಥಾನಮಾನದಲ್ಲಿದ್ದರೆ, ಆಡಳಿತ ಮಂಡಳಿಯಲ್ಲಿ ಶೇ.26ರಷ್ಟು, ನೀತಿ ನಿರೂಪಣೆ ಹುದ್ದೆಗಳಲ್ಲಿ ಶೇ.27ರಷ್ಟು ಸ್ಥಾನಮಾನ ಹೊಂದಿದ್ದಾರೆ. ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮೊದಲಾದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಗಳಲ್ಲಿಯೂ ಮಹಿಳಾ ನಿರ್ಮಾಪಕರು, ಅಧಿಕಾರಿಗಳು, ಮುಖ್ಯ ಉಪಸಂಪಾದಕರು, ಪ್ರಕಾಶಕರ ಆ ಸಂಖ್ಯೆ ಆಘಾತಕಾರಿ ಎನ್ನುವಂತೆ ಕಡಿಮೆ ಇದೆ.

3.2 ರಾಷ್ಟ್ರೀಯ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ

ಯುರೋಪಿಯನ್‌ರ ಅದರಲ್ಲೂ ಮುಖ್ಯವಾಗಿ ರಾಷ್ಟ್ರದ ಬಹುಭಾಗಗಳ ಮೇಲೆ ನಿಯಂತ್ರಣ ಹೊಂದಿದ್ದ ಬ್ರಿಟಿಷ್‌ರ ಹಿತಾಸಕ್ತಿಗಳ ಭಾಗವಾಗಿ ಮಾಧ್ಯಮವು ಮೊದಲ ಹಂತದಲ್ಲಿ ಬೆಳವಣಿಗೆ ಹೊಂದಿತು. ಇದು ಮುದ್ರಣ ಮಾಧ್ಯಮದ ಕಾಲ. 1857ರಲ್ಲಿ ಭಾರತೀಯ ಸ್ವಾತಂತ್ರ್ಯದ ಮೊದಲ ಯುದ್ಧವಾದ ಸಿಪಾಯಿ ದಂಗೆಯು ಪತ್ರಿಕೋದ್ಯಮಕ್ಕೆ ಹೊಸ ದಿಕ್ಕು ತೋರಿತು. ಹಾಗಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರೇ ಪತ್ರಿಕೋದ್ಯಮದಲ್ಲಿ ಕಾಣಿಸಿಕೊಂಡರು.

ಭಾರತೀಯ ಸಂವಿಧಾನದ ನಿಬಂಧನೆ 19(1)ರ ಪ್ರಕಾರ ಎಲ್ಲ ನಾಗರೀಕರಿಗೂ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯದ ಹಕ್ಕಿದೆ. ಇದು ಮಾಧ್ಯಮ ಸ್ವಾತಂತ್ರ್ಯವನ್ನು ದೃಢೀಕರಿಸಿತು.

ಭಾರತವು ಸಂವಹನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಪ್ರಗತಿ ಸಾಧಿಸಿದ ಹಿನ್ನೆಲೆಯಲ್ಲಿ ನೂತನ ಸಂವಹನ ಮಾಧ್ಯಮಗಳಾದ ರೇಡಿಯೋ, ದೂರದರ್ಶನ 1980 ಮತ್ತು 90ರ ದಶಕಗಳಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ತೀರಾ ಕಡಿಮೆ ಇತ್ತು. ಈ ಮಾಧ್ಯಮಗಳು ಕೂಡ ಮಹಿಳೆಯರ ಸಬಲೀಕರಣಕ್ಕಾಗಿ ಹೆಚ್ಚಿನ ಸಾಮಾಜಿಕ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿಲ್ಲ ಎಂದು 1980ರಲ್ಲಿಯೇ ಯುನೆಸ್ಕೊ ಎಂಬ ಅಂತರರಾಷ್ಟ್ರೀಯ ಸಂಸ್ಥೆ ವರದಿ ಮಾಡಿದೆ.

ಅಲ್ಲದೇ, ಮಾಧ್ಯಮಗಳಲ್ಲಿನ ಜಾಹೀರಾತುಗಳು ಮಹಿಳೆಯರನ್ನು ಗೃಹಿಣಿಯರನ್ನಾಗಿ, ಗ್ರಾಹಕರನ್ನಾಗಿ ಮತ್ತು ಲೈಂಗಿಕ ವಸ್ತುಗಳನ್ನಾಗಿ ಪ್ರತಿಬಿಂಬಿಸಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

1990ರ ದಶಕದಲ್ಲಿ ಟೆಲಿವಿಷನ್ ಮಾಧ್ಯಮದಲ್ಲಿ ಮಹಿಳೆಯರ ಸಂಖ್ಯೆ ಕೊಂಚ ಹೆಚ್ಚಿದರೂ, ಅವರನ್ನು ಸಾಂಸ್ಕೃತಿಕ ಕಾರ್ಯಕ್ರಮಗಳು, ಸೌಂದರ್ಯ ಸ್ಪರ್ಧೆ, ಅಡುಗೆ ಕಾರ್ಯಕ್ರಮ ಹೀಗೆ ಮನರಂಜನಾ ಕಾರ್ಯಕ್ರಮಗಳಿಗೆ ಸೀಮಿತವಾಗಿ ಇಡಲಾಗಿತ್ತು. ಹಾರ್ಡ್ ನ್ಯೂಸ್ ಎಂದು ಕರೆಯಲ್ಪಡುವ ತನಿಖಾ ವರದಿಗಾರಿಕೆ, ಅಪರಾಧ ವರದಿಗಾರಿಕೆ, ಪ್ರಾಕೃತಿಕ ವಿಕೋಪ ವರದಿಗಾರಿಕೆ ಮೊದಲಾದ ಮಹತ್ವದ ಜವಾಬ್ದಾರಿಗಳಿಂದ ವ್ಯವಸ್ಥಿತವಾಗಿ ಆಕೆಯನ್ನು ದೂರ ಇಡುತ್ತಲೇ ಬರಲಾಯಿತು. ಆದರೂ, ಆಯಾ ದಶಕಗಳಲ್ಲಿ ಮಹಿಳಾ ಪತ್ರಕರ್ತೆಯರು ತಮಗೆ ಸಿಕ್ಕ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. 1960ರಲ್ಲಿ ಮಾಧ್ಯಮವನ್ನು ಶಿಸ್ತಾಗಿ ಅಧ್ಯಯನ ಮಾಡಿಸುವಂತಹ ಸಂಸ್ಥೆಗಳು ಹುಟ್ಟಿಕೊಂಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪತ್ರಕರ್ತೆಯರು ಈ ರಂಗಕ್ಕೆ ಬರುವಲ್ಲಿ ಸುಲಭವಾಯಿತು.

ನಲವತ್ತರ ದಶಕದಲ್ಲಿ ವೃತ್ತಿ ನಿರತ ಪತ್ರಕರ್ತೆಯಾಗಿ ಮೊದಲ ಬಾರಿಗೆ ಮಾಧ್ಯಮ ಕ್ಷೇತ್ರವನ್ನು ಪ್ರವೇಶ ಮಾಡಿದವರು ವಿದ್ಯಾ ಮುಂಶಿ. ಇವರು ಭಾರತದ ಮೊದಲ ಮಹಿಳಾ ಪತ್ರಕರ್ತೆ. ಹೆಣ್ಣು ಮಕ್ಕಳನ್ನು ಮನೆಯಿಂದಾಚೆ ಬಿಡದೇ ಇರುವ ಸಂದರ್ಭದಲ್ಲಿ, ಮನೆಯಿಂದಾಚೆ ಬಂದು ಹಲವಾರು ಪತ್ರಿಕೆಗಳಲ್ಲಿ ಕೆಲಸಮಾಡಿದರು. 1965ರಲ್ಲಿ ದೂರದರ್ಶನವು ಮೊದಲ ಬಾರಿಗೆ ಐದು ನಿಮಿಷಗಳ ಸುದ್ದಿ ಪ್ರಸಾರ ಮಾಡಲು ಆರಂಭಿಸಿತು. ಪ್ರತಿಮಾ ಪುರಿ ನ್ಯೂಸ್ ಓದುವ ಮೂಲಕ ದೂರದರ್ಶನದಲ್ಲಿ ಸುದ್ದಿ ಓದಿದ ಮೊದಲ ಭಾರತದ ಮಹಿಳೆ ಎಂದು ಖ್ಯಾತರಾದರು.

ನಂತರದ ದಿನಗಳಲ್ಲಿ ಮುದ್ರಣ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾಯಿತು. ಕೇವಲ ಕಚೇರಿಯಲ್ಲಿ ಮಾಡುವ ಕೆಲಸಕ್ಕೆ ಸೀಮಿತರಾಗಿದ್ದ ಮಹಿಳೆಯರು ಅಲ್ಲಿಂದಾಚೆ ಬಂದು ಸುದ್ದಿ ಮಾಡತೊಡಗಿದರು.

ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ತನಿಖಾ ವರದಿಗಾರ್ತಿ ಸುಚಿತಾ ದಲಾಲ್ ಬೇಧಿಸಿದ 600 ಕೋಟಿ ರೂಪಾಯಿ ಷೇರು ಹಗರಣ ಮಾಧ್ಯಮದಲ್ಲಿಯೇ ಹೆಚ್ಚು ಚರ್ಚೆ ಆಯಿತು. ಸಾಕಷ್ಟು ಮಹಿಳಾ ಪತ್ರಕರ್ತೆಯರಿಗೆ ಸುಚಿತಾ ಕಾರ್ಯ ಸ್ಫೂರ್ತಿ ತುಂಬಿತು. ಯುದ್ಧ

ಭೂಮಿಯಿಂದ ವರದಿಗಾರಿಕೆ ಮಾಡಿದ ಮೊದಲ ಭಾರತೀಯ ಪತ್ರಕರ್ತೆ ಪ್ರಭಾ ದತ್. ಇವರು ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಕೆಲಸ ಮಾಡುವಾಗ ಯುದ್ಧ ಭೂಮಿಯಿಂದಲೇ ಆ ಅನುಭವನ್ನು ಬರೆದು ಕಳುಹಿಸುತ್ತಿದ್ದರು. ನಂತರ ಎನ್‌ಡಿಟಿವಿಯ ಬರ್ಕಾ ದತ್ತ ಕೂಡ 1999ರಲ್ಲಿ ನಡೆದ ಕಾರ್ಗಿಲ್ ಯುದ್ಧ ಸಂದರ್ಭದಲ್ಲಿ ಯುದ್ಧ ಭೂಮಿಯಲ್ಲಿಯೇ ನಿಂತು, ವರದಿ ಮಾಡಿದ ದಿಟ್ಟ ಮಹಿಳೆ. ದತ್ತರಂತಹ ಪತ್ರಕರ್ತೆಯರು ಕಾರ್ಗಿಲ್‌ಗೆ ಹೋಗಿ ಯುದ್ಧದ ವರದಿ ಮಾಡಿದ್ದು ಉಳಿದ ಎಲ್ಲಾ ಪತ್ರಕರ್ತೆಯರಿಗೆ ಕ್ಷೇತ್ರ ಕಾರ್ಯದಲ್ಲಿ ಧೈರ್ಯ ತಂದಿತು.

ನಂತರದ ದಿನಗಳಲ್ಲಿ ಭಾರತೀಯ ಸುಂದರಿಯಾಗಿ ಆಯ್ಕೆಯಾಗಿದ್ದ ಮಿನಿ ಮೆನನ್, ವಿದ್ಯುನ್ಮಾನ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡು ಟೆಲಿವಿಷನ್ ಕ್ಷೇತ್ರಕ್ಕೆ ಬಂದವರು. ಸಿನಿಮಾ, ಫ್ಯಾಷನ್‌ನತ್ತ ಮುಖ ಮಾಡದೆ, ಮಹಿಳಾ ವರದಿಗಾರ್ತಿಯರಿಂದ ದೂರವಿಟ್ಟಿದ್ದ ವಾಣಿಜ್ಯ ಸುದ್ದಿಗಳತ್ತ ಗಮನಕೊಟ್ಟರು. ಇದೊಂದು ಸವಾಲಿನ ಕೆಲಸ ಎಂಬ ಕಾರಣಕ್ಕಾಗಿ ಸಂಸ್ಥೆಯು ಮೊದ ಮೊದಲು ಈ ಕೆಲಸ ಕೊಡಲು ನಿರಾಕರಿಸಿತ್ತು. ನಂತರದ ದಿನಗಳಲ್ಲಿ ಇವರು ನಡೆಸಿಕೊಡುತ್ತಿದ್ದ ಬ್ಯುಸಿನೆಸ್ ವೀಕ್ ಜನಪ್ರಿಯವಾಯಿತು. ಯುಟಿವಿ, ಸ್ಟಾರ್ ಟಿವಿ, ಎಎನ್‌ಐ ಮೀಡಿಯಾ ಹೌಸ್ ಹೀಗೆ ಮೊದಲಾದ ಸುದ್ದಿ ಸಂಸ್ಥೆಗಳಲ್ಲಿ ಮಿನಿ ವೃತ್ತಿ ನಿರ್ವಹಿಸಿದರು.

ಕ್ರೀಡಾ ಸುದ್ದಿಗಳಿಂದಲೂ ಮಹಿಳಾ ವರದಿಗಾರ್ತಿಯರನ್ನು ದೂರವಿಡುತ್ತಾ ಬರಲಾಗಿತ್ತು. ಈ ಕ್ಷೇತ್ರದಲ್ಲಿ ಕಾಲಿಡುವ ಮೂಲಕ ಮಾಯಂತಿ ಲ್ಯಾಂಗರ್ ಅನೇಕ ಮಹಿಳಾ ವರದಿಗಾರ್ತಿಯರಿಗೆ ಸ್ಫೂರ್ತಿ ತುಂಬಿದರು. ಜಗತ್ತಿನ ಬಹುತೇಕ ಕ್ರೀಡಾಕೂಟಗಳಿಗೆ ತೆರಳಿ ಸುದ್ದಿ ಮಾಡಿದ ಹೆಗ್ಗಳಿಕೆ ಇವರದ್ದು. 2010ರಲ್ಲಿ ನಡೆದ ಫಿಫಾ ವಿಶ್ವಕಪ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳ ನಿರೂಪಕಿ ಕೂಡ ಇವರಾಗಿದ್ದಾರೆ. ಜೀ ನ್ಯೂಸ್‌ನಲ್ಲಿ ಜಗತ್ತಿನ ಟಾಪ್ ಕ್ರೀಡಾಪಟುಗಳನ್ನು ಸಂದರ್ಶಿಸಿದ ಹೆಮ್ಮೆ ಇವರದ್ದು. 1999ರಲ್ಲಿ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರಕ್ಕೆ ಕಾಲಿಟ್ಟ ಎನ್‌ಡಿಟಿವಿಯ ವರದಿಗಾರ್ತಿ ಮತ್ತು ನಿರೂಪಕಿ ನಿಧಿ ರಾಜ್ದಾನ್ ಅಂತರರಾಷ್ಟ್ರೀಯ ರಾಜಕೀಯ ಸುದ್ದಿಗಳನ್ನೂ ವರದಿ ಮಾಡಿದವರು. ಜಮ್ಮು ಮತ್ತು ಕಾಶ್ಮೀರದಂತಹ ಸೂಕ್ಷ್ಮ ಪ್ರದೇಶಗಳಿಗೂ ತೆರಳಿ ಕೆಲಸ ಮಾಡಿದರು.

ಆಯಾಕಟ್ಟಿನ ಹುದ್ದೆಗಳಲ್ಲಿ ಪುರುಷರೇ ತುಂಬಿಕೊಂಡಿದ್ದರೂ ಕೆಲ ಮಹಿಳಾ ಉದ್ಯೋಗಿಗಳು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಅವರಲ್ಲಿ ಶೆರೀನ್ ಭಾನ್ ಕೂಡ ಒಬ್ಬರು. ಸಿಎನ್‌ಬಿಸಿ ಟಿವಿ 18 ಸುದ್ದಿವಾಹಿನಿಯಲ್ಲಿ ದೆಹಲಿಯ ಬ್ಯೂರೊ ಮುಖ್ಯಸ್ಥೆಯಾಗಿ ಮತ್ತು

ಕಾರ್ಯನಿರ್ವಾಹಕ ಸಂಪಾದಕಿಯ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ರಾಷ್ಟ್ರೀಯ ಪ್ರಸಿದ್ಧ ಸುದ್ದಿ ವಾಹಿನಿಯಾದ ಸಿಎನ್ಎನ್‌ನಲ್ಲಿ ಉಪ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಸಾಗರಿಕಾ. ಬಿಬಿಸಿಯ ಜನಪ್ರಿಯ ಕಾರ್ಯಕ್ರಮವಾದ 'ಕ್ವೆಶ್ಚನ್ ಟೈಮ್ ಇಂಡಿಯಾ'ದಲ್ಲಿ ಭಾಗವಹಿಸಿದ ಮೊದಲ ಮಹಿಳಾ ಆ್ಯಂಕರ್. ಅಲ್ಲದೇ ಇನ್ನೂ ಅನೇಕ ಮಹಿಳೆಯರು ಆಯಾ ದಶಕದ ಅಡೆತಡೆಗಳನ್ನು ದಾಟಿಕೊಂಡು ಕೆಲಸ ನಿರ್ವಹಿಸುತ್ತಿದ್ದಾರೆ. ಆದರೂ, ಅವರಿಗೆ ಸಿಗಬೇಕಾದ ಹುದ್ದೆ, ಸ್ಥಾನಮಾನ ಮತ್ತು ಇತರ ಸವಲತ್ತುಗಳು ಮರೀಚಿಕೆಯಾಗಿಯೇ ಉಳಿದಿವೆ. ನಾನಾ ರೀತಿಯ ಕಿರುಕುಳಗಳನ್ನು ಎದುರಿಸುತ್ತಲೇ ಕೆಲಸ ಮಾಡುತ್ತಿದ್ದಾರೆ.

3.3 ಪ್ರಾದೇಶಿಕ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ

ಕರ್ನಾಟಕದಲ್ಲಿ ಪ್ರಾದೇಶಿಕ ಸುದ್ದಿ ವಾಹಿನಿಗಳಿಗೆ ಒಂದೂವರೆ ದಶಕಗಳಷ್ಟು ಇತಿಹಾಸವಿದೆ. ಆದರೆ, ಟಿವಿ ಎಂಬ ನವಲೋಕ ತೆರೆದುಕೊಂಡಿದ್ದು ಬೆಂಗಳೂರು **ದೂರದರ್ಶನ ಕೇಂದ್ರ**ದಿಂದ. ವಿಸ್ಮಯಕಾರಿ ಬೆಳವಣಿಗೆಯಾಗಿ ರಾಜ್ಯದಲ್ಲಿ ಟಿವಿ ಪ್ರಭಾವ ವ್ಯಾಪಿಸಿತು. ಕನ್ನಡದಲ್ಲಿ ಖಾಸಗಿ ವಾಹಿನಿಗಳ ಯುಗ ಆರಂಭವಾಗಿದ್ದು ಹೊಸ ಸಹಸ್ರಮಾನದ **ಉದಯ ಟಿವಿ ಬಳಿಕ**. 1990ರ ದಶಕದಲ್ಲಿ ಆರಂಭವಾದ ಉದಯ ಟಿವಿ ನಂತರ ದಿನಗಳಲ್ಲಿ ತನ್ನದೇ ನ್ಯೂಸ್ ಚಾನೆಲ್ ಶುರು ಮಾಡಿತು. 2000ದಲ್ಲಿ ತೆಲುಗಿನ **ಈಟಿವಿ ಕನ್ನಡ**ದಲ್ಲೂ ಒಂದು ವಾಹಿನಿ ಆರಂಭಿಸಿತು. ಮನರಂಜನಾ ಸುದ್ದಿ ವಾಹಿನಿ ಇದಾಗಿದ್ದರೂ, ಪ್ರತಿ ಗಂಟೆಗೊಮ್ಮೆ 5 ನಿಮಿಷಗಳ ಅವಧಿಯ ಸುದ್ದಿ ಬುಲೆಟಿನ್ ಪ್ರಸಾರ ಮಾಡುತ್ತಿತ್ತು. ಜೊತೆಗೆ ರಾಷ್ಟ್ರೀಯ ಅಗ್ರವಾರ್ತೆ, ಕನ್ನಡನಾಡಿ ವಾರ್ತೆಗಳು ಪ್ರಸಾರವಾಗುತ್ತಿದ್ದವು. **ಟಿವಿ9** ಕನ್ನಡ ಟೆಲಿವಿಷನ್ ರಂಗಕ್ಕೆ ಪ್ರವೇಶಿಸುವುದರೊಂದಿಗೆ ಕನ್ನಡದಲ್ಲಿ ಸುದ್ದಿ ವಾಹಿನಿಗಳ ಹೊಸ ಯುಗ ಆರಂಭವಾಯಿತು. ದೂರದರ್ಶನ ಕೇಂದ್ರ ಪ್ರಸಾರ ಭಾರತಿ ಸಂಸ್ಥೆಯ ಮೇಲುಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಉಳಿದ ಸುದ್ದಿ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳು ಮತ್ತು ಪ್ರತಿಷ್ಠಿತ ವಾಣಿಜ್ಯ ಹಾಗೂ ರಾಜಕೀಯ ಸಂಸ್ಥೆಗಳಿಗೆ ಸೇರಿವೆ.

1916ರಲ್ಲಿ **'ಕರ್ನಾಟಕ ನಂದಿನಿ'** ಪತ್ರಿಕೆ ಶುರು ಮಾಡುವ ಮೂಲಕ ಕನ್ನಡದ ಪತ್ರಕರ್ತೆಯರ ಪ್ರವೇಶ ಮಾಧ್ಯಮ ರಂಗದಲ್ಲಾಯಿತು. ನಂಜನಗೂಡಿನ ತಿರುಮಲಾಂಬಾ ಕನ್ನಡದ ಪ್ರಥಮ ಪತ್ರಕರ್ತೆ.

1950ರಲ್ಲಿ ಎ.ಆರ್.ಕಮಲಮ್ಮ, ಆರ್.ಕಲ್ಯಾಣಮ್ಮನವರು ಮಹಿಳೆಯರಿಗೆ ರಾಜಕೀಯ ಹಕ್ಕುಗಳ ಅರಿವನ್ನು ಮೂಡಿಸುವ ದೃಷ್ಟಿಯಿಂದ ಪತ್ರಿಕೆಗಳನ್ನು ಶುರು ಮಾಡಿದರು. ಆದರೆ, ಪೂರ್ಣ ಪ್ರಮಾಣದಲ್ಲಿ ಪತ್ರಿಕೋದ್ಯಮಕ್ಕೆ ಧುಮುಕಿದವರು ನಾಗಮಣಿ ಎಸ್ ರಾವ್. 1957ರಲ್ಲಿ ಪೂರ್ಣ ಪ್ರಮಾಣದ ಉದ್ಯೋಗಿಯಾಗಿ ಪತ್ರಿಕಾ ಪ್ರಪಂಚದಲ್ಲಿ ಕಾರ್ಯನಿರತ ಪತ್ರಕರ್ತೆಯರು ಎಂದು ಪರಿಗಣಿಸುವ ಅರ್ಥದಲ್ಲಿ ಪ್ರಥಮಳಾಗಿ ದೈನಿಕ ಪತ್ರಿಕೋದ್ಯಮದಲ್ಲಿ ದಾಖಲಾದವರು. 1962ರಿಂದ ಬಾನುಲಿಯಂತಹ ವಿದ್ಯುನ್ಮಾನ ಕ್ಷೇತ್ರದಲ್ಲಿ ಸತತವಾಗಿ 40 ವರ್ಷಗಳ ಕಾಲ ಮಾಧ್ಯಮದಲ್ಲಿಯೇ ತಮ್ಮ ವೃತ್ತಿಯನ್ನು ಮುಂದುವರಿಸಿದರು. ನಿವೃತ್ತಿಯ ನಂತರವೂ 1995ರಲ್ಲಿ ದೂರದರ್ಶನ ಬೆಂಗಳೂರಿನಿಂದ ಪ್ರಪ್ರಥಮವಾಗಿ ಕನ್ನಡದಲ್ಲಿ ಪ್ರಸಾರ ಮಾಡಿದ ಸಾರ್ವತ್ರಿಕ ಚುನಾವಣೆಯ ವಿಶ್ಲೇಷಣಾ ಚರ್ಚೆಗಳಲ್ಲಿ ಆ್ಯಂಕರ್ ಪರ್ಸನ್ ಆಗಿ ಕಾರ್ಯಕ್ರಮ ನಡೆಸಿಕೊಟ್ಟ ದಾಖಲೆ ಇವರದ್ದು.

"ದಿನಪತ್ರಿಕೆಗಳಲ್ಲಿ ಮಹಿಳೆಯರು ಉದ್ಯೋಗಸ್ಥರಾಗುವುದು ಸಾಧ್ಯವೇ ಇಲ್ಲ. ಇದು ಪುರುಷರಿಗೇ ಕಷ್ಟ. ಮಹಿಳೆಯರಿಗೆಲ್ಲಿ ಸ್ಥಾನ? ಎಂಬ ಭಾವ 1950ರ ಮೊದಲರ್ಧ ಭಾಗದಲ್ಲಿ ಗಟ್ಟಿಯಾಗಿ ತಳವೂರಿತ್ತು. ಮನೆ, ಗಂಡ, ಮಕ್ಕಳು ಸಂಸಾರ ಈ ಕಾರ್ಯಗಳಿಗೆ ಸೀಮಿತರಾದ ಮಹಿಳೆಯರು ಸಂಪೂರ್ಣವಾಗಿ ಹೊರ ಪ್ರಪಂಚದೊಡನೆ ವ್ಯವಹರಿಸಬೇಕಾದ ವೃತ್ತಿ, ವೇಳೆಯ ಮಿತಿ ಇಲ್ಲದ ಕೆಲಸ ನಿರ್ವಹಿಸಬೇಕಾದ ಚಾಕಚಕ್ಯತೆ ಮಹಿಳೆಯರಿಗಿಲ್ಲ ಹಾಗೂ ಮಹಿಳೆಯರಿಂದ ಇದನ್ನು ನಿರೀಕ್ಷಿಸಲೂಬಾರದು ಎಂಬ ಸಾರ್ವತ್ರಿಕ ಮನೋಭಾವ ಈ ಕ್ಷೇತ್ರದಿಂದ ದೂರವೇ ಇಟ್ಟಿತ್ತು. ಈ ರೀತಿಯ ಪರಿಸರ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಪತ್ರಿಕೋದ್ಯಮಕ್ಕೆ ಬರಲು ಮಹಿಳೆಯರೇ ಹಿಂಜರಿಯುತ್ತಿದ್ದರು. "ನಾನು ಈ ವೃತ್ತಿಯಲ್ಲಿ ಕೆಲಸ ಮಾಡಲು ಆರಂಭಿಸಿದ ನಂತರ ಸುಮಾರು ಹದಿನೈದು ವರ್ಷಗಳಿಗೂ ಹೆಚ್ಚು ಕಾಲ ದಿನ ಪತ್ರಿಕೆಗಳಲ್ಲಾಗಲಿ, ಆಕಾಶವಾಣಿಯ ಸುದ್ದಿ ವಿಭಾಗದಲ್ಲಿ ಆಗಲಿ ಬೇರೆ ಪತ್ರಕರ್ತೆಯರ ಪ್ರವೇಶ ಆಗಲೇ ಇಲ್ಲ. 1970ರ ಸುಮಾರಿಗೆ ಒಬ್ಬೊಬ್ಬರಾಗಿ ಹೆಣ್ಣು ಮಕ್ಕಳು ಕನ್ನಡ ಪತ್ರಿಕಾರಂಗಕ್ಕೆ ಪ್ರವೇಶಿಸಲಾರಂಭಿಸಿದರು. ಇಂದಿನ ವಿಶೇಷ ಪುರವಣಿಗಳ ಮಾದರಿಯಲ್ಲಿ ಮಹಿಳೆಯರಿಗೇ ಸಂಬಂಧಪಟ್ಟ ವಾರ್ತೆಗಳನ್ನು ಕ್ರೋಡಿಕರಿಸಿ ವಾರಕ್ಕೊಮ್ಮೆ ಪ್ರಸಾರ ಮಾಡುವ ಕಾರ್ಯಕ್ರಮವನ್ನು ಮಹಿಳಾ ಕಾರ್ಯಕ್ರಮದಲ್ಲಿ ಪ್ರಯತ್ನಿಸಲಾಯಿತು. ನಾನೇ ಮೊದಲ 'ವನಿತಾವಾರ್ತೆ' ಪ್ರಸಾರ ಮಾಡಿದ್ದೆ" (ಎಂ.ಜಯರಾಮ್ ಅಡಿಗ, ಡಿ.ಯಶೋಧಾ(ಸಂ), ಪತ್ರಕರ್ತೆಯ ಪುರಾವೆಗಳು, ಪ್ರಕಾಶನ : ಪ್ರೆಸ್‌ಕ್ಲಬ್, ಪುಟ : 7)

ಪತ್ರಿಕೋದ್ಯಮ ಮಹಿಳೆಯರಿಗೆ ಅಲ್ಲ ಅನ್ನುವುದನ್ನು ಪುರುಷ ಪ್ರಧಾನ ವ್ಯವಸ್ಥೆಯು ಧಿಕ್ಕರಿಸುತ್ತಲೇ ಬಂದಿದೆ. ಕಟುವಾಗಿ ಟೀಕಿಸುತ್ತಲೇ ಬಂದಿದೆ. ಇಂಥದ್ದೊಂದು ಟೀಕೆ ಇತಿಹಾಸದಲ್ಲಿ ದಾಖಲಾಗಿದೆ. ಅದು ಸರಸ್ವತಿಬಾಯಿ ರಾಜವಾಡೆ ಅವರು ಸುಪ್ರಭಾತ ಪತ್ರಿಕೆಯನ್ನು ಮಾಡುತ್ತಿದ್ದ ದಿನಗಳು. ಅವರು ಹಿರಿಯ ಕವಿ ಗೋವಿಂದ ಪೈ ಬಳಿ ಹೋಗುತ್ತಾರೆ. ಪತ್ರಿಕೆಗಾಗಿ ಚಂದಾ ಕೇಳಲು ಹೋಗಿದ್ದ ಸರಸ್ವತಿ ಬಾಯಿ ಅವರಿಗೆ ಪೈಗಳು, "ಇದು ಮಹಿಳೆಯರು ಮಾಡುವ ಕೆಲಸವಲ್ಲ. ಹೀಗೆಲ್ಲ ಹೆಂಗಸರು ಬೀದಿ ಬೀದಿ ಸುತ್ತ ಬಾರದು. ಈಗಾಗಲೇ ಅನೇಕ ಪತ್ರಿಕೆಗಳಿವೆ. ಅವುಗಳಿಗೆ ಬೇಕಾದರೆ ನೀವು ಬರೀರಿ' ಎಂದು ಹೇಳಿದ್ದರಂತೆ. ಆದರೂ, ಸರಸ್ವತಿ ಅವರು ಪತ್ರಿಕೆ ಹೊರ ತರುವ ಛಲ ಬಿಡಲಿಲ್ಲ. ಅಂತಹ ಮಾತುಗಳಿಗೆ ಕಿವಿಗೊಡದೇ ತಮ್ಮ ಕಾರ್ಯದಲ್ಲಿ ತೊಡಗಿದರಂತೆ.

ನಂತರದ ದಿನಗಳಲ್ಲಿ ಡಾ.ಟಿ.ಸಿ ಪೂರ್ಣಿಮಾ ಆಕಾಶವಾಣಿ ಬೆಂಗಳೂರು ಕೇಂದ್ರದ ಸುದ್ದಿ ಸಂಪಾದಕರಾದರು. ಕೇಂದ್ರ ವಾರ್ತಾಸೇವೆ ಅಧಿಕಾರಿಯಾಗಿ, ಬೆಂಗಳೂರು ದೂರದರ್ಶನ ಕೇಂದ್ರದ ಸುದ್ದಿ ಸಂಪಾದಕಿಯಾಗಿ ಕೆಲಸ ನಿರ್ವಹಿಸಿದರು. ದೂರದರ್ಶನದ ಸಂದರ್ಶಕಿಯಾಗಿ ಮಹಿಳಾಪರ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

ಪ್ರಜಾವಾಣಿಯ ಮಂಗಳೂರು ಬ್ಯುರೋ ಮುಖ್ಯಸ್ಥೆ, ಉದಯವಾಣಿಯ ಸುದ್ದಿ ಸಂಪಾದಕಿಯಾಗಿ, ಆನಂತರ ಅದೇ ಪತ್ರಿಕೆಯ ಸಂಪಾದಕಿಯಾದ ಕನ್ನಡದ ಮೊದಲ ಕಾರ್ಯನಿರತ ಮಹಿಳಾ ಸಂಪಾದಕಿ ಆರ್.ಪೂರ್ಣಿಮಾ. 90ರ ದಶಕದ ಆರಂಭದಲ್ಲಿ ಚಿಕ್ಕಮಗಳೂರು ಜಿಲ್ಲಾ ವರದಿಗಾರ್ತಿಯಾಗಿದ್ದ ಮಂಜುಳಾ ಪ್ರಜಾವಾಣಿಯ ಮೊದಲ ಜಿಲ್ಲಾ ವರದಿಗಾರ್ತಿ. ಪ್ರಜಾವಾಣಿಯ ಡೆಸ್ಕ್‌ನಲ್ಲಿ ಮೊದಲ ಮಹಿಳಾ ಮುಖ್ಯ ಉಪಸಂಪಾದಕಿಯಾದ ನಂತರ ವಿಜಯ ಕರ್ನಾಟಕದಲ್ಲಿ ಸಹಾಯಕ ಸಂಪಾದಕಿಯಾದವರು ಎನ್.ಗಾಯತ್ರಿ ಸಂಯುಕ್ತ ಕರ್ನಾಟಕದಲ್ಲಿ ಹಿರಿಯ ವರದಿಗಾರ್ತಿಯಾಗಿ ವಿಧಾನಸಭೆ ವರದಿ ಮಾಡಿದವರು ಕೆ.ಎಚ್.ಸಾವಿತ್ರಿ, ಕನ್ನಡದ ಮೊದಲ ಮುಖ್ಯ ವರದಿಗಾರ್ತಿ ಎಂಬ ಅಗ್ಗಳಿಕೆ ಶಾಂತಲಾ ಅವರಿಗೆ ಸಲ್ಲುತ್ತದೆ. ಪತ್ರಿಕೋದ್ಯಮದಲ್ಲಿ ಇದ್ದುಕೊಂಡು ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು ಡಾ.ವಿಜಯ.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹಂತಕರಾದ ಶಿವರಾಸನ್ ಮತ್ತು ತಂಡವು ಮಂಡ್ಯ ಜಿಲ್ಲೆಯ ಮುತ್ತತ್ತಿಯಲ್ಲಿ ಮಾರುವೇಷದಲ್ಲಿ ಅಡಗಿಕೊಂಡಾಗ ಪ್ರಜಾವಾಣಿಯ ಮಂಡ್ಯ ಜಿಲ್ಲಾ ವರದಿಗಾರರಾಗಿದ್ದ ಹಿರಿಯ ಪತ್ರಕರ್ತೆ ಕುಸುಮಾ ಶಾನ್‌ಬಾಗ್ ರಾತ್ರೋರಾತ್ರಿ ಮುತ್ತತ್ತಿಗೆ

ತೆರಳಿ ಎಲ್‌ಟಿಟಿಇ ಉಗ್ರರು ಅಡಗಿಕೊಂಡಿರುವುದನ್ನು ವರದಿ ಮಾಡುವ ಮೂಲಕ ರಾಜೀವ್ ಹಂತಕರು ರಾಜ್ಯ ಪ್ರವೇಶಿಸಿರುವುದನ್ನು ಬಹಿರಂಗಪಡಿಸಿದರು. ಇಂತಹ ಅನೇಕ ಸಾಹಸದ ಕತೆಗಳು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಅದೆಷ್ಟೋ ಮಹಿಳಾ ವರದಿಗಾರ್ತಿಯರಿಗೆ ಸ್ಫೂರ್ತಿಯಾದವು.

2006ರಂದು ಕರ್ನಾಟಕದಲ್ಲಿ ದಿನದ ಇಪ್ಪತ್ನಾಲ್ಕು ಗಂಟೆ ಸುದ್ದಿಯನ್ನು ಪ್ರಸಾರ ಮಾಡುವ ಟಿವಿ 9 ಉದಯವಾಯಿತು. ಈ ವಾಹಿನಿಯಿಂದ ಅನೇಕ ಮಹಿಳಾ ಪತ್ರಕರ್ತೆಯರು ಈ ಉದ್ಯಮಕ್ಕೆ ಕಾಲಿಟ್ಟರು. ಈ ಚಾನೆಲ್‌ನ ಯಶಸ್ಸು ಕನ್ನಡದಲ್ಲಿ ಮತ್ತಷ್ಟು ಪ್ರಾದೇಶಿಕ ಸುದ್ದಿವಾಹಿನಿಗಳ ಹುಟ್ಟಿಗೂ ಕಾರಣವಾಯಿತು. ಹಾಗಾಗಿ ಕನ್ನಡದ ಸುದ್ದಿ ವಾಹಿನಿಗಳಿಗೆ ದಶಕಗಳ ಇತಿಹಾಸವಷ್ಟೇ ಇದೆ. ಈ ಅವಧಿಯಲ್ಲಿನ ಅನೇಕ ಮಹಿಳಾ ಪತ್ರಕರ್ತೆಯರು ತಮ್ಮದೇ ಆದ ಸಾಧನೆ ತೋರಿದ್ದಾರೆ. ಹಲವು ಅಡೆತಡೆಗಳನ್ನೂ ಎದುರಿಸಿದ್ದಾರೆ.

ಹೈದರಾಬಾದ್‌ನಲ್ಲಿ ಈ ಟಿವಿಯಲ್ಲಿ ಕೆಲಸ ಮಾಡುತ್ತಿದ್ದ ರಾಧಿಕಾ ರಾಣಿ, ನಂತರ ಅಲ್ಲಿಂದ ಟಿವಿ9ಗೆ ಸೇರಿಕೊಂಡರು. ಈ ಚಾನೆಲ್‌ಗಾಗಿ ಬೇರುಮಟ್ಟದಿಂದಲೇ ಕೆಲಸ ಮಾಡಿದ ಪತ್ರಕರ್ತೆಯರಲ್ಲಿ ಇವರೂ ಒಬ್ಬರು. ತಮ್ಮದೇ ಆದ ನ್ಯೂಸ್ ರೀಡಿಂಗ್ ಶೈಲಿಯ ಮೂಲಕ ಗುರುತಿಸಿಕೊಂಡಿರುವ ಇವರು, ಲೇಡಿಸ್ ಕ್ಲಬ್ ಕಾರ್ಯಕ್ರಮದ ಮೂಲಕ ದಾಖಲೆಯ ಕಂತುಗಳನ್ನು ನಿರ್ಮಾಣ ಮಾಡಿದ್ದಾರೆ. ಈ ಕಾರ್ಯಕ್ರಮವು ಇವರದ್ದೇ ವರದಿ, ವಿಷಯ ಆಯ್ಕೆ, ನಿರೂಪಣೆ ಮತ್ತು ನಿರ್ಮಾಣದಲ್ಲಿ ಮೂಡಿ ಬಂದಿದೆ.

ಕನ್ನಡ ಸುದ್ದಿ ವಾಹಿನಿಗಳಲ್ಲಿ ತನಿಖಾ ಪತ್ರಿಕೋದ್ಯಮ ಮತ್ತು ಕುಟುಕು (ಸ್ಟ್ರಿಂಗ್ ಆಪರೇಷನ್) ಕಾರ್ಯಾಚರಣೆಯ ಪತ್ರಿಕೋದ್ಯಮದಲ್ಲಿ ಮುಖ್ಯವಾಗಿ ಕೇಳಿ ಬರುವ ಹೆಸರು ವಿಜಯಲಕ್ಷ್ಮೀ ಶಿಬರೂರ್‌ರದ್ದು. ಮುದ್ರಣ ಮಾಧ್ಯಮದಿಂದ ದೃಶ್ಯ ಮಾಧ್ಯಮದತ್ತ ಬಂದಿರುವ ವಿಜಯಲಕ್ಷ್ಮಿ, ಈ ಟಿವಿ ಕನ್ನಡದಲ್ಲಿ ಮೂರು ವರ್ಷಗಳ ಕಾಲ ಕಾಪಿ ಎಡಿಟರ್, ಹಿರಿಯ ವರದಿಗಾರ್ತಿಯಾಗಿ ಕೆಲಸ ಮಾಡಿದ್ದಾರೆ. ಟಿವಿ9 ವಾಹಿನಿಯಲ್ಲಿ ಮೂರುವರೆ ವರ್ಷಗಳ ಕಾಲ ರಾಜಕೀಯ ವರದಿಗಾರ್ತಿಯಾಗಿ, ವಿಶೇಷ ಪ್ರತಿನಿಧಿಯಾಗಿ, ಬೆಂಗಳೂರು ಬ್ಯೂರೋ ಮುಖ್ಯಸ್ಥೆಯಾಗಿ ಕಾರ್ಯನಿರ್ವಹಿಸಿದ್ದಾರೆ. ಸುವರ್ಣ ಸುದ್ದಿ ವಾಹಿನಿಯಲ್ಲಿ ಪ್ರಸಾರವಾಗುವ ಕವರ್ ಸ್ಟೋರಿ ಮೂಲಕ ಸ್ಟ್ರಿಂಗ್ ಆಪರೇಷನ್ (ಕುಟುಕು ಕಾರ್ಯಾಚರಣೆ) ವರದಿಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಪುರುಷರೂ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಹಿಂದೇಟು ಹಾಕುವ ಸಂದರ್ಭದಲ್ಲಿ ವಿಜಯಲಕ್ಷ್ಮೀ ಸ್ಟ್ರಿಂಗ್ ಆಪರೇಷನ್ ಮೂಲಕ ಹತ್ತು ಹಲವು ಹಗರಣಗಳನ್ನು

ಹೊರತಂದಿದ್ದಾರೆ. ಈ ಸಾಹಸಕ್ಕಾಗಿ ಅವರಿಗೆ ಹತ್ತು ಹಲವು ಪ್ರಶಸ್ತಿಗಳೂ ಕೂಡ ಬಂದಿವೆ. ಟಿವಿ 9ನಲ್ಲಿ ಇರುವಾಗ ಕೆಪಿಟಿಸಿಎಲ್‌ನಲ್ಲಿ ನಡೆದಿದ್ದ 300 ಕೋಟಿ ರೂಪಾಯಿಯ ಭೂ ಹಗರಣವನ್ನು ಬಯಲಿಗೆಳೆದ ಹೆಗ್ಗಳಿಕೆ ಇವರದ್ದು. ತನಿಖಾ ವರದಿಗಾರಿಕೆಯಲ್ಲಿ ತೊಡಗಿರುವ ಬೆರಳೆಣಿಕೆಯ ಪತ್ರಕರ್ತರಲ್ಲಿ ಕೇಳಿ ಬರುವ ಮತ್ತೊಂದು ಹೆಸರು ಗೀತಾ ಚೌಹಾಣ್ ಅವರದ್ದು. ಇವರ ತನಿಖಾ ವರದಿಗಳು ಸರಕಾರ ಮಟ್ಟದಲ್ಲೂ ಸದ್ದು ಮಾಡಿವೆ.

ಕನ್ನಡದ ಅತ್ಯಂತ ಜನಪ್ರಿಯ ನ್ಯೂಸ್ ಆ್ಯಂಕರ್‌ಗಳಲ್ಲಿ ರಾಧಾ ಹಿರೇಗೌಡರ್ ಕೂಡ ಒಬ್ಬರು. ರಾಜಕೀಯ ಮತ್ತು ಕ್ರೈಂ ವಿಷಯಗಳನ್ನು ಮಂಡಿಸುವಲ್ಲಿ ಪರಿಣೀತೆ. ಅಲ್ಲದೇ ಪ್ರೈಂ ಟೈಮ್‌ನಲ್ಲಿ ಕಾಣಿಸಿಕೊಳ್ಳುವ ಬೆರಳೆಣಿಕೆಯ ಆ್ಯಂಕರ್‌ಗಳಲ್ಲಿ ರಾಧಾ ಕೂಡ ಒಬ್ಬರು. ಸಹನಾ ಭಟ್ ಸುವರ್ಣ ನ್ಯೂಸ್ ಚಾನೆಲ್‌ನಲ್ಲಿ ಕ್ರೈಂ ವಿಭಾಗದ ನಿರ್ಮಾಪಕಿಯಾಗಿ ಕೆಲಸ ಮಾಡುತ್ತಿದ್ದರೆ, ಇದೇ ವಾಹಿನಿಯಲ್ಲಿ ಔಟ್‌ಪುಟ್ ಮತ್ತು ಇನ್‌ಪುಟ್ ಮುಖ್ಯಸ್ಥೆಯಾಗಿ ಶೋಭಾ ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ವಿವಿಧ ವಾಹಿನಿಗಳಲ್ಲಿ ಹಲವು ಕಾರ್ಯಕ್ರಮಗಳನ್ನು ನಡೆಸಿಕೊಡುವ ಮತ್ತು ಪ್ರಮುಖ ವಿಷಯಗಳ ಕುರಿತು ಚರ್ಚೆಯಲ್ಲೂ ಪಾಲ್ಗೊಳ್ಳುವ ಮೂಲಕ ಮಂಜುಳಾ, ಸಬಿತಾ, ಭಾವನಾ, ನಾಜಿಯಾ ಕೌಸರ್, ದಿವ್ಯಜ್ಯೋತಿ, ವೀಣಾ ಪೂಜಾರಿ ಹೀಗೆ ಮಹಿಳೆಯರು ತಮ್ಮದೇ ಆದ ಸ್ಥಾನ ಪಡೆದಿದ್ದಾರೆ. ದೂರದರ್ಶನದಲ್ಲಿ ಎಚ್.ಎನ್.ಆರತಿ, ನಿರ್ಮಲಾ ಎಲಿಗಾರ್ ಸಕ್ಸಸ್ ಕಾರ್ಯಕ್ರಮಗಳನ್ನು ಕೊಟ್ಟ ಮಹಿಳೆಯರ ಸಾಲಿನಲ್ಲಿ ಕಾಣಿಸುತ್ತಾರೆ

ಕ್ಯಾಮೆರಾದ ಹಿಂದೆಯೂ ಹಲವು ಮಹಿಳೆಯರು ಕೆಲಸ ಮಾಡುತ್ತಿದ್ದು ಅರುಣಾ, ಸೌರಭ್, ಹೇಮಾ, ಮಹಾದೇವಿ, ಮಾನಸಾ ತಮ್ಮ ವಿಭಾಗದಲ್ಲಿ ಛಾಪು ಮೂಡಿಸಿದವರು.

ಈ ಮಾಧ್ಯಮದಲ್ಲಿ ಅಗಾಧ ಅನುಭವ ಇರುವ ಜ್ಯೋತಿ ಇರವತ್ತೂರ್ ಫೋಕಸ್ ಟಿವಿಯ ಮೂಲಕ ಸುದ್ದಿ ವಾಹಿನಿಯ ಮೊದಲ ಮಹಿಳಾ ಸಂಪಾದಕಿ ಆಗುತ್ತಿದ್ದರೆ, ಅಪರೂಪದ ವಿಭಾಗ ಅನಿಸಿರುವ ಕ್ರೈಂ ರಿಪೋರ್ಟಿಂಗ್‌ನಲ್ಲಿ ಭವ್ಯಾ ಶಿಬರೂರ್, ರಾಜಕೀಯ ವಿಭಾಗದ ವರದಿಗಾರಿಕೆಯಲ್ಲಿ ಸೌಮ್ಯ ಕರ್ಕೆರಾ, ರಕ್ಷಾ ಹೀಗೆ ಮುಂತಾದವರು ಮುಂಚೂಣಿಯಲ್ಲಿದ್ದಾರೆ. ಅನಿತಾ ಕುಮಾರಸ್ವಾಮಿ ಕನ್ನಡದ ಸುದ್ದಿ ವಾಹಿನಿಯೊಂದರ ಏಕೈಕ ಒಡತಿ ಅನ್ನುವುದು ವಿಶೇಷ.

3.4 ಕನ್ನಡ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆ

ಜಗತ್ತಿನ ಮೂಲೆ ಮೂಲೆಯಲ್ಲಿ ಇಂದು ಸಂಭವಿಸುವ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಘಟನೆಗಳು ಕ್ಷಣಮಾತ್ರದಲ್ಲಿಯೇ ತಂದು ನಮ್ಮುಂದಿಡುವುದೇ ಟೆಲಿವಿಷನ್ ಮಾಧ್ಯಮ. ಮಹಿಳೆ, ಮಕ್ಕಳು, ಯುವಕರು, ದುಡಿಯುವ ವರ್ಗ, ಶೋಷಿತ ವರ್ಗ, ಕೃಷಿಕರು, ವಿವಿಧ ಕ್ಷೇತ್ರದ ವ್ಯಾಪಾರಸ್ಥರು ಹೀಗೆ ಏಕಕಾಲದಲ್ಲಿ ಎಲ್ಲರಿಗೂ ಸಲ್ಲುವ ಮಾಧ್ಯಮ ಆಗಿದ್ದರಿಂದ ವಿದ್ಯುನ್ಮಾನ ಮಾಧ್ಯಮದಲ್ಲಿಯೇ ಅತಿ ವೇಗವಾಗಿ ಬೆಳೆದಿರುವ ಮಾಧ್ಯಮ.

ಈ ದೂರದರ್ಶನದ ಅನ್ವೇಷಕ ಜಾನ್ ಲೋಗಿ ಬೆಯೆರ್ಡ್. ಈತನದ್ದೇ ಒಡೆತನದ ಕಂಪೆನಿ ಬೆಯೆರ್ಡ್ ಟೆಲಿವಿಷನ್ ಕಂಪನಿಯು 1929ರಲ್ಲಿ ಲಂಡನ್‌ನಿಂದ ನ್ಯೂಯಾರ್ಕ್‌ಗೆ ದೂರದರ್ಶನ ಪ್ರಸಾರ ಮಾಡಲಾಯಿತು. ಇದು ಭಾರತಕ್ಕೆ ಕಾಲಿಟ್ಟಿದ್ದು 1959ರಲ್ಲಿ. ದೈನಂದಿನವಾಗಿ ಪ್ರಸಾರ ಆರಂಭಿಸಿದ್ದು 1965ರಿಂದ.

ಕರ್ನಾಟಕದಲ್ಲಿ 1977ರ ಸೆಪ್ಟೆಂಬರ್ 3ರಂದು ದೂರದರ್ಶನವು ಗುಲ್ಬರ್ಗಾದಿಂದ ಮೊದಲ ಬಾರಿಗೆ ಪ್ರಸಾರವಾಯಿತು. 1983ರ ನವೆಂಬರ್ 19ರಂದು ಬೆಂಗಳೂರು ಕೇಂದ್ರ ಕನ್ನಡ ಕಾರ್ಯಕ್ರಮಗಳ ಪ್ರಸಾರ ಆರಂಭಿಸಿತು. 1994ರಲ್ಲಿ ಡಿಡಿ9 ಕನ್ನಡ ಉಪಗ್ರಹ ವಾಹಿನಿ, 2000 ಇಸವಿಯಲ್ಲಿ ಚಂದನ ಎಂಬ ಹೊಸ ಹೆಸರು ಪಡೆಯಿತು. ಅಸಲಿಯಾಗಿ ಕನ್ನಡ ವಾರ್ತಾ ಪ್ರಸಾರ ಶುರುವಾಗಿದ್ದು 1983 ನವೆಂಬರ್ 1ರಂದು. 1995ರ ಮಾರ್ಚ್ 8ರಂದು ಮಹಿಳಾ ದಿನಾಚರಣೆ ಅಂಗವಾಗಿ ಪ್ರಸಾರ ಮಾಡಿದ 'ಹಲೋ ಸಹೋದರಿ' ಎನ್ನುವ ಕಾರ್ಯಕ್ರಮ ಬೆಂಗಳೂರು ದೂರದರ್ಶನ ಕೇಂದ್ರದ ಮೊಟ್ಟ ಮೊದಲ ಫೋನ್ ಇನ್ ಕಾರ್ಯಕ್ರಮ ಎನ್ನುವುದು ವಿಶೇಷ. ಇದು ನೇರ ಪ್ರಸಾರವಾಯಿತು.

ಇಲ್ಲಿಂದ ಕರುನಾಡಿನಲ್ಲಿ ಟಿವಿ ಎಂಬ ನವಲೋಕ ತೆರೆದುಕೊಳ್ಳುತ್ತಾ ಹೋಯಿತು. ಬೆಂಗಳೂರು **ದೂರದರ್ಶನ ಕೇಂದ್ರದ** ನಂತರ ಟೆಲಿವಿಷನ್ ರಂಗದಲ್ಲಿ ಕ್ರಾಂತಿಕಾರಿ ಬೆಳವಣಿಗೆ ಆದವು. ಈಗ ಕನ್ನಡ ಖಾಸಗಿ ನ್ಯೂಸ್ ವಾಹಿನಿಗಳೂ ಸೇರಿದಂತೆ ಚಾನೆಲ್‌ಗಳ ಸಂಖ್ಯೆ ಹೆಚ್ಚಿದೆ. ಈಗ ಇರುವ ಚಾನೆಲ್‌ಗಳ ಜೊತೆಗೆ ಕನ್ನಡ **ಪವರ್, ಟಿವಿ5, ಫೋಕಸ್, ರಂಗೋಲಿ, ನಂದಿ** ಹೀಗೆ ಇನ್ನೂ ಐದು ಹೊಸ ಚಾನೆಲ್‌ಗಳ ಉದಯಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕನ್ನಡದಲ್ಲಿ ಖಾಸಗಿ ವಾಹಿನಿಗಳ ಯುಗ ವಾಸ್ತವದಲ್ಲಿ ಆರಂಭಗೊಂಡಿದ್ದು ತೊಂಬತ್ತರ ದಶಕದಲ್ಲಿ. 1994ರಲ್ಲಿ ತಮಿಳು ಮೂಲದ ಸನ್ ನೆಟ್‌ವರ್ಕ್ ಸಂಸ್ಥೆಯು ಜೂನ್ ತಿಂಗಳಲ್ಲಿ

ಕನ್ನಡದ ಮೊಟ್ಟ ಮೊದಲ ಖಾಸಗಿ ಚಾನೆಲ್ ಆಗಿ **ಉದಯ ಟಿವಿ**ಯನ್ನು ಆರಂಭಿಸಲಾಯಿತು. ನಂತರ ಇದೇ ಸಂಸ್ಥೆಯು **ಉಷೆ** ಹೆಸರಿನಲ್ಲಿ ಮತ್ತೊಂದು ವಾಹಿನಿಯನ್ನು ಶುರುಮಾಡಿ, ಸಂಪೂರ್ಣ ಮನರಂಜನೆ ಮತ್ತು ಚಲನಚಿತ್ರಗಳನ್ನು ಪ್ರಸಾರ ಮಾಡುವುದಕ್ಕಾಗಿ ಮೀಸಲಿಟ್ಟಿತು.

ಉತ್ತರ ಭಾರತದತ್ತ ಜೀ, ಸೋನಿಯಂತಹ ರಾಷ್ಟ್ರೀಯ ಮಾಧ್ಯಮಗಳು ಪ್ರಾದೇಶಿಕ ನ್ಯೂಸ್ ಚಾನೆಲ್ ಮಾಡುವ ಆಲೋಚನೆಯನ್ನು ಅರಿತ ಸನ್‌ನೆಟ್‌ವರ್ಕ್ ಸಂಸ್ಥೆಯ ಮುಖ್ಯಸ್ಥರು ಕನ್ನಡದಲ್ಲಿ ಮೊದಲ ಪ್ರಯೋಗ ಅನ್ನುವಂತೆ ಸುದ್ದಿ ವಾಹಿನಿಯನ್ನು ಶುರುಮಾಡಲು ಮುಂದಾದರು. ದಿನಕ್ಕೆ 18 ಗಂಟೆಗಳ ಕಾಲ ಸುದ್ದಿ ಪ್ರಸಾರ ಮಾಡುವ **ಉದಯ ನ್ಯೂಸ್** ಚಾನೆಲ್ ಪ್ರಾರಂಭವಾಯಿತು. ಆಗ ಕರ್ನಾಟಕದಲ್ಲಿ ಹೆಸರಾಂತ ನಟ ಡಾ.ರಾಜ್‌ಕುಮಾರ್ ಅಪಹರಣವಾಗಿತ್ತು. ಕಾಡುಗಳ್ಳ ವೀರಪ್ಪನ್ ಮೇರುನಟನನ್ನು ಅಪಹರಿಸಿದ್ದ, ಇಂಥದ್ದೊಂದು ಘಟನೆಯನ್ನು ಬಳಸಿಕೊಂಡು ಉದಯ ನ್ಯೂಸ್ ಸಾಕಷ್ಟು ಜನರಿಗೆ ತಲುಪುವಲ್ಲಿ ಯಶಸ್ಸು ಆಯಿತು.

ನಂತರ ಕನ್ನಡದಲ್ಲಿ ಶುರುವಾದ ಮತ್ತೊಂದು ಚಾನೆಲ್ **ಈಟಿವಿ ಕನ್ನಡ**. ಇದು ಹೈದರಾಬಾದ್‌ನ ರಾಮೋಜಿರಾವ್ ಒಡೆತನದ ವಾಹಿನಿ. ಹೈದರಾಬಾದ್‌ನಲ್ಲಿ ಕಚೇರಿ ತೆಗೆದು 2000 ಇಸವಿಯಲ್ಲಿ ಮನರಂಜನೆ ಜೊತೆಗೆ ಸುದ್ದಿಯನ್ನೂ ಬೆರೆಸಿ ನೀಡುವ ವಾಹಿನಿ ಆಯಿತು. ಆಕರ್ಷಕ ಕಾರ್ಯಕ್ರಮಗಳಿಂದಾಗಿ ಜನರ ಗಮನ ಸೆಳೆದ ಈ ವಾಹಿನಿಯಲ್ಲಿ ಪ್ರತಿ ಒಂದು ಗಂಟೆಗೊಮ್ಮೆ ಸುದ್ದಿಯನ್ನೂ ಕೊಡಲಾಗುತ್ತಿತ್ತು. ಪ್ರತಿ ಗಂಟೆಗೊಮ್ಮೆ 5 ನಿಮಿಷಗಳ ಅವಧಿಯ ಸುದ್ದಿ ಬುಲೆಟಿನ್ ಇದರ ಜೊತೆ ರಾಷ್ಟ್ರೀಯ ಅಗ್ರವಾರ್ತೆ, ಕನ್ನಡನಾಡಿ ಇತ್ಯಾದಿಗಳ ಜೊತೆಗೆ ದೃಶ್ಯಾತ್ಮಕ ಸುದ್ದಿಗಳಿಗೆ ಒಂದು ಹೊಸ ಆಯಾಮ ದೊರೆಯಿತು. ಇದೇ ಸಮಯದಲ್ಲಿ ಸುಪ್ರಭಾತ ಮತ್ತು ಕಾವೇರಿ ಎಂಬ ಎರಡು ವಾಹಿನಿಗಳು ಕನ್ನಡದಲ್ಲಿ ಆರಂಭಗೊಂಡರೂ ಕೆಲವೇ ತಿಂಗಳಲ್ಲಿ ಅವುಗಳನ್ನು ಮುಚ್ಚಬೇಕಾಯಿತು. ಕಾವೇರಿ ಮತ್ತು ಸುಪ್ರಭಾತ ವಾಹಿನಿಗಳ ಕಾಲಘಟ್ಟದಲ್ಲಿ ದೃಶ್ಯ ಮಾಧ್ಯಮದ ಮಾರುಕಟ್ಟೆ ಕೂಡಾ ಈಗಿನಷ್ಟು ಪ್ರಗತಿಯಾಗಿರಲಿಲ್ಲ ಹಾಗಾಗಿ ಚಾನೆಲ್ ಮುಚ್ಚಲು ಇದೇ ಕಾರಣ ಎನ್ನಲಾಗುತ್ತಿದೆ. ಉದಯ ಟಿವಿ ಮತ್ತು ಈಟಿವಿ ಮನರಂಜನಾ ವಾಹಿನಿಗಳು ಮನರಂಜನಾ ಕ್ಷೇತ್ರಗಳಲ್ಲಿ ಗೆಲುವು ಕಾಣುತ್ತಿದ್ದಂತೆಯೇ, ಹಿಂದಿಯ ಮನರಂಜನಾ ಮಾರುಕಟ್ಟೆಯಲ್ಲಿ ಬಹಳ ಪ್ರಭಾವಶಾಲಿಯಾಗಿದ್ದ **ಜೀ ಸಮೂಹ** ಸಂಸ್ಥೆಯು **ಜೀ ಕನ್ನಡ** ಎಂಬ ಕನ್ನಡದಲ್ಲೊಂದು ವಾಹಿನಿ ಆರಂಭಿಸಿತು. ಇನ್ನು 2006ರಲ್ಲಿ **ಟಿವಿ9** ಕನ್ನಡ ಟೆಲಿವಿಷನ್ ರಂಗಕ್ಕೆ ಪ್ರವೇಶಿಸುವುದರೊಂದಿಗೆ ಕನ್ನಡದಲ್ಲಿ ಸುದ್ದಿ ವಾಹಿನಿಗಳ ಹೊಸ

ಯುಗವೊಂದು ಆರಂಭವಾಯಿತು. ಟಿವಿ 9 ಅಬ್ಬರದ ನಡುವೆಯೇ ಏಷ್ಯಾನೆಟ್ ಸಂಸ್ಥೆಯು **ಸುವರ್ಣ** ಎಂಬ ಮನರಂಜನಾ ವಾಹಿನಿಯನ್ನು ಕನ್ನಡದಲ್ಲಿ ಶುರು ಮಾಡಿತು. ಏಷ್ಯಾನೆಟ್ ಮನರಂಜನಾ ವಾಹಿನಿಗಳ ಬಳಗವೇ ವಾರ್ತಾ ವಾಹಿನಿಯೊಂದನ್ನು ಪ್ರತ್ಯೇಕವಾಗಿ ಶುರು ಮಾಡಿತು. 2008ರಲ್ಲಿ ರೂಪುಗೊಂಡಿದ್ದು **ಸುವರ್ಣ ನ್ಯೂಸ್ 24/7**. ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಕೂಡ ಮನರಂಜನೆ ಮತ್ತು ಸುದ್ದಿಗಳೆರಡನ್ನೂ ಗಮನದಲ್ಲಿ ಇಟ್ಟುಕೊಂಡು ತಮ್ಮ ಪತ್ನಿ ಅನಿತಾ ಕುಮಾರಸ್ವಾಮಿ ಒಡೆತನದಲ್ಲಿ 2007ರಲ್ಲಿ **ಕಸ್ತೂರಿ ಚಾನೆಲ್** ಪ್ರಾರಂಭಿಸಿದರು. ಈಗ ಅದು ಒಂದು ಪ್ರತ್ಯೇಕ ಸುದ್ದಿ ಚಾನೆಲ್ ಆಗಿಯೂ ಕೆಲಸ ಮಾಡುತ್ತಿದೆ. ಬೆಳಗಾವಿ ಜಿಲ್ಲೆಯ ಪ್ರಭಾವಶಾಲಿ ರಾಜಕಾರಿಣಿ–ಉದ್ಯಮಿ ಸತೀಶ್ ಜಾರಕಿಹೊಳಿ ಒಡೆತನದಲ್ಲಿ **ಸಮಯ** ಸುದ್ದಿ ಚಾನೆಲ್ ಹೊಸ ಮನ್ವಂತರವನ್ನೇ ಸೃಷ್ಟಿ ಮಾಡಿತು. ವಾಹಿನಿಗಳ ಸಿದ್ಧ ಮಾದರಿಯನ್ನು ಮುರಿಯುವ ಎಲ್ಲ ಆಲೋಚನೆಗಳು ಈ ತಂಡದಲ್ಲಿದ್ದವು. ಹಾಗಾಗಿಯೇ ಬೆಂಗಳೂರಿನ ಹೊರತಾಗಿಯೂ ಅದು ತನ್ನ ಕಚೇರಿಯನ್ನು ಆರಂಭಿಸಲು ಯೋಚಿಸಿತು. ಹೊಸ ಪ್ರತಿಭೆಗಳಿಗೆ ಮಣೆ ಹಾಕುವ ದೃಷ್ಟಿಯಿಂದ ತಾನೇ ಎರಡು ತಿಂಗಳ ಕಾಲ ಸಂಬಳ ಸಹಿತ ತರಬೇತಿ ನೀಡಿತು. ಆದರೆ, ಸತೀಶ್ ಜಾರಕಿಹೊಳಿ ತುಂಬಾ ದಿನಗಳ ಕಾಲ ಈ ವಾಹಿನಿಯನ್ನು ನಡೆಸಲು ಆಗಲಿಲ್ಲ. ಹಾಗಾಗಿ ಅದರ ಮಾಲೀಕತ್ವ ಮತ್ತೊಬ್ಬ ರಾಜಕಾರಣಿ ಮುರುಗೇಶ್ ನಿರಾಣಿ ಪಾಲಾಯಿತು. ಹೆಚ್.ಡಿ.ಕುಮಾರಸ್ವಾಮಿ, ಸತೀಶ್ ಜಾರಕಿಹೊಳಿ, ಮುರುಗೇಶ್ ನಿರಾಣಿಯಂತಹ ರಾಜಕಾರಣಿಗಳು ಸುದ್ದಿ ವಾಹಿನಿಗಳ ಮಾಲೀಕರು ಆಗುತ್ತಿದ್ದಂತೆಯೇ ಮತ್ತೊಬ್ಬ ರಾಜಕಾರಣಿ ಬಳ್ಳಾರಿ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು **ಜನಶ್ರೀ** ಎಂಬ ಸುದ್ದಿ ವಾಹಿನಿಯನ್ನು 2011ರಲ್ಲಿ ಪ್ರಾರಂಭಿಸಿದರು. ಈ ವಾಹಿನಿ ಕೂಡ ನಂತರ ಹಲವು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಮುದ್ರಣ ಮಾಧ್ಯಮದಲ್ಲಿ ಸಾಕಷ್ಟು ಅನುಭವ ಹೊಂದಿದ್ದ ಪತ್ರಕರ್ತ ಎಚ್.ಆರ್ ರಂಗನಾಥ್ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾಣಿಸಿಕೊಂಡರು. ಮೊದಲು ಇವರು ಕಾಣಿಸಿಕೊಂಡಿದ್ದು ಸುವರ್ಣ ಸುದ್ದಿವಾಹಿನಿಯ ಮುಖ್ಯಸ್ಥರಾಗಿ. ಅಲ್ಲಿಂದ ಅವರೇ 2012ರಲ್ಲಿ **ಪಬ್ಲಿಕ್ ಟಿವಿ** ಎಂಬ ಸುದ್ದಿವಾಹಿನಿ ಶುರು ಮಾಡಿದರು.

ಸದ್ಯ ಈಗ ಕನ್ನಡದಲ್ಲಿ ಬಿಟಿವಿ, ಪ್ರಜಾಟಿವಿ, ಸುದ್ದಿಟಿವಿ, ರಾಜ್ ನ್ಯೂಸ್, ದಿಗ್ವಿಜಯ ಮತ್ತು ಇನ್ನೂ ಹೊಸ ನಾಲ್ಕು ಚಾನೆಲ್‌ಗಳು ಮುಂದಿನ ದಿನಗಳಲ್ಲಿ ತಮ್ಮ ಕೆಲಸವನ್ನು ಆರಂಭಿಸಲಿವೆ. ಇವು ಈ ನಾಡಿನ ಪ್ರಮುಖ ಸುದ್ದಿ ವಾಹಿನಿಗಳು.

ವಿದ್ಯುನ್ಮಾನ ಮಾಧ್ಯಮದ ಚರಿತ್ರೆಯನ್ನು ಗುರುತಿಸುವ ಸಂದರ್ಭದಲ್ಲಿ ಹಲವು ಅಂಶಗಳು ಗೋಚರಿಸುತ್ತವೆ. ಮುಖ್ಯವಾಗಿ ಅಂತಾರಾಷ್ಟ್ರೀಯ ಚಾನೆಲ್‌ಗಳಿಂದ ಹಿಡಿದು ರಾಷ್ಟ್ರೀಯ, ರಾಜ್ಯ ಮಟ್ಟದ ಚಾನೆಲ್‌ಗಳು, ಸ್ಥಳೀಯ ಚಾನೆಲ್‌ಗಳ ಇತಿಹಾಸವನ್ನು ನೋಡಿದರೆ ಇಲ್ಲಿ ಎಲ್ಲಿಯೂ ಮಹಿಳೆಯರು ಮಾಲೀಕತ್ವದ ಸ್ಥಾನದಲ್ಲಿ ಕಂಡುಬಂದಿಲ್ಲ. ಬದಲಾಗಿ ಮಹಿಳೆಯರನ್ನು ಕೇವಲ ವರದಿಗಾರರನ್ನಾಗಿ ಅಥವಾ ಉದ್ಯೋಗಿಗಳನ್ನಾಗಿ ಗುರುತಿಸಲಾಗಿದೆ. ಒಡೆತನ ಎಂಬ ಪರಿಕಲ್ಪನೆ ಪುರುಷ ಕೇಂದ್ರಿತವಾಗಿರುವುದು ಎಂಬುದು ಈ ಅಂಶಗಳಿಂದ ದೃಢೀಕರಣಗೊಳ್ಳುತ್ತದೆ.

ಉಲ್ಲೇಖಗಳು :

1. ಎಂ.ಜಯರಾಮ್ ಅಡಿಗ ಮತ್ತು ಡಿ.ಯಶೋದಾ (ಸಂ), 2013, ಪತ್ರಕರ್ತೆಯ ಪುರಾವೆಗಳು, ಪ್ರೆಸ್‌ಕ್ಲಬ್ ಪ್ರಕಾಶನ, ಬೆಂಗಳೂರು

2. ಪ್ರೊ.ಎಂ.ಎಚ್.ಕೃಷ್ಣಯ್ಯ, ಡಾ.ವಿಜಯಾ (ಸಂಪಾದನೆ) 2007, ಬೆಂಗಳೂರು ದರ್ಶನ ಸಂಪುಟ 3, ಉದಯಭಾನು ಕಲಾ ಸಂಘ, ಬೆಂಗಳೂರು

ಅಧ್ಯಾಯ : 4

ವಿದ್ಯುನ್ಮಾನ ಮಾಧ್ಯಮ ಉದ್ಯಮವಾದಾಗ

4.1 ಮಾಧ್ಯಮದ ಚಹರೆ

42. ಮಾಧ್ಯಮ ಉದ್ಯಮವಾದ ಸ್ವರೂಪ

4.3 ವಿದ್ಯುನ್ಮಾನ ಮಾಧ್ಯಮ ಉದ್ಯವಾದಾಗ ಮಹಿಳಾ ಅಸ್ಮಿತೆ

ಅಧ್ಯಾಯ : 4

ವಿದ್ಯುನ್ಮಾನ ಮಾಧ್ಯಮ ಉದ್ಯಮವಾದಾಗ

ವಿದ್ಯುನ್ಮಾನ ಮಾಧ್ಯಮವು ಎಲ್ಲ ಮಾಧ್ಯಮಗಳಿಗಿಂತಲೂ ಹೆಚ್ಚು ಜನಪ್ರಿಯ ಹಾಗೂ ಜನರನ್ನು ತನ್ನ ಪ್ರಭಾವಕ್ಕೆ ಬಹುಬೇಗ ಒಳಪಡುವಂತೆ ಮಾಡುವ ಶಕ್ತಿಯುತ ಮಾಧ್ಯಮ. ಈ ಮಾಧ್ಯಮ ಎಲ್ಲ ವರ್ಗದ ಜನರನ್ನು ಒಳಗೊಂಡಿದೆ. ಜನರ ವರ್ತನೆಗಳನ್ನು, ರೀತಿ, ನೀತಿಗಳನ್ನು ಪ್ರತಿಬಿಂಬಿಸುವ ದೃಶ್ಯ ಮಾಧ್ಯಮ, ಸಮಾಜದಲ್ಲಿ ರೂಢಿಗತವಾದ ಮಾದರಿಗಳನ್ನು ಯಥಾವತ್ತಾಗಿ ಅನುಕರಿಸುತ್ತದೆ ಅಥವಾ ಅದರ ಪ್ರಯತ್ನದಲ್ಲಿರುತ್ತದೆ. ಸಮಾಜದಲ್ಲಿ ಬೇರುಬಿಟ್ಟಿರುವ ಲಿಂಗಾಧಾರಿತ ವಿಭಜನೆಯೂ ಅದರಲ್ಲೊಂದು. ಗಂಡು ಹೆಣ್ಣು ಸ್ವಭಾವಗಳನ್ನು ಭಿನ್ನವೆಂದು ತಿಳಿಸಿ, ಅವುಗಳ ವರ್ತನೆಯು ಹೀಗೆ ಇರಬೇಕೆಂಬ ನಿರ್ಬಂಧವನ್ನು ರೂಢಿಸಿಕೊಂಡು ಬಂದ ಸಮಾಜದ ಪ್ರತಿಬಿಂಬವನ್ನೇ ಈ ಮಾಧ್ಯಮದಲ್ಲಿ ಕಾಣಲಾಗುತ್ತದೆ. ಪುಸ್ತಕ ಓದಲು ಬಾರದ ಸಹಸ್ರಾರು ಜನರಿಗೆ ಈ ಮಾಧ್ಯಮಗಳು ತುಂಬಾ ಸಹಕಾರಿಯಾಗಿವೆ. ಮಾಧ್ಯಮಗಳ ಪ್ರಮುಖ ಜವಾಬ್ದಾರಿಯೆಂದರೆ ಯಾವುದೇ ವಿಷಯವನ್ನು ಕುರಿತಂತೆ ವಿಭಿನ್ನ ದೃಷ್ಟಿಕೋನಗಳಿಗೆ ಜನರಿಗೆ ತಲುಪುವಂಥ ಅವಕಾಶವನ್ನು ನೀಡುವುದು. ಆದರೆ, ಇಂದು ಹಣಗಳಿಕೆ, ಅಬ್ಬರದ ಪ್ರಚಾರ, ಮಾರುಕಟ್ಟೆಯ ಬೇಡಿಕೆಗಳನ್ನು ಪೂರೈಸುವುದು ಇವೇ ಇಂದು ಮಾಧ್ಯಮಗಳ ಪ್ರಮುಖ ಗುರಿಯಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಕೀಳು ಅಭಿರುಚಿಯನ್ನುಳ್ಳ ಸುದ್ದಿಯನ್ನು ಬಿತ್ತರಿಸುವುದು ಮಾಧ್ಯಮ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಬಿಟ್ಟಿದೆ.

ಸಮೂಹ ಮಾಧ್ಯಮಗಳ ಸಂದರ್ಭದಲ್ಲಿ ಮಹಿಳಾ ಅಧ್ಯಯನ ಎರಡು ಪ್ರಶ್ನೆಗಳನ್ನು ಪ್ರಧಾನವಾಗಿ ಎತ್ತುತ್ತದೆ. ಸಮೂಹ ಮಾಧ್ಯಮವನ್ನೊಂದು ಉದ್ಯಮವಾಗಿ ಪರಿಗಣಿಸುತ್ತಾ, ಅಲ್ಲಿ ಮಹಿಳೆಯರಿಗೆ ದೊರಕುವ ಮತ್ತು ದೊರಕದಿರುವ ಅವಕಾಶಗಳನ್ನು ಕುರಿತಾದ ಪ್ರಶ್ನೆ. ಎರಡು, ಸಮೂಹ ಮಾಧ್ಯಮವನ್ನೊಂದು ಸಾಂಸ್ಕೃತಿಕ ಸಂಚಲನೆಯ ಘಟಕವಾಗಿ ಭಾವಿಸಿ, ಅಲ್ಲಿ ಮಹಿಳೆಯರ ದುರ್ಬಳಕೆ ಆಗುತ್ತಿರುವುದರ ಪ್ರಶ್ನೆ. ಆದರೆ, ಈಗಿನ ಬಂಡವಾಳಶಾಹಿ ವ್ಯವಸ್ಥೆಯು ಮೇಲಿನೆರಡು ಪ್ರಶ್ನೆಗಳನ್ನು ಒಟ್ಟೊಟ್ಟಿಗೆ ತಳಕು ಹಾಕಿಕೊಂಡು ತನಗೆ ಅನುಕೂಲವಾಗುವಂತೆ

ಬಳಸಿಕೊಳ್ಳುವ ತಂತ್ರಗಾರಿಕೆಯ ಮೂಲಕ ಇಂತಹ ಪ್ರಶ್ನೆಗಳನ್ನೇ ಇಡಿಯಾಗಿ ನುಂಗಿ ನೀರು ಕುಡಿಯುವ ಕಾರ್ಯದಲ್ಲಿ ನಿರತವಾಗಿದೆ. ಮಹಿಳೆಯರನ್ನು ಒಂದು ಉಪಭೋಗಿ ವಸ್ತುವಾಗಿ ಬಳಸಿಕೊಳ್ಳುವ ಸಂದರ್ಭವನ್ನು ಸೃಷ್ಟಿಸಿ, ಅದನ್ನೇ ಅವಕಾಶಗಳೆಂದು ಕರೆದು ನಂಬಿಸುತ್ತಿವೆ. ಅಲ್ಲದೇ, ವ್ಯವಸ್ಥೆಯೂ ನಿರ್ಮಿಸುತ್ತಿರುವ ಇಂತಹ ಅವಕಾಶಗಳನ್ನು ಅತ್ಯುತ್ಸಾಹದಿಂದ ತಬ್ಬಿಕೊಳ್ಳುತ್ತಿರುವ ಪ್ರಜ್ಞಾವಂತ ಹೆಣ್ಣು ಮಕ್ಕಳ ದೊಡ್ಡ ದಂಡು ಈ ಸಂಗತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಿದೆ. ಹೆಣ್ಣಿನ ಬಳಕೆಯನ್ನೇ ಆಕೆಗೆ ನೀಡುವ ಅವಕಾಶವೆಂದು ಪ್ರತಿಪಾದಿಸುವ ವ್ಯವಸ್ಥೆ, ಈ ಅವಕಾಶದ ಮೂಲಕವೇ ಸೀಮೋಲ್ಲಂಘನ ಮಾಡಲು ಹೊರಟಿರುವ ಆಧುನಿಕ ಮಹಿಳೆ ಈ ಇಬ್ಬರ ಪೈಪೋಟಿಯ ಬೆಳವಣಿಗೆಯಿಂದಾಗಿ ಸಮೂಹ ಮಾಧ್ಯಮ ಮತ್ತು ಮಹಿಳೆ ಎಂಬ ಸಂಗತಿ ಈ ಹೊತ್ತು ಅತ್ಯಂತ ಸಂಕೀರ್ಣ ಸ್ವರೂಪವನ್ನು ತಾಳುತ್ತದೆ.

ಮಾಧ್ಯಮ ಅಧ್ಯಯನ ಸಾಂಸ್ಕೃತಿಕ ಅಧ್ಯಯನದೊಂದಿಗೆ ನಿಕಟ ಸಂಬಂಧ ಹೊಂದಿದೆ. ಜಾಗತಿಕ ಮಹಾಯುದ್ಧದ ನಂತರ ಕೈಗಾರೀಕರಣ, ಬಂಡವಾಳಶಾಹಿ, ಸಾಮಾಜಿಕ ರಚನೆ, ಸಂವಹನ ಪ್ರತಿನಿಧೀಕರಣಗಳ ಪರಿಣಾಮದಿಂದ ಮಾಧ್ಯಮ ಅಧ್ಯಯನ ಬೆಳಕಿಗೆ ಬಂದಿದ್ದು, ಇದು ಸಾಂಪ್ರದಾಯಿಕ ಅಧ್ಯಯನ ಶಿಸ್ತುಗಳಾದ ಸಾಹಿತ್ಯ ಅಧ್ಯಯನ ಮತ್ತು ಇತಿಹಾಸ ಅಧ್ಯಯನಗಳಿಗಿಂತ ಭಿನ್ನವಾಗಿದೆ. ಹಾಗೂ ಇವುಗಳಿಗಿಂತ ಮೌಲ್ಯನಿರಪೇಕ್ಷೆ ಪ್ರತಿಕ್ರಿಯೆಯನ್ನೊಳಗೊಂಡದ್ದಾಗಿದೆ. ಇಲ್ಲಿ ಮುಖ್ಯವಾಗಿ ಹೇಳಬಯಸುವುದೆಂದರೆ, ಸಾಹಿತ್ಯ ಕೇವಲ ವ್ಯಕ್ತಿಯ ಅನುಭವದ ಅಭಿವ್ಯಕ್ತಿಯಾಗಿ ಎಲ್ಲ ಸಮಾಜವನ್ನು ಪ್ರತಿನಿಧಿಸುವುದಿಲ್ಲ. ಆದರೆ, ಮಾಧ್ಯಮ ಎಲ್ಲರನ್ನೂ ಪ್ರತಿನಿಧಿಸುತ್ತದೆ. ಸಮಾಜದ ಅಂಚಿನಲ್ಲಿರುವುದನ್ನು ಗುರುತಿಸುತ್ತದೆ. ಹಾಗೂ ಸಮಾಜದಲ್ಲಿರುವುದನ್ನು ತೆಗೆದುಕೊಳ್ಳುವ ಮತ್ತು ಕೊಡುವ ಕೆಲಸವನ್ನು ಮಾಡುತ್ತಾ, ಸಮಷ್ಟಿಯದಾಗಿರುತ್ತದೆ. ದಿನೇ ದಿನೇ ಬದಲಾವಣೆಗಳನ್ನು ಬಹುಬೇಗ ಗ್ರಹಿಸುತ್ತದೆ. ಮತ್ತು ಸಮಾಜದ ಮೇಲೆ ಅತೀ ಶೀಘ್ರವಾಗಿ ಪರಿಣಾಮ ಬೀರುತ್ತದೆ. ಸಾಹಿತ್ಯ ರೂಪಾತ್ಮಕವಾಗಿ ಚಿರಂತನವಾಗಿದ್ದು ಸಮಾಜವನ್ನು ಮುಟ್ಟಲು ಸ್ವಲ್ಪ ಕಾಲವನ್ನು ತೆಗೆದುಕೊಳ್ಳುತ್ತದೆ. ಆದರೆ, ಸಮೂಹ ಮಾಧ್ಯಮ ವಾಚ್ಯವಾಗಿ ನೇರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾಧ್ಯಮ ಅಧ್ಯಯನ ಇತರ ಅಧ್ಯಯನ ಶಿಸ್ತುಗಳಿಗಿಂತ ಭಿನ್ನವಾಗಿದೆ. (ಡಾ.ಬಿ.ಜಿ.ಕಲಾವತಿ, 2010, ಮಾಧ್ಯಮ ಮತ್ತು ಮಹಿಳೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ 2,3) ಈ ಎಲ್ಲ ಕಾರಣಗಳಿಂದಾಗಿ ಇಂದು ಅದು ಬೃಹತ್ ಉದ್ಯಮವಾಗಿಯೂ ತಲೆಯೆತ್ತಿದೆ. ಕಾರ್ಪೋರೇಟ್ ಕಂಪೆನಿಗಳು ಮಾಧ್ಯಮದ ಪಾಲುಗಾರಿಕೆಯನ್ನು ಬಯಸಿ ಬರುತ್ತಿವೆ.

ಸಮೂಹ ಮಾಧ್ಯಮಗಳು ಇಂದು ಇಡೀ ಜಗತ್ತನ್ನು ಕಿರಿದಾಗಿಸಿದೆ. ಎರಡು ದಶಕಗಳಲ್ಲಿದ್ದ ಸ್ಥಿತಿಗೂ ಮತ್ತು ಈ ಹೊತ್ತಿನ ಮಾಧ್ಯಮ ಬೆಳವಣಿಗೆಯನ್ನು ಅವಲೋಕಿಸಿದಾಗ ಅಲ್ಲಾಗಿರುವ ಬದಲಾವಣೆಯು ಎಂಥವರನ್ನೂ ಮೂಕವಿಸ್ಮಿತರನ್ನಾಗಿ ಮಾಡುತ್ತದೆ. ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದ ವೇಳೆ, ಅಂದರೆ 1991ರಲ್ಲಿ ಭಾರತೀಯ ಮಾರುಕಟ್ಟೆಯಲ್ಲಿ ವಿದೇಶಿ ಕಂಪೆನಿಗಳಿಗೆ ಮುಕ್ತ ಪ್ರವೇಶ ಕಲ್ಪಿಸಲಾಯಿತು. ಈ ಕಾರಣದಿಂದಾಗಿ ಸಮೂಹ ಮಾಧ್ಯಮಗಳಲ್ಲಿ ವ್ಯಾಪಕ ಬದಲಾವಣೆ ಆಗಿದ್ದನ್ನು ಕಾಣಬಹುದು.

ಇಂತಹ ಬಹುದೊಡ್ಡ ಬದಲಾವಣೆ ಆಗಿರುವುದಕ್ಕೆ ಮತ್ತೊಂದು ಕಾರಣ ಭಾರತದಲ್ಲಿನ ಪ್ರಜಾತಂತ್ರ ವ್ಯವಸ್ಥೆ. ಇಲ್ಲಿನ ಮಾಧ್ಯಮಗಳಲ್ಲಿ ಬಂಡವಾಳ ಹೂಡಲು ಮತ್ತು ಕಾರ್ಯಕ್ರಮಗಳನ್ನು ನಿರ್ಮಿಸಲು ಸ್ವತಂತ್ರವಾಗಿರುವ ವಾತಾವರಣವಿದೆ ಎಂದು ಹಲವು ವರ್ಷಗಳ ಹಿಂದೆಯೇ ನ್ಯೂಸ್ ಕಾರ್ಪೋರೇಷನ್ ಸಂಸ್ಥೆಯ ಮುಖ್ಯಸ್ಥ ರೂಪರ್ಟ್ ಮುರ್ಡೋಕ್ ಹೇಳಿಯಾಗಿದೆ. ಹಾಗಾಗಿ ವಿದೇಶಿ ಕಾರ್ಪೋರೇಟ್ ಸಂಸ್ಥೆಗಳು ಕೂಡ ಭಾರತದ ಮಾಧ್ಯಮಗಳ ಮೇಲೆ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹೂಡಿವೆ. ನೇರವಾಗಿಯೇ ಅವು ತಮ್ಮ ಕಾರ್ಯಚಟುವಟಿಕೆಯನ್ನೂ ಆರಂಭಿಸಿವೆ.

ಇವತ್ತು ಟೆಲಿವಿಷನ್ ಮಾಧ್ಯಮ ಕೇವಲ ಉದ್ಯಮವಾಗಿಯೂ ಉಳಿದುಕೊಂಡಿಲ್ಲ. ಮುಕ್ತ ಆರ್ಥಿಕ ನೀತಿ ಮತ್ತು ಉಪಭೋಗ ಸಂಸ್ಕೃತಿಯ ಒಂದು ಪರೋಕ್ಷ ಆಯುಧ ಕೂಡ ಆಗಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಮೊದಲು ಮಾಧ್ಯಮ ಎಂದರೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ.

4.1 ಮಾಧ್ಯಮದ ಚಹರೆ

ಮನುಷ್ಯರು ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಮೊದಲು ಕಂಡುಕೊಂಡಿದ್ದು ಸನ್ನೆ ಮಾತುಗಾರಿಕೆಯನ್ನು. ಹಾಗಾಗಿ ಅವರ ಭಾಷೆ ಸಂಜ್ಞೆಯಾಗಿತ್ತು. ಪುರಾತನ ಕಾಲದಲ್ಲಿ ಮಾಧ್ಯಮವಾಗಿ ನಗಾರಿ, ಗಂಟೆಗಳು, ಡಂಗರು ಇರುತ್ತಿದ್ದವು. ನಂತರದ ದಿನಗಳಲ್ಲಿ ಸಾಹಿತ್ಯ, ಜನಪದ, ರಂಗಭೂಮಿ ಮಾಧ್ಯಮಗಳಾಗಿ ಮನುಕುಲದ ಸಹಾಯಕ್ಕೆ ನಿಂತವು. ಕೆಲ ಶತಮಾನಗಳಿಂದ ವೃತ್ತಪತ್ರಿಕೆಗಳು ಅಭಿವ್ಯಕ್ತಿಯ ಕೊಂಡಿಗಳಾಗಿದ್ದವು. ತಂತ್ರಜ್ಞಾನ ಬೆಳೆದಂತೆ ಬಾನುಲಿ, ದೂರದರ್ಶನ, ಕಂಪ್ಯೂಟರ್, ಇಂಟರ್‌ನೆಟ್, ಮೊಬೈಲ್, ಫೇಸ್‌ಬುಕ್ ಹೀಗೆ ಅನೇಕ ಸಾಮಾಜಿಕ ಜಾಲತಾಣಗಳು ಇಂದು ಒಟ್ಟಾಗಿ ಸಮೂಹ ಮಾಧ್ಯಮಗಳಾಗಿವೆ.

ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದಂತೆಯೇ ಪ್ರಜಾಪ್ರಭುತ್ವದ ಮತ್ತೊಂದು ಪ್ರಮುಖ ಅಂಗ ಎಂದು ಈ ಮಾಧ್ಯಮಕ್ಕೆ ಕರೆಯಲಾಗುತ್ತದೆ. ಹಾಗಾಗಿಯೇ ಇದನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದೇ ಮಾನ್ಯತೆ ನೀಡಲಾಗಿದೆ. ಇವುಗಳಲ್ಲಿ ಹಲವು ವಿಧಗಳಿರುವುದು ಕಂಡುಬರುತ್ತದೆ.

1. **ಮುದ್ರಣ ಮಾಧ್ಯಮ** : ಮುದ್ರಣ ಮಾಧ್ಯಮದಲ್ಲಿ ಸುದ್ದಿ ಪ್ರಧಾನ, ವಿಷಯ ಪ್ರಧಾನ ಮತ್ತು ಸಾಹಿತ್ಯ ಪ್ರಧಾನವಾಗಿರುವುದನ್ನು ಕಾಣಬಹುದು. ಭಾರತದ ಮುದ್ರಣ ಮಾಧ್ಯಮಕ್ಕೆ ಸುಮಾರು 234 ವರ್ಷಗಳ ಇತಿಹಾಸವಿದೆ. ಜೇಮ್ಸ್ ಆಗಸ್ಟಸ್ ಹಿಕ್ಕಿ 1780ರಲ್ಲಿ 'ಬೆಂಗಾಲ್ ಗೆಜೆಟ್' ಎಂಬ ಪತ್ರಿಕೆಯ ಮೂಲಕ ಪತ್ರಿಕೋದ್ಯಮವನ್ನು ಪ್ರಾರಂಭಿಸಿದರು. ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ತಮ್ಮದೇ ಆದ ಪತ್ರಿಕೆ ಶುರು ಮಾಡುವ ಮೂಲಕ, ರಾಜರಾಂ ಮೋಹನ್ ರಾಯ್ ಭಾರತೀಯ ಭಾಷಾ ಪತ್ರಿಕೋದ್ಯಮದ ಪಿತಾಮಹ ಅನಿಸಿಕೊಂಡರು. ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಜನರನ್ನು ಸಂಘಟಿಸಲು ಸ್ವಾತಂತ್ರ್ಯ ಸೇನಾನಿಗಳೆಲ್ಲ ಪತ್ರಿಕೋದ್ಯಮವನ್ನು ಸಮರ್ಥವಾಗಿ ದುಡಿಸಿಕೊಂಡರು.

1857ರಲ್ಲಿ ಭಾರತೀಯ ಸ್ವಾತಂತ್ರ್ಯದ ಮೊದಲ ಯುದ್ಧವಾದ ಸಿಪಾಯಿ ದಂಗೆಯ ವೇಳೆ ಪತ್ರಿಕೋದ್ಯಮ ಹೊಸ ತಿರುವು ಪಡೆದುಕೊಂಡಿತು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ನಾಯಕರು ಪತ್ರಿಕೋದ್ಯಮವನ್ನು ಗಂಭೀರವಾಗಿ ತೆಗೆದುಕೊಂಡು ರಾಷ್ಟ್ರೀಯತೆ ಭಾವನೆ ಮೂಡಿಸುವಲ್ಲಿ ಯಶಸ್ಸು ಕಂಡರು. 1975–77ರಲ್ಲಿಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಭಾರತೀಯ ಪತ್ರಿಕೆಗಳು ಮುಂಚೂಣೆಯಲ್ಲಿ ನಿಂತಿದ್ದನ್ನು ಮರೆಯುವಂತಿಲ್ಲ.

ಹಾಗೆಯೇ ಕನ್ನಡದಲ್ಲಿ ಪತ್ರಿಕೋದ್ಯಮ ಶುರುವಾಗಿದ್ದು 1843 ಜುಲೈ 1ರಲ್ಲಿ. ಕ್ರಿಶ್ಚಿಯನ್ ಪಾದ್ರಿಯಾಗಿದ್ದ ರೆವರೆಂಡ್ ಹರ್ಮನ್ ಮೊಗ್ಲಿಂಗ್ "ಮಂಗಳೂರು ಸಮಾಚಾರ" ಪತ್ರಿಕೆ ಶುರು ಮಾಡುವ ಮೂಲಕ ಕನ್ನಡ ಪತ್ರಿಕೋದ್ಯಮದ ಪಿತಾಮಹ ಅನಿಸಿಕೊಂಡರು. ನಂತರದ ದಿನಗಳಲ್ಲಿ ಸಾಕಷ್ಟು ವೃತ್ತ ಪತ್ರಿಕೆಗಳು ಶುರುವಾದವು. ಸದ್ಯ ಕನ್ನಡದಲ್ಲಿ 5000ಕ್ಕೂ ಹೆಚ್ಚು ಪತ್ರಿಕೆಗಳಿವೆ.

ಜಾಗತೀಕರಣದ ಕಾರಣದಿಂದಾಗಿ ಇಂದು ಪತ್ರಿಕೆಗಳು ಗಣನೀಯವಾಗಿ ಬೆಳೆದಿವೆ. ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟವಾಗುವ ದಿನಪತ್ರಿಕೆಗಳು, ನಿಯತಕಾಲಿಕೆಗಳು ಈಗ ಎಂಬತ್ತು ಸಾವಿರ ದಾಟಿದೆ. ಇತ್ತೀಚಿನ ವರ್ಷಗಳಲ್ಲಿ

ಮುದ್ರಣ ಮಾಧ್ಯಮದಲ್ಲೂ ಸಹ ವಿದೇಶಿ ನೇರ ಬಂಡವಾಳ ಹರಿದು ಬರುತ್ತಿದೆ. ಜಾಹೀರಾತು ಆದಾಯ ಹೆಚ್ಚಳವಾಗುತ್ತಿದೆ.

ಪತ್ರಿಕೋದ್ಯಮ ಒಂದು ಕಡೆ ವೃತ್ತಿಯಾದರೆ, ಮತ್ತೊಂದು ಕಡೆ ವ್ಯಾಪಾರ. ಪತ್ರಿಕೆಯಲ್ಲಿ ಕೆಲಸ ಮಾಡುವವನು ಇದನ್ನು ವೃತ್ತಿಯಾಗಿ ಸ್ವೀಕರಿಸಿದ್ದರೆ, ಅದರ ಮಾಲೀಕನಿಗೆ ಇದೊಂದು ಉದ್ಯಮವಷ್ಟೇ. ಈ ಮಾಧ್ಯಮದಲ್ಲಿ ಕೆಲಸ ಮಾಡುವವರು ಇದನ್ನು ವೃತ್ತಿ ಎಂದು ಪರಿಗಣಿಸಿದ್ದರಿಂದ ಅವರಿಗೆ ಸಮಾಜದಲ್ಲಿ ಉನ್ನತ ಜವಾಬ್ದಾರಿಯನ್ನು ನೀಡಲಾಗಿದೆ.

2. ಬಾನುಲಿ : ರೇಡಿಯೋ ಇಂದು ಮನುಷ್ಯರು ಕೇಳಿಸಿಕೊಳ್ಳುವ ವ್ಯಾಪ್ತಿಯನ್ನು ಸಾವಿರಾರೂ ಮೈಲುಗಳಾಚೆ ವಿಸ್ತರಿಸಿದೆ. ಕಾರಣ ಇದೊಂದು ಅಗ್ಗದ ಮಾಧ್ಯಮವಾಗಿರುವುದು. ಮೊಟ್ಟ ಮೊದಲ ಬಾರಿಗೆ ರೇಡಿಯೋ ತನ್ನ ಪ್ರಸಾರವನ್ನು ಆರಂಭಿಸಿದ್ದು 1920 ಫೆಬ್ರವರಿಯಲ್ಲಿ. ಇಂಗ್ಲೆಂಡ್‌ನಲ್ಲಿ ಬ್ರಿಟಿಷ್ ಬ್ರಾಂಡ್‌ಕಾಸ್ಟಿಂಗ್ ಕಾರ್ಪೋರೇಷನ್ ನಿಯಮಿತ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಮೂಲಕ ಅಧಿಕೃತವಾಗಿ ಕಾರ್ಯಾರಂಭ ಮಾಡಿತು.

ಕ್ರಿ.ಶ 1923ರಲ್ಲಿ ಮೈಸೂರಿನಲ್ಲಿ ಭಾರತದ ಮೊದಲ ರೇಡಿಯೋ ಕೇಂದ್ರ ಶುರುವಾಗಿದ್ದು. ಹದಿಮೂರು ವರ್ಷಗಳ ನಂತರ ಕನ್ನಡದ ಮೊದಲ ಆಕಾಶವಾಣಿ ಕೇಂದ್ರ ಪ್ರಾರಂಭವಾದವು. ಸ್ವಾತಂತ್ರ್ಯ ನಂತರ ಭಾರತದ ಬೆಳವಣಿಗೆಗೆ ಈ ಮಾಧ್ಯಮ ಪ್ರಮುಖ ಪಾತ್ರ ವಹಿಸಿದ್ದನ್ನು ಅಲ್ಲಗಳೆಯುವಂತಿಲ್ಲ. ಸುದ್ದಿ, ಜನಪರ ಮಾಹಿತಿಗಳ ಜತೆಗೆ ತುರ್ತು ಪರಿಸ್ಥಿತಿಗಳಲ್ಲಿಯೂ ಅದು ತನ್ನ ಸೇವೆ ಸಲ್ಲಿಸಿದೆ. ತೊಂಬತ್ತರ ದಶಕದ ಈಚೆಗೆ ಖಾಸಗಿ ಬಾನುಲಿ ಸೇವೆಗಳ ಪ್ರಸಾರ ಆರಂಭಿಸಿದವು. ಅಲ್ಲಿಂದ ಸೇವೆ ಅನ್ನುವ ಪದದ ಹೊಳಪು ಕಳೆದುಕೊಳ್ಳುತ್ತಾ ಹೋಗುತ್ತಿದೆ. ಯಾಕೆಂದರೆ ಖಾಸಗಿ ಬಾನುಲಿ ಕೇಂದ್ರಗಳ ಪ್ರಮುಖ ಉದ್ದೇಶವೇ ವ್ಯವಹಾರವಾಗಿರುವುದನ್ನು ಇಂದು ಕಾಣಬಹುದಾಗಿದೆ. ಈ ನಡುವೆ ಸಮುದಾಯ ಅಥವಾ ಹವ್ಯಾಸಿ ರೇಡಿಯೊ ಕೇಂದ್ರಗಳು ಕೂಡ ಚಾಲ್ತಿಯಲ್ಲಿವೆ. ಮಾಹಿತಿ ವಿನಿಮಯ ಮಾಡಿಕೊಳ್ಳುವ ಪ್ರಮುಖ ಉದ್ದೇಶ ಹವ್ಯಾಸಿ ಅಥವಾ ಸಮುದಾಯ ರೇಡಿಯೋಗಳಿಗಿವೆ. ಆಕಾಶವಾಣಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಭಾವಶಾಲಿ ಮಾಧ್ಯಮವಾಗಿದ್ದರೆ, ಎಫ್‌ಎಂ ಚಾನೆಲ್‌ಗಳು ನಗರ ಪ್ರದೇಶಗಳಲ್ಲಿ ಪ್ರಭಾವ ಹೊಂದಿವೆ.

ಬಾನುಲಿ ಕೇವಲ ಮನರಂಜನೆಯ ಸರಕಾಗಿರದೇ ಹತ್ತು ಹಲವು ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡಿದೆ. ಅದರಲ್ಲೂ ರೈತರ ನೆಚ್ಚಿನ ಮಾಧ್ಯಮ ಇದಾಗಿ ಇನ್ನೂ ಉಳಿದುಕೊಂಡಿದೆ. ಹಸಿರು ಕಾಂತ್ರಿಗೆ ಆಕಾಶವಾಣಿ ಕೊಟ್ಟ ಕೊಡುಗೆ ಮರೆಯುವಂತಿಲ್ಲ. ತನ್ನ

ಮೂಲ ಆಶಯದಂತೆ ಆರೋಗ್ಯವಂತ ಸಮಾಜ ಕಟ್ಟಲು ನೆರವಾಗುವಂತಹ ಕಾರ್ಯಕ್ರಮಗಳನ್ನೇ ಬಿತ್ತರಿಸುತ್ತಾ ಬಂದಿದ್ದರಿಂದ, ಇದು ಅಷ್ಟು ಬೇಗ ಉದ್ಯಮದ ಸ್ವರೂಪ ಪಡೆದುಕೊಳ್ಳಲಿಲ್ಲ.

3. ದೂರದರ್ಶನ : ದೂರದರ್ಶನವು ಪ್ರಾರಂಭವಾಗಿದ್ದೆ ಒಂದು ಶೈಕ್ಷಣಿಕ ಸಾಧನವಾಗಿ. ನಂತರ ಈ ಮಾಧ್ಯಮವನ್ನು ಮನರಂಜನೆ ಕ್ಷೇತ್ರ ನುಂಗಿಹಾಕಿತು. ಮನರಂಜನಾ ಕ್ಷೇತ್ರವು ಉದ್ಯೋಗ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ಕೈಗಾರಿಕೆಯಾಗಿ ಈಗ ಬೆಳೆದು ನಿಂತಿದೆ.

ಟೆಲಿವಿಷನ್ 20ನೇ ಶತಮಾನದ ಶ್ರೇಷ್ಠ ಆವಿಷ್ಕಾರಗಳಲ್ಲಿ ಒಂದಾಗಿರುವ ಮಾಧ್ಯಮ. ವ್ಲಾಡಿಮಿರ್ ಕೋಸ್ಮ ಝೋರಿಕಿನ್ 1923ರಲ್ಲಿ 'ಕೈನೋಸ್ಕೋಪ್' ಎನ್ನುವ ವಿದ್ಯುತ್ ಟೆಲಿವಿಷನ್ ಟ್ಯೂಬ್ ಕಂಡು ಹಿಡಿದರೆ, 1926ರಲ್ಲಿ ಜಾನ್‌ಲಾಗಿ ಬೈರ್ಡ್ ಟೆಲಿವಿಷನ್ ಮಾಧ್ಯಮದ ಹುಟ್ಟಿಗೆ ಕಾರಣರಾದರು. ಅಲ್ಲಿಂದ ಟೆಲಿವಿಷನ್ ಯುಗ ಆರಂಭವಾಯಿತು. ಇದು ದೃಶ್ಯ ಮತ್ತು ಶ್ರವಣ ಮಾಧ್ಯಮವಾಗಿದ್ದರಿಂದ ಜಗತ್ತಿನೆಲ್ಲೆಡೆ ಬೇಗ ಪ್ರೇಕ್ಷಕರ ಗಮನ ಸೆಳೆದಿದೆ. ಮೊದಲು ಟೆಲಿವಿಷನ್ ಪ್ರಸಾರ ಆಗಿದ್ದು ಬ್ರಿಟನ್ ಹಾಗೂ ಅಮೆರಿಕಾದಲ್ಲಿ. ದ್ವಿತೀಯ ಮಹಾಯುದ್ಧದ ನಂತರ ಜಗತ್ತಿನೆಲ್ಲಡೆ ಅತ್ಯಂತ ಪರಿಣಾಮಕಾರಿ ಸಂವಹನ ಟೆಲಿವಿಷನ್ ಮಾಧ್ಯಮವಾಗಿ ರೂಪುಗೊಂಡಿತು.

ರೇಡಿಯೋ ಕೇವಲ ಧ್ವನಿ ಮೂಲಕ ಅಭಿವ್ಯಕ್ತಿಸಿದರೆ, ಟೆಲಿವಿಷನ್‌ನಲ್ಲಿ ಶಬ್ದ ಮತ್ತು ಚಿತ್ರಗಳ ಜೊತೆಗೆ ಚಲನೆ, ವರ್ಣ ಮತ್ತು ನಾಟಕ ಮತ್ತು ಸಂಗೀತ ಅಂಶಗಳನ್ನು ಒಳಗೊಂಡಿದೆ. ಮನರಂಜನೆಯ ಜೊತೆಗೆ ಮಾಹಿತಿಯು ಪ್ರಮುಖ ಗುಣಗಳಾಗಿವೆ. ಈ ಮಾಧ್ಯಮ ಬಹುಬೇಗ ಪ್ರೇಕ್ಷಕರನ್ನು ಆಕರ್ಷಿಸಲು ಮುಖ್ಯವಾಗಿ ವೈಜ್ಞಾನಿಕ ಮತ್ತು ತಾಂತ್ರಿಕ ಆವಿಷ್ಕಾರಗಳು, ಜಗತ್ತಿನ ಯಾವುದೇ ಭಾಗದಲ್ಲಿ ಘಟನೆಗಳು ನಡೆದರೂ ಅದನ್ನು ಹಾಗೆಯೇ ತೋರಿಸುವ ಜೀವಂತಿಕೆ ಅತ್ಯಂತ ಪ್ರಮುಖ ಅಂಶಗಳಾಗಿವೆ. ಇದರ ಜತೆಗೆ ಅನಕ್ಷರಸ್ಥರನ್ನು ಮತ್ತು ಅಕ್ಷರಬಲ್ಲವರನ್ನು ಏಕಕಾಲಕ್ಕೆ ತಲುಪುವ ಮಾಧ್ಯಮ ಇದಾಗಿದೆ. ಜಾಗತೀಕರಣ ಯುಗದಲ್ಲಿ ಜಗತ್ತಿನ ಎಲ್ಲ ಎಲ್ಲೆಗಳು ಕಿರಿದಾಗಿಸಿದ ಕೀರ್ತಿ ಈ ಮಾಧ್ಯಮದ್ದು. ಇಡೀ ಜಗತ್ತು ಒಂದು ಪುಟ್ಟ ಟೆಲಿವಿಷನ್ ಪರದೆಯಲ್ಲಿರುವುದು ವಿಸ್ಮಯ.

ಆಧುನಿಕ ಸಮಾಜದಲ್ಲಿ ಇದೊಂದು ಪ್ರಭಾವಶಾಲಿ ಮಾಧ್ಯಮವಾಗಿದ್ದರಿಂದ, ಉನ್ನತ ಶಿಕ್ಷಣ ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳಿಗೂ ಬಳಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಮಾಧ್ಯಮದ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಶಿಕ್ಷಣವನ್ನು ನಾವಿಂದು ಕಲಿಯುವಂತಾಗಿದೆ.

ಇಂತಹ ಟೆಲಿವಿಷನ್ ಕರ್ನಾಟಕಕ್ಕೆ ಕಾಲಿಟದ್ದು 1922ರ ಸೆಪ್ಟೆಂಬರ್ 3ರಂದು ಗುಲ್ಬರ್ಗಾದ ಕೇಂದ್ರದಿಂದ. ನಂತರ 1983 ನವೆಂಬರ್ 19ರಂದು ಬೆಂಗಳೂರು ಕೇಂದ್ರ ಕನ್ನಡ ಕಾರ್ಯಕ್ರಮಗಳ ಪ್ರಸಾರ ಆರಂಭಿಸಿತು. 1992ರ ನಂತರ ಕನ್ನಡದಲ್ಲಿ ಖಾಸಗಿ ವಾಹಿನಿಗಳ ಯುಗ ಆರಂಭಗೊಂಡಿತು. ಕನ್ನಡದ ಮೊದಲ ಖಾಸಗಿ ಮನರಂಜನೆ ವಾಹಿನಿ ಉದಯ ಟವಿ. ನಂತರ ಇದೇ ವಾಹಿನಿಯ ಉಷೆ ಮತ್ತು ಉದಯ ನ್ಯೂಸ್ ಪ್ರಸಾರ ಆರಂಭಿಸಿತು. ತೆಲುಗಿನ **ಈಟಿವಿ ಕನ್ನಡ**ದಲ್ಲೂ ಒಂದು ವಾಹಿನಿ ಆರಂಭಿಸಿತು. ಕಾವೇರಿ ಮತ್ತು ಸುಪ್ರಭಾತ ಚಾನೆಲ್‌ಗಳು ಉದಯವಾದವು. ನಂತರ ಬಂದಿದ್ದು ಜೀ ಕನ್ನಡ ವಾಹಿನಿ. **ಟಿವಿ9** ಮೂಲಕ ಕನ್ನಡದಲ್ಲಿ 24 ಗಂಟೆಗಳ ಪ್ರಸಾರ ಮಾಡುವ ಸುದ್ದಿ ವಾಹಿನಿಯ ಯುಗ ಆರಂಭವಾಯಿತು. ಸುವರ್ಣ ಮನರಂಜನಾ ವಾಹಿನಿ, ಸುವರ್ಣ ನ್ಯೂಸ್, ಕಸ್ತೂರಿ ಮನರಂಜನಾ ವಾಹಿನಿ, ಕಸ್ತೂರಿ ನ್ಯೂಸ್, ಸಮಯ ನ್ಯೂಸ್, ಜನಶ್ರೀ, ಪಬ್ಲಿಕ್ ಟಿವಿ, ಬಿಟಿವಿ, ಪ್ರಜಾಟಿವಿ, ಸುದ್ದಿಟಿವಿ, ರಾಜ್ ನ್ಯೂಸ್, ದಿಗ್ವಿಜಯ ಚಾನೆಲ್‌ಗಳು ಬಂದವು.

ಟೆಲಿವಿಷನ್ ಎಂಬುದು ಸಮಾಜಮುಖಿ ಸಂವಹನ ಮಾಧ್ಯಮ ಅನ್ನುವುದು ಎಷ್ಟು ಸತ್ಯವೋ, ಸೃಜನಶೀಲ ಕಲಾಪ್ರಕಾರ ಅನ್ನುವುದೂ ಅಷ್ಟೇ ಸತ್ಯ. ಇವುಗಳ ಜೊತೆ ಚಲನಚಿತ್ರೋದ್ಯಮ ಮತ್ತು ಅಂತರ್ಜಾಲ ಕೂಡ ಸಮೂಹ ಮಾಧ್ಯಮಗಳ ವ್ಯಾಪ್ತಿಗೆ ಬರುತ್ತಿವೆ. ಇವೆಲ್ಲದರ ಉದ್ದೇಶ ಸಮಾಜಮುಖಿ ಚಿಂತನೆಯೇ ಆಗಿದೆ.

ಒಟ್ಟಾರೆ ಸೂಕ್ಷ್ಮವೂ, ಜ್ಞಾನವಾಹಕ, ಸಾಂಸ್ಕೃತಿಕವೂ ಸಾಮಾಜಿಕವಾದ ಜ್ಞಾನವನ್ನು ಸಮುದಾಯದಲ್ಲಿ ಪ್ರಚಾರ ಮತ್ತು ಪ್ರಸಾರ ಮಾಡುವುದಕ್ಕೆ ಮಾಧ್ಯಮ ಅಥವಾ ಸಮೂಹ ಮಾಧ್ಯಮ ಅನ್ನಬಹುದು. ಇದಕ್ಕೆ ಜಗತ್ತಿನ ಜನ ಸಮುದಾಯವನ್ನು ಒಂದಾಗಿ ಬೆಸೆಯುವ ಗುಣ ಲಕ್ಷಣವಿದೆ. ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಮುಖ್ಯ ನೆಲೆಯಾದ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಜವಾಬ್ದಾರಿ ಕೂಡ ಇರುವುದನ್ನು ಮರೆಯಬಾರದು. ಸಾಮಾನ್ಯವಾಗಿ ಟೆಲಿವಿಷನ್ ಮಾಧ್ಯಮವನ್ನು ಮತ್ತು ಚಿತ್ರೋದ್ಯಮವನ್ನು ಜೊತೆ ಜೊತೆಯಾಗಿಯೇ ನೋಡಲಾಗುತ್ತಿದೆ. ಹಾಗಾಗಿ ಇದು ಕೇವಲ ಮನರಂಜನೆ ಮಾಧ್ಯಮ ಎಂಬ ಅಪವಾದ ಕೂಡ ಇದೆ. ಅದು ನಿಜವೂ ಆಗಿದೆ. ಆದರೆ, ಟೆಲಿವಿಷನ್ ಕೇವಲ ರಂಜನೆಗಷ್ಟೇ ಸೀಮಿತವಾಗಿರದೇ, ನಾನಾ ವಿಷಯಗಳ ಮಾಹಿತಿ, ವಯಸ್ಕರ ಶಿಕ್ಷಣ, ಗ್ರಾಮೀಣ ಸಮಸ್ಯೆ, ಬಡತನ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೂ ಬೆಳಕು ಚೆಲ್ಲಿರುವುದನ್ನು ಕಾಣಬಹುದು.

ಭಾರತದಂತಹ ಸಾಮಾಜಿಕ ಮತ್ತು ಸಾಂಪ್ರದಾಯಿಕ ರಾಷ್ಟ್ರದಲ್ಲಿ ಮಾಧ್ಯಮ ಅನ್ನುವುದು ತುಂಬಾ ಜವಾಬ್ದಾರಿ ಸ್ಥಾನವನ್ನು ಪಡೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಇಲ್ಲಿ ಕೆಲಸ ಮಾಡುವವರು ತಮ್ಮ ಪ್ರತಿಭೆಯ ಜತೆ ಜತೆಗೆ, ಕೇವಲ ಸುದ್ದಿಯನ್ನು ಹಂಚುವರಾಗದೇ, ಆರೋಗ್ಯವಂತಹ ರಾಷ್ಟ್ರ ನಿರ್ಮಾಣದಲ್ಲಿ ಸಹಯೋಗ ನೀಡಬೇಕಾಗಿದೆ. ಹೀಗಾಗಿಯೇ ಮಾಧ್ಯಮ ಕ್ಷೇತ್ರವನ್ನು ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಅಂಗಕ್ಕೆ ಹೋಲಿಸಲಾಗುತ್ತಿದೆ. ಸಾಮಾಜಿಕ ಮತ್ತು ರಾಜಕೀಯ ರಚನೆಯಲ್ಲಿ ನಿರ್ದಿಷ್ಟ ಸವಲತ್ತುಗಳು ಈ ಕ್ಷೇತ್ರಕ್ಕಷ್ಟೇ ಸಿಕ್ಕಿವೆ. ಇದಕ್ಕಾಗಿಯೇ ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ಕಾವಲು ನಾಯಿ ಎಂದೂ ಕರೆಯಲಾಗುತ್ತಿದೆ. ಭಾರತದಂತಹ ಬಡತನ, ಅನಕ್ಷರತೆ ಇರುವಂತಹ ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮಗಳು ಕಾರ್ಯನಿರ್ವಹಿಸುವುದು ದೊಡ್ಡ ಸವಾಲೇ ಸರಿ. ದೃಶ್ಯ ಮತ್ತು ಶ್ರವ್ಯ ಮಾಧ್ಯಮಕ್ಕೆ ಬಡತನ ಅಡೆತಡೆಯಾದರೆ, ಮುದ್ರಣ ಮಾಧ್ಯಮಕ್ಕೆ ಅನಕ್ಷರತೆ ಶಾಪವಾಗಿದೆ. ಆದರೂ, ಎಲ್ಲ ಕೊರತೆಗಳನ್ನು ದಾಟಿಕೊಂಡು ಮಾಧ್ಯಮಗಳು ದಾಪುಗಾಲಿಟ್ಟಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾಧ್ಯಮ ಎಂಬುದು ಉದ್ಯಮವಾಗಿ ಪರಿವರ್ತಿತಗೊಂಡಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಹಾಗಾಗಿ ಇದೊಂದು ಬಂಡವಾಳಿಗರ ಸೊತ್ತಾಗಿಬಿಟ್ಟಿದೆ. ಈ ಮಾಧ್ಯಮ ಉದ್ಯಮವಾಗಿ ಪರಿವರ್ತನೆಗೊಂಡಿದ್ದರ ಹಿಂದಿನ ಇತಿಹಾಸವನ್ನು ನೋಡುವುದು ಮುಖ್ಯವಾಗುತ್ತದೆ.

4.2 ಮಾಧ್ಯಮ ಉದ್ಯಮವಾದ ಸ್ವರೂಪ

ಮಾಧ್ಯಮ ಎಂದರೇನು ಎಂಬುದನ್ನು ಈಗಾಗಲೇ ಚರ್ಚಿಸಲಾಗಿದೆ. ಈಗ ಉದ್ಯಮವೆಂದರೆ ಗ್ರಾಹಕರಿಗೆ ಸರಕು ಸೇವೆಗಳನ್ನು ಒದಗಿಸುವುದೇ ಆಗಿದೆ. ಇದು ಮಾರುಕಟ್ಟೆ ವಲಯವನ್ನು ಪ್ರತಿನಿಧಿಸುತ್ತದೆ. ಉದ್ಯಮವನ್ನು ಸ್ಥಾಪಿಸಿದವನಿಗೆ ಉದ್ಯಮಿ ಎನ್ನುವುದು ವಾಡಿಕೆ. ಇದರ ಪ್ರಮುಖ ಲಕ್ಷಣಗಳೆಂದರೆ ಗ್ರಾಹಕರನ್ನು ಸೃಷ್ಟಿಸುವುದು, ಅವರನ್ನು ಉಳಿಸಿಕೊಳ್ಳುವುದು ಮತ್ತು ಸಂತೃಪ್ತಿಗೊಳಿಸುವುದೇ ಆಗಿದೆ. ಇದು ಗ್ರಾಹಕ ಕೇಂದ್ರವಾಗಿದ್ದು, ವ್ಯಾಪಾರ ಚಟುವಟಿಕೆಗಳನ್ನೇ ಪ್ರಮುಖ ಅಂಶವನ್ನಾಗಿ ಪರಿಗಣಿಸಲಾಗಿದೆ. ಹಾಗಾಗಿ ಲಾಭವೇ ಇದರ ಗುಣವೂ ಹೌದು.

ಮಾಧ್ಯಮವು ಉದ್ಯಮವಾದಾಗ ಈ ಎಲ್ಲ ಗುಣಲಕ್ಷಣಗಳು ತಾವಾಗಿಯೇ ಹರಿದು ಬರುವುದು ಸುಳ್ಳಲ್ಲ. ಸದ್ಯ ಅಂತಾರಾಷ್ಟ್ರೀಯ, ರಾಷ್ಟ್ರೀಯ, ಪ್ರಾದೇಶಿಕ ಚಾನೆಲ್‌ಗಳಲ್ಲೂ ಖಾಸಗಿ ಬಂಡವಾಳ ಹರಿದು ಬರುತ್ತಿರುವುದರಿಂದ ಮತ್ತು ಕಾರ್ಪೋರೇಟ್ ಸಂಸ್ಥೆಗಳು ಮತ್ತು ರಾಜಕಾರಣಿಗಳ ಹಿಡಿತದಲ್ಲಿ ಮಾಧ್ಯಮಗಳು ಸೇರಿಕೊಂಡಿರುವುದರಿಂದ ಮುದ್ರಣ ಮಾಧ್ಯಮವು

ಉದ್ಯಮವಾಗಿದೆ. ಎಲೆಕ್ಟ್ರಾನಿಕ್ ಮಾಧ್ಯಮ ಉದ್ಯಮವಾಗಿ ಬದಲಾಗಿದೆ. ಚಲನಚಿತ್ರ ಮಾಧ್ಯಮ ಉದ್ಯಮವಾಗಿ ತಳವೂರಿದೆ. ಹಾಗಾಗಿಯೇ ಇವುಗಳಿಗೆ ಪತ್ರಿಕೋದ್ಯಮ, ಟೆಲಿವಿಷನ್ ಉದ್ಯಮ, ಚಿತ್ರೋದ್ಯಮ ಎಂದು ಕರೆಯಲಾಗುತ್ತಿದೆ. ಇಡೀ ಏಷ್ಯಾದಲ್ಲಿಯೇ ಅತೀ ಹೆಚ್ಚಿನ ಖಾಸಗಿ ಬಂಡವಾಳ ಹರಿದು ಬಂದಿದ್ದು ಭಾರತದ ವಿದ್ಯುನ್ಮಾನ ಮಾಧ್ಯಮಕ್ಕೆ ಅನ್ನುವುದು ಆತಂಕಕಾರಿ ವಿಷಯವೋ ಸಂಭ್ರಮ ಪಡಬೇಕಾಗಿದ್ದೋ ತಿಳಿಯದು. ಇದು ಇಂದಿಗೂ ಚರ್ಚೆ ಆಗುತ್ತಲೇ ಇದೆ.

ಮಾಧ್ಯಮ ಉದ್ಯಮ ಆಗಿದ್ದಕ್ಕೆ ಚಾರಿತ್ರಿಕ ಹಿನ್ನೆಲೆಯೂ ಇದೆ. ಈ ವಾಣಿಜ್ಯ ಪತ್ರಿಕೋದ್ಯಮ ಹುಟ್ಟಿದ್ದು 1882ರಲ್ಲಿ. ವ್ಯಾಪಾರಿ ಕುಟುಂಬಗಳ ನಡುವೆ ಮಾಹಿತಿ ವಿನಿಮಯದ ಉದ್ದೇಶದೊಂದಿಗೆ ಚಾರ್ಲ್ಸ್ ಡೌ ಮತ್ತು ಎಡ್ವರ್ಡ್ ಜೋನ್ಸ್ ಎಂಬುವವರು ಈ ವಾಣಿಜ್ಯ ಪತ್ರಿಕೋದ್ಯಮವನ್ನು ಶುರು ಮಾಡಿದರು. 1889ರಲ್ಲಿ **ದಿ ವಾಲ್‌ಸ್ಟ್ರೀಟ್ ಜರ್ನಲ್** ಪತ್ರಿಕೆ ಆರಂಭವಾಗುವುದರೊಂದಿಗೆ ಅಮೆರಿಕಾದಲ್ಲಿ ವಾಣಿಜ್ಯ ಸಂವಹನ ಶುರುವಾಯಿತು. ಭಾರತದಲ್ಲಿಯೂ ಇದು ಶುರುವಾಗಿದ್ದು 1950–60ರ ದಶಕದಲ್ಲಿ. ಆಗ ಟಾಟಾ ಸಮೂಹ **'ದಿ ಸ್ಟೇಟ್ಸ್‌ಮನ್'** ಪತ್ರಿಕೆಯನ್ನು, ಬಿರ್ಲಾ ಸಮೂಹ **'ಹಿಂದೂಸ್ತಾನ್ ಟೈಮ್ಸ್'** ಮತ್ತು ಸಾಹು ಜೈನ್ ಸಮೂಹ **'ದಿ ಟೈಮ್ಸ್ ಆಫ್ ಇಂಡಿಯಾ'** ಪತ್ರಿಕೆಯನ್ನು ಆರಂಭಿಸಿದವು.

ನಂತರದ ದಿನಗಳಲ್ಲಿ ಇದು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೂ ಸಹಜವಾಗಿ ಹರಿದು ಬಂತು. ಟಾಟಾ, ವಿಡಿಯೋಕಾನ್, ಏರ್‌ಟೆಲ್ ಕಂಪೆನಿಗಳು ಟೆಲಿವಿಷನ್ ಸಂಪರ್ಕ ಜಾಲದ ಗುತ್ತಿಗೆಯನ್ನು ಪಡೆದುಕೊಂಡಿದ್ದವು. ಡಿಜಿಟಲ್ ಪ್ರಸರಣ ವ್ಯವಸ್ಥೆ ಹೆಚ್ಚು ವ್ಯಾಪಕವಾಗುತ್ತಿರುವಂತೆಯೇ ಕಾರ್ಪೊರೇಟ್ ಕಂಪನಿಗಳಿಗೆ ಹೊಸ ಹೆಬ್ಬಾಗಿಲು ತೆರೆಯಿತು. ಟಾಟಾ ಕಂಪೆನಿ ಮತ್ತು ಸ್ಟಾರ್ ಸಮೂಹಗಳ ಜಂಟಿ ಉದ್ಯಮ ಟಾಟಾ ಸ್ಕೈ, ಝೀ ಡಿಟಿಎಚ್, ವಿಡಿಯೋಕಾನ್ ಡಿ2ಎಚ್, ಏರ್‌ಟೆಲ್ ಡಿಜಿಟಲ್ ಟಿವಿ ಹಾಗೂ ರಿಲಯನ್ಸ್ ಬಿಗ್ ಟಿವಿ ಇವೆಲ್ಲವುಗಳ ರಂಗಪ್ರವೇಶವಾಯಿತು. ಇವತ್ತು ಈ ನಾಲ್ಕು ಕಂಪೆನಿಗಳು ಸುಮಾರು ಎರಡು ಕೋಟಿ ಗ್ರಾಹಕರನ್ನು ಹೊಂದಿವೆ. ಅದರಲ್ಲೂ ಕೇಬಲ್ ಟಿವಿಗಳ ಡಿಜಿಟಲ್ ರೂಪಾಂತರ ಕಡ್ಡಾಯಗೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಟಿವಿ ಮಾಧ್ಯಮಗಳು ಸಂಪೂರ್ಣ ಕಾರ್ಪೋರೇಟ್ ಕಂಪನಿಗಳ ಮುಷ್ಠಿಯಲ್ಲಿ ಸಿಲುಕಿವೆ.

'ಇಂಡಿಯಾ ಟುಡೇ' ವಾರ ಪತ್ರಿಕೆ, 'ಆಜ್ ತಕ್', 'ಹೆಡ್ ಲೈನ್ಸ್ ಟುಡೇ' ಈ ಟಿವಿ ಚಾನೆಲ್‌ಗಳ ಒಡೆತನದ ಸಂಸ್ಥೆ 'ಲೀವಿಂಗ್ ಮೀಡಿತಾ ಲಿಮಿಟೆಡ್‌ನಲ್ಲಿ ಆದಿತ್ಯ ಬಿರ್ಲಾ ಕಂಪೆನಿ

ಈಚೆಗೆ ಶೇ.27ರಷ್ಟು ಷೇರ್ ಅನ್ನು ಖರೀದಿಸಿತು. ಮಾಧ್ಯಮ ವಲಯದಲ್ಲಿ ಹೊಸ ತಲ್ಲಣ ಶುರುವಾಗಿಬಿಟ್ಟಿತು. ಬಿರ್ಲಾ ಕಂಪೆನಿ 350 ಕೋಟಿ ರೂಪಾಯಿಯನ್ನು ಮಾಧ್ಯಮದ ಮೇಲೆ ಚೆಲ್ಲಿತು. ಇದು ನಡೆದದ್ದು 2012ರ ಮೇ ತಿಂಗಳಲ್ಲಿ. ಇದಕ್ಕೆ ನಾಲ್ಕು ತಿಂಗಳ ಮುಂಚೆ, ಅಂದರೆ ಜನವರಿಯಲ್ಲಿ ಕಾರ್ಪೊರೇಟ್ ದಿಗ್ಗಜ ಕಂಪೆನಿ ರಿಲಯನ್ಸ್‌ನ ಮುಖೇಶ್ ಅಂಬಾನಿಯವರು ರಾಘವ್ ಬಾಹ್ಲ್ ಅವರ ನೆಟ್‌ವರ್ಕ್ 18 ಮತ್ತು ಆಂಧ್ರಪ್ರದೇಶ ಮೂಲದ ಈ ನಾಡು ಸಮೂಹ ಸಂಸ್ಥೆಯಲ್ಲಿ ಬಂಡವಾಳ ಹೂಡಿದರು.

2012ರಲ್ಲಿ ನ್ಯೂ ಡೆಲ್ಲಿ ಟೆಲಿವಿಷನ್ (ಎನ್‌ಡಿಟಿವಿ) ಶೇ.14.17ರಷ್ಟು ಪಾಲುಗಾರಿಕೆಯನ್ನು ಓಸ್ವಾಲ್ ಗ್ರೀನ್ ಟೆಕ್ ಕಂಪೆನಿ ಖರೀದಿಸಿತು. ಇದಕ್ಕೆಂದು ಓಸ್ವಾಲ್ ಕಂಪೆನಿ 23.34 ಕೋಟಿ ರೂಪಾಯಿ ಖರ್ಚು ಮಾಡಿತ್ತು. ಉದ್ಯಮಿಗಳು ಮಾಧ್ಯಮವನ್ನು ಉದ್ಯಮವನ್ನಾಗಿ ಪರಿಗಣಿಸಿದ್ದು, ಮಾಧ್ಯಮದ ಮೇಲೆ ತಮ್ಮ ಹಿಡಿತ ಸಾಧಿಸುತ್ತಿರುವುದಕ್ಕೆ ಸ್ಪಷ್ಟ ಉದಾಹರಣೆ. (ನಾಗೇಶ್ ಹೆಗಡೆ (ಸಂ), ಮಾಧ್ಯಮ ಕರ್ನಾಟಕ, 2012, ಉದಯಭಾನು ಕಲಾಸಂಘ ಬೆಂಗಳೂರು, ಪುಟ 59)

ಹಾಕಿದ ಹಣಕ್ಕೆ ಅಸಲಿನ ಜೊತೆ ಲಾಭವೂ ಬರಬೇಕು ಅನ್ನುತ್ತದೆ ವ್ಯಾಪಾರ. ಕಾರ್ಪೊರೇಟ್ ಸಂಸ್ಥೆಗಳು ಇದನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುತ್ತಿವೆ. ಲಾಭ ಬಾರದೇ ಉದ್ಯಮ ನಡೆಸುವಂತಿಲ್ಲ ಎನ್ನುವ ಷರತ್ತು ಕೂಡ ಇಲ್ಲಿದೆ. ಹಾಗಾಗಿ ಮಾಧ್ಯಮದ ಚಹರೆ ಕೂಡ ಬದಲಾಗಿದ್ದನ್ನು ಇಂದು ಕಾಣಬಹುದು.

ಮಾಧ್ಯಮಕ್ಕೆ ಮಾಲೀಕನು ಮತ್ತು ಸಂಪಾದಕನೂ ಒಬ್ಬರೇ ಆಗಿದ್ದಾಗ ಹಾಗೂ ಮಾಲೀಕ ಬೇರೆ, ಸಂಪಾದಕ ಬೇರೆ ಅಂತಾದಾಗ ಮಾಧ್ಯಮದ ಗುಣ ಲಕ್ಷಣಗಳೇ ಬೇರೆ ಬೇರೆ ಆಗಿರುತ್ತವೆ. ಸಂಪಾದಕನೇ ಎರಡೂ ಕಾರ್ಯವನ್ನು ನಿರ್ವಹಿಸುವಾಗ ಅವನು ಯಾವುದೇ ಆತಂಕವಿಲ್ಲದೆ ಮಾಧ್ಯಮ ವೃತ್ತಿಯನ್ನು, ಅವುಗಳ ಧ್ಯೇಯೋದ್ದೇಶಗಳನ್ನು ಮಾಡಬಹುದು. ಬೇರೆ ಬೇರೆಯಾದಾಗ ಮಾಲೀಕರ ಅಣತಿಯಂತೆ ನಡೆದುಕೊಳ್ಳಬೇಕಾಗುತ್ತದೆ. ಸದ್ಯ ಬಹುತೇಕ ಸಮೂಹ ಮಾಧ್ಯಮಗಳು ಮಾಲೀಕನ ಆದೇಶದಂತೆಯೇ ನಡೆದುಕೊಳ್ಳಲಾಗುತ್ತಿದೆ ಎಂಬ ಗಂಭೀರ ಆರೋಪ ಕೂಡ ಇದೆ. ಹೀಗಾದಾಗ ಮಾಧ್ಯಮಗಳ ಕಾರ್ಯ ವೈಖರಿಯಲ್ಲೂ ಭಾರೀ ವ್ಯತ್ಯಾಸಗಳನ್ನು ಕಾಣಬಹುದು.

ಕಾರ್ಪೊರೇಟ್ ಕಂಪೆನಿಗಳು ಮಾಧ್ಯಮಗಳಲ್ಲಿ ಹಣ ಹೂಡಿವೆ ಅಂತಿಟ್ಟುಕೊಳ್ಳೋಣ. ಈ ನಡುವಿನ ವ್ಯತ್ಯಾಸ ಹೇಗಿರುತ್ತದೆ ಅಂದರೆ, ಕಾರ್ಪೊರೇಟ್ ಕಂಪೆನಿಯ ಭಾಷೆಗೂ ಮತ್ತು ಮಾಧ್ಯಮದ ಕಾರ್ಯವೈಖರಿಗೂ ಅಗಾಧವಾದ ಬದಲಾವಣೆಯನ್ನು ಕಾಣಬಹುದು.

ಕಾರ್ಪೊರೇಟ್ ಕಂಪೆನಿಗಳಲ್ಲಿ ಸಂಪಾದಕನಿಗಿಂತ ಮುಖ್ಯವಾಗಿ ಒಬ್ಬ ಮ್ಯಾನೇಜರ್ ಬೇಕಾಗುತ್ತದೆ. ಆತ ವೃತ್ತಿ ನಿರತ ಪತ್ರಕರ್ತನೇ ಆಗಬೇಕಾಗಿಲ್ಲ. ಬರವಣಿಗೆ ಬಲ್ಲ ಒಬ್ಬ ಕೆಲಸಗಾರ ಇದ್ದರೂ ಸಾಕು. ಸಂಪಾದಕ ಮಂಡಳಿಗೆ ಆಗ ಸಾಮಾಜಿಕ ಬದ್ಧತೆಗಿಂತ ಕಾರ್ಪೊರೇಟ್ ಕಂಪೆನಿಗಳ ಲಾಭ ನಷ್ಟವಷ್ಟೇ ಕೆಲಸ ಮಾಡುತ್ತದೆ. ಹಾಗಾಗಿ ಈಗ ವರದಿಗಾರಿಕೆಯಲ್ಲೂ ವ್ಯಾಪಾರ ನುಸುಳಿದೆ. "ಜಾಹೀರಾತು ವರದಿಗಾರಿಕೆ' ಎಂಬ ಹೊಸ ವಿಭಾಗ ಸದ್ದಿಲ್ಲದೇ ಕೆಲಸ ಮಾಡುತ್ತಿದೆ. ಪೇಯ್ಡ್ ನ್ಯೂಸ್ (ದುಡ್ಡು ಕೊಟ್ಟು ಸುದ್ದಿ ಬರೆಯಿಸಿಕೊಳ್ಳುವುದು) ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ. ಜ್ಯೋತಿಷ್ಯ, ಸೈಟ್ ಮಾರಾಟ, ಅನೇಕ ಉತ್ಪನ್ನಗಳ ಸುದ್ದಿಗಳು, ಶಾಲಾ ಕಾಲೇಜು ಪ್ರವೇಶಾತಿ ಹೀಗೆ ಅನೇಕ ವಿಷಯಗಳು ಇಂದು ಜಾಹೀರಾತು ವರದಿಗಾರಿಕೆಯ ಉತ್ಪನ್ನಗಳಾಗಿವೆ.

4.3 ವಿದ್ಯುನ್ಮಾನ ಮಾಧ್ಯಮ ಉದ್ಯಮವಾದಾಗ ಮಹಿಳಾ ಅಸ್ಮಿತೆ

ಸಮೂಹ ಮಾಧ್ಯಮ ಸಂದರ್ಭದಲ್ಲಿ ಮಹಿಳಾ ಅಧ್ಯಯನ ಎರಡು ಪ್ರಶ್ನೆಗಳನ್ನು ಪ್ರಧಾನವಾಗಿ ಎತ್ತುತ್ತದೆ. ಒಂದು, ಸಮೂಹ ಮಾಧ್ಯಮವನ್ನೊಂದು ಉದ್ಯಮವಾಗಿ ಪರಿಗಣಿಸುತ್ತಾ, ಅಲ್ಲಿ ಮಹಿಳೆಯರಿಗೆ ದೊರಕದಿರುವ ಅವಕಾಶಗಳನ್ನು ಕುರಿತಾದ ಪ್ರಶ್ನೆ. ಎರಡು, ಸಮೂಹ ಮಾಧ್ಯಮವನ್ನೊಂದು ಸಾಂಸ್ಕೃತಿಕ ಸಂಚಲನೆಯ ಘಟಕವಾಗಿ ಭಾವಿಸಿ, ಅಲ್ಲಿ ಮಹಿಳೆಯರ ದುರ್ಬಳಕೆ ಆಗುತ್ತಿರುವುದರ ಕುರಿತಾದ ಪ್ರಶ್ನೆ. ಆದರೆ, ಈ ಹೊತ್ತಿಗೆ ಬಂಡವಾಳಶಾಹಿ ವ್ಯವಸ್ಥೆಯಾದರೋ ಮೇಲಿನೆರಡೂ ಪ್ರಶ್ನೆಗಳನ್ನು ಒಟ್ಟಿಗೆ ತಳುಕು ಹಾಕಿಕೊಂಡು, ತನಗೆ ಅನುಕೂಲವಾಗುವಂತೆ ಬಳಸಿಕೊಳ್ಳುವ ತಂತ್ರಗಾರಿಕೆಯ ಮೂಲಕ ಇಂತಹ ಪ್ರಶ್ನೆಗಳನ್ನೇ ಇಡಿಯಾಗಿ ನುಂಗಿನೀರು ಕುಡಿಯುವ ಕಾರ್ಯದಲ್ಲಿ ನಿರತವಾಗಿದೆ. ಮಹಿಳೆಯರನ್ನು ಒಂದು ಉಪಭೋಗಿ ವಸ್ತುವಾಗಿ ಬಳಸಿಕೊಳ್ಳುವ ಸಂದರ್ಭವನ್ನು ನಿರ್ಮಿಸಿ, ಅದನ್ನೇ ಅವಕಾಶಗಳೆಂದು ಕರೆದು ನಂಬಿಸುತ್ತಿವೆ. ಅಲ್ಲದೇ, ವ್ಯವಸ್ಥೆಯು ನಿರ್ಮಿಸುತ್ತಿರುವ ಇಂತಹ ಅವಕಾಶಗಳನ್ನು ಅತ್ಯುತ್ಸಾಹದಿಂದ ತಬ್ಬಿಕೊಳ್ಳುತ್ತಿರುವ ಪ್ರಜ್ಞಾವಂತ ಹೆಣ್ಣು ಮಕ್ಕಳ ದೊಡ್ಡ ದಂಡು ಈ ಸಂಗತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಿದೆ. ಹೆಣ್ಣಿನ ಬಳಕೆಯನ್ನೇ ಆಕೆಗೆ ನೀಡುವ ಅವಕಾಶವೆಂದು ಪ್ರತಿಪಾದಿಸುವ ವ್ಯವಸ್ಥೆ, ಆ ಅವಕಾಶದ ಮೂಲಕವೇ ಸೀಮೋಲ್ಲಂಘನ ಮಾಡಲು ಹೊರಟಿರುವ ಆಧುನಿಕ ಮಹಿಳೆ ಈ ಇಬ್ಬರ ಪೈಪೋಟಿಯು ಬೆಳವಣಿಗೆಯಿಂದಾಗಿ ಸಮೂಹ ಮಾಧ್ಯಮ ಮತ್ತು ಮಹಿಳೆ ಎಂಬ ಸಂಗತಿ ಈ ಹೊತ್ತು

ಅತ್ಯಂತ ಸಂಕೀರ್ಣಸ್ವರೂಪ ತಾಳುತ್ತಿದೆ. (ಎಚ್.ಎಸ್.ಶ್ರೀಮತಿ(ಸಂ), ಮಹಿಳಾ ಅಧ್ಯಯನ, 2000, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ-111)

ಮಾಧ್ಯಮ ಉದ್ಯಮವಾದ ಹಿನ್ನೆಲೆಯಲ್ಲಿ ಮಹಿಳೆಯರು ಮಾಧ್ಯಮದ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ವೃತ್ತಿಯ ಪ್ರವೇಶಕ್ಕೆ ಒಂದು ಬಗೆಯ ತೊಂದರೆಗಳನ್ನು ಆಕೆ ಎದುರಿಸಬೇಕಾಗಿ ಬಂದರೆ, ಪ್ರವೇಶದ ಹಂತದಲ್ಲಿನ ಸಮಸ್ಯೆ ಮತ್ತೊಂದು ಬಗೆಯದ್ದು ಆಗಿರುತ್ತದೆ. ಪ್ರವೇಶದ ನಂತರವೂ ಆಕೆ ಸವಾಲುಗಳನ್ನು ಎದುರಿಸುತ್ತಲೇ ಉದ್ಯೋಗ ಮಾಡಬೇಕಾಗುತ್ತದೆ. ಆಕೆ ಅದೆಷ್ಟೇ ಕಷ್ಟಪಟ್ಟರೂ ಸಿಗಬೇಕಾದ ಸ್ಥಾನ ಸಿಗದೇ ಹೋಗಬಹುದು. ಮಾಧ್ಯಮವು ಉದ್ಯಮವಾಗಿ ಬೆಳೆದಿರುವ ಹಿನ್ನೆಲೆಯಲ್ಲಿ ಮಾಧ್ಯಮದಲ್ಲಿ ಮಹಿಳೆಯ ಸಹಭಾಗಿತ್ವ ಕುರಿತಾದ ದೊಡ್ಡ ಪ್ರಶ್ನೆ ಎದ್ದಿದೆ. ಉದ್ಯಮವಾದಾಗ ಅವಳಿಗೆ ಸಿಕ್ಕಿರುವ, ಸಿಗುವ ಅವಕಾಶ ಯಾವವು? ಸ್ಥಾನಗಳೇನು ಅನ್ನುವ ಚರ್ಚೆ ಕೂಡ ಶುರುವಾಗಿದೆ. ಇದರ ಜತೆಗೆ ಮಹಿಳೆಯರಿಗಾಗಿ ಮಾಧ್ಯಮಗಳು ಎಷ್ಟು ಸಮಯ ಮೀಸಲಿಟ್ಟಿವೆ? ಇವು ಪರಿಗಣಿಸಿರುವ ಮಹಿಳಾ ವಿಷಯಗಳು ಯಾವವು? ಪೈಪೋಟಿಗೆ ಇಳಿದಿರುವ ಚಾನೆಲ್‌ಗಳಲ್ಲಿ ಎಂತಹ ಕಾರ್ಯಕ್ರಮಗಳ ಮೂಲಕ ಅವುಗಳು ಮಹಿಳೆಯನ್ನು ಪ್ರತಿನಿಧೀಕರಿಸುತ್ತವೆ? ಪುರುಷ ಪ್ರಧಾನ ವ್ಯವಸ್ಥೆ ಕೇಂದ್ರಿತ ಮಾಧ್ಯಮ ಸಂಸ್ಥೆಗಳು ಮಹಿಳಾ ಉದ್ಯೋಗಿಗಳಿಗೆ ಕೊಡಬೇಕಾದ ಸ್ಥಾನ, ಹುದ್ದೆ, ಸಂಬಳ ಇತ್ಯಾದಿ ಸವಲತ್ತುಗಳನ್ನು ನೋಡುತ್ತಿವೆಯಾ ಎಂಬ ಪ್ರಶ್ನೆಗಳಿಗೂ ಉತ್ತರ ಹುಡುಕಬೇಕಿದೆ.

ಈ ಕುರಿತು ಸುವರ್ಣ ವಾಹಿನಿಯಲ್ಲಿ ಕೆಲಸ ಮಾಡುತ್ತಿರುವ, ಸ್ಟ್ರಿಂಗ್ ಆಪರೇಷನ್ (ಕುಟುಕು ಕಾರ್ಯಾಚರಣೆ) ಮೂಲಕ ಅನೇಕ ಹಗರಣಗಳನ್ನು ಬಯಲಿಗೆ ಎಳೆದಿರುವ ವಿಜಯಲಕ್ಷ್ಮೀ ಶಿಬರೂರ್ ಹೇಳುವುದು ಹೀಗೆ, " ನಾನು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡೋಕೆ ಶುರುವಾಗಿ ಒಂದು ದಶಕಗಳೇ ಆಗಿವೆ. ಕನ್ನಡದ ಮೊದಲು 24*7 ಸುದ್ದಿ ವಾಹಿನಿ ಟಿವಿ 9ನಲ್ಲಿ ನಾನು ರಿಪೋರ್ಟಿಂಗ್ ವಿಭಾಗ ಆಯ್ಕೆ ಮಾಡಿಕೊಂಡು ಈ ಕ್ಷೇತ್ರಕ್ಕೆ ಕಾಲಿಟ್ಟೆ. ಅಲ್ಲಿ ಮೆಟ್ರೊ ಬ್ಯೂರೋ ಚೀಫ್ ಆಗಿ ಕೆಲಸ ಮಾಡಿದೆ. ಲೈಫ್ ಸ್ಟೈಲ್ ಬ್ಯೂರೋ ಮುಖ್ಯಸ್ಥಳಾದೆ. ರಾಜಕೀಯ ವಿಭಾಗದಲ್ಲಿ ವರದಿಗಾರ್ತಿಯಾಗಿ ಕೆಲಸ ಮಾಡಿದೆ. ಇದರ ಹೊರತಾಗಿ ಇದೇ ಕ್ಷೇತ್ರದಲ್ಲಿ ಬೇರೆ ಏನಾದರೂ ಹೊಸದನ್ನು ಮಾಡಬೇಕು ಅನ್ನುವ ತುಡಿತ. ಯಾರೂ ಮಾಡದೇ ಇರುವಂತೆ ಕೆಲಸ ಮಾಡಿದಾಗ ಮಾತ್ರ ಇಲ್ಲಿ ಗುರುತಿಸಿಕೊಳ್ಳೋಕೆ ಆಗೋದು ಅಂತ ಅನಿಸಿತು. ಹಾಗಾಗಿ ತನಿಖಾ ಪತ್ರಿಕೋದ್ಯಮದತ್ತ ಮುಖ ಮಾಡಿದೆ. ಮೊದಲ ನನ್ನ ಸ್ಟೋರಿಯೇ ದೊಡ್ಡ

ಸುದ್ದಿ ಮಾಡಿತು. ಚಂಪಕಧಾಮ ಸ್ವಾಮಿಯ ಬಹುಕೋಟಿ ಹಗರಣ ಸ್ಟೋರಿಯು ನನ್ನ ತನಿಖಾ ಪತ್ರಿಕೋದ್ಯಮಕ್ಕೆ ಮುನ್ನುಡಿ ಬರೆಯಿತು. ಟಿವಿ 9ನಿಂದ ನಂತರ ಸುವರ್ಣ ಸುದ್ದಿ ವಾಹಿನಿಗೆ ಶಿಫ್ಟ್ ಆದೆ. ಇಲ್ಲಿಯೂ ಕೂಡ ತನಿಖಾ ಪತ್ರಿಕೋದ್ಯಮವನ್ನೇ ಮುಂದುವರಿಸಿದೆ. ತನಿಖಾ ವರದಿಗಾರ್ತಿಯಾಗಿ ಕೆಲಸ ಮಾಡುವುದು ಸುಲಭವಲ್ಲ ಅನ್ನುವ ಅರಿವೂ ನನಗಿತ್ತು. ತುಂಬಾ ಜನರ ವಿರೋಧ ಕಟ್ಟಿಕೊಳ್ಳಬೇಕು. ಜೀವ ಪಣಕ್ಕಿಟ್ಟು ಕೆಲಸ ಮಾಡಬೇಕು. ತನಿಖಾ ವರದಿ ಮಾಡುವ ಅದೆಷ್ಟೋ ವರದಿಗಾರರು ಕೊಲೆಯಾಗಿದ್ದಾರೆ. ಪೆಟ್ಟು ತಿಂದಿದ್ದಾರೆ. ಈ ಕ್ಷೇತ್ರದಲ್ಲಿ ತುಂಬಾನೇ ರಿಸ್ಕ್ ಇರತ್ತೆ. ಈ ಎಲ್ಲದರ ಅರಿವು ನನಗಿದ್ದುಕೊಂಡೆ ಮುಂದುವರಿದೆ. ನಾನು ಸ್ಟ್ರಿಂಗ್ ಆಪರೇಷನ್ ಮಾಡ್ತೀನಿ ಅಂದಾಗ ಆಫೀಸ್‌ನಲ್ಲಿ ಇರುವ ಕೆಲವರು ನಕ್ಕರು. ಕುಹಕದ ಮಾತುಗಳನ್ನೂ ಆಡಿದರು. ಗಂಡಸರಿಂದಾನೇ ಆಗದೇ ಇರುವ ಕೆಲಸ ಈ ಹುಡುಗಿ ಮಾಡುತ್ತಾ ಅಂತ ಮೊದಲು ಅಂದವರೂ ಇದ್ದಾರೆ. ಈ ಎಲ್ಲ ಮಾತಿಗೂ ಉತ್ತರ ಕೊಡುವಂತೆ ನಾನು ಕೆಲಸ ಮಾಡಿದ್ದೇನೆ. ಸರಕಾರಿ ಮಟ್ಟದಲ್ಲಿ ಹಲವು ಹಗರಣಗಳನ್ನು ಬಯಲಿಗೆ ಎಳೆದಿದ್ದೇನೆ. ನನ್ನ ಮೇಲೆ ಹಲವು ಕೇಸ್‌ಗಳು ಕೂಡ ದಾಖಲಾಗಿವೆ. ಆದರೂ, ನನ್ನ ಕೆಲಸವನ್ನು ನಿಲ್ಲಿಸಿಲ್ಲ. ಸಮಾಜದಲ್ಲಿ ಎಲ್ಲೇ ಅನ್ಯಾಯ ನಡೆಯುತ್ತಿದ್ದರೂ ಅಲ್ಲಿ ನಮ್ ಟೀಮ್ ಇರುತ್ತೆ. ಹೀಗೆ ನಾವು ಎಷ್ಟೇ ಕಷ್ಟಪಟ್ಟರು ನಮಗೆ ಸಿಗಬೇಕಾದ ಹುದ್ದೆ, ಅದಕ್ಕೆ ತಕ್ಕ ಸಂಬಳಕ್ಕಾಗಿ ಫೈಟ್ ಮಾಡಲೇಬೇಕು. ಅದಕ್ಕಾಗಿ ನಾನು ಎಷ್ಟೋ ಬಾರಿ ನನ್ನ ಸಂಸ್ಥೆಯ ಮುಖ್ಯಸ್ಥರ ಜೊತೆ ಜಗಳ ಮಾಡಿದ್ದೇನೆ. ಈ ಕಾರಣಕ್ಕಾಗಿ ಜಗಳಗಂಟಿ ಅನ್ನುವ ಪದವನ್ನು ಅನಿಸಿಕೊಂಡಿದ್ದೇನೆ. ಈ ಮಾಧ್ಯಮ ಲೋಕದಲ್ಲಿ ಕೆಲಸಕ್ಕೆ ತಕ್ಕ ಸಂಬಳ ಸಿಗುತ್ತೆ ಅನ್ನೋದು ದೂರದ ಮಾತು. ಯಾಕೆಂದರೆ ಇದು ಪುರುಷ ಪ್ರಧಾನ ವ್ಯವಸ್ಥೆಯ ಕೈಗೊಂಬೆ. ಹಾಗಾಗಿ ಹುಡುಗಿಯರು ಎಲ್ಲದಕ್ಕೂ ಫೈಟ್ ಮಾಡಿಯೇ ಪಡೆದುಕೊಳ್ಳುವಂತಹ ವಾತಾವರಣ ಬಹುತೇಕ ಸುದ್ದಿ ವಾಹಿನಿಗಳಲ್ಲಿದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ನನ್ನಂತೆಯೇ ಅನೇಕ ಹುಡುಗಿಯರು ತಮ್ಮ ತಮ್ಮ ವಿಭಾಗದಲ್ಲಿ ಇಷ್ಟೇ ಸಾಮರ್ಥ್ಯ ತೋರಿದ್ದಾರೆ. ಆದರೂ, ಅವರು ಉನ್ನತ ಹುದ್ದೆಯಲ್ಲಿ ಕೂರಲು ಇನ್ನೂ ಸಾಧ್ಯವಾಗಿಲ್ಲ. ದಿನದ ಇಪತ್ತಾನ್ನಲ್ಕು ಗಂಟೆ ಸುದ್ದಿ ನೀಡುವ ವಾಹಿನಿಗಳು ಕರ್ನಾಟಕಕ್ಕೆ ಬಂದು ಒಂದೂವರೆ ದಶಕಗಳು ಆಗುತ್ತಿದ್ದರೂ, ಒಬ್ಬ ಮಹಿಳೆ ಕೂಡ ಸಂಪಾದಕಿ ಆಗಲು ಸಾಧ್ಯವಾಗಿಲ್ಲ. ನೋಡಿ, ನನ್ನನ್ನು ಸೇರಿದಂತೆ ಈ ಮೀಡಿಯಾದಲ್ಲಿ ಕೆಲಸ ಮಾಡುವ ಅನೇಕ ಹುಡುಗಿಯರು ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆಯುವಂತಹ ಸ್ಟೋರಿಗಳನ್ನು ಮಾಡಿದ್ದೇವೆ. ಬಹುಕೋಟಿ ಹಗರಣಗಳನ್ನು ಆಚೆ ತಂದಿದ್ದೇವೆ.

ಭೂಗತ ಚಟುವಟಿಕೆಯಲ್ಲಿರುವವರ ಬೆನ್ನು ಹತ್ತಿದ್ದೇವೆ. ಪುರುಷರಿಗಷ್ಟೇ ಈ ವಿಭಾಗ ಮೀಸಲು ಎಂದು ಬೀಗುತ್ತಿದ್ದ ಕ್ಷೇತ್ರಗಳಿಗೂ ನಾವು ನುಗ್ಗಿದ್ದೇವೆ. ಅಲ್ಲಿಯೂ ಒಳ್ಳೆಯ ಫಲಿತಾಂಶ ಕೊಟ್ಟಿದ್ದೇವೆ. ಅದರಿಂದಾಗಿ ನಾವು ಕೆಲಸ ಮಾಡುವ ಸಂಸ್ಥೆಗೆ ಗೌರವ ಸಿಗ್ತಿದೆ. ಅದರಲ್ಲಿ ನಮಗೂ ಪಾಲು ಸಿಗಬೇಕು ಅಲ್ಲವೆ? ಸುದ್ದಿ ವಾಹಿನಿಯಲ್ಲಿ ಮತ್ತೊಂದು ರೀತಿಯ ಮನಸ್ಥಿತಿಯ ಹುಡುಗರನ್ನು ಕಂಡಿದ್ದೇನೆ. ಪುರುಷರು ನಮ್ಮ ವಿಭಾಗಗಳ ಮುಖ್ಯಸ್ಥ ಆದಾಗ, ಆತನ ಹುದ್ದೆಯ ಕೆಳಗೆ ಕೆಲಸ ನಿಭಾಯಿಸುವ ಮಹಿಳೆಯರು ಆತನ ಮಾತನ್ನು ಕಡ್ಡಾಯವಾಗಿ ಕೇಳಬೇಕು. ಅದೇ ಹೆಣ್ಣು ಮಗಳು ಬಾಸ್ ಆದಾಗ ಹುಡುಗರು ಯಾವುದೇ ಕಾರಣಕ್ಕೂ ಅವಳ ಮಾತು ಕೇಳಲ್ಲ. ನನಗೂ ಇಂತಹ ಅನುಭವ ಆಗಿದೆ. ಆಗ ನಾನು ಸಹಜವಾಗಿಯೇ ಜೋರು ಧ್ವನಿಯಲ್ಲಿ ಮಾತಾಡಬೇಕಾಗುತ್ತದೆ. ಹಾಗೆ ಮಾತಾಡಿದಾಗ ನಮ್ಮನ್ನು ರಾಕ್ಷಸಿ ಅಂತ ಕರೆಯುತ್ತಾರೆ. ಇದು ಕೇವಲ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಮಾತ್ರವಲ್ಲ, ಪತ್ರಿಕೆಗಳಲ್ಲೂ ಕೂಡ ಇದೆ. ಮಾಧ್ಯಮಗಳಲ್ಲಿ ಯಾಕೆ ಮಹಿಳೆಯರಿಗೆ ಪ್ರಮುಖ ಸ್ಥಾನಗಳು ಸಿಕ್ಕಲ್ಲ? ಅವರನ್ನು ಸಂಪಾದಕರನ್ನಾಗಿ ಮಾಡಲು ಯಾಕೆ ಸಾಧ್ಯವಾಗುತ್ತಿಲ್ಲ ಅಂತ ಸಂಸ್ಥೆಗಳ ಮಾಲೀಕರನ್ನು ಕೇಳಿ ನೋಡಿ, ನಮಗೆ ಅರ್ಹತೆ ಇಲ್ಲ ಅಂತಾನೇ ಅವರ ಉತ್ತರ ಆಗಿರುತ್ತದೆ. ಮಹಿಳೆಯರನ್ನು ಸಂಪಾದಕರನ್ನಾಗಿ ಮಾಡಿದರೆ, ಗೆಲ್ಲೋಕೆ ಸಾಧ್ಯವಿಲ್ಲ ಅಂತಾನೇ ಹೇಳ್ತಾರೆ. ಅರೇ, ಈಗ ಕನ್ನಡದ ಅಷ್ಟೂ ಚಾನೆಲ್‌ಗಳಲ್ಲೂ ಗಂಡಸರೇ ಸಂಪಾದಕರು ಆಗಿದ್ದಾರೆ. ನಿರ್ಣಾಯಕ ಜಾಗಗಳಲ್ಲೂ ಪುರುಷರನ್ನೇ ತುಂಬಲಾಗಿದೆ. ಎಲ್ಲ ಚಾನೆಲ್‌ಗಳು ಯಾಕೆ ಸಕ್ಸಸ್ ಆಗ್ತಿಲ್ಲ? ಅಷ್ಟೂ ಚಾನೆಲ್‌ಗಳ ಗೆಲುವಿನ ರೇಟಿಂಗ್ ಒಂದೇ ಆಗಿರಬೇಕಿತ್ತು ಅಲ್ವಾ? ಒಂದಷ್ಟು ಚಾನೆಲ್‌ಗಳಂತೂ ರೇಟಿಂಗ್ ಪಟ್ಟಿಯಲ್ಲಿಯೇ ಕಾಣಿಸಿಕೊಂಡಿಲ್ಲ. ಹಾಗಾದರೆ, ಎಲ್ಲ ಗಂಡಸರೂ ಸಕ್ಸಸ್‌ಫುಲ್ ಸಂಪಾದಕರು ಅಲ್ಲ. ಅವರ ಫೇಲ್ಯುವರ್ ಅನ್ನು ಯಾರೂ ಮಾತಾಡಲ್ಲ. ಹುಡುಗಿ ಗೆದ್ದರೆ ಅದನ್ನು ಒಪ್ಪುವುದೇ ಇಲ್ಲ." ಅಂತಾರೆ.

ಸಮಯ ವಾಹಿನಿಯಲ್ಲಿ ಕೆಲಸ ಮಾಡುವ ಮಂಜುಳಾ ಕೂಡ ವಿಜಯಲಕ್ಷ್ಮೀ ಅವರ ಮಾತಿಗೆ ಧ್ವನಿಗೂಡಿಸುತ್ತಾ, "ತಲೆತಲಾಂತರದಿಂದ ನಾವು ಪುರುಷಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದರ ಫಲವಾಗಿ ಇವತ್ತಿಗೂ ಸಂಕಷ್ಟಗಳನ್ನು ಎದುರಿಸುತ್ತಿದ್ದೇವೆ. ಹೌದು, ಎಲೆಕ್ಟ್ರಾನಿಕ್ ಮೀಡಿಯಾ ಅನ್ನುವುದು ಆಧುನಿಕ ಆವಿಷ್ಕಾರ. ಇಲ್ಲಿ ಪಿತೃಪ್ರಧಾನ ವ್ಯವಸ್ಥೆಗೆ ಕಡಿವಾಣ ಹಾಕಬೇಕಿತ್ತು. ಅದು ಸಾಧ್ಯವಾಗಿಲ್ಲ. ಹಾಗಾಗಿ ನಾವು ಒಪ್ಪಿಕೊಳ್ಳಲೇಬೇಕಾದ ಸಂಗತಿ ಅಂದರೆ, ಟಿವಿ ಮೀಡಿಯಾ ಕೂಡ ಸಂಪೂರ್ಣವಾಗಿ ಪುರುಷರನ್ನೇ ಆವರಿಸಿಕೊಂಡಿದೆ. ಅದು ಕೂಡ

ಪುರುಷ ಪ್ರಧಾನ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಬಂದಿರುವುದು ಕಟುಸತ್ಯ. ಈ ಮಾತನ್ನು ನನ್ನ ಸಹೋದ್ಯೋಗಿಗಳು ಒಪ್ಪಿಕೊಳ್ಳುತ್ತಾರೆ ಅಂತ ಭಾವಿಸುತ್ತೇನೆ. ಟಿವಿ ನೋಡ್ತಾ ಇದ್ದರೆ ಬರೀ ಮಹಿಳೆಯರೇ ಕಾಣುತ್ತಾರೆ. ಸುದ್ದಿ ವಾಹಿನಿಗಳಲ್ಲಿ ಹುಡುಗರಿಗೆ ಜಾಗವೇ ಕೊಡದಷ್ಟು ಹುಡುಗಿಯರೆ ತುಂಬಿಕೊಂಡಿದ್ದಾರೆ ಅನ್ನುವ ಮಾತುಗಳನ್ನೂ ಕೇಳಿದ್ದೇನೆ. ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ಮಾಧ್ಯಮ ಸಂಸ್ಥೆಗಳು ಹೆಚ್ಚು ಮಹಿಳೆಯರಿಗೆ ಅವಕಾಶ ಸಿಕ್ಕಿದೆ ಅನ್ನುವುದು ಕೂಡ ನಿಜ. ಅವು ಯಾವವೂ ನಿರ್ಣಾಯಕ ವಿಭಾಗಗಳು ಆಗಿಲ್ಲ ಅನ್ನುವುದನ್ನೂ ಗಮನಿಸಬೇಕು. ಮೀಡಿಯಾಗಳಲ್ಲಿ ಇನ್ನೂ ಪುರುಷ ಪ್ರಧಾನ ವ್ಯವಸ್ಥೆಯೇ ಕೆಲಸ ಮಾಡುತ್ತಿದೆ ಅನ್ನುವುದಕ್ಕೆ ಹಲವು ಉದಾಹರಣೆಗಳನ್ನು ಕೊಡಬಹುದು. ಬಹುತೇಕ ಸುದ್ದಿ ವಾಹಿನಿಗಳಲ್ಲಿ ಪುರುಷರೇ ಸಂಪಾದಕರು. ಮಾಧ್ಯಮದ ಆಯಾ ಕಟ್ಟಿನ ಜಾಗಗಳಾದ ಔಟ್‌ಪುಟ್ ಮುಖ್ಯಸ್ಥರು, ಇನ್‌ಪುಟ್ ಮುಖ್ಯಸ್ಥರು. ಕ್ಯಾಮೆರಾ ವಿಭಾಗದ ಮುಖ್ಯಸ್ಥರು. ಮಾನವ ಸಂಪನ್ಮೂಲ ಮುಖ್ಯಸ್ಥರು. ಹಣಕಾಸು ವಿಭಾಗ, ಸುದ್ದಿ ವಿಭಾಗದ ಮುಖ್ಯಸ್ಥರು ಹೀಗೆ ಬಹುತೇಕ ಕೀ ಪೋಸ್ಟ್‌ಗಳಲ್ಲಿ ಪುರುಷರೇ ತುಂಬಿದ್ದಾರೆ. ಕೆಲ ಸುದ್ದಿ ವಾಹಿನಿಗಳಲ್ಲಿ ಮಹಿಳೆಯರು ಇದ್ದರೂ, ಇವರ ನಿಯಂತ್ರಣ ಕೂಡ ಮೇಲಿನ ಪುರುಷರದ್ದೇ ಆಗಿರುತ್ತದೆ ಅನ್ನುವುದನ್ನೂ ಒಪ್ಪಿಕೊಳ್ಳಲೇಬೇಕಾಗುತ್ತದೆ' ಎನ್ನುತ್ತಾ ಇದು ಉದ್ಯಮವಾದ ಪರಿಣಾಮ ಎಂದು ವಿಶ್ಲೇಷಿಸುತ್ತಾರೆ. ಉದ್ಯಮವಾಗಿದ್ದರಿಂದಲೇ ಕೇವಲ ನಾವು ಆಕರ್ಷಕ ಗೊಂಬೆಗಳಂತೆ ಕೆಲಸ ಮಾಡಬೇಕಾಗಿದೆ ಎಂಬ ಅಭಿಪ್ರಾಯ ಪಡುತ್ತಾರೆ.

ಫೋಕಸ್ ಟಿವಿ ಮೂಲಕ ದಕ್ಷಿಣ ಭಾರತದ ಮೊದಲ ಮಹಿಳಾ ಟೆಲಿವಿಷನ್ ಮಾಧ್ಯಮದ ಸಂಪಾದಕಿಯಾಗ ಹೊರಟಿರುವ ಜ್ಯೋತಿ ಈ ಕುರಿತು ತಮ್ಮ ಅಭಿಪ್ರಾಯವನ್ನು ದಾಖಲಿಸುತ್ತಾ, " ನಾನು ಮುದ್ರಣ ಮಾಧ್ಯಮದಿಂದ ಸುದ್ದಿ ವಾಹಿನಿಗೆ ಬಂದವಳು. ಮಹಿಳೆಯರಿಗೆ ಸ್ಥಾನಮಾನ ಕೊಡುವ ವಿಚಾರದಲ್ಲಿ ಎರಡೂ ಕ್ಷೇತ್ರಗಳು ಒಂದೇ ಅನಿಸುತ್ತವೆ. ನೂರಾರು ವರ್ಷಗಳ ಇತಿಹಾಸ ಇರುವ ಕನ್ನಡ ಪತ್ರಿಕೋದ್ಯಮದಲ್ಲೂ ಹೇಳಿಕೊಳ್ಳುವಂತಹ ಸ್ಥಾನ ಮಹಿಳೆಯರಿಗೆ ಸಿಕ್ಕಿಲ್ಲ. ಇದು ಎಲೆಕ್ಟ್ರಾನಿಕ್ ಮೀಡಿಯಾದಲ್ಲೂ ಹಾಗೆಯೇ ಮುಂದುವರಿದಿದೆ. ಹೀಗಾಗಿ ಮಾಧ್ಯಮವೂ ಕೂಡ ಪುರುಷ ಪ್ರಧಾನ ವ್ಯವಸ್ಥೆಯಿಂದ ಬಿಡಿಸಿಕೊಂಡಿಲ್ಲ. ನಾನು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸಕ್ಕೆ ಸೇರಿದ್ದು ಈ ಟಿವಿಯಿಂದ. ಅಲ್ಲಿಂದ ನಾನಾ ಚಾನೆಲ್‌ಗಳಲ್ಲಿ ಕೆಲಸ ಮಾಡಿದ್ದೇನೆ. ಎಲ್ಲಿಯೂ ಕೂಡ ಮಹಿಳೆಯರಿಗೆ ಪ್ರಮುಖ ಹುದ್ದೆಗಳನ್ನು ಕೊಡದಿರುವುದನ್ನು ಕಂಡಿದ್ದೇನೆ. ರಾಜಕೀಯ, ಕ್ರೈಮ್‌ನಂತಹ

ವಿಭಾಗಗಳಿಗೆ ಮಹಿಳೆಯರನ್ನು ಸೇರಿಸಿಕೊಳ್ಳದ ದಿನಗಳನ್ನು ನೋಡಿದ್ದೇನೆ. ಈಗ ಕೆಲ ಮಹಿಳೆಯರು ಈ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಅದನ್ನು ಪಡೆಯೋಕೆ ಹರಸಾಹಸವನ್ನೂ ಪಟ್ಟಿದ್ದಾರೆ. ಅದರಲ್ಲಿ ನಾನೂ ಕೂಡ ಒಬ್ಬಳು. ಸುದ್ದಿ ವಾಹಿನಿಗಳಲ್ಲಿನ ವ್ಯವಸ್ಥೆ ಹೇಗಿದೆ ಅಂದರೆ, ನಮ್ಮ ಅರ್ಹತೆ ಕೆಲಸ ನೋಡಿ ಹುದ್ದೆಗಳು ನಿರ್ಣಯ ಆಗುವುದೇ ಇಲ್ಲ. ನಮ್ಮ ಟ್ಯಾಲೆಂಟ್ ಅನ್ನು ವಾಹಿನಿಗಳ ಮುಖ್ಯಸ್ಥರು ಗುರುತಿಸುತ್ತಾರೆಂಬ ನಂಬಿಕೆಯೂ ನಮಗಿಲ್ಲ. ನಮಗೆ ಏನು ಬೇಕೋ ನಾವೇ ಅದನ್ನು ಕೇಳಿ ಪಡೆದುಕೊಳ್ಳಬೇಕು. ಕೇಳಿದರೂ ಸಿಗುವುದು ಅನುಮಾನ. ನಮಗೂ ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡುವ ಅರ್ಹತೆ ಇದೆ. ಆಗಲೇ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ ಅಂತ ಉದಾಹರಣೆ ಕೊಟ್ಟು, ಹಠಕ್ಕೆ ಬಿದ್ದು ಸ್ಥಾನ ಪಡೆದುಕೊಳ್ಳಬೇಕು. ಈ ಕ್ಷೇತ್ರದಲ್ಲಿ ನಾನು ಒಂದೂವರೆ ದಶಕಗಳ ಕಾಲ ಕೆಲಸ ಮಾಡಿದ್ದೇನೆ. ಅದರಲ್ಲೂ ಸಮಯ ಚಾನೆಲ್‌ನಲ್ಲಿ ಕೆಲಸ ಮಾಡುವಾಗ ಹುಡುಗರೂ ಹೋಗಲು ಅಸಹ್ಯ ಪಡುವಂತಹ ಭಿಕ್ಷುಕರ ಕಾಲನಿಯಲ್ಲಿ, ಜೇನುಕುರುಬರ ಹಾಡಿಯಲ್ಲಿ, ಹಿಜಡಾಗಳ ಮನೆಯಲ್ಲಿ ಇಡೀ ದಿನ ಕಳೆದು ಸ್ಟೋರಿ ಮಾಡಿದ್ದೇನೆ. ಅಲ್ಲದೇ ಕುಖ್ಯಾತ ಹಂತಕರಾದ ದಂಡುಪಾಳ್ಯ ಗ್ಯಾಂಗ್ ಕುರಿತಾಗಿ ಅವರಿರುವ ಸ್ಥಳಕ್ಕೆ ಹೋಗಿ ಸ್ಟೋರಿ ಮಾಡಿಕೊಂಡು ತಂದಿದ್ದೇನೆ. ನಮಗೂ ಪ್ರತಿಭೆ ಮತ್ತು ಧೈರ್ಯ ಇದೆ ಅಂತ ತೋರಿದರೂ, ಮಹಿಳೆಯರ ಸಾಮರ್ಥ್ಯವನ್ನು ಇನ್ನೂ ಅನುಮಾನದಿಂದಲೇ ನೋಡಲಾಗುತ್ತಿದೆ. ಇದು ಪುರುಷ ಪ್ರಧಾನದ ಮನಸ್ಥಿತಿ ಅನ್ನದೇ ವಿಧಿಯಿಲ್ಲ' ಅಂತಾರೆ. ಅಂದರೆ, ಪುರುಷರನ್ನೂ ಮೀರಿಸಿ ಕೆಲಸ ಮಾಡುವ ಸಾಮರ್ಥ್ಯ ಮಹಿಳೆಯರಲ್ಲಿದ್ದರೂ, ಅದನ್ನು ಅವರು ಕೆಲಸದ ಮೂಲಕ ತೋರಿಸಿದ್ದರು. ಈ ಉದ್ಯಮ ಇನ್ನೂ ಅವರನ್ನು ಲಿಂಗಾಧಾರಿತವಾಗಿಯೇ ನೋಡುತ್ತಿದೆ ಎನ್ನುವುದು ಸತ್ಯ.

ವಾಹಿನಿಯೊಂದರ ಮಾಜಿ ಉದ್ಯೋಗಿ ಪವಿತ್ರಾ ಅವರು ತಮ್ಮ ಅನುಭವನ್ನು ಹಂಚಿಕೊಂಡಿದ್ದು ಹೀಗೆ, "ಮೀಡಿಯಾದಲ್ಲಿ ಒಂದು ವಿಚಿತ್ರ ಸಂಪ್ರದಾಯವನ್ನು ನಾನು ಗಮನಿಸಿದ್ದೇನೆ. ಚಾನೆಲ್‌ನಿಂದ ಚಾನೆಲ್‌ಗೆ ಉದ್ಯೋಗಿಗಳು ಹಾರುತ್ತಲೇ ಇರುತ್ತಾರೆ. ಅವರಿಗೆ ಸಿಗಬೇಕಾದ ಗೌರವ ಸಿಗಲಿಲ್ಲ ಅಂತಾನೋ, ಹುದ್ದೆಯ ಆಸೆಯಿಂದಲೋ ಅಥವಾ ಚಾನೆಲ್‌ನಿಂದ ಚಾನೆಲ್‌ಗೆ ಜಿಗಿದರೆ ಸಂಬಳ ಜಾಸ್ತಿ ಆಗುತ್ತದೆ ಎಂಬ ಕಾರಣಕ್ಕಾಗಿಯೋ ಹಾರಾಟ ಇದ್ದೇ ಇರುತ್ತದೆ. ಒಂದು ಚಾನೆಲ್‌ನಿಂದ ಮತ್ತೊಂದು ಚಾನೆಲ್‌ಗೆ ಹಾರಿದ ಅನೇಕರು ಪುರುಷರೇ ಆಗಿದ್ದಾರೆ. ಬಹುತೇಕರು ನಾನಾ ವಿಭಾಗದ ಮುಖ್ಯಸ್ಥರೇ ಇರುತ್ತಾರೆ. ಅವರು ಬಿಟ್ಟು ಹೋದ ಜಾಗಕ್ಕೆ ಅದೇ ಸಂಸ್ಥೆಯ, ಪ್ರತಿಭೆ ಇರಬಲ್ಲ ಹುಡುಗಿಯನ್ನು ತಂದು ಕೂರಿಸಿರುವ

ಉದಾಹರಣೆ ಇಲ್ಲ. ಆ ಜಾಗಕ್ಕೆ ಮತ್ತೊಬ್ಬ ಹುಡುಗನನ್ನೇ ತಂದಿದ್ದಾರೆ. ಯಾಕೆ ಇವರು ಹುಡುಗಿಯರಿಗೆ ಸಾಮರ್ಥ್ಯ ಇಲ್ಲ ಅಂತ ಅಂದುಕೊಂಡಿದ್ದಾರೋ ಗೊತ್ತಿಲ್ಲ. ಕನ್ನಡ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಹುಡುಗರು ಮಾಡದೇ ಇರುವಂತಹ ಕೆಲಸಗಳನ್ನು ಮಹಿಳೆಯರು ಮಾಡುತ್ತಿದ್ದಾರೆ. ಸ್ಟ್ರಿಂಗ್ ಆಪರೇಷನ್, ಪೊಲಿಟಿಕಲ್, ಕ್ರೈಂ, ಸ್ಪೋರ್ಟ್ಸ್, ಔಟ್‌ಪುಟ್, ಇನ್‌ಪುಟ್, ಗ್ರಾಫಿಕ್ಸ್, ಎಡಿಟಂಗ್ ಹೀಗೆ ಎಲ್ಲ ವಿಭಾಗದಲ್ಲೂ ನುರಿತ ಮಹಿಳೆಯರು ಇರುವಾಗ, ಮಹಿಳೆಯರನ್ನು ಸಂಪಾದಕರನ್ನಾಗಿ ಮಾಡಲು ಏಕೆ ಆಗುವುದಿಲ್ಲ? ಪ್ರತಿಷ್ಠಿತ ವಾಹಿನಿಯೊಂದಕ್ಕೆ ಮಹಿಳಾ ಸಂಪಾದಕರನ್ನು ತರಬೇಕು ಅನ್ನುವ ಮಾತುಕತೆ ವರ್ಷದ ಹಿಂದೆ ಆಯಿತು. ಚಾನೆಲ್‌ವೊಂದನ್ನು ಸಮರ್ಥವಾಗಿ ನಿಭಾಯಿಸುವಂತಹ ಹುಡುಗಿಯರು ಯಾರಿದ್ದಾರೆ ಅನ್ನುವ ಪಟ್ಟಿ ಕೂಡ ಮಾಡಲಾಯಿತು. ಈ ಕುರಿತು ಅದೇ ವಾಹಿನಿಯ ಎಲ್ಲಾ ವಿಭಾಗದ ಮುಖ್ಯಸ್ಥರನ್ನು ಕರೆದು, ಈ ವಿಷಯವನ್ನು ಅವರ ಮುಂದಿಡಲಾಯಿತು. ಬಹುತೇಕ ಪುರುಷ ಉದ್ಯೋಗಿಗಳು ಅದನ್ನು ಒಪ್ಪಲಿಲ್ಲ. ಮಹಿಳಾ ಸಂಪಾದಕಿ ಬಂದರೆ ಕೆಲಸಗಾರರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅವರಿಗೆ ಆಗಲ್ಲ. ಪುರುಷ ಉದ್ಯೋಗಿಗಳು ಜೊತೆ ವ್ಯವಹರಿಸುವುದು ಅವರಿಗೆ ಕಷ್ಟವಾಗುತ್ತದೆ. ಒಬ್ಬ ಮಹಿಳೆಯ ಮಾತನ್ನು ನಮಗೂ ಕೇಳುವುದಕ್ಕೆ ಕಷ್ಟವಾಗಬಹುದು.. ಹೀಗೆ ಕ್ಷುಲಕ ಕಾರಣವನ್ನು ಕೊಟ್ಟು ವಿರೋಧಿಸಲಾಯಿತು. ತುಂಬಾ ಜನ ವಿರೋಧಿಸುತ್ತಿದ್ದಾರೆ ಅನ್ನುವ ಕಾರಣಕ್ಕಾಗಿ ಆ ನಿರ್ಧಾರವನ್ನೇ ಬಿಡಬೇಕಾಯಿತು. ಪುರುಷರ ಮನಸ್ಥಿತಿ ಹೇಗಿರುತ್ತದೆ ಅನ್ನುವುದಕ್ಕೆ ಇದೊಂದು ಉದಾಹರಣೆ.' ಹೀಗೆ, ಮಹಿಳೆಯರಿಂದ ಯಾವ ವಿಭಾಗದಲ್ಲಿ ಲಾಭ ಆಗತ್ತೆ ಅಂತ ಗೊತ್ತಾಗುತ್ತದೆಯೋ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ತಂದು ಕೂರಿಸಿದ್ದಾರೆ. ಹಾಗಾಗಿ ಸಿನಿಮಾ, ಆರೋಗ್ಯ, ಅಡುಗೆ, ಜ್ಯೋತಿಷ್ಯ, ಕಮರ್ಷಿಯಲ್ ಕಾರ್ಯಕ್ರಮಗಳು, ಸೈಟ್ ಮಾರಾಟದಂತಹ ಪೇಯಿಡ್ ಕಾರ್ಯಕ್ರಮಗಳಲ್ಲಿ ಮಹಿಳೆಯರೇ ಹೆಚ್ಚಾಗಿ ಕಾಣಸಿಗುತ್ತಾರೆ. ಇದು ವಾಸ್ತವ.

ಟೆಲಿವಿಷನ್ ಪರದೆಯ ಮೇಲೆ ಮಹಿಳೆಯ ಭಾಗವಹಿಸುವಿಕೆ ಪುರುಷರಿಗಿಂತ ಅಧಿಕವಿದ್ದರೂ, ನಿರೂಪಣೆ, ವಾರ್ತೆಗಳು ಓದುವಿಕೆ, ಜಾಹೀರಾತು, ಜ್ಯೋತಿಷ್ಯ, ಸಿನಿಮಾ, ಅಡುಗೆ ಕಾರ್ಯಕ್ರಮಗಳಿಗೆ ಮಾತ್ರ ಅವರನ್ನು ಸೀಮಿತಗೊಳಿಸಲಾಗಿದೆ. ಕ್ಯಾಮೆರಾ ಹಿಂದಿನ ಕೆಲಸಗಳಲ್ಲಿ ಆಕೆಯ ಭಾಗವಹಿಸುವಿಕೆ ತೀರಾ ಕಡಿಮೆಯೆ. ಸೌಂದರ್ಯದ ಮೂಲಕ ಹೆಣ್ಣನ್ನು ಮಾನ್ಯ ಮಾಡುವುದರಿಂದ ತೆರೆಯ ಮೇಲೆ ಆಕೆಯನ್ನು ಪ್ರದರ್ಶಕ ವಸ್ತುವಾಗಿ ಬಳಸಿಕೊಳ್ಳುವ

ಉದ್ದೇಶ ಇದರ ಹಿಂದೆ ಕೆಲಸ ಮಾಡುವಂತಿದೆ. ಮಹಿಳೆಯರು ಈ ಕ್ಷೇತ್ರದಲ್ಲಿ ಅಧಿಕವಾಗಿ ಕಾಣುವುದಕ್ಕೂ ಇದಕ್ಕೆ ಕಾರಣವಾಗಿದೆ.

ಈಗಾಗಲೇ ಹೇಳಿದಂತೆ, ಮಾಧ್ಯಮ ಅಂದರೆ ಕಾಣಿಸಿಕೊಳ್ಳುವುದು, ಅಭಿವ್ಯಕ್ತಿಸುವುದು ಆಗಿದೆ. ಅದು, ಹೇಳುವ ಮೂಲಕ ಆಗಿರಬಹುದು ಅಥವಾ ಬರಹದ ಮೂಲಕವಾದರೂ ಇರಬಹುದು, ಬರೀ ಧ್ವನಿ ಮೂಲಕವೂ ಆಗಿರಬಹುದು. ನಮ್ಮಲ್ಲಿ ಹೆಣ್ಣು ಮಕ್ಕಳು ಅಭಿವ್ಯಕ್ತಿಸುವುದನ್ನೇ ನಿರಾಕರಿಸಲಾಗಿತ್ತು. ಮಹಿಳೆ ಮನೆಯಿಂದ ಆಚೆ ಕಾಣಿಸಿಕೊಳ್ಳಬಾರದು. ಕತ್ತಲಾಗುತ್ತಿದ್ದಂತೆಯೇ ಮನೆ ಒಳಗೆ ಬಂದು ಬಿಡಬೇಕು. ಪುರುಷರ ಎದುರು ನಿಂತು ಮಾತಾಡಬಾರದು ಎಂಬ ನಿಬಂಧನೆ ವಿಧಿಸಲಾಗಿತ್ತು. ಮಹಿಳೆಯ ಬಗೆಗಿನ ಸಾಂಪ್ರದಾಯಿಕ ದೃಷ್ಟಿಕೋನಗಳು ಏನು ಮಾಡುವೆ ಅಂದರೆ, ಪಿತೃಪ್ರಧಾನ ವ್ಯವಸ್ಥೆಯನ್ನು ವ್ಯವಸ್ಥಿತವಾಗಿಯೇ ಮೈಗೂಡಿಸಿಕೊಂಡು ಬಂದಿವೆ. ಇಂತಹ ಒಂದು ಮಾಧ್ಯಮ ಉದ್ಯಮವಾಗಿ ಬದಲಾದಾಗ ಇದು ಮತ್ತಷ್ಟು ಜಟಿಲವಾಗುತ್ತಾ ಹೋಗುತ್ತದೆ. ಗಟ್ಟಿಯಾಗಿ ಉಳಿಯುತ್ತದೆ. ಹೆಣ್ಣನ್ನು ಅದು ಒಳಗೆ ತೆಗೆದುಕೊಂಡರೂ ಕೂಡ ತನ್ನ ಲಾಭಕ್ಕಾಗಿ ಅದು ಕರೆದುಕೊಳ್ಳುತ್ತದೆ. ಲಾಭದ ದೃಷ್ಟಿಯಿಂದಲೇ ಅದು ಹೆಣ್ಣನ್ನು ನೋಡುತ್ತದೆ. ಆಕೆಯ ಅಭಿವ್ಯಕ್ತಿಗೆ ಇಲ್ಲಿ ಅವಕಾಶವಿಲ್ಲ. ಸಂವಿಧಾನದತ್ತ ಆಕೆಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳು ನಗಣ್ಯವಾಗುತ್ತವೆ. ಅದು ಅವಳಿಂದ ಲಾಭ ಅಥವಾ ನಷ್ಟವನ್ನು ಮಾತ್ರ ಗಣನೆಗೆ ತಗೆದುಕೊಳ್ಳುತ್ತದೆ. ಮಾಧ್ಯಮವು ಉದ್ಯಮವಾದಾಗ ಅದು ಮಹಿಳೆಯನ್ನು ಬಂಡವಾಳದ ರೀತಿಯಲ್ಲಿಯೇ ನೋಡುತ್ತದೆ. ಇದು ಪುರುಷ ಉದ್ಯೋಗಿಗೆ ಅನ್ವಯಿಸುವುದಿಲ್ಲ.

ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯು ಆ್ಯಂಕರ್ ಮತ್ತು ವಾರ್ತಾವಾಚಕಿಯಾಗಲು ವಯಸ್ಸು, ಧ್ವನಿ, ಸೌಂದರ್ಯ ಮುಖ್ಯವಾಗುತ್ತದೆ. ನಂತರ ಉಳಿದೆಲ್ಲ ಅರ್ಹತೆಗಳು ಗಣನೆಗೆ ಬರುತ್ತವೆ. ಇದರರ್ಥ ಮಹಿಳೆಯ ಅಸ್ತಿತ್ವ ಇರುವುದೇ ಪುರುಷನ ಭೋಗಕ್ಕಾಗಿ ಎಂಬ ಭಾವನೆ ಸಮಾಜದಲ್ಲಿ ಆಳವಾಗಿ ಬೇರೂರಿಬಿಟ್ಟಿದೆ. ಹಾಗಾಗಿ ಆಕೆಯನ್ನು ಭೋಗವಸ್ತುವಾಗಿಯೇ ಕಾಣಲಾಗುತ್ತಿದೆ. ಈ ಕಾರಣದಿಂದಾಗಿಯೇ ಅವಕಾಶ ಸಿಕ್ಕಾಗೆಲ್ಲ ಅವಳನ್ನೂ ಲೈಂಗಿಕ ದೃಷ್ಟಿಯಿಂದಲೇ ನೋಡಲಾಗುತ್ತಿದೆ.

ಕಾರ್ಪೋರೇಟ್ ಜಗತ್ತಿಗೆ ಅಥವಾ ಉದ್ಯಮ ಜಗತ್ತಿಗೆ ಹೆಣ್ಣು ಗಂಡು ಭೇದವಿಲ್ಲ. ಇದೊಂದು ಡೀಜೆಂಡರ್ ಮಾಡುವ ಜಗತ್ತು. ವ್ಯವಹಾರದ ಗುಣ ಹೊಂದಿರುವ ಕೇವಲ ಲಾಭವನ್ನೇ ಉದ್ದೇಶವಾಗಿಟ್ಟುಕೊಂಡಿರುವ ಕಾರ್ಪೋರೇಟ್‌ನಂತಹ ಜಗತ್ತಿನಲ್ಲಿ ಲಿಂಗಭೇದ

ಮುಖ್ಯ ಆಗುವುದಿಲ್ಲ ಅನ್ನುವ ವಾದ ಕೂಡ ಇದೆ. ಆದರೆ, ಇದರಲ್ಲಿಯೇ ಸಂಕೀರ್ಣತೆಯನ್ನೂ ನಾವು ಕಾಣಬಹುದಾಗಿದೆ. ಗಂಡು ಸಲೀಸಾಗಿ ಕಾರ್ಪೊರೇಟ್ ಜಗತ್ತಿಗೆ ಹೊಂದಿಕೊಳ್ಳುವಂತೆ ಮಹಿಳೆಗೆ ಹೊಂದಿಕೊಳ್ಳಲು ಆಗದು. ಇಬ್ಬರ ಅರ್ಹತೆಗಳು ಕೂಡ ಭಿನ್ನವಾಗುತ್ತವೆ. ಪುರುಷ ಅಧಿಕಾರಯುತ ಹುದ್ದೆಯಲ್ಲಿದ್ದರೆ ಮಹಿಳೆ ಕೇವಲ ಅವನು ಹೇಳಿದಂತೆ ಕೆಲಸ ಮಾಡುವ ಗೊಂಬೆಯಂತಿರುತ್ತಾಳೆ. ಪುರುಷ ಮತ್ತು ಮಹಿಳೆಯರಲ್ಲಿ ಜೈವಿಕ ಭಿನ್ನತೆ ಇದೆ. ಅದು ಸಹಜವಾಗಿಯೇ ನೈಸರ್ಗಿಕವಾದದ್ದು. ಅಲ್ಲದೇ, ಅವರವರ ಗುಣ ಸ್ವಭಾವಗಳು ಹುಟ್ಟಿನ ಲಿಂಗದೊಂದಿಗೆ ಸಂಬಂಧಪಟ್ಟವುಗಳು ಆಗಿರುವುದಿಲ್ಲ. ಪುರುಷಾಧಿಕಾರವೇ ಲಿಂಗಭೇದವನ್ನು ಸೃಷ್ಟಿಸಿದೆ. ಹಾಗಾಗಿ ಮಾಧ್ಯಮದ ಮೂಲಕವೂ ಅದನ್ನು ಪೋಷಿಸಲು ಹೊರಟಿದೆ. ಹೀಗಾಗಿಯೇ ವೈಚಾರಿಕತೆಯನ್ನು ಪುರುಷನೆಂದೂ, ಚಂಚಲತೆಯನ್ನು ಹೆಣ್ಣು ಎಂದು ನಿರ್ವಚಿಸುವುದನ್ನು ಮಾಧ್ಯಮ ಸಂಸ್ಥೆಗಳಲ್ಲಿ ಕಾಣುತ್ತೇವೆ. ಭಾರತ ಸಂವಿಧಾನವು ದುಡಿಮೆಯ ಹಕ್ಕನ್ನು ಮಹಿಳೆಗೂ ಕೊಟ್ಟಿರುವುದರಿಂದ ಈ ಕ್ಷೇತ್ರಗಳಲ್ಲಿ ಆಕೆ ಸಮಾನ ಕೆಲಸಕ್ಕೆ ಸಮಾನ ವೇತನ ಪಡೆದುಕೊಳ್ಳುವಂತೆ ಆಗಬೇಕಿತ್ತು. ಆದರೆ, ಅದು ಸಾಧ್ಯವಾಗುತ್ತಿಲ್ಲ.

ಮಾಧ್ಯಮದಲ್ಲಿನ ವಾಣಿಜ್ಯ ಹಿತಾಸಕ್ತಿಯು ಇಂದು ಯಾವ ಮಟ್ಟಕ್ಕೆ ತಲುಪಿದೆ ಅಂದರೆ, 2017 ಮಾರ್ಚ್ 26ರಂದು ಕೇರಳದಲ್ಲಿ ಹೊಸ ಚಾನೆಲ್‌ವೊಂದು ಶುರುವಾಯಿತು. ಪ್ರಸಾರದ ಮೊದಲ ದಿನವೇ ಆ ರಾಜ್ಯದ ಸಾರಿಗೆ ಸಚಿವ ಎ.ಕೆ.ಶಶೀಂದ್ರನ್ ಅವರು ಮಹಿಳೆಯೊಬ್ಬಳಿಗೆ ಕೊಟ್ಟ ಲೈಂಗಿಕ ಕಿರುಕುಳದ ಟೇಪ್ ರಿಲೀಸ್ ಮಾಡುವುದಾಗಿ ನ್ಯೂಸ್ ಬ್ರೇಕ್ ಮಾಡಿತು. ಅಲ್ಲದೇ ಅಂದಿನ ದಿನ ಪತ್ರಿಕೆಗಳಲ್ಲಿಯೂ ಜಾಹೀರಾತು ನೀಡಿತ್ತು. ಈ ಟೇಪ್ ಪ್ರಸಾರವೂ ಆಯಿತು. ಆದರೂ, ಟೇಪ್‌ನಲ್ಲಿದ್ದ ಹುಡುಗಿಯು ಪೊಲೀಸ್ ದೂರು ನೀಡಿರಲಿಲ್ಲ. ಆದರೂ, ಸಚಿವರೊಬ್ಬರ ಖಾಸಗಿ ಲೈಂಗಿಕ ನಡಾವಳಿಯನ್ನು ವಾಹಿನಿಯು ಮಾರಾಟದ ಸರಕಿನಂತೆ ಬಿತ್ತರಿಸಿದ್ದು ಕೂಡ ತೀವ್ರ ಟೀಕೆಗೆ ಗುರಿಯಾಗಿತ್ತು. ಈ ನಡುವೆ ಕೇರಳ ಸರಕಾರ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ತನಿಖೆಗೆ ಆದೇಶಿಸಿತು. ಆನಂತರ ಗೊತ್ತಾದ ವಿಚಾರವೆಂದರೆ, ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಸಿಬ್ಬಂದಿಯೊಬ್ಬರಿಗೆ ಸುದ್ದಿ ವಾಹಿನಿಯರೇ ಒಪ್ಪಿಸಿ, ಆ ವರದಿಗಾರ್ತಿಯಿಂದ 'ಹನಿಟ್ರ್ಯಾಪ್' ಮಾಡಿಸಿದ್ದರು. ಮೊದಲ ದಿನದಿಂದಲೇ ಚಾನೆಲ್‌ಗೆ ಟಿಆರ್‌ಪಿ (ಟೆಲಿವಿಷನ್ ರೇಟಿಂಗ್ ಪಾಯಿಂಟ್) ಬರಲಿ ಅನ್ನುವುದು ಅದರ ಹಿಂದಿನ ಉದ್ದೇಶವಾಗಿತ್ತು. ಅಸಲಿ ಬಣ್ಣ ಆಚೆ ಬರುತ್ತಿದ್ದಂತೆಯೇ ಕೊನೆಗೂ ಚಾನೆಲ್‌ನ ಸಿಇಓ ತಮ್ಮ ತಪ್ಪನ್ನು ಒಪ್ಪಿಕೊಂಡರು. ಮಾರುವೇಷದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದು ತಮ್ಮ

ಚಾನೆಲ್‌ನ ಮಹಿಳಾ ಸಿಬ್ಬಂದಿ ಎಂದೂ, ಆದ ಪ್ರಮಾದಕ್ಕೆ ಕ್ಷಮೆ ಕೇಳಿದರು. ನಡೆದ ಈ ಘಟನೆಗೆ ಮಹಿಳಾ ಸಮೂಹವೇ ಬೆಚ್ಚಿಬಿತ್ತು. ಹನಿಟ್ರ್ಯಾಪ್‌ಗಾಗಿ ಪತ್ರಕರ್ತೆಯನ್ನು ಬಳಸಿದ್ದು ಕಳವಳಕಾರಿ ಸಂಗತಿ ಎಂದು ಹೇಳಲಾಯಿತು. ಇದು ಮಹಿಳಾ ಸಮೂಹಕ್ಕೆ ಮಾಡಿದ ಮೋಸ ಎಂದೂ, ಮಹಿಳೆಯರ ಮೇಲೆ ಅವಿಶ್ವಾಸ ಮೂಡುವಂತಹ ಕಾರ್ಯವೆಂದು ವಿಷಾದನೀಯ ಮಾತುಗಳು ಕೇಳಿಬಂದವು.

ಮಾಧ್ಯಮ ಲೋಕಕ್ಕೆ ಮಹಿಳೆಯರನ್ನು ಕಳುಹಿಸಲು ಹಿಂದೇಟು ಹಾಕುತ್ತಿರುವ ಈ ಸಂದರ್ಭದಲ್ಲಿ ಮತ್ತು ತನ್ನ ಪರಿಶ್ರಮ ಮತ್ತು ವೃತ್ತಿಪರತೆಯಿಂದ ನ್ಯೂಸ್ ರೂಮ್‌ಗಳಲ್ಲಿ ಉನ್ನತಸ್ಥಾನ ಪಡೆಯುತ್ತಿರುವ ಇಂತಹ ಸಂದರ್ಭದಲ್ಲಿ ಹನಿಟ್ರ್ಯಾಪ್‌ಗಾಗಿ ಪತ್ರಕರ್ತೆಯನ್ನು ಬಳಸಿರುವುದು ಕಳವಳಕಾರಿ ಮತ್ತು ವಾಣಿಜ್ಯ ಹಿತಾಸಕ್ತಿಯ ಅಪಾಯದ ನಡೆಯಾಗಿದೆ ಎಂದು ಮಹಿಳಾ ಪರ ಚಿಂತಕರು ಮತ್ತು ಹಿರಿಯ ಪತ್ರಕರ್ತೆಯರು ಈ ಕುರಿತು ಪ್ರತಿಕ್ರಿಯಿಸಿದ್ದಾರೆ.

ಉದ್ಯೋಗದ ಸ್ಥಳದಲ್ಲಿ ಈಗಾಗಲೇ ಮಹಿಳೆಯ ಕುರಿತು ಪೂರ್ವಾಗ್ರಹದ ಮಾತುಗಳು ಕೇಳಿ ಬರುತ್ತಿವೆ. ಕೆಲಸದ ಸ್ಥಳದಲ್ಲಿ ಅವಳು ಹಲವಾರು ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ತನ್ನ ಅಸ್ಮಿತೆಗಾಗಿ ನಿರಂತರ ಹೋರಾಟದಲ್ಲಿ ಆಕೆ ತೊಡಗಿದ್ದಾಳೆ. ಇಂತಹ ವೇಳೆಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಹನಿಟ್ರ್ಯಾಪ್‌ನಂತಹ ಕೆಲಸಕ್ಕೆ ಮಹಿಳೆಯನ್ನು ಬಳಸಿಕೊಂಡಿರುವುದು, ಅದರಲ್ಲೂ ತಮ್ಮ ವಾಣಿಜ್ಯ ಉದ್ದೇಶಕ್ಕಾಗಿ ಇಂತಹ ಚಟುವಟಿಕೆಗಳಲ್ಲಿ ಮಹಿಳೆಯನ್ನು ಭಾಗಿಯಾಗಿಸಿದ್ದು ಆತಂಕಕಾರಿ ಸಂಗತಿ.

ಈ ಹಿಂದೆ 2001ರಲ್ಲಿ ರಕ್ಷಣಾ ಇಲಾಖೆಯ ಅವ್ಯವಹಾರಗಳನ್ನು ಬಹಿರಂಗಗೊಳಿಸಲು ತೆಹೆಲ್ಕಾ ಪತ್ರಿಕೆ ನಡೆಸಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಅದು ಕಾಲ್‌ಗರ್ಲ್‌ಗಳನ್ನು ಬಳಸಿತ್ತು. ಅಂದರೆ, ಮಾಧ್ಯಮವೊಂದು ಉದ್ಯಮವಾಗಿ ಬದಲಾದಾಗ ಆಗುವ ಹುಚ್ಚಾಟಗಳಿವು.

4.3.1 ಜಾಹೀರಾತಿನಲ್ಲಿ ಮಹಿಳೆ : ಬಂಡವಾಳಶಾಹಿ ದೇಶಕಾಲಬದ್ಧವಾದ ಪುರುಷ ಪ್ರಧಾನತೆಯನ್ನು ಬಳಸಿಕೊಂಡು ತನ್ನ ಉದ್ದೇಶವನ್ನು ಮಹಿಳೆಯ ಮೂಲಕ ಈಡೇರಿಸಿಕೊಳ್ಳುವಲ್ಲಿ ಟೆಲಿವಿಷನ್ ಮಾಧ್ಯಮ ಸದಾ ಕ್ರಿಯಾಶೀಲತೆಯನ್ನು ತೋರಿಸುತ್ತಿದೆ. ಆ ಕ್ರಿಯಾಶೀಲತೆಯ ಒಂದು ಭಾಗವಾಗಿದೆ ಜಾಹೀರಾತು. ಮಾಧ್ಯಮ ಯಾವುದೇ ಇರಲಿ, ಅವುಗಳನ್ನು ಜಾಹೀರಾತುಗಳು ನಿಯಂತ್ರಿಸುವಷ್ಟು ಶಕ್ತಿ ಪಡೆದುಕೊಂಡಿವೆ. ಜಾಹೀರಾತುಗಳಿಗಾಗಿಯೇ ಮಾಧ್ಯಮ ಸಂಸ್ಥೆಗಳು ತಲೆಯೆತ್ತಿರುವುದನ್ನು ನಾವಿಂದು ಕಾಣಬಹುದು.

ಗ್ರಾಹಕನ ಮನೋಬದಲಾವಣೆ ಮಾಡುವ ಪ್ರಚೋದಕ ಸಂದೇಶವನ್ನು ಜಾಹೀರಾತು ಎಂದು ಕರೆಯುತ್ತಾರೆ. ಈ ಜಾಹೀರಾತು ಅನ್ನುವ ಪದವೇ ಅರಬ್ಬಿಯಿಂದ ಬಂದದ್ದು. ಝೂಹಿರ್ ಎಂಬ ಅರಬ್ಬಿ ಶಬ್ದವು ಕನ್ನಡದಲ್ಲಿ ಜಾಹೀರು, ಜಾಹೀರಾತು ಆಗಿದೆ. ಇಂಗ್ಲಿಷ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ಎಂಬ ಸಮನಾರ್ಥಕ ಪದ ಕೂಡ ಇದಾಗಿದೆ. ಅಡ್ವರ್ಟೈಸ್‌ಮೆಂಟ್ ಪದ ಕೂಡ ಮೂಲ ಲ್ಯಾಟಿನ್ ಭಾಷೆಯ ಅಡ್ವರ್ಟೋರ್ ಎಂಬ ಪದದಿಂದ ಪಡೆದದ್ದು. ಅಡ್ವರ್ಟೋರ್ ಅಂದರೆ ಬೆರಗಿನಿಂದ ನೋಡು ಎಂದರ್ಥ. ಜಾಹೀರಾತಿನ ಮುಖ್ಯಗುಣವೇ ಗ್ರಾಹಕರ ಗಮನ ಸೆಳೆಯುವುದು. ಬೆರಗುಗೊಳಿಸುವ ಮೂಲಕ ಕೊಳ್ಳುವಂತೆ ಉತ್ತೇಜಿಸುವುದೇ ಆಗಿದೆ. ಕೊಳ್ಳುವವನಿಗೆ ರೋಚಕತೆ ಸೃಷ್ಟಿಸುವುದು. ಈ ರೋಚಕತೆಯೇ ಪ್ರಧಾನವಾದಾಗ ಯಾವ ಮಾಧ್ಯಮವೂ ಜನಪರವಾಗಿರುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಹೆಣ್ಣಿಗೂ ಮತ್ತು ಪದಾರ್ಥಕ್ಕೂ ಯಾವ ರೀತಿಯ ಸಂಬಂಧವಿಲ್ಲದೇ ಇದ್ದರೂ, ಗಂಡಸಿನ ಒಳ ಉಡುಪಿಗೂ ಅವಳೇ ರೂಪದರ್ಶಿಯಾಗಿರಬೇಕು. ಅವನು ಬಳಸುವ ಶೇವಿಂಗ್ ಬ್ಲೇಡ್‌ಗೂ ಇವಳೇ ಇರಬೇಕು. ಹಾಗಾಗಿ ಬಂಡವಾಳವಾದವು ತನ್ನ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಮಹಿಳೆಯನ್ನು ಬಳಸಿಕೊಳ್ಳುತ್ತಿದೆ. ಅದರ ಜೊತೆಗೆ ಅವಳು ಕೂಡ ಈ ಮಾರುಕಟ್ಟೆಯ ದೃಷ್ಟಿಯಲ್ಲಿ ಒಬ್ಬಳು ಗ್ರಾಹಕಳೂ ಹೌದು. ಹಾಗಾಗಿ ದೇಹಕೇಂದ್ರಿತವಾಗಿಯೇ ಉತ್ಪನ್ನಗಳೊಂದಿಗೆ ಮಹಿಳೆಯನ್ನು ಸಂಯೋಜಿಸಲಾಗುತ್ತದೆ. ಈ ಮೂಲಕ ವಿದ್ಯುನ್ಮಾನ ಮಾಧ್ಯಮ ಅಂತಿಮವಾಗಿ ಮಾರ್ಕೆಟ್ ಪ್ರೇರಿತ ವ್ಯವಸ್ಥೆಯಲ್ಲಿ ಮಹಿಳೆಯೇ ಸರಕಾಗಿಬಿಡುವ ಅಪಾಯ ಸೃಷ್ಟಿಸುತ್ತಿದೆ. ತನ್ನ ಅಸ್ತಿತ್ವಕ್ಕಾಗಿ ಮಾಧ್ಯಮವು ನಿರಂತರವಾಗಿ ಕ್ರಿಯಾಶೀಲತೆಯಿಂದ ಅನೇಕ ತಂತ್ರಗಳನ್ನು ಪ್ರಯೋಗಿಸಿ, ಆ ತಂತ್ರಗಳ ಮೂಲಕ ಮಹಿಳೆಯರನ್ನು ಬಲಿಪಶು ಮಾಡಲಾಗುತ್ತಿದೆ.

ಈ ಎಲ್ಲ ಕಾರಣಗಳಿಂದಾಗಿಯೇ ಮಹಿಳೆ ಇಲ್ಲಿ ಕೇವಲ ಮಾರುಕಟ್ಟೆಯ ಸರಕಾಗಿ ಹೋಗಿದ್ದಾಳೆ. ಮಾಧ್ಯಮವೊಂದಕ್ಕಿರಬೇಕಾದ ಸಾಮಾಜಿಕ ಜವಾಬ್ದಾರಿ ಕೂಡ ದೂರವಾಗುತ್ತಿದೆ. ಇದನ್ನು ತಡೆಯುವಂತಹ ಕೆಲಸ ನಡೆಯುತ್ತಿಲ್ಲವಾ ಅನ್ನುವ ಪ್ರಶ್ನೆ ಕೂಡ ಎದ್ದಿದೆ. ಕಾನೂನು ರೂಪಿಸುವ ಅಗತ್ಯತೆಯ ಬಗ್ಗೆಯೂ ಹಲವು ಬಾರಿ ಚರ್ಚೆ ಶುರುವಾಗಿದೆ. ಖಾಸಗಿ ಕ್ಷೇತ್ರದಲ್ಲಿನ ಟೆಲಿವಿಷನ್ ಚಾನಲ್‌ಗಳನ್ನು ನಿಯಂತ್ರಿಸಲು ಒಂದು ಕಾನೂನು ಮಾಡಲು ಭಾರತದ ಸರಕಾರ ವಿಫಲ ಆಗಿರುವುದನ್ನು ಕಾಣಬಹುದು. ಹೀಗಾಗಿ ಖಾಸಗಿ ವಾಹಿನಿಗಳು ಗ್ರಾಹಕರಿಗೆ ಏನೆಲ್ಲ ತಂತ್ರಗಳನ್ನು ಹೆಣೆದು, ಉತ್ಪಾದಕರ ಪರ ನಿಲ್ಲುವಂತಾಗಿವೆ. ನಾಗರಿಕ ಸಮಾಜಕ್ಕೆ ಬೇಕಿರುವ ಅವಶ್ಯಕತೆಗಳನ್ನು ಪೂರೈಸುವ ಬದಲು, ಗ್ರಾಹಕರ ಮತ್ತು ಉತ್ಪಾದಕರ ಬೇಕು ಬೇಡಿಕೆಗಳಿಗೆ

ಹೆಚ್ಚು ತಲೆಕೆಡಿಸಿಕೊಂಡಿವೆ. ಸರಕು ಸಂಸ್ಕೃತಿಯು ಮಹಿಳೆಯನ್ನು ಬಂಡವಾಳಶಾಹಿಗಳು ಉತ್ಪಾದಿಸುವ ವಸ್ತುಗಳ ಮಾರಾಟ ಪ್ರಕ್ರಿಯೆಯನ್ನು ವಿಸ್ತರಿಸುವ ಮತ್ತು ಮಾರುಕಟ್ಟೆಯ ರಾಜಕಾರಣವನ್ನು ವೃದ್ಧಿಸುವ ವೇಗವರ್ಧಕ ವಸ್ತುವೆಂದೇ ಪರಿಗಣಿಸಿದೆ. ಉದ್ಯಮ ಯಾವುದೇ ಆಗಿರಲಿ ಲಾಭ, ಜನಪ್ರಿಯತೆಯೊಂದು ಮಾನದಂಡವಾಗಬಾರದು. ಸಾಮಾಜಿಕ ಜವಾಬ್ದಾರಿ ಮುಖ್ಯವಾಗಿರಬೇಕು. ವೃತ್ತಿಧರ್ಮದ ನೀತಿಸಂಹಿತೆಗಳಿಗೆ ಅದು ಒಳಪಟ್ಟಿರಬೇಕು. ಆ ನೀತಿಸಂಹಿತೆಗಳು ಸಮಾಜಕ್ಕೆ ಪೂರಕವಾಗಿರಬೇಕು. ಉದ್ಯಮದ ಕಾರಣದಿಂದಾಗಿಯೇ ಅವು ಕಾರ್ಯರೂಪಕ್ಕೆ ಬರುತ್ತಿಲ್ಲ.

ಮತ್ತೊಂದು ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಭಾರತೀಯ ಟಿ.ವಿ ಮಾಧ್ಯಮದಲ್ಲಿ ಎರಡು ರೀತಿಯಲ್ಲಿ ವ್ಯವಹಾರಿಕ ಮಾದರಿ ಇದೆ. ಖರೀದಿ ಮತ್ತು ಪ್ರಸಾರ (ಔಟ್‌ಹೌಸ್), ಗುತ್ತಿಗೆ ಮತ್ತು ಪ್ರಸಾರ (ಇನ್‌ಹೌಸ್). ಖರೀದಿ ಮತ್ತು ಪ್ರಸಾರ ಮಾದರಿಯಲ್ಲಿ ಬಹುತೇಕ ಖಾಸಗಿ ವಾಹಿನಿಗಳು ನಡೆಯುತ್ತಿವೆ. ಖರೀದಿ ಮತ್ತು ಪ್ರಸಾರ ಮಾದರಿ ಅಂದರೆ, ನಿರ್ಮಾಣ ಸಂಸ್ಥೆಗಳು ತಯಾರಿಸಿದ ಕಾರ್ಯಕ್ರಮಗಳನ್ನು ವಾಹಿನಿಗಳು ಖರೀದಿಸಿ, ಅದಕ್ಕೆ ಇಂತಿಷ್ಟು ದುಡ್ಡು ಕೊಟ್ಟು ಪ್ರಸಾರ ಮಾಡುವುದು. ಅಥವಾ ಗಂಟೆಗಳ ಲೆಕ್ಕದಲ್ಲಿ ಪ್ರಸಾರ ಮಾಡಲು ನಿರ್ಮಾಣ ಸಂಸ್ಥೆಗಳಿಗೆ ಅನುಮತಿ ಕೊಟ್ಟು, ಅದಕ್ಕೆ ಶುಲ್ಕವನ್ನು ವಸೂಲಿ ಮಾಡುವುದು. ಮತ್ತೊಂದು ಮಾದರಿಯಲ್ಲಿ ವಾಹಿನಿಗಳೇ ನಿರ್ಮಾಣ ಸಂಸ್ಥೆಗೆ ಹಣ ಕೊಟ್ಟು ಕಾರ್ಯಕ್ರಮಗಳನ್ನು ಮಾಡಲು ಬಿಡುವುದು. ಈ ಎರಡಕ್ಕೂ ಲಾಭವೇ ಮುಖ್ಯವಾಗಿರುವಾಗ ಮಹಿಳೆಯೇ ಬಲಿ ಆಗಬೇಕಾಗುತ್ತದೆ.

ಹೀರೋ ಕಪ್ ಕ್ರಿಕೆಟ್ ಪಂದ್ಯಾವಳಿಯ ಪ್ರಸಾರಕ್ಕೆ ಸಂಬಂಧಪಟ್ಟಂತೆ 1994ರಲ್ಲಿ ತಡೆಹಿಡಿದಿದ್ದ ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆ ವಿರುದ್ಧ ಬೆಂಗಾಲ್ ಕ್ರಿಕೆಟ್ ಸಂಸ್ಥೆಯು ಸುಪ್ರೀಂಕೋರ್ಟ್ ಮೆಟ್ಟಿಲೇರಿತು. ಆಗ ಸುಪ್ರೀಂಕೋರ್ಟ್ ಮಹತ್ತರ ತೀರ್ಪು ನೀಡುತ್ತಾ, ತರಂಗಗಳು ಸರಕಾರ ಸ್ವತ್ತಲ್ಲ ಎಂದಿತು. ಅಭಿವ್ಯಕ್ತಿಸುವ ವಿಚಾರದಲ್ಲಿ ಸರ್ವರಿಗೂ ಅವಕಾಶ ಸಿಗಬೇಕು ಎನ್ನುವ ಅಭಿಪ್ರಾಯ ತೀರ್ಪಿನದ್ದಾಗಿತ್ತು. ಸಂವಿಧಾನದ ಅಭಿವ್ಯಕ್ತಿ ಸ್ವಾತಂತ್ರ್ಯ 19 (1) ವಿಧಿಯು ಕೂಡ ಇದೇ ಆಶಯವನ್ನು ಹೊಂದಿರುವುದನ್ನು ನೆನಪಿಸಿತು. ನಂತರ ಮತ್ತೆ ಒಂದಷ್ಟು ಚರ್ಚೆಗಳು ನಡೆದವು. ಹಲವು ಕರಡುಗಳನ್ನು ತಿದ್ದುವ ಮೂಲಕ ಸಂವಹನ ಸಂಗಮ ಮಸೂದೆ ರೂಪ ತಳೆಯಿತು. 1995ರ ಕೇಬಲ್ ಟಿವಿ ನೆಟ್‌ವರ್ಕ್ ಕಾಯ್ದೆಯ ಮೂಲಕ ವಿತರಣೆಯ ನಿಯಂತ್ರಣ ಶುರುವಾಯಿತು. 2000ದಲ್ಲಿ ಕೇಬಲ್ ಟಿವಿ ನೆಟ್‌ವರ್ಕ್ ತಿದ್ದುಪಡಿ ಮಸೂದೆ

ಕೂಡ ಜಾರಿ ಆಯಿತು. ಈ ಎಲ್ಲ ಕಾಯಿದೆಗಳ ಜೊತೆ ಜೊತೆಗೆ ವಾರ್ತಾ ಮತ್ತು ಪ್ರಸಾರ ಇಲಾಖೆಯು ಕೆಲ ಸೂಚನೆಗಳನ್ನೂ ನೀಡಿದೆ. ಇದರ ಪ್ರಕಾರ, ಮಹಿಳೆಯರನ್ನು ಕೀಳಾಗಿ ಚಿತ್ರಿಸುವಂತಿಲ್ಲ. ಗ್ರಾಹಕರ ಹಕ್ಕುಗಳನ್ನು ಕಾಪಾಡುವಂತಹ ಉತ್ಪನ್ನಗಳ ಜಾಹೀರಾತು ಮಾತ್ರ ಪ್ರಸಾರ ಮಾಡಬೇಕು ಅಂತಿದೆ. ಆದರೆ, ಇದನ್ನು ಗಾಳಿಗೆ ತೂರುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇವೆ.

ಒಟ್ಟಾರೆಯಾಗಿ ಮಾಧ್ಯಮ ಕ್ಷೇತ್ರ ಉದ್ಯಮವಾದ ನಂತರ ಇಲ್ಲಿ ಮಾನವ ಹಕ್ಕುಗಳಿಗೆ ಯಾವುದೇ ಬೆಲೆಯಿಲ್ಲದಂತಾಗಿದೆ. ಇಲ್ಲಿ ಎಲ್ಲವೂ ಬಂಡವಾಳದ ಮೂಲಕವೇ ನಿರ್ಣಯಿಸಲ್ಪಡುತ್ತದೆ. ಮುಖ್ಯವಾಗಿ ಈ ಉದ್ಯಮ ಮಾಧ್ಯಮ ಮನುಷ್ಯರನ್ನೂ ಸಹ ಬಂಡವಾಳವನ್ನಾಗಿಸಿಕೊಂಡಿದೆ. ಹಾಗಾಗಿಯೇ ಇಲ್ಲಿ ಮಹಿಳೆಯರು ಉದ್ಯಮದ ಬಂಡವಾಳದ ಸರಕಾಗಿ ಮಾರ್ಪಟ್ಟಿರುವುದು ಕಂಡುಬರುತ್ತದೆ. ಇಲ್ಲಿ ಎಲ್ಲವನ್ನೂ ಲಾಭದ ದೃಷ್ಟಿಯಿಂದಲೇ ನೋಡಲಾಗುತ್ತದೆ. ಅದರಲ್ಲೂ ಮುಖ್ಯವಾಗಿ ಮಹಿಳೆಯರ ದೇಹವನ್ನೇ ಬಂಡವಾಳ ಮಾಡಿಕೊಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇದು ತುಂಬಾ ಅಪಾಯಕಾರಿ. ಆದರೂ ವ್ಯವಸ್ಥೆಯಲ್ಲಿ ಇವುಗಳು ನಡೆಯುತ್ತಲೇ ಇವೆ. ಒಟ್ಟಾರೆಯಾಗಿ ಮಾಧ್ಯಮ ಕ್ಷೇತ್ರ ಉದ್ಯಮವಾಗಿ ಬಂಡವಾಳಿಗರ ಸ್ವತ್ತಾಗಿರುವುದು ಮತ್ತು ಆ ಮೂಲಕ ಲಾಭಗಳಿಕೆಯ ಕ್ಷೇತ್ರವಾಗಿರುವುದು ಕಂಡುಬರುತ್ತದೆ.

ಅಧ್ಯಾಯ : 5

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳು, ಸವಾಲುಗಳು : ಉದ್ಯೋಗ ಕ್ಷೇತ್ರವನ್ನು ಅನುಲಕ್ಷಿಸಿ

5.1 ಉದ್ಯೋಗ ಕ್ಷೇತ್ರದಲ್ಲಿ ಪ್ರವೇಶಿಸುವಾಗ ಮಹಿಳೆಯರಿಗೆ ಎದುರಾಗುವ ಸಮಸ್ಯೆಗಳು

5.2 ಉದ್ಯೋಗಕ್ಕೆ ಸೇರಿಕೊಂಡ ನಂತರ ಮಹಿಳೆಯರಿಗೆ ಎದುರಾಗುವ ಸಮಸ್ಯೆಗಳು

5.3 ಧರ್ಮದ ಹಿನ್ನೆಲೆಯ ಕಾರಣದಿಂದ ಎದುರಿಸುವ ಸಮಸ್ಯೆಗಳು

ಅಧ್ಯಾಯ ಐದು

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಮಸ್ಯೆಗಳು, ಸವಾಲುಗಳು : ಉದ್ಯೋಗ ಕ್ಷೇತ್ರವನ್ನು ಅನುಲಕ್ಷಿಸಿ

ವಿದ್ಯುನ್ಮಾನ ಮಾಧ್ಯಮವು ಒಂದು ಬೃಹತ್ತಾದ ವಲಯವಾಗಿದ್ದು, ಇದರಲ್ಲಿ ಕೆಲಸ ಮಾಡುವಂತಹ ಮಹಿಳಾ ಕೆಲಸಗಾರರು ಹಲವಾರು ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಈ ಮಾಧ್ಯಮ ಕ್ಷೇತ್ರವು ಎಲ್ಲ ಜನರಿಗೂ ಮುಕ್ತವಾದ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿದೆಯಾದರೂ ಸಹ ಲಿಂಗ ತಾರತಮ್ಯದಿಂದೇನೂ ಮುಕ್ತವಾಗಿಲ್ಲ. ಅಂದರೆ ಈ ಕ್ಷೇತ್ರದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಸಮಾನವಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿದೆ. ಹಾಗೆಯೇ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅನುವೂ ಮಾಡಿಕೊಟ್ಟಿದೆ. ಇದು ಮೇಲ್ನೋಟಕ್ಕೆ ಮಾತ್ರ ಹೀಗೆ ಗೋಚರಿಸುತ್ತಿದೆಯಾದರೂ, ಆಂತರ್ಯದಲ್ಲಿ ಮಹಿಳೆಯರ ವಿಷಯದಲ್ಲಿ ಹಲವಾರು ತಾರತಮ್ಯಗಳನ್ನು ಮಾಡುತ್ತಲೇ ಬರಲಾಗಿದೆ. ಹಾಗಾಗಿ ಇಂದು ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವಂತಹ ಮಹಿಳೆಯರು ತಮ್ಮ ಉದ್ಯೋಗ ಕ್ಷೇತ್ರದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಮುಖ್ಯವಾಗಿ ಈ ಬಗೆಯ ತಾರತಮ್ಯವನ್ನು ಪುರುಷರು ಎದುರಿಸುವುದು ತೀರಾ ಕಡಿಮೆ. ಯಾಕೆಂದರೆ ಅವರಿಗೆ ಉದ್ಯೋಗದಲ್ಲಿ ಯಾವುದೇ ಮಾನದಂಡಗಳಾಗಲಿ ಅಥವಾ ನಿಯಮಗಳಾಗಲಿ ಕಡ್ಡಾಯವಾಗಿಲ್ಲ. ಇದ್ದರೂ ಸಹ ಮಹಿಳೆಯರಿಗೆ ಇರುವಷ್ಟು ಕಠಿಣವಾಗೇನೂ ಇರುವುದಿಲ್ಲ. ಹಾಗಾಗಿ ಪುರುಷರಿಗೆ ಯಾವುದೇ ಉದ್ಯೋಗದ ಅಭದ್ರತೆ ಅನ್ನುವುದು ಕಾಡುವುದಿಲ್ಲ. ಮಹಿಳೆಯರು ಮಹಿಳೆಯಾಗಿ ಭೂಮಿಗೆ ಬರುವ ಮುನ್ನವೆ ಹಲವಾರು ಸಂಕಷ್ಟಗಳಿಗೆ ಒಳಗಾಗುತ್ತಾಳೆ. ಅಂದರೆ ಅದೃಷ್ಟ ಚೆನ್ನಾಗಿದ್ದರೆ, ಅವಳು ಭೂಲೋಕಕ್ಕೆ ಕಾಲಿಡುತ್ತಾಳೆ. ಇಲ್ಲದಿದ್ದರೆ ಭ್ರೂಣದಲ್ಲಿಯೇ ಕೊಲ್ಲಲ್ಪಡುತ್ತಾಳೆ. ಈ ಹಂತದಿಂದ ಪಾರಾಗಿ ಭೂಮಿಗೆ ಬಂದರೂ ಯಾವುದೇ ತರಹದ ಸ್ವಾತಂತ್ರ್ಯವನ್ನು ಆಕೆ ಹೊಂದಿರುವುದಿಲ್ಲ. ಅಂದರೆ ಕುಟುಂಬದಲ್ಲಿ ನಡೆಯುವ ಸಾಮಾಜೀಕರಣದ ಪ್ರಕ್ರಿಯೆ ಗಂಡು ಮತ್ತು ಹೆಣ್ಣಿನ ನಡುವೆ

ಶಾಶ್ವತವಾದ ತಾರತಮ್ಯವನ್ನು ಸೃಷ್ಟಿಸುತ್ತದೆ. ಹಾಗಾಗಿ ಕುಟುಂಬವು ತಾರತಮ್ಯದ ಮೂಲ ಸ್ಥಾನವಾಗಿದೆ. ಇದರ ನಂತರದ ಸ್ಥಾನ ವಿವಾಹದ್ದು. ಇದೂ ಕೂಡ ಮಹಿಳೆಯರ ಚಹರೆಯನ್ನು ಇನ್ನಿಲ್ಲದಂತೆ ಮಾಡಿಬಿಡುತ್ತದೆ. ಮುಖ್ಯವಾಗಿ ವಿವಾಹ ಎಂಬುದು ಒಂದು ಸಾಮಾಜಿಕ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದರ ಮೂಲಕ ಸ್ತ್ರೀ ಪುರುಷರ ನಡುವಿನ ತಾರತಮ್ಯಕ್ಕೆ ಭದ್ರವಾದ ಬುನಾದಿ ಹಾಕುತ್ತದೆ. ವಿವಾಹದ ನಂತರ ಮಹಿಳೆಯರು ಶಾಶ್ವತವಾಗಿ ಗಂಡಿನ ಅಡಿಯಾಳಾಗಿಯೇ ಇರಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಸ್ವತಂತ್ರವಾಗಿ ಜೀವಿಸುವ ಮತ್ತು ಸ್ವತಂತ್ರವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಕಳೆದುಕೊಂಡು ಬಿಡುತ್ತಾರೆ. ಮುಖ್ಯವಾಗಿ ಕುಟುಂಬದಲ್ಲಿ ನಡೆಯುವ ಸಾಮಾಜೀಕರಣದ ಪ್ರಕ್ರಿಯೆ ಹೆಣ್ಣನ್ನು ಎಲ್ಲಾ ಅವಕಾಶಗಳಿಂದ ವಂಚಿತರನ್ನಾಗಿ ಮಾಡುತ್ತದೆ. ಅಂದರೆ ಶಿಕ್ಷಣ, ಉದ್ಯೋಗ, ಆರ್ಥಿಕವಾಗಿ ಸ್ವಾವಲಂಬಿಯಾಗುವುದು, ರಾಜಕೀಯ ಪ್ರವೇಶ, ಸ್ವಯಂ ಉದ್ಯೋಗ ಮಾಡುವುದು ಹೀಗೆ ಎಲ್ಲ ಬಗೆಯ ಕ್ಷೇತ್ರಗಳಿಂದ ದೂರವೆ ಇರಿಸಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಕ್ಕೆ ತೆರೆದುಕೊಳ್ಳುವುದೆಂದರೆ ಬಹಳ ಕಷ್ಟದ ಕೆಲಸವೇ ಸರಿ. ಅದು ಸಾಂಪ್ರದಾಯಿಕವಾದ ಕೆಲಸಗಳಿಗೆ ಸಾಮಾಜಿಕ ವ್ಯವಸ್ಥೆ ಒಪ್ಪಿಗೆ ಕೊಡಬಹುದೇನೋ. ಆದರೆ ಸಮಾಜಕ್ಕೆ ಮುಖಾಮುಖಿಯಾಗುವಂತಹ ಕೆಲಸಗಳಿಗೆ ಯಾವುದೇ ಕಾರಣಕ್ಕೂ ಒಪ್ಪಿಗೆಯನ್ನು ಕೊಡಲಾರದು. ಆದರೂ ಈ ಬಗೆಯ ನಿರ್ಬಂಧಗಳ ನಡುವೆಯೂ ಕೆಲವು ಮಹಿಳೆಯರು ಮಾಧ್ಯಮ ಕ್ಷೇತ್ರಕ್ಕೆ ಕಾಲಿರಿಸಿದ್ದಾರೆ. ಇವರ್‍ಯಾರೂ ಹಾಗೆಯೇ ಸುಮ್ಮನೇ ಈ ಕ್ಷೇತ್ರದಲ್ಲಿ ಕಾಲಿಟ್ಟವರಲ್ಲ. ಬದಲಾಗಿ ಹಲವಾರು ಸಂಕಷ್ಟಗಳನ್ನು ಎದುರಿಸಿಯೇ ಈ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಈ ಕ್ಷೇತ್ರವನ್ನು ಪ್ರವೇಶಿಸಿದ ಮೇಲೆ ಇಲ್ಲಿ ಶಾಶ್ವತವಾಗಿ ನೆಲೆಯೂರಲು ಹರಸಾಹಸ ಪಡುತ್ತಿದ್ದಾರೆ. ಜತೆಗೆ ಮಾಧ್ಯಮ ಕ್ಷೇತ್ರದ ಒಳಗೆ ಇರುವಂತಹ ಎಲ್ಲ ಬಗೆಯ ತಾರತಮ್ಯಗಳನ್ನು, ಕಿರುಕುಳಗಳನ್ನು ಸಹಿಸಿಕೊಳ್ಳುತ್ತಲೇ ತಮ್ಮ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತಿದ್ದಾರೆ.

ಈ ಅಧ್ಯಾಯದಲ್ಲಿ ಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಎದುರಿಸಿದ ಮತ್ತು ಎದುರಿಸುತ್ತಿರುವ ಸಮಸ್ಯೆಗಳನ್ನು ಎರಡು ನೆಲೆಯಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳೆಂದರೆ 1. ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವಾಗ ಎದುರಾಗುವ ಸಮಸ್ಯೆಗಳು 2. ಉದ್ಯೋಗಕ್ಕೆ ಸೇರಿಕೊಂಡ ನಂತರ ಎದುರಾಗುವ ಸಮಸ್ಯೆಗಳು. ಇವುಗಳಲ್ಲಿ ಪುನಃ ಉಪ ವಿಭಾಗಗಳನ್ನಾಗಿ ವಿಂಗಡಿಸಿಕೊಂಡು ಈ ಅಧ್ಯಾಯವನ್ನು ಸ್ತ್ರೀವಾದಿ ನೆಲೆಯಲ್ಲಿ ಮುಂದಿನಂತೆ ವಿಶ್ಲೇಷಿಸಲಾಗಿದೆ.

5.1 ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವಾಗ ಮಹಿಳೆಯರಿಗೆ ಎದುರಾಗುವ ಸಮಸ್ಯೆಗಳು

ಮಹಿಳೆಯರು ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸಬೇಕಾದರೆ ಹಲವಾರು ಸಂಕಷ್ಟಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸಿ ಮುನ್ನೆಡೆಯಬೇಕಾಗುತ್ತದೆ. ಇತ್ತೀಚಿನ 21ನೇ ಶತಮಾನದ ಸಂದರ್ಭದಲ್ಲಿ ಮಹಿಳೆಯರು ಉದ್ಯೋಗ ಕ್ಷೇತ್ರಕ್ಕೆ ಮುಕ್ತವಾಗಿ ಪ್ರವೇಶಿಸಲು ಅವಕಾಶವನ್ನು ಸಮಾಜ ಕೊಟ್ಟಿದೆ. ಹಾಗೆಂದು ಮಾತ್ರಕ್ಕೆ ಸಾಮಾಜಿಕ ವ್ಯವಸ್ಥೆ ಉದಾರವಾಗಿದೆ ಎಂದು ತಿಳಿಯುವ ಹಾಗಿಲ್ಲ. ಉದ್ಯೋಗ ಕ್ಷೇತ್ರಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದರೆ ಅದರ ಹಿಂದೆ ಪಿತೃಪ್ರಧಾನ ವ್ಯವಸ್ಥೆಯ ಲಾಭದ ಮನೋಭಾವ ಕೆಲಸ ಮಾಡುತ್ತಿರುತ್ತದೆ. ಹಾಗಾಗಿ ಇದನ್ನು ಸಾಮಾನ್ಯೀಕರಿಸಿ ಹೇಳುವ ಹಾಗಿಲ್ಲ. ಹಾಗೆಯೇ ಉದ್ಯೋಗ ಕ್ಷೇತ್ರಕ್ಕೆ ಮಹಿಳೆಯರಿಗೆ ಅವಕಾಶವೇನೋ ಸಿಕ್ಕಿದೆ ನಿಜ. ಆದರೆ ಯಾವ ಮಹಿಳೆಯರಿಗೆ ಮುಕ್ತ ವಾತಾವರಣ ಸಿಕ್ಕಿದೆ ಎಂದು ಕೇಳಿಕೊಂಡಾಗ, ಅದರ ಫಲಿತಾಂಶ ಮಾತ್ರ ನಿರಾಶಾದಾಯಕ ಆಗಿರುತ್ತದೆ. ಏಕೆಂದರೆ, ನಗರ ಪ್ರದೇಶದಲ್ಲಿ ವಾಸಿಸುವ ಮಹಿಳೆಯರು ಬಹು ಬೇಗನೇ ವಿದ್ಯಾಭ್ಯಾಸಕ್ಕೆ ತೆರೆದುಕೊಳ್ಳುತ್ತಾರೆ. ಆದ್ದರಿಂದ ಅವರು ಉದ್ಯೋಗ ಕ್ಷೇತ್ರಕ್ಕೆ ಬಹು ಬೇಗನೆ ಸೇರಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಆದರೆ, ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಈ ಶಿಕ್ಷಣವೆಂಬುದೇ ಗಗನ ಕುಸುಮವಾಗಿರುವ ಸಂದರ್ಭದಲ್ಲಿ ಉದ್ಯೋಗ ಕ್ಷೇತ್ರವೆಂಬುದು ಇನ್ನೂ ಊಹಿಸಲೂ ಅಸಾಧ್ಯವಾದ ಸಂಗತಿಯಾಗಿದೆ. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಮಹಿಳೆಯರಿಗೆ ಶಿಕ್ಷಣವನ್ನು ಪಡೆಯಲು ಮತ್ತು ಉದ್ಯೋಗವನ್ನು ಮಾಡಲು ಮುಕ್ತವಾದ ವಾತಾವರಣ ಇಲ್ಲದಾಗಿದೆ. ಇವುಗಳ ಮಧ್ಯೆಯೇ ಕೆಲವು ಮಹಿಳೆಯರು ದಿಟ್ಟ ಹೆಜ್ಜೆಯನ್ನಿಟ್ಟು ಶಿಕ್ಷಣವನ್ನು ಪೂರ್ಣಗೊಳಿಸುವುದಷ್ಟೆ ಅಲ್ಲದೇ, ತಾವು ಪಡೆದ ಶಿಕ್ಷಣಕ್ಕೆ ತಕ್ಕಂತೆ ಉದ್ಯೋಗವನ್ನೂ ಪಡೆದುಕೊಂಡಿರುವ ಉದಾಹರಣೆಗಳು ಇವೆ. ಮುಖ್ಯವಾಗಿ ಉದ್ಯೋಗ ಕ್ಷೇತ್ರವನ್ನು ಯಾವುದೇ ಅಡೆತಡೆಗಳಿಲ್ಲದೆ ಪ್ರವೇಶಿಸಿಲ್ಲ. ಬದಲಾಗಿ ಹಲವು ಸಮಸ್ಯೆಗಳನ್ನು ಎದುರಿಸಿ ಉದ್ಯೋಗವನ್ನು ಮಹಿಳೆಯರು ಪಡೆದುಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮಕ್ಕೆ ಸಂಬಂಧಿಸಿದಂತೆ ಮಹಿಳೆಯರು ಈ ಕ್ಷೇತ್ರಕ್ಕೆ ಪ್ರವೇಶವನ್ನು ಪಡೆಯುವ ಮೊದಲೇ ಹಲವು ಸಮಸ್ಯೆಗಳನ್ನು ಎದುರಿಸಿರುವುದು ಕಂಡುಬರುತ್ತದೆ. ಈ ಸಮಸ್ಯೆಗಳನ್ನು ಮುಖ್ಯವಾಗಿ ಐದು ವಿಧಗಳಲ್ಲಿ ವಿಂಗಡಿಸಿಕೊಂಡು ವಕ್ತೃಗಳ ಹೇಳಿಕೆಗಳಿಂದ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಅ. ಕುಟುಂಬದಿಂದ ಎದುರಾದ ಸಮಸ್ಯೆಗಳು : 21ನೇ ಶತಮಾನದ ಸಂದರ್ಭದಲ್ಲಿಯೂ ಮಹಿಳೆಯರು ಉದ್ಯೋಗಕ್ಕೆ ಸೇರಬೇಕಾದರೆ ಕುಟುಂಬದಲ್ಲಿನ ಹಿರಿಯರ ಒಪ್ಪಿಗೆ ಪಡೆದುಕೊಳ್ಳಲೇ ಬೇಕಿದೆ. ಇಲ್ಲವಾದರೆ ಕುಟುಂಬದಿಂದ ಮತ್ತು ಸಮಾಜದಿಂದ ಅವಹೇಳನಕ್ಕೆ ಒಳಗಾಗಬೇಕಾಗುತ್ತದೆ. ಅದರಲ್ಲಿಯೂ ಮಹಿಳೆಯರು ಇಂತಹ ಕ್ಷೇತ್ರದಲ್ಲಿ ಕೆಲಸ ಮಾಡಿದರೆ ಮಾತ್ರ ಸುರಕ್ಷಿತವಾಗಿರುತ್ತಾರೆ ಎಂಬ ಪೂರ್ವಾಗ್ರಹಳು ಪಿತೃಪ್ರಧಾನ ವ್ಯವಸ್ಥೆಗಿರುತ್ತದೆ. ಇದು

ಇತ್ತೀಚಿನ ಒಲವು ಎಂದೇ ಹೇಳಬಹುದು. ಈ ಹಿಂದೆ "ಉದ್ಯೋಗಂ ಪುರುಷ ಲಕ್ಷಣಂ" ಎಂಬ ನಾಣ್ನುಡಿ ಜಾರಿಯಲ್ಲಿತ್ತು. ಉದ್ಯೋಗವನ್ನು ಪುರುಷರು ಮಾತ್ರವೇ ಮಾಡಬೇಕು. ಅದು ಅವರ ಹಕ್ಕು ಮತ್ತು ಕರ್ತವ್ಯ ಎಂದು ಭಾವಿಸಲಾಗುತ್ತಿತ್ತು. ಜೊತೆಗೆ ಮಹಿಳೆಯರೇನಾದರೂ ಉದ್ಯೋಗಕ್ಕೆ ತೆರೆದುಕೊಳ್ಳುತ್ತಾರೆ ಅಂದರೆ ಅದನ್ನು ಖಡಾಖಂಡಿತವಾಗಿಯೂ ನಿರಾಕರಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಈ ನಾಣ್ನುಡಿ ಇಲ್ಲವಾಗಿದೆ. ಏಕೆಂದರೆ ಮಹಿಳೆಯರು ಇಂದು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಹಾಗಾಗಿ ಇಂದು ಈ ನಾಣ್ನುಡಿಗೆ ಯಾವುದೇ ಬೆಲೆ ಇಲ್ಲದಂತಾಗಿದೆ. ಹಾಗಂತ ಮಹಿಳೆಯರು ಉದ್ಯೋಗಕ್ಕೆ ತೆರೆದುಕೊಂಡಿದ್ದಾರೆ ಎಂದರೆ ಸಮಾಜ ಅವರಿಗೆ ಸುಲಭವಾಗಿ ಅವಕಾಶ ಮಾಡಿಕೊಟ್ಟಿದೆ ಎಂದು ಹೇಳಲಾಗುವುದಿಲ್ಲ. ಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮಕ್ಕೆ ತೆರೆದುಕೊಂಡ ಮಹಿಳೆಯರನ್ನು ನೋಡುವುದಾದರೆ, ಇವರು ಈ ಕ್ಷೇತ್ರಕ್ಕೆ ಸೇರಿಕೊಳ್ಳುವುದಕ್ಕೂ ಮುಂಚಿತವಾಗಿ ಕುಟುಂಬದಿಂದ ಹಲವು ಸಮಸ್ಯೆಗಳನ್ನು ಮತ್ತು ನಿಂದನೆಗಳನ್ನು ಅನುಭವಿಸಿದ್ದಾರೆ. ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಂದಿನಿ ಅವರು ಹೇಳುವ ಹಾಗೆ "ಸಾರ್ ನಾನು ಹಳ್ಳಿಯಿಂದ ಬಂದವಳು. ನಮ್ಮ ಊರು ಹಾಸನ ಸಮೀಪದ ಗ್ರಾಮ. ನಾನು ಓದಿದ್ದು ಬಿ.ಎ. ನಮ್ಮ ಹಳ್ಳಿಯಲ್ಲಿ ಇಷ್ಟು ಓದಿಸುವುದೇ ದೊಡ್ಡ ಮಾತು. ಅದರಲ್ಲೂ ನಮ್ಮ ಕುಟುಂಬದಲ್ಲಿ ಮತ್ತಷ್ಟು ಸಮಸ್ಯೆ. ಅದರ ನಡುವೆಯೇ ನನ್ನನ್ನು ಪದವಿಯವರೆಗೂ ಓದಿಸಿದರು. ಪದವಿ ಮುಗಿಯುತ್ತಿದ್ದಂತೆಯೇ ನನಗೆ ಮದುವೆ ಮಾಡಬೇಕೆಂದು ತಯಾರಿ ನಡೆಸಿದ್ದರು. ಆದರೆ, ನಾನು ದಿನವೂ ಟಿವಿಯಲ್ಲಿ ನ್ಯೂಸ್ ಓದುತ್ತಿದ್ದ ಮಹಿಳೆಯರನ್ನು ನೋಡಿ ಅವರಂತೆ ಆಗಬೇಕು ಅಂತ ಕನಸು ಕಂಡಿಕೊಂಡಿದ್ದೆ. ಮದುವೆ ಮಾಡಿಕೊಂಡರೆ, ಆ ಕನಸು ಕನಸಾಗಿಯೇ ಉಳಿಯುತ್ತದೆ ಅಂತ ಅನಿಸುತ್ತಿತ್ತು. ಒಂದು ದಿನ ಧೈರ್ಯ ಮಾಡಿ, ಅಮ್ಮನಿಗೆ ನನ್ನ ಕನಸನ್ನು ಹಂಚಿಕೊಂಡೆ. ನಾನು ಕೆಲಸಕ್ಕೆ ಹೋಗಬೇಕು ಅಂತ ತಿಳಿಸಿದೆ. ನನ್ನ ಮಾತು ಕೇಳಿದ ಅಮ್ಮ ಸಿಡಿಮಿಡಿಗೊಂಡರು. ನಿನ್ನ ಆಸೆಯಂತೆ ಪದವಿವರೆಗೂ ಓದಿದ್ದೀಯಾ. ಅಲ್ಲಿಗೆ ಮುಗಿಯಿತು. ಉದ್ಯೋಗದ ವಿಚಾರದಲ್ಲಿ ನಾವು ಒಪ್ಪುವುದಿಲ್ಲ. ನಿನಗೆ ಮದುವೆ ಮಾಡುತ್ತೇವೆ. ನಂತರ ನಿನ್ನ ಗಂಡನ ಅಪ್ಪಣೆ ಪಡೆದುಕೊಂಡು, ಓದುವುದಕ್ಕೆ ಹೋಗ್ತಿಯೋ ಅಥವಾ ಕೆಲಸಕ್ಕೆ ಹೋಗ್ತೀಯೊ ನಿರ್ಧಾರ ನಿಮ್ಮಿಬ್ಬರದ್ದು ಅಂತ ಖಡಕ್ಕಾಗಿ ಹೇಳಿಬಿಟ್ಟರು. ಉದ್ಯೋಗದ ವಿಚಾರದಲ್ಲಿ ನಾನು ಪಟ್ಟು ಬಿಡದೆ ಇದ್ದಾಗ ಮತ್ತು ಒಂದು ದಿನ ಉಪವಾಸ ಕೂತುಬಿಟ್ಟಾಗ, ಅವರಿಗೆ ಮುಂದೇನು ಮಾಡಬೇಕು ಅಂತ ತೋಚಲಿಲ್ಲ. ನನ್ನ ಹಠ ಜಾಸ್ತಿ ಆಗುತ್ತಿದ್ದಂತೆಯೇ, ಕೆಲಸ ಮಾಡಲು ಒಪ್ಪಿಗೆಕೊಟ್ಟರು. ಆದರೆ ಕೆಲಸ ಎಲ್ಲಿ? ಯಾವ ಸಂಸ್ಥೆ? ಅಂತ ಅವರಿಗೆ ಹೇಳಿರಲಿಲ್ಲ. ಮನೆಯಲ್ಲಿ ಅಪ್ಪ ಅಮ್ಮ ಕೆಲಸ ಮಾಡಲು ಒಪ್ಪಿಗೆ ಕೊಟ್ಟರಲ್ಲ ಅನ್ನುವುದೇ ನನಗೆ ಬಹು ದೊಡ್ಡ ಸಂಗತಿ ಆಗಿತ್ತು. ಒಂದು ದಿನ ಟಿವಿ9 ಸುದ್ದಿ ವಾಹಿನಿಯವರು ಕೆಲಸಕ್ಕೆ ಅರ್ಜಿ ಆಹ್ವಾನಿಸಿದ್ದಾರೆ ಅಂತ ಗೊತ್ತಾಯಿತು. ನಾನು ಆ ಸುದ್ದಿ ವಾಹಿನಿಯಲ್ಲಿ ಕೆಲಸಕ್ಕಾಗಿ ಅರ್ಜಿ ಹಾಕುತ್ತೇನೆ ಅಂತ

ಪಾಲಕರಿಗೆ ತಿಳಿಸಿದೆ. ನನ್ನ ಮಾತು ಕೇಳಿ ಅಪ್ಪನಿಗೆ ಕೋಪ ಬಂತು. ಟಿವಿ–ಗೀವಿ ಅಂತ ಅಲ್ಲಿಗೆ ಕೆಲ್ಸಕ್ಕೆ ಏನಾದ್ರು ಹೋದ್ರೆ ಸರಿ ಇರಲ್ಲ ಅಂತ ಎಚ್ಚರಿಸಿದರು. ಅಲ್ಲದೇ, ಅದು ನಮ್ ಕುಟುಂಬಕ್ಕೆ ಸರಿಯಾದ ಕೆಲಸವಲ್ಲ ಅಂತ ರೇಗಿದರು. ಟಿವಿಯಲ್ಲಿ ನೀನು ಯಾರದೋ ಜೊತೆ ಕೆಲಸ ಮಾಡಬೇಕು. ಅಷ್ಟು ಜನರ ಮಧ್ಯೆ ನೀನು ಕೆಲಸ ಮಾಡುವುದನ್ನು ನಮ್ಮ ಕುಟುಂಬದ ಸದಸ್ಯರು ಒಪ್ಪಲ್ಲ. ಕೆಲಸ ಮಾಡುವ ಸ್ಥಳದಲ್ಲಿ ಏನಾದ್ರೂ ಹೆಚ್ಚು ಕಡಿಮೆ ಆಗಿಬಿಟ್ಟರೆ ನಮ್ಮ ಮನೆತನದ ಮಾನ ಮರ್ಯಾದೆ ಹೋಗುತ್ತದೆ. ಅದನ್ನು ತಡೆದುಕೊಳ್ಳುವ ಶಕ್ತಿ ನಮಗಿಲ್ಲ. ನೀನು ಸುದ್ದಿ ವಾಹಿನಿಯಲ್ಲಿ ಕೆಲಸಕ್ಕೆ ಹೋಗುವುದು ಬೇಡ. ನಮ್ಮ ಮಾತು ಮೀರಿ ನೀನು ಅಲ್ಲಿಗೆ ಕೆಲಸಕ್ಕೆ ಹೋಗ್ತೇನೆ ಅಂದರೆ, ಶಾಶ್ವತವಾಗಿ ಮನೆ ಬಿಟ್ಟು ಹೊರಡು ಅಂದರು. ಅಲ್ಲದೇ, ಅಲ್ಲಿಗೆ ಹೋದ ನಂತರ ಮತ್ತೆ ಊರು ಕಡೆ, ನಮ್ ಮನೆ ಕಡೆ ತಿರುಗಿ ಕೂಡ ನೋಡಬೇಡ ಅಂತ ಆದೇಶ ಹೊರಡಿಸಿದ್ರು. ಆಗ ನನಗೆ ಏನ್ ಮಾಡ್ಬೇಕು ಅಂತ ಗೊತ್ತಾಗಲಿಲ್ಲ. ಮನೆಯಲ್ಲಿ ನಡೆದ ಸಂಗತಿಗಳನ್ನೆಲ್ಲ ನನ್ನ ಆತ್ಮೀಯರ ಜತೆ ಹಂಚಿಕೊಂಡೆ. ಅವರು ಧೈರ್ಯ ತುಂಬಿದರು. 'ನೀನು ಮೊದ್ಲು ಆ ಇಂಟರ್‌ವ್ಯೂವ್‌ಗೆ ಹೋಗು. ಆಮೇಲೆ ಏನಾಗತ್ತೊ ನೋಡೋಣ ಅಂತ ಧೈರ್ಯ ಹೇಳಿದರು. ಮನೆಯಲ್ಲಿ ಸುಳ್ಳು ಹೇಳಿಕೊಂಡು ಸಂದರ್ಶನಕ್ಕೆ ಹಾಜರಾದೆ. ಕೆಲಸ ಕೂಡ ಸಿಕ್ಕಿತು. ಒಂದು ಕಡೆ ನಾನು ಇಷ್ಟಪಟ್ಟ ಕೆಲಸ ಸಿಕ್ಕಿದೆ. ಮತ್ತೊಂದು ಕಡೆ ಮನೆಯವರು ಕಳುಹಿಸುತ್ತಿಲ್ಲ. ಆಗಿದ್ದಾಗಲಿ ಅಂತ ನನಗೆ ಕೆಲಸ ಸಿಕ್ಕಿರುವ ವಿಚಾರವನ್ನು ಮೊದಲು ಅಮ್ಮನಿಗೆ ಹೇಳಿದೆ. ಆಕೆ ಅದನ್ನು ಅಪ್ಪನಿಗೆ ತಿಳಿಸಿದಳು. ಮತ್ತೆ ದೊಡ್ಡ ರಾದ್ಧಾಂತವೇ ಆಯ್ತು. ಅವರು ಎಷ್ಟೇ ವಿರೋಧಿಸಿದರೂ, ನಾನು ಕೆಲಸಕ್ಕೆ ಹೋಗುವ ನಿರ್ಧಾರ ಪ್ರಕಟಿಸಿದೆ. ಅಪ್ಪನೂ ಕೂಡ 'ಮೊದ್ಲು ನೀನು ಈ ಮನೆಯಿಂದ ಹೊರಡು' ಅಂತ ಹೇಳಿಬಿಟ್ರು. ಅವರ ಮಾತನ್ನೇ ನಾನು ಸವಾಲಾಗಿ ತೆಗೆದುಕೊಂಡು ಮನೆಯಿಂದ ಆಚೆ ಬಂದೆ. ನನ್ನಿಷ್ಟದ ಕೆಲಸಕ್ಕೂ ಸೇರಿಕೊಂಡೆ. ಕೆಲಸದಲ್ಲಿ ತುಂಬಾನೇ ಸ್ಟ್ರಗಲ್ ಮಾಡಿದೆ. ಬರುವ ಕಷ್ಟಗಳನ್ನು ಸಹಿಸಿಕೊಂಡೆ. ಉತ್ತಮವಾಗಿಯೇ ಕೆಲಸ ಮಾಡಿದೆ. ಆನಂತರ ನಮ್ಮ ಕುಟುಂಬದವರಿಂದಲೇ ಸೈ ಎನಿಸಿಕೊಂಡೆ. ಆದ್ರೆ ಕೆಲಸಕ್ಕೆ ಸೇರುವಾಗ ಕುಟುಂಬದಿಂದ ನನಗಾದ ಕಿರಿಕಿರಿ, ಮಾನಸಿಕ ಹಿಂಸೆ ಈಹೊತ್ತಿಗೂ ನೋವು ತರುತ್ತದೆ. ಈ ಬಗೆಯ ಸಮಸ್ಯೆಗಳು ಎಲ್ಲಾರಿಗೂ ಎದುರಾಗುತ್ತೆ ಎಂದು ಹೇಳುತ್ತಿಲ್ಲ, ಅನೇಕ ಮಹಿಳೆಯರು ಖಂಡಿತಾ ಇಂತಹ ಸಮಸ್ಯೆಗಳನ್ನು ಎದುರಿಸಿರುತ್ತಾರೆ. ಹಾಗಂತ ಮಕ್ಕಳ ಮೇಲೆ ಪಾಲಕರಿಗೆ ಪ್ರೀತಿ ಇಲ್ಲವಾ ಎಂಬ ಪ್ರಶ್ನೆ ಹುಟ್ಟಬಹುದು. ಅವರು ಹಾಗೆ ಆಡುವುದಕ್ಕೆ ಕಾರಣ, ಮಾಧ್ಯಮದ ಬಗೆಗಿರುವ ಅವರ ಅಪನಂಬಿಕೆ. ಈ ಅಪನಂಬಿಕೆಯನ್ನು ಮೊದಲು ಸರಿ ಮಾಡಬೇಕು. ಆಗ ಮಾತ್ರ ಮಹಿಳೆಯರು ಯಾವುದೇ ಕೌಟುಂಬಿಕ ಹಿಂಸೆಯನ್ನು ಅನುಭವಿಸದೆ, ಮಾಧ್ಯಮ ಕ್ಷೇತ್ರದಲ್ಲಿ ಕಾಲಿಡಲು ಅನುಕೂಲವಾಗುತ್ತದೆ" ಎಂದು ಹೇಳಿದರು.

ಪತ್ರಕರ್ತೆ ರಜಿಯಾ ಕೂಡ ತಮ್ಮ ಕುಟುಂಬದಿಂದಾದ ಸಮಸ್ಯೆಯನ್ನು ಹೇಳಿಕೊಂಡಿದ್ದು ಹೀಗೆ, "ನಾನು ಮಂಗಳೂರು ಮೂಲದ ಮುಸ್ಲಿಂ ಹುಡುಗಿ. ನಮ್ಮದು ಕಟ್ಟಾ ಮುಸ್ಲಿಂ

ಕುಟುಂಬ. ನಮ್ಮ ಧರ್ಮದಲ್ಲಿನ ಮಹಿಳೆಯರು ಹೇಗಿರುತ್ತಾರೆ, ಹೇಗಿರಬೇಕು ಅಂತ ಹೇಳುವುದನ್ನು ಎಲ್ಲರೂ ಕೇಳಿರ್ತಾರೆ. ಮುಸ್ಲಿಂ ಹುಡುಗಿಯರಿಗೆ ಶಿಕ್ಷಣ ಸಿಗುವುದೇ ಅಪರೂಪ. ಹೊರಗೆ ಹೋಗಿ ಕೆಲಸ ಮಾಡುವುದಂತೂ ದೂರದ ಮಾತು. ಮನೆಯಿಂದ ಆಚೆ ಬಂದರೆ ಬುರ್ಕಾ ಹಾಕಬೇಕು. ಆದರೆ, ನನಗೆ ಇದಾವುದೂ ಇಷ್ಟವಿರಲಿಲ್ಲ. ಎಂಟನೇ ಕ್ಲಾಸ್‌ನಲ್ಲಿ ಇರುವಾಗಲೇ ನನಗೆ ಭರತನಾಟ್ಯ ಕಲಿಯಬೇಕು ಅನ್ನುವ ಆಸೆಯಿತ್ತು. ಯಕ್ಷಗಾನದಲ್ಲಿ ಕುಣಿಯಬೇಕು ಅನ್ನುವ ಬಯಕೆ ಆಗಿತ್ತು. ಇವುಗಳ ಜತೆಗೆ ಮೀಡಿಯಾದಲ್ಲಿ ಆ್ಯಂಕರ್ ಆಗಬೇಕು ಅನ್ನುವುದು ನನ್ನ ದೊಡ್ಡ ಕನಸಾಗಿತ್ತು. ಹಾಗಾಗಿಯೇ ಪದವಿ ಶಿಕ್ಷಣ ಮುಗಿಯುತ್ತಾ ಇದ್ದಂತೆ, ಸುದ್ದಿ ವಾಹಿನಿಯಲ್ಲಿ ನಾನು ಕೆಲಸಕ್ಕೆ ಹೋಗ್ತೀನಿ ಅಂತ ನನ್ನ ಕುಟುಂಬದ ಸದಸ್ಯರಿಗೆ ಹೇಳಿದೆ. ನನ್ನ ಮಾತು ಕೇಳಿ ಅಪ್ಪ ಅಮ್ಮನಿಗೆ ಒಂದು ರೀತಿ ಶಾಕ್ ಆಗಿತ್ತು. ನಾನೇ ಎಷ್ಟೇ ಸಮಾಧಾನದಿಂದ ಹೇಳಿದರೂ, ನನ್ನ ಕುಟುಂಬ ಒಪ್ಪಲಿಲ್ಲ. ನಮ್ಮ ತಂದೆ ನನ್ನನ್ನು ಚೆನ್ನಾಗಿಯೇ ತರಾಟೆಗೆ ತೆಗೆದುಕೊಂಡರು. ನಾವು ಮುಸ್ಲಿಂ ಸಮುದಾಯದವರು. ನಮ್ಮ ಧರ್ಮದಲ್ಲಿ ಮುಸ್ಲಿಂ ಗಂಡಸರು ಮಾತ್ರ ಕೆಲಸಕ್ಕೆ ಹೋಗ್ಬೇಕು. ಹೆಣ್ಮಕ್ಕಳು ಮನೆಯಲ್ಲೇ ಇರ್ಬೇಕು. ಹಾಗೆ ಮಾಡದೇ ಇದ್ದರೆ 'ಅಲ್ಲಾ' ಮೆಚ್ಚುವುದಿಲ್ಲ. ಅಲ್ಲದೇ, ನಮ್ಮ ಸಮುದಾಯದ ಮುಖಂಡರಿಗೆ ಏನಾದ್ರು ಈ ವಿಷಯ ಗೊತ್ತಾದರೆ ಅವ್ರು ಸುಮ್ನೆ ಇರುವುದಿಲ್ಲ. ನಿನ್ನನ್ನು ಮತ್ತು ನಮ್ಮ ಕುಟುಂಬದವರನ್ನು ಸಮಾಜದಿಂದ, ನಮ್ಮ ಧರ್ಮದಿಂದ ಬಹಿಷ್ಕಾರ ಆಗಬಹುದು. ನೀನು ಎಲ್ಲಿಗೂ ಹೋಗುವುದು ಬೇಡ. ನಿನ್ನ ದುಡಿಮೆಯಿಂದ ನಾವು ಬದುಕಬೇಕಾಗಿಲ್ಲ. ನಿನಗೆ ಯಾವೆಲ್ಲ ಸೌಕರ್ಯಗಳು ಬೇಕೋ, ಅದನ್ನು ನಾವು ಕೊಡುತ್ತೇವೆ. ನೆಮ್ಮದಿಯಿಂದ ಮದುವೆ ಮಾಡಿಕೊಂಡು, ಗಂಡನ ಮನೆಯಲ್ಲಿ ಸುಖವಾಗಿರು ಅಂದರು. ಆದರೆ, ನಾನು ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅಪ್ಪ ಏನೂ ಹೇಳಿದರೂ, ನಾನು ಅವರ ಮಾತನ್ನು ಕೇಳಲಿಲ್ಲ. ಹಠ ಮಾಡ್ದೆ. ಕೊನೆಗೆ ನನ್ನ ಸಹೋದರನ ಸಹಾಯದಿಂದಾಗಿ ಮೀಡಿಯಾ ಕ್ಷೇತ್ರದಲ್ಲಿಯೇ ಕೆಲಸವನ್ನು ಆರಿಸಿಕೊಂಡೆ. ನೋಡಿ, ಬೇರೆ ಕ್ಷೇತ್ರದಲ್ಲಿ ಏನಾದರೂ ಕೆಲಸ ಆಗಿದ್ದರೆ ಕುಟುಂಬದವರು ಒಪ್ಪಿಕೊಳ್ಳಬಹುದಿತ್ತೇನೋ, ಈ ಮೀಡಿಯಾದಲ್ಲಿ ಕೆಲಸ ಮಾಡುವ ವಿಚಾರದಲ್ಲಿ ನಮಗೆ ನಮ್ಮ ಧರ್ಮ ಕಟ್ಟಿ ಹಾಕಿಬಿಡುತ್ತೆ. ನಾವು ಸರಿಯಾದ ನಿರ್ಣಯ ತೆಗೆದುಕೊಳ್ಳದೆ ಹೋದ್ರೆ ಮುಗಿದೇ ಹೋಯಿತು. ನಮ್ಮ ಜೀವನವನ್ನೆ ಹಾಳು ಮಾಡಿಬಿಡುತ್ತೆ. ಹಾಗಂತ ನಾನು ಧರ್ಮದ ವಿರೋಧಿಯಲ್ಲ. ನನ್ನ ಕುಟುಂಬದ ವಿರುದ್ಧವೂ ನಾನು ಮಾತಾಡುತ್ತಿಲ್ಲ. ಬದಲಾಗಿ ಎಲ್ಲಾ ಧರ್ಮದ ಮಹಿಳೆಯರಿಗೂ ಉದ್ಯೋಗ ಮಾಡುವ ಸಮಾನ ಅವಕಾಶ ಸಿಗಬೇಕು ಅಂತ ಹೇಳುತ್ತಿದ್ದೇನೆ. ಧರ್ಮದ ಕಾರಣದಿಂದಾಗಿ ಯಾವ ಮಹಿಳೆಯೂ ಸ್ವಾವಲಂಬಿ ಆಗದಂತೆ ಹತ್ತಿಕ್ಕಬಾರದು ಎಂದು ಹೇಳುತ್ತಿದ್ದೇನಷ್ಟೆ" ಎಂದು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಲಕ್ಷ್ಮೀ ಎಂಬುವವರು ಹೇಳುತ್ತಾ "ಅಷ್ಟು ಸುಲಭವಾಗಿ ನಾನು ಈ ಮೀಡಿಯಾಕ್ಕೆ ಬರಲಿಲ್ಲ. ಎಲ್ಲಾ ಕಷ್ಟವನ್ನೂ ಅನುಭವಿಸಿದ್ದೇನೆ. ನಾನು ಸುದ್ದಿ

ವಾಹಿನಿಯಲ್ಲಿ ಕೆಲಸಕ್ಕೆ ಹೋಗುತ್ತೇನೆ ಅಂದಾಗ, ಮೊದಲು ವಿರೋಧಿಸಿತು ನನ್ನ ಕುಟುಂಬ. ಯಾಕೆ ವಿರೋಧಿಸುತ್ತೀರಿ ಎಂದು ಕೇಳಿದಾಗ, ಮೀಡಿಯಾ ಅನ್ನುವುದು ಮಹಿಳೆಯರು ಕೆಲಸ ಮಾಡುವ ಸುರಕ್ಷಿತ ಸ್ಥಳವಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಅವರ ಅಭಿಪ್ರಾಯ ನಿಜವಲ್ಲ ಅಂತ ನಾನು ತಿಳಿಸಿ ಹೇಳಿದೆ. ನನ್ನ ತಂದೆ ತಾಯಿ, ಅಣ್ಣಂದಿರನ್ನು ಹೇಗೂ ಒಪ್ಪಿಸುವ ಕೆಲಸ ಆಯಿತು. ಆದರೆ, ಸಂಬಂಧಿಕರದ್ದು ಮತ್ತೊಂದು ರೀತಿಯ ಸಮಸ್ಯೆ. ನನ್ನ ಪಾಲಿಗೆ ಅವರು ಹಿತ ಶತ್ರುಗಳಂತೆ ಕಾಡಿದರು. ಯಾವುದೋ ಒಂದು ಕಾರ್ಯಕ್ರಮದಲ್ಲಿ ನನ್ನ ಅಣ್ಣ, ನಮ್ಮ ಸಂಬಂಧಿಕರೊಬ್ಬರಿಗೆ ನಾನು ಮೀಡಿಯಾದಲ್ಲಿ ಕೆಲಸ ಮಾಡುವ ವಿಚಾರವನ್ನು ಹಂಚಿಕೊಂಡಿದ್ದಾರೆ. ಅವರು ನನ್ನ ತಾಯಿಗೆ ಮತ್ತು ನನ್ನ ತಂದೆಗೆ ಫೋನ್ ಮಾಡಿ, ಇಲ್ಲದೇ ಇರುವುದನ್ನು ಕತೆಕಟ್ಟಿ ಹೇಳಿದ್ದಾರೆ. ಮೀಡಿಯಾದಲ್ಲಿ ಕೆಲಸ ಮಾಡುವ ಹುಡುಗಿಯರ ಬಗ್ಗೆ ಏನೇನೋ ಮಾತುಗಳನ್ನು ಕೇಳುತ್ತೇವೆ. ನಿನ್ನ ಮಗಳನ್ನು ಅದೇ ಕ್ಷೇತ್ರದಲ್ಲಿ ಕೆಲಸಕ್ಕೆ ಕಳುಹಿಸಿದ್ದೀಯಾ ಅಂತ ಹೆದರಿಸಿದ್ದಾರೆ. ಅದನ್ನು ಕೇಳಿದ ಅಮ್ಮ, ಆತಂಕಗೊಂಡಿದ್ದರು. ಯಾವುದೇ ಕಾರಣಕ್ಕೂ ನೀನು ಮೀಡಿಯಾ ಕೆಲಸಕ್ಕೆ ಹೋಗಬಾರದು ಅಂತ ಹೇಳೋಕೆ ಶುರು ಮಾಡಿದರು. ಅವರು ಯಾಕೆ ಹೀಗ್ ಹೇಳ್ತಿದ್ದಾರೆ ಅಂತ ಅರ್ಥ ಆಗಲಿಲ್ಲ. ಆಗಲೇ ಎಲ್ಲವನ್ನೂ ತಿಳಿಸಿದ್ದೇನಲ್ಲ ಅಂತ ಅವರಿಗೆ ಹೇಳಿದರೂ ಕೇಳುತ್ತಿಲ್ಲ. ನೀನು ಕೆಲಸವನ್ನು ಬಿಡಲೇಬೇಕು ಅಂತ ಗೆರೆ ಕೊರೆದರೂ, ನಾಳೆಯಿಂದ ಹೋಗಲೇಬೇಡ ಅಂತ ತಡೆದರು. ಅವರು ಯಾಕೆ ಹಾಗ್ ಮಾಡ್ತಿದ್ದಾರೆ ಅಂತ ಮೊದಲು ಅರ್ಥವೇ ಆಗಲಿಲ್ಲ. ಆದರೂ, ನಾನು ಕೆಲಸ ಬಿಡಲು ನಿರಾಕರಿಸಿದೆ. ನಿಮಗೆ ನನ್ನಿಂದ ತೊಂದರೆ ಆಗುತ್ತಿದೆ ಅಂತ ಅನಿಸಿದಾಗ ಖಂಡಿತಾ ಕೆಲಸ ಬಿಡುತ್ತೇನೆ ಅಂತ ಹೇಳಿದೆ. ನನ್ನ ಪಾಡಿಗೆ ನಾನು ಕೆಲಸಕ್ಕೆ ಹೊರಟೆ. ಅಮ್ಮ ನನ್ನೊಂದಿಗೆ ಮಾತಾಡುತ್ತಿರಲಿಲ್ಲ. ನನಗೂ ಸ್ವಲ್ಪ ದಿನ ಕಿರಿಕಿರಿ ಅನಿಸಿತು. ಯಾಕೆ ಅವರು ಹೀಗ್ ಮಾಡ್ತಿದ್ದಾರೆ? ಸಡನ್ನಾಗಿ ಕೆಲಸ ಬಿಡು ಅಂತ ಹೇಳಲು ಕಾರಣವೇನು? ಅಂತ ತಿಳಿದುಕೊಳ್ಳುವ ಪ್ರಯತ್ನ ಮಾಡ್ದೆ. ಕೊನೆಗೂ ಅಸಲಿ ಕಾರಣವನ್ನು ನನನ್ನ ಅಣ್ಣನಿಂದ ತಿಳಿದುಕೊಂಡೆ. ನಾನು ಮಾಧ್ಯಮದಲ್ಲಿ ಕೆಲಸ ಮಾಡುವುದು ನಮ್ಮ ಮಾವನಿಗೆ ಇಷ್ಟವಿರಲಿಲ್ಲ. ಹಾಗಾಗಿ ಅಮ್ಮನಿಗೆ ಅವನು ಭಯ ಪಡಿಸಿದ್ದ. ಆ ಭಯವನ್ನು ನಿವಾರಿಸಲು ಹಲವು ತಿಂಗಳುಗಳೇ ಬೇಕಾದವು. ಈಗ ನಮ್ಮ ಮಾವ ಕೂಡ ನನ್ನ ಬಗ್ಗೆ ಅಭಿಮಾನದ ಮಾತುಗಳನ್ನು ಆಡುತ್ತಾನೆ. ಟಿವಿಯಲ್ಲಿ ನನ್ನನ್ನು ನೋಡಿ ಈಗ ಎಲ್ಲರೂ ಖುಷಿಯಿಂದ ಮಾತನಾಡುತ್ತಾರೆ. ಹೀಗೆ ಮನೆಯಲ್ಲಿನ ಮಹಿಳೆಯರು ಕೆಲಸಕ್ಕೆ ಸೇರುತ್ತಾರೆ ಎಂದರೆ ಸಾಕು, ಎಲ್ಲಿಲ್ಲದ ಅಡೆತಡೆಗಳು ಹುಟ್ಟಿಕೊಂಡು ಬಿಡುತ್ತವೆ. ಇದನ್ನ ಎದುರಿಸುವ ಧೈರ್ಯ ಮಹಿಳೆಯರಿಗೆ ಇರಬೇಕಷ್ಟೆ" ಎಂದು ಹೇಳಿದರು.

ಮೇಲಿನ ಮೂರು ಪ್ರಕರಣಗಳನ್ನು ಗಮನಿಸಿದರೆ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರು ಮಾಧ್ಯಮದಂಥ ಉದ್ಯೋಗ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನೇ ಕಳೆದುಕೊಂಡಿದ್ದಾರೆ ಎನ್ನಬಹುದು. ಅವರು ವಾಕ್ ಸ್ವಾತಂತ್ರವನ್ನು ಪಡೆದುಕೊಂಡಿದ್ದರೂ ಸಹ

ತಮ್ಮ ಕನಸುಗಳನ್ನು, ಆಸೆ ಆಕಾಂಕ್ಷೆಗಳನ್ನು ನಿರ್ಭಯವಾಗಿ ಕುಟುಂದ ಸದಸ್ಯರೊಂದಿಗೆ ಹೇಳುವ ಸ್ವಾತಂತ್ರ್ಯ ಕೂಡ ಅವರಿಗಿಲ್ಲ. ಕುಟುಂಬ ಎಂಬ ವ್ಯವಸ್ಥೆಯು ಮಹಿಳೆಯರನ್ನು ಹಾಗೆ ಬಂಧಿಸಿಬಿಟ್ಟದೆ. ಮುಖ್ಯವಾಗಿ ಕುಟುಂಬದ ಈ ಬಂಧನಗಳ ನಡುವೆಯೂ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಕಾಣಬಹುದು. ಅದರಲ್ಲೂ ಮುಖ್ಯ ಸಂಗತಿ ಅಂದರೆ, ಮಹಿಳೆಯರು ಕೆಲಸ ಮಾಡಲು ಕುಟುಂಬದಿಂದ ಒಪ್ಪಿಗೆ ಸಿಗುವುದೇ ಕಷ್ಟದ ಸಂಗತಿಯಾಗಿದೆ. ಮಹಿಳೆಯರು ಕುಟುಂಬದ ಆಚೆ ಹೋಗಿ ದುಡಿಯಬಾರದು ಎಂಬುದು ಕುಟುಂಬ ವ್ಯವಸ್ಥೆಯ ನಿಲುವಾಗಿದೆ. ಇಂತಹ ಸಂದರ್ಭದಲ್ಲಿ ಕೆಲಸ ಮಾಡಲು ಒಪ್ಪಿಗೆ ಸಿಕ್ಕರಂತೂ ಮಹಿಳೆಯರಿಗೆ ಇನ್ನಿಲ್ಲದ ಸಂತೋಷ. ಮೊದಲನೇ ಪ್ರಕರಣದಲ್ಲಿ ಮಂಜುಳಾ ಅವರು ಹೇಳುವ ಹಾಗೆ "ಮನೆಯಲ್ಲಿ ಅಪ್ಪ ಅಮ್ಮ ಕೆಲಸ ಮಾಡಲು ಒಪ್ಪಿಗೆ ಕೊಟ್ಟರಲ್ಲ ಅನ್ನುವುದೇ ದೊಡ್ಡ ಸಂಗತಿಯಾಗಿತ್ತು" ಎಂದು ಅವರು ಹೇಳುವ ಮಾತಿನಲ್ಲಿ ಕುಟುಂಬ ವ್ಯವಸ್ಥೆಯು ಮಹಿಳೆಯರನ್ನು ಹೇಗೆ ನೋಡುತ್ತಿದೆ ಎಂಬುದು ತಿಳಿಯುತ್ತದೆ. ಮಹಿಳೆಯರು ಕುಟುಂಬದಲ್ಲಾಗಲಿ ಅಥವಾ ಕುಟುಂಬದ ಆಚೆಯಾಗಲಿ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರು ದುಡಿಯುವ ಸಂಗತಿಯನ್ನು ಒಪ್ಪಿಕೊಂಡಿಲ್ಲ. ಒಂದುವೇಳೆ ಹಾಗೆ ಮಾಡಿದರೆ, ಅದಕ್ಕೆ ಕುಟುಂಬದ ಸದಸ್ಯರ ಒಪ್ಪಿಗೆಯನ್ನು ಪಡೆಯಲೇಬೇಕು. ಇಲ್ಲವಾದರೆ ಅವರು ಮನೆಯಿಂದ ಆಚೆ ಬರುವುದೂ ಕೂಡ ಕಷ್ಟದ ಸಂಗತಿ ಆಗಿರುತ್ತದೆ. ಹಾಗೆಯೇ ಒಪ್ಪಿಗೆ ಸಿಕ್ಕರಂತೂ ಮಹಿಳೆಯರಿಗೆ ಇನ್ನಿಲ್ಲದ ಸಂಭ್ರಮ. ಇದು ಕೇವಲ ಮಾಧ್ಯಮ ಕ್ಷೇತ್ರದಲ್ಲಿ ಉದ್ಯೋಗ ಮಾಡುವ ಮಹಿಳೆಯರಿಗಷ್ಟೇ ಸಂಬಂಧಿಸಿದ ವಿಚಾರವಲ್ಲ. ಎಲ್ಲ ಕ್ಷೇತ್ರದಲ್ಲೂ ಕೆಲಸ ಮಾಡಲು ಬಯಸುವ ಮಹಿಳೆಯರಿಗೆ ಎದುರಾಗಬಲ್ಲ ಸಮಸ್ಯೆಯೂ ಆಗಬಹುದು. ಯಾವ ಕ್ಷೇತ್ರದಲ್ಲಿ ಉದ್ಯೋಗ ಮಾಡಬೇಕಾಗಿದೆ ಎಂಬುದನ್ನು ನಿರ್ಧರಿಸುವವರೂ ಪುರುಷರೇ ಆಗಿರುತ್ತಾರೆ ಎನ್ನುವುದನ್ನು ಮರೆಯಬಾರದು. ಹಾಗಾಗಿಯೇ ಮಹಿಳೆಯರಿಗೆ ಯಾವುದೇ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವಂತಹ ಮುಕ್ತ ವಾತಾವರಣವಿಲ್ಲ. ಏಕೆಂದರೆ ಸಮಾಜ ವ್ಯವಸ್ಥೆಯು ಮಹಿಳೆಯರು ಇಂತಹ ಕೆಲಸಗಳನ್ನಷ್ಟೇ ಮಾಡಿದರೆ ಮಾತ್ರ ಅವರು ಸುರಕ್ಷಿತರಾಗಿರುತ್ತಾರೆ ಎಂದು ಗುರುತಿಸಲಾಗಿದೆ. ಮಹಿಳೆಯರ ಕೆಲಸವೆಂದರೆ ಅದು ಅಡುಗೆ ಮನೆಯ ಕೆಲಸಗಳಿಗೆ ಮಾತ್ರ ಸೀಮಿತರನ್ನಾಗಿ ಮಾಡಲಾಗಿದೆ. ಸಮಾಜದ ದೃಷ್ಟಿಯಲ್ಲಿ ಮಾಧ್ಯಮದಲ್ಲಿನ ಕೆಲಸವು ಮಹಿಳೆಯರಿಗೆ ಸುರಕ್ಷಿತವಾದುದಲ್ಲ ಎಂಬ ನಂಬಿಕೆ ಅವರಲ್ಲಿದೆ. ಹಾಗಾಗಿಯೇ ವಿವಾಹಕ್ಕೂ ಪೂರ್ವದಲ್ಲಿ ಮಹಿಳೆಯರಿಗೆ ಅಡುಗೆ ಮನೆಯ ಕೆಲಸಗಳನ್ನು ಮಾಡಲು ತಯಾರಿ ಅಥವಾ ತರಬೇತಿಯನ್ನು ನೀಡಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮಾಧ್ಯಮ ಎಂಬ ಕ್ಷೇತ್ರದ ಬಗ್ಗೆ ಹೇಳುವುದು ತುಂಬಾ ಕಷ್ಟದ ಸಂಗತಿಯೇ ಸರಿ. ಮಂಜುಳಾ ಅವರು ಉದ್ಯೋಗ ಮಾಡಲು ಮನೆಯವರಿಂದ ಒಪ್ಪಿಗೆಯನ್ನೇನೋ ಪಡೆದುಕೊಂಡರು. ಆದರೆ ಯಾವ ಕ್ಷೇತ್ರ ಎಂದು ಬಂದಾಗ, ಮತ್ತೆ ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಸುದ್ದಿ ವಾಹಿನಿಯಲ್ಲಿ ತಾವು ಕೆಲಸಕ್ಕೆ ಸೇರಬೇಕು

ಎಂದು ಹೇಳಿದಾಗ, ಕುಟುಂಬದವರ ನಿರಾಕರಣೆಗೆ ತುತ್ತಾಗುತ್ತಾರೆ. ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ವಿಚಾರವಾಗಿ ಮಂಜುಳಾ ಅವರು ತುಂಬಾನೆ ಕಷ್ಟಪಡುತ್ತಾರೆ. ತಮ್ಮ ಕುಟುಂಬದವರ ಕಾರಣಕ್ಕಾಗಿ ನೊಂದುಕೊಳ್ಳುತ್ತಾರೆ. ಕುಟುಂಬದಿಂದ ದೂರ ಹೋಗುವ ನಿರ್ಧಾರಕ್ಕೂ ಅವರು ಬರುತ್ತಾರೆ. ಕುಟುಂಬದಿಂದ ದೂರ ಹೋಗುವುದು ಎಂದರೆ ಅಷ್ಟು ಸುಲಭದ ಮಾತಲ್ಲ.

ಸುದ್ದಿ ವಾಹಿನಿಗಳ ಉದ್ಯೋಗದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕುಟುಂಬ ವ್ಯವಸ್ಥೆಯಲ್ಲಿ ಮಾಧ್ಯಮದ ಬಗೆಗೆ ಒಂದು ವಿಚಿತ್ರವಾದ ಅಪನಂಬಿಕೆ ಇರುವುದು ಕಾಣುತ್ತದೆ. ಅದು, ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ತುಂಬಾನೇ ಬೋಲ್ಡ್ ಆಗಿರುತ್ತಾರೆ. ಬೋಲ್ಡ್ ಆಗಿರುವುದು ಪುರುಷ ವ್ಯವಸ್ಥೆಗೆ ಒಪ್ಪಿಗೆಯಿಲ್ಲ. ಮತ್ತು ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಯಾರು ತಾನೆ ಮದುವೆಯಾಗುತ್ತಾರೆ ಎಂಬ ಆತಂಕ ಪ್ರತಿಯೊಬ್ಬ ತಂದೆ ತಾಯಿಯರಿಗೂ ಕಾಡುತ್ತಿದೆ. ಈ ಕಾರಣಗಳಿಂದಾಗಿ ವಿದ್ಯುನ್ಮಾನ ಕ್ಷೇತ್ರದಲ್ಲಿ ಕೆಲಸಕ್ಕೆ ಬರಲು ಬಯಸುವ ಮಹಿಳೆಯರು ತಮ್ಮ ಕುಟುಂಬದಿಂದಲೇ ವಿರೋಧವನ್ನು ಎದುರಿಸುತ್ತಿದ್ದಾರೆ. ಇನ್ನು ಧರ್ಮದ ಕಾರಣಕ್ಕಾಗಿ ಮಹಿಳೆಯರು ಮಾಧ್ಯಮಕ್ಕೆ ಪ್ರವೇಶಿಸುವ ಮುನ್ನವೇ ಕುಟುಂಬದಿಂದ ಸಮಸ್ಯೆಗಳನ್ನು ಎದುರಿಸಿರುವುದನ್ನು ಸಮೀರಾ ಅವರು ಹೇಳುತ್ತಾರೆ. ಪ್ರತಿಯೊಂದು ಧರ್ಮವೂ ಸಹ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿವೆ. ಮಹಿಳೆ ಮನೆಗೆ ಮಾತ್ರ ಸೀಮಿತವಾಗಿರಬೇಕು ಎಂಬುದು ಧರ್ಮದ ನಿಯಮ ಎಂದು ಹೇಳಲಾಗುತ್ತದೆ. ಅಲ್ಲದೇ, ಧರ್ಮದ ಕಾರಣಕ್ಕಾಗಿ ಮುಸ್ಲಿಂ ಮಹಿಳೆಯರು ತಮ್ಮ ಮುಖವನ್ನು ಪರ ಪುರುಷನಿಗೆ ತೋರಿಸಲೇ ಬಾರದು ಅಂತಿದೆ. ಹಾಗಾಗಿಯೇ ಮುಸ್ಲಿಂ ಮಹಿಳೆಯರು ಮನೆಯಿಂದ ಆಚೆ ಬರುವಾಗ ಬುರ್ಕಾ ಹಾಕಿಕೊಂಡೇ ಹೊರಗೆ ಕಾಲಿಡುತ್ತಾರೆ. ಈ ಧರ್ಮದಲ್ಲಿ ಕಡ್ಡಾಯವಾಗಿ ಪ್ರತಿಯೊಬ್ಬ ಮಹಿಳೆಯರೂ ಸಹ ಬುರ್ಕಾ ಹಾಕಬೇಕು ಎಂಬ ನಿಯಮವಿದೆ. ಇಂತಹ ಸಂದರ್ಭದಲ್ಲಿ ಮಹಿಳೆ ಕುಟುಂಬದಿಂದ ಆಚೆ ಬಂದು ಮಾಧ್ಯಮ ಎಂಬ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾಳೆ ಎಂದರೆ ಅದು ಸುಲಭದ ಮಾತಲ್ಲ. ಮುಸ್ಲಿಂ ಸಮುದಾಯದ ಮಹಿಳೆ ಕುಟುಂಬದಿಂದ ಆಚೆ ಬಂದು, ಮಾಧ್ಯಮದಂತಹ ಕ್ಷೇತ್ರದಲ್ಲಿ ದುಡಿಯುತ್ತಾಳೆ ಎಂದರೆ ಅವರ ಕುಟುಂಬದ ಸದಸ್ಯರಿಗೆ ಇನ್ನಿಲ್ಲದ ಆತಂಕ ಶುರುವಾಗುತ್ತದೆ. ಆ ಕಾರಣಕ್ಕಾಗಿಯೇ ರಜಿಯಾ ಅವರು ಉದ್ಯೋಗಕ್ಕೆ ತೆರಳುತ್ತೇನೆ ಎಂದಾಗ, ಅವರ ತಂದೆ ವಿರೋಧಿಸುತ್ತಾರೆ. ಧರ್ಮ ಏನು ಹೇಳುತ್ತದೆ ಎಂದು ತಮ್ಮ ಮಗಳಿಗೆ ಹೇಳುತ್ತಾರೆ. ಅವರು ಹೇಳುವ ಮಾತುಗಳು ಧರ್ಮದ ಕಟ್ಟುಪಾಡುಗಳು ಎಷ್ಟೊಂದು ಬಲಿಷ್ಟವಾಗಿರುತ್ತವೆ ಎಂಬುದನ್ನು ತಿಳಿಯಬಹುದು. ರಜಿಯಾ ಅವರ ತಂದೆಯ ಮಾತನ್ನೇ ಗಮನಿಸಿದರೆ, ಮುಸ್ಲಿಂ ಧರ್ಮದಲ್ಲಿ ಗಂಡಸರು ಮಾತ್ರ ಕೆಲಸಕ್ಕೆ ಹೋಗ್ಬೇಕು ಅಂತಿದೆ. ಹೆಣ್ಣು ಮಕ್ಕಳು ಮನೆಯಲ್ಲಿ ಇರಬೇಕು. ಒಂದು ವೇಳೆ ಆಚೆ ಹೋದರೆ ಅಲ್ಲಾ ಮೆಚ್ಚುವುದಿಲ್ಲ ಎಂದು ಹೇಳುತ್ತಾರೆ. ಮುಸ್ಲಿಂ ಮಹಿಳೆಯರು ಆಚೆ ಕೆಲಸಕ್ಕೆ ಹೋದರೆ ಅದರಿಂದ ಮನೆತನಕ್ಕೆ ಕೆಟ್ಟ ಹೆಸರು ಎಂಬ ನಂಬಿಕೆ ಕೂಡ ಇರುವುದನ್ನು ಕಾಣಬಹುದು.

ಅಲ್ಲದೇ, ಸಮಾಜದ ಮುಖಂಡರ ಕಂಗೆಣ್ಣಿಗೆ ಗುರಿಯಾಗಬಹುದು ಎಂಬ ಆತಂಕಕ್ಕೂ ತಮ್ಮ ಮಗಳನ್ನು ಕೆಲಸಕ್ಕೆ ಕಳುಹಿಸಲು ಪಾಲಕರು ನಿರಾಕರಿಸುತ್ತಿರುವುದನ್ನು ಕಾಣಬಹುದು.

ಹಾಗೆಯೇ ಧರ್ಮದ ಹೆಸರಿನಲ್ಲಿ ಮಹಿಳೆಯರಿಗೆ ಹಾಕಿರುವಂತಹ ದಿಗ್ಬಂಧನವನ್ನು ಸಮೀರಾ ಮಾತು ತಿಳಿಯಪಡಿಸುತ್ತದೆ. ಮುಖ್ಯವಾಗಿ ಒಬ್ಬ ಮುಸ್ಲಿಂ ಮಹಿಳೆ ಧರ್ಮದ ನಿಯಮಗಳನ್ನು ವಿರೋಧಿಸಿ, ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಮಾಧ್ಯಮ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಾಗ ಮೊದಲು ಕುಟುಂಬದಿಂದಲೇ ವಿರೋಧಗಳು ಎದುರಾಗುತ್ತವೆ ಎಂಬುದನ್ನು ಸಮೀರಾ ಅವರ ಮಾತಿನಿಂದ ತಿಳಿಯಬಹುದಾಗಿದೆ. ಇನ್ನೊಂದು ಪ್ರಕರಣದಲ್ಲಿ ಲಕ್ಷ್ಮಿ ಅವರು ಭಾವನಾತ್ಮಕ ಹಿಂಸೆಗೆ ಒಳಗಾಗಿರುವುದನ್ನು ಕಾಣಬಹುದು. ಒಟ್ಟಾರೆಯಾಗಿ ಮಹಿಳೆಯರು ಕೆಲಸ ಮಾಡಲು ಮಾಧ್ಯಮ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರೆ ಆ ಕ್ಷೇತ್ರಕ್ಕೆ ಪ್ರವೇಶ ಪಡೆಯುವ ಪೂರ್ವದಲ್ಲಿಯೇ ಹಲವಾರು ಸಮಸ್ಯೆಗಳನ್ನು ಕುಟುಂಬದಿಂದಲೇ ಅನುಭವಿಸುತ್ತಾರೆ.

ಆ. ವಯಸ್ಸಿನ ಸಮಸ್ಯೆ : ಮಹಿಳೆಯರು ಮಾಧ್ಯಮ ಕ್ಷೇತ್ರಕ್ಕೆ ಸೇರಿಕೊಳ್ಳಬೇಕಾದರೆ ವಯಸ್ಸೂ ಒಂದು ಮಾನದಂಡ ಆಗಿರುತ್ತದೆ. ತಮ್ಮ ಸಂಸ್ಥೆಗೆ ಯಾವ ವಯಸ್ಸಿನ ಮಹಿಳಾ ಕೆಲಸಗಾರರು ಬೇಕು ಅನ್ನುವುದನ್ನು ಆಯಾ ಮಾಧ್ಯಮ ಸಂಸ್ಥೆಗಳೇ ನಿರ್ಧರಿಸಿರುತ್ತವೆ. ಮುಖ್ಯವಾಗಿ ಹುಡುಗಿಯರಿಗೆ 18 ರಿಂದ 30 ವರ್ಷ ವಯಸ್ಸಿನೊಳಗಿನ ಹುಡುಗಿಯರನ್ನು ಮಾಧ್ಯಮದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತಾರೆ. ಮುಖ್ಯವಾಗಿ ಮಾಧ್ಯಮ ಕ್ಷೇತ್ರಕ್ಕೆ ಸೇರಿಕೊಳ್ಳಲು ನಿರ್ದಿಷ್ಟವಾಗಿ ಹುಡುಗಿಯ ವಯಸ್ಸು 18 ವರ್ಷ ಆಗಿರಬೇಕು. ಕೆಲವು ವಿಶೇಷ ಸಂದರ್ಭಗಳಲ್ಲಿ ಈ ವಯಸ್ಸಿನ ನಿರ್ದಿಷ್ಟತೆಯಲ್ಲಿ ಹೆಚ್ಚು ಕಡಿಮೆ ಆಗಬಹುದು. ಇದರ ಜೊತೆಗೆ ಹುಡುಗಿ ಸುಂದರವಾಗಿರಬೇಕು, ಮಾತನಾಡಲು ಚೆನ್ನಾಗಿ ಬರುತ್ತಿದ್ದು ಆಕೆಗೆ 18 ವರ್ಷ ವಯಸ್ಸಾಗಿರದಿದ್ದರೆ ಅವಳನ್ನು ಬಿಟ್ಟುಕೊಡಲು ಮಾಧ್ಯಮ ಸಂಸ್ಥೆಗಳು ಸಿದ್ಧರಿರುವುದಿಲ್ಲ. ಆದರೆ ಇಲ್ಲಿ ಒಂದು ಬಾರಿ ಸೇರ್ಪಡೆಗೊಂಡರೆ ಮತ್ತೆ ಅದರಿಂದ ಯಾವುದೇ ಕಾರಣಕ್ಕೂ ಹೊರಬರಲಾಗುವುದಿಲ್ಲ. ಮಾಧ್ಯಮದಲ್ಲಿ ಒಂದು ಬಾರಿ ಕೆಲಸಕ್ಕೆ ಸೇರಿಕೊಂಡರೆ, ನಂತರ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವ ಇಚ್ಛಾಶಕ್ತಿಯನ್ನು ಅವರು ಕಳೆದುಕೊಂಡು ಬಿಡುತ್ತಾರೆ. ಇದರ ಜತೆಗೆ ಇಲ್ಲಿ ಮಹಿಳೆಯರು ಹಲವು ಬಗೆಯ ಸಮಸ್ಯೆಗಳನ್ನೂ ಎದುರಿಸುತ್ತಿರುವುದು ಕಾಣಬಹುದು. ಒಂದು ಬಾರಿ ಮಾಧ್ಯಮ ಕ್ಷೇತ್ರದೊಳಗೆ ಕಾಲಿಟ್ಟವರು ಬೇರೆಲ್ಲೂ ಕೆಲಸ ಮಾಡದಂತಹ ಸಮಸ್ಯೆಯು ಹೆಚ್ಚಾಗಿ ಆ್ಯಂಕರ್ ವಿಭಾಗದಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ಕಾಡುತ್ತದೆ. ನಿರೂಪಕಿಯರಿಗೆ ವಯಸ್ಸಾಗುತ್ತಿದ್ದಂತೆಯೇ, ಅಂದರೆ ಮೂವತ್ತರ ಆಸುಪಾಸಿನಲ್ಲಿದ್ದರೆ ಅವರನ್ನು ಬೇರೆ ಸಂಸ್ಥೆಯಯಲ್ಲಿ ಉದ್ಯೋಗಕ್ಕೆ ತೆಗೆದುಕೊಳ್ಳಲು ಹಿಂದೇಟು ಹಾಕುವ ಸ್ಥಿತಿಯೂ ನಿರ್ಮಾಣವಾಗಿದೆ. ಅಂತಹ ಸಂದರ್ಭದಲ್ಲಿ ಉದ್ಯೋಗದ ಅಭದ್ರತೆಯನ್ನು ಮಹಿಳಾ ಕೆಲಸಗಾರರು ಅನುಭವಿಸಬೇಕಾಗುತ್ತದೆ. ಈ ಬಗೆಯ ಸಮಸ್ಯೆಯನ್ನು ಅನುಭವಿಸಿದ ಮಹಿಳೆಯರನ್ನು ಮಾಧ್ಯಮ ಕ್ಷೇತ್ರದಲ್ಲಿ ಕಾಣಬಹುದು. ವಾಹಿನಿಯೊಂದರಲ್ಲಿ ಕೆಲಸ ಮಾಡುವ

ವಾಣಿ ಎಂಬುವವರು ಈ ಬಗೆಯ ಸಮಸ್ಯೆಯನ್ನು ಅನುಭವಿಸಿದ್ದಾರೆ ಮತ್ತು ತುಂಬಾ ನೊಂದುಕೊಂಡಿದ್ದರು. ಇವರು ಹೇಳುವಂತೆ " ನಾನು ಮೊದಲು ಒಂದು ನ್ಯೂಸ್ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆವಾಗ ನನ್ನ ವಯಸ್ಸು ಸುಮಾರು 26 ವರ್ಷ ಆಗಿದ್ದಿರಬಹುದು. ನಾನು ಕೆಲಸಕ್ಕೆ ಸೇರಿಕೊಂಡಾಗ ನನ್ನ ವಯಸ್ಸು 22ವರ್ಷ. ಒಂದೇ ಚಾನೆಲ್‌ನಲ್ಲಿ ಆ್ಯಂಕರ್ ಆಗಿ ಕೆಲಸ ಮಾಡುತ್ತಿದ್ದೆ. ಕೆಲಸಕ್ಕೆ ಸೇರಿ ಸುಮಾರು ನಾಲ್ಕು ವರ್ಷಗಳ ನಂತರ ನನ್ನನ್ನು ಯಾವುದೇ ಕಾರಣವಿಲ್ಲದೆ ಕೆಲಸದಿಂದ ತೆಗೆದು ಹಾಕಲಾಯಿತು. ಆದರೂ, ನಾವು ಈ ಕುರಿತು ಪ್ರಶ್ನೆ ಮಾಡುವ ಹಾಗಿಲ್ಲ. ಕೇಳಿದರೂ ಮಾಧ್ಯಮದ ಮುಖ್ಯಸ್ಥರಾಗಲಿ, ಮಾನವ ಸಂಪನ್ಮೂಲ ವಿಭಾಗದವರಾಗಲಿ ಸರಿಯಾದ ಕಾರಣವನ್ನೂ ಕೊಡುವುದಿಲ್ಲ. ಕಾರಣವಿಲ್ಲದೇ ಕೆಲಸದಿಂದ ತೆಗೆದಾಗ ಏನು ಮಾಡಬೇಕು ಅಂತ ನನಗೆ ತೋಚಲಿಲ್ಲ. ಮುಂದೇನು ಅನ್ನುವ ಪ್ರಶ್ನೆ ಕಾಡಿತು. ತಕ್ಷಣವೇ ಯಾವುದೇ ಕೆಲಸ ಸಿಗುವುದಿಲ್ಲ ಅನ್ನುವುದು ನನಗೆ ಖಾತರಿ ಆಯಿತು. ಈ ವಿಷ್ಯದಲ್ಲಿ ನಾನು ತುಂಬಾ ಅತ್ತುಬಿಟ್ಟಿದ್ದೇನೆ. ಅಷ್ಟು ವರ್ಷಗಳ ಕಾಲ ನಾನು ಈ ಸಂಸ್ಥೆಯನ್ನು ನನ್ನ ಕುಟುಂಬ ಅಂತಲೇ ಭಾವಿಸಿಕೊಂಡು ಬಂದಿದೆ. ಅದರ ಅಭಿವೃದ್ಧಿಗಾಗಿ ಸಾಕಷ್ಟು ಕಷ್ಟ ಪಡುತ್ತಿದ್ದೆ. ಆದರೆ, ಈ ಸಂಸ್ಥೆ ನನಗೆ ನೀಡಿದ ಪುರಸ್ಕಾರ ಉದ್ಯೋಗದಿಂದ ತೆಗೆದು ಹಾಕಿದ್ದು. ಈಗಲೂ ಅದನ್ನು ನೆನಪಿಸಿಕೊಂಡರೆ ಬಹಳ ನೋವಾಗತ್ತೆ. ಏನ್ ಮಾಡೋದು, ಅವರು ಏನು ಹೇಳುತ್ತಾರೊ ಹಾಗೆ ಕೇಳುವುದಷ್ಟೇ ನಮ್ಮ ಕೆಲಸ. ನಾನು ಉದ್ಯೋಗ ಕಳೆದುಕೊಂಡಾಗ ನನಗಾಗ 26ವರ್ಷ ವಯಸ್ಸು. ಗಟ್ಟಿ ನಿರ್ಧಾರ ಮಾಡಿಕೊಂಡು ಬೇರೊಂದು ಚಾನೆಲ್‌ನಲ್ಲಿ ಕೆಲಸ ಕೇಳಿಕೊಂಡು ಹೋದೆ. ಅಲ್ಲಿಯೂ ಅವಮಾನದ ಬಹುಮಾನವೇ ನನಗೆ ದೊರೆಯಿತು. ಸಂದರ್ಶನ ನಡೆಸುವವರು ನನ್ನ ವಯಸ್ಸಿನ ಬಗ್ಗೆ ಚರ್ಚೆ ಮಾಡಿದರು, ಅದೇ ವಿಷಯವಾಗಿಯೇ ಪ್ರಶ್ನೆಗಳನ್ನು ಕೇಳಿದರು. ನಿಮಗೆ ಬೇರೆ ಕೆಲಸ ಕೊಡಬಹುದು. ಆದರೆ, ಈ ವಯಸ್ಸಿಗೆ ಆ್ಯಂಕರ್ ಮಾಡುವುದು ಕಷ್ಟ ಅಂದರು. ಇಪ್ಪತ್ತಾರು ವಯಸ್ಸಿಗೆ ಈ ರೀತಿಯಾ? ಎಂಬ ಪ್ರಶ್ನೆ ನನ್ನಲ್ಲಿ ಮೂಡಿತು. ಬೇಸರವೂ ಆಯಿತು. ಅಲ್ಲಿ ನನಗೆ ಒಂದು ಕ್ಷಣವೂ ನಿಲ್ಲಲು ಸಾಧ್ಯವಾಗಲಿಲ್ಲ. ಹೌದು, ಕ್ಯಾಮೆರಾ ಮುಂದೆ ನಿಲ್ಲಲು, ಟಿವಿಯಲ್ಲಿ ಕಾಣಿಸಿಕೊಳ್ಳಲು ಸುಂದರವಾಗಿರುವ ಹುಡುಗಿಯರೇ ಬೇಕು ಮಾಧ್ಯಮಕ್ಕೆ. ವಯಸ್ಸೂ ಕೂಡ ಕಡಿಮೆ ಇರಬೇಕು. ಅದರ ಜತೆಗೆ ತೆಳ್ಳಗೆ ಬೆಳ್ಳಗೆ ಕೂಡ ಇರಬೇಕು. ನನಗೆ 26 ವರ್ಷ ಇದ್ದರೂ ಸಹ ಸ್ವಲ್ಪ ದಪ್ಪ ಕಾಣಿಸುತ್ತಿದ್ದನಾದ್ದರಿಂದ ಅದಕ್ಕಾಗಿ ನನಗೆ ಉದ್ಯೋಗವನ್ನೇ ನಿರಾಕರಿಸಿದ್ದರು. ನಮ್ಮ ಸ್ನೇಹಿತರ ಸಹಾಯದಿಂದ ಬೇರೆ ಚಾನೆಲ್‌ಗಳಲ್ಲಿ ನಂತರದ ದಿನಗಳಲ್ಲಿ ಕೆಲಸ ಮಾಡಬೇಕಾಗಿ ಬಂತು. ಈಗೊಂದು ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೇನೋ, ಇಲ್ಲಿ ಎಷ್ಟು ವರ್ಷಗಳ ಕಾಲ ಇರುತ್ತೇನೋ ಗೊತ್ತಿಲ್ಲ. ಇರುವಷ್ಟು ದಿನ ಶ್ರದ್ಧೆಯಿಂದ ಕೆಲಸ ಮಾಡುತ್ತೇನೆ" ಎಂದರು.

ಇಂಥದ್ದೇ ಅಭಿಪ್ರಾಯವನ್ನು ವಾಹಿನಿಯೊಂದರಲ್ಲಿ ಕೆಲಸ ಮಾಡುವ ಪಲ್ಲವಿ ಕೂಡ ಹೇಳಿದರು. ಪಲ್ಲವಿ ಅವರು ಹೇಳುವಂತೆ "ನಮ್ಮ ಕರ್ನಾಟಕದ ಮಾಧ್ಯಮ ಸಂಸ್ಥೆಗಳಿಗೆ ಯಾರು

ಎಷ್ಟು ಚೆನ್ನಾಗಿ ಕೆಲಸ ಮಾಡ್ತಾರೆ ಅನ್ನುವುದಕ್ಕಿಂತ ಯಾರು ಎಷ್ಟು ಚೆಂದವಾಗಿ ಟಿವಿ ಪರದೆಯ ಮೇಲೆ ಕಾಣಿಸಿಕೊಳ್ಳುತ್ತಾರೆ ಎಂಬುದೇ ಮುಖ್ಯವಾಗಿರುತ್ತದೆ. ಹಾಗಾಗಿಯೇ ಟಿವಿ ಪರದೆಯ ಮೇಲೆ ಕಾಣಿಸಿಕೊಳ್ಳುವ ಅವಧಿ ಮಹಿಳೆಯರಿಗೆ ತುಂಬಾನೆ ಕಡಿಮೆ ಇದೆ. ಆದರೆ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮ ಸಂಸ್ಥೆಗಳಲ್ಲಿ ಹೀಗಿಲ್ಲ. ಅಲ್ಲಿ ಅಂದ ಚೆಂದಕ್ಕಿಂತ ಕೆಲಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗುತ್ತಿದೆ. ಹಾಗಂತ ಅವುಗಳ ಜನಪ್ರಿಯತೆ ಕಡಿಮೆ ಆಗಿದೆಯ? ಕಂಡಿತಾ ಇಲ್ಲ. ಅಲ್ಲಿನ ಚಾನೆಲ್‌ಗಳ ಟಿಆರ್‌ಪಿ ಕೂಡ ಹೆಚ್ಚಿರುತ್ತದೆ. ಅದನ್ನು ಪ್ರಾದೇಶಿಕ ಸುದ್ದಿ ವಾಹಿನಿಗಳು ಅರ್ಥ ಮಾಡಿಕೊಂಡಂತೆ ಕಾಣುತ್ತಿಲ್ಲ. ಇನ್ನೂ ಇಲ್ಲಿ ಗ್ಲಾಮರ್ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಸುಂದರತೆಯೇ ಮಾನದಂಡವಾಗಿ ಕೂತಿದೆ. ಇಂತಹ ಅಂದ ಚೆಂದದ ಸಮಸ್ಯೆಯಿಂದಾಗಿಯೇ ನಾನು ಕೆಲಸ ಬಿಟ್ಟು ಮನೆಯಲ್ಲಿ ಕೂರಬೇಕಾಯಿತು. ಮೊದಲು ನಾನು ಕೆಲಸಕ್ಕೆ ಸೇರಿಕೊಂಡಾಗ ನನಗಾಗ 20 ವರ್ಷ ವಯಸ್ಸು. ಭಾಷೆಯಲ್ಲಿ ಸ್ಪಷ್ಟತೆಯಿತ್ತು. ಯಾವುದೇ ವಿಷಯ ಕೊಟ್ಟರೂ ಚೆನ್ನಾಗಿ ಮಾತನಾಡುವಷ್ಟ ಜ್ಞಾನ ನನ್ನಲ್ಲಿತ್ತು. ಸುದ್ದಿ ಓದುವುದಕ್ಕೂ ಚೆನ್ನಾಗಿ ಬರುತ್ತಿತ್ತು. ಆ ಕಾರಣಕ್ಕಾಗಿ ನನಗೆ ಕೆಲಸ ಸಿಕ್ಕಿತು. ಕೆಲಸ ಸಿಕ್ಕ ವೇಳೆಯಲ್ಲಿ ಇನ್ನೂ ನಾನು ಓದುತ್ತಿದ್ದೆ. ಡಿಗ್ರಿ ಓದುವ ಜೊತೆಗೆ ಆ್ಯಂಕರಿಂಗ್ ಕೆಲಸ ಕೂಡ ಮಾಡುತ್ತಿದ್ದೆ. ಡಿಗ್ರಿ ಫೈನಲ್ ಇಯರ್ ಪರೀಕ್ಷೆಯ ಸಂದರ್ಭದಲ್ಲಿ ರಜೆಗಳು ಬೇಕಾದವು. ಹಾಗಾಗಿ ನನ್ನ ಮುಖ್ಯಸ್ಥರಲ್ಲಿ ಪರಿಸ್ಥಿತಿಯನ್ನು ವಿವರಿಸಿ ರಜೆ ಬೇಕು ಅಂತ ಕೇಳಿದೆ. ಅವರು ರಜೆ ಕೊಡಲು ನಿರಾಕರಿಸಿದರು. ಆ ಸಮಯದಲ್ಲಿ ನನಗೆ ಕೆಲಸಕ್ಕಿಂತ ಡಿಗ್ರಿ ಪರೀಕ್ಷೆಯೇ ಮುಖ್ಯವಾಗಿತ್ತು. ಅವರ ಮಾತನ್ನು ನಿರಾಕರಿಸಿ ಪರೀಕ್ಷೆಗೆ ಹೋದೆ. ಕೆಲವು ದಿನಗಳ ನಂತರ ಮತ್ತೆ ಕೆಲಸಕ್ಕೆ ಹೋದಾಗ ಅಲ್ಲಿ ನನ್ನ ಜಾಗದಲ್ಲಿ ಬೇರೆಯವರನ್ನು ತಂದು ಕೂರಿಸಿದ್ದರು. ಮತ್ತೆ ಕೆಲಸ ಕೇಳಿದೆ. ಅವರ ಮಾತನ್ನು ಮೀರಿ ಹೋಗಿದ್ದಕ್ಕೆ ಕ್ಷಮೆ ಕೂಡ ಕೇಳಿದೆ. ಅವರು ಮತ್ತೆ ನನಗೆ ಕೆಲಸ ಕೊಡಲಿಲ್ಲ. ಹೇಗಾದರೂ ನಿಮಗೆ ವಯಸ್ಸು ಆಗ್ತಾಯಿದೆ. ನಾವೇ ನಿಮ್ಮನ್ನು ಆ್ಯಂಕರ್‌ನಿಂದ ಬಿಡಿಸಿ, ಬೇರೆ ಕೆಲಸ ಕೊಡೋಣ ಅಂತ ಅಂದುಕೊಂಡಿದ್ದೆವು. ನೀವಾಗಿಯೇ ಬಿಟ್ಟು ಹೋದಿರಿ ಅಂತ ಕತೆ ಕಟ್ಟೋಕೆ ಶುರು ಮಾಡಿದರು. ವಯಸ್ಸಿನ ಕಾರಣ ಕೊಟ್ಟು, ಅವರು ಕೆಲಸವನ್ನು ನಿರಾಕರಿಸಿದ್ದಕ್ಕೆ ನನಗಂತೂ ಸಖತ್ ಬೇಸರ ಆಯಿತು. ಅದೊಂದೆ ಚಾನೆಲ್ ಅಲ್ಲ, ಬೇರೆ ಚಾನೆಲ್ ಕಡೆಗೆ ಹೋದರೆ ಅಲ್ಲಿಯೂ ಈ ವಯಸ್ಸಿನ ಸಮಸ್ಯೆಯೆ ಮುಖ್ಯವಾಗಿ ಕಾಡಿತು ಕೂಡ. ಒಂದೆರಡು ಕಡೆ ಟ್ರೈಮಾಡಿ ನೋಡಿದೆ. ಎಲ್ಲಿಯೂ ಕೆಲಸ ಸಿಗಲಿಲ್ಲ. ಕೊನೆಗೆ ಈ ಕೆಲಸವೇ ಬೇಡ ಎಂದು ಹೇಳಿ ಮನೆಯಲ್ಲಿಯೇ ಉಳಿದುಬಿಟ್ಟೆ. ಡಿಗ್ರಿ ಮುಗಿದಾಗ ಅದೇನ್ ಮಹಾನ್ ವಯಸ್ಸಾಗಿತ್ತೋ ಈ ಹೊತ್ತಿಗೂ ನನಗೆ ಅರ್ಥವಾಗಲಿಲ್ಲ. ಸುದ್ದಿ ನಿರೂಪಕಿ ಆಗಲಿಕ್ಕೆ ಎಲ್ಲ ಅರ್ಹತೆ ಇದ್ದರೂ, ಈ ವಯಸ್ಸನ್ನು ಮಾನದಂಡ ಮಾಡಿಕೊಂಡು ಕೆಲಸವನ್ನೇ ನಿರಾಕರಿಸಿಬಿಟ್ಟರು. ಬೇರಾವ ಕ್ಷೇತ್ರದಲ್ಲೂ ಇರದ ಈ ವಯಸ್ಸಿನ ಸಮಸ್ಯೆ ನಿರೂಪಕಿಯರಿಗೆ ಮಾತ್ರ ಯಾಕಿದೆ ಅಂತ ತುಂಬಾನೇ ಯೋಚಿಸ್ತಾ ಇರುತ್ತೇನೆ. ಟಿವಿ ಚಾನೆಲ್‌ಗಳಿಗೆ ಸುಂದರವಾದ ಹುಡುಗಿಯರು ಇದ್ದರೆ ಮಾತ್ರ

ಅವರ ಜನಪ್ರಿಯತೆ ಮತ್ತು ರೇಟಿಂಗ್ ಏರತ್ತಾ? ಗೊತ್ತಿಲ್ಲ. ಆದರೆ, ಇಂಥದ್ದೊಂದು ಮನಸ್ಥಿತಿ ಇರುವುದನ್ನು ಒಪ್ಪಿಕೊಳ್ಳಲೇಬೇಕು. ಹಾಗಾಗಿ ಮಹಿಳೆಯರಿಗೆ ಸ್ವಲ್ಪ ವಯಸ್ಸಾದರೂ ಅವರಿಂದ ಯಾವುದೇ ಲಾಭವಿಲ್ಲ ಎಂದು ಭಾವಿಸಲಾಗುತ್ತಿದೆ. ವಯಸ್ಸಾಗುತ್ತಿದ್ದಂತೆಯೇ ಕಾರಣವಿಲ್ಲದೇ ಕೆಲಸದಿಂದ ತಗೆದು ಹಾಕುವ ಸಂಪ್ರದಾಯ ಈಗಲೂ ಇದೆ. ಆದರೆ, ಇದು ಹುಡುಗರಿಗೆ ಅನ್ವಯಿಸಲ್ಲ. ನನ್ನ ಜೊತೆಯೇ ಕೆಲಸಕ್ಕೆ ಸೇರಿಕೊಂಡ ಹುಡುಗ ಇನ್ನೂ ಅದೇ ಆ್ಯಂಕರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾನೆ. ಅವನಿಗೆ ಹುದ್ದೆ, ಸ್ಥಾನ ಮಾನ, ಸಂಬಳ ಎಲ್ಲವೂ ಹೆಚ್ಚುತ್ತಾ ಹೋಗುತ್ತದೆ. ಈ ಪ್ರಶ್ನೆಯನ್ನು ನಾನು ಅವನಲ್ಲಿ ಹಾಕಿದಾಗ, ಅವನಿಂದ ಬಂದ ಉತ್ತರ ಕುಹಕದ್ದಾಗಿತ್ತು ಆದರೆ, ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರ ಸೌಂದರ್ಯ ಎಲ್ಲಿವರೆಗೆ ಇರುತ್ತದೆಯೋ, ಚಿಕ್ಕವಯಸ್ಸಿನವರಾಗಿರುತ್ತಾರೋ ಅವರಿಗೆ ಮಾತ್ರ ಟಿವಿಯಲ್ಲಿ ಕಾಣಿಸಿಕೊಳ್ಳಲಿಕ್ಕೆ ಮಾತ್ರ ಸಾಧ್ಯ. ಎಲ್ಲೋ ಒಂದು ಚಾನೆಲ್‌ನಲ್ಲಿ ವಯಸ್ಸಾದವರೂ ಇರಬಹುದು. ಆದರೆ, ಅವರನ್ನು ಉಳಿಸಿಕೊಳ್ಳುವುದಕ್ಕೆ ಮತ್ತೇನೂ ಕಾರಣ ಇದ್ದೇ ಇರುತ್ತದೆ. ಅವರಿಂದ ಬರುವ ಲಾಭ ನಿಂತುಬಿಟ್ಟರೆ, ಕಂಡಿತಾ ಅವರನ್ನೂ ಚಾನೆಲ್‌ಗಳು ಇಟ್ಟುಕೊಳ್ಳುವುದಿಲ್ಲ. ಇಂತಹ ಅನೇಕ ಉದಾಹಣೆಗಳು ಕಾಣ ಸಿಗುತ್ತವೆ. ವಯಸ್ಸಾದ ಕಾರಣಕ್ಕಾಗಿ ಚಾನೆಲ್‌ನಿಂದ ಬಿಟ್ಟು ಹೋದ ಮತ್ತು ಬೇರೆ ವಿಭಾಗಕ್ಕೆ ಶಿಫ್ಟ್ ಆದ ಹುಡುಗಿಯರು ನಮ್ಮ ಮಧ್ಯೆ ಇದ್ದಾರೆ. ಇವತ್ತಿಗೂ ಅವರು ನೋವಿನಲ್ಲಿ ತಮ್ಮ ಸಂಗತಿಗಳನ್ನು ಹೇಳಿಕೊಳ್ಳುತ್ತಾರೆ' ಅಂತಾರೆ.

ಮೇಲಿನ ಮಾತುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಲು ಹೊರಟ ಹೆಣ್ಣುಮಕ್ಕಳಿಗೆ ವಯಸ್ಸಿನ ಸಮಸ್ಯೆ ತುಂಬಾ ಕಾಡುತ್ತದೆ. ಅದರಲ್ಲೂ ಕ್ಯಾಮೆರಾ ಮುಂದೆ ಕುಳಿತುಕೊಳ್ಳುವ (ಟಿವಿ ಪರದೆಯ ಮೇಲೆ ಕಾಣುವ) ವಿಭಾಗದಲ್ಲಂತೂ ಕಡ್ಡಾಯವಾಗಿ ಕಡಿಮೆ ವಯಸ್ಸಿನ ಮಹಿಳೆಯರನ್ನು ಈ ಕೆಲಸಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಹಾಗಾಗಿ ಸಂದರ್ಶನಕ್ಕೆ ಕರೆಯುವಾಗಲೂ 18 ರಿಂದ 25 ವಯಸ್ಸಿನ ಹುಡುಗಿಯರು ಬೇಕು ಅಂತಾನೇ ಜಾಹೀರಾತು ಕೊಡುತ್ತಾರೆ. ಅಷ್ಟೇ ವಯಸ್ಸಿನ ಹುಡುಗಿಯರನ್ನೇ ಅವರು ಆಯ್ಕೆ ಮಾಡಿಕೊಳ್ಳುತ್ತಾರೆ. ಬೇರೆ ವಿಭಾಗಗಳಲ್ಲಿ ವಯಸ್ಸಿನ ಸಮಸ್ಯೆ ಅಷ್ಟೇನೂ ಕಾಡದು. ವರದಿಗಾರ್ತಿಯರು, ತಂತ್ರಜ್ಞರು. ಡೆಸ್ಕ್ ಕೆಲಸ ಮಾಡುವಂಥವರು ವಯಸ್ಸಿನ ತಾಕಲಾಟದಲ್ಲಿ ಸಿಲುಕಿರಲಾರರು. ಆದರೆ, ನಿರೂಪಕಿಯರು ಮತ್ತು ಸುದ್ದಿ ನಿರೂಪಕಿಯರ ವಿಭಾಗಕ್ಕೆ ಸೇರಿಕೊಂಡರೆ ಅಲ್ಲಿ ಎಷ್ಟು ವರ್ಷಗಳವರೆಗೆ ಕೆಲಸ ಇರುತ್ತದೆಯೋ ಗೊತ್ತೇ ಆಗುವುದಿಲ್ಲ. ಯಾವಾಗ ಬೇಕಾದರೂ ಕೆಲಸದಿಂದ ತಗೆದುಹಾಕಬಹುದು. ಹಾಗಾಗಿ ಇದು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರ ಕೆಲಸದ ಅಭದ್ರತೆಯನ್ನು ಸೂಚಿಸುತ್ತದೆ. ಅದೇ ಈ ಸಮಸ್ಯೆ ಪುರುಷರಿಗೆ ಕಾಡುವುದಿಲ್ಲ. ಅವರಿಗೆ ನಲವತ್ತಾದರೂ ಸುದ್ದಿ ಓದುತ್ತಾರೆ, ಐವತ್ತು ದಾಟಿದರೂ ಕ್ಯಾಮೆರಾ ಮುಂದೆ ಕೂರುತ್ತಾರೆ. ಪುರುಷರಿಗೆ ವಯಸ್ಸಿನ ಸಡಿಲತೆಯನ್ನು ವಾಹಿನಿಗಳು ನೀಡಿವೆ. ಹಾಗಾಗಿ ಮಾಧ್ಯಮಗಳು ನಿಗದಿಪಡಿಸಿದ ವಯಸ್ಸಿನ ಮಾನದಂಡ

ಮಹಿಳೆಯರ ಉದ್ಯೋಗದ ಅಭದ್ರತೆಯನ್ನು ಹೆಚ್ಚಿಸುವುದರಲ್ಲಿ ಎರಡು ಮಾತಿಲ್ಲ. ಮಾಧ್ಯಮ ಮತ್ತೊಂದು ಕೆಟ್ಟ ಗುಣವೆಂದರೆ, ಯಾರಿಂದಲಾದರೂ ತನಗೆ ಲಾಭ ಹೆಚ್ಚುತ್ತದೆ ಎಂದು ತಿಳಿದರೆ ಅವರನ್ನು ಸ್ವಲ್ಪ ಸಮಯದವರೆಗೆ ತನ್ನಲ್ಲಿಯೇ ಇಟ್ಟುಕೊಳ್ಳುತ್ತದೆ. ತನ್ನ ಉದ್ಯೋಗಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೇನೆ ಎಂಬ ಭ್ರಮೆಯನ್ನೂ ಹುಟ್ಟು ಹಾಕುತ್ತಿದೆ. ಲಾಭ ಕಡಿಮೆಯಾಗುತ್ತಿದೆ ಎಂದು ತಿಳಿಯುತ್ತಿದ್ದಂತೆಯೇ ಯಾವುದೇ ಕಾರಣ ಕೊಡದೇ, ನೋಟಿಸ್ ಕೂಡ ನೀಡದೆ ಮನೆಗೆ ಕಳುಹಿಸಲಾಗುತ್ತದೆ. ಪುರುಷ ಉದ್ಯೋಗಿಗೆ ಹಾಗಾಗಲಾರದು. ವಯಸ್ಸು ಮತ್ತು ಸೌಂದರ್ಯ ಅವನಿಗೆ ಸಮಸ್ಯೆಯೇ ಅಲ್ಲ. ಹಾಗಾಗಿ ಒಂದು ಚಾನೆಲ್ ಬೇಡವೆಂದರೂ ಮತ್ತೊಂದು ಚಾನೆಲ್‌ಗೆ ಹೋಗಿ ದುಡಿಯುತ್ತೇನೆ ಎಂಬ ಧೈರ್ಯ ಅವನಿಗಿರುತ್ತದೆ. ಹಾಗಾಗಿ ಒಂದು ಚಾನೆಲ್‌ನಿಂದ ಇನ್ನೊಂದು ಚಾನೆಲ್‌ಗೆ ಪ್ರವೇಶ ಪಡೆಯಬೇಕೆಂದರೆ ಮಹಿಳೆಯರಿಗೆ ವಯಸ್ಸು ತುಂಬಾನೇ ಕಾಡುತ್ತದೆ. ಹಾಗಾಗಿ ಅವರು ಸದಾ ಉದ್ಯೋಗದ ಅಭದ್ರತೆಯಲ್ಲಿಯೇ ಕೆಲಸ ಮಾಡುತ್ತಿರುತ್ತಾರೆ.

ಇ. ಗ್ಲಾಮರ್ ಸಮಸ್ಯೆ : ಮಾಧ್ಯಮ ಕ್ಷೇತ್ರವನ್ನು ಪ್ರವೇಶಿಸುವ ಮಹಿಳಾ ಉದ್ಯೋಗಿಗಳಿಗೆ ಗ್ಲಾಮರ್ ಕೂಡ ಒಂದು ಮಾನದಂಡವಾಗಿ ಕಾಡುತ್ತದೆ. ಸುಂದರವಾಗಿರುವ ಹುಡುಗಿಯರನ್ನು ಮಾತ್ರ ಟಿವಿ ಪರದೆಯ ಮೇಲೆ ತೋರಿಸಲು ಸಾಧ್ಯ ಮತ್ತು ಅವರಿಂದಾಗಿಯೇ ಚಾನೆಲ್‌ಗೆ ಟಿಆರ್‌ಪಿ ಕೂಡ ಹೆಚ್ಚಾಗುತ್ತದೆ ಎಂಬ ಮನೋಭಾವ ಸುದ್ದಿ ವಾಹಿನಿಗಳ ಮುಖ್ಯಸ್ಥರದ್ದು. ಹಾಗಾಗಿ ಆ್ಯಂಕರ್ ಆಗಬೇಕು ಅಂತ ಚಾನೆಲ್‌ಗೆ ಬಂದವರು, ಸೌಂದರ್ಯದ ಕಾರಣದಿಂದಾಗಿ ತಾವು ಅಂದುಕೊಂಡ ವಿಭಾಗದಲ್ಲಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಸುದ್ದಿ ವಾಹಿನಿಗಳ ಕೆಲವು ವಿಭಾಗಗಳಿಗೆ ಕೆಲಸಕ್ಕೆ ಸಂಬಂಧಿಸಿದಂತೆ ಗ್ಲಾಮರ್ ತುಂಬಾನೇ ಮುಖ್ಯವಾಗಿದ್ದನ್ನು ಕಾಣಬಹುದು. ಹಾಗಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಹಲವು ಮಹಿಳೆಯರು ತಾವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗಲಿಲ್ಲ ಎಂದು ಕೊರಗುವುದನ್ನು ಕಾಣುತ್ತೇವೆ. ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮೇನಕಾ ಹೇಳುವಂತೆ "ನಾನು ಹಳ್ಳಿ ಹಿನ್ನೆಲೆಯ ಹುಡುಗಿ. ಎಂ.ಕಾಂ ಪದವೀಧರೆ. ನ್ಯೂಸ್ ಓದಬೇಕು, ಆ್ಯಂಕರ್ ಆಗಿ ಕೆಲಸ ಮಾಡಬೇಕು ಅನ್ನುವುದು ನನ್ನ ಕನಸಾಗಿತ್ತು. ನಾನು ದಿನಾಲೂ ಟಿವಿ ನೋಡ್ತಾ ಇದ್ದದ್ದೆ ಯಾರು ಹೇಗೆ ನ್ಯೂಸ್ ಓದುತ್ತಾರೆ ಮತ್ತು ಕಾರ್ಯಕ್ರಮ ನಿರೂಪಿಸುತ್ತಾರೆ ಅಂತ ತಿಳಿದುಕೊಳ್ಳಲು. ಇದೇ ಕನಸಿನೊಂದಿಗೆ ನಾನು ಬೆಂಗಳೂರಿಗೆ ಕಾಲಿಟ್ಟೆ. ಎಂಕಾಂನಲ್ಲಿ ನಾನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದರಿಂದ ಮತ್ತು ಯಾವುದೇ ವಿಷಯ ಕೊಟ್ಟರೂ ಚೆನ್ನಾಗಿ ನಿರೂಪಿಸುತ್ತೇನೆಂಬ ಧೈರ್ಯ ನನ್ನಲ್ಲಿತ್ತು. ಕಂಡಿತಾ ಈ ಕ್ಷೇತ್ರದಲ್ಲಿ ಕೆಲಸ ಸಿಗುತ್ತದೆ ಎಂಬ ವಿಶ್ವಾಸದೊಂದಿಗೆ ಕೆಲಸ ಹುಡುಕುವುಕ್ಕೆ ಶುರು ಮಾಡಿದೆ. ಚಾನೆಲ್‌ವೊಂದರಲ್ಲಿ ಸಂದರ್ಶನಕ್ಕೆ ಹೋಗುವ ಅವಕಾಶವೂ ನನಗೆ ಸಿಕ್ಕಿತ್ತು. ಸಂದರ್ಶಕರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಸರಿಯಾಗಿಯೇ ಉತ್ತರ ಕೊಟ್ಟೆ. ಕೊನೆಯಲ್ಲಿ ನೀವು ಯಾವ ಕೆಲಸ ಮಾಡಲು ಇಚ್ಛಿಸಿದ್ದೀರಿ? ಎಂಬ ಪ್ರಶ್ನೆ ಸಂದರ್ಶಕರಿಂದ

ಬಂತು. ನನ್ನ ತಲೆಯಲ್ಲಿ ಆ್ಯಂಕರ್ ಬಿಟ್ಟರೆ ಬೇರೆ ಆಯ್ಕೆಯೇ ಇರಲಿಲ್ಲ. ಹಾಗಾಗಿ ವಿಶ್ವಾಸದಿಂದ ಆ್ಯಂಕರ್ ಆಗಬೇಕೆಂದಿದ್ದೇನೆ ಎಂದು ಹೇಳಿದೆ. ನನ್ನ ಉತ್ತರಕ್ಕೆ ಅವರಿಂದ ಆ ಕ್ಷಣದಲ್ಲಿ ಯಾವುದೇ ಪತ್ರಿಕ್ರಿಯೆ ಬರಲಿಲ್ಲ. ನಂತರ ಸರಿ ನೀವಿನ್ನು ಹೊರಡಬಹುದು ಎಂದರು. ಎರಡು ದಿನದ ನಂತರ ಅದೇ ಚಾನೆಲ್‌ನವರಿಂದ ನನಗೊಂದು ಕರೆ ಬಂತು. ನೀವು ಸಂದರ್ಶನದಲ್ಲಿ ಪಾಸಾಗಿದ್ದೀರಿ. ಇಂತಹ ದಿನ ಬಂದು ರಿಪೋರ್ಟಿಂಗ್ ಮಾಡಿಕೊಳ್ಳಿ ಎಂದರು. ನನಗಂತೂ ತುಂಬಾ ಖುಷಿ ಆಯಿತು. ನನ್ನ ಆಸೆ ಇಷ್ಟು ಬೇಗ ಈಡೇರಿತಲ್ಲ ಅಂತ ಸಂಭ್ರಮಿಸಿದೆ. ನನ್ನ ಕುಟುಂಬಕ್ಕೆ ಮತ್ತು ಸ್ನೇಹಿತೆಯರಿಗೆ, ಪರಿಚಯವಿದ್ದವರಿಗೆ ಚಾನೆಲ್ ಕೆಲಸಕ್ಕೆ ಆಯ್ಕೆಯಾಗಿರುವ ವಿಚಾರ ಹಂಚಿಕೊಂಡೆ. ಇನ್ಮುಂದೆ ನನ್ನನ್ನು ನೀವು ಟಿವಿಯಲ್ಲಿ ನೋಡಬಹುದು ಅಂತ ಹೆಮ್ಮೆಯಿಂದ ಹೇಳಿಕೊಂಡೆ. ಅವರು ಕೂಡ ನಾನು ಟಿವಿಯಲ್ಲಿ ಕಾಣಿಸಿಕೊಳ್ಳುವುದನ್ನು ಕೇಳಿ ಖುಷಿಪಟ್ಟರು. ಆದರೆ, ಈ ಸಂಭ್ರಮ ತುಂಬಾ ಹೊತ್ತು ಇರಲಿಲ್ಲ. ರಿಪೋರ್ಟಿಂಗ್ ಮಾಡಿಕೊಳ್ಳಲು ಆಫೀಸ್‌ಗೆ ಹೋದಾಗ ನನ್ನನ್ನು ಆ್ಯಂಕರಿಂಗ್ ವಿಭಾಗಕ್ಕೆ ಹಾಕಿರಲಿಲ್ಲ. ಬದಲಾಗಿ ಸಿನಿಮಾ ರಿಪೋರ್ಟಿಂಗ್ ಮಾಡುವಂತೆ ಹೇಳಿದರು. ಅದರಿಂದಾಗಿ ನನಗೆ ತುಂಬಾನೇ ಬೇಜಾರಾಯಿತು. ಎಚ್‌ಆರ್ (ಮಾನವಸಂಪನ್ಮೂಲ) ಮುಖ್ಯಸ್ಥರನ್ನು ಕೇಳಿದೆ. ನಾನು ಅರ್ಜಿ ಹಾಕಿದ್ದೆ ಸುದ್ದಿ ಓದುವ ಹುದ್ದೆಗೆ. ನೀವು ಕೊಟ್ಟಿದ್ದು ವರದಿಗಾರ್ತಿಯ ಕೆಲಸ. ಯಾಕೆ ಹೀಗೆ? ಎಂದು ಪ್ರಶ್ನೆ ಮಾಡಿದೆ. ಅವರಿಂದ ಬಂದ ಉತ್ತರ ಇನ್ನೂ ನನಗೆ ನಿರಾಸೆ ಮಾಡಿತು. ಆ್ಯಂಕರ್ ಆಗಲು ಕೇವಲ ಬುದ್ಧಿವಂತಿಕೆ ಸಾಲದು. ನೋಡಲು ಸುಂದರವಾಗಿಯೂ ಇರಬೇಕು ಮೇಡಮ್. ಆ್ಯಂಕರ್ ಕೆಲಸ ಸೌಂದರ್ಯವನ್ನೂ ಕೇಳುತ್ತದೆ. ನಿಮ್ಮಲ್ಲಿ ಅದರ ಕೊರತೆಯಿತ್ತು ಅನಿಸತ್ತೆ. ಹಾಗಾಗಿ ಸಂದರ್ಶನ ಮಾಡಿದವರು, ನಿಮ್ಮನ್ನು ಆ ಕೆಲಸಕ್ಕೆ ತಗೆದುಕೊಂಡಿಲ್ಲ ಅನಿಸತ್ತೆ ಅಂದರು. ಹಾಗಂತ ನಿರಾಸೆ ಮಾಡ್ಕೋಬೇಡಿ. ಸದ್ಯ ಸಿಕ್ಕಿರೋ ಕೆಲಸ ಮಾಡಿ. ದಪ್ಪ ಇದ್ದೀರಿ ತೂಕ ಇಳಿಸಿಕೊಳ್ಳಿ. ಮುಂದಿನ ಸಾರಿ ಟ್ರೈ ಮಾಡಿ ಅಂತ ಸಮಾಧಾನ ಹೇಳೋಕೆ ಬಂದರು. ಅವರ ಮಾತಿಂದ ನನಗೇನೂ ಸಮಾಧಾನ ಆಗಲಿಲ್ಲ. ನಾನು ಟಿವಿಯಲ್ಲಿ ಬರ್ತೀನಿ ಅಂತ ಎಲ್ಲರಿಗೂ ಹೇಳಿದ್ದೆ. ಅದೊಂದು ರೀತಿಯ ಟೆನ್‌ಷನ್ ಶುರುವಾಯಿತು. ಈ ವಿಷಯವನ್ನು ಮನೆಯವರಿಗೆ ಹೇಗೆ ಹೇಳೋದು ಗೊತ್ತಾಗಲಿಲ್ಲ. ಹಾಗಾಗಿ ಸ್ವಲ್ಪ ದಿನ ಸುಳ್ಳು ಹೇಳಿಕೊಂಡು ಸುಮ್ಮನೇ ಕಾಲ ಕಳೆದೆ. ಊರಿಗೆ ಹೋದಾಗ ಎಲ್ಲರೂ ಕೇಳೋರು. ರಿಪೋರ್ಟಿಂಗ್ ಮಾಡೋವಾಗ ಟಿವಿಯಲ್ಲಿ ಕಾಣ್ತಿನಲ್ಲ ಅಂತ ಅವರಿಗೆ ಸಬೂಬು ಹೇಳಿದೆ. ನಿಧಾನವಾಗಿ ಮನೆಯವರಿಗೆ ಸತ್ಯ ಹೇಳಿದೆ. ಅವರು ಕೂಡ ಬೇಸರ ಮಾಡಿಕೊಂಡರು. ಹೌದು, ನನ್ನ ಅನುಭವಕ್ಕೆ ಬಂದಿದ್ದೇನೆಂದರೆ ಮಾಧ್ಯಮದಲ್ಲಿ ಕೆಲಸ ನಿರೂಪಕಿಯರಿಗೆ ಬುದ್ಧಿವಂತಿಕೆ ಮುಖ್ಯವಲ್ಲ. ಬುದ್ಧಿವಂತಿಕೆಗಿಂತಲೂ ಸುಂದರವಾಗಿದ್ದರೆ ಸಾಕು. ಪರದೆಯ ಮೇಲೆ ಕಾಣಲು ಕಡ್ಡಾಯವಾಗಿ ಅವರು ಸುಂದರವಾಗಿರಬೇಕು. ಇದು ಮಾಧ್ಯಮಗಳ ಲಾಭ ನಷ್ಟದ ವಿಚಾರವೂ ಹೌದು ಅಂತಾರೆ ನನ್ನ ಸಹೋದ್ಯೋಗಿಗಳು. ನೀವು ಸುಂದರವಾಗಿಲ್ಲ ಅನ್ನುವುದು ಸಾಧಾರಣ

ವಿಚಾರವಲ್ಲ. ಇಂತಹ ಚರ್ಚೆ ಬಂದಾಗ ಹೆಣ್ಣುಮಕ್ಕಳ ಮನಸ್ಸಿಗೆ ಎಷ್ಟೊಂದು ನೋವಾಗುತ್ತದೆ ಎಂಬುದನ್ನು ಅವರೆಂದೂ ಆಲೋಚಿಸುವುದಿಲ್ಲ. ಇಂಥದ್ದೊಂದು ಅವಮಾನ ನನಗಾದ ನಂತರ ಯಾವುತ್ತೂ ನಾನು ಆ ವಿಭಾಗದ ಕಡೆ ತಿರುಗಿಯೂ ನೋಡಲಿಲ್ಲ. ಎಚ್‌ಆರ್ ವಿಭಾಗದಿಂದ ಉಚಿತ ಸಲಹೆ ಸಿಕ್ಕಂತೆ ತೂಕವನ್ನೂ ಇಳಿಸಿಕೊಳ್ಳಲಿಲ್ಲ, ಸುಂದರವಾಗಿ ಕಾಣಲೂ ಪ್ರಯತ್ನವನ್ನೂ ಪಡಲಿಲ್ಲ. ಆದರೆ, ನನ್ನ ಕನಸು ಹಾಗೆಯೇ ಉಳಿದುಕೊಂಡ ನೋವಂತೂ ಈಗಲೂ ಇದೆ' ಎಂದರು.

ಇನ್ನೊಂದು ಪ್ರಕರಣದಲ್ಲಿ ಪಲ್ಲವಿ ಅವರು ಹೇಳುವಂತೆ "ನಾನು ಮಾಧ್ಯಮ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದು ಆ್ಯಂಕರ್ ಆಗಬೇಕೆಂದು. ಬೇರೆ ಯಾವ ವಿಭಾಗಗಳಲ್ಲೂ ಕೆಲಸ ಮಾಡುವ ಆಸಕ್ತಿ ನನ್ನನ್ನಲ್ಲಿ ಇರಲಿಲ್ಲ. ವಾರ್ತಾ ವಾಚಕಿ ಅಥವಾ ನಿರೂಪಕಿಯಾಗಿ ನಾನು ಗುರುತಿಸಿಕೊಳ್ಳಬೇಕು ಅನ್ನುವ ಮಹತ್ತರ ಆಸೆ ನನ್ನದಾಗಿತ್ತು. ಅಂಥದ್ದೊಂದು ಆಸೆ ಇಟ್ಟುಕೊಂಡೆ ನಾನು ಚಾನೆಲ್‌ವೊಂದರ ಸಂದರ್ಶನಕ್ಕೂ ಹೋಗಿದ್ದು. ಇಂಟರ್‌ವ್ಯೂವ್‌ಗೆ ಹೋದ ಸಂದರ್ಭದಲ್ಲಿ ನನಗೆ ಯಾವುದೇ ಭಯವಿರಲಿಲ್ಲ. ಹಾಗಾಗಿ ಧೈರ್ಯದಿಂದ ನಿರಾಳವಾಗಿ ಸಂದರ್ಶನವನ್ನು ಪೂರ್ಣಗೊಳಿಸಿದೆ. ನಂತರ ಆ್ಯಂಕರ್ ಆಗಬೇಕೆನ್ನುವ ನನ್ನ ಇಂಗಿತವನ್ನು ಅವರಲ್ಲಿ ಹೇಳಿಕೊಂಡೆ. ಆದರೆ ನಾನು ಅಂದುಕೊಂಡಿದ್ದು ನನಗೆ ಸಿಗಲಿಲ್ಲ. ಆ ಸುದ್ದಿ ವಾಹಿನಿಯವರು ನನ್ನನ್ನು ಆ್ಯಂಕರ್ ಆಗಿ ನೇಮಕ ಮಾಡಲೇ ಇಲ್ಲ. ಅದಕ್ಕೆ ಅವರು ಕೊಟ್ಟ ಕಾರಣ ನನಗೆ ಅಚ್ಚರಿ ಮತ್ತು ನೋವು ಒಟ್ಟೊಟ್ಟಿಗೆ ತಂದಿತು. ನಾನು ತೀರಾ ತೆಳ್ಳಗಿದ್ದೀನಂತೆ. ಬಡಕಲು ದೇಹದವಳು ನಾನಾಗಿದ್ದರಿಂದ ಟಿವಿಯಲ್ಲಿ ನೋಡಲು ಚೆನ್ನಾಗಿ ಕಾಣುವುದಿಲ್ಲವಂತೆ. ನರಪೇತಲು ತರಹ ಕಂಡರೆ ಯಾರು ತಾನೆ ನಿಮ್ಮನ್ನು ನೋಡುತ್ತಾರೆ ಅಂತ ನನಗೆ ಅವರು ಪ್ರಶ್ನೆ ಮಾಡಿದರು. ಹಾಗಾಗಿ ಅವರು ನನ್ನನ್ನು ಆ್ಯಂಕರ್ ಮಾಡಲು ಸಾಧ್ಯವಾಗಲಿಲ್ಲವಂತೆ. ಇಂತಹ ಮಾತು ಕೇಳಿದಾಗ ನನಗೆ ಎಲ್ಲಿಲ್ಲದ ಕೋಪ ಬಂದಿತ್ತು. ಏನ್ ಮಾಡೋದು? ಕೋಪ ಮಾಡಿಕೊಂಡರೆ ಪ್ರಯೋಜನ ಏನು? ಬಂದಿದ್ದ ಕೋಪವನ್ನು ಹಾಗೆಯೇ ಅದುಮಿಟ್ಟುಕೊಂಡು ಅಲ್ಲಿಂದ ಹೊರಟು ಬಂದೆ. ನಿಜ, ಚಾನೆಲ್‌ಗಳಿಗೆ ಮಹಿಳೆಯರ ವಿದ್ವತ್ತು ಮುಖ್ಯವಾಗುವುದೇ ಇಲ್ಲ. ಆ್ಯಂಕರ್ ಪೋಸ್ಟ್‌ಗೆ ಚಾನೆಲ್‌ಗಳೇ ಸೃಷ್ಟಿಸಿಕೊಂಡ ಕೆಲವು ಮಾನದಂಡಗಳಿವೆ. ಆ್ಯಂಕರಿಂಗ್ ವಿಭಾಗದಲ್ಲಿ ಕೆಲಸ ಮಾಡಬೇಕು ಅಂದರೆ, ಮಹಿಳೆಯರು ಜೀರೋ ಸೈಜ್ ದೇಹ ಹೊಂದಿರಬೇಕು. ಅದಕ್ಕಿಂತಲೂ ತೂಕ ಕಡಿಮೆ ಇದ್ದರೆ, ಅಂಥವರನ್ನು ಕ್ಯಾಮೆರಾ ಮುಂದೆಯೂ ಕೂರಿಸುವುದಿಲ್ಲ. ಅಲ್ಲದೇ ಸ್ವಲ್ಪ ದಪ್ಪವಾಗಿಯೂ ಇರಬಾರದು. ಹಾಗೇನಾದರೂ ಇದ್ದರೆ, ಕ್ಯಾಮೆರಾ ತುಂಬಿಕೊಳ್ಳುತ್ತಾರೆ ಎಂಬ ಅಪವಾದ ಬೇರೆ. ಹಾಗಾಗಿ ಬೆಳ್ಳಗೆ, ದುಂಡಗೆ, ಸುಂದರ ಮೈಕಟ್ಟನ್ನು ಹೊಂದಿದ ಮಹಿಳೆಯರಿಗೆ ಜ್ಞಾನವಿಲ್ಲದಿದ್ದರೂ ಆದೀತು ಎಂಬ ಧೋರಣೆ ಇದೆ. ನಮ್ಮಂಥವರಿಗೆ ಇಲ್ಲಿ ಜಾಗವೇ ಇಲ್ಲ ಎಂದು ತಿಳಿದು. ಅನಿವಾರ್ಯವಾಗಿ ನಾನು ಡೆಸ್ಕ್ ಕೆಲಸಕ್ಕೆ ಸೇರಿಕೊಂಡೆ' ಎಂದು ಹೇಳಿದರು.

ಈ ಎರಡೂ ಪ್ರಕರಣಗಳನ್ನು ಗಮನಿಸಿದರೆ ಮಾಧ್ಯಮವೆಂಬ ಸಂಸ್ಥೆಯು ಉದ್ಯಮವಾಗಿ ಪರಿವರ್ತಿತವಾದಾಗ ಚಾನೆಲ್‌ಗಳು ಸ್ಪರ್ಧಾತ್ಮಕ ಪ್ರಪಂಚಕ್ಕೆ ತೆರೆದುಕೊಂಡವು. ಆವಾಗಿನಿಂದ ಮಹಿಳೆಯರನ್ನು ಬಂಡವಾಳವಾಗಿಯೇ ನೋಡುವ ಪರಿಪಾಠ ಶುರುವಾಯಿತು. ಅಂದಿನಿಂದ ಮಹಿಳೆಯರೂ ಸಹ ಈ ಗ್ಲಾಮರ್ ಜಗತ್ತಿಗೆ ತೆರೆದುಕೊಳ್ಳಲು ಆರಂಭಿಸಿದರು. ಈ ಉದ್ಯಮವೇ ಸ್ಪರ್ಧಾತ್ಮಕವಾಗಿದ್ದಾಗ ಇಲ್ಲಿ ಪ್ರತಿ ಕ್ಷಣವೂ ಮುಖ್ಯವಾಗಿರುತ್ತದೆ. ಅದಕ್ಕೆ ಪೂರ್ವ ತಯಾರಿಯನ್ನೂ ಸಹ ಮಹಿಳೆಯರು ಮಾಡಿಕೊಳ್ಳಬೇಕಾಗುತ್ತದೆ. ಗ್ಲಾಮರ್ ಜಗತ್ತು ಇಂದು ಮಹಿಳೆಯರನ್ನು ಆಳುತ್ತಿದೆಯೇ ಹೊರತು, ಮಹಿಳೆಯರು ಗ್ಲಾಮರ್ ಜಗತ್ತನ್ನಲ್ಲ. ಹಾಗಾಗಿ ಅದೆಷ್ಟೋ ಮಹಿಳೆಯರು ತಾವು ಅಂದುಕೊಂಡಿದ್ದನ್ನು ಸಾಧಿಸಲಾಗದೇ ನೊಂದುಕೊಂಡಿದ್ದಾರೆ.

ಮೇಲಿನ ಮೊದಲ ಪ್ರಕರಣದಲ್ಲಿ ಮೇನಕಾ ಅವರು ಹೇಳುವಂತೆ, ಅವರು ಆ್ಯಂಕರ್ ಆಗಬೇಕು ಎಂಬ ಆಸೆಯೊಂದಿಗೆ ಮಾಧ್ಯಮ ಕ್ಷೇತ್ರಕ್ಕೆ ಪ್ರವೇಶ ಪಡೆದಿದ್ದಾರೆ. ಆದರೆ, ಅವರು ದಪ್ಪವಿರುವ ಕಾರಣಕ್ಕಾಗಿ ಮತ್ತು ಮುಖದಲ್ಲಿ ಕಳೆ ಇಲ್ಲ ಎಂಬ ನೆಪವೊಡ್ಡಿ ಆ್ಯಂಕರ್ ಮಾಡಲಿಲ್ಲವೆಂಬ ಬೇಸರ ಅವರಲ್ಲಿದೆ. ಸುದ್ದಿ ವಾಹಿನಿಗಳು ಮಹಿಳೆಯರಿಂದ ಬಯಸುತ್ತಿರುವುದಾದರೂ ಏನು ಎಂಬುದನ್ನು ನಾವು ಗಂಭೀರವಾಗಿ ಗಮನಿಸಬೇಕಾಗಿದೆ. ಮತ್ತೊಂದು ಪ್ರಕರಣದಲ್ಲಿ ಝಾನ್ಸಿಯವರೂ ಸಹ ಅಂಥದ್ದೇ ಕಾರಣಕ್ಕಾಗಿ ಆ್ಯಂಕರ್ ಹುದ್ದೆಯನ್ನು ಕಳೆದುಕೊಂಡಿದ್ದಾರೆ. ಇಲ್ಲಿ ಮುಖ್ಯವಾಗಿ ಟಿವಿ ನೋಡುವ ಪ್ರೇಕ್ಷಕರು ಚಾನೆಲ್‌ನಿಂದ ಏನನ್ನು ಬಯಸುತ್ತಾರೆ ಎಂಬುದನ್ನು ಸಂಸ್ಥೆಗಳೇ ನಿರ್ಧರಿಸಿಬಿಟ್ಟಿವೆ. ಹಾಗಾಗಿಯೇ ಇವರೇ ಪ್ರೇಕ್ಷಕರ ಸ್ಥಾನದಲ್ಲಿ ಕುಳಿತು, ಉದ್ಯೋಗಿಗಳನ್ನು ಸಂದರ್ಶನ ಮಾಡುತ್ತಿದ್ದಾರೆ. ಆದರೆ ನಿಜವಾದ ಪ್ರೇಕ್ಷಕ ಏನನ್ನು ನಿರೀಕ್ಷಿಸುತ್ತಾನೆ ಎಂಬುದನ್ನೇ ಇವರು ತಿಳಿದುಕೊಳ್ಳಲು ಹೋಗಿಲ್ಲ ಅಥವಾ ನಿಜವಾದ ಪ್ರೇಕ್ಷಕನ ಬೇಕು ಬೇಡಿಕೆಗಳು ಇಲ್ಲಿ ಮುಖ್ಯವಾಗುವುದಿಲ್ಲ. ಪ್ರೇಕ್ಷಕನ ನಿಜವಾದ ನಾಡಿ ಮಿಡಿತವನ್ನು ಅರಿತಿದ್ದರೆ, ಅವುಗಳ ಮನಸ್ಥಿತಿಯೇ ಬೇರೆಯದ್ದಾಗಿರುತ್ತಿತ್ತು. ಅದು ಹಾಗಾಗುತ್ತಿಲ್ಲ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ಉದ್ಯೋಗಿಗಳೇ ಹೇಳುವಂತೆ, ಮಹಿಳಾ ಉದ್ಯೋಗಿಗಳ ಅದರಲ್ಲೂ ಆ್ಯಂಕರ್ ಮಾಡುವ ಹುಡುಗಿಯರ ಜ್ಞಾನಕ್ಕೆ ಯಾವುದೇ ಮಹತ್ವವಿಲ್ಲ. ಮಹತ್ವವಿದ್ದರೂ ಸಹ ಅವರು ಟಿವಿ ಪರದೆಯ ಮೇಲೆ ಕಾಣಿಸಿಕೊಳ್ಳುವುದಿಲ್ಲ. ಈ ಜ್ಞಾನ ಕೇವಲ ಡೆಸ್ಕ್‌ನಲ್ಲಿ ಕೆಲಸ ಮಾಡುವ ಮತ್ತು ರಿಪೋರ್ಟಿಂಗ್ ಮಾಡುವ ಮಹಿಳಾ ಉದ್ಯೋಗಿಗಳಿಗಷ್ಟೇ ಸೀಮಿತವಾಗುತ್ತದೆ. ಒಟ್ಟಾರೆಯಾಗಿ ಗ್ಲಾಮರ್ ಲೋಕದಲ್ಲಿ ಮಹಿಳೆಯರು ತಾವು ಅಂದುಕೊಂಡ ಹುದ್ದೆಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಪಿತೃಪ್ರಧಾನ ವ್ಯವಸ್ಥೆಯು ತುಂಬಾ ನಾಜೂಕಾಗಿ ಮಹಿಳೆಯರ ದೇಹವನ್ನು ಬಂಡವಾಳವನ್ನಾಗಿಸಿಕೊಂಡಿರುವುದು ತಿಳಿದುಬರುತ್ತದೆ. ಆ ಮೂಲಕ ಮಹಿಳೆಯರ ದೇಹ ಮತ್ತು ಯೌವನಾವಸ್ಥೆಯನ್ನು ಬಳಸಿಕೊಂಡು ತಾನು ಲಾಭಗಳಿಸುತ್ತಿದೆ. ಗ್ಲಾಮರ್ ಹೆಸರಿನಲ್ಲಿ ಮಹಿಳೆಯರನ್ನು ಚಾನೆಲ್‌ಗಳು ಬಂಡವಾಳದ ಸರಕನ್ನಾಗಿಸಿಕೊಳ್ಳುತ್ತಿದೆ. ಆದರೆ, ಈ ಬಗೆಯ

ಗ್ಲಾಮರ್ ಸಮಸ್ಯೆ ಪುರುಷರನ್ನು ಕಾಡುವುದಿಲ್ಲ. ಏಕೆಂದರೆ ಬಹುತೇಕ ಸುದ್ದಿ ವಾಹಿನಿಗಳು ಪುರುಷರ ಮುಂದಾಳತ್ವದಲ್ಲಿಯೇ ಕೆಲಸ ಮಾಡುತ್ತಿವೆ. ಪುರುಷ ವ್ಯವಸ್ಥೆಯೇ ನಿರ್ಣಾಯಕವಾಗಿದೆ. ಹಾಗಾಗಿ ಅವರಿಗೆ ತಕರಾರಿರುವುದು ಮಹಿಳೆಯರ ವಿಷಯದಲ್ಲಿಯೇ ಹೊರತು ಪುರುಷರಲ್ಲಲ್ಲ. ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರೂ ಸಹ ಸಮಾನ ನೆಲೆಯಲ್ಲಿ ಗುರುತಿಸಬೇಕು, ಸಮಾನ ಅವಕಾಶಗಳು ದೊರೆಯಬೇಕು ಅಂತಿದೆ. ಅದು ಆಗುತ್ತಿಲ್ಲ.

ಈ. ತರಬೇತಿಯ 'ಸಮಸ್ಯೆ' : ವಿದ್ಯುನ್ಮಾನ ಮಧ್ಯಮದಲ್ಲಿ ಕೆಲಸ ಮಾಡಲು ತರಬೇತಿಯ ಅವಶ್ಯಕತೆಯಿದೆ. ಆಯಾ ಕೆಲಸಕ್ಕೆ ತಕ್ಕಂತೆ ತರಬೇತಿಗಳನ್ನು ಕೊಡುವ ಸಂಸ್ಥೆಗಳಿವೆ. ತರಬೇತಿ ಪಡೆಯದೇ ನೇರವಾಗಿ ಬಂದರೆ, ಕೆಲಸ ಮಾಡುವ ಸ್ಥಳದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ಮಹಿಳೆಯರಿಗೆ ಈ ಸಮಸ್ಯೆಯು ಮಹಿಳೆ ಅನ್ನುವ ಕಾರಣಕ್ಕಾಗಿಯೇ ಎದುರಾಗುತ್ತಿದೆ. ಮುಖ್ಯವಾಗಿ ಉದ್ಯೋಗಕ್ಕೆ ಸೇರುವ ಮುಂಚೆ ತರಬೇತಿ ಪಡೆದಿಲ್ಲ ಎಂಬ ಕಾರಣಕ್ಕಾಗಿ ಕೆಲವು ಮಹಿಳೆಯರು ತೊಂದರೆಗಳನ್ನು ಎದುರಿಸಿರುವುದು ಕಂಡುಬರುತ್ತದೆ. ಕೆಲಸ ಮಾಡುವ ಎಲ್ಲ ಅರ್ಹತೆಗಳು ಮಹಿಳೆಯರಲ್ಲಿ ಇದ್ದರೂ, ತರಬೇತಿಯ ನೆಪವೊಡ್ಡಿ ಅವಳಿಗೆ ಕೆಲಸವನ್ನು ನಿರಾಕರಿಸಲಾಗುತ್ತಿದೆ. ಹಾಗಾಗಿ ಬೆಂಗಳೂರಿನಂತಹ ಮಹಾನಗರಗಳಲ್ಲಿ ಯಾವುದೇ ವಲಯದಲ್ಲಾದರೂ ಸರಿಯೇ ಉದ್ಯೋಗವನ್ನು ಪಡೆಯಬೇಕೆಂದರೆ ಉದ್ಯೋಗಕ್ಕೆ ಸಂಬಂಧಿಸಿದ ತರಬೇತಿಯನ್ನು ಪಡೆಯಲೇ ಬೇಕಾಗಿರುತ್ತದೆ. ತರಬೇತಿಯಿಲ್ಲದೆ ಯಾವುದೇ ಉದ್ಯೋಗ ಪಡೆಯುವುದು ಕಷ್ಟದ ಕೆಲಸ. ಈ ಕಾರಣದಿಂದ ಅನೇಕ ಸಮಸ್ಯೆಗಳನ್ನು ಎದುರಿಸಿದ ಮಹಿಳೆಯರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಸಂಜನಾ ಎಂಬುವವರು ಹೇಳುವಂತೆ "ನಾನು ಓದಿದ್ದು ಬಿಎ ಪದವಿ. ಮಾಧ್ಯಮದಲ್ಲಿ ಕೆಲಸ ಮಾಡಬೇಕೆನ್ನುವುದು ನನ್ನ ಬಹಳ ದಿನಗಳ ಕನಸಾಗಿತ್ತು. ಆ ಒಂದು ಕನಸು ನನಸಾಗಿಸಲು ಒಂದು ಅವಕಾಶ ಕೂಡ ದೊರೆಯಿತು. ನ್ಯೂಸ್ ಚಾನೆಲ್‌ವೊಂದರಲ್ಲಿ ನ್ಯೂಸ್ ರೀಡರ್ ಆಗಿ ಕೆಲಸ ಮಾಡಲು ಕರೆಬಂತು. ಅದಕ್ಕಾಗಿ ಸಂದರ್ಶನವನ್ನೂ ಕರೆಯಲಾಗಿತ್ತು. ಸಂದರ್ಶನದ ಸಂದರ್ಭದಲ್ಲಿ ನನಗೆ ನ್ಯೂಸ್ ಓದಲು ಹೇಳಿದರು. ಅದು ಕ್ಯಾಮೆರಾ ಮುಂದೆ. ನ್ಯೂಸ್ ಓದಿಗೆ ಬೇಕಾದ ಎಲ್ಲ ಪರಿಕರಗಳನ್ನೂ ಜೋಡಿಸಿದ ಸ್ಟುಡಿಯೋ ಒಳಗೆ ನನ್ನನ್ನು ಕರೆದುಕೊಂಡು ಹೋದರು. ಪೇಪರ್ ಕೈಗಿಟ್ಟು ಕ್ಯಾಮೆರಾ ಮುಂದೆ ನ್ಯೂಸ್ ಓದಲು ಹೇಳಿದರು. ಕ್ಯಾಮೆರಾ ಮುಂದೆ ನಿಂತಾಗ ನನಗಂತೂ ತುಂಬಾ ಭಯವಾಯ್ತು. ನರ್ವಸ್ ಆದೆ. ಕ್ಯಾಮೆರಾಮನ್, ಅಲ್ಲಿದ್ದ ಹುಡುಗರು, ಸ್ಟುಡಿಯೋದಲ್ಲಿದ್ದವರನ್ನು ನೋಡಿದಾಗ ಮತ್ತಷ್ಟು ಅಂಜಿಕೆ. ಹಾಗಾಗಿ ನ್ಯೂಸ್ ಓದುವುದರಲ್ಲಿ ಸ್ವಲ್ಪ ಸಮಸ್ಯೆ ಆಯಿತು. ಹೆದರಿಕೆಯಿಂದಲೇ ನ್ಯೂಸ್ ಓದಿದೆ. ತಡಬಡಾಯಿಸಿದೆ. ಹೇಗೋ ಸಂದರ್ಶನ ಪೂರ್ಣಗೊಳಿಸಿದೆ. ನಂತರ ಸಂದರ್ಶನ ಮಾಡಿದ ವ್ಯಕ್ತಿಯೊಬ್ಬರು ನನ್ನನ್ನು ಕರೆದು, ನೀವು ನ್ಯೂಸ್ ಓದುವುದಕ್ಕಾಗಿ ತರಬೇತಿ ಪಡೆದಿದ್ದೀರಾ? ಎಂದು ಪ್ರಶ್ನಿಸಿದರು. ನಾನು ತರಬೇತಿ ಪಡೆದಿರಲಿಲ್ಲ. ಅದನ್ನೇ ಅವರ

ಮುಂದೆಯೇ ಹೇಳಿದೆ. ಮೊದಲು ನೀವು ನ್ಯೂಸ್ ಓದುವ ಬಗ್ಗೆ ತರಬೇತಿ ಪಡೆದುಕೊಂಡು ಬನ್ನಿ. ತರಬೇತಿಯೇ ಇಲ್ಲದೇ ಹೇಗೆ ನಿಮಗೆ ಕೆಲಸ ಕೊಡಲು ಸಾಧ್ಯ? ಈಗ ನಿಮಗೆ ಕೆಲಸ ಸಿಗಲ್ಲ ಅಂತ ಹೇಳಿದರು. ಇಲ್ಲೊಂದು ಸಮಸ್ಯೆಯಿದೆ. ಕಾಲೇಜುಗಳಲ್ಲಿ ಪ್ರಯೋಗಿಕ ತರಬೇತಿ ಇರುವುದಿಲ್ಲ. ಮಹಿಳೆಯರು ಅನ್ನುವ ಕಾರಣಕ್ಕಾಗಿ ಹುಡುಗರಂತೆ ನಮ್ಮನ್ನೂ ಕ್ಷೇತ್ರ ಕಾರ್ಯಕ್ಕೂ ಬಿಡುವುದಿಲ್ಲ. ಕೆಲಸಕ್ಕೆ ಬಂದರೆ ತರಬೇತಿ ಕೇಳುತ್ತಾರೆ. ಅಂದರೆ, ತರಬೇತಿ ಪಡೆಯದೇ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಸಿಗುವುದು ಕಷ್ಟ. ತರಬೇತಿ ಇಲ್ಲದ ಮಹಿಳೆಯರು ಈ ಕ್ಷೇತ್ರಕ್ಕೆ ಬೇಕಾಗಿಲ್ಲ. ಹಾಗಾಗಿ ತರಬೇತಿ ಪಡೆದ ಬೇರೆ ಚಾನೆಲ್‌ಗಳ ಉದ್ಯೋಗಿಗಳನ್ನು ಕರೆತರುತ್ತಾರೆಯೇ ಹೊರತು, ಸಮಸ್ಯೆ ಎಲ್ಲಿ ಆಗಿದೆ ಅಂತ ಪತ್ತೆ ಹಚ್ಚಿ ತರಬೇತಿ ಕೊಡಿಸುವಂತಹ ಕೆಲಸ ಆಗುತ್ತಿಲ್ಲ. ಈ ಕಾರಣದಿಂದಾಗಿ ನಾನು ಕೆಲಸದಿಂದ ವಂಚಿತಳಾದೆ. ತರಬೇತಿ ಪಡೆಯಲು ಬೆಂಗಳೂರಿನಂತಹ ಮಹಾನಗರವೇ ಬೇಕಾಗುತ್ತದೆ. ಅಲ್ಲಿ ಮಾತ್ರ ಒಂದಷ್ಟು ತರಬೇತಿ ಸಂಸ್ಥೆಗಳಿವೆ. ತರಬೇತಿ ಪಡೆಯುವಾಗ ಒಂದಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಎಲ್ಲವನ್ನೂ ದಾಟಿಕೊಂಡು ತರಬೇತಿ ಪಡೆಯುವ ಹೊತ್ತಿಗೆ ನನಗೆ ಬೇಕಾಗಿರುವ ಹುದ್ದೆ ಸಿಗುವುದಿಲ್ಲ. ನ್ಯೂಸ್ ರೀಡರ್ ತರಬೇತಿ ಪಡೆದುಕೊಂಡ ಬಂದ ನನಗೆ ಆ ಕೆಲಸ ಸಿಗಲೇ ಇಲ್ಲ. ಈಗ ವರದಿಗಾರ್ತಿಯಾಗಿ ಕೆಲಸ ಮಾಡುತ್ತಿದ್ದೇನೆ. ರಾತ್ರಿ ವೇಳೆ ನ್ಯೂಸ್ ರೀಡರ್ ಕಡಿಮೆ. ಹಾಗಾಗಿ ಒಂದೊಂದು ಸಲ ನ್ಯೂಸ್ ಓದುತ್ತೇನೆ. ಅದಕ್ಕಾಗಿ ಪ್ರತ್ಯೇಕ ಸಂಬಳ ಪಡೆಯುವುದಿಲ್ಲ. ಇದನ್ನು ಪರಿಗಣಿಸಿ ಮುಂದೆ ಯಾವತ್ತಾದರೂ ನ್ಯೂಸ್ ರೀಡರ್ ಕೆಲಸ ಸಿಗುತ್ತದೆಯೋ ನೋಡೋಣ' ಎಂದರು.

ಇನ್ನೊಂದು ಪ್ರಕರಣದಲ್ಲಿ ಅರ್ಚನಾ ಅವರು ಹೇಳುವಂತೆ "ರಾಜ್ಯಮಟ್ಟದ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡಬೇಕೆಂಬುದು ನನ್ನ ಆಸೆಯಾಗಿತ್ತು. ಅದು ಈಡೇರಲಿಲ್ಲ. ಕಾರಣ, ಈ ಕ್ಷೇತ್ರದಲ್ಲಿನ ಕೆಲಸದ ಬಗ್ಗೆ ನನಗೆ ತರಬೇತಿ ಇರಲಿಲ್ಲ. ಮಾಧ್ಯಮ ಕ್ಷೇತ್ರದಲ್ಲಿ, ಅದರಲ್ಲೂ ನ್ಯೂಸ್ ರೀಡರ್ ಆಗಲು ಮತ್ತು ನಿರೂಪಕಿಯಾಗಿ ಕೆಲಸ ಗಿಟ್ಟಿಸಿಕೊಳ್ಳಲು ಹಲವು ವಿಷಯಗಳನ್ನು ತಿಳಿದುಕೊಂಡಿರಬೇಕು. ಹಲವು ಹಂತದ ತರಬೇತಿ ಕೂಡ ಬೇಕಾಗುತ್ತದೆ. ಅದು ನನ್ನಲ್ಲಿ ಇರಲಿಲ್ಲ. ನ್ಯೂಸ್ ರೀಡರ್ ಹೇಗೆ ಕಾಣಬೇಕು, ಹೇಗೆ ಮಾತಾಡಬೇಕು, ಆಂಗೀಕ ಅಭಿನಯ ಹೇಗಿರಬೇಕು, ಬಾಡಿ ಲಾಂಗ್ವೇಜ್ ಮತ್ತು ಡ್ರೆಸ್ ಕೋಡ್ ಬಗ್ಗೆ ಹೀಗಿಯೇ ಇರಬೇಕು ಎಂಬಿತ್ಯಾದಿ ಅಂಶಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ಕೆಲವು ಸುದ್ದಿ ವಾಹಿನಿಗಳಲ್ಲಿ ಹೀಗೆಯೇ ಕುಳಿತುಕೊಂಡು, ಹೀಗೆಯೇ ನಿಂತುಕೊಂಡು ಕಾರ್ಯಕ್ರಮ ನಡೆಸಿಕೊಡಬೇಕೆಂಬ ನಿಯಮ ಮಾಡಿಕೊಂಡಿದ್ದಾರಂತೆ. ಅದಾವುದೂ ನನ್ನಲ್ಲಿ ಇರಲಿಲ್ಲ. ಹಾಗಾಗಿ ಸ್ಥಳಿಯ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡಬೇಕಾಗಿ ಬಂತು. ನನ್ನ ಗೆಳತಿಯೊಬ್ಬಳು ಹೊಸದಾಗಿ ಶುರುವಾದ ಚಾನೆಲ್‌ವೊಂದರ ಕೆಲಸಕ್ಕೆ ಹೋದಳು. ಆ ಚಾನೆಲ್‌ನವರೇ ಅವಳಿಗೆ ತರಬೇತಿ ಕೊಟ್ಟರು ಅಂತ ಹೇಳಿದ್ದಳು. ಅಂದರೆ, ತರಬೇತಿ ಪಡೆಯದೇ ಇಲ್ಲಿ ಕೆಲಸ ಸಿಗುವುದಿಲ್ಲ. ಸಾಮಾನ್ಯವಾಗಿ ಸುದ್ದಿ

ವಾಹಿನಿಗಳು ತರಬೇತಿ ಪಡೆದ ಮಹಿಳಾ ಉದ್ಯೋಗಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಬಹುತೇಕವಾಗಿ ತರಬೇತಿ ಪಡೆದ ಮಹಿಳೆಯರೇ ಇಂದು ಕೆಲಸ ಮಾಡುತ್ತಿದ್ದಾರೆ. ತರಬೇತಿ ಇಲ್ಲದೇ ಹೋದ ನಮಗೆ ಅವಮಾನ ಆಗಿದ್ದೂ ಇದೆ. ಈ ಅವಮಾನವನ್ನು ಸಹಿಸಿಕೊಳ್ಳುವುದಕ್ಕೆ ಆಗದೇ ನಾನು ರಾಜ್ಯಮಟ್ಟದ ಸುದ್ದಿ ವಾಹಿನಿಗಳ ಸಂದರ್ಶನಕ್ಕೆ ಹೋಗುವುದನ್ನೇ ಬಿಟ್ಟಿದ್ದೇನೆ. ತರಬೇತಿ ಪಡೆಯಲು ಸಾಕಷ್ಟು ಹಣಬೇಕು. ಬೆಂಗಳೂರಿನಂತಹ ನಗರಗಳಲ್ಲಿ ತರಬೇತಿ ಪಡೆಯುವುದು ಅಷ್ಟು ಸುಲಭದ ಮಾತಲ್ಲ. ಹುಡುಗಿಯರು ಕಾಲೇಜ್ ಮುಗಿಸುವುದೇ ಕಷ್ಟವಾಗಿರುವ ಈ ದಿನಗಳಲ್ಲಿ, ಕೆಲಸಕ್ಕೂ ತರಬೇತಿ ಪಡೆಯಬೇಕು ಅಂದರೆ ಕಷ್ಟದ ಮಾತು. ತರಬೇತಿ ಪಡೆಯುವುದಕ್ಕಾಗಿ ದುಡ್ಡು ಬೇಕಾಗುತ್ತದೆ. ದುಡ್ಡು ಹೊಂದಿಸಿಕೊಳ್ಳುವುದೂ ಆಗದ ಕೆಲಸ. ಹಾಗಾಗಿ ಲೊಕಲ್ ಚಾನೆಲ್‌ವೊಂದರಲ್ಲಿ ಕೆಲಸ ಮಾಡುತ್ತಲೇ, ಅಲ್ಪಸ್ವಲ್ಪ ಹಣ ಉಳಿಸಿಕೊಂಡು, ಈಗ ತರಬೇತಿ ಪಡೆಯುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಹೆಸರಾಂತ ಚಾನೆಲ್‌ಗಳಲ್ಲಿ ನನಗೆ ಉದ್ಯೋಗ ಸಿಗಬಹುದು ಎಂಬ ನಂಬಿಕೆ ಇದೆ. ಆದರೆ, ತರಬೇತಿ ಕಾರಣದಿಂದಾಗಿ ಉದ್ಯೋಗವನ್ನು ನಿರಾಕರಿಸಿದ್ದು ನನಗಂತೂ ಸಾಕಷ್ಟು ಬೇಸರ ಮೂಡಿಸಿತು. ಹಾಗಂತ ಇಲ್ಲಿ ಎಲ್ಲರೂ ತರಬೇತಿ ಪಡೆದುಕೊಂಡು ಬಂದಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಸಂದರ್ಶನದ ಸಂದರ್ಭದಲ್ಲಿ ತರಬೇತಿ ಪಡೆಯದೇ ಇರುವ ಹುಡುಗರನ್ನು ಕೆಲಸಕ್ಕೆ ತಗೆದುಕೊಂಡಿದ್ದನ್ನೂ ನಾನು ನೋಡಿದ್ದೇನೆ. ಅವರು ಹುಡುಗರು, ಧೈರ್ಯವಾಗಿ ಕೆಲಸದಲ್ಲಿ ಮುನ್ನುಗ್ಗುತ್ತಾರೆಂಬ ಮಾತನ್ನೂ ಸಂದರ್ಶಕರಿಂದ ಮತ್ತು ಸುದ್ದಿ ವಾಹಿನಿಗಳ ಮುಖ್ಯಸ್ಥರಿಂದ ಕೇಳಿದ್ದೇನೆ. ಮಹಿಳೆಯರ ವಿಷಯದಲ್ಲಿ ಹಾಗಾಗಲ್ಲ. ಅವರಿಗೆ ತರಬೇತಿ ಅವಶ್ಯಕವಾಗುತ್ತದೆ' ಎಂದು ಹೇಳಿದರು.

ಈ ಎರಡೂ ಪ್ರಕರಣಗಳಲ್ಲಿ ಮುಖ್ಯವಾಗಿ ಕಂಡು ಬಂದ ಅಂಶವೆಂದರೆ, ಸುದ್ದಿ ವಾಹಿನಿಗಳಲ್ಲಿ ಮಹಿಳೆಯರು ಕೆಲಸ ಪಡೆಯಲು ತರಬೇತಿಯ ಅವಶ್ಯಕತೆ ಇದೆ ಎಂದು ಮಹಿಳಾ ಉದ್ಯೋಗಿಗಳು ಅಭಿಪ್ರಾಯ ಪಡುತ್ತಾರೆ. ಪುರುಷರಿಗೆ ಈ ತರಬೇತಿ ಬೇಕಾಗುವುದಿಲ್ಲವೆಂದೂ ಅವರು ಹೇಳುತ್ತಾರೆ. ಹಾಗಾಗಿ ಇದು ಮಾಧ್ಯಮದ ರಾಜಕಾರಣವಲ್ಲದೇ ಮತ್ತೇನೂ ಅಲ್ಲ. ಸುದ್ದಿ ವಾಹಿನಿಗಳು ತಮಗೆ ಯಾರು ಬೇಕು? ಯಾರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಮೊದಲೇ ನಿರ್ಧರಿಸಿರುತ್ತವೆ. ಹಾಗಾಗಿ ಮಹಿಳೆಯರಿಗೆ ಕೆಲಸ ಕೊಡುವ ಸಂದರ್ಭದಲ್ಲಿ ತರಬೇತಿಯ ನೆಪವೊಡ್ಡಿ ಅವರಿಗೆ ಕೆಲಸವನ್ನು ನಿರಾಕರಿಸಲಾಗುತ್ತಿದೆ. ಮಾಧ್ಯಮಗಳಿಗೆ ಮಹಿಳೆಯರೆಂದರೆ ಬಂಡವಾಳದ ಸರಕು. ಅದು ಎಲ್ಲ ಮಹಿಳೆಯರಿಗೂ ಅನ್ವಯಿಸಲ್ಲ. ಸುಂದರವಾಗಿರುವ ಹುಡುಗಿಯರಿಗೆ ತರಬೇತಿ ಇರದಿದ್ದರೂ ಕೆಲಸ ಸಿಗುತ್ತವೆ. ಸೌಂದರ್ಯ ಇಲ್ಲದೇ ಇರುವಾಗ ಕೆಲಸ ಕೊಡಲು ಏನಾದರೂ ಒಂದು ಕಾರಣ ಕೊಡಬೇಕಾಗುತ್ತದೆ. ಆ ಕಾರಣವೇ ತರಬೇತಿ ಇಲ್ಲ ಅನ್ನುವುದೇ ಆಗಿರುತ್ತದೆ. ಸಂಜನಾ ಅವರ ಪ್ರಕರಣದಲ್ಲಿ ಇದನ್ನು ಗುರುತಿಸಬಹುದಾಗಿದೆ.


ಟಿವಿ ಮಾಧ್ಯಮದಲ್ಲಿ ಕೆಲಸ ಮಾಡಲು ಬಯಸುವ ಮಹಿಳೆಯರು ತರಬೇತಿಯನ್ನು ಪಡೆಯದಿದ್ದರೆ ಕ್ಯಾಮೆರಾ ಎದುರಿಸುವಲ್ಲಿ ಕಷ್ಟ ಪಡಬೇಕಾಗುತ್ತದೆ. ಮೊದಲೇ ತರಬೇತಿ ಇರುವುದಿಲ್ಲ. ಹಾಗಾಗಿ ಸಂದರ್ಶಕರು ಕೇಳುವ ನಾನಾ ಪ್ರಶ್ನೆಗಳು ಮಹಿಳೆಯರಲ್ಲಿ ಭಯದ ವಾತಾವರಣ ಸೃಷ್ಟಿ ಮಾಡುತ್ತದೆ. ಹಾಗಾಗಿ ಮಹಿಳೆಯರು ಮಾಧ್ಯಮದಲ್ಲಿ ಕೆಲಸಕ್ಕೆ ಸೇರಬೇಕೆಂದಾಗ ಅಥವಾ ಕೆಲಸಕ್ಕೆ ಪ್ರವೇಶವನ್ನು ಪಡೆಯುವ ಸಂದರ್ಭದಲ್ಲಿಯೇ ಈ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾರೆ.

ಒಟ್ಟಾರೆಯಾಗಿ ಸುದ್ದಿ ವಾಹಿನಿಗಳಲ್ಲಿ ಕೆಲಸಕ್ಕೆ ಪ್ರವೇಶ ಮಾಡುವ ಸಂದರ್ಭದಲ್ಲಿಯೇ ಮಹಿಳೆಯರು ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೇ, ಮಾಧ್ಯಮಗಳು ಮಹಿಳೆಯರು ಮುಕ್ತವಾಗಿ, ಯಾವುದರ ಭಯವಿಲ್ಲದೆ ಸಂದರ್ಶನವನ್ನು ಎದುರಿಸುವ ಅವಕಾಶವನ್ನೇ ಅದು ಕಿತ್ತುಕೊಂಡಿದೆ. ಹಾಗೆಯೇ ಮಾಧ್ಯಮ ಕ್ಷೇತ್ರವೆಂದ ಕೂಡಲೇ ಮೂಗು ಮುರಿಯುವ ಸದಸ್ಯರು ಕುಟುಂಬದಲ್ಲಿರುವುದು ಕಂಡುಬರುತ್ತದೆ. ಅವರ ಪ್ರಕಾರ ಮಾಧ್ಯಮ ಕ್ಷೇತ್ರವಿರುವುದು ಮಹಿಳೆಯರಿಗಲ್ಲ, ಬದಲಾಗಿ ಅದು ಪುರುಷರಿಗೆ ಮಾತ್ರ ಸೀಮಿತವಾದುದು ಎಂಬುದು ಅವರ ವಾದ. ಮಹಿಳೆಯರು ಸುದ್ದಿ ವಾಹಿನಿಯಲ್ಲಿ ಕೆಲಸಕ್ಕೆ ಹೋದರೆ ಕುಟುಂಬದ ಗೌರವದ ಪ್ರಶ್ನೆ ಕಾಡುತ್ತದೆ. ಕುಟುಂಬದ ಗೌರವ ಎನ್ನುವುದು ಕೇವಲ ಮಹಿಳೆಯರಿಂದಲೇ ನಿರ್ಮಿಸಲ್ಪಡುತ್ತದೆ ಅಥವಾ ಕಾಪಾಡಲ್ಪಡುತ್ತದೆ ಎಂಬುದು ಅವರ ವಾದ. ಹಾಗಾಗಿ ಉದ್ಯೋಗಕ್ಕೆ ಅದೂ ಮಾಧ್ಯಮ ಕ್ಷೇತ್ರದಲ್ಲಿ ಉದ್ಯೋಗಕ್ಕೆ ಪ್ರವೇಶಿಸುವ ಪೂರ್ವದಲ್ಲಿಯೇ ಕುಟುಂಬ ಸದಸ್ಯರಿಂದ ವಿರೋಧಗಳು ಎದುರಾಗುವುದನ್ನು ಮೇಲಿನ ಪ್ರಕರಣಗಳಿಂದ ಕಾಣಬಹುದು. ಒಟ್ಟಾರೆಯಾಗಿ ಸುದ್ದಿ ವಾಹಿನಿಗಳಲ್ಲಿ ಮಹಿಳೆಯರು ಕೆಲಸಕ್ಕೆ ಸೇರಿಕೊಳ್ಳುವುದು ಅಷ್ಟು ಸುಲಭವಲ್ಲ. ಅವಳು ಎಲ್ಲ ಬಗೆಯ ತೊಂದರೆಗಳನ್ನು ಸಹಿಸಿಕೊಂಡೇ ಅಥವಾ ಎದುರಿಸಿಯೇ ಮುನ್ನುಗ್ಗಬೇಕಾಗುತ್ತದೆ. ಈ ಬಗೆಯ ಸಮಸ್ಯೆಗಳನ್ನು ಪ್ರವೇಶಕ್ಕೆ ಪೂರ್ವದಲ್ಲಿ ಅನುಭವಿಸಿದರೆ, ಇನ್ನು ಕೆಲಸಕ್ಕೆ ಸೇರಿಕೊಂಡ ನಂತರದಲ್ಲಿ ಹಲವು ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಇವುಗಳನ್ನು ವಕ್ತೃಗಳ ಹೇಳಿಕೆಯ ಸಹಾಯದಿಂದ ಮುಂದಿನಂತೆ ವಿವರಿಸಿಕೊಳ್ಳಲಾಗಿದೆ.

ಕೋಷ್ಟಕ 5..1

ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವಾಗ ಎದುರಾಗುವ ಸಮಸ್ಯೆಗಳು (160 ಜನ ವಕ್ತೃಗಳು)

ಕಾರಣಗಳು	ಹೌದು		ಇಲ್ಲ		ಈ ಪ್ರಶ್ನೆಗೆ ಮೌನ ವಹಿಸಿದವರು	
ಕುಟುಂಬದಿಂದ ಎದುರಾದ ಸಮಸ್ಯೆ	42%	88.75%	2%	7.5%	6%	3.75%
ವಯಸ್ಸಿನ ಸಮಸ್ಯೆ	36%	85%	4%	8.75%	00	6.25%
ಗ್ಲಾಮರ್ ಸಮಸ್ಯೆ	28%	80%	8%	11.25%	4%	8.75%
ತರಬೇತಿಯ ಸಮಸ್ಯೆ	40%	87.5%	8%	5%	2%	7.5%



ರೇಖಾಚಿತ್ರ 5.1. ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವಾಗ ಎದುರಾಗುವ ಸಮಸ್ಯೆಗಳು

ಮೇಲಿನ ಕೋಷ್ಟಕ ಮತ್ತು ರೇಖಾಚಿತ್ರವನ್ನು ಗಮನಿಸಿದಾಗ ಮಹಿಳಾ ಉದ್ಯೋಗಿಗಳು ಕುಟುಂಬದ ಸದಸ್ಯರಿಂದ ಸಮಸ್ಯೆಗಳನ್ನು ಎದುರಿಸಿದವರ ಶೇಕಡಾವಾರು ಪ್ರಮಾಣ 88.75% ರಷ್ಟಿದೆ. ಹಾಗೆಯೇ ಇದಕ್ಕೆ ವಿರುದ್ಧವಾದ ಉತ್ತರವನ್ನು ಕೊಟ್ಟವರ ಶೇಕಡಾವಾರು ಪ್ರಮಾಣ 7.50% ರಷ್ಟಿದ್ದರೆ, ಇನ್ನು ಈ ಪ್ರಶ್ನೆಗೆ ಮೌನವಹಿಸಿದವರ ಶೇಕಡಾವಾರು ಪ್ರಮಾಣ ಕೇವಲ 3.75%ರಷ್ಟಿದೆ. ವಯಸ್ಸಿನ ಸಮಸ್ಯೆಯನ್ನು ಎದುರಿಸಿದ ಮಹಿಳೆಯರ ಪ್ರಮಾಣವೂ ಸಹ

ಅಧಿಕವಾಗಿರುವುದನ್ನು ಕಾಣಬಹುದು. ಇದರ ಶೇಕಡಾವಾರು ಪ್ರಮಾಣ 85%ರಷ್ಟಿದೆ. ಹಾಗೆಯೇ ವಯಸ್ಸು ಮಾಧ್ಯಮ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ವಯಸ್ಸಿನ ತೊಂದರೆಯಾಗುವುದಿಲ್ಲ ಎಂದು ಹೇಳಿದವರ ಪ್ರಮಾಣ ಶೇ. 8.75ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಮೌನವಹಿಸಿದರ ಪ್ರಮಾಣ ಶೇ. 6.25ರಷ್ಟಿದೆ. ಗ್ಲಾಮರ್ ಎಂಬುದು ಸಮಸ್ಯೆಯಾಗಿ ಕಾಡಿದ ಮಹಿಳೆಯರ ಶೇಕಡಾವಾರು ಪ್ರಮಾಣ ಶೇ.80ರಷ್ಟಿದೆ. ಗ್ಲಾಮರ್ ಎಂಬುದು ಮಹಿಳೆಯರಿಗೆ ಸಮಸ್ಯೆಯೇ ಅಲ್ಲ ಎಂಬುದನ್ನು ಒಪ್ಪಿಕೊಂಡವರ ಪ್ರಮಾಣ ಶೇ. 11.25ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಮೌನ ವಹಿಸಿದವರ ಪ್ರಮಾಣ ಶೇ.8.75ರಷ್ಟಿದೆ. ಕೊನೆಯಲ್ಲಿ ತರಬೇತಿಗೆ ಸಂಬಂಧಿಸಿದಂತೆ ಮಹಿಳೆಯರ ಅಭಿಪ್ರಾಯವನ್ನು ಗುರುತಿಸುವುದಾದರೆ, ತರಬೇತಿ ಮಹಿಳೆಯರಿಗೆ ಅಗತ್ಯವಾಗಿರುತ್ತದೆ. ಇಲ್ಲವಾದಲ್ಲಿ ಅದು ಸಮಸ್ಯೆಯಾಗಿ ಕಾಡುತ್ತದೆ ಎಂದು ಹೇಳುವವರ ಪ್ರಮಾಣ ಶೇ. 87.50ರಷ್ಟಿದೆ. ಹಾಗೆಯೇ ತರಬೇತಿಯ ಅವಶ್ಯಕತೆ ಇಲ್ಲವೆಂದು ಹೇಳುವ ಮಹಿಳೆಯರ ಪ್ರಮಾಣ ಶೇ.5ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಮೌನ ವಹಿಸಿದವರ ಪ್ರಮಾಣ ಶೇಕಡಾ 7.50ರಷ್ಟಿದೆ. ಒಟ್ಟಾರೆಯಾಗಿ ಈ ನಾಲ್ಕು ಕಾರಣಗಳೂ ಸಹ ಮಹಿಳೆಯರು ಮಾಧ್ಯಮ ಕ್ಷೇತ್ರಕ್ಕೆ ಪ್ರವೇಶವನ್ನು ಪಡೆಯುವ ಮುಂಚೆಯೇ ಎದುರಿಸುವಂತಹ ಸಮಸ್ಯೆಗಳಾಗಿವೆ. ಈ ಮೇಲಿನ ಪ್ರಶ್ನೆಗಳಿಗೆ ಮೌನ ವಹಿಸಿದವರು ಕೆಲವು ಒತ್ತಡಗಳಿಗೆ ಒಳಗಾಗಿ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಆದರೂ ಸಹ ಅವರೂ ಈ ಮೇಲಿನ ಸಮಸ್ಯೆಗಳನ್ನು ಎದುರಿಸಿಯೇ ಬಂದಿರುವುದನ್ನು ಹೇಳುತ್ತಾರೆ. ಇದನ್ನು ದಾಖಲಿಸುವುದು ಬೇಡವೆಂದು ಹೇಳಿದ ಕಾರಣಕ್ಕಾಗಿ ಅವರ ಮಾತುಗಳನ್ನು ಮೌನದ ಅಡಿಯಲ್ಲಿ ಗುರುತಿಸಲಾಗಿದೆ.

5.2. ಉದ್ಯೋಗ ಸೇರಿಕೊಂಡ ನಂತರ ಮಹಿಳೆಯರಿಗೆ ಎದುರಾಗುವ ಸಮಸ್ಯೆಗಳು

ಯಾವುದೇ ಉದ್ಯೋಗದ ವಲಯದಲ್ಲಾದರೂ ಸಮಸ್ಯೆಗಳು ಎಲ್ಲರಿಗೂ ಕಾಡುತ್ತವೆ. ಅದು ಖಾಸಗಿ ಸಂಸ್ಥೆ ಆಗಿರಬಹುದು ಅಥವಾ ಸರಕಾರಿ ಸಂಸ್ಥೆ ಆಗಿರಬಹುದು. ಆದರೆ ಸಮಸ್ಯೆಗಳ ಪ್ರಮಾಣವನ್ನು ಗಮನಿಸಿದರೆ ಪುರುಷರಿಗಿಂತ ಸ್ತ್ರೀಯರ ಮೇಲಿನ ಸಮಸ್ಯೆಗಳೆ ಅಧಿಕವಾಗಿರುತ್ತವೆ. ಮುಖ್ಯವಾಗಿ ಮಹಿಳೆಯರು ಎಂಬ ಕಾರಣಕ್ಕಾಗಿಯೇ ಹಲವು ಸಮಸ್ಯೆಗಳನ್ನು ಅವರು ಎದುರಿಸುತ್ತಾರೆ. ಇನ್ನು ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಮಹಿಳೆಯರು ಉದ್ಯೋಗದ ಕಾರಣದಿಂದಾಗಿ ಎದುರಿಸುವ ಸಮಸ್ಯೆಗಳು ಭಿನ್ನವಾಗಿರುತ್ತವೆ. ಅವುಗಳಲ್ಲಿ ಮಾಧ್ಯಮ ಸಂಸ್ಥೆಗಳ ಒಳಗಿನ ಸಮಸ್ಯೆಗಳು ಒಂದು ಬಗೆಯದ್ದಾದರೆ, ಇನ್ನೊಂದು ಬಗೆಯಲ್ಲಿ ಮಾಧ್ಯಮ ಕ್ಷೇತ್ರದಿಂದ ಹೊರಗೆ ಅಂದರೆ ಫೀಲ್ಡ್‌ನಲ್ಲಿ ಎದುರಿಸುವ ಸಮಸ್ಯೆಗಳು ಮತ್ತೊಂದು ಬಗೆಯದ್ದಾಗಿರುತ್ತದೆ. ಪ್ರತಿಯೊಂದು ವಿಭಾಗದಲ್ಲಿಯೂ ಮಹಿಳೆಯರು ಆಯಾ ವಿಭಾಗಕ್ಕೆ ಸಂಬಂಧಿಸಿದ ಕಾರಣಗಳಿಂದಾಗಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಮಹಿಳೆಯರು ವಿದ್ಯುನ್ಮಾನ ಕ್ಷೇತ್ರಕ್ಕೆ ಪ್ರವೇಶ ಪಡೆದಾದ ನಂತರ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಎರಡು ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ಮೊದಲನೆಯದ್ದು ಮಾಧ್ಯಮ ಕ್ಷೇತ್ರದ

ಕಛೇರಿಯ ಒಳಗೆ ಎದುರಿಸುತ್ತಿರುವ ಸಮಸ್ಯೆಗಳು, ಎರಡನೆಯದಾಗಿ ಕ್ಷೇತ್ರ ಕಾರ್ಯದಲ್ಲಿ (ಫೀಲ್ಡ್) ಅಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು. ಇವುಗಳನ್ನು ಪುನಃ ಉಪವಿಭಾಗಗಳನ್ನಾಗಿ ಮಾಡಿಕೊಂಡು ಮುಂದಿನಂತೆ ವಿಶ್ಲೇಷಿಸಲಾಗಿದೆ.

5.2.1. ವಿದ್ಯುನ್ಮಾನ ಮಾಧ್ಯಮದ ಕಛೇರಿಯ ಒಳಗೆ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ವಿದ್ಯುನ್ಮಾನ ಮಾಧ್ಯಮ ಇಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಿದೆ. ಉದ್ಯಮದ ರೀತಿಯಲ್ಲಿಯೇ ಅದು ಮುಂದುವರೆಯುತ್ತಿದೆ. ದಿನದ ಇಪ್ಪತ್ನಾಲ್ಕು ಗಂಟೆಯೂ ಇಲ್ಲಿ ಕೆಲಸವಿರುತ್ತದೆ. ಹಾಗಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವಂಥವರು ಈ ವೇಗಕ್ಕೆ ತಕ್ಕಂತೆ ದುಡಿಯಲೇಬೇಕು. ಚಾನೆಲ್‌ಗಳು ಮಧ್ಯೆ ಪೈಪೋಟಿ ಇರುವುದರಿಂದ ಮತ್ತೊಂದು ಚಾನೆಲ್ ಜತೆ ಸ್ಪರ್ಧೆಗೆ ಇಳಿಯಬೇಕಾಗುತ್ತದೆ. ಈ ಕಾರಣದಿಂದಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವವರಿಗೆ ಪ್ರತಿ ನಿಮಿಷವೂ ಮಹತ್ವದ್ದಾಗಿರುತ್ತದೆ. ಕಾಲಿಗೆ ಚಕ್ರಕಟ್ಟಿಕೊಂಡೇ ಅವರು ಕೆಲಸ ಮಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿ ಕೆಲಸಕ್ಕೆ ಸೇರಿಕೊಂಡಾಗ ಹಲವು ರೀತಿಯಲ್ಲಿ ಮಾನಸಿಕ ಮತ್ತು ದೈಹಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳು ಅ) ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್‌ಗಳು ಆ) ಸಹೋದ್ಯೋಗಿಗಳಿಂದ ಮತ್ತು ಮೇಲಾಧಿಕಾರಿಗಳಿಂದ ವೃತ್ತಿಯ ಜೀವನದ ಏಳಿಗೆಗೆ ತಡೆಯೊಡ್ಡುವುದು. ಇ) ಧಾರ್ಮಿಕ ಹೆಸರಿನಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳು.. ಹೀಗೆ ಅವುಗಳನ್ನು ಗುರುತಿಸಿಕೊಂಡು ಮುಂದಿನಂತೆ ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಅ. ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್‌ಗಳು : ಗಾಸಿಪ್‌ಗಳು ಎಂದರೆ ಗಾಳಿಸುದ್ದಿಗಳು ಎಂದರ್ಥ. ಮುಖ್ಯವಾಗಿ ಈ ಬಗೆಯ ಗಾಸಿಪ್ ಚಲನಚಿತ್ರಗಳಲ್ಲಿ ಕೆಲಸ ಮಾಡುವವರಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇತ್ತೀಚಿನ ದಿನಗಳಲ್ಲಿ ಇವುಗಳು ಮಾಧ್ಯಮ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ವಿಷಯದಲ್ಲೂ ಕಂಡುಬರುತ್ತಿವೆ.

ಈ ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್‌ಗಳ ಕಾರಣದಿಂದಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವುಗಳು ಮಹಿಳೆಯರ ವ್ಯಕ್ತಿತ್ವವನ್ನು ಕಸಿದುಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ. ಇವುಗಳ ಬಗ್ಗೆ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರ ಮಾತಿನಲ್ಲಿಯೇ ಹೇಳುವುದಾದರೆ, "ಸಾರ್, ನಾನು ಈ ಕ್ಷೇತ್ರವನ್ನು ಇಷ್ಟದಿಂದ ಆಯ್ಕೆ ಮಾಡಿಕೊಂಡಿದ್ದು. ಕಾರಣ, ಇಲ್ಲಿ ಕೆಲಸ ಮಾಡುವವರಿಗೆ ಎಲ್ಲ ಬಗೆಯ ಸುರಕ್ಷತೆ ಇರುತ್ತದೆ ಎಂದು ಹೇಳಲಾಗುತ್ತದೆ. ಇದು ಸ್ವಲ್ಪ ಪ್ರಮಾಣದಲ್ಲಿ ಸತ್ಯವಾದರೂ, ಬಹುತೇಕವಾಗಿ ನಮ್ಮನ್ನ ತುಳಿಯುವಂತ ಜನರೆ ಇಲ್ಲಿ

ಅಧಿಕವಾಗಿದ್ದಾರೆ. ಸ್ವಜನ ಪಕ್ಷಪಾತ ಮತ್ತು ಸ್ವಾರ್ಥವೇ ಪ್ರಧಾನವಾಗಿದೆ. ತಮ್ಮ ಏಳಿಗೆಗಾಗಿ ಮತ್ತೊಬ್ಬರನ್ನು ತುಳಿಯುವುದಕ್ಕೂ ಹಿಂಜರಿಯದಂಥ ಜನರು ಈ ಕ್ಷೇತ್ರದಲ್ಲಿ ಸಿಗುತ್ತಾರೆ. ಇಂಥದ್ದೊಂದು ಸಂದರ್ಭ ಸ್ವತಃ ನನಗೆ ಒದಗಿ ಬಂದಿತ್ತು. ನಾನು ಸಿನಿಮಾ ವಿಭಾಗದಲ್ಲಿ ರಿಪೋರ್ಟರ್ ಆಗಿ ಕೆಲಸ ಮಾಡುವ ಸಂದರ್ಭದಲ್ಲಿ ಒಬ್ಬ ಸ್ಟಾರ್ ನಟನ ಸಂದರ್ಶನ ಮಾಡಬೇಕಾಗಿತ್ತು. ಅವರು ಯಾರಿಗೂ ಅಷ್ಟು ಸುಲಭಕ್ಕೆ ಸಿಗುತ್ತಿರಲಿಲ್ಲ. ಅವರ ಇಂಟರ್‌ವ್ಯೂವ್‌ಗಾಗಿ ತಿಂಗಳುಗಟ್ಟಲೇ ಕಾಯಬೇಕಿತ್ತು. ಅಥವಾ ಅವರ ಮ್ಯಾನೇಜರ್‌ಗೆ ಪುಸಲಾಯಿಸಬೇಕಿತ್ತು. ತುಂಬಾನೇ ಕಷ್ಟಪಟ್ಟು ನಾನು ಸ್ಟಾರ್ ನಟನ ಸಂದರ್ಶನ ಮಾಡಿದೆ. ಆ ಸಂದರ್ಶನದ ಕಾರ್ಯಕ್ರಮ ಮಾಡಲು ನಾನು ಅನುಭವಿಸಿದ ಪಾಡು ನನಗೆ ಗೊತ್ತು. ಅವರ ಹಿಂದೆ ಅಲೆದಿದ್ದೆ. ಅವರು ಯಾವ ಟೈಮ್‌ಗೆ ಬರಲು ಹೇಳುತ್ತಾರೋ, ಅದೇ ವೇಳೆಗೆ ಹೋದರೂ ಸಂದರ್ಶನ ಸಿಗಲಿಲ್ಲ. ಹೀಗೆಯೇ ಎರಡ್ಮೂರು ಬಾರಿ ಮಾಡಿದರು. ಆದರೂ, ನಾನು ನನ್ನ ಪ್ರಯತ್ನ ಮಾಡುತ್ತಲೇ ಇದ್ದೆ. ಕೊನೆಗೂ ಒಂದು ದಿನ ಅವರೇ ಕಾಲ್ ಮಾಡಿ ಎಕ್ಸ್‌ಕ್ಲೂಸಿವ್ ಇಂಟರ್‌ವ್ಯೂವ್ ಕೊಡಲು ಒಪ್ಪಿಕೊಂಡರು. ಒಳ್ಳೆಯ ಪ್ರಶ್ನೆಗಳನ್ನು ಕೇಳಿ, ಅವರಿಂದ ಅಷ್ಟೇ ಚುರುಕಾದ ಉತ್ತರ ಪಡೆದು. ಆ ಸಂದರ್ಶನ ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು. ಟಿಆರ್‌ಪಿ ಕೂಡ ಬಂತು. ಆ ವಾರ ನನ್ನ ಪ್ರೋಗ್ರಾಂ ಹೆಚ್ಚು ಟಿಆರ್‌ಪಿ ಬಂದಿದ್ದರಿಂದ ನನ್ನ ವಿಭಾಗದ ಮುಖ್ಯಸ್ಥರು ಅಭಿನಂದಿಸಿದರು. ಈ ಖುಷಿ ನನ್ನಲ್ಲಿ ತುಂಬಾ ದಿನ ಉಳಿಯಲಿಲ್ಲ. ನನ್ನ ಆಫೀಸ್‌ನಲ್ಲಿಯ ಸಹೋದ್ಯೋಗಿಗಳೇ ನನ್ನ ಬಗ್ಗೆ ಸಲ್ಲದ ಮಾತುಗಳನ್ನು ಆಡುವುದಕ್ಕೆ ಶುರು ಮಾಡಿದರು. ಯಾರಿಗೂ ಸಿಗದೇ ಇರುವ ಆ ದೊಡ್ಡ ನಟ ನನಗೆ ಸಿಕ್ಕಿದ್ದಾರೆ ಅಂದರೆ, ಅದು ನಾನು ಹುಡುಗಿ ಅನ್ನುವ ಕಾರಣಕ್ಕಾಗಿ ಅಂದರು. ನಾನು ಗಿಮಿಕ್ ಮಾಡಿ, ಅವರಿಂದ ಸಂದರ್ಶನ ತಂದಿದ್ದೇನೆ ಅಂತ ಗಾಸಿಪ್ ಹರಡಿಸಿದರು. ನಾನು ಪತ್ರಕರ್ತೆ ಅವರು ದೊಡ್ಡ ನಟ ಅನ್ನುವುದನ್ನೂ ಮರೆತು, ನನ್ನ ಕ್ಯಾರೆಕ್ಟರ್ ಬಗ್ಗೆ ಕತೆ ಕಟ್ಟಿದರು. ಇಂತಹ ಮಾತುಗಳನ್ನು ಕೇಳಿದ ಮೇಲೆ, ಶ್ರಮವಹಿಸಿ ಕೆಲಸ ಮಾಡುವವರಿಗೆ ಈ ಕ್ಷೇತ್ರದಲ್ಲಿ ಬೆಲೆಯೇ ಇಲ್ಲವಾ ಅನ್ನಿಸೋಕೆ ಶುರುವಾಯ್ತು. ಸಹೋದ್ಯೋಗಿಗಳು ಮಾತ್ರವಲ್ಲ, ಬೇರೆ ಚಾನೆಲ್‌ಗಳ ಹುಡುಗರಿಗೂ ಕೆಟ್ಟದ್ದಾಗಿ ಹೇಳಿದ್ದರು. ನಾನು ಪತ್ರಿಕಾಗೋಷ್ಠಿಗೆ ಹೋದಾಗ, ಆ ಹುಡುಗರು ನನ್ನನ್ನು ನೋಡುವ ರೀತಿ ಕೂಡ ಬದಲಾಗಿತ್ತು. ನನ್ನೊಂದಿಗೆ ಪ್ರತಿ ಬಾರಿಯೂ ಚೆನ್ನಾಗಿ ಮಾತನಾಡುತ್ತಿದ್ದವರು, ಯಾಕೆ ಈ ರೀತಿ ವರ್ತಿಸುತ್ತಿದ್ದಾರೆ ಅಂತ ಆಗ ನನಗೆ ಗೊತ್ತಾಗಲಿಲ್ಲ. ನಂತರ ಗೊತ್ತಾಗಿ ತುಂಬಾನೇ ಹಿಂಸೆ ಅನಿಸಿತು. ಆ ಘಟನೆಯಿಂದಾಗಿ ಮಾನಸಿಕವಾಗಿ ಘಾಸಿಗೊಂಡೆ. ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಕ್ಕೆ ಆಗಲಿಲ್ಲ. ಇಂಥ ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್‌ಗಳು ನಮ್ಮನ್ನ ಮಾನಸಿಕವಾಗಿ ಕುಗ್ಗಿಸಿ ಬಿಡುತ್ತವೆ" ಎಂದರು ವಾಹಿನಿಯೊಂದರಲ್ಲಿ ರಿಪೋರ್ಟರ್ ಆಗಿ ಕೆಲಸ ಮಾಡುತ್ತಿರುವ ಮೇನಕಾ.

ಇನ್ನೊಂದು ಪ್ರಕರಣದಲ್ಲಿ ರಕ್ಷಿತಾ ಅವರು ಹೇಳುವಂತೆ "ನಾನು ಸುದ್ದಿ ತರುವುದಕ್ಕಾಗಿ ಫೀಲ್ಡ್‌ಗೆ ಹೋದಾಗ ಅಲ್ಲಿ ಬಹುತೇಕ ಹುಡುಗರೇ ಇರುತ್ತಿದ್ದರು. ಫೀಲ್ಡ್‌ಗೆ ಹುಡುಗಿಯರು ಬರುವುದು ತೀರಾ ಕಡಿಮೆ. ಹಾಗಾಗಿ ಯಾವ ಹುಡುಗರ ಜೊತೆನೂ ನಾನು ಕ್ಲೋಸ್ ಆಗಿ ಮಾತಾಡುವುದಕ್ಕೆ ಆಗುತ್ತಿರಲಿಲ್ಲ. ಹುಡುಗರಲ್ಲಿ ಕೆಲಸಕ್ಕೆ ಸಂಬಂಧಿಸಿದಂತೆ ಏನೇ ಕೇಳಿದರೂ ಅದು ತಪ್ಪಾಗುತ್ತಿತ್ತು. ಹುಡುಗರೊಂದಿಗೆ ಮಾತನಾಡಿದಾಗ ನನ್ನ ಬಗ್ಗೆಯೂ ಗಾಸಿಪ್ ಕೇಳಿಬಂದವು. ವೃತ್ತಿಯ ವಿಚಾರವಾಗಿ ಹುಡುಗರ ಜೊತೆ ಕ್ಲೋಸ್ ಆಗಿ ಮಾತನಾಡಿದ್ದಕ್ಕೆ ನನ್ನ ನಡೆತೆಯನ್ನೇ ಪ್ರಶ್ನೆ ಮಾಡಿದ್ದರು. ಅವಳದ್ದು ಅವನದ್ದೂ ಏನೋ ನೆಡೀತಾ ಇದೆ ಅನ್ನೋದು. ಆ ಮಾತು ಎಲ್ಲಿಗೆ ಹೋಗೋದು. ಎಷ್ಟು ಕೆಟ್ಟದ್ದಾಗಿ ಗಾಸಿಪ್ ಹಬ್ಬಿಸೋರು ಅಂದರೆ, ಅದು ಹಾಸಿಗೆವರೆಗೂ ಹೋಗೋದು. ನಾವಿಬ್ಬರೂ ಜೊತೆಯಾಗಿ ಮಲಗಿದ್ದೇವೆ ಅನ್ನೋರು. ಅದನ್ನು ತಂದು ಇನ್ನ್ಯಾರೋ ನಮಗೆ ಹೇಳೋರು. ಅದನ್ನ ಕೇಳಿಸಿಕೊಂಡಾಗ ಯಾಕಾದ್ರೂ ನಾನು ಈ ಇಂಡಸ್ಟ್ರಿಗೆ ಬಂದೆ ಅಂತ ಅನಿಸೋದು. ಯಾವುದೇ ಹುಡುಗನಿದ್ದರೂ ಅವನನ್ನು ಮಾತನಾಡಿಸೋಕೆ ಭಯ ಆಗೋದು. ನನ್ನದೇ ಕ್ಯಾಮೆರಾಮನ್ ಜೊತೆನೂ ನಾನು ಹೆಚ್ಚು ಮಾತಾಡ್ತಾ ಇರಲಿಲ್ಲ.

ನಮ್ಮ ನೆರೆಯ ರಾಜ್ಯದಲ್ಲಿ ಪ್ರವಾಹ ಆದಾಗ ಅಲ್ಲಿನ ಸ್ಥಿತಿಗತಿ ಬಗ್ಗೆ ವರದಿ ಮಾಡುವುದಕ್ಕೆ ಹೋಗಿದ್ದೆ. ಅಲ್ಲಿಗೆ ಹೋದಾಗ ಏನೆಲ್ಲ ಕಷ್ಟ ಪಟ್ಟೆ ಅಂತ ನನಗೆ ಮಾತ್ರ ಗೊತ್ತಿದೆ. ಅಲ್ಲಿ ನಮಗೆ ಸರಿಯಾಗಿ ಊಟ ಸಿಗ್ತಿರ್ಲಿಲ್ಲ. ಕುಡಿಯೋಕೆ ನೀರು ಕೂಡ ಇರ್ತಾ ಇರಲಿಲ್ಲ. ಅಷ್ಟೊಂದು ಹುಡುಗರ ಮಧ್ಯೆ ನಾನು ಕೆಲಸ ಮಾಡ್ಬೇಕಿತ್ತು. ದೂರದ ಊರು ಆಗಿದ್ದರಿಂದ ಮತ್ತು ಎರಡ್ಮೂರು ದಿನ ಅಲ್ಲಿಯೇ ಇರಬೇಕಾಗಿದ್ದರಿಂದ ರಾತ್ರಿ ಒಬ್ಬಳೆ ಲಾಡ್ಜ್‌ನಲ್ಲಿ ಉಳಿದುಕೊಳ್ಳಬೇಕಾಗಿತ್ತು. ಈ ಎಲ್ಲ ರಿಸ್ಕ್ ತೆಗೆದುಕೊಂಡು ನಾನು ಕೆಲಸ ಮಾಡಿದೆ. ಎಲ್ಲ ಸುದ್ದಿಯೊಂದಿಗೆ ಆಫೀಸ್‌ಗೆ ಬಂದಾಗ, ನನ್ನ ಕೆಲಸದ ಬಗ್ಗೆ ಸಹೋದ್ಯೋಗಿಗಳು ಖುಷಿ ಪಡುತ್ತಾರೆ ಎಂದು ಭಾವಿಸಿದ್ದೆ. ಆದರೆ, ಕೆಲವರು ನನ್ನ ಬಗ್ಗೆಯೇ ಆಡಿಕೊಳ್ಳುವುದಕ್ಕೆ ಶುರು ಮಾಡಿದರು. ನಾನು ಹುಡುಗರ ಜತೆ ಲಾಡ್ಜ್‌ನಲ್ಲಿ ಒಂದೇ ರೂಮ್‌ನಲ್ಲಿಯೇ ಮಲಗಿದ್ದೆ ಎಂದು ಗಾಸಿಪ್ ಹಬ್ಬಿಸಿದರು. ಹುಡುಗರ ಜೊತೆ ಸೇರಿಕೊಂಡು ಅವಳು ಕುಡೀತಾ ಇದ್ದಳು ಅಂತ ಸುಳ್ಳು ಸುದ್ದಿ ಹಬ್ಬಿಸಿದರು. ನಾನು ಆರೋಗ್ಯವೆಲ್ಲ ಹಾಳು ಮಾಡಿಕೊಂಡು ಕೆಲಸ ಮಾಡಿದ್ದರೂ ಕೊನೆಗೆ ಇಂತಹ ಆಪಾದನೆ ಹೊರಬೇಕಾಯಿತು. ನಾನು ತುಂಬಾ ಗಟ್ಟಿ. ಇಂತಹ ಯಾವುದೇ ಗಾಸಿಪ್‌ಗೆ ಭಯ ಪಡುವವಳು ಅಲ್ಲ. ಮೊದ ಮೊದಲು ಸ್ವಲ್ಪ ಬೇಸರವಾದರೂ, ನಂತರ ನನ್ನ ಕೆಲಸದಲ್ಲಿ ತೊಡಗಿಕೊಂಡು ಮರೆತುಬಿಟ್ಟೆ. ಆದರೆ, ತುಂಬಾ ಸೂಕ್ಷ್ಮ ಮನಸ್ಸಿನ ಹುಡುಗಿಯರು ಆಗಿದ್ದರೆ ಏನಾಗ್ತಾರ್ದು ಅಂತ ಯೋಚನೆ ಮಾಡಿ? ಹೀಗೆಲ್ಲ ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಮಹಿಳೆಯರ ವ್ಯಕ್ತಿತ್ವವನ್ನೇ ಕೆಲವರು ಹಾಳು ಮಾಡುತ್ತಾರೆ" ಎಂದರು.

ಹಾಗೆಯೇ ಇನ್ನೊಂದು ಪ್ರಕರಣದಲ್ಲಿ ರಾಧಾ ಅವರು ಹೇಳುವಂತೆ "ವಿಷಯ ಯಾವುದೇ ಆಗಿದ್ದರೂ, ನಾನು ಎಲ್ಲ ವಿಷಯಗಳಲ್ಲೂ ತುಂಬಾ ಬೋಲ್ಡ್ ಆಗಿ ಮಾತನಾಡುತ್ತೇನೆ. ಯಾರಿಗೂ ಹೆದರುವವಳಲ್ಲ ನಾನು. ಯಾವುದನ್ನೇ ಆಗಲಿ ನೇರವಾಗಿಯೇ ಹೇಳುವಂತಹ ವ್ಯಕ್ತಿತ್ವ ನನ್ನದು. ಹಾಗಾಗಿ ವೃತ್ತಿಯಲ್ಲಿ ನನಗೆ ವೈರಿಗಳು ಹೆಚ್ಚಾಗುತ್ತಾ ಹೋಗುತ್ತಿದ್ದರು. ಒಂದು ಸಾರಿ ಧರ್ಮದ ವಿಷಯವಾಗಿ ಕಾರ್ಯಕ್ರಮ ನೆಡಿಸಿ ಕೊಡುತ್ತಿದ್ದೆ. ನಾನು ತುಂಬಾ ವೈಚಾರಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಚರ್ಚೆಯನ್ನು ಮಾಡುತ್ತಿದ್ದೆ. ಆಗ ನಾನು ಆಡುವ ಮಾತುಗಳನ್ನು ಸಹಿಸಿಕೊಳ್ಳುವುದಕ್ಕೆ ಆಗದೇ ಇದ್ದರು. ನನ್ನನ್ನು ಬೇರೆ ಬೇರೆ ವಿಷಯಗಳಲ್ಲಿ ಟಾರ್ಗೆಟ್ ಮಾಡುವುದಕ್ಕೆ ಶುರು ಮಾಡಿದರು. ಅದು ಎಷ್ಟರ ಮಟ್ಟಿಗೆ ಅಂದರೆ, ಯಾವುದೋ ಒಂದು ವಿಚಾರವಾಗಿ ನಾನು ಆತ್ಮಹತ್ಯೆಗೆ ಯತ್ನಿಸಿದೆ ಅಂತ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹಬ್ಬಿಸಿದರು. ಅದು ಸುಳ್ಳು ಸುದ್ದಿಯಾಗಿದ್ದರೂ ಅದು ಬೇರೆ ಬೇರೆ ರೂಪ ಪಡೆದುಕೊಂಡಿತು. ನಾನು ಬದುಕಿದ್ದೇನೆ ಅಂತ ಸ್ವತಃ ನಾನೇ ಹೇಳಿಕೊಳ್ಳಬೇಕಾಯಿತು. ದೂರದಲ್ಲಿದ್ದ ನನ್ನ ಕುಟುಂಬದ ಸದಸ್ಯರು ಈ ಸುದ್ದಿ ಕೇಳಿ ಆಘಾತಕ್ಕೊಳಗಾಗಿದ್ದರರು. ನನಗೂ ತುಂಬಾನೇ ಬೇಸರವಾಗಿತ್ತು. ಮಹಿಳೆಯೊಬ್ಬಳು ಮಾಧ್ಯಮ ಕ್ಷೇತ್ರದಲ್ಲಿ ಬೆಳೆಯುತ್ತಿದ್ದಾಳೆ ಅಂದರೆ ಅವಳಿಗೆ ಉತ್ತೇಜನ ಕೊಡಬೇಕು. ಆ ಸೂಕ್ಷ್ಮತೆ ಕೂಡ ಅವರಿಗೆ ಇಲ್ಲದಾಗಿತ್ತು" ಎಂದು ಹೇಳಿದರು.

ಈ ಮೂರೂ ಪ್ರಕರಣಗಳನ್ನು ಗಮನಿಸಿದಾಗ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರನ್ನು ಈ ಕ್ಷೇತ್ರದಲ್ಲಿಯ ವ್ಯವಸ್ಥೆಯು ತುಂಬಾ ಕೀಳು ಮನೋಭಾವನೆ ಹೊಂದಿರುವುದು ಕಾಣುತ್ತದೆ. ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್ಸ್ ಕೇವಲ ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ. ಪುರುಷರು ವಿಷಯದಲ್ಲಿ ಗಾಸಿಪ್‌ಗೆ ಅವಕಾಶವೇ ಇಲ್ಲವೆನ್ನುವಂತೆ ಕಾಪಾಡಿಕೊಳ್ಳಲಾಗಿದೆ. ಏಕೆಂದರೆ ಪುರುಷರಿಗೆ ಸಿಕ್ಕಷ್ಟು ಚಲನಾ ಸ್ವಾತಂತ್ರ್ಯ, ಇಲ್ಲಿನ ಮಹಿಳೆಯರಲ್ಲಿ ಕಂಡು ಬರುವುದಿಲ್ಲ. ಪುರುಷ ಉದ್ಯೋಗಿಗಳು ಯಾರನ್ನು ಯಾವಾಗ ಬೇಕಾದರೂ ಭೇಟಿ ಮಾಡಬಹುದು. ಅದೇ ಮಹಿಳಾ ಉದ್ಯೋಗಿಗಳಿಗೆ ಈ ಸ್ವಾತಂತ್ರ್ಯವಿಲ್ಲ. ಮಹಿಳೆಯು ಯಾವ ಸಮಯಕ್ಕಾದರೂ ಕೆಲಸ ಮುಗಿಸಿಕೊಂಡು ಬರಲಿ ಎನ್ನುವ ಮನೋಭಾವ ಇನ್ನೂ ಮೂಡಿಲ್ಲ. ಸಮಯದ ವಿಷಯದಲ್ಲಿ ಪುರುಷರಿಗೆ ಯಾವುದೇ ಅಡೆತಡೆ ಇಲ್ಲ. ಯಾವ ಸಮಯದಲ್ಲಿ ಆತ ಮನೆಗೆ ಬಂದರೂ ಅದಕ್ಕೆ ವ್ಯವಸ್ಥೆಯ ಮಾನ್ಯತೆ ದೊರೆಯುತ್ತದೆ. ವಿದ್ಯುನ್ಮಾನ ಕ್ಷೇತ್ರದಲ್ಲಿ ಪುರುಷರು ಹೆಚ್ಚು ಸಮಯವನ್ನು ಕೆಲಸದಲ್ಲಿ ತೊಡಗಿಸಿಕೊಂಡಷ್ಟು ಅವರಿಗೆ ಪ್ರಶಂಸೆ ಸಿಗುತ್ತದೆ. ಇದು ಮಹಿಳಾ ಉದ್ಯೋಗಿಗಳಿಗೆ ಸಿಗುವುದಿಲ್ಲ. ಮಹಿಳೆ ಎಷ್ಟೋ ಸಮಯ ಕೆಲಸ ಮಾಡಿದರೂ, ಅವರಿಗೆ ಮಾನ್ಯತೆ ನೀಡುವುದಿಲ್ಲ. ನ್ಯಾಯಯುತವಾಗಿ ದೊರೆಯಬೇಕಾದ ಸೌಲಭ್ಯ ಕೂಡ ಸಿಗುವುದಿಲ್ಲ. ಮಹಿಳೆಯರು ನಡೆಸಿಕೊಡುವ ಕಾರ್ಯಕ್ರಮ ಜನಪ್ರಿಯತೆಯಲ್ಲಿ ಹೆಚ್ಚಿದ್ದರೂ, ಕಾರ್ಯಕ್ರಮಕ್ಕೆ ರೇಟಿಂಗ್ ಬಂದರೂ, ಅವಳನ್ನು ಗುರುತಿಸುವುದು ಕಡಿಮೆ. ಕೆಲಸ

ಮಾಡಬೇಕಾಗಿದ್ದು ಅವರ ಕರ್ತವ್ಯ. ಅದನ್ನು ಮಾಡಿದ್ದಾರೆ ಅಷ್ಟೇ ಎಂದು ಹೇಳಿಕೊಂಡು ಸುಮ್ಮನಾಗಿಬಿಡುತ್ತದೆ. ವಿದ್ಯುನ್ಮಾನ ಮಾಧ್ಯಮದ ಯಾವುದೇ ವಿಭಾಗ ಆಗಿರಲಿ, ಪುರುಷರಷ್ಟೇ ಸರಿಸಮಾನವಾಗಿ ಮಹಿಳೆ ದುಡಿದರೂ ಅವಳಿಗೆ ಸಿಗುವ ಪ್ರತಿಫಲ ನಕಾರಾತ್ಮಕ ಮಾತುಗಳು. ವರದಿಗಾರಿಕೆ ಮಾಡುವುದು ಅಂದರೆ, ಅದು ಸುಲಭದ ಮಾತಲ್ಲ. ನಾನಾ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ. ಹಲವು ಸವಾಲುಗಳನ್ನು ಸ್ವೀಕರಿಸಬೇಕಾಗುತ್ತದೆ. ಅವೆಲ್ಲವನ್ನೂ ನಿಭಾಯಿಸಿಕೊಂಡು ವರದಿಗಳನ್ನು ತಂದರೂ, ಅವರಿಗೆ ಸಿಕ್ಕಿದ್ದು ಗಾಸಿಪ್ ಗೌರವ. ಅವಳ ಬಗ್ಗೆ ಇಲ್ಲಸಲ್ಲದ ಗಾಸಿಪ್ ಹಬ್ಬಿಸುವ ಮೂಲಕ ಅವರ ಚಾರಿತ್ರ್ಯವಧೆ ಮಾಡುವುದು. ಇದು ಪುರುಷ ರಾಜಕಾರಣವಲ್ಲದೇ ಮತ್ತೇನೂ ಅಲ್ಲ. ವೈಯಕ್ತಿಕ ಚಾರಿತ್ರ್ಯವಧೆ ಮಾಡುವುದರಿಂದ ಮಹಿಳೆಯರು ಮಾನಸಿಕವಾಗಿ ತುಂಬಾ ಕುಗ್ಗಿಬಿಡುತ್ತಾರೆ. ಅದರಲ್ಲೂ ಮಹಿಳೆಯರು ಯಾವುದೇ ಒಬ್ಬ ಪುರುಷನೊಂದಿಗೆ ಸಲುಗೆಯಿಂದ ಮಾತನಾಡಿದರೆ ಸಾಕು ಈ ಸಮಾಜ ಅದಕ್ಕೊಂದು ಕಥೆ ಕಟ್ಟಲಾಗುತ್ತದೆ. ಈ ತರಹದ ನಡವಳಿಕೆಗಳಿಗೆ ಲೈಂಗಿಕತೆಯ ಲೇಪನ ಮಾಡಿ ಮಹಿಳೆಯರ ಮಾನ ಹರಾಜು ಮಾಡುತ್ತದೆ.

ರಕ್ಷಿತಾ ಅವರು ಹೇಳುವಂತೆ "ಈ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವ ಹುಡುಗರು ಎಂತಹ ಮನಸ್ಥಿತಿಯವರು ಇರುತ್ತಾರೆ ಅಂದರೆ, ವೃತ್ತಿಯ ವಿಚಾರವಾಗಿ ಹುಡುಗರ ಜೊತೆ ಕ್ಲೋಸ್ ಆಗಿ ಮಾತಾಡಿದರೂ ತಪ್ಪು. ಅವರು ಸೀದಾ ನಮ್ಮ ನಡೆತೆಯನ್ನೇ ಪ್ರಶ್ನೆ ಮಾಡುತ್ತಾರೆ. ಅವಳಿಗೂ ಅವನಿಗೂ ಏನೋ ಇದೆ ಎನ್ನುವಲ್ಲಿಂದ ಮಾತು ಶುರುವಾದರೆ, ನಮ್ ವಿಷಯ ಬೆಡ್ ರೂಮ್‌ತನಕ ಬರುತ್ತದೆ. ಹಾಸಿಗೆವರೆಗೂ ಹೋಗುತ್ತದೆ. ನಾವಿಬ್ಬರೂ ಜೊತೆಯಾಗಿ ಮಲಗಿದ್ದೇವೆ ಅನ್ನುವಲ್ಲಿಗೆ ಮುಗಿಯುತ್ತದೆ. ಇಂತಹ ಮಾತನ್ನು ನಾನೂ ಕೇಳಿಸಿಕೊಂಡಿದ್ದೇನೆ. ಒಬ್ಬರಿಂದ ಒಬ್ಬರಿಗೆ ಈ ಗಾಸಿಪ್ ಅನ್ನು ಅವರು ಹಬ್ಬಿಸುತ್ತಲೇ ಇರುತ್ತಾರೆ. ಕೇಳಿಸಿಕೊಂಡವರು ಅದನ್ನು ತಂದು ನಮಗೇ ಹೇಳ್ತಾರೆ. ನಮಗೆ ನೋವು ಆಗದೇ ಇರತ್ತಾ?' ಅಂತಾರೆ.

ಇಂತಹ ಮಾತುಗಳ ಮೂಲಕ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರ ಚಾರಿತ್ರ್ಯವನ್ನು ಹರಣ ಮಾಡುವಂತಹ ಕೆಲಸ ಆಗುತ್ತಿರುವುದು ಕಂಡುಬರುತ್ತದೆ. ಮಹಿಳೆಯರನ್ನು ಮನೆಯಿಂದ ಹೊರಗೆ ಬಿಡದ ಈ ಸಮಾಜದ ವ್ಯವಸ್ಥೆಯು ಪರ ಪುರುಷನೊಂದಿಗೆ ಮಹಿಳೆಯರು ಮಾತನಾಡುವುದನ್ನೂ ಇನ್ನೂ ಸಹಿಸಿಕೊಳ್ಳುತ್ತಿಲ್ಲ. ಅದು ಸ್ನೇಹಿತರಾಗಿದ್ದರೂ ಸರಿ, ತಮ್ಮೊಂದಿಗೆ ಕೆಲಸ ಮಾಡುವ ಸಹೋದ್ಯೋಗಿಯಾಗಿದ್ದರೂ ಸರಿ. ಪರ ಪುರುಷನೊಂದಿಗೆ ಮಾತನಾಡುವುದನ್ನೂ ಅದು ನಿರಾಕರಿಸುತ್ತದೆ. ಹಾಗೆ ಮಾತನಾಡಿದರೆ ಅನೈತಿಕ ಪಟ್ಟ ಕಟ್ಟುವಂತಹ ಕೆಲಸ ಆಗುತ್ತದೆ. ನಿಜಕ್ಕೂ ಇದು ಆತಂಕಕ್ಕಾರಿ ಬೆಳವಣಿಗೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಗಾಸಿಪ್ ಕೂಡ ಒಂದು ಸುದ್ದಿಯ ಭಾಗ ಎಂದು ಕರೆಯುವ ಅಪಾಯಕಾರಿ ಕೆಲಸ ಕೂಡ ಆಗುತ್ತಿದೆ. ಅದು ತನ್ನ ಮಹಿಳಾ ಉದ್ಯೋಗಿಗಳನ್ನೂ ಬಲಿ ನೀಡುತ್ತಿದೆ. ಈ ರೀತಿಯ ಮಾತುಗಳಿಗೆ ಬೇಸತ್ತು ಎಷ್ಟೋ ಮಹಿಳಾ ಉದ್ಯೋಗಿಗಳು

ಕೆಲಸವನ್ನೇ ತೊರೆದು ಹೋಗಿದ್ದಾರೆ. ಮಾನಸಿಕವಾಗಿ ಕುಗ್ಗಿದ್ದಾರೆ. ಇದನ್ನು ಎದುರಿಸಿಯೂ ಜಯಸಿದವರು ಇದ್ದಾರೆ. ಗೆದ್ದವರ ಸಂಖ್ಯೆ ತೀರಾ ಕಡಿಮೆಯಿದೆ. ಮಾನಸಿಕವಾಗಿ ಕುಗ್ಗಿ ಹೋಗಿ ಕೆಲಸವನ್ನು ಬಿಟ್ಟವರ ಸಂಖ್ಯೆ ಅಧಿಕವಾಗಿದೆ.

ಆ. ಸಹೋದ್ಯೋಗಿಗಳಿಂದ ಮತ್ತು ಮೇಲಾಧಿಕಾರಿಗಳಿಂದ ವೃತ್ತಿಯ ಜೀವನದ ಏಳಿಗೆಗೆ ತಡೆಯೊಡ್ಡುವ ಕಿರುಕುಳ : ವೃತ್ತಿ ಕ್ಷೇತ್ರದಲ್ಲಿ ಮಹಿಳೆಯರು ತಮ್ಮ ಮೇಲಾಧಿಕಾರಿಗಳಿಂದ ಮತ್ತು ಸಹೋದ್ಯೋಗಿಗಳಿಂದ ವೃತ್ತಿಯ ಜೀವನದ ಏಳಿಗೆಗೆ ತಡೆಯೊಡ್ಡುವಂತಹ ಕಿರುಕುಳಗಳನ್ನು ಅನುಭವಿಸುತ್ತಿರುವುದು ಕಂಡುಬರುತ್ತದೆ. ಖಾಸಗಿ ಮತ್ತು ಸರಕಾರಿ ಈ ಎರಡೂ ವಲಯಗಳ ಸಂಸ್ಥೆಗಳಲ್ಲೂ ಇದನ್ನು ಕಾಣಬಹುದು. ಖಾಸಗಿ ಸಂಸ್ಥೆಗಳಿಗೆ ಹೋಲಿಸಿದರೆ, ಸರಕಾರಿ ಸಂಸ್ಥೆಗಳಲ್ಲಿ ಈ ಬಗೆಯ ಕಿರುಕುಳಗಳನ್ನು ಅನುಭವಿಸುವವರ ಸಂಖ್ಯೆ ಕಡಿಮೆ ಕಾಣಬಹುದು.

ಈ ರೀತಿಯ ಕಿರುಕುಳ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯನ್ನೂ ಬಿಟ್ಟಿಲ್ಲ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವುದೆಂದರೆ ಅದೊಂದು ಸವಾಲು. ಪ್ರತಿ ಕ್ಷಣವೂ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ಅದು ಸಹೋದ್ಯೋಗಿಗಳ ಜೊತೆಯೂ ಆಗಿರಬಹುದು ಮತ್ತು ತಮ್ಮ ಪ್ರತಿಸ್ಪರ್ಧಿಯ ಚಾನೆಲ್‌ನೊಂದಿಗೂ ಇರಬಹುದು. ಕ್ಷಣ ಕ್ಷಣಕ್ಕೂ ನಾವು ನಮ್ಮ ಸಾಮರ್ಥ್ಯವನ್ನು ಪಣಕ್ಕಿಡುವ ಸಂದರ್ಭ ಬರುತ್ತದೆ. ಸದಾ ಮುನ್ನುಗ್ಗಿ ಓಡುತ್ತಲೇ ಇರಬೇಕಾಗುತ್ತದೆ. ಕೆಲಸದ ಅಸ್ತಿತ್ವಕ್ಕಾಗಿ ಮತ್ತು ಅಸ್ಮಿತೆಗಾಗಿ ಅದು ಯಾರೇ ಆಗಿದ್ದರೂ ಅವರನ್ನು ದಾಟಿಕೊಳ್ಳುವ ಮತ್ತು ಪೈಪೋಟಿಗೆ ನಿಲ್ಲುವ ಜರೂರತ್ತು ಎದುರಾಗುತ್ತದೆ. ಈ ಸಮಯದಲ್ಲಿ ಪುರುಷ ಉದ್ಯೋಗಿಗಳು ನಾನಾ ಕಾರಣಗಳನ್ನು ಮುಂದಿಟ್ಟುಕೊಂಡು ಮತ್ತು ಯಾವುದಾದರೂ ಒಂದು ಕಾರಣ ಹುಡುಕಿ, ಮಹಿಳಾ ಉದ್ಯೋಗಿಗಳ ವೇಗಕ್ಕೆ ಬ್ರೇಕ್ ಹಾಕುವ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ತಮಗಿಂತ ದೊಡ್ಡ ಹುದ್ದೆ ಏರುವುದನ್ನು ಪುರುಷರು ಸಹಿಸುವುದಿಲ್ಲ. ಈ ಕ್ಷೇತ್ರದಲ್ಲಿ ಬೆಳೆಯುವುದಕ್ಕೂ ಅವರು ಬಿಡುವುದಿಲ್ಲ. ನಿರಂತರ ಕಿರುಕುಳ ನೀಡುವ ಅನೇಕ ಘಟನೆಗಳು ನಡೆದಿವೆ. ಆದರೂ, ಅವುಗಳನ್ನು ಎದುರಿಸಿಕೊಂಡು, ತಮ್ಮ ಕೆಲಸ ನಿಭಾಯಿಸಿಕೊಂಡು ಹೋಗುವಂತಹ ಮನಃಸ್ಥಿತಿ ಇರುವವರು ಮಾತ್ರ ಈ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲುತ್ತಾರೆ. ಆದರೂ, ಆಯಾ ವಿಭಾಗಗಳ ಮುಖ್ಯಸ್ಥರು ತಮ್ಮ ಕೆಳಗಿನ ಮಹಿಳಾ ಉದ್ಯೋಗಿಗಳಿಗೆ ಕೆಲವು ಆಮಿಷಗಳನ್ನು ಒಡ್ಡುವುದರ ಮೂಲಕ ಹಿಂಸೆ ನೀಡುವುದನ್ನು ನಿಲ್ಲಿಸಿಲ್ಲ. ವಿದ್ಯುನ್ಮಾನ ಮಾಧ್ಯಮದ ಕ್ಷೇತ್ರದಲ್ಲಿ ಈ ಬಗೆಯ ಹಿಂಸೆಗಳನ್ನು ಅನುಭವಿಸುವಂತಹ ಮಹಿಳೆಯರೂ ಕಂಡುಬರುತ್ತಾರೆ.

ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಸ್ನೇಹಾ ಅವರು ಹೇಳುವಂತೆ "ಆಗ ತಾನೆ ಶುರುವಾಗಿದ್ದ ಹೊಸ ವಾಹಿನಿಯಲ್ಲಿ ನಾನು ಕೆಲಸಕ್ಕೆ ಸೇರಿಕೊಂಡಿದ್ದೆ. ಹೊಸದಾಗಿ ಶುರುವಾಗುತ್ತಿದ್ದ ಚಾನೆಲ್ ಅದಾಗಿದ್ದರಿಂದ ನಮಗೆಲ್ಲ ವೃತ್ತಿಗೆ ಬೇಕಾಗಿದ್ದ ಅಗತ್ಯ ತರಬೇತಿ

ಕೊಟ್ಟು ಕೆಲಸಕ್ಕೆ ನೇಮಿಸಿಕೊಂಡಿತ್ತು. ತರಬೇತಿಯ ಸಮಯದಲ್ಲಿ ನನ್ನ ಕೆಲಸ ಮೆಚ್ಚಿದ್ದ ನನ್ನ ವಿಭಾಗದ ಮುಖ್ಯಸ್ಥರು ನಾನು ಏನೇ ಕೆಲಸ ಮಾಡಿದರೂ ಬೆನ್ನುತಟ್ಟುತ್ತಿದ್ದರು. ನನಗೂ ಖುಷಿಯಾಗೋದು. ಹೊಸ ಚಾನೆಲ್ ಅದಾಗಿದ್ದರಿಂದ ತಡರಾತ್ರಿ ಕೆಲಸ ಮಾಡುವುದು ಅನಿವಾರ್ಯವಾಗಿತ್ತು. ತಡರಾತ್ರಿಯಾದರೂ ಹುರುಪಿನಿಂದಲೇ ಕೆಲಸ ಮಾಡುತ್ತಿದ್ದೆ. ಈ ಖುಷಿ ತುಂಬಾ ದಿನ ಉಳಿಯಲಿಲ್ಲ. ನನ್ನ ಸಹೋದ್ಯೋಗಿಯೊಬ್ಬರ ಹತ್ತಿರ ನನ್ನ ಬದುಕಿನ ಖಾಸಗಿ ವಿಚಾರಗಳನ್ನು ಹೇಳಿದ್ದೆ. ಕೆಲಸಕ್ಕೆ ಬರುವ ಮುಂದೆ ನನ್ನ ಮದುವೆ ಆಗಿರುವ ಮತ್ತು ನನ್ನ ಗಂಡನಾದವನು ನನ್ನಿಂದ ದೂರವಾಗಿದ್ದ ನೋವುಗಳನ್ನು ಹಂಚಿಕೊಂಡಿದ್ದೆ. ನನ್ನ ಮೇಲಿನ ಕನಿಕರಕ್ಕೋ ಅಥವಾ ನನಗೆ ಯಾವ ರೀತಿಯಲ್ಲಾದರೂ ಸಹಾಯ ಆಗಬಹುದು ಅನ್ನುವ ಆಸೆಗೋ ಈ ವಿಷಯವನ್ನು ನನ್ನ ವಿಭಾಗದ ಮುಖ್ಯಸ್ಥರಿಗೆ ಆಕೆ ಹೇಳಿದ್ದಳು. ಅಲ್ಲಿಂದ ಅವನು ನನ್ನನ್ನು ನೋಡುವ ರೀತಿಯನ್ನೇ ಬದಲಾಯಿಸಿಕೊಂಡು ಬಿಟ್ಟ. ನನ್ನೊಂದಿಗೆ ಮಾತನಾಡುವ ರೀತಿ, ನಡೆವಳಿಕೆ ಎಲ್ಲವೂ ಬದಲಾಯಿತು. ಅನಿವಾರ್ಯ ಇಲ್ಲದೇ ಇದ್ದರೂ ತಡರಾತ್ರಿ ಉಳಿಸಿಕೊಳ್ಳುತ್ತಿದ್ದ. ತಡವಾಗುವಂತೆಯೇ ಕೆಲಸ ಕೊಡುತ್ತಿದ್ದ. ನನ್ನ ರೂಮ್‌ಗೆ ತಾನೇ ಡ್ರಾಪ್ ಮಾಡ್ತೀನಿ ಅನ್ನುತ್ತಿದ್ದ. ಒಂದೆರಡು ಬಾರಿ ಒತ್ತಾಯ ಮಾಡಿ ಡ್ರಾಪ್ ಮಾಡಲು ಬಂದ. ದಾರಿಯುದ್ದಕ್ಕೂ ನನ್ನ ಕೆಲಸದ ಬಗ್ಗೆ ಹೊಗಳುತ್ತಿದ್ದ. ತನ್ನ ಐಡ್ಯಾಗಳನ್ನು ನನ್ನವು ಅಂತ ಸಹೋದ್ಯೋಗಿಗಳ ಮುಂದೆ ಹೇಳುತ್ತಿದ್ದ. ಈ ಸಲ ಒಳ್ಳೆಯ ಪ್ರಮೋಷನ್ ಮತ್ತು ಸಂಬಳ ಜಾಸ್ತಿ ಮಾಡಿಸ್ತೇನೆ ಅಂತ ಮಾತಾಡುತ್ತಿದ್ದ. ನಿಮ್ಮ ಏನೇ ಸಮಸ್ಯೆಯಿದ್ದರೂ ನನಗೆ ಹೇಳಿ, ನಾನು ಸರಿ ಮಾಡುತ್ತೇನೆ ಅಂತ ಕನ್ಸರ್ನ್ ತೋರಿಸುತ್ತಿದ್ದ. ಮೊದ ಮೊದಲು ಅವನ ಒಳ್ಳೆತನ, ಅವನ ಮಾತು ನನ್ನಲ್ಲೂ ಹುಮ್ಮಸ್ಸು ತಂದವು. ಅವನ ಅಸಲಿ ಮುಖ ಗೊತ್ತಾಗಿದ್ದೇ ತಡರಾತ್ರಿಯಲ್ಲಿ ಅವನು ನನಗೆ ಫೋನ್ ಮಾಡಿದಾಗ. ನನ್ನ ಖಾಸಗಿ ವಿಚಾರಗಳನ್ನು ಎತ್ತಿದ. ಗಂಡನ ಜತೆ ಇಲ್ಲವಂತೆ ಹೌದೆ? ಅಂದ. ನನ್ನ ಬಗ್ಗೆ ಎಲ್ಲವನ್ನೂ ತಿಳಿದುಕೊಂಡಿರುವುದಾಗಿ ಹೇಳಿದ. ನಂತರದ ದಿನಗಳಲ್ಲಿ ಹೊತ್ತಲ್ಲದ ಹೊತ್ತಲ್ಲಿ ಮಸೇಜ್ ಮಾಡೋಕೆ ಶುರು ಮಾಡಿದ. ಸುಖಾಸುಮ್ಮನೆ ಫೋನ್ ಮಾಡುತ್ತಿದ್ದ. ನಾನೂ ಕೂಡ ಅವನ ಮಸೇಜ್‌ಗೆ ಪ್ರತಿಕ್ರಿಯೆ ನೀಡಲು ಹೋಗಲಿಲ್ಲ. ಕಾಲ್ ಬಂದರೂ ಕರೆ ಸ್ವೀಕರಿಸುತ್ತಿರಲಿಲ್ಲ. ಅವನ ಉದ್ದೇಶ ನನಗೆ ಅರ್ಥವಾಗಿದ್ದರಿಂದ ಅವೈಡ್ ಮಾಡುವುದಕ್ಕೆ ಶುರು ಮಾಡಿದೆ. ಆಫೀಸ್‌ಗೆ ಬಂದಾಗ ಅವನ ಜೊತೆ ಸರಿಯಾಗಿ ಮಾತು ಕೂಡ ಆಡ್ತಾ ಇರಲಿಲ್ಲ. ಹೀಗಾಗಿ ಅವನಿಗೆ ನನ್ನ ಮೇಲೆ ಕೋಪ ಬಂತು. ನಾನು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ಕಾರಣ ಕೊಟ್ಟು ಆ ವಿಭಾಗದಿಂದಲೇ ನನ್ನನ್ನು ಕಳುಹಿಸಿದ.

ನಿಜ ಏನು ಅಂತ ನಾನು ಮಾನವ ಸಂಪನ್ಮೂಲ ವಿಭಾಗಕ್ಕೆ ತಿಳಿಸೋಣ ಅಂತ ನಿರ್ಧಾರ ಮಾಡಿದೆ. ಕಂಪ್ಲೇಂಟ್ ಮಾಡಿದರೆ ಏನಾಗತ್ತೆ ಅಂದರೆ, ಆ ಸೇಡು ಇಟ್ಟುಕೊಂಡು ಬೇರೆ ಕಡೆನೂ ಕೆಲಸ ಸಿಗದೆ ಇರುವ ಹಾಗೆ ಮಾಡ್ತಾರೆ. ಈ ಹಿಂಸೆಯನ್ನು ಈಗಾಗಲೇ ನನ್ನ ಸಹೋದ್ಯೋಗಿಯೊಬ್ಬರು ಅನುಭವಿಸ್ತಾ ಇದ್ದಾರೆ. ಹಾಗಾಗಿ ಹೆದರಿಕೊಂಡು

ಸುಮ್ಮನಿರಬೇಕಾಯಿತು. ಸ್ವಲ್ಪ ದಿನಗಳ ನಂತರ ನಾನೇ ಆ ಚಾನೆಲ್ ಬಿಟ್ಟು ಬೇರೆ ವಾಹಿನಿಗೆ ಸೇರಿಕೊಂಡೆ' ಎಂದರು.

ಮತ್ತೊಂದು ಪ್ರಕರಣದಲ್ಲಿ ಸೌಮ್ಯ ಅವರು ಹೇಳುವಂತೆ "ನಾನು ರಾಜಕೀಯ ವರದಿಗಾರಿಕೆಗೆ ಹೋಗುವಾಗ ನಮ್ಮೊಂದಿಗೆ ವ್ಯಾನ್ ಡ್ರೈವರ್ ಬರುತ್ತಾರೆ. ಕ್ಯಾಮೆರಾಮನ್ ಇರುತ್ತಾರೆ. ನನ್ನೊಂದಿಗೆ ಕೆಲಸ ಮಾಡುವವರು ಬಹುತೇಕವಾಗಿ ಹುಡುಗರೇ ಆಗಿರುತ್ತಾರೆ. ಕೆಲಸದ ಸ್ಥಳದಲ್ಲಿ ಎಷ್ಟೋ ಬಾರಿ ರಾಜಕಾರಣಿಗಳಿಗಾಗಿ ನಾವು ಎರಡ್ಮೂರು ಗಂಟೆ ಕಾಯಬೇಕಾದ ಪರಿಸ್ಥಿತಿ ಬರುತ್ತದೆ. ಆಗ ಸಹಜವಾಗಿ ತೀರಾ ಪರಿಚಿತವಿರುವ ಹುಡುಗರನ್ನು ಮಾತನಾಡಿಸಬೇಕಾಗುತ್ತದೆ. ಒಬ್ಬರನ್ನು ಸಲುಗೆಯಿಂದ ಮಾತಾಡಿಸಿದರೆ ಮತ್ತೊಬ್ಬರಿಗೆ ಆಗಲ್ಲ. ಅಲ್ಲೊಂದು ಅನೈತಿಕ ಸಂಬಂಧದ ಕತೆ ಟಿಸಿಲೊಡೆಯುತ್ತದೆ. ನೋವಿನ ಸಂಗತಿ ಅಂದರೆ, ಅಂತಹ ಸಂಬಂಧ ಕಟ್ಟುವವರು ಬೇರೆ ಯಾರೂ ಅಲ್ಲ, ನನ್ನೊಂದಿಗೆ ದಿನವೂ ಸುದ್ದಿಗಾಗಿ ಕೆಲಸ ಮಾಡುವ ಮತ್ತೊಂದು ಚಾನೆಲ್‌ನ ಹುಡುಗರೇ ಆಗಿರುತ್ತಾರೆ. ಅವರು ಆ ರೀತಿ ಮಾತನಾಡುವುದಕ್ಕೂ ಕಾರಣವಿದೆ. ನಾನು ಎಕ್ಸ್‌ಕ್ಲೂಸಿವ್ ಸುದ್ದಿ ಹುಡುಕುತ್ತೇನೆ. ಹೊಸ ಹೊಸ ಸುದ್ದಿಗಳನ್ನು ತರುತ್ತೇನೆ ಅನ್ನುವ ಕೋಪ ಅವರದ್ದು. ಹಾಗಾಗಿ ಯಾರೊಂದಿಗೆ ಮಾತನಾಡಿದರೂ, ಅಲ್ಲೊಂದು ಕೊಂಕು ತಗೆಯುತ್ತಾರೆ. ನಾನು ಟೆನ್‌ಷನ್‌ನಲ್ಲಿ ಕೆಲಸ ಮಾಡಿದರೆ, ಕೆಲಸಕ್ಕೆ ತೊಂದರೆ ಮಾಡಬಹುದು ಅನ್ನುವ ಉದ್ದೇಶ ಅದರ ಹಿಂದಿರುತ್ತದೆ. ಕೆಲಸದ ಸ್ಥಳದಲ್ಲಿ ವಾತಾವರಣ ಹಾಳು ಮಾಡಿದರೆ, ನನಗೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನನಗೆ ಯಾರು ಸ್ಟೋರಿ ಕೊಡುತ್ತಾರೋ ಅವರೂ ದೂರಾಗುತ್ತಾರೆ ಅನ್ನುವ ದುಷ್ಟ ಆಲೋಚನೆ ಅವರದ್ದು' ಎಂದು ಹೇಳಿದರು.

ಮೀನಾ ಎನ್ನುವ ರಿಪೋರ್ಟರ್ ಹೇಳುವಂತೆ, "ಪುರುಷರೂ ಹೋಗುವುದಕ್ಕೆ ಹೆದರುವ ಸ್ಥಳವೊಂದಕ್ಕೆ ನುಗ್ಗಿ ನಾನೊಂದು ಸ್ಟ್ರಿಂಗ್ ಆಪರೇಷನ್ ಮಾಡಿದ್ದೆ. ಅದು ದೊಡ್ಡ ಮಟ್ಟದಲ್ಲಿಯೇ ಸುದ್ದಿ ಆಯಿತು. ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ನಡೆಯುತ್ತಿದ್ದ ಅನೈತಿಕ ಚಟುವಟಿಕೆಯನ್ನು ಬಯಲಿಗೆಳೆದಿದ್ದರಿಂದ ಸರಕಾರದ ಮಟ್ಟದಲ್ಲೂ ಚರ್ಚೆಯಾಗಿತ್ತು. ಸುದ್ದಿಗೆ ಸಖತ್ ರೆಸ್ಪಾನ್ಸ್ ಬಂದಿದ್ದರಿಂದ ನನ್ನ ಸಂಸ್ಥೆಯವರು ನನ್ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆಂದು ಅಂದುಕೊಂಡಿದ್ದೆ. ನನ್ನ ನಂಬಿಕೆ ಸುಳ್ಳಾಗಿತ್ತು. ನನ್ನ ಸೀನಿಯರ್ ನನ್ನನ್ನು ತಮ್ಮ ಚೇಂಬರ್‌ಗೆ ಕರೆಯಿಸಿಕೊಂಡು ನನಗೆ ಎನ್‌ಕ್ವಯರಿ ಮಾಡಿದರು. ಈ ವಿಷಯ ನಿನಗೆ ಹೇಗೆ ಸಿಕ್ಕಿತು? ಅಂತಹ ಸ್ಥಳಕ್ಕೆ ನುಗ್ಗುವಂತಹ ಧೈರ್ಯ ನಿನಗೆ ಹೇಗೆ ಬಂತು? ನೀನೇ ಸ್ಟೋರಿಯನ್ನು ತಂದಿದ್ದೀಯಾ ಅಥವಾ ಯಾರಾದ್ರೂ ಸ್ಟ್ರಿಂಗ್ ಮಾಡಿ ನಿನಗೆ ಕೊಟ್ಟಿದ್ದಾರಾ? ಸ್ಟ್ರಿಂಗ್‌ಗೆ ಹೋಗುವ ಮುನ್ನ ನನ್ನ ಗಮನಕ್ಕೆ ನೀನು ಯಾಕೆ ತರಲಿಲ್ಲ? ಹೀಗೆ ಹಲವು ಪ್ರಶ್ನೆಗಳನ್ನು ಹಾಕಿದರು. ಅಲ್ಲದೇ, ಈ ರೀತಿಯ ಸುದ್ದಿಗಳನ್ನು ಇನ್ನು ಮುಂದೆ ನೀನು ಮಾಡಬಾರದು ಅಂತ ತಾಕೀತು ಮಾಡಿದರು. ಅವರು ಯಾಕೆ ಆ ರೀತಿ ಹೇಳಿದರೋ ಅಂತ ಅರ್ಥ ಆಗಲಿಲ್ಲ. ನನ್ನ

ಕೊನೆಯ ಸ್ಟ್ರಿಂಗ್ ಆಪರೇಷನ್ ಅದುವೇ ಆಯಿತು. ನಂತರ ನನ್ನನ್ನು ಬೇರೆ ವಿಭಾಗಕ್ಕೆ ಕಳುಹಿಸಲಾಯಿತು. ಸದ್ದು ಮಾಡಿದ್ದ ಸುದ್ದಿ ತಂದವಳಿಗೆ ಇದೆಂತಹ ಶಿಕ್ಷೆ ಅಂತ ಯೋಚನೆ ಮಾಡೋಕೆ ಶುರುವಾದೆ. ಆ ಮೇಲೆ ಸತ್ಯ ಗೊತ್ತಾಯಿತು. ನಾನು ಬಾರ್ ಒಳಗೆ ನುಗ್ಗುವುದಕ್ಕೆ ಸಾಧ್ಯವೇ ಇಲ್ಲ. ಬಾರ್ ಮಾಲೀಕರಿಗೆ ಆಗದೇ ಇರುವವರು ಚಿತ್ರೀಕರಣ ಮಾಡಿಕೊಂಡು ಬಂದು ನನಗೆ ಕೊಟ್ಟಿದ್ದಾರೆ. ಯಾರದ್ದೋ ಕೆಲಸಕ್ಕೆ ನಾನು ಕ್ರೆಡಿಟ್ ತಗೊತಿದ್ದೀನಿ ಅಂತ ಸುಳ್ಳು ಹೇಳಿದ್ದರು. ತಮ್ಮಿಂದ ಆಗದೇ ಇರುವ ಕೆಲಸವನ್ನು ನಾನು ಮಾಡಿದ್ದೀನಲ್ಲ ಎಂಬ ಕೋಪ ಅವರದ್ದು. ವಿಭಾಗದ ಮುಖ್ಯಸ್ಥರು ಏನೇ ಹೇಳಿದರೂ, ಸತ್ಯವನ್ನು ಶೋಧಿಸುವ ಆತ್ಮವನ್ನೂ ಒಂದೊಂದು ಬಾರಿ ಸುದ್ದಿ ಸಂಸ್ಥೆಗಳು ಕಳೆದುಕೊಳ್ಳುವುದರಿಂದ ನನ್ನಂಥವರು ಸಹಜವಾಗಿಯೇ ಬಲಿಯಾಗುತ್ತಾರೆ. ಅದರಲ್ಲೂ ಹುಡುಗಿಯರು ಬೇಗ ಬಲಿಯಾಗುತ್ತಾರೆ' ಅಂತಾರೆ.

ಮೇಲಿನ ಮಾತುಗಳಿಗೆ ವಾಣಿ ಅವರ ಅನುಭವವನ್ನೂ ಸೇರಿಸಿ ಹೇಳುವುದಾದರೆ, "ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಹುಡುಗಿಯರಿಗೆ ಯಾವೆಲ್ಲ ತರಹದ ಹಿಂಸೆ ಇರುತ್ತದೆ ಅಂದರೆ, ಹಗಲು ರಾತ್ರಿ ಕಾದು ಬ್ರೇಕಿಂಗ್ ಸುದ್ದಿ ತಂದಿರುತ್ತೇವೆ. ಜೀವದ ಹಂಗು ತೊರೆದು ನ್ಯೂಸ್ ಸಂಗ್ರಹಿಸಿರುತ್ತೇವೆ. ಈ ಸಮಾಜದ ಎಲ್ಲ ಅಡೆತಡೆಗಳನ್ನು ದಾಟಿಕೊಂಡು ಈ ಕ್ಷೇತ್ರಕ್ಕೆ ಕಾಲಿಟ್ಟಿರುತ್ತೇವೆ. ಈ ಯಾವುದನ್ನೂ ನನ್ನ ಪುರುಷ ಸಹೋದ್ಯೋಗಿಗಳು ಗಮನಿಸಲ್ಲ. ಮಹತ್ವದ ಸುದ್ದಿಗಳನ್ನು ತಂದಾಗ, ಯಾರಿಗೂ ಸಿಗದೇ ಇರುವಂತಹ ಸಂದರ್ಶನಗಳು ನಮಗೆ ಸಿಕ್ಕಾಗ "ಏನ್ ಬಿಡ್ರಿ ಮೇಡಮ್, ನೀವು ಒಂದ್ ಸ್ಮೈಲ್ ಕೊಟ್ರೆ ಸಾಕು ರಾಜಕಾರಣಿಗಳು, ಅವರ ಪಿಎಗಳು ನೀವು ಇರುವಲ್ಲಿಗೆ ಬಂದು ನ್ಯೂಸ್ ಕೊಡ್ತಾರ" ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನೂ ಇಂತಹ ಮಾತುಗಳನ್ನು ಅನಿಸಿಕೊಂಡಿದ್ದೇನೆ. ಎಲ್ಲರೂ ಅಂತಲ್ಲ, ಕೆಲವು ಪುರುಷ ರಿಪೋರ್ಟರ್‌ಗಳು ಹೇಗಿರುತ್ತಾರೆ ಅಂದರೆ ನಾವು ಮಾಡಬಾರದ ತಪ್ಪು ಮಾಡಿ ನ್ಯೂಸ್ ತರುತ್ತೇನೆ ಎನ್ನುವಂತೆ ಮಾತನಾಡುತ್ತಾರೆ. ಅಸಹ್ಯ ಹುಟ್ಟುವಂತೆ ಅವರ ವ್ಯಂಗ್ಯ ಇರುತ್ತದೆ. ಈ ಸಮಾಜದಲ್ಲಿ ಹುಡುಗಿಯರನ್ನು ಈಗಲೂ ದೇಹದಿಂದಲೇ ಅಳೆಯುತ್ತಾರಲ್ಲ, ಹಾಗಾಗಿ ನಾವು ಹುಡುಗಿಯರು ಅನ್ನುವ ಕಾರಣಕ್ಕಾಗಿ ಸುದ್ದಿ ಕೊಡ್ತಾರೆ ಅನ್ನುವ ಉಡಾಫೆತನ ಅವರದ್ದು. ನಿಜಕ್ಕೂ ಇದು ವಿಷಾದನೀಯ.

ಇ. ವೃತ್ತಿ ಕ್ಷೇತ್ರದಲ್ಲಿ ಧಾರ್ಮಿಕ ಹಿನ್ನೆಲೆಯ ಕಾರಣದಿಂದಾಗಿ ಎದುರಾಗುವ ಸಮಸ್ಯೆಗಳು

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಧರ್ಮದ ಹೆಸರಿನಲ್ಲೂ ಹಲವು ಸಮಸ್ಯೆಗಳು ಎದುರಾಗಿರುವುದನ್ನು ಕಾಣಬಹುದಾಗಿದೆ. ಧರ್ಮದ ಕಾರಣದಿಂದಾಗಿಯೇ ಆ ಮಹಿಳಾ ಉದ್ಯೋಗಿಗಳು ನಾನಾ ರೀತಿಯ ಕಿರುಕುಳಗಳನ್ನು ಅನುಭವಿಸುತ್ತಿರುವುದು ಕಂಡು ಬರುತ್ತದೆ. ಸದ್ಯ ಕರ್ನಾಟಕದಲ್ಲಿರುವ ವಿದ್ಯುನ್ಮಾನ ಮಾಧ್ಯಮಗಳ ಸಂಸ್ಥೆಗಳಲ್ಲಿ ಹೆಚ್ಚಾಗಿ ಒಂದೇ ಧರ್ಮಕ್ಕೆ ಸೇರಿದ ಮಹಿಳಾ ಉದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಹಾಗಂತ ಅದೇ ಧರ್ಮದ ಉದ್ಯೋಗಿಗಳಿಗೆ ಮಾತ್ರ ಆ ಸಂಸ್ಥೆಗಳು ಕೆಲಸಕ್ಕೆ ತೆಗೆದುಕೊಂಡಿವೆ ಎಂದು ಹೇಳಿದರೂ

ತಪ್ಪಾದೀತು. ಎಲ್ಲ ಧರ್ಮಗಳಿಗೆ ಸೇರಿದವರಿಗೂ ಇಲ್ಲಿ ಕೆಲಸ ನೀಡಿದ್ದಾರೆ. ಆದರೆ, ಧರ್ಮ ಮತ್ತು ಧರ್ಮರಾಜಕಾರಣದಿಂದಾಗಿ ಕೆಲವು ಜಾತಿ ಧರ್ಮಗಳ ಮಹಿಳೆಯರು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಬಂದರೂ, ಅವರು ನೆಮ್ಮದಿಯಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ.

ಮುಸ್ಲಿಂ ಸಮುದಾಯಕ್ಕೆ ಸೇರಿದ ಪತ್ರಕರ್ತೆಯೊಬ್ಬರು ಈ ಕುರಿತು ಹೇಳುವಂತೆ, "ನಾನು ಮುಸ್ಲಿಂ ಸಮುದಾಯಕ್ಕೆ ಸೇರಿದ ಹುಡುಗಿ. ಈ ಕಾರಣಕ್ಕಾಗಿ ವಿದ್ಯುನ್ಮಾನ ಕ್ಷೇತ್ರಕ್ಕೆ ಕೆಲಸ ಹುಡುಕಿಕೊಂಡು ಬರುವಾಗ ಮತ್ತು ಕೆಲಸ ಸಿಕ್ಕ ನಂತರ ಸಾಕಷ್ಟು ಸಂಕಟಗಳನ್ನು ಅನುಭವಿಸಿದ್ದೇನೆ. ಟಿವಿ ಮಾಧ್ಯಮದಲ್ಲಿ ಕೆಲಸ ಮಾಡಲು ಹುಡುಗಿಯರಿಗೆ ಸೌಂದರ್ಯ, ಬುದ್ಧಿವಂತಿಕೆ ಹೀಗೆ ಏನೆಲ್ಲ ಮಾನದಂಡ ಇರಬೇಕು ಎಂದು ಈ ಕ್ಷೇತ್ರ ಬಯಸುತ್ತದೆಯೋ ಆ ಎಲ್ಲ ಅರ್ಹತೆಗಳೂ ನನ್ನಲ್ಲೂ ಇದ್ದವು. ಆದರೆ, ನಾನು ಮುಸ್ಲಿಂ ಅನ್ನುವ ಕಾರಣಕ್ಕಾಗಿ ಕೆಲಸ ಗಿಟ್ಟಿಸಿಕೊಳ್ಳಲು ಹರಸಾಹಸ ಪಡಬೇಕಾಯಿತು. ಕೆಲಸ ಸಿಕ್ಕಾದ ಮೇಲೆ ಅದನ್ನು ಉಳಿಸಿಕೊಳ್ಳಲೂ ದೊಡ್ಡ ಹೋರಾಟವನ್ನೇ ಮಾಡಬೇಕಾಯಿತು. ಈ ಕ್ಷೇತ್ರದಲ್ಲಿ ನನ್ನನ್ನೂ ಒಳಗೊಂಡಂತೆ ಆರೇಳು ಮುಸ್ಲಿಂ ಹುಡುಗಿಯರು ಮಾತ್ರ ಸದ್ಯ ಕೆಲಸ ಮಾಡುತ್ತಿದ್ದೆವು. ಅದರಲ್ಲೂ ಇಬ್ಬರು ಕೆಲಸ ಬಿಟ್ಟಿದ್ದಾರೆ. ಒಬ್ಬರಿಗೆ ಮದುವೆ ಆಯಿತು. ಗಂಡನ ಮನೆಯವರು ಮತ್ತೆ ಕೆಲಸಕ್ಕೆ ಕಳುಹಿಸಲಿಲ್ಲ. ಮತ್ತೊಬ್ಬರಿಗೆ ಎದುರಾಗುವ ಅವಮಾನಗಳನ್ನು ಸಹಿಸಿಕೊಂಡು ಇರುವುದಕ್ಕೆ ಆಗಲಿಲ್ಲ. ಹಾಗಾಗಿ ಅವರು ಬೇರೆ ಕ್ಷೇತ್ರವನ್ನು ಹುಡುಕಿಕೊಂಡು ಹೋದರು. ಈ ವೃತ್ತಿಯಲ್ಲಿ ಏನಾಗ್ತಿದೆ ಅಂದರೆ, ವೃತ್ತಿಯ ಜೊತೆಗೆ ಧರ್ಮವನ್ನೂ ಬೆರೆಸುತ್ತಿದ್ದಾರೆ. ಯಾವುದೋ ಸಂಘಟನೆಗೆ ನಮ್ಮನ್ನು ಹೋಲಿಸಿ ಅನುಮಾನದಿಂದ ನೋಡುತ್ತಾರೆ. ನನ್ನ ಧರ್ಮದ ಆಚರಣೆಯ ವಿರುದ್ಧ ಎನ್ನುವಂತಹ ಕೆಲಸ ಕೊಡುತ್ತಾರೆ. ಇಂತಹ ಅನೇಕ ಘಟನೆಗಳು ನನ್ನ ವೃತ್ತಿ ಬದುಕಿನಲ್ಲಿಯೇ ನಡೆದಿವೆ. ನಾನು ಖಾಸಗಿ ವಾಹಿನಿಯೊಂದರಲ್ಲಿ ವಾರ್ತಾ ವಾಚಕಿಯಾಗಿ ಕೆಲಸ ಮಾಡುತ್ತಿದ್ದೆ. ನ್ಯೂಸ್ ಓದುವುದರ ಜೊತೆಗೆ ಜ್ಯೋತಿಷ್ಯ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಾನು ಕಾಣಿಸಿಕೊಳ್ಳುವುದು ಅಪಾಯ ಅಂತ ನನಗೆ ಗೊತ್ತಿತ್ತು. ಟಿವಿಯಲ್ಲಿ ಕಾಣಿಸಿಕೊಳ್ಳಲು ಬಿಡದ ನನ್ನ ಸಮುದಾಯದ ಕೆಲ ಮುಖಂಡರು, ಜ್ಯೋತಿಷ್ಯದಂತಹ ಕಾರ್ಯಕ್ರಮಗಳನ್ನು ನಿರೂಪಿಸಲು ಬಿಡುತ್ತಾರಾ ಅನ್ನುವ ಆತಂಕ ಕೂಡ ನನಗಿತ್ತು. ಆದರೆ, ವಾಹಿನಿಯಲ್ಲಿ ನಾನೊಬ್ಬ ಆ್ಯಂಕರ್. ಕಾರ್ಯಕ್ರಮ ನಡೆಸಿಕೊಡುವುದು ನನ್ನ ಧರ್ಮ. ನನ್ನ ವೃತ್ತಿಗೆ ಮೋಸ ಮಾಡಬಾರದು ಅಂತ ನಾನು ಒಪ್ಪಿಕೊಂಡಿದ್ದೆ. ನಾನೊಬ್ಬ ಮುಸ್ಲಿಂ ಧರ್ಮಕ್ಕೆ ಸೇರಿದ್ದ ಹುಡುಗಿಯಾಗಿದ್ದರೂ ಕೆಲ ಇತಿಮಿತಿಗಳ ನಡುವೆ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದೆ. ಕೆಲವು ದಿನಗಳು ಕಳೆದವು. ಒಂದು ದಿನ ಗುರೂಜಿ "ಮೇಡಂ, ನೀವು ಇನ್ಮುಂದೆ ಈ ಕಾರ್ಯಕ್ರಮ ಮಾಡೋದು ಬೇಡ ಅಂದರು. ಯಾಕೆ ಅಂತ ಕೇಳಿದೆ. ನೀವು ಮುಸ್ಲಿಂ ಆಗಿರುವುದರಿಂದ ಹಣೆಯ ಮೇಲೆ ಬಿಂದಿ ಇಡುವುದಿಲ್ಲ. ಕುಂಕುಮ ಅನ್ನುವುದು

ಪವಿತ್ರ. ಅದಕ್ಕೊಂದು ದೊಡ್ಡ ಚರಿತ್ರೆಯೇ ಇದೆ. ನಮ್ಮ ಸಂಸ್ಕೃತಿಯ ಪ್ರತೀಕ ಕೂಡ. ನೀವು ಬಿಂದಿಯನ್ನು ಇಡದೇ ಕಾರ್ಯಕ್ರಮದಲ್ಲಿ ಕೂರುವುದು ನನಗೆ ಇಷ್ಟವಿಲ್ಲ. ಅಲ್ಲದೇ, ಕೈ ತುಂಬಾ ಬಳೆ ಹಾಕಬೇಕು. ಉದ್ದವಾದ ಮಾಂಗಲ್ಯ ಧರಿಸಬೇಕು. ಇದಾವುದನ್ನೂ ನೀವು ಹಾಕಲ್ಲ. ನಮ್ಮ ಸಂಸ್ಕೃತಿ ಹೀಗೇ ಇರಬೇಕು ಅಂತ ಹೇಳುವ ನನ್ನ ಕಾರ್ಯಕ್ರಮದಲ್ಲಿಯೇ ನೀವು ಹಾಗೆ ಕಾಣದಿದ್ದರೆ ನೋಡುಗರು ಏನು ಅಂದುಕೊಳ್ಳಲ್ಲ? ನನ್ನ ಕಾರ್ಯಕ್ರಮವನ್ನೇ ಅವರು ನೋಡುವುದನ್ನು ಬಿಡುತ್ತಾರೆ. ಹಾಗಾಗಿ ನಾನು ಬೇರೆ ನಿರೂಪಕಿಯನ್ನು ಹುಡುಕಿಕೊಳ್ಳುತ್ತೇನೆ. ನೀವು ಬೇಡ ಅಂದರು. ಅದೊಂದು ಪೇಯ್ಡ್ ಕಾರ್ಯಕ್ರಮ. ಆ ಗುರೂಜಿ ಗಂಟೆಗೆ ಇಂತಿಷ್ಟು ದುಡ್ಡು ಅಂತ ನಾನು ಕೆಲಸ ಮಾಡುವ ಸಂಸ್ಥೆಗೆ ಕೊಡುತ್ತಾರೆ. ಹಾಗಾಗಿ ಸಂಸ್ಥೆಯವರು ಅವರ ಮಾತನ್ನೇ ಕೇಳುತ್ತಾರೆ ಅಂತ ನನಗೆ ಗೊತ್ತಿತ್ತು. ನಾನು ವಿರೋಧಿಸಿದರೂ, ಅದರಿಂದ ಬರುವ ಪ್ರತಿಕ್ರಿಯೆ ಏನು ಎಂದು ನಾನು ಆಗಲೇ ಅಂದಾಜು ಮಾಡಿದ್ದೆ. ಕೊನೆಗೂ ಅವರೇ ಗೆದ್ದರು. ನಾನು ಆ ಕಾರ್ಯಕ್ರಮದಿಂದ ಹೊರ ಬರಬೇಕಾಯಿತು. ಅವರು ಹೇಳುವಂತೆ ಕುಂಕುಮ, ಬಳೆ, ದೊಡ್ಡ ಮಾಂಗಲ್ಯದ ಸರ ಹಾಕಿಕೊಂಡು ಕಾರ್ಯಕ್ರಮ ನಡೆಸಿಕೊಟ್ಟಿದ್ದರೆ ನನ್ನ ಸಮುದಾಯದ ಕಂಗೆಣ್ಣಿಗೆ ಗುರಿಯಾಗುತ್ತಿದ್ದೆ. ಒಂದು ರೀತಿಯ ಇಕ್ಕಟ್ಟಿನ ಪರಿಸ್ಥಿತಿ ಅದು. ಹಾಗಾಗಿ ನಾನು ಆ ಕಾರ್ಯಕ್ರಮದಿಂದ ಹೊರ ನಡೆಯಬೇಕಾಯಿತು. ನಂತರ ಮತ್ತೊಬ್ಬ ನಿರೂಪಕಿ ಆ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋದರು. ಆ ಕಾರ್ಯಕ್ರಮ ನೋಡಿದಾಗೆಲ್ಲ ನನಗೆ ನೋವಿನ ಜೊತೆಗೆ ಕೋಪವೂ ಬರುತ್ತಿತ್ತು. ನಾನು ಮುಸ್ಲಿಂ ಸಮುದಾಯದ ಹೆಣ್ಣು ಮಗಳು ಅನ್ನುವ ಕಾರಣಕ್ಕಾಗಿ ಒಂದು ರೀತಿಯಲ್ಲಿ ಅವಮಾನ ಎದುರಿಸಬೇಕಾಯಿತು.

ಮತ್ತೊಂದು ಸಲ ನನಗೆ ನೋವಾಗಿದ್ದು ನನ್ನ ಭಾಷೆಯ ವಿಚಾರವಾಗಿ. ನನ್ನದೇ ರೆಗ್ಯುಲರ್ ಕಾರ್ಯಕ್ರಮ ಮಾಡುತ್ತಿದ್ದೆ. ಅದೊಂದು ಜನಪ್ರಿಯ ಕಾರ್ಯಕ್ರಮ ಕೂಡ ಆಗಿತ್ತು. ಸಾಕಷ್ಟು ತಯಾರಿಯೊಂದಿಗೆ ಮತ್ತು ಆಯಾ ವಿಷಯಕ್ಕೆ ಸಂಬಂಧಪಟ್ಟಂತೆ ಹಗಲು ರಾತ್ರಿ ಕಷ್ಟಪಡುತ್ತಿದ್ದೆ. ಎಲ್ಲೋ ವಿಷಯ ಸಂಗ್ರಹಿಸಿ ಕಾರ್ಯಕ್ರಮವನ್ನು ತಯಾರಿಸುತ್ತಿದ್ದೆ. ನೋಡಿದವರು ಮೆಚ್ಚುಗೆಯನ್ನೂ ಕೂಡ ಸೂಚಿಸಿದ್ದರು. ಆದರೆ, ಒಂದು ದಿನ ನನ್ನ ಸೀನಿಯರ್ ಒಬ್ಬರು ಬಂದು "ಏನ್ ರೀ ನೀವು ಸಾಬ್ರ ಕನ್ನಡ ಮಾತಾಡ್ತೀರಿ? ನಿಮ್ಮ ಭಾಷೆ ಯಾರಿಗೆ ಅರ್ಥ ಆಗತ್ತೆ? ಎಲ್ಲರಿಗೂ ಸರಳವಾಗಿ ಗೊತ್ತಾಗೋ ಹಾಗೆ ಮಾತಾಡಬೇಕು ಅಂತ ರೇಗಿದರು. ಅವರ ಮಾತು ನನಗೆ ನಿಜಕ್ಕೂ ಅಚ್ಚರಿ ತಂದಿತ್ತು. ನನ್ನ ಭಾಷಾ ಶುದ್ಧಿ ಮತ್ತು ಭಾಷಾ ಜ್ಞಾನಕ್ಕೆ ಎಲ್ಲರೂ ಮೆಚ್ಚುಗೆ ಹೇಳಿದರೆ, ಇವರು ಹೀಗೆ ಅನ್ನುತ್ತಿದ್ದಾರಲ್ಲ ಅಂತ ಯೋಚಿಸಿದೆ. ಸಾಬ್ರ ಕನ್ನಡ ಅಂದರೆ ಯಾವುದು? ನಾನಾ ಮಾತಾಡೋದು ಸಾಬ್ರ ಕನ್ನಡನಾ? ಅಂತ ಯೋಚಿಸೋಕೆ ಶುರು ಮಾಡಿದೆ. ಆ ದಿನ ತುಂಬಾನೇ ಬೇಸರವಾಯಿತು. ಈ ತರಹದ ವಿಚಾರಗಳನ್ನು ಅವರು ಬಹಿರಂಗವಾಗಿ ಮತ್ತು ಎಲ್ಲರೆದುರು ಹೇಳಿದ್ದರಿಂದ ತುಂಬಾ ಭಾವುಕಳಾದೆ. ನನ್ನೊಳಗಿನ ಸಂಕಟವನ್ನು ತೋರಿಸುವುದಕ್ಕೂ ಆಗದೇ ಒದ್ದಾಡಿದೆ. ಎಲ್ಲರೆದುರು ಆ ರೀತಿ ಹೇಳಿದ್ದಕ್ಕೆ ನನಗೆ

ಅವಮಾನ ಅನಿಸಿತು. ಅವತ್ತು ಮನೆಗೆ ಹೋಗಿ ದುಃಖವನ್ನು ಹೊರಹಾಕಿದೆ. ಇಂತಹ ವಿಷಯವನ್ನು ಕುಟುಂಬದವರ ಜೊತೆ ಹಂಚಿಕೊಳ್ಳುವುದಕ್ಕೂ ಆಗುವುದಿಲ್ಲ. ಅವರಿಗೆ ಗೊತ್ತಾದರೆ, ಕೆಲಸದಿಂದ ಬಿಡಿಸುತ್ತಾರೆ ಎನ್ನುವ ಭಯ ಬೇರೆ. ಇಂತಹ ಸಂಕಟಗಳ ನಡುವೆಯೂ ಕೆಲಸ ಮಾಡಿದ್ದೇನೆ. ಉದ್ಯೋಗ ಅನಿವಾರ್ಯ ಅನ್ನುವ ಹೊತ್ತಿನಲ್ಲಿ ಮತ್ತು ನಮಗೆ ಸಿಕ್ಕ ಅವಕಾಶವನ್ನು ಬಿಡಬಾರದು ಎನ್ನುವ ಕಾರಣಕ್ಕಾಗಿ ಆಗುವ ಅವಮಾನವನ್ನು ಸಹಿಸಿಕೊಂಡು ಹೋಗಬೇಕಾಯಿತು. ಇಲ್ಲಿ ಏನಾಗಿದೆ ಅಂದರೆ, ಮುಸ್ಲಿಂ ಮಾತಾಡುವ ಕನ್ನಡ ಬೇರೆ ಇರುತ್ತದೆ ಎನ್ನುವ ಭಾವನೆ ಇದೆ. ಹೌದು, ಒಂದೊಂದು ಕಡೆ ಮಾತನಾಡುವ ಧಾಟಿ ಬೇರೆ ಇರಬಹುದು. ಆದರೆ, ಅರ್ಥ ಆಗದೇ ಇರುವಂತಹ ಭಾಷೆ ನನ್ನದಾಗಿರಲಿಲ್ಲ. ನಾನು ಮುಸ್ಲಿಂ ಅನ್ನುವ ಕಾರಣಕ್ಕಾಗಿ ಆ ರೀತಿಯ ಮನಸ್ಥಿತಿಯನ್ನು ನನ್ನ ಸೀನಿಯರ್ ಹೊಂದಿದ್ದರು' ಅಂತಾರೆ.

ವಾಹಿನಿಯೊಂದರಲ್ಲಿ ಕೆಲಸ ಮಾಡುವ ರಜಿಯಾ ತಮ್ಮದೇ ಅನುಭವವನ್ನು ಮತ್ತೊಂದು ರೀತಿಯಲ್ಲಿ ಹಂಚಿಕೊಂಡಿದ್ದು ಹೀಗೆ, "ಮುಸ್ಲಿಂ ಸಮುದಾಯದ ಹುಡುಗಿಯರಿಗೆ ಏನೆಲ್ಲ ಕಟ್ಟುಪಾಡುಗಳು ಇರುತ್ತವೆ ಅಂತ ಎಲ್ಲರಿಗೂ ಗೊತ್ತಿರುವ ವಿಷಯ. ಈ ನಡುವೆಯೇ ನಾನು ವಿದ್ಯುನ್ಮಾನ ಕ್ಷೇತ್ರದ ಉದ್ಯೋಗವನ್ನು ಆರಿಸಿಕೊಂಡು ಬಂದಿದ್ದೇನೆ. ಅಲ್ಲಿಂದ ಪಾರಾಗಿ ಉದ್ಯೋಗ ಕ್ಷೇತ್ರದಲ್ಲಾದರೂ ನಿರಾಳವಾಗಿ ಕೆಲಸ ಮಾಡಬಹುದು ಎನ್ನುವ ವಾತಾವರಣ ಕಂಡಿತಾ ಸಿಗುವುದಿಲ್ಲ. ನಾನು ಮುಸ್ಲಿಂ ಸಮುದಾಯದ ಹುಡುಗಿ ಅನ್ನುವ ಕಾರಣಕ್ಕಾಗಿಯೇ ಕೆಲವು ಸಮಸ್ಯೆಗಳನ್ನು ಎದುರಿಸಿದ್ದು ಇದೆ.

ನಾನು ಕೆಲಸಕ್ಕೆ ಸೇರಿಕೊಂಡಾಗ ಮೊದಲು ಎದುರಾಗಿದ್ದು ನನ್ನ ಹೆಸರು. ಹೆಸರು ಹೇಳಿದಾಕ್ಷಣ ನಾನು ಮುಸ್ಲಿಂ ಸಮುದಾಯದ ಹುಡುಗಿ ಅಂತ ಗೊತ್ತಾಗುತ್ತದೆ. ಹಾಗಾಗಿ ನನ್ನ ಸ್ನೇಹಿತೆಯರು ನನ್ನ ಹೆಸರನ್ನೇ ಬದಲಾಯಿಸಿಕೊಳ್ಳುವಂತೆ ಹೇಳಿದರು. ನಾನು ಹೋರಾಟದ ಹಿನ್ನೆಲೆಯಿಂದ ಬಂದವಳು ಆಗಿದ್ದರಿಂದ, ಅವರ ಮಾತನ್ನು ಒಪ್ಪಿಕೊಳ್ಳಲು ಆಗಲಲ್ಲ. ಅಲ್ಲದೇ, ನನಗೆ ಯಾವ ಸಮಸ್ಯೆಯೂ ಎದುರಾಗದು ಎನ್ನುವ ನಂಬಿಕೆಯಿತ್ತು. ಈ ನಂಬಿಕೆಯನ್ನು ಸುಳ್ಳು ಮಾಡಿದ್ದು ಜ್ಯೋತಿಷ್ಯ ಸಂಬಂಧಿ ಕಾರ್ಯಕ್ರಮ.

ವಿದ್ಯುನ್ಮಾನ ಮಾಧ್ಯಮದಲ್ಲಿ ಮೊದಲು ಕೆಲಸಕ್ಕೆ ಸೇರಿಕೊಂಡ ಹುಡುಗಿಯರಿಗೆ ತೀರಾ ಸರಳವಾದ ಕಾರ್ಯಕ್ರಮವನ್ನು ಕೊಡುತ್ತಾರೆ. ನೇರ ಪ್ರಸಾರ ಆಗುವ ಕಾರ್ಯಕ್ರಮಗಳಿಗೆ ಕಳುಹಿಸುವುದಿಲ್ಲ. ಹಾಗಾಗಿ ನನಗೆ ಮೊದಲು ಸಿಕ್ಕಿದ್ದು ಜ್ಯೋತಿಷ್ಯ ಕಾರ್ಯಕ್ರಮ. ಅದು ನನ್ನ ಮೊದಲ ಪ್ರೋಗ್ರಾಮ್ ಆಗಿದ್ದರಿಂದ ಖುಷಿಯಿಂದಲೇ ಮೇಕಪ್‌ಗೆ ಕೂತೆ. ಮೇಕಪ್ ಮುಗಿದ ಮೇಲೆ ಮೇಕಪ್ ಆರ್ಟಿಸ್ಟ್ (ಪ್ರಸಾಧನ ಕಲಾವಿದ) ಬಿಂದಿ ಹಚ್ಚಿಕೊಳ್ಳಲು ಹೇಳಿದ. ನಾನು ಹಚ್ಚಿಕೊಳ್ಳುವುದಿಲ್ಲ ಎಂದೆ. ನೀವು ಬಿಂದಿ ಹಚ್ಚಿಕೊಳ್ಳದೇ ಇದ್ದರೆ ಜ್ಯೋತಿಷಿಗಳು ನಿಮ್ಮನ್ನು

ವಾಪಸ್ಸು ಕಳುಹಿಸುತ್ತಾರೆ ಅಂದ. ಅವರು ಇಂತಹ ವಿಷಯದಲ್ಲಿ ತುಂಬಾ ಸ್ಟ್ರಿಕ್ಟ್ ಎಂದೂ ಅವನು ಎಚ್ಚರಿಸಿದ.

ಹಾಗೆಯೇ ಆಯಿತು. ಹಣೆಗೆ ಬಿಂದಿ ಹಚ್ಚಿಕೊಳ್ಳುವ ವಿಚಾರದಲ್ಲಿ ವಾದವೇ ನಡೆಯಿತು. ಆಗ ಕಾರ್ಯಕ್ರಮದ ನಿರ್ಮಾಪಕರು ನನ್ನನ್ನು ತಮ್ಮ ಚೇಂಬರ್‌ಗೆ ಕರೆದುಕೊಂಡು ಹೋಗಿ, ಜ್ಯೋತಿಷಿಗಳು ಹೇಳಿದಂತೆ ಕೇಳಿ, ಇಲ್ಲವಾದರೆ ನಿಮ್ಮ ಸ್ಥಾನದಲ್ಲಿ ಬೇರೆಯವರು ಇರುತ್ತಾರೆ ಅಂದರು. ನನಗೆ ತುಂಬಾ ಗೊಂದಲವಾಯಿತು. ಬಿಂದಿ ಇಟ್ಟುಕೊಂಡು ಕಾರ್ಯಕ್ರಮ ಮಾಡುವುದು ನನಗೆ ದೊಡ್ಡ ವಿಷಯವಾಗಿರಲಿಲ್ಲ. ಆದರೆ ಈ ಕಾರ್ಯಕ್ರಮವನ್ನು ನನ್ನ ಸಂಬಂಧಿಕರಾಗಲಿ ಅಥವಾ ನಮ್ಮ ಸಮುದಾಯದವರಾಗಲಿ ನೋಡಿದರೆ ಸಮಸ್ಯೆ ಉಂಟಾಗುತ್ತದೆ. ಆದರೆ, ಅದು ನನ್ನ ಮೊದಲ ಜಾಬ್ ಆಗಿದ್ದರಿಂದ ಸಿಕ್ಕಿರುವ ಕೆಲಸ ಕಳೆದುಕೊಳ್ಳಬಾರದು ಅಂತ ಅವರು ಹೇಳಿದಂತೆ ಕೇಳಿದೆ. ಒಂದೆರಡು ಬಾರಿ ಬಿಂದಿ ಇಟ್ಟುಕೊಂಡೇ ಕಾರ್ಯಕ್ರಮ ನಿರೂಪಿಸಿದ್ದೇನೆ. ಆ ವೇಳೆಯಲ್ಲಿ ನನಗೆ ನಾನೇ ಧೈರ್ಯ ತಗೆದುಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಪ್ರತಿ ಕ್ಷಣವೂ ನನಗೆ ಭಯ ಆಗುತ್ತಿದೆ. ನನ್ನ ಈ ಕಾರ್ಯಕ್ರಮವನ್ನು ನನ್ನ ಮನೆಯವರು ಮತ್ತು ನನ್ನ ಸಮುದಾಯದವರು ನೋಡದಿರಲಿ ಅಂದುಕೊಳ್ಳುತ್ತಿದ್ದೆ. ನಾನು ಅಂದುಕೊಂಡಂತೆ ಆಗಲಿಲ್ಲ. ಕಾರ್ಯಕ್ರಮದಲ್ಲಿ ಬಿಂದಿ ಇಟ್ಟುಕೊಂಡಿದ್ದನ್ನು ನಮ್ಮ ಮಾವನವರು ನೋಡಿದ್ದರು. ಸೀದಾ ನಮ್ಮ ಚಾನೆಲ್‌ನ ಮುಖ್ಯಸ್ಥರಿಗೆ ಅವರು ಕರೆ ಮಾಡಿದ್ದರು. ನಮ್ಮ ಮಾವನ ಮಾತಿನಿಂದಾಗಿ ಚಾನೆಲ್ ಮುಖ್ಯಸ್ಥರು ನನ್ನ ಮೇಲೆ ಕೋಪಗೊಂಡಿದ್ದರು. ನಿನಗೆ ಸಮಸ್ಯೆಯಾದರೆ ಕೆಲಸ ಬಿಟ್ಟುಬಿಡಿ, ಕೆಲಸ ಇಲ್ಲ ಅಂತ ಎಷ್ಟೋ ಜನರು ಕ್ಯೂನಲ್ಲಿ ನಿಂತಿದ್ದಾರೆ ಎಂದು ಖಡಕ್ಕಾಗಿಯೇ ಹೇಳಿದರು. ನಮ್ಮ ಸಂಪ್ರದಾಯ ಹೀಗಿದೆ ಅಂತ ತಿಳಿಸಿ ಹೇಳುವ ಪ್ರಯತ್ನವನ್ನು ನಾನು ಮಾಡಿದರೂ, ಅವರು ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ನನ್ನ ಮಾವನ ಪರವಾಗಿ ಅವರಿಗೆ ಕ್ಷಮೆಯಾಚಿಸಿದೆ. ಕೊನೆಗೆ ನನಗೆ ಸಿಕ್ಕಿದ್ದು ತೆರೆಯ ಹಿಂದಿನ ಕೆಲಸ. ನಾನು ಮಾಡಬೇಕಿದ್ದ ಕಾರ್ಯಕ್ರಮ ಬೇರೆಯವರ ಪಾಲಾಯಿತು. ಈ ಕಡೆ ನನ್ನ ಮಾವನೂ ಒಪ್ಪಲಿಲ್ಲ, ಆ ಕಡೆ ನನ್ನ ಚಾನೆಲ್ ಕೂಡ ತನ್ನ ಪಟ್ಟನ್ನು ಸಡಿಸಲಿಲ್ಲ. ಇಬ್ಬರಿಂದ ನೋವು ಅನುಭವಿಸಿದ್ದು ನಾನು. ಸ್ವಲ್ಪ ದಿನಗಳ ಕಾಲ ತುಂಬಾ ಹಿಂಸೆ ಅನಿಸಿತು. ಬೇಸರ ಕೂಡ ಆಯಿತು. ಈ ವಿಷಯದಲ್ಲಿ ನಾನು ಯಾರನ್ನು ದೂರಬೇಕು ಅಂತಾನೇ ಗೊತ್ತಾಗಲಿಲ್ಲ. ಇದೇ ಇಕ್ಕಟ್ಟಿನಲ್ಲಿ ಕೆಲಸ ಮಾಡುತ್ತಲೇ ಇದ್ದೇನೆ. ಆದರೆ, ನಾನು ಇಷ್ಟಪಡುವಂತಹ ಕಾರ್ಯಕ್ರಮಗಳು ಮಾತ್ರ ನನಗೆ ಸಿಗುತ್ತಿಲ್ಲ' ಎಂದರು.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರೇ ಹೇಳುವಂತೆ ಅಲ್ಪಸಂಖ್ಯಾತ ಮತ್ತು ಹಿಂದುಳಿದ ಸಮುದಾಯದ ಮಹಿಳೆಯರು ಈ ಕ್ಷೇತ್ರದಲ್ಲಿ ಕೆಲಸ ಹುಡುಕಿಕೊಂಡು ಬರುವುದು ತೀರಾ ಕಡಿಮೆ. ಬಂದರೂ, ಅವರಿಗೆ ನಾನಾ ಕಾರಣಗಳಿಂದಾಗಿ ಕೆಲಸ ನಿರಾಕರಿಸಲಾಗುತ್ತಿದೆ. ಕೆಲಸ ದಕ್ಕಿಸಿಕೊಂಡ ಮಹಿಳೆಯರಿಗೆ ಧರ್ಮದ ಕಾರಣಕ್ಕಾಗಿ ತಾವು

ಕೆಲಸ ಮಾಡುವ ಸ್ಥಳದಲ್ಲಿ ತಮ್ಮ ವಿಭಾಗದ ಮುಖ್ಯಸ್ಥರಿಂದ ಮತ್ತು ಸಹೋದ್ಯೋಗಿಗಳಿಂದ ಹಿಂಸೆಗೆ ಒಳಗಾಗಿರುವುದು ಅವರ ಮಾತಿನಲ್ಲಿಯೇ ಕಂಡು ಬರುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಕೆಲವು ಧರ್ಮಗಳಿಗೆ ಇರುವ ಮಾನ್ಯತೆ ಇತರ ಧರ್ಮಗಳಿಗೆ ಇಲ್ಲವಾಗಿದೆ. ಭಾರತದಲ್ಲಿ ಇಂದು ಧರ್ಮದ ಕಾರಣಕ್ಕಾಗಿಯೇ ನಾನಾ ಕೃತ್ಯಗಳು ನಡೆಯುತ್ತಿವೆ. ಅನೇಕ ಕ್ಷೇತ್ರಗಳಲ್ಲಿ ಶೋಷಿತ ಸಮುದಾಯಗಳಿಗೆ ಕೆಲಸವನ್ನು ನಿರಾಕರಿಸುವ ಪ್ರವೃತ್ತಿ ಕೂಡ ಮುಂದುವರೆದಿದೆ. ಸಂವಿಧಾನದ ನಾಲ್ಕನೆಯ ಅಂಗವೆಂದು ಕರೆಯುವ ಮಾಧ್ಯಮ ಇದರಿಂದ ಮುಕ್ತವಾಗಿರಬೇಕು. ಧರ್ಮದ ಸಂಕೋಲೆಗಳಿಂದ ಬಿಡುಗಡೆ ಹೊಂದಬೇಕಿತ್ತು. ಧರ್ಮಾತೀತವಾಗಿ ಕೆಲಸ ಮಾಡಬೇಕಿತ್ತು. ಆದರೆ, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರೇ ಹೇಳುವಂತೆ ಧರ್ಮ ಮತ್ತು ಜಾತಿಯ ಕಾರಣದಿಂದಾಗಿ ಮಾನಸಿಕ ಹಿಂಸೆ ಅನುಭವಿಸುತ್ತಿದ್ದಾರೆ. ತಾವಾಗಿಯೇ ಕೆಲಸ ಬಿಟ್ಟು ಹೋಗುವಂತಹ ವಾತಾವರಣವನ್ನೂ ಸೃಷ್ಟಿಸಲಾಗುತ್ತಿದೆ. ಸಮಾಜದಲ್ಲಿ ಇಂದು ಧರ್ಮ ಜಾತಿಗಳ ನಡುವೆ ಸಂಘರ್ಷ ಶುರುವಾಗಿದೆ. ಜಾತಿರಾಜಕಾರಣದ ಬಗ್ಗೆ ಮಾಧ್ಯಮಗಳೇ ದಿನವಿಡಿ ಚರ್ಚೆ ನಡೆಸುತ್ತಿವೆ. ಜ್ಯಾತ್ಯಾತೀತ ರಾಷ್ಟ್ರದ ಪರಿಕಲ್ಪನೆಯನ್ನು ಬಿತ್ತರಿಸುವ ಮಾಧ್ಯಮಗಳು ಕೂಡ ಇಂದು ಜಾತಿ ಧರ್ಮದ ಸಂಕೋಲೆಗಳಿಂದ ಬಿಗಿಯಲ್ಪಟ್ಟಿರುವುದು ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರ ಮಾತಿನಲ್ಲೇ ವ್ಯಕ್ತವಾಗಿರುವುದು ನಿಜಕ್ಕೂ ಆತಂಕದ ವಿಷಯ.

ಮೇಲಿನ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮೊದಲನೆಯ ಪ್ರಕರಣದಲ್ಲಿ ಆ ಮಹಿಳೆಯೇ ಹೇಳಿದಂತೆ ಇಸ್ಲಾಂ ಧರ್ಮದಲ್ಲಿ ಹೆಣ್ಣು ಮಕ್ಕಳು ಹಣೆಗೆ ಬಿಂದಿ (ಕುಂಕುಮ) ಇಡುವ ಪದ್ಧತಿ ಇಲ್ಲ. ಆದರೆ, ಅದನ್ನು ಕಡ್ಡಾಯವಾಗಿ ಇಡಬೇಕು ಎನ್ನುತ್ತವೆ ವಾಹಿನಿಗಳ ಕೆಲ ಕಾರ್ಯಕ್ರಮಗಳು. ಮಹಿಳೆಯರು ನಿರಾಕರಿಸಿದರೂ ಬಿಂದಿ ಇರಲೇಬೇಕು ಎಂದು ಒತ್ತಡ ಹಾಕಿರುವುದು ಕಂಡುಬರುತ್ತದೆ. ಮತ್ತೊಂದು ಪ್ರಕರಣದಲ್ಲೂ ಇದು ಕಂಡು ಬಂದಿದೆ. ಹಾಗಾಗಿ ಎರಡೂ ಪ್ರಕರಣಗಳಲ್ಲಿಯೂ ಧರ್ಮದ ಚೌಕಟ್ಟನ್ನು ಮೀರುವ ಕೆಲಸವನ್ನು ಮಾಧ್ಯಮದ ಕೆಲ ಕಾರ್ಯಕ್ರಮಗಳು ಮಾಡಿದ್ದನ್ನು ಕಾಣಬಹುದು. ಧರ್ಮದ ಕಟ್ಟುಪಾಡುಗಳು ಒಂದೊಂದು ಬಾರಿ ಕೆಲಸದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ನಾವಿಲ್ಲಿ ಅವಲೋಕಿಸಬಹುದು.

ಧರ್ಮದ ಹಿನ್ನೆಲೆಯ ವಿಚಾರವು ಮಹಿಳೆಯರ ಉದ್ಯೋಗ ಭದ್ರತೆಯ ಮೇಲೂ ಪರಿಣಾಮ ಬೀರಿದ್ದನ್ನು ನಾವು ಈ ಪ್ರಕರಣಗಳಲ್ಲಿ ಕಾಣಬಹುದಾಗಿದೆ. ಜ್ಯೋತಿಷ್ಯ ಕಾರ್ಯಕ್ರಮ ಅನ್ನುವುದು ಚಾನೆಲ್‌ಗಳಿಗೆ ಬಂಡವಾಳ ತಂದುಕೊಡುವಂಥದ್ದು. ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಜಾಹೀರಾತು ಹರಿದು ಬರುತ್ತದೆ ಅಥವಾ ಇಂತಹ ಕಾರ್ಯಕ್ರಮಗಳನ್ನು ನಿರ್ಮಾಣ ಮಾಡುವವರೇ ವಾಹಿನಿಗಳಿಗೆ ದುಡ್ಡು ಕೊಟ್ಟು ಪ್ರಸಾರದ ಸಮಯವನ್ನು ಕೊಂಡುಕೊಳ್ಳುತ್ತಾರೆ. ಹಾಗಾಗಿ ಸಹಜವಾಗಿಯೇ ವಾಹಿನಿಗಳು ಇಂಥವರ ಪರ ನಿಲ್ಲುತ್ತವೆ. ಅವರು ಯಾವುದನ್ನು ಬೇಕು ಎನ್ನುತ್ತಾರೆ ಅದನ್ನು ಒದಗಿಸಲು ಮುಂದಾಗುತ್ತವೆ. ಈ ಕಾರಣದಿಂದಾಗಿ ಅನ್ಯ ಧರ್ಮೀಯ ಮಹಿಳೆಯರಿಗೆ ಉದ್ಯೋಗದ ಅಭದ್ರತೆ ಕಾಡುತ್ತದೆ. ಅವರ ಕೆಲಸದ ನಿರಾಕರಣೆ

ಕೂಡ ನಡೆಯುತ್ತದೆ. ಒಂದು ಧರ್ಮದ ಕಾರ್ಯಕ್ರಮವಾಗಿದ್ದರೆ ಅದೇ ಧರ್ಮದವರಿಗೆ ಮಣೆ ಹಾಕಲಾಗುತ್ತದೆ. ಇಲ್ಲವೇ ಆ ಧರ್ಮದ ಆಚರಣೆಗಳನ್ನು ಹೇರುವಂತಹ ಅಥವಾ ಅನುಕರಣೆ ಮಾಡುವಂತೆ ಅನ್ಯಧರ್ಮೀಯ ಕೆಲಸಗಾರರಿಗೆ ಸೂಚಿಸಲಾಗುತ್ತದೆ.

ಇವುಗಳ ಜೊತೆ ನಿರೂಪಕಿಯರು ಧರಿಸುವ ಬಟ್ಟೆಗಳ ಬಗ್ಗೆಯೂ ವಿರೋಧಾಭ್ಯಾಸ ಇರುವುದನ್ನು ಕಾಣಬಹುದಾಗಿದೆ. ಸಾಂಪ್ರದಾಯಿಕವಲ್ಲದ ಸಿನಿಮಾ, ಫ್ಯಾಶನ್, ಅಪರಾಧ, ಅಡುಗೆ ಮತ್ತಿತರ ಕಾರ್ಯಕ್ರಮಗಳಲ್ಲಿ ನಿರೂಪಕಿಯರು ಹಾಕಿಕೊಳ್ಳುವ ಕಾಸ್ಟ್ಯೂಮ್ ಮತ್ತು ಮೇಕಪ್ ಕುರಿತು ಅಷ್ಟಾಗಿ ತಲೆಕೆಡಿಸಿಕೊಳ್ಳದ ಮಾಧ್ಯಮ ಕ್ಷೇತ್ರವು ಅದೇ ಹಬ್ಬ-ಹರಿದಿನಗಳು, ಜ್ಯೋತಿಷ್ಯ, ಪುಣ್ಯ ಕ್ಷೇತ್ರಗಳ ದರ್ಶನದಂಥ ಸಾಂಪ್ರದಾಯಿಕ ಅಥವಾ ಸಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಾತ್ರ ಸಂಸ್ಕೃತಿಯ ಹಲವು ಆಚಾರ ವಿಚಾರಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿರಿಸಿವೆ. ಈ ಮೂಲಕ ಅವುಗಳ ಹಿಂದಿರುವ ಪಿತೃಪ್ರಧಾನ ಮೌಲ್ಯಗಳನ್ನು ತಲೆಮಾರುಗಳಾದಿಯಾಗಿ ಕೊಂಡೊಯ್ಯುವ ವಾಹಕಗಳೆಂಬಂತೆ ಹೆಣ್ಣು ಮಕ್ಕಳನ್ನು ಚಿತ್ರಿಸಲಾಗುತ್ತದೆ. ಮೇಲಿನ ಪ್ರಕರಣಗಳಲ್ಲಿ ಒಂದುವೇಳೆ ಬಿಂದಿಯನ್ನು ಇಟ್ಟುಕೊಂಡಿರುವುದು ನಮ್ಮ ಮನೆಯವರಿಗೆ ಅಥವಾ ನಮ್ಮ ಸಂಬಂಧಿಕರಿಗೆ ಗೊತ್ತಾದರೆ ಹೇಗೆ ಎಂಬ ಭಯದ ವಾತಾವರಣದಿಂದ ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಿರುವುದು ಕಾಣುತ್ತದೆ.

ಮಾಧ್ಯಮಗಳು ಮಹಿಳೆಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿವೆ ನಿಜ. ಆದರೆ ಇದು ಅವರ ಧಾರ್ಮಿಕ ನಿಯಮಗಳಿಗೆ ತೊಂದರೆಯನ್ನುಂಟು ಮಾಡಿ, ಅವರ ವ್ಯಕ್ತಿತ್ವಕ್ಕೆ ಧಕ್ಕೆ ಬರುವಂತೆ ಮಾಡುತ್ತಿವೆ. ಹಾಗೆಯೇ ಮೊದಲನೆಯ ಪ್ರಕರಣದಲ್ಲಿ ಭಾಷೆಯ ಕುರಿತಾದ ಕುಹುಕದ ನುಡಿಗಳು ಮುಸ್ಲಿಂ ಮಹಿಳೆಯರನ್ನು ಇನ್ನಿಲ್ಲದಂತೆ ಹಿಂಸಿಸುತ್ತಿವೆ. ಈಗಲೂ ಗ್ರಾಮೀಣ ಭಾಗಗಳಲ್ಲಿ ಜಾತಿಯಾಧಾರಿತವಾಗಿ ಜನರನ್ನು ಗುರುತಿಸುವ ಕೆಲಸ ನಡೆಯುತ್ತಿದೆ. ಅವರ ಭಾಷೆಯಲ್ಲೂ ಸಹ ಮೇಲು ಕೀಳಿನ ಲೆಕ್ಕಾಚಾರ ಮಾಡಲಾಗುತ್ತದೆ. ಒಂದು ಗ್ರಾಮದಲ್ಲಿ ಉನ್ನತ ಜಾತಿಯವರು ಮಾತನಾಡುವ ಕನ್ನಡ ಅದು ಉನ್ನತ ಅಥವಾ ಶ್ರೇಷ್ಟವಾಗಿರುತ್ತದೆ ಮತ್ತು ಕೆಳ ಜಾತಿ ವರ್ಗಗಳ ಜನರ ಭಾಷೆ ಕೆಳಮಟ್ಟದ್ದಾಗಿರುತ್ತದೆ ಎಂಬ ಮನೋಭಾವ ಜನರಲ್ಲಿದೆ. ನಗರೀಕರಣದ ಪರಿಣಾಮದಿಂದಾಗಿ ಮತ್ತು ಅಕ್ಷರಸ್ಥರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಜಾತಿ ವರ್ಗಗಳ ಲೆಕ್ಕಚಾರ ಕ್ಷೀಣಿಸುತ್ತಿದೆ ಎಂಬ ನೆಮ್ಮದಿ ಮೂಡುತ್ತಿರುವ ಈ ಹೊತ್ತಿನಲ್ಲಿ ಮಾಧ್ಯಮ ಕ್ಷೇತ್ರದಲ್ಲಿಯೇ ಜಾತಿ ಕಾರಣಕ್ಕಾಗಿ ತಾರತಮ್ಯಗಳು ಉಂಟಾಗುತ್ತಿರುವುದು ವಿಪರ್ಯಾಸ. ಅದರಲ್ಲೂ ಈ ಬಗೆಯ ತಾರತಮ್ಯಗಳು ಕೇವಲ ಮಹಿಳೆಯರ ವಿಷಯದಲ್ಲಿ ಮಾತ್ರ ನಡೆಯುತ್ತವೆಯೇ ಹೊರತು ಪುರುಷರ ವಿಚಾರದಲ್ಲ ಎನ್ನುವುದು ಆತಂಕದ ವಿಷಯ.

ಈ ಎಲ್ಲದ ನಡುವೆಯೂ ಅಲ್ಪಸಂಖ್ಯಾತ ಮಹಿಳೆಯರು ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಟ್ಟು ಪಾಡುಗಳನ್ನು ಮೆಟ್ಟಿ ನಿಲ್ಲುವಂತಹ ಕೆಲಸಗಳನ್ನೂ ಅವರು ಮಾಡಿದ್ದಾರೆ.


ಈ ಕ್ಷೇತ್ರಕ್ಕೆ ಬರುವ ತಮ್ಮದೇ ಜಾತಿ ಧರ್ಮಗಳ ಮಹಿಳೆಯರಿಗೆ ಮಾದರಿ ಆಗುವಂತಹ ಮಹಿಳೆಯರೂ ಇಲ್ಲಿದ್ದಾರೆ. ಆದರೆ, ಅವರ ಸಂಖ್ಯಾ ತೀರಾ ಕಡಿಮೆಯಿದೆ. ಕನ್ನಡದ ಸುದ್ದಿ ವಾಹಿನಿಗಳಲ್ಲಿ ಇವರ ಸಂಖ್ಯೆ ಹತ್ತನ್ನೂ ದಾಟುವುದಿಲ್ಲ. ಇದಕ್ಕೆ ಕಾರಣ ಮೇಲೆ ಹೇಳಿದ ಪತ್ರಕರ್ತೆಯರ ಅನುಭವದ ಫಲವೇ ಆಗಿದೆ ಎನ್ನುವುದನ್ನು ಮರೆಯುವಂತಿಲ್ಲ.

ಕೋಷ್ಟಕ 5..2

ಉದ್ಯೋಗಕ್ಕೆ ಸೇರಿಕೊಂಡ ನಂತರ ಎದುರಾಗುವ ಸಮಸ್ಯೆಗಳು

1. ವೃತ್ತಿ ಕ್ಷೇತ್ರದಲ್ಲಿ (ಕಚೇರಿಯ ಒಳಗೆ) (160 ಜನ ವಕ್ತೃಗಳು)

ಕಾರಣಗಳು	ಹೌದು		ಇಲ್ಲ		ಈ ಪ್ರಶ್ನೆಗೆ ಮೌನ ವಹಿಸಿದವರು	
ಚಾರಿತ್ರ್ಯವಧೆಗೆ ಸಂಬಂಧಿಸಿದ ಗಾಸಿಪ್‌ಗಳು	98	61.25%	40	25%	22	13.75%
ಸಹೋದ್ಯೋಗಿಗಳಿಂದ ಮತ್ತು ವಿಭಾಗದ ಮುಖ್ಯಸ್ಥರಿಂದ ವೃತ್ತಿಯ ಜೀವನದ ಏಳಿಗೆಗೆ ತಡೆಯೊಡ್ಡುವುದು.	110	68.75%	16	10%	34	21.25%
ವೃತ್ತಿ ಕ್ಷೇತ್ರದಲ್ಲಿ ಧಾರ್ಮಿಕ ಹಿನ್ನೆಲೆಯ ಕಾರಣದಿಂದಾಗಿ ಎದುರಾಗುವ ಸಮಸ್ಯೆಗಳು	86	53.75%	12	7.5%	62	38.75%



ರೇಖಾಚಿತ್ರ 5.2.1 ವೃತ್ತಿ ಕ್ಷೇತ್ರದಲ್ಲಿ (ಕಚೇರಿಯ ಒಳಗೆ)

ಮೇಲಿನ ಕೋಷ್ಟಕ ಮತ್ತು ರೇಖಾಚಿತ್ರವನ್ನು ಗಮನಿಸಿದಾಗ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 160 ಮಹಿಳೆಯರಲ್ಲಿ ಚಾರಿತ್ರ್ಯವಧೆಗೆ ಸಂಬಂಧಿಸಿದ, ಗಾಸಿಪ್‌ಗಳ ಕಾರಣವಾಗಿ ಹಿಂಸೆಯನ್ನು ಅನುಭವಿಸಿದವರ ಶೇಕಡಾವಾರು ಪ್ರಮಾಣ 61.25%ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಇಲ್ಲವೆಂದು ಉತ್ತರಿಸಿದವರ ಪ್ರಮಾಣ ಶೇ.25ರಷ್ಟಿದ್ದು ಮೌನವಹಿಸಿದವರ ಪ್ರಮಾಣ ಶೇ.13.75ರಷ್ಟಿದೆ. ಅದೇ ರೀತಿಯಲ್ಲಿ ಸಹೋದ್ಯೋಗಿಗಳಿಂದ ಮತ್ತು ತಮ್ಮ ವಿಭಾಗಗಳ ಮುಖ್ಯಸ್ಥರಿಂದ ವೃತ್ತಿಯ ಜೀವನದ ಏಳಿಗೆಗೆ ತಡೆಯೊಡ್ಡುವ ಮೂಲಕ ಕಿರುಕುಳ ಅನುಭವಿಸಿದವರ ಪ್ರಮಾಣ ಶೇ. 68.75ರಷ್ಟಿದ್ದರೆ, ಈ ಪ್ರಶ್ನೆಗೆ ಇಲ್ಲವೆಂದು ಉತ್ತರಿಸಿದವರು ಶೇ.10ರಷ್ಟಿದ್ದಾರೆ. ಹಾಗೆಯೇ ಮೌನವಹಿಸಿದವರ ಪ್ರಮಾಣ ಶೇ.21.25ರಷ್ಟಿದೆ. ಇನ್ನು ಧರ್ಮದ ಕಾರಣಕ್ಕೆ ಅಥವಾ ಧರ್ಮದ ಹೆಸರಿನಲ್ಲಿ ಕಾಣಿಸಿಕೊಳ್ಳುವ ಉದ್ಯೋಗದ ಸ್ಥಳದಲ್ಲಿ ಹಿಂಸೆಯನ್ನು ಅನುಭವಿಸಿದವರ ಮತ್ತು ಧರ್ಮದ ಪೇಯ್ಡ್ ಕಾರ್ಯಕ್ರಮದವರು ನೀಡುವ ಸಂಸ್ಕೃತಿಕ ಕಾರಣಕ್ಕೆ ಮಹಿಳೆಯರ ಮೇಲೆ ಹಿಂಸೆಗಳು ನಡೆಯುತ್ತವೆ ಎಂಬುದನ್ನು ಒಪ್ಪಿದವರ ಪ್ರಮಾಣ ಶೇ. 43.75ರಷ್ಟಿದೆ. ಆದರೆ ಧರ್ಮದ ಹೆಸರಿನಲ್ಲಿ ನಡೆಯುವ ಕಾರಣಕ್ಕೆ ಯಾವುದೇ ಹಿಂಸೆಗಳು ನಡೆಯುವುದಿಲ್ಲ ಎಂದು ಹೇಳಿದವರ ಪ್ರಮಾಣ ಶೇ.7.5ರಷ್ಟಿದ್ದರೆ, ಮೌನ ವಹಿಸಿದವರ ಪ್ರಮಾಣ ಶೇ.38.75ರಷ್ಟಿದೆ. ಅಂದರೆ ಧರ್ಮದ ವಿಚಾರ ತುಂಬಾ ಸೂಕ್ಷ್ಮವಾಗಿರುತ್ತದೆ ಎಂಬ ಕಾರಣಕ್ಕೆ ಇದರ ಕುರಿತಂತೆ ಯಾರೂ ಕೂಡ ನೇರವಾಗಿ ಮಾತನಾಡುವುದಿಲ್ಲ. ಆದರೂ ಕೆಲವು ಮಹಿಳೆಯರು ಇದರ ಕುರಿತಂತೆ ಧೈರ್ಯವಾಗಿ ಮಾತನಾಡಿದ್ದಾರೆ. ಒಟ್ಟಾರೆಯಾಗಿ ಮಾಧ್ಯಮ ಸ್ಥಳದಲ್ಲಿ ಅಂದರೆ ವಿದ್ಯುನ್ಮಾನ ಮಾಧ್ಯಮದ ಕಛೇರಿಯ ಒಳಗೆ ಕೆಲಸ ಮಾಡುವಂತಹ ಮಹಿಳೆಯರು ಮೇಲೆ ತಿಳಿಸಿದವರಿಂದ ಅಥವಾ



ಮೇಲೆ ತಿಳಿಸಿದ ಕಾರಣಗಳಿಂದ ಹಲವು ಸಮಸ್ಯೆಗಳನ್ನು ಎದುರಿಸಿರುವುದು ಪ್ರಕರಣಗಳಿಂದಲೇ ತಿಳಿದುಬರುತ್ತದೆ.

5.2.2. ಸಾರ್ವಜನಿಕ ಕ್ಷೇತ್ರದಲ್ಲಿ (ಫೀಲ್ಡ್ ವರ್ಕ್) ಕೆಲಸ ಮಾಡುವ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ವೃತ್ತಿ ನಿರ್ವಹಿಸುವಾಗ ಯಾವ ಯಾವ ನೆಲೆಗಳಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಮೇಲೆ ವಿವರಿಸಿಕೊಳ್ಳಲಾಗಿದೆ. ಹಾಗೆಯೇ ಸಾರ್ವಜನಿಕ ಕ್ಷೇತ್ರದಲ್ಲಿ ಅಂದರೆ ಕಛೇರಿಯ ಆಚೆಗೂ (ಫೀಲ್ಡ್ ವರ್ಕ್) ಸಹ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅವುಗಳು ಗಂಭೀರ ಸ್ವರೂಪದ ಸಮಸ್ಯೆಗಳಾಗಿವೆ ಎನ್ನುವುದು ಆತಂಕಕಾರಿ ಸಂಗತಿ.

ಈ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ನಾಲ್ಕು ಗೋಡೆಗಳ ಕಚೇರಿಯ ಆಚೆ ಎದುರಿಸುತ್ತಿರುವ ಸಮಸ್ಯೆಗಳನ್ನು ಕೆಲವು ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ಕಚೇರಿಯ ಆಚೆ (ಫೀಲ್ಡ್ ವರ್ಕ್) ಯಾವ ಯಾವ ಸಂದರ್ಭಗಳಲ್ಲಿ ಮತ್ತು ಯಾವೆಲ್ಲ ಕಾರಣಕ್ಕಾಗಿ ಕಿರುಕುಳ ಅನುಭವಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ವಿಭಾಗಿಸಿಕೊಳ್ಳಲಾಗಿದೆ. ಮುಖ್ಯವಾಗಿ (ಅ) ರಾಜಕೀಯ ವರದಿಗಾರಿಕೆ ಸಂದರ್ಭದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳು (ಆ) ಕ್ರೈಂ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು (ಇ) ಜಿಲ್ಲಾ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು (ಉ) ಸಾರ್ವಜನಿಕ ಸ್ಥಳಗಳಲ್ಲಿ ಜನಜಂಗುಳಿ ಮಧ್ಯೆ ನಿಂತು ವರದಿಗಾರಿಕೆ ಮಾಡುವ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು (ಊ) ಸರಕಾರಿ ಅಧಿಕಾರಿಗಳಿಂದ ಮಹಿಳೆಯರು ಎದುರಿಸಿದ ಸಮಸ್ಯೆಗಳು ಮತ್ತು (ಋ) ಧಾರ್ಮಿಕ ಹಿನ್ನೆಲೆಯ ಕಾರಣದಿಂದಾಗಿ ಎದುರಾದ ಸಮಸ್ಯೆ ಹೀಗೆ ವಿಭಾಗಿಸಿಕೊಂಡು ಇವುಗಳನ್ನು ಒಂದೊಂದಾಗಿ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಅ. ರಾಜಕೀಯ ವರದಿಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು : ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ಹೆಚ್ಚಾಗಿ ಮಹಿಳೆಯರು ಫೀಲ್ಡ್ ಬೇಸ್ಡ್ ಕೆಲಸವನ್ನು ಅಂದರೆ, ವರದಿಗಾರಿಕೆಯಂತಹ ಕೆಲಸವನ್ನು ಆಯ್ಕೆ ಮಾಡಿಕೊಳ್ಳುವುದು ವಿರಳ ಎಂಬ ಮಾತಿದೆ. ಏಕೆಂದರೆ ವರದಿಗಾರಿಕೆ ಮಾಡುವಾಗ ಮಹಿಳೆಯರಿಗೇ ಹಲವು ಅಡೆತಡೆಗಳು ಎದುರಾಗುತ್ತವೆ. ಕೆಲಸಕ್ಕೆ ನಿಗಧಿತ ಸಮಯವಿರುವುದಿಲ್ಲ. ಸದಾ ಸಾರ್ವಜನಿಕರ ಜತೆ ವ್ಯವಹರಿಸಬೇಕಾಗುತ್ತದೆ. ತಮ್ಮ ಫೀಲ್ಡ್‌ಗೆ ಸಂಬಂಧ ಪಟ್ಟವರ ಜತೆ ಸಂಪರ್ಕದಲ್ಲಿರಬೇಕು. ಕಚೇರಿಯ ಆಚೆಯೇ ಸದಾ ಇರಬೇಕಾಗುತ್ತದೆ ಹೀಗೆ ಮಹಿಳೆಯರಲ್ಲಿ ಭಯದ ಭ್ರಮೆ ಹುಟ್ಟಿಸಲಾಗಿದೆ. ಈ ಮಿಥ್ಯಗಳನ್ನು

ಕೆಲವು ಮಹಿಳೆಯರು ಹುಸಿ ಮಾಡಿರುವುದೂ ಕಂಡುಬರುತ್ತದೆ. ಆದರೂ ಭಯದ ಶೋಷಣೆ ಮಾತ್ರ ಇಂದಿಗೂ ನಿಂತಿಲ್ಲ. ಅದರಲ್ಲೂ ರಾಜಕೀಯ ವರದಿಗಾರಿಕೆ ಎಂದರೆ ಮಹಿಳೆಯರಿಗೆ ಅದು ಸುಲಭದ ಮಾತಲ್ಲ. ರಾಜಕೀಯ ವಿಷಯಕ್ಕೆ ಸಂಬಂಧಿಸಿದಂತೆ ವರದಿಗಾರಿಕೆ ಮಾಡುವುದು ಮಹಿಳೆಯರಿಂದ ಆಗಲ್ಲ. ಯಾವಾಗ, ಏನು ಬೇಕಾದರೂ ರಾಜಕೀಯ ಕ್ಷೇತ್ರದಲ್ಲಿ ಘಟನೆಗಳು ನಡೆಯಬಹುದು. ರಾಜಕೀಯ ವ್ಯಕ್ತಿಗಳು ಅಷ್ಟು ಸುಲಭಕ್ಕೆ ಕೈಗೆ ಸಿಗಲಾರರು. ಹಾಗಾಗಿ ಮಹಿಳೆಯರಿಂದ ಈ ಕ್ಷೇತ್ರದಲ್ಲಿ ವರದಿ ಮಾಡುವುದು ಕಷ್ಟ ಎಂದೇ ನಂಬಿಸಲಾಗಿದೆ. ಇದರಿಂದಾಗಿಯೇ ರಾಜಕೀಯ ವಲಯದಲ್ಲಿ ವರದಿಗಾರಿಕೆ ಮಾಡುವ ಮಹಿಳೆಯರ ಸಂಖ್ಯೆ ಕಡಿಮೆಯಿದೆ. ಅಧಿಕವಾಗಿ ಪುರುಷರೇ ತುಂಬಿಕೊಂಡಿರುವುದನ್ನು ಕಾಣಬಹುದು.

ಈ ನಡುವೆಯೇ ಕೆಲವು ಮಹಿಳೆಯರು ರಾಜಕೀಯ ವರದಿಗಾರಿಕೆಯನ್ನು ಮಾಡಿ ತಮ್ಮ ಸಾಮರ್ಥ್ಯವನ್ನೂ ತೋರಿದ್ದಾರೆ. ಹಾಗಂತ ಅವರಿಗೆ ಈ ಗೆಲುವು ಸುಲಭಕ್ಕೆ ಸಿಕ್ಕಿದ್ದಲ್ಲ. ಸುಲಭವಾಗಿಯೂ ಅವರನ್ನು ಈ ಕ್ಷೇತ್ರ ಬಿಟ್ಟುಕೊಂಡಿಲ್ಲ ಎನ್ನುವುದನ್ನು ಮರೆಯಬಾರದು. ಪತ್ರಕರ್ತೆಯರಿಗೆ ಏನೇ ಸಂಕಷ್ಟಗಳು ಎದುರಾದರೂ ಅವುಗಳನ್ನು ಮೆಟ್ಟಿನಿಂತು ರಾಜಕೀಯ ಕ್ಷೇತ್ರದಲ್ಲಿ ಸಮರ್ಥವಾಗಿ ವರದಿಗಾರಿಕೆ ಮಾಡಿರುವುದು ಕಂಡು ಬರುತ್ತದೆ.

ರಾಜಕೀಯ ಕ್ಷೇತ್ರದ ವರದಿಗಾರಿಕೆಯ ಗುಣವೇ ವಿಭಿನ್ನವಾಗಿದೆ. ತಳಮಟ್ಟದ ರಾಜಕಾರಣದಿಂದ ಕೇಂದ್ರದ ರಾಜಕಾರಣದ ಬಗ್ಗೆ ತಿಳುವಳಿಕೆ ಇರಬೇಕು. ಆಯಾ ರಾಜಕೀಯ ವ್ಯಕ್ತಿಗಳ ಮತ್ತು ಪಕ್ಷದ ನಾಡಿಮಿಡಿತ ಅರಿತಿರಬೇಕು. ರಾಜಕೀಯ ವ್ಯಕ್ತಿಗಳ ಮತ್ತು ಹಿಂಬಾಲಕರ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಪರ ಮತ್ತು ವಿರೋದಧ ವರದಿ ಮಾಡುವಂತಹ ಸಾಮರ್ಥ್ಯ ಹೊಂದಿರಬೇಕು. ರಾಜಕೀಯ ವ್ಯಕ್ತಿಗಳ ಸಂದರ್ಶನ ಮತು ಅವರೊಂದಿಗೆ ಮಾತನಾಡಿದ ವಿವರಗಳನ್ನು ವರದಿ ರೂಪದಲ್ಲಿ ತಯಾರಿಸಬೇಕು. ಪಕ್ಷಗಳಲ್ಲಿ ನಡೆಯುವ ಆಂತರಿಕ ಸಂಘರ್ಷ ಮತ್ತು ಭ್ರಷ್ಟಾಚಾರದಂತಹ ವಿಷಯಗಳಲ್ಲೂ ರಾಜಿ ಮಾಡಿಕೊಳ್ಳದೇ ವರದಿ ನೀಡಬೇಕು.. ಹೀಗೆ ನಾನಾ ರೀತಿಯ ವರದಿಗಳನ್ನು ಮಾಡುವಂತಹ ಸಂದರ್ಭ ಬರುತ್ತದೆ. ಇಂತಹ ಸಂದರ್ಭದಲ್ಲಿ ಪುರುಷರೂ ಕೂಡ ಸಂಕಷ್ಟಗಳನ್ನು ಎದುರಿಸುವ ಸಂದರ್ಭ ಎದುರಾಗುತ್ತದೆ. ಪುರುಷರು ಎದುರಿಸುವ ಸಂಕಷ್ಟಗಳ ಜೊತೆಗೆ ಮಹಿಳೆಯರು ಇನ್ನೂ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಿರುವುದು ಕಂಡುಬರುತ್ತದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ರಾಜಕೀಯ ವರದಿಗಾರಿಕೆ ಮಾಡುವಂತಹ ಕೆಲವು ಮಹಿಳೆಯರು ತಾವು ಯಾವ ಯಾವ ಸಮಸ್ಯೆಗಳನ್ನು ಎದುರಿಸಿದ್ದಾರೆ ಎಂಬುದನ್ನು ತಿಳಿಸಿದ್ದಾರೆ. ಅವರ ಮಾತಿನಲ್ಲಿಯೇ ಇವುಗಳನ್ನು ಹೇಳುವುದರ ಮೂಲಕ ಸ್ತ್ರೀವಾದಿ ನೆಲೆಯಲ್ಲಿ ಅವುಗಳನ್ನು ವಿಶ್ಲೇಷಿಸಲಾಗಿದೆ.

ಪಾವನಾ ಎಂಬುವವರು ಹೇಳುವಂತೆ "ರಾಷ್ಟ್ರೀಯ ಸುದ್ದಿ ವಾಹಿನಿಗಳಿಗೆ ಹೋಲಿಸಿದರೆ ಪ್ರಾದೇಶಿಕ ಸುದ್ದಿ ಚಾನೆಲ್‌ಗಳಲ್ಲಿ, ಅದರಲ್ಲೂ ಕನ್ನಡ ಸುದ್ದಿ ವಾಹಿನಿಗಳಲ್ಲಿ ರಾಜಕೀಯ

ಸುದ್ದಿಯನ್ನು ಕವರ್ ಮಾಡುವಂಥ ಮಹಿಳಾ ರಿಪೋರ್ಟರ್ ಸಂಖ್ಯೆ ತೀರಾ ಕಡಿಮೆಯಿದೆ. ಇದಕ್ಕೆ ಹಲವಾರು ಕಾರಣಗಳನ್ನು ಸ್ವತಃ ಸುದ್ದಿ ವಾಹಿನಿಗಳು ನೀಡುತ್ತಾ ಬಂದಿವೆ. ರಾಜಕಾರಣ ಮಹಿಳೆಯರಿಗೆ ಅರ್ಥವಾಗಲ್ಲ ಅನ್ನುವುದು ಸಂಸ್ಥೆಗಳಲ್ಲಿ ಇರುವವರ ಧೋರಣೆ. ರಾಜಕೀಯ ಪಕ್ಷಗಳ ಮತ್ತು ರಾಜಕಾರಣಿಗಳ ನಡೆಗಳು ಅಷ್ಟು ಸುಲಭಕ್ಕೆ ಮಹಿಳೆಯರಿಗೆ ದಕ್ಕುವಂಥದ್ದಲ್ಲ ಅನ್ನುವ ಮಿಥ್ ಕೂಡ ಸುದ್ದಿ ವಾಹಿನಿಗಳ ಸಂಸ್ಥೆಗಿದೆ. ಪೊಲಿಟಿಕಲ್ ಡವಲೆಪ್‌ಮೆಂಟ್‌ಗಳು ಯಾವ ಹೊತ್ತಿನಲ್ಲಿ ಬೇಕಾದರೂ ನಡೆಯಬಹುದು. ಇತ್ತೀಚಿನ ದಿನಗಳಲ್ಲಿ ರೆಸಾರ್ಟ್ ರಾಜಕಾರಣ ಹೆಚ್ಚಾಗಿದೆ. ಹೊತ್ತು ಗೊತ್ತು ಇಲ್ಲದ ವೇಳೆಯಲ್ಲಿ ಏನೆಲ್ಲ ಘಟನೆಗಳು ರಾಜಕೀಯ ವಲಯದಲ್ಲಿ ಕಂಡು ಬರುತ್ತವೆ. ಹಾಗಾಗಿ ಮಹಿಳೆಯರಿಂದ ಅವುಗಳನ್ನು ಕವರ್ ಮಾಡೋಕೆ ಆಗಲ್ಲ ಅನ್ನುವ ಧೋರಣೆ ಸಂಸ್ಥೆಗಳಿಗೆ ಇರಬಹುದು. ಇದರ ಜೊತೆ ಹುಡುಗರಷ್ಟು ಹುಡುಗಿಯರು ಚುರುಕಾಗಿಲ್ಲ. ಹಾಗಾಗಿ ರಾಜಕೀಯ ವರದಿಗಾರಿಕೆಗೆ ಅವರನ್ನು ಕಳುಹಿಸುವುದಿಲ್ಲ ಎನ್ನುವುದನ್ನು ನಾನೇ ಎಷ್ಟೋ ಬಾರಿ ನನ್ನ ವಿಭಾಗದ ಮುಖ್ಯಸ್ಥರಿಂದ ಕೇಳಿದ್ದೂ ಇದೆ. ಇವೆಲ್ಲದರ ನಡುವೆಯೂ ಹುಡುಗಿಯರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇವೆ ಮತ್ತು ಮಾಡುತ್ತಿದ್ದೇವೆ. ನಿಜ ಹೇಳುತ್ತೇನೆ, ಎಷ್ಟೋ ವರ್ಷ ನಾನೊಬ್ಬಳೆ ಪೊಲಿಟಿಕಲ್ ರಿಪೋಟರ್ ಆಗಿ ಕೆಲಸ ಮಾಡಿದ್ದೇನೆ. ಎಕ್ಸ್‌ಕ್ಲೂಸಿವ್ ಸುದ್ದಿಗಳನ್ನು ತಂದಿದ್ದೇನೆ. ಆದರೂ, ವಿಭಾಗದ ಮುಖ್ಯಸ್ಥರಿಗೆ ಮತ್ತು ನನ್ನ ಪುರುಷ ಸಹದ್ಯೋಗಿಗಳಿಗೆ ನನ್ನ ಕೆಲಸದ ಬಗ್ಗೆ ಸಮಾಧಾನ ಇರುತ್ತಿರಲಿಲ್ಲ. ಕೆಲಸದ ಬಗ್ಗೆ ಮೆಚ್ಚುಗೆ ಸೂಚಿಸುವುದಲ್ಲ, ನನ್ನ ಸಾಮರ್ಥ್ಯವನ್ನು ಕುಗ್ಗಿಸುವಂತಹ ಕೆಲಸ ಮಾಡುತ್ತಿದ್ದರು. ಎಷ್ಟೋ ಸಾರಿ ಈ ಕ್ಷೇತ್ರದಲ್ಲಿ ವರದಿ ಮಾಡಿಕೊಂಡು ಬಂದಾಗ ಪುರುಷ ರಿಪೋರ್ಟರ್‌ಗಳಿಂದ ನಾನಾ ಮಾತುಗಳನ್ನು ಕೇಳಬೇಕಾಗಿ ಬಂತು. ಹುಡುಗಿಯನ್ನು ರಾಜಕಾರಣಿಗಳು ಲೈಂಗಿಕವಾಗಿ ಬಳಸಿಕೊಂಡು ಸುದ್ದಿ ಕೊಡ್ತಾರೆ ಅನ್ನುವ ಮಾತು ಬಂತು. ಹುಡುಗಿಯರು ಚಿಕ್ಕಪುಟ್ಟ ಗಿಫ್ಟ್ ತಗೆದುಕೊಂಡು ರಾಜಕಾರಣಿಗಳ ಪರ ಕೆಲಸ ಮಾಡುತ್ತಾರೆ ಅಂದರು. ರಾಜಕಾರಣಿಗಳ ಹಿಂಬಾಲಕರ ಜತೆ ಸಂಬಂಧ ಕಟ್ಟಿ ಮಾತಾನಾಡಿದರು. ರಾಜಕೀಯ ಹಿಂಬಾಲಕರ ಅಥವಾ ರಾಜಕಾರಣಿಗಳ ಪಿಎ ಜೊತೆ ಅಕ್ರಮ ಸಂಬಂಧವನ್ನು ಕಟ್ಟಿ ಮಾತನಾಡಿದ್ದನ್ನೂ ನಾನು ಕೇಳಿದ್ದೇನೆ. ಇದು ತುಂಬಾನೇ ಬೇಸರ ಹುಟ್ಟಿಸುವ ಸಂಗತಿ. ಆದರೆ ಅದೇ ಹುಡುಗರು ನಾವು ಮಾಡುವ ಕೆಲಸವನ್ನೇ ಮಾಡಿದರೆ, ನಾವು ಕೊಡುವ ಸುದ್ದಿಯನ್ನೇ ಕೊಟ್ಟರೆ ಅವರು ಸರಿಯಾದ ರೀತಿಯಲ್ಲಿ ಮತ್ತು ಸರಿಯಾದ ಮಾರ್ಗದಲ್ಲಿ ಹೋಗಿ ಸುದ್ದಿ ತಂದಿರುತ್ತಾರೆ ಎಂದು ನಂಬುತ್ತಾರೆ. ಮಹಿಳೆಯರ ಸುದ್ದಿಗಳನ್ನು ಮಾತ್ರ ಅನುಮಾನದಿಂದ ನೋಡುವ ಪರಿಪಾಠ ವಿದ್ಯುನ್ಮಾನ ಮಾಧ್ಯಮದಲ್ಲಿದೆ.

ಈ ರೀತಿಯ ಮಾತುಗಳನ್ನು ಕೇಳಿಸಿಕೊಂಡಾಗ ತುಂಬಾ ನೋವಾಗುತ್ತಿತ್ತು. ಎಷ್ಟೋ ಸಾರಿ ನಾನು ಮಾನಸಿಕವಾಗಿ ಕುಗ್ಗಿ ಹೋಗಿದ್ದೇನೆ. ಇಂತಹ ಅಸಹ್ಯದ ಮಾತುಗಳನ್ನು ಕೇಳಲು ನಾನು ಈ ಕ್ಷೇತ್ರಕ್ಕೆ ಬರಬೇಕಿತ್ತಾ ಅಂತ ಅನಿಸಿದ್ದೂ ಇದೆ. ಆದರೆ ಕೆಲಸ ಅನ್ನುವುದು ಬದುಕಿನ

ಅನಿವಾರ್ಯತೆಯನ್ನು ಸೃಷ್ಟಿಸಿದೆ. ನನಗಾಗಿ ಮತ್ತು ನನ್ನ ಕುಟುಂಬಕ್ಕಾಗಿ ನಾನು ಕೆಲಸ ಮಾಡಲೇಬೇಕಿದೆ. ಹಾಗಾಗಿ ಎಷ್ಟೇ ತೊಂದರೆಗಳು ಎದುರಾದರೂ ಸಹ ಗಟ್ಟಿಯಾಗಿ ನಿಂತು ಅವುಗಳನ್ನು ಎದುರಿಸುತ್ತಿದ್ದೇನೆ. ಇದೊಂದು ರೀತಿಯ ಹಿಂಸೆಯಾದರೆ, ಕೆಲಸದ ಸ್ಥಳದಲ್ಲಿ ಕೆಲ ರಾಜಕಾರಣಿಗಳು ಕೂಡ ನಮ್ಮನ್ನು ಲೈಂಗಿಕ ದೃಷ್ಟಿಯಿಂದ ನೋಡಿದ್ದು ಇದೆ. ನಾನೇ ಇಂಥದ್ದೊಂದು ಕಿರುಕುಳಕ್ಕೆ ಒಳಗಾಗಿದ್ದೇನೆ. ಅವರು ಒಬ್ಬ ಪ್ರಭಾವಿ ಸಚಿವರು. ಅವರ ಹೆಸರನ್ನು ಹೇಳಲು ನಾನು ಇಚ್ಛಿಸುವುದಿಲ್ಲ. ನಾನು ಅವರಿಗೆ ಏನೇ ಪ್ರಶ್ನೆಗಳನ್ನು ಕೇಳಿದರೂ ಅವರು ನನ್ನ ಕೈ ಮುಟ್ಟಿಯೇ ಮಾತನಾಡುತ್ತಿದ್ದರು. ಹಲವು ಬಾರಿ ಹಾಗೆಯೇ ಮಾಡಿದರು. ಅವರ ವರ್ತನೆಯು ಬೇರೆಯವರಿಗೆ ಅನುಮಾನ ಹುಟ್ಟುವ ರೀತಿಯಲ್ಲಿಯೇ ಇತ್ತು. ನನಗಂತೂ ವಿಪರೀತ ಮುಜುಗರ ಅನಿಸುತ್ತಿತ್ತು. ಅವರ ಆ ವರ್ತನೆಯಿಂದ ತಪ್ಪಿಸಿಕೊಳ್ಳಲು ನೇರವಾಗಿಯೇ ನಾನು ಅವರಿಗೆ ಗಟ್ಟಿಧ್ವನಿಯಲ್ಲಿ ಹೇಳಬೇಕಾಯಿತು. ಹೀಗೆ ರಾಜಕೀಯ ವ್ಯಕ್ತಿಗಳೂ ಸಹ ಮಹಿಳಾ ವರದಿಗಾರ್ತಿಯರನ್ನು ದೇಹದ ನೆಲೆಯಲ್ಲಿಯೇ ಗುರುತಿಸಿ, ಲೈಂಗಿಕವಾಗಿ ಹಿಂಸೆ ನೀಡುವುದನ್ನು ಕಾಣಬಹುದು. ಹೀಗೆ ನಾನಾ ವಿಧಗಳಿಂದ ಹಿಂಸೆಗಳನ್ನು ಎದುರಿಸುವ ಮತ್ತು ಉದ್ಯೋಗವನ್ನು ಮುಂದುವರೆಸಿಕೊಂಡು ಹೋಗುವ ಅನಿವಾರ್ಯತೆಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಒಳಗಾಗಿರುವುದಂತೂ ಸತ್ಯ" ಎಂದು ಹೇಳಿದರು.

ಹೆಣ್ಣಿನ ಜೋರು ಧ್ವನಿಯ ನಿರಾಕರಣೆ : ಇನ್ನೊಂದು ಪ್ರಕರಣದಲ್ಲಿ ಸಾಕ್ಷಿ ಎಂಬುವವರು ಮಾತನಾಡುತ್ತಾ "ನಾನು ಖಾಸಗಿ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಘಟನೆ ನಡೆಯಿತು. ಒಬ್ಬ ರಾಜಕೀಯ ವ್ಯಕ್ತಿಯು ಸುದ್ದಿಗೋಷ್ಠಿ ಕರೆದಿದ್ದರು. ಎಲ್ಲಾ ಚಾನೆಲ್‌ನವರೂ ಅಲ್ಲಿದ್ದರು. ನಾನೂ ಹೋಗಿದ್ದೆ. ಬೇಸಿಕಲಿ ನನ್ನ ವಾಯ್ಸ್ ದೊಡ್ಡದು. ಹಾಗಾಗಿ ಗಟ್ಟಿ ಧ್ವನಿಯಲ್ಲಿ ಜೋರು ವಾಯ್ಸ್ ಮಾಡಿ ಪ್ರಶ್ನೆ ಕೇಳಿದೆ. ನನ್ನವು ನೇರ ಪ್ರಶ್ನೆಗಳು ಆಗಿದ್ದರಿಂದ ಮಾತಿನ ಚಕಮಕಿ ಕೂಡ ಅಲ್ಲಿ ನಡೆಯಿತು. ಅಲ್ಲಿದ್ದ ರಾಜಕೀಯ ವ್ಯಕ್ತಿಯ ಹಿಂಬಾಲಕನೊಬ್ಬ ನನ್ನನ್ನು ಕರೆದು, ಹೆಣ್ಮಕ್ಕಳು ಇಷ್ಟೊಂದು ಜೋರು ಧ್ವನಿಯಲ್ಲಿ ಮಾತಾಡಬಾರಮ್ಮ. ನಿಮ್ಮದು ವಾಯ್ಸ್ ದೊಡ್ಡದಿದೆ ಕಡಿಮೆ ಮಾಡ್ಕೊಳ್ಳಿ. ಜೋರಾಗಿ ಮಾತಾಡುವುದರಿಂದ ನೀವು ನಾಲ್ಕು ಜನರ ಮಧ್ಯೆ ಗುರುತಿಸ್ಕೋತೀರಿ ಅನ್ನುವ ಭ್ರಮೆ ಇದ್ದರೆ ತಲೆಯಿಂದ ತಗೆದುಹಾಕಿ. ಮೆತ್ತಗೆ ಮಾತಾಡದಿದ್ದರೆ ಕೆಲಸ ಕಳೆದುಕೊಳ್ಳುತ್ತೀರಿ ಎನ್ನುವುದನ್ನು ಮರೀಬೇಡಿ ಅಂತ ಅವರು ನೇರವಾಗಿಯೇ ನನಗೆ ಹೇಳಿದರು. ಅವತ್ತು ನಾನೊಬ್ಬಳೆ ದೊಡ್ಡ ವಾಯ್ಸ್‌ನಲ್ಲಿ ಮಾತನಾಡಿರಲಿಲ್ಲ. ಮತ್ತೊಂದು ಚಾನೆಲ್‌ವೊಂದರ ಪುರುಷ ರಿಪೋರ್ಟರ್ ಕೂಡ ನನ್ನಷ್ಟೇ ಏರು ಧ್ವನಿಯಲ್ಲಿ ಪ್ರಶ್ನೆ ಮಾಡಿದ್ದ. ಆತನನ್ನು ಅವರು ಏನೂ ಕೇಳಲಿಲ್ಲ. ನನಗೂ ಕೋಪ ಬಂತು. ಹುಡುಗರು ಏನ್ ಕೇಳಿದ್ರೂ ನೆಡಯತ್ತೆ, ನಾವು ಹುಡುಗೀರು ಜೋರಾಗಿ ಪ್ರಶ್ನೆ ಕೇಳಿದರೆ ಕೋಪ ಬರತ್ತೆ ಅಲ್ವಾ? ಅಂದೆ. ನನ್ನ ಪ್ರಶ್ನೆ ನ್ಯಾಯಯುತವಾಗಿಯೇ ಇತ್ತು. ಆದರೆ, ಅವರು ಅದನ್ನು ಕೇಳಿಸಿಕೊಳ್ಳಲು ಹೋಗಲಿಲ್ಲ. ಈ ಮಾತಿನಿಂದಾಗಿ ನಾನು ಪುರುಷ ರಿಪೋರ್ಟರ್ ಕಂಗೆಣ್ಣಿಗೂ ಗುರಿ

ಆಗಬೇಕಾಯಿತು. ಅವತ್ತಿಂದ ಆ ರಾಜಕಾರಣಿಯ ಪ್ರೆಸ್‌ಮೀಟ್‌ಗೆ ನನ್ನನ್ನು ಕರೆಯುವುದನ್ನೂ ನಿಲ್ಲಿಸಲಾಯಿತು. ನಾನು ಜೋರಾಗಿ ಮಾತಾಡ್ತೀನಿ, ನೇರ ಪ್ರಶ್ನೆ ಕೇಳ್ತೀನಿ ಅನ್ನುವ ಕಾರಣಕ್ಕಾಗಿ ಕೆಲ ರಾಜಕಾರಣಿಗಳು ನನ್ನನ್ನು ದೂರ ಇಡುವಂತಹ ಪ್ರಯತ್ನ ಮಾಡಿದರು. ನನ್ನ ಕೆಲಸಕ್ಕೂ ಅದು ತೊಂದರೆ ಮಾಡಿತು. ಏನ್ ಮಾಡೋದು ಇದೆಲ್ಲಾ ಇದ್ದದ್ದೆ. ಸಮಾಜದಲ್ಲಿ ಹೆಣ್ಣು ಜೋರಾಗಿ ಮಾತಾಡಬೇಕು. ಹಾಗೆ ಮಾತಾಡದಿದ್ದರೆ ತಾನು ನಿಂತ್ಕೊಂಡಿರೋ ಸ್ಥಳನೂ ಸಹಿತ ಕಿತ್ಕೊಂಡು ಬಿಡ್ತಾರೆ. ಇಂತಹ ವಿಚಾರಗಳ ಜತೆ ಇನ್ನೂ ಹಲವು ಸಮಸ್ಯೆಗಳನ್ನು ನಾವು ಎದುರಿಸುತ್ತೇವೆ. ರಾಜಕಾರಣಿಗಳ ಬೆನ್ನು ಹತ್ತಿ ಎಕ್ಸ್‌ಕ್ಲೂಸಿವ್ ರಿಪೋರ್ಟಿಂಗ್ ಮಾಡಿಕೊಂಡು ಬಂದರೆ ಅದನ್ನೂ ಕೆಲವು ಸಹೋದ್ಯೋಗಿಗಳು ಸಹಿಸಲ್ಲ. ರಾಜಕೀಯ ವ್ಯಕ್ತಿಗಳು ಹುಡಿಗಿಯರು ಅನ್ನುವ ಕಾರಣಕ್ಕಾಗಿ ಹೊಸ ಹೊಸ ಸುದ್ದಿಗಳನ್ನು ಕೊಡ್ತಾರೆ ಅಂತ ಅನಿಸಿಕೊಂಡಿದ್ದೂ ಇದೆ. ಇಂತಹ ಮಾತುಗಳು ತುಂಬಾನೆ ಹಿಂಸೆ ಮಾಡುತ್ತವೆ. ಮತ್ತೆ ಕೆಲವು ರಾಜಕಾರಣಿಗಳು ಹೆಣ್ಮಕ್ಕಳು ಜೊತೆ ಮಾತನಾಡೋಕೆ ಹೆದರಿಕೊಳ್ತಾರೆ. ಯಾಕೆಂದರೆ, ಅವರಿಗೂ ಮತ್ತು ಮಹಿಳಾ ರಿಪೋರ್ಟರ್‌ಗೆ ಸಂಬಂಧ ಕಲ್ಪಿಸಿ ಬಿಡ್ತಾರೆ ಅನ್ನುವ ಆತಂಕ. ಇಂತಹ ಪರಿಸ್ಥಿತಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಪತ್ರಕರ್ತೆಯರಿಗೆ ಇರುವುದರಿಂದ ನೆಮ್ಮದಿಯಾಗಿ ಕೆಲಸ ಮಾಡಲು ಆಗುವುದಿಲ್ಲ. ಸುಲಭವಾಗಿ ಸುದ್ದಿ ಕೂಡ ನಮಗೆ ಸಿಗುವುದಿಲ್ಲ. ಅದೇ ಹುಡುಗರ ವಿಚಾರದಲ್ಲಿ ಇದೆಲ್ಲ ಇಲ್ಲ. ಅವರು ಎಲ್ಲಿಗೆ ಬೇಕಾದರೂ ನುಗ್ಗಬಹುದು. ಮಾತನಾಡಬಹುದು. ಯಾವ ಟೈಮ್‌ನಲ್ಲಿ ಬೇಕಾದರೂ ರಾಜಕಾರಣಿಗಳನ್ನು ಭೇಟಿ ಮಾಡಿಕೊಂಡು ಬರಬಹುದು. ಆಗ ಸಹೋದ್ಯೋಗಿಗಳು ಅವರ ಬಗ್ಗೆ ಅನುಮಾನ ಪಡಲ್ಲ, ಸಂಬಂಧ ಕಟ್ಟಿ ಮಾತನಾಡಲ್ಲ. ಇನ್ನೂ ಕೆಲವು ವಿಷಯಗಳನ್ನು ಯಾರ ಮುಂದೆಯೂ ಹಂಚಿಕೊಳ್ಳಲು ಆಗಲ್ಲ. ಹೇಳಿಕೊಂಡರೆ ನಮ್ಮ ಮೇಲೆಯೇ ಅನುಮಾನ ಪಡುತ್ತಾರೆ. ನಮ್ಮ ಕಷ್ಟಗಳನ್ನು ಹೇಳಿಕೊಂಡರೆ ಅದರಿಂದ ನಷ್ಟ ಆಗುವುದು ನಮಗೇ ಅಂತ ಸುಮ್ಮನಿರಬೇಕಾಗಿದೆ. ಇಂತಹ ಕಾರಣಗಳಿಂದಾಗಿ ಹುಡುಗಿಯರು ರಿಪೋರ್ಟಿಂಗ್ ಕ್ಷೇತ್ರದತ್ತ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಸ್ಟುಡಿಯೋಗೆ ಸಂಬಂಧಿಸಿದ ಕಾರ್ಯಕ್ರಮಗಳತ್ತ ಆಲೋಚನೆ ಮಾಡುತ್ತಾರೆ. ನನ್ನ ಪ್ರಕಾರ ದೈಹಿಕ ಹಿಂಸೆಗಿಂತ ಹೆಚ್ಚು ನಷ್ಟ ಮಾಡುವುದು ಮಾನಸಿಕ ಹಿಂಸೆ. ಫೀಲ್ಡ್ ಕೆಲಸಕ್ಕೆ ಹೋದಾಗ ಮಾನಸಿಕ ಹಿಂಸೆಯೇ ಜಾಸ್ತಿ ಇರುತ್ತದೆ. ನಮ್ ಬಗ್ಗೆ ನಮ್ಮ ಕ್ಯಾರೆಕ್ಟರ್ ಬಗ್ಗೆ ಏನೇನೋ ಹೇಳಿಕೊಂಡು ತಿರುಗಾಡುತ್ತಾರೆ. ಇದು ಮನಸಿನ ಮೇಲೆ ತುಂಬಾನೇ ಪರಿಣಾಮ ಬೀರುತ್ತದೆ" ಎಂದರು.

ವ್ಯವಸ್ಥೆಯಲ್ಲಿರುವ ಪ್ರತಿಯೊಂದು ವಲಯವೂ ಕೂಡ ಪುರುಷ ಕೇಂದ್ರಿತವಾಗಿಯೇ ರೂಪುಗೊಂಡಿರುವುದು ತಿಳಿದಿರುವ ವಿಷಯ. ಹಾಗಾಗಿ ಮಹಿಳೆಯರು ಉದ್ಯೋಗ ವಲಯವನ್ನು ಪ್ರವೇಶಿಸಬೇಕಾದರೆ ಹಲವು ಸಮಸ್ಯೆಗಳನ್ನು ಎದುರಿಸಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾಳೆ. 21ನೇ ಶತಮಾನದಲ್ಲಿಯೂ ಮಹಿಳೆಯರು ಈ ಬಗೆಯ ಸಮಸ್ಯೆಗಳಿಗೆ ಒಳಗಾಗುತ್ತಿರುವುದನ್ನು ಕಾಣಬಹುದು. ಅದರಲ್ಲೂ ಮುಖ್ಯವಾಗಿ ವ್ಯವಸ್ಥೆಯು ರಾಜಕೀಯ

ವಲಯಕ್ಕೆ ಸಂಬಂಧಿಸಿದಂತೆ ಒಂದು ಪೂರ್ವಗ್ರಹವನ್ನು ಹೊಂದಿರುವುದನ್ನು ಕಾಣಬಹುದು. ಯಾಕೆಂದರೆ ರಾಜಕೀಯ ವಲಯ ಎಂದರೆ ಕೇವಲ ಪುರುಷರಿಗೆ ಮಾತ್ರ ಸೀಮಿತ. ಅದು ಮಹಿಳೆಯರಿಗೆ ಧಕ್ಕುವಂತಹದ್ದಲ್ಲ. ಒಂದು ವೇಳೆ ಮಹಿಳೆಯರಿಗೆ ಅವಕಾಶ ಸಿಕ್ಕರೆ ಅದನ್ನು ನಿಭಾಯಿಸಿಕೊಂಡು ಹೋಗುವಂತಹ ಸಾಮರ್ಥ್ಯ ಅವರಿಗೆ ಇರುವುದಿಲ್ಲ ಎಂಬುದು ಪಿತೃಪ್ರಧಾನ ವ್ಯವಸ್ಥೆಯ ನಂಬಿಕೆಯೇ ಆಗಿದೆ. ಆದರೂ, ಇದನ್ನು ಹುಸಿಗೊಳಿಸುವಂತಹ ಕೆಲಸ ಮಹಿಳೆಯರು ಮಾಡಿರುವುದು ಚರಿತ್ರಾರ್ಹ. ಹಾಗೆಯೇ ಇಂತಹ ಧೋರಣೆಯನ್ನು ನಾವು ಇಂದು ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿಯೂ ಇರುವುದನ್ನು ಕಾಣುತ್ತಿದ್ದೇವೆ. ಅದರಲ್ಲೂ ರಾಜಕೀಯ ವಲಯದ ವರದಿಗಾರಿಕೆ ಕೇವಲ ಪುರುಷರಿಗೆ ಮಾತ್ರ ಸೀಮಿತ ಎಂಬಂತಹ ಧೋರಣೆಯನ್ನು ಮಾಧ್ಯಮಗಳು ಹೊಂದಿರುವುದನ್ನು ಅಲ್ಲಿ ಕೆಲಸ ಮಾಡುವ ಮಹಿಳೆಯರ ಮಾತಿಂದ ಅರ್ಥವಾಗುತ್ತದೆ. ಈ ಕ್ಷೇತ್ರದಲ್ಲಿಯೂ ಕೂಡ ಪಿತೃಪ್ರಧಾನ ನಂಬಿಕೆಯನ್ನು ಹುಸಿಗೊಳಿಸುವಂತಹ ಕಾರ್ಯ ಹಲವು ಪತ್ರಕರ್ತೆಯರಿಂದ ನಡೆದಿರುವುದು ಕಂಡುಬರುತ್ತದೆ. ಯಾವ ವರದಿಗಾರಿಕೆಯು ಮಹಿಳೆಯರಿಗೆ ಕಷ್ಟದ ಕೆಲಸವೆಂದು ತಿಳಿದುಕೊಂಡಿದ್ದರೋ, ಅದನ್ನು ಹುಸಿಗೊಳಿಸುವ ನಿಟ್ಟಿನಲ್ಲಿ ಮಹಿಳೆಯರು ಹಲವು ಸವಾಲುಗಳನ್ನು ಸ್ವೀಕರಿಸಿದ್ದು ಕಾಣಬಹುದು. ಜೊತೆಗೆ ಅನೇಕ ಸಮಸ್ಯೆಗಳನ್ನು ಎದುರಿಸಿಕೊಂಡೇ ಅವರು ತಮ್ಮ ಸಾಮರ್ಥ್ಯವನ್ನು ನಿರೂಪಿಸಿದ್ದಾರೆ. ಅಂದರೆ ಮಹಿಳೆಯರು ಹಲವು ಸಮಸ್ಯೆಗಳನ್ನು ಎದುರಿಸಿದ್ದಾರೆ ಮತ್ತು ಎದುರಿಸುತ್ತಿದ್ದಾರೆ ಎಂಬುದು ಅವರ ಆಡಿದ ಮಾತುಗಳಿಂದ ಗೊತ್ತಾಗುತ್ತದೆ. ಮಹಿಳಾ ವರದಿಗಾರ್ತಿಯರು ರಾಜಕೀಯ ವರದಿಯನ್ನು ಮಾಡಲು ಫೀಲ್ಡ್‌ಗೆ ಹೋದಾಗ ಅಲ್ಲಿ ರಾಜಕೀಯ ವ್ಯಕ್ತಿಗಳಿಂದ ಮತ್ತು ವರದಿ ತಂದಾದ ಮೇಲೆ ತಮ್ಮ ಸಹೋದ್ಯೋಗಿಗಳಿಂದ ಮಾನಸಿಕ ನಿಂದನೆಯ ಮಾತುಗಳನ್ನು ಕೇಳಿದ್ದಾರೆ. ಅಂದರೆ ವ್ಯವಸ್ಥೆಯಲ್ಲಿ ಮಹಿಳೆಯರು ಏನೇ ಮಾಡಿದರೂ ಅದು ವಾಮಮಾರ್ಗದಿಂದ ಮಾಡಿರುತ್ತಾರೆ ಅಥವಾ ಯಾವುದೋ ಆಮಿಷಗಳನ್ನೊಡ್ಡಿ, ಆಮಿಷಗಳಿಗೆ ಒಳಗಾಗಿ ರಾಜಕೀಯ ಸುದ್ದಿಗಳನ್ನು ತರುತ್ತಾರೆ ಎಂದು ವ್ಯವಸ್ಥೆಯು ಕೂಡ ಅವರನ್ನು ಹೀಯಾಳಿಸುತ್ತದೆ. ವ್ಯವಸ್ಥೆಯ ಆಲೋಚನೆ ಮಹಿಳೆಯ ಲೈಂಗಿಕತೆಯ ಸುತ್ತಲೇ ಸುತ್ತುತ್ತಿರುತ್ತದೆ. ಹಾಗಾಗಿ ಮಹಿಳೆಯರು ಮುಂದೆ ಬರುತ್ತಿದ್ದಾರೆ ಎಂದು ತಿಳಿದರೆ ಅದನ್ನು ಸಹಿಸದ ಪುರುಷ ಮನಸಿನ ವ್ಯವಸ್ಥೆಯು ಆಕೆಯ ಲೈಂಗಿಕತೆಯ ಬಗೆಗೆ ಮಾತನಾಡುವುದರ ಮೂಲಕ ಆಕೆಯ ಸಾಮರ್ಥ್ಯವನ್ನು ಕುಗಿಸುವ ಕೆಲಸ ಮಾಡುತ್ತದೆ. ಅಂದರೆ ಇಲ್ಲಿ ರಾಜಕೀಯ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳೆಯರು ತಾವು ಪಟ್ಟಿರುವ ಕಷ್ಟದ ಬಗ್ಗೆ ಯಾರೂ ಮಾತನಾಡುವುದಿಲ್ಲ. ಬದಲಾಗಿ ಅವರನ್ನು ಹೀಯಾಳಿಸುವ ಕೆಲಸವನ್ನು ಮಾಡುತ್ತದೆ. ಇದು ಎಲ್ಲಾ ಸಂದರ್ಭದಲ್ಲೂ ಮಹಿಳೆಯರ ಮೇಲೆ ನಡೆಯುವಂಥದ್ದಾಗಿದೆ. ಮಾಧ್ಯಮ ಕ್ಷೇತ್ರವೆಂಬುದು ಮಹಿಳೆಯರಿಗೆ ಎಲ್ಲ ಬಗೆಯ ಸ್ವಾತಂತ್ರ್ಯವನ್ನು ನೀಡಿದೆಯಾದರೂ, ಕೆಲಸದ ಸಂದರ್ಭದಲ್ಲಿ ಮಾತ್ರ ತನ್ನ ಪಿತೃಪ್ರಧಾನ ಮೌಲ್ಯಗಳನ್ನು ಬಿಟ್ಟುಕೊಟ್ಟಿಲ್ಲ. ಹಾಗಾಗಿ ಇಂದು

ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸುವುದೂ ಸಹ ಅಷ್ಟು ಸುಲಭದ ಮಾತಲ್ಲ. ಅಂದರೆ ರಾಜಕೀಯ ವಲಯಕ್ಕೆ ಸೇರುವುದು ಎಂದರೆ ಅದು ಗಂಡಿನ ಸರಿಸಮಾನವಾಗಿ ನಿಲ್ಲುವುದು ಎಂದು ತಿಳಿಯುತ್ತಿದೆ ಈ ವ್ಯವಸ್ಥೆ. ಇಂತಹ ಸಂದರ್ಭದಲ್ಲಿ ರಾಜಕೀಯ ವರದಿಗಾರಿಕೆಯೂ ಸಹ ಅದೇ ರೀತಿಯಲ್ಲಿ ಮಹಿಳೆಯರಿಗೆ ಸುಲಭವಾಗಿ ಬಿಟ್ಟುಕೊಟ್ಟಿಲ್ಲ. ಬಿಟ್ಟುಕೊಟ್ಟರೂ ಸಹ ಅದನ್ನು ಸಹಿಸದ ಸ್ಥಿತಿಯಲ್ಲಿ ಪುರುಷ ಮನಸ್ಥಿತಿ ಇರುವುದನ್ನು ಕಾಣಬಹುದು. ಹಲವು ಶತಮಾನಗಳು ಉರುಳಿದರೂ, ಆಧುನಿಕ ಜಗತ್ತಿನಲ್ಲಿ ನಾವು ಬದುಕುತ್ತಿದ್ದರೂ ಈ ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯರನ್ನು ಇಂದಿಗೂ ಒಬ್ಬ ವ್ಯಕ್ತಿಯಾಗಿ ನೋಡಲೇ ಇಲ್ಲ. ಆಕೆಯನ್ನು ದೇಹ ಮೂಲದಿಂದಲೇ ನೋಡುತ್ತಿರುವುದನ್ನು ಗಮನಿಸಬಹುದು. ಹಾಗಾಗಿ ಮಹಿಳೆಯರನ್ನು ಯಾವಾಗಲೂ ಲೈಂಗಿಕ ನೆಲೆಯಲ್ಲಿಯೇ ಗುರುತಿಸುವ ಮತ್ತು ಅದೇ ದೃಷ್ಟಿಕೋನದಿಂದ ಗ್ರಹಿಸುವ ಕೆಲಸವನ್ನು ಯಾವಾಗಲೂ ಮಾಡುತ್ತಲೇ ಇರುತ್ತದೆ. ಕೆಲವು ರಾಜಕೀಯ ವ್ಯಕ್ತಿಗಳು ತಮ್ಮ ಸ್ಥಾನ ಮತ್ತು ಜವಾಬ್ದಾರಿಯನ್ನು ಮರೆತು ಮಹಿಳೆಯರನ್ನು ದೇಹ ಮೂಲದಿಂದಲೇ ನೋಡುವುದು ಮಾಧ್ಯಮದ ರಾಜಕೀಯ ವರದಿಗಾರಿಕೆಯ ಸಂದರ್ಭದಲ್ಲಿ ಕಂಡುಬರುತ್ತದೆ. ಮೇಲಿನ ಪ್ರಕರಣದಲ್ಲಿ ಸೌಮ್ಯ ಅವರು ತಾವು ರಾಜಕೀಯ ವರದಿಯನ್ನು ಮಾಡುವ ಸಂದರ್ಭದಲ್ಲಿ ಒಬ್ಬ ಪ್ರಭಾವಿ ರಾಜಕಾರಣಿ ತನ್ನ ಕೈಯನ್ನು ಮುಟ್ಟಿ ಮಾತನಾಡಿಸಿದ್ದನ್ನು ಪ್ರತಿಭಟಿಸಿದ ಸಂದರ್ಭ ಕಂಡುಬರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ವ್ಯಕ್ತಿಯೊಬ್ಬ ಸಮಾಜದ ಎದುರು ಹೇಗಿರಬೇಕು ಎಂಬ ತಿಳುವಳಿಕೆ ಆತನಿಗೆ ಇದ್ದೇ ಇರುತ್ತದೆ. ಮಹಿಳೆಯರೊಂದಿಗೆ ಅವನು ಹೇಗೆ ವರ್ತಿಸಬೇಕು ಎಂಬ ಅರಿವು ಕೂಡ ಇರುತ್ತದೆ. ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸುವುದು ಅಪರಾಧ ಎಂಬ ಪ್ರಜ್ಞೆ ಕೂಡ ಅವನಿಗೆ ಇದ್ದರೂ, ಅದರ ಅರಿವೂ ಇಲ್ಲದಂತೆ ಅವನು ಹಾಗೆ ವರ್ತಿಸುವುದು ಪುರುಷ ಪ್ರಧಾನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಹಾಗೆಯೇ ಇನ್ನೊಂದು ಪ್ರಕರಣದಲ್ಲಿ ಸಾಕ್ಷಿ ಎಂಬುವವರು ದೊಡ್ಡ ಧ್ವನಿಯ ಮೂಲಕ ಪ್ರಶ್ನೆಗಳನ್ನು ಕೇಳಿದರು ಎಂಬ ಕಾರಣಕ್ಕೆ ರಾಜಕೀಯ ವ್ಯಕ್ತಿಯ ಹಿಂಬಾಲಕ ಮತ್ತು ಅವರ ಜೊತೆಗಿದ್ದ ಇನ್ನೊಂದು ಚಾನೆಲ್‌ನ ವರದಿಗಾರರು ಸಹಿಸಿಕೊಳ್ಳದೇ ಚುಚ್ಚು ಮಾತನಾಡಿದ್ದನ್ನು ಗುರುತಿಸಬಹುದು. ಅಂದರೆ ಮಹಿಳಾ ವರದಿಗಾರ್ತಿಯರು ದೊಡ್ಡ ಧ್ವನಿಯಲ್ಲಿ ಮಾತನಾಡಬಾರದು. ಮಹಿಳೆಯರು ತುಂಬಾ ನಾಜೂಕಾಗಿ ಮಾತನಾಡಬೇಕು. ಸೌಮ್ಯದಿಂದಿರಬೇಕು ಎಂಬುದು ಪುರುಷ ಪ್ರಧಾನ ವ್ಯವಸ್ಥೆಯ ಆಶಯ ಮತ್ತು ಮೌಲ್ಯಕ್ಕೆ ಉದಾಹರಣೆಯಾಗಿದೆ. ಮಹಿಳೆಯರು ಜೋರು ಧ್ವನಿಯಲ್ಲಿ ಮಾತನಾಡುತ್ತಾರೆ ಅಂದರೆ ಸಮಾಜ ಅದನ್ನು ಸಹಿಸುವುದಿಲ್ಲ. ಸಮಾಜದಲ್ಲಿ ಮಹಿಳೆಯು ಯಾವಾಗಲೂ ಗಂಡಿನ ಅಧೀನದಲ್ಲಿಯೇ ಇರಬೇಕು. ಅವನ ಎದುರು ನಿಂತು ಮಾತನಾಡುವುದು ಅಪರಾಧ. ಗಂಡಸಿಗೆ ಎದುರಾಡುವುದು ನಿಷಿದ್ಧ ಎಂದು ವ್ಯವಸ್ಥೆ ಬಯಸುತ್ತದೆ. ಇಲ್ಲಿ ಸಾಕ್ಷಿಯವರು ಗಟ್ಟಿ ಧ್ವನಿಯನ್ನು ಹೊಂದಿರುವ ಕಾರಣಕ್ಕೆ ಪುರುಷನಿಗೆ ಅಭದ್ರತೆ ಕಾಡಿದೆ. ಅಂದರೆ ಮಹಿಳಾ ಧ್ವನಿ ದೊಡ್ಡದಾದಾಗ

ಪುರುಷನಿಗೆ ಅಲ್ಲಿ ಸ್ಥಳಾವಕಾಶವೇ ಇಲ್ಲದಾಗುತ್ತದೆ. ಹಾಗಾಗಿ ಅವನು ಯಾವಾಗಲೂ ಅಂತಹ ಮಹಿಳೆಯರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾನೆ. ಈ ಹಿನ್ನೆಲೆಯಲ್ಲಿಯೇ ಸಾಕ್ಷಿಯವರ ಸಹೋದ್ಯೋಗಿ ಆಕೆಯನ್ನು ಸೌಮ್ಯದಿಂದ ಮಾತನಾಡಲು ತಿಳಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಹಿಳೆಯು ಸೌಮ್ಯದಿಂದ ಮಾತನಾಡಿದರೆ ಮಾತ್ರ ಉದ್ಯೋಗ ಕ್ಷೇತ್ರದಲ್ಲಿ ಶಾಶ್ವತವಾಗಿ ನೆಲೆಯೂರಲು ಸಾಧ್ಯ ಎಂದು ಹೇಳುವ ಪುರುಷ ವ್ಯವಸ್ಥೆಯ ಆ ಮಾತು ಮಹಿಳೆಯರಿಂದ ಏನನ್ನು ನಿರೀಕ್ಷಿಸುತ್ತದೆ ಎಂಬುದನ್ನು ತಿಳಿಸುತ್ತದೆ. ಪ್ರಮುಖವಾಗಿ ಮಹಿಳೆಯರ ಅಭಿವ್ಯಕ್ತಿ ಮತ್ತು ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಪ್ರಯತ್ನವಿದು. ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಕಂಡುಬರುವ ವಾಕ್ ಸ್ವಾತಂತ್ರ್ಯವನ್ನು ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿಯ ಕೆಲಸ ಮಾಡುವ ಪತ್ರಕರ್ತೆಯರಿಗೆ ಕಸಿದುಕೊಳ್ಳಲಾಗುತ್ತಿದೆ. ಆ ಮೂಲಕ ಸಂವಿಧಾನದ ಆಶಯಗಳಿಗೆ ವಿರುದ್ಧದ ಕೆಲಸ ಮಾಧ್ಯಮ ಕ್ಷೇತ್ರದಲ್ಲಿ ನಡೆದಿರುವುದು ಕಂಡು ಬರುತ್ತದೆ. ಸಂವಿಧಾನದ 19ನೇ ಅನುಚ್ಛೇದದಂತೆ ಭಾರತದ ಎಲ್ಲ ನಾಗರಿಕರಿಗೂ ಅನ್ವಯಿಸುವಂತೆ ಆರು ಮೂಲಭೂತ ಹಕ್ಕುಗಳನ್ನು ಒದಗಿಸಿಕೊಟ್ಟಿದೆ. ಅದರಲ್ಲಿ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಒಂದಾಗಿದೆ. ಅಂದರೆ ದೇಶದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ವಾಕ್ ಸ್ವಾತಂತ್ರ್ಯವನ್ನು ಮತ್ತು ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿದೆ. ಆದರೆ ಇದು ವ್ಯವಸ್ಥಿತವಾಗಿ ಜಾರಿಯಲ್ಲಿಲ್ಲ. ಎಲ್ಲರಿಗೂ ಅದು ಸಲ್ಲುತ್ತಿದೆ. ಕೇವಲ ಪುರುಷರಿಗೆ ಮಾತ್ರ ಇವುಗಳ ಅನ್ವಯ ಆಗುತ್ತಿವೆ ಎಂಬ ಅನುಮಾನ ಹುಟ್ಟುವಂತಹ ರೀತಿಯಲ್ಲಿ ಸಮಾಜ ರೂಪಗೊಂಡಿದೆ. ಹಾಗಾಗಿಯೇ ಮೇಲಿನ ಪ್ರಕರಣದಲ್ಲಿ ಮಹಿಳೆಯರು ಗಟ್ಟಿಯಾಗಿ ಮಾತನಾಡುವುದಕ್ಕೆ ನಿರ್ಬಂಧಿಸುವುದನ್ನು ಕಾಣಬಹುದು. ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಅನುಕೂಲಕ್ಕೆ ತಕ್ಕಂತೆ ಸಂವಿಧಾನದ ನಿಯಮಗಳನ್ನೂ ಸಹ ಗಾಳಿಗೆ ತೂರುವ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಈ ಮೂಲಕ ಮಹಿಳೆಯರನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಮುಂದಾಗಿರುವುದನ್ನೂ ಕಾಣಬಹುದು.

ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ರಾಜಕೀಯ ವರದಿ ಮಾಡುವುದು ಎಂದರೆ ಮಹಿಳೆಯರಿಗೆ ನಿಲುಕದ ಸಂಗತಿ ಎಂದೇ ತಿಳಿಯಲಾಗಿದೆ. ಆದರೆ ಈ ಅಂಶವನ್ನು ಕೆಲವು ಮಹಿಳೆಯರು ತಮಗೆ ಪುರುಷ ವ್ಯವಸ್ಥೆಯು ನೀಡುವ ಕಿರುಕುಳಗಳ ನಡುವೆಯೇ ಕೆಲಸ ಮಾಡುತ್ತಿದ್ದಾರೆ. ತಾವೂ ಕೂಡ ರಾಜಕೀಯ ವರದಿಯನ್ನು ಮಾಡಲು ಸಮರ್ಥರು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಮೂಲಕ ಪಿತೃಪ್ರಧಾನ ವ್ಯವಸ್ಥೆಯ ಸ್ಥಾಪಿತ ಗ್ರಹಿಕೆಯನ್ನು ಅವರು ಒಡೆದಿದ್ದಾರೆ.

ಆ. ಕ್ರೈಂ (ಅಪರಾಧ) ವರದಿ ಮಾಡುವ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು : ಕ್ರೈಂ (ಅಪರಾಧ ಹಿನ್ನೆಲೆಯ) ವರದಿ ಮಾಡುವುದು ತುಂಬಾ ಕ್ಲಿಷ್ಟಕರವಾದ ಸಂಗತಿ. ಅಪರಾಧ ವರದಿಗಾರಿಕೆ ಎನ್ನುವುದು ಕೊಲೆ, ಸುಲಿಗೆ, ಅಪಘಾತಗಳು ಹೀಗೆ ಹಲವು ಅಂಶಗಳು

ಒಳಗೊಂಡಿದ್ದು. ಈ ಬಗೆಯ ವಿಷಯಗಳಿಗೆ ಸಂಬಂಧಿಸಿದಂತೆ ವರದಿ ಮಾಡಲು ತುಂಬಾ ಧೈರ್ಯ ಬೇಕು. ಹಾಗಾಗಿ ಮಹಿಳೆಯರು ಇದಕ್ಕೆ ಒಗ್ಗಿಕೊಳ್ಳುವುದಿಲ್ಲ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಅವರು ವರದಿ ತರಲು ಸಾಧ್ಯವಿಲ್ಲ ಎಂಬ ನಂಬಿಕೆ ಪುರುಷ ಪ್ರಧಾನ ವ್ಯವಸ್ಥೆಯದ್ದು. ಆದರೆ ಈ ನಂಬಿಕೆಯನ್ನು ಕೆಲವು ಮಹಿಳೆಯರು ಹುಸಿಗೊಳಿಸಿದ್ದಾರೆ. ಅಂದರೆ ವಿದ್ಯುನ್ಮಾನ ಮಾಧ್ಯಮಕ್ಕೆ ಮಹಿಳೆಯರು ಪ್ರವೇಶ ಪಡೆದ ನಂತರ ಕ್ರೈಂ ರಿಪೋರ್ಟಿಂಗ್ ಮಾಡಲು ಹಲವು ಮಹಿಳೆಯರು ತಯಾರಾಗಿದ್ದನ್ನು ಕಾಣಬಹುದು. ಈಗ ಅವರ ಹಿಂದೆಯೇ ಹಲವು ಮಹಿಳೆಯರು ಸಾಗಿ ಯಶಸ್ವಿಯಾಗಿ ನಿಭಾಯಿಸಿದ ಉದಾಹರಣೆಗಳು ನಮ್ಮ ಕಣ್ಮುಂದಿವೆ.

ಅಪರಾಧ ಜಗತ್ತಿನ ವರದಿಗಾರಿಕೆ ಮಾಡುವ ಸಂದರ್ಭದಲ್ಲಿ ಮಹಿಳೆಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಿದ್ದನ್ನು ಕಾಣಬಹುದು. ಹೌದು, ಪ್ರತಿಯೊಂದು ವಲಯದಲ್ಲೂ ಮಹಿಳೆಯರು ನಾನಾ ರೀತಿಯ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಅದು ವಿದ್ಯುನ್ಮಾನ ಮಾಧ್ಯಮಕ್ಕೂ ವಿಸ್ತರಿಸಿದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕ್ರೈಂ ರಿಪೋರ್ಟಿಂಗ್ ವಿಭಾಗಕ್ಕೆ ಸೇರಿಕೊಂಡು ಅಲ್ಲಿನ ಸಮಸ್ಯೆಗಳನ್ನು ಮತ್ತು ಹಿಂಸೆಗಳನ್ನು ಎದುರಿಸಿ ಮುಂದೆ ಬಂದಂತಹ ಮಹಿಳೆಯರು ಅವರು ಎದುರಿಸಿದ ಅಥವಾ ಅನುಭವಿಸಿದ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಅವುಗಳು ಇಲ್ಲಿ ಅವರ ಮಾತಿನಲ್ಲಿಯೇ ಇವೆ.

ಭವ್ಯಾ ಎಂಬುವವರು ವಿದ್ಯುನ್ಮಾನ ಮಾಧ್ಯಮದಲ್ಲಿ ಕ್ರೈಂ ರಿಪೋರ್ಟರ್ ಆಗಿ ಖಾಸಗಿ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಹೇಳುವಂತೆ "ಮಹಿಳೆಯರು ರಾಜಕೀಯ ವರದಿಗಾರಿಕೆಯನ್ನು ಹೇಗೋ ನಿಭಾಯಿಸಿ ಬಿಡಬಹುದು. ಆದರೆ, ಅಪರಾಧ ವರದಿಗಾರಿಕೆ (ಕ್ರೈಂ ವರದಿಗಾರಿಕೆ) ಮಾಡುವುದು ತೀರಾ ಕಷ್ಟ ಎಂಬ ಠಸ್ಸೆಯನ್ನು ಆಯಾ ಮಾಧ್ಯಮ ಸಂಸ್ಥೆಗಳು ಮತ್ತು ಮುಖ್ಯಸ್ಥರು ಮಹಿಳೆಯರ ಮೇಲೆ ಒತ್ತಿಬಿಟ್ಟಿವೆ. ಕೆಲಸಕ್ಕೆ ಸೇರಿಕೊಳ್ಳುವ ಸಂದರ್ಭದಲ್ಲಿ ನಾನೇ ಕ್ರೈಂ ರಿಪೋರ್ಟಿಂಗ್ ವಿಭಾಗ ಕೇಳಿದೆ. ನನ್ನ ಮಾತನ್ನು ಕೇಳಿಸಿಕೊಂಡವರು ಅಚ್ಚರಿಯಿಂದಲೇ ನನ್ನತ್ತ ನೋಡಿದ್ದರು. ಆಫೀಸ್‌ನಲ್ಲಿ ಮಾತ್ರವಲ್ಲ ನನ್ನ ಪರಿಚಿತರು ಕೂಡ ನೀನು ಕ್ರೈಂ ರಿಪೋರ್ಟರಾ ಅಂತ ಅನುಮಾನದಿಂದಲೇ ನೋಡಿದರು.

ಅಪರಾಧ ಲೋಕದ ವರದಿಗಾರಿಕೆ ಅಂದಾಕ್ಷಣ ಅವರೆಲ್ಲ ಅಚ್ಚರಿ ಮತ್ತು ಅನುಮಾನದಿಂದ ನೋಡುವುದಕ್ಕೆ ಕಾರಣವೂ ಇದೆ. ಅಪರಾಧ ಜಗತ್ತಿಗೆ ಪ್ರವೇಶ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಅಪರಾಧ ಹೇಗೆ ನಡೆಯುತ್ತದೆ ಮತ್ತು ಎಲ್ಲಿ ನಡೆಯುತ್ತದೆ ಎಂದು ಊಹಿಸುವುದೂ ಕಷ್ಟ. ಬೇರೆ ಬೇರೆ ಕ್ಷೇತ್ರಗಳಾದರೆ ನಿರ್ದಿಷ್ಟ ಪ್ರದೇಶ ಅಂತಿರುತ್ತದೆ. ಅನೇಕ ಪತ್ರಿಕಾಗೋಷ್ಠಿಗಳು ನಡೆಯುತ್ತವೆ. ಸುದ್ದಿಯನ್ನು ಬೇಗ ಸಂಗ್ರಹಿಸಿ ಬಿಡಬಹುದು. ಆದರೆ, ಕ್ರೈಂ ರಿಪೋರ್ಟಿಂಗ್ ಅಷ್ಟು ಸುಲಭಕ್ಕೆ ದಕ್ಕುವುದಿಲ್ಲ. ಅಪರಾಧ ನಡೆದ ಸ್ಥಳಕ್ಕೆ ಹೋಗಬೇಕು.

ಕಾಯಬೇಕು. ತನಿಖಾ ಸಂಸ್ಥೆಯಂತೆ ಸುದ್ದಿಯ ಮೂಲವನ್ನು ಹುಡುಕಬೇಕು. ಮೂಲೆ ಮೂಲೆಗೂ ಸುತ್ತಿ ಸುದ್ದಿ ಮಾಡಬೇಕು. ಅದು ಕೊಲೆಯಾಗಿರಬಹುದು, ಭೂಗತ ಜಗತ್ತಿನ ಕೌತುಕವೇ ಇರಬಹುದು. ಆತ್ಮಹತ್ಯೆ, ಅತ್ಯಾಚಾರ, ಕಳ್ಳತನ, ಅಪಘಾತ ಹೀಗೆ ಶಿಕ್ಷಿಸಲ್ಪಡುವ ಅಪರಾಧ ಮತ್ತು ಅಪರಾಧಿಗಳ ಬಗ್ಗೆ ನಾವು ಸುದ್ದಿ ಮಾಡಬೇಕು. ಅದೊಂದು ಪಾತಕ ಜಗತ್ತಿನ ಕಥನವೂ ಆಗಿರುವುದರಿಂದ ಅಲ್ಲಿ ಗಂಡಸಿಗೆ ಮಾತ್ರ ಪ್ರವೇಶ ಎನ್ನುವಂತಾಗಿದೆ. ಹಾಗಂತ ನಂಬಿಸಲಾಗಿದೆ. ಹಾಗಾಗಿ ಈ ವಿಭಾಗದಲ್ಲಿ ಹೆಚ್ಚು ಹುಡುಗಿಯರು ಕಾಣಿಸುವುದಿಲ್ಲ. ಅಂತಹ ವರದಿಯನ್ನು ನಾವು ಯಾಕೆ ಮಾಡಬಾರದು ಅಂತ ವರದಿಗಾರ್ತಿಯರು ಸಿದ್ಧರಾದರೆ ಅವರಿಗೆ ಹೆಜ್ಜೆ ಹೆಜ್ಜೆಗೂ ಅಡೆತಡೆಗಳು, ನೂರೆಂಟು ಸಮಸ್ಯೆಗಳು ಎದುರಾಗುತ್ತವೆ.

ಸದ್ಯ ಕನ್ನಡ ಚಾನೆಲ್‌ಗಳಲ್ಲಿ ಕೇವಲ ಮೂವರು ಹುಡುಗಿಯರು ಮಾತ್ರ ಅಪರಾಧ ಕ್ಷೇತ್ರದ ವರದಿಗಾರಿಕೆಯಲ್ಲಿ ತೊಡಗಿಕೊಂಡಿದ್ದೇವೆ. ಅದರಲ್ಲೂ ಒಂದು ಹುಡುಗಿಗೆ ಮದುವೆ ಆಯಿತು. ನಂತರ ಆಕೆಯ ಮನೆಯವರು ಈ ಕೆಲಸದಿಂದಲೇ ಬಿಡಿಸಿಬಿಟ್ಟರು.

ಸಾಮಾನ್ಯವಾಗಿ ಕ್ರೈಂ ವರದಿಗಾರಿಕೆ ಎನ್ನುವುದು ಫೀಲ್ಡ್ (ಘಟನೆ ನಡೆದ ಸ್ಥಳ) ವರ್ಕ್ ಅವಲಂಬಿಸಿರುತ್ತದೆ. ಘಟನೆಯಾದ ಸ್ಥಳಕ್ಕೆ ಹೋಗಿ ಸುದ್ದಿ ಸಂಗ್ರಹಿಸುವುದು, ಪೂರಕ ಮಾಹಿತಿ ಪಡೆದುಕೊಳ್ಳುವುದು, ಘಟನೆಗೆ ಸಂಬಂಧಿದ ವ್ಯಕ್ತಿಯನ್ನು ಮಾತನಾಡಿಸುವುದು, ಅದರ ಚಿತ್ರೀಕರಣ ಮಾಡುವುದು, ಪೊಲೀಸ್ ಇಲಾಖೆಯಿಂದ ಮಾಹಿತಿ ಕಲೆ ಹಾಕುವುದು. ಅದರಲ್ಲೂ ಕೊಲೆಯಂತಹ ಘಟನೆಯಾದಾಗ ಕೊಲೆಯಾದ ವ್ಯಕ್ತಿಯ ಹಿನ್ನೆಲೆ ವಿಚಾರಿಸುವುದು, ಅಪರಾಧಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಯ ಜೊತೆ ಮಾಹಿತಿ ಕಲೆ ಹಾಕೋದು.. ಹೀಗೆ ಬಿಡುವಿಲ್ಲದ ಕೆಲಸ ಇದ್ದೇ ಇರುತ್ತದೆ. ಜೊತೆಗೆ ಯಾವ ಟೈಮ್‌ನಲ್ಲಿ ಎಂತಹ ಅವಘಡ ಸಂಭವಿಸತ್ತೋ ಗೊತ್ತಿಲ್ಲ. ಮರ್ಡರ್, ಆಕ್ಸಿಡೆಂಟ್ ಆದ ಜಾಗಕ್ಕೆ ಹೋದಾಗ, ನಾನು ಹುಡುಗಿ ಅನ್ನುವ ಕಾರಣಕ್ಕಾಗಿ ನೆರೆದವರು ನನ್ನನ್ನು ವಿಚಿತ್ರವಾಗಿ ನೋಡಿದ್ದೂ ಇದೆ. ಇಂತಹ ಸುದ್ದಿ ಮಾಡುವುದಕ್ಕೆ ನನ್ನಂತಹ ಹುಡುಗಿಯರು ಬರುವುದು ಅಪರಾಧ ಅನ್ನುವಂತೆಯೇ ಮಾತಾಡಿದ್ದೂ ಇದೆ.

ಎಲ್ಲರಿಗೂ ಗೊತ್ತಿರುವಂತೆ ಜಾಸ್ತಿ ಮರ್ಡರ್ ಆಗುವುದು ತಡರಾತ್ರಿ ಅಥವಾ ಬೆಳಗಿನ ಜಾವ. ಕಾನೂನುಬಾಹಿರ ಚಟುವಟಿಕೆಗಳು ನಡೆಯುವ ಸ್ಥಳಕ್ಕೆ ಪೊಲೀಸ್‌ನವರು ದಾಳಿ ಮಾಡುವುದು ಕೂಡ ನಸುಕಿನಲ್ಲಿಯೇ. ಈ ವಿಷಯಗಳು ನಮಗೆ ಗೊತ್ತಾಗುತ್ತಿದ್ದಂತೆಯೇ ನಾವು ಆ ಸ್ಪಾಟ್‌ಗೆ ಹೊರಡಬೇಕು. ಒಂದು ಸಾರಿ ಹೀಗೆ ಆಯಿತು. ಬೆಳಗಿನ ಜಾವ ಒಂದು ಮರ್ಡರ್ ಆಗಿತ್ತು. ಹೆಣ ಬಿದ್ದಿರುವ ವಿಷಯ ನಮ್ಮ ಗಮನಕ್ಕೆ ಬರುತ್ತಿದ್ದಂತೆಯೇ ನನ್ನ ಕ್ಯಾಮೆರಾಮೆನ್‌ಗೆ ಫೋನ್ ಮಾಡಿದೆ. ಇಬ್ಬರೂ ಸ್ಥಳಕ್ಕೆ ಧಾವಿಸಿದೆವು. ಆಗಲೇ ಸ್ಥಳಕ್ಕೆ ಪೊಲೀಸ್ ಬಂದಾಗಿತ್ತು. ಡೆಡ್ ಬಾಡಿಯನ್ನು ಮಹಜರ್ ಮಾಡಿ ಅಲ್ಲಿಂದ ಆಸ್ಪತ್ರೆಗೆ ಕಳುಹಿಸೋತನಕ ನಾವು

ಸ್ಪಾಟ್‌ನಲ್ಲಿಯೇ ಇದ್ದೆವು. ಆಸ್ಪತ್ರೆಯಿಂದ ಆ ಬಾಡಿ ಅವರ ಮನೆಗೆ ತಲುಪುವರೆಗೂ ಸುದ್ದಿಗಾಗಿ ಕಾಯ್ದುಕೊಂಡು ಕುಳಿತಿದ್ದೆವು. ಸಂಪೂರ್ಣ ಮಾಹಿತಿ ಸಿಗಬೇಕು ಅಂದರೆ ಹಾಗೆ ಕಾಯಲೇಬೇಕು. ಹಾಗಾಗಿ ಒಂದು ಕೇಸ್ ಇಡೀ ದಿನವನ್ನು ನುಂಗಿ ಬಿಡುತ್ತದೆ. ಹೆಣ ಬಿದ್ದಿದ್ದ ಸ್ಥಳದಲ್ಲಿ ಕುಡಿಯೋದಕ್ಕೆ ನೀರೂ ಕೂಡ ಸಿಗ್ತಿರಲಿಲ್ಲ. ತುಂಬಾ ಕಷ್ಟವಾಯಿತು. ಅದೇ ಸಮಯಕ್ಕೆ ನನಗೆ ತಿಂಗಳ ಸಮಸ್ಯೆ ಕೂಡ ಆಗಿತ್ತು. ನನ್ನ ಪರಿಸ್ಥಿತಿ ಹೇಳತೀರದು. ಯಾರಿಗೂ ಹೇಳುವ ಹಾಗಿಲ್ಲ. ಅದು ಬೆಳಗಿನಜಾವ. ಏನು ಮಾಡಬೇಕು ಎಂಬುದೇ ತಿಳಿಯಲಿಲ್ಲ. ಆಫೀಸ್ ತಲುಪುವ ಹೊತ್ತಿಗೆ ನಾನು ಹೈರಾಣಾಗಿ ಹೋಗಿದ್ದೆ.

ಕ್ರೈಂ ನ್ಯೂಸ್ ಅಂದಾಕ್ಷಣ ಹೆಚ್ಚು ಪೊಲೀಸ್ ಇಲಾಖೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕು. ನಮಗೆ ಮಾಹಿತಿ ಕೊಡುವವರೇ ಅವರು. ನಾನು ಹುಡುಗಿಯಾಗಿದ್ದರಿಂದ ನನ್ನಿಂದ ಅವರಿಗೆ ಯಾವ ರೀತಿ ಲಾಭ ಆಗುತ್ತದೆ ಅಂತ ಅವರೂ ನಿರೀಕ್ಷೆ ಮಾಡುತ್ತಾರೆ ಅನಿಸತ್ತೆ. ಲಾಭವಿದ್ದರೆ ನಮಗೆ ಸರಿಯಾದ ಮಾಹಿತಿ ಕೊಡುತ್ತಾರೆ. ಇಲ್ಲವಾದರೆ ಕಚೇರಿಗೆ ಅಲೆದಾಡಿಸುತ್ತಾರೆ. ಸರಿಯಾದ ಮಾಹಿತಿ ಸಿಗದೇ ನ್ಯೂಸ್ ಮಾಡಲು ಆಗುವುದಿಲ್ಲ. ನಮಗೆ ಸುದ್ದಿ ಸಿಗದೇ ಇದ್ದಾಗ ವಿಭಾಗದ ಮುಖ್ಯಸ್ಥರು ಒತ್ತಡ ಹಾಕೋಕೆ ಶುರು ಮಾಡುತ್ತಾರೆ. ಬೇರೆ ಚಾನೆಲ್‌ಗೆ ಸಿಗುವ ಸುದ್ದಿ ನಿನಗೇಕೆ ಸಿಗುವುದಿಲ್ಲ ಎಂದು ಪ್ರಶ್ನೆ ಮಾಡುತ್ತಾರೆ. ಈ ವಿಭಾಗದಿಂದ ಶಿಫ್ಟ್ ಮಾಡುವ ಬೆದರಿಕೆಯನ್ನೂ ಹಾಕುತ್ತಾರೆ. ಕೆಲವು ಬಾರಿ ಅಂತಹ ಸನ್ನಿವೇಶ ನನ್ನ ಜೀವನದಲ್ಲಿಯೇ ನಡೆದಿದೆ. ಅಪರಾಧ ಜಗತ್ತಿನ ಜೊತೆಗೆ ಸ್ಟ್ರಿಂಗ್ ಆಪರೇಷನ್ (ಕುಟುಕು ಕಾರ್ಯಾಚರಣೆ) ಕೂಡ ತಳುಕು ಹಾಕಿಕೊಂಡಿದೆ. ಕುಟುಕು ಕಾರ್ಯಚರಣೆಯ ಸ್ವರೂಪವೇ ಬೇರೆ. ನಾವೇ ಸತ್ಯವನ್ನು ಹುಡುಕಿಕೊಂಡು ಹೋಗಬೇಕು. ನಾವೇ ತನಿಖಾಧಿಕಾರಿಯಂತೆ ಕೆಲಸ ಮಾಡಬೇಕು. ತನಿಖೆ ಮಾಡುವಾಗ ಜೀವಕ್ಕೆ ಅಪಾಯವಾಗುವಂತಹ ಸನ್ನಿವೇಶ ಎದುರಾಗುತ್ತವೆ. ಎದುರಾಳಿ ನಮ್ಮ ಮೇಲೆ ಯಾವಾಗ ಅಟ್ಯಾಕ್ ಮಾಡುತ್ತಾನೋ ಗೊತ್ತಿಲ್ಲ. ಸ್ಟ್ರಿಂಗ್ ಮಾಡಿದ ಮೇಲೆ ನಮಗೆ ಸತ್ಯದ ದರ್ಶನ ಆಗದೇ ಹೋಗಬಹುದು. ಸಾಮಾನ್ಯವಾಗಿ ಒಂಟಿಯಾಗಿಯೇ ಸ್ಟ್ರಿಂಗ್ ಆಪರೇಷನ್ ಮಾಡಬೇಕಾಗಿಯೂ ಬರಬಹುದು. ಏನೆಲ್ಲ ಕಷ್ಟಪಟ್ಟು ಸುದ್ದಿ ತಂದರೂ, ನಮಗೆ ಮಾನಸಿಕ ಕಿರುಕುಳ ತಪ್ಪಿದ್ದಲ್ಲ. ನಾವು ಯಾರ ಮೇಲೆ ಸ್ಟ್ರಿಂಗ್ ಮಾಡಿರುತ್ತೇವೆಯೋ ಅವರು ನೇರವಾಗಿ ನಮ್ಮ ಮೇಲೆ ದಾಳಿ ಮಾಡಬಹುದು. ಆಗ ನಮಗೆ ಯಾವ ರಕ್ಷಣೆಯೂ ಇರುವುದಿಲ್ಲ. ಹೀಗೆಯೇ ಒಂದು ಬಾರಿ ನಡೆಯಿತು. ಬೆಂಗಳೂರಿನಲ್ಲಿಯೇ ಒಂದು ಸ್ಟ್ರಿಂಗ್ ಆಪರೇಷನ್ ಮಾಡಿದ್ದೆ. ಅದು ತುಂಬಾ ದೊಡ್ಡದಾದ ರಹಸ್ಯ ಕಾರ್ಯಾಚರಣೆಯೇ ಆಗಿತ್ತು. ನಮ್ಮ ಚಾನೆಲ್‌ನ ಟಿಆರ್‌ಪಿ ಕೂಡ ಅದರಿಂದಾಗಿ ಹೆಚ್ಚಾಗಿತ್ತು. ಕಾರ್ಯಕ್ರಮದ ಮುಖ್ಯಸ್ಥರಿಗೆ ಬೆದರಿಕೆಯ ಕರೆಗಳು ಬಂದವು. ಆದರೆ, ಕೊನೆಗೆ ಬಲಿಪಶುವಾಗಿದ್ದು ನಾನು. ಸ್ಟ್ರಿಂಗ್ ಮಾಡಿಸಿಕೊಂಡವರು ನನ್ನ ಮೇಲೆ ಕಾನೂನು ಸಮರ ಹೂಡಿದರು. ನಮ್ಮ ಟೀಮ್ ಮೇಲೆ ಕೇಸ್ ಹಾಕಿದರು. ಆ ಪ್ರಕರಣ ಇನ್ನೂ ಕೋರ್ಟಿನಲ್ಲಿ ನಡೆಯುತ್ತಲೇ ಇದೆ. ಈಗ ನಾನು ಆ

ಚಾನೆಲ್ ಬಿಟ್ಟು, ಬೇರೆ ವಾಹಿನಿ ಸೇರಿಕೊಂಡಿದ್ದೇನೆ. ಆದರೂ, ಆ ಕೇಸ್‌ನಿಂದ ಕಿರುಕುಳ ತಪ್ಪಿಲ್ಲ. ಕೋರ್ಟ್‌ನಿಂದ ನೋಟಿಸ್‌ಗಳು ಬರುತ್ತಲೇ ಇವೆ. ಲಾಯರ್ ಫೀಸ್ ಕಟ್ಟಬೇಕು. ಕೆಲಸ ಬಿಟ್ಟು ಕೋರ್ಟ್‌ಗೆ ಅಲೆಯಬೇಕು. ಕೋರ್ಟ್ ಅಟೆಂಡ್ ಮಾಡಲು ರಜೆ ಸಿಗುವುದಿಲ್ಲ. ನಾನು ಸ್ಟ್ರಿಂಗ್ ಮಾಡಿಕೊಟ್ಟ ಚಾನೆಲ್ ಕೂಡ ನನ್ನ ಬೆನ್ನಿಗೆ ನಿಂತಿಲ್ಲ. ಹೀಗೆ ಕೆಲಸ ಮಾಡಿದ ಸಂಸ್ಥೆಗಳೇ ನಮ್ಮ ಸಪೋರ್ಟ್‌ಗೆ ಬಾರದೇ ಇರುವಾಗ ಈ ಕೆಲಸ ನಮಗೆ ಬೇಕಿತ್ತಾ ಅಂತ ಅನ್ನಿಸಿದ್ದು ಬಹಳಷ್ಟಿದೆ" ಎಂದು ಹೇಳಿದರು.

ಕ್ರೈಂ ವರದಿ ಮಾಡಲು ಧೈರ್ಯ ಬೇಕು ಎನ್ನುವುದನ್ನು ಒಪ್ಪಿಕೊಳ್ಳಬೇಕು. ಅದು ಗಂಡಸರಿಗೆ ಇರಬೇಕಾದ ಧೈರ್ಯವಲ್ಲ, ಎಲ್ಲರಲ್ಲೂ ಇರಬಹುದಾದ ಧೈರ್ಯ. ಈ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಜೀವಕ್ಕೆ ಅಪಾಯ ಉಂಟಾಗುವ ಘಟನೆಗಳು ನಡೆಯುತ್ತವೆ. ಅದನ್ನು ದಾಟಿಕೊಂಡು ಮತ್ತೆ ಸುದ್ದಿ ಹುಡುಕುವ ಹುಮ್ಮಸ್ಸು ಬೇಕಾಗುತ್ತದೆ. ಹಾಗಾಗಿಯೇ ಕ್ರೈಂ ವರದಿಗಾರರು ಜೀವದ ಹಂಗು ತೊರೆದು ಆ ಕೆಲಸಕ್ಕೆ ಇಳಿಯುತ್ತಾರೆ. ಮೇಲಿನ ಪ್ರಕರಣದಲ್ಲಿ ಹೇಳುವಂತೆ ಮಹಿಳೆಯರು ಇಂತಹದ್ದೇ ಕೆಲಸಗಳನ್ನು ಮಾಡಬೇಕು ಎಂಬುದನ್ನು ಈಗಾಗಲೇ ಪಿತೃಪ್ರಧಾನ ವ್ಯವಸ್ಥೆ ನಿರ್ಧರಿಸಿಬಿಟ್ಟಿದೆ. ಹಾಗಾಗಿ ಅವರು ನಿರ್ಧರಿಸಿರುವಂತಹ ಕೆಲಸಗಳ ಆಚೆ ಮಹಿಳೆ ಏನಾದರೂ ಆಲೋಚಿಸಿದರೆ ಅಂತಹ ಮಹಿಳೆಯರನ್ನು ಆಶ್ಚರ್ಯದಿಂದ ಮತ್ತು ಅನುಮಾನದಿಂದ ನೋಡಲಾಗುತ್ತದೆ. ಇದು ಎಲ್ಲ ಸಂದರ್ಭಗಳಲ್ಲೂ ಬಹುತೇಕ ವಲಯಗಳಲ್ಲೂ ಮಹಿಳೆಯರಿಗೆ ಎದುರಾಗಬಲ್ಲ ಸಂದರ್ಭ. ಹಾಗಾಗಿ ಮಾಧ್ಯಮ ಕ್ಷೇತ್ರದಲ್ಲಿ ಮಹಿಳೆಯರು ಕ್ರೈಂ ರಿಪೋರ್ಟಿಂಗ್ ಮಾಡಲು ಕೇಳಿದರೆ ಅಥವಾ ಅಪರಾಧ ವರದಿಗಾರಿಕೆ ಮಾಡುತ್ತಿದ್ದರೆ ಅವರನ್ನು ನಮ್ಮ ವ್ಯವಸ್ಥೆ ಅನುಮಾನದಿಂದಲೇ ನೋಡುತ್ತದೆ. ಇದು ಸರಿಯಲ್ಲ. ಏಕೆಂದರೆ ಹೀಗೆ ಮಾಡುವುದು ಪುರುಷ ವ್ಯವಸ್ಥೆಯ ಮನಸ್ಥಿತಿಯನ್ನು ತೋರಿಸುತ್ತದೆ. ಈ ವಲಯದಲ್ಲಿ ಗುರುತಿಸಬಹುದಾದ ಮತ್ತೊಂದು ಅಂಶವೆಂದರೆ, ಕ್ರೈಂ ವರದಿಗಾರಿಕೆ ಇರುವುದು ಕೇವಲ ಪುರುಷರಿಗಾಗಿ ಎಂಬ ಧೋರಣೆ ಇರುವುದನ್ನು ಕಾಣಬಹುದು. ಮೇಲಿನ ಪ್ರಕರಣದಲ್ಲಿ ಹೇಳುವಂತೆ ಮಹಿಳೆಯರು ಎಷ್ಟೇ ಕಷ್ಟಪಟ್ಟು ಕೆಲಸ ಮಾಡಿದರೂ ಅವರಿಗೆ ಸಿಗುವ ಪ್ರತಿಫಲ ಮಾತ್ರ ಶೂನ್ಯ. ಇದೇ ಕೆಲಸವನ್ನು ಪುರುಷರು ಮಾಡಿದ್ದರೆ ಅವರಿಗೆ ಸಿಗುವ ಗೌರವ, ಬೆಂಬಲ ಬೇರೆಯದೇ ಆಗಿರುತ್ತಿತ್ತು. ಸಮಾಜದ ಸಾಂಪ್ರದಾಯಿಕ ಮೌಲ್ಯಗಳು ಸ್ತ್ರೀ–ಪುರುಷರ ದುಡಿಮೆಯ ನಡುವೆ ತಾರತಮ್ಯ, ಬೇಧ ಭಾವ ಹಾಗೂ ನಿರ್ಬಂಧಗಳನ್ನು ಸೃಷ್ಟಿಸಿವೆ. ಈ ಮೌಲ್ಯಗಳು ಸ್ತ್ರೀಯರು ಮನೆಯಿಂದ ಹೊರಗೆ ಬಂದು ದುಡಿಯುವುದನ್ನು ನಿರಾಕರಿಸುತ್ತದೆ. ಹಾಗಾಗಿ ಮಹಿಳೆಯರು ಕ್ರೈಂ ವರದಿಯಂತಹ ಕೆಲಸಗಳಿಗೆ ಹೋಗುವುದನ್ನು ವ್ಯವಸ್ಥೆ ಸಹಿಸುವುದಿಲ್ಲ. ಆ ಕಾರಣಕ್ಕಾಗಿಯೇ ಮೇಲಿನ ಪ್ರಕರಣದಲ್ಲಿ ಸರಕಾರವೇ ಬೆಚ್ಚಿ ಬೀಳಿಸುವಂತಹ ಸ್ಟ್ರಿಂಗ್ ಕಾರ್ಯಾಚರಣೆಯನ್ನು ವರದಿಗಾರ್ತಿ ಮಾಡಿದರೂ ಆಕೆಗೆ ಜೀವಬೆದರಿಕೆಯ ಕರೆಗಳು ಮತ್ತು ಕಾರ್ಯಕ್ರಮದ ಮುಖ್ಯಸ್ಥರಿಂದ ಬೈಗುಳಗಳನ್ನು ಎದುರಿಸಬೇಕಾಯಿತು. ಇದೇ

ಕೆಲಸವನ್ನು ಪುರುಷನೇನಾದರೂ ಮಾಡಿದ್ದರೆ ಅದನ್ನು ಸಹಜವಾಗಿಯೇ ಒಪ್ಪಿಕೊಳ್ಳುತ್ತಿತ್ತು. ಕಾರ್ಯಾಚರಣೆಯ ಕಾರಣಕ್ಕಾಗಿ ಇಂದಿಗೂ ಆ ಮಹಿಳೆ ನ್ಯಾಯಾಲಯದ ಮೆಟ್ಟಿಲೇರಿರುವುದು ಮತ್ತು ನ್ಯಾಯಕ್ಕಾಗಿ ಓಡಾಡುತ್ತಿರುವುದು ಕಂಡುಬರುತ್ತದೆ. ವಕ್ತೃಗಳೇ ಹೇಳಿದಂತೆ ನಮಗೆ ಏನೇ ತೊಂದರೆ ಆದರೂ ಸಹ ಚಾನೆಲ್‌ನವರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಚಾನೆಲ್‌ಗಾಗಿ ದುಡಿದವರನ್ನು ಸಂಸ್ಥೆಗಳು ದೂರಿಡುತ್ತವೆ ಮತ್ತು ಕಷ್ಟದ ಸಂದರ್ಭದಲ್ಲಿ ಅವುಗಳು ತನ್ನ ಕೆಲಸಗಾರರ ಬೆನ್ನಿಗೆ ನಿಲ್ಲುವುದಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ.

ರಾಜಕೀಯ ವರದಿಗಾರಿಕೆ ಆಗಿರಬಹುದು ಕ್ರೈಂ ರಿಪೋರ್ಟಿಂಗ್ ಇರಬಹುದು ಇವುಗಳು ಕೇವಲ ಪುರುಷರಿಗೆ ಮಾತ್ರ ಸೀಮಿತ ಮತ್ತು ಅವುಗಳು ಮಹಿಳೆಯರಿಗೆ ನಿಲುಕಲಾರದ್ದು ಎಂಬ ಮಾಧ್ಯಮಗಳ ಧೋರಣೆಗಳು ಹಾಗೂ ಮಹಿಳೆಯರಿಗೆ ಈ ಕೆಲಸದ ಬಗೆಗೆ ಯಾವುದೇ ಜ್ಞಾನವಿಲ್ಲ ಎಂಬ ಅಸತ್ಯ ಕೂಡ ವರದಿಗಾರ್ತಿಯರ ಮಾತಿನಿಂದ ತಿಳಿದುಬರುತ್ತದೆ. ಅವರ ಮಾತಿನಿಂದ ತಿಳಿದ ಮತ್ತೊಂದು ಸತ್ಯವೆಂದರೆ ಮಹಿಳೆಯರು ಈ ಜ್ಞಾನ ವಲಯದಿಂದ ದೂರವಾಗಲು ಪುರುಷ ವ್ಯವಸ್ಥೆಯೇ ಕಾರಣವಾಗಿದೆ.

"ರಾಜಕೀಯ ಎಂಬುದು ಕೇವಲ ಪುರುಷನದ್ದು ಎಂಬ ಪರಿಕಲ್ಪನೆ ಜಾರಿಯಲ್ಲಿರುವುದು ಒಂದು ನೈಜ ಸಂಗತಿಯಾಗಿದೆ. ಅಂದರೆ ರಾಜಕೀಯ ವಾರಸುದಾರರು ಪುರುಷರಾಗಿಬಿಟ್ಟಿದ್ದಾರೆ. ಅದನ್ನು ಪುರುಷ ಲೋಕದೃಷ್ಟಿಯಿಂದಲೇ ನಿರ್ವಚಿಸಲಾಗಿದೆ. ಮಹಿಳೆಗೆ ರಾಜಕೀಯ ದೃಷ್ಟಿಕೋನ ಎಂಬುದು ಇರಲು ಸಾಧ್ಯವಿಲ್ಲ ಎಂಬುದು ರಾಜಕೀಯ ಕ್ಷೇತ್ರದಲ್ಲಿ ಮಹಿಳೆಗೆ ಪ್ರವೇಶ ಅಸಾಧ್ಯವೆಂದು ಹೇಳಲಾಗಿದೆ. ಜ್ಞಾನ ಎಂಬುದು ತರ್ಕ ಪ್ರಾಮಾನ್ಯದ ಒಂದು ಸಂಗತಿ. ಆ ಕಾರಣಕ್ಕಾಗಿಯೇ ಮೇಲಿನ ಪ್ರಕರಣಗಳಲ್ಲಿ ರಾಜಕೀಯ ಮತ್ತು ಕ್ರೈಂ ರಿಪೋರ್ಟಿಂಗ್ ಮಾಡಲು ಮಹಿಳೆಯರು ಮುಂದಾದಾಗ ವ್ಯವಸ್ಥೆ ಅವರನ್ನು ಅನುಮಾನದಿಂದ ನೋಡುವಂತಾಯಿತು. ಜ್ಞಾನದ ಸೃಷ್ಟಿಯನ್ನು ಮಹಿಳೆಯರೂ ಮಾಡಬಲ್ಲರು ಎಂಬುದನ್ನು ಮಹಿಳೆಯರು ಎಕ್ಸ್‌ಕ್ಲೂಸಿವ್ ವರದಿಗಳನ್ನು ಮಾಡುವುದರ ಮೂಲಕ ತೋರಿಸಿಕೊಟ್ಟಿದ್ದಾರೆ.

ಇ. ಜಿಲ್ಲಾ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು : ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರು ನಾನಾ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವರದಿಗಾರಿಕೆ, ತಾಂತ್ರಿಕ ಕೆಲಸಗಳಲ್ಲೂ ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆದರೆ, ಅವರ ಕೆಲಸಗಳು ಕೇವಲ ಬೆಂಗಳೂರು ಕೇಂದ್ರಿತವಾಗಿವೆ.

ವಿದ್ಯುನ್ಮಾನ ಮಾಧ್ಯಮದ ಬಹುತೇಕ ಮುಖ್ಯ ಕಚೇರಿಗಳು ಬೆಂಗಳೂರಿನಲ್ಲಿವೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮತ್ತು ತಾಲೂಕ ಕೇಂದ್ರಗಳಲ್ಲಿ ವಾಹಿನಿಯ ಕಚೇರಿಗಳು ಇದ್ದರೂ,

ಬೆಂಗಳೂರನ್ನೇ ಕೇಂದ್ರವಾಗಿಟ್ಟುಕೊಂಡು ಅವುಗಳು ರಾಜ್ಯಾದ್ಯಂತ ಕೆಲಸ ಮಾಡುತ್ತವೆ. ಹಾಗಾಗಿ ಜಿಲ್ಲೆಯ ಮತ್ತು ತಾಲೂಕ ಪ್ರದೇಶಗಳಲ್ಲಿ ವಾಹಿನಿಗಾಗಿ ಕೆಲಸ ಮಾಡುವಂಥವರು ಇದ್ದಾರೆ. ವಿಪರ್ಯಾಸವೆಂದರೆ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸುದ್ದಿ ವಾಹಿನಿಗಳ ಒಬ್ಬರೇ ಒಬ್ಬರು ಮಹಿಳಾ ಪ್ರತಿನಿಧಿಗಳು ನೇಮಕವಾಗಿಲ್ಲ. ಹಲವು ವರ್ಷಗಳ ಹಿಂದೆ ಸಮಯ ಚಾನೆಲ್, ಸುವರ್ಣ ನ್ಯೂಸ್ ಚಾನೆಲ್ ಮತ್ತು ಮತ್ತೆರಡು ಸುದ್ದಿ ವಾಹಿನಿಗಳು ಜಿಲ್ಲಾ ಕೇಂದ್ರಗಳಲ್ಲಿ ವರದಿಗಾರ್ತಿಯರನ್ನು ನೇಮಕ ಮಾಡಿತ್ತು. ನಂತರ ಅವರು ಕಾಣೆಯಾದರು. ಸದ್ಯ ಯಾವ ವಾಹಿನಿಯೂ ಕೂಡ ಮಹಿಳಾ ಪ್ರತಿನಿಧಿಯನ್ನು ಜಿಲ್ಲಾ ಮತ್ತು ತಾಲೂಕ ಕೇಂದ್ರಗಳಲ್ಲಿ ನೇಮಕ ಮಾಡಿಲ್ಲ.

ಚಾನೆಲ್‌ಗಳು ತಮ್ಮ ಮಹಿಳಾ ಪ್ರತಿನಿಧಿಯನ್ನು ನೇಮಕ ಮಾಡದೆ ಇರುವುದಕ್ಕೂ ಕಾರಣಗಳು ಇವೆ. ಈ ಹಿಂದೆ ಜಿಲ್ಲಾ ಮತ್ತು ತಾಲೂಕ ಕೇಂದ್ರಗಳಲ್ಲಿ ಕೆಲಸ ಮಾಡಿದ ಮಹಿಳೆಯರಿಂದ ಅಲ್ಲಿಯೇ ಶಾಶ್ವತವಾಗಿ ನೆಲೆಯೂರಲು ಸಾಧ್ಯವಾಗಿಲ್ಲವಂತೆ. ಒಬ್ಬರೇ ಕೆಲಸ ಮಾಡುವಂತಹ ಅನಿವಾರ್ಯತೆ ಸೃಷ್ಟಿ ಆಗುವುದರಿಂದ ಮಹಿಳೆಯರಿಗೆ ಅದು ಅಸಾಧ್ಯ ಎನ್ನುವ ಮಾತುಗಳನ್ನು ವಾಹಿನಿಗಳ ಮುಖ್ಯಸ್ಥರು ಹೇಳುತ್ತಾರೆ. ಸಾಮಾನ್ಯವಾಗಿ ಜಿಲ್ಲಾ ಕೇಂದ್ರಗಳಲ್ಲಿ ವರದಿ ಮಾಡುವ ಪ್ರತಿನಿಧಿಗಳು, ವರದಿಗಾರಿಕೆಯ ಜೊತೆಗೆ ಸಂಬಂಧಿಸಿದ ದೃಶ್ಯಗಳನ್ನು ಚಿತ್ರೀಕರಿಸುವುದು ಮತ್ತು ಅದನ್ನು ವಾಹಿನಿಗೆ ಕಳುಹಿಸುವುದು ಮತ್ತು ಘಟನೆ ನಡೆದ ಸ್ಥಳಗಳಿಗೆ ತಮ್ಮದೇ ವಾಹನದ ಮೂಲಕ ತೆರಳಬೇಕಾದ ಅನಿವಾರ್ಯತೆಯಿದೆ. ಅಲ್ಲದೇ ಇಡೀ ಜಿಲ್ಲೆಯನ್ನು ಅವರೊಬ್ಬರೇ ಸುತ್ತಬೇಕಾಗಿದ್ದರಿಂದ ಮತ್ತು ತಾಲೂಕು ಕೇಂದ್ರಗಳಲ್ಲಿರುವ ಪ್ರತಿನಿಧಿಗಳ ಜವಾಬ್ದಾರಿಯನ್ನೂ ಅವರು ತಗೆದುಕೊಳ್ಳಬೇಕಾಗಿದ್ದರಿಂದ ಈ ಎಲ್ಲ ಕೆಲಸಗಳನ್ನು ಮಾಡಲು ಮಹಿಳೆಯರಿಗೆ ಕಷ್ಟವಂತೆ. ಹಾಗಾಗಿ ಜಿಲ್ಲಾ ಪ್ರತಿನಿಧಿಗಳ ಆಯ್ಕೆಯ ವಿಷಯದಲ್ಲಿ ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರು ಮಹಿಳೆಯರನ್ನು ಕೈ ಬಿಟ್ಟಿದ್ದಾರಂತೆ.

ಬೆಂಗಳೂರಿನಂತಹ ನಗರಗಳಲ್ಲಿ ಮಹಿಳಾ ಪ್ರತಿನಿಧಿಗಳಿಗೆ ಸುರಕ್ಷತೆ ಇರುತ್ತದೆ. ಕೆಲಸ ಮಾಡುವ ಸ್ಥಳ ಮತ್ತು ವರದಿಗಾರಿಕೆಗೆ ಹೋದ ಸಂದರ್ಭದಲ್ಲಿ ಅಗತ್ಯ ಸುರಕ್ಷಾ ಕ್ರಮಗಳನ್ನು ತಗೆದುಕೊಳ್ಳಲಾಗುತ್ತಿದೆ. ಈ ಸೌಲಭ್ಯವು ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಸಿಗುವುದಿಲ್ಲ. ಅದಕ್ಕೆ ಆರ್ಥಿಕ ಕಾರಣವನ್ನೂ ವಾಹಿನಿಗಳ ಮುಖ್ಯಸ್ಥರು ನೀಡುತ್ತಾರೆ. ಏನೇ ಕಾರಣಗಳನ್ನು ನೀಡಿದರೂ, ಸುರಕ್ಷತೆಯೇ ಇಲ್ಲದ ಸ್ಥಳಗಳಲ್ಲಿ ಮಹಿಳೆಯರಷ್ಟೇ ಅಲ್ಲ, ಪುರುಷರಿಗೂ ಕೆಲಸ ಮಾಡುವುದು ಕಷ್ಟ. ಹಾಗಾಗಿ ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡಲು ಮನಸ್ಸು ಮಾಡಿದ್ದ ಹಲವು ಪತ್ರಕರ್ತೆಯರು ಇಂತಹ ಅವಕಾಶದಿಂದ ವಂಚಿತರಾಗಿದ್ದಾರೆ. ಈ ಹಿಂದೆ ಕೆಲಸ ಮಾಡಿದ್ದ ಮಹಿಳಾ ಪ್ರತಿನಿಧಿಗಳು ಸುರಕ್ಷತೆಯ ಕಾರಣದಿಂದಾಗಿ ಮತ್ತು ಹಲವು ರೀತಿಯ ಕಿರುಕುಳ ಅನುಭವಿಸಿ, ಅಲ್ಲಿಂದ ವಾಪಸ್ಸು ರಾಜಧಾನಿಯತ್ತ ಮುಖ ಮಾಡಿದ್ದಾರೆ. ಇನ್ನೂ ಕೆಲವರು ಕೆಲಸವನ್ನೂ ತೊರೆದಿದ್ದಾರೆ.

ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಕೆಲಸ ಮಾಡುವಾಗ ಮಹಿಳಾ ಪ್ರತಿನಿಧಿಗಳು ಯಾವೆಲ್ಲ ಸಮಸ್ಯೆಗಳನ್ನು ಎದುರಿಸಿದ್ದಾರೆ ಎಂಬುದನ್ನು ಈಗಾಗಲೇ ಅಲ್ಲಿ ಕೆಲಸ ಮಾಡಿದ ವರದಿಗಾರ್ತಿಯರೇ ಹೇಳಿದ್ದಾರೆ. ಅವರ ಮಾತಲ್ಲಿಯೇ ಅದನ್ನು ಅರ್ಥೈಸಿಕೊಳ್ಳುವುದು ಸೂಕ್ತ.

ಸುಷ್ಮಾ ಈ ಹಿಂದೆ ಖಾಸಗಿ ವಾಹಿನಿಯೊಂದರ ಹಾಸನ ಜಿಲ್ಲಾ ವರದಿಗಾರ್ತಿಯಾಗಿ ಕೆಲಸ ಮಾಡಿದ್ದಾರೆ. ಜಿಲ್ಲೆಯಲ್ಲಿ ಉಸಿರುಗಟ್ಟುವ ವಾತಾವರಣದಿಂದಾಗಿ ಕೆಲಸ ತೊರೆದು, ಈಗ ಬೆಂಗಳೂರಿನ ಒಂದು ಪ್ರತಿಷ್ಠಿತ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಹೇಳುವಂತೆ "ನಾನು ಈ ಹಿಂದೆ ಹಾಸನ ಜಿಲ್ಲಾ ರಿಪೋರ್ಟರ್ ಆಗಿ ಕೆಲಸ ಮಾಡುತ್ತಿದ್ದೆ. ಅಲ್ಲಿನ ಅನುಭವ ತುಂಬಾ ಭಯಾನಕವಾಗಿತ್ತು. ಇಂದು ಜಿಲ್ಲಾ ಕೇಂದ್ರಗಳಲ್ಲಿ ಮಹಿಳಾ ವರದಿಗಾರ್ತಿಯರು ಯಾಕಿಲ್ಲ ಅಂತ ಯಾರಾದರೂ ಕೇಳಿದರೆ ಅದಕ್ಕೆ ಸರಿಯಾದ ಉತ್ತರವಾಗಿ ನಾನೇ ಇದ್ದೇನೆ. ಬೆಂಗಳೂರಿನಲ್ಲಿ ಕೆಲಸ ಮಾಡಿದಂತೆ ಜಿಲ್ಲಾ ಕೇಂದ್ರಗಳಲ್ಲಿ ವರ್ಕ್ ಮಾಡುವುದಕ್ಕೆ ಆಗುವುದಿಲ್ಲ. ಬೆಂಗಳೂರಿನಲ್ಲಾದರೆ ಯಾವ ಹೊತ್ತಿನಲ್ಲಿ ಬೇಕಾದರೂ ಹೋಗಿ ಸುದ್ದಿಯನ್ನು ತರಬಹುದು. ಎಷ್ಟೇ ಹೊತ್ತಾದರೂ ಮನೆ ತಲುಪಬಹುದು. ಸೆಕ್ಯೂರಿಟಿ ಕೂಡ ಒಂದೊಂದು ಬಾರಿ ಅವಶ್ಯಕತೆ ಬೀಳುವುದಿಲ್ಲ. ಸಂಸ್ಥೆಯ ವಾಹನ ಮತ್ತು ವಾಹನ ಚಾಲಕ, ಕ್ಯಾಮೆರಾಮನ್ ಹೀಗೆ ನಮ್ಮೊಂದಿಗೆ ಸಹೋದ್ಯೋಗಿಗಳು ಇರುತ್ತಾರೆ. ಆದರೆ, ಜಿಲ್ಲಾ ಕೇಂದ್ರಗಳಲ್ಲಿ ಇವೆಲ್ಲವೂ ನಾವೇ ಆಗಬೇಕು. ನಮ್ಮ ಸೆಕ್ಯೂರಿಟಿಯನ್ನು ನಾವೇ ನೋಡಿಕೊಳ್ಳಬೇಕು. ಹಾಗಾಗಿ ಸಹಜವಾಗಿಯೇ ಒತ್ತಡ ಜಾಸ್ತಿ ಇರುತ್ತದೆ. ಒಂದೊಂದು ಜಿಲ್ಲೆಯಲ್ಲಿ ಕಡಿಮೆ ಎಂದರೂ ಐದು ತಾಲೂಕು ಕೇಂದ್ರಗಳಿರುತ್ತವೆ. ಒಂದು ತಾಲೂಕಿನಿಂದ ಮತ್ತೊಂದು ತಾಲೂಕಿಗೆ ಹೋಗಿ ರಿಪೋರ್ಟ್ ಮಾಡುವಂತಹ ಸನ್ನಿವೇಶಗಳೂ ಎದುರಾಗುತ್ತವೆ. ಸರಿಯಾದ ಸಾರಿಗೆ ವ್ಯವಸ್ಥೆ ಮತ್ತು ಹೊತ್ತಲ್ಲದ ಹೊತ್ತಲ್ಲಿ ಘಟನೆಗಳು ನಡೆದಾಗ ಅಲ್ಲಿಗೆ ಹೋಗಿ ಸುದ್ದಿ ತರಲು ತುಂಬಾ ಕಷ್ಟವಾಗುತ್ತದೆ. ಹಗಲಲ್ಲೇ ತೊಂದರೆಗಳು ಆಗುತ್ತವೆ. ಇನ್ನು ರಾತ್ರಿ ವೇಳೆ ಕೆಲಸ ಮಾಡುವುದು ಕನಸಿನ ಮಾತೇ ಸರಿ. ಹೀಗೆ ಮೊದಲು ಹಾಸನ ಜಿಲ್ಲೆಯ ರಿಪೋರ್ಟರ್ ಆಗಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ನನ್ನ ಕುಟುಂಬದಿಂದ ಮತ್ತು ಸಮಾಜದಿಂದ ಎದುರಿಸಿದ್ದೇನೆ. ರಾತ್ರಿ ಏಳು ಗಂಟೆ ಆಗುತ್ತಲೇ ಮಹಿಳೆಯರು ಮನೆಯಲ್ಲಿ ಇರಬೇಕು ಎನ್ನುವ ಕಟ್ಟುಪಾಡು ನಮ್ಮ ಸಮಾಜ ಹಾಕಿದೆ. ಈ ನಿಯಮ ಪಾಲಿಸಿದರೆ ಮಾತ್ರ ಕೆಲಸಕ್ಕೆ ಸೇರಿಕೋ ಎಂದು ನನ್ನ ಕುಟುಂಬ ಕೂಡ ತಾಕೀತು ಮಾಡಿತ್ತು. ಆ ಕ್ಷಣದಲ್ಲಿ ನಾನೂ ಕೂಡ ಒಪ್ಪಿಕೊಂಡು ಕೆಲಸಕ್ಕೆ ಸೇರಿಕೊಂಡಿದ್ದೆ. ಮೊದ ಮೊದಲು ಅಂತಹ ಸಮಸ್ಯೆಗಳೇನೂ ಆಗಲಿಲ್ಲ. ದಿನಗಳು ಕಳೆದಂತೆ ರಾತ್ರಿ ಸಮಯದಲ್ಲಿಯೂ ವರದಿ ಮಾಡುವಂತಹ ಸಂದರ್ಭಗಳು ಎದುರಾದವು. ನನಗಂತೂ ವಿಪರೀತ ಟೆನ್‌ಷನ್. ರಿಪೋರ್ಟ್ ಮಾಡಲು ಹೋದರೆ ಮನೆಯಿಂದ ನಿಂದನೆಗೆ ಒಳಗಾಗಬೇಕಾಗುತ್ತದೆ ಎನ್ನುವ ಭಯ. ಕೆಲಸವನ್ನು ಬಿಡಿಸಿಬಿಟ್ಟರೆ ಎಂಬ ಆತಂಕ ಕಾಡುತ್ತಲೇ ಇತ್ತು. ಭಯದ ಕಾರಣದಿಂದಾಗಿಯೇ ನನಗೆ ಒಂದಷ್ಟು ಬಾರಿ ವರದಿ ಮಾಡಲು

ಸಾಧ್ಯವಾಗಲಿಲ್ಲ. ಒಂದು ಸಾರಿ ನಮ್ಮ ತಾಲೂಕಿನಲ್ಲಿಯೇ ಒಂದು ಭಯಾನಕ ಘಟನೆ ನಡೆದಿತ್ತು. ಅದನ್ನು ವರದಿ ಮಾಡಲು ಹೋಗಿದ್ದೆ. ಅಂದೇ ಮನೆಯಲ್ಲಿ ನನ್ನ ಕೆಲಸದ ಬಗ್ಗೆ ಸೀರಿಯಸ್ ಆಗಿ ಚರ್ಚೆ ಶುರುವಾಯ್ತು. ನನ್ನನ್ನು ಕೆಲಸದಿಂದ ಬಿಡಿಸಿ ಮದುವೆ ಮಾಡಲು ಮುಂದಾದರು. ಈ ವಿಚಾರ ತಿಳಿದು ಅಪ್ಪನಲ್ಲಿ ವಿಚಾರಿಸಿದಾಗ ಅವರು ರಾತ್ರಿ ವೇಳೆ ಕೆಲಸ ಮಾಡೋದಕ್ಕೆ ಹೋದರೆ, ಅಕ್ಕಪಕ್ಕದ ಮನೆಯವರು ಮತ್ತು ಸಮಾಜ ಏನ್ ತಿಳ್ಕೋತಾರೆ ಅಂತ ಯೋಚನೆ ಮಾಡು ಅಂದರು. ಮದುವೆ ಆಗದೇ ಇರೋ ಹುಡುಗಿ ತಡರಾತ್ರಿ ಮನೆಗೆ ಬಂದರೆ, ಒಬ್ಬೊಬ್ಬಳೆ ಓಡಾಡಿದರೆ, ನಿನಗೆ ಯಾರು ಗಂಡು ಕೊಡ್ತಾರೆ. ನಮ್ಮ ಮನೆಯ ಮರ್ಯಾದಿ ಏನಾಗಬೇಕು? ಇದೆಲ್ಲ ಯೋಚನೆ ಮಾಡ್ಬೇಕು ಅಂದರು. ತಮ್ಮ ಆತಂಕವನ್ನು ಅವರು ಹೇಳಿಕೊಂಡರು. ನನಗೆ ಮತ್ತಷ್ಟು ಗೊಂದಲ ಶುರುವಾಯಿತು. ಅವರಿಗೆ ಧೈರ್ಯ ಹೇಳಿದರೂ ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಕೊನೆಗೆ ನಮ್ಮ ಚರ್ಚೆ ಎಲ್ಲಿಗೆ ಬಂದು ನಿಂತಿತು ಅಂದರೆ, ಕೆಲಸ ಬಿಟ್ಟು ಮನೆಯಲ್ಲಿ ಇದ್ದು ಬಿಡು ಅಂದರು. ಬೇರೆ ಯಾವುದಾದರೂ ಕೆಲಸ ನೋಡೋಣ ಅಂತ ಸಮಾಧಾನ ಮಾಡುವುದಕ್ಕೆ ಪ್ರಯತ್ನಿಸಿದರು. ನನಗಿಷ್ಟವಿಲ್ಲದ ಕೆಲಸವನ್ನು ನಾನು ಮಾಡಲು ಸಾಧ್ಯವಿಲ್ಲ ಅಂದಾಗ, ಮದುವೆ ಮಾಡಿ ಕಳಿಸ್ತೀವಿ ಅಂತ ಹೆದರಿಸಿದರು. ಮೀಡಿಯಾದಲ್ಲಿಯೇ ಕೆಲ್ಸ ಮಾಡಬೇಕು ಎನ್ನುವುದು ನನ್ನ ಆಸೆ ಆಗಿದ್ದರಿಂದ ಏನು ಮಾಡಬೇಕು ಅಂತ ತಿಳಿಯಲಿಲ್ಲ. ಇಡೀ ಕುಟುಂಬವೇ ಒಂದಾಗಿ ನನ್ನ ಕೆಲಸವನ್ನು ವಿರೋಧಿಸಿದ್ದರಿಂದ ಆ ಕ್ಷಣದಲ್ಲಿ ನಾನು ಕೆಲಸ ಬಿಡಬೇಕಾಯಿತು. ಇದು ಕುಟುಂಬದೊಳಗಿನ ಒತ್ತಡವಾದರೆ, ವರದಿ ಮಾಡಲು ವಿವಿಧ ಸ್ಥಳಗಳಿಗೆ ಒಬ್ಬಳೆ ಹೋದಾಗ ಮತ್ತಷ್ಟು ಕಷ್ಟಗಳನ್ನು ಎದುರಿಸಬೇಕಾಗುತ್ತಿತ್ತು. ನಮ್ಮ ಕುಟುಂಬವು ಈ ಕೆಲಸವನ್ನು ನಿರಾಕರಿಸಲು ಈ ಕಷ್ಟಗಳು ಕೂಡ ಕಾರಣವಾಗಿದ್ದವು.

ದೂರದ ಊರುಗಳಿಗೆ ಒಬ್ಬಳೆ ಹೋಗುತ್ತಿದ್ದೆ. ಕ್ಯಾಮೆರಾ ತಗೆದುಕೊಂಡು ನಾನೇ ಚಿತ್ರೀಕರಣ ಮಾಡುತ್ತಿದ್ದೆ. ಓಡಾಡುವುದಕ್ಕೆ ಸರಿಯಾದ ವಾಹನ ವ್ಯವಸ್ಥೆಯೂ ಇರಲಿಲ್ಲ. ಹಾಗಾಗಿ ಮನೆಯವರು ಕೆಲಸವನ್ನು ವಿರೋಧಿಸಿದರು. ಬೆಂಗಳೂರಿನಲ್ಲಿ ಎಲ್ಲ ವ್ಯವಸ್ಥೆಯು ಇರುತ್ತದೆ. ಅಲ್ಲಿಗೆ ಕೆಲಸ ಮಾಡಲು ಹೋದರೆ ಯಾವ ತೊಂದರೆಯೂ ಆಗದು ಅಂತ ಮತ್ತೆ ಮನೆಯವರಿಗೆ ಧೈರ್ಯ ತುಂಬುವಂತಹ ಕೆಲಸ ಮಾಡಿದೆ. ಅವರ ಮೇಲೆ ಒತ್ತಡವನ್ನೂ ಹಾಕಿದೆ. ಮತ್ತೆ ಮೀಡಿಯಾದಲ್ಲಿ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಹೊರಟು ಬಂದೆ. ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವಾಗ ಅನೇಕ ಕಷ್ಟಗಳು ಎದುರುಗೊಳ್ಳುತ್ತವೆ. ಕಷ್ಟಪಟ್ಟು ಸುದ್ದಿ ಮಾಡಿದರೂ ಅವುಗಳು ಒಂದೊಂದು ಬಾರಿ ಪ್ರಸಾರವಾಗುವುದಿಲ್ಲ. ಮಹಿಳಾ ರಿಪೋರ್ಟರ್ ಅನ್ನುವ ಕಾರಣಕ್ಕೆ ನಮ್ಮನ್ನು ಕೆಲಸದ ಸ್ಥಳದಲ್ಲಿ ಗಂಭೀರವಾಗಿ ತಗೆದುಕೊಳ್ಳುತ್ತಿರಲಿಲ್ಲ. ಒಂದೊಂದು ಬಾರಿ ಕೆಲಸದ ಸ್ಥಳದಲ್ಲಿ ಸಿಂಪತಿ ತೋರಿಸುತ್ತಿದ್ದರು. ನೆಗೆಟಿವ್ ಸುದ್ದಿ ಮಾಡಿದಾಗ ಹುಡುಗಿ ಅಂತ ಹೆದರಿಸೋರು. ಏನೆಲ್ಲ ಅನುಭವಗಳು ನಮಗೆ ಅಲ್ಲಿ ಆಗುತ್ತವೆ" ಅಂತಾರೆ.

ಹಾಗೆಯೇ ಇನ್ನೊಂದು ಪ್ರಕರಣದಲ್ಲಿ ಪ್ರಮೀಳಾ ಎಂಬುವವರು ಹೇಳುವಂತೆ "ನಾನು ಕೆಲಸಕ್ಕೆ ಸೇರಿಕೊಂಡಿದ್ದೇ ಜಿಲ್ಲಾ ವರದಿಗಾರ್ತಿಯಾಗಿ. ಅದು ಹೊಸ ಚಾನೆಲ್. ಈವರೆಗೂ ಮಾಡದೇ ಇರುವಂತಹ ಪ್ರಯೋಗ ಮಾಡೋಣ ಅನ್ನುವುದು ವಾಹಿನಿಯ ಅಜೆಂಡಾ ಆಗಿತ್ತು. ಹಾಗಾಗಿ ಕೇಳಿದ ತಕ್ಷಣವೇ ಜಿಲ್ಲಾ ವರದಿಗಾರ್ತಿಯಾಗಿ ನನ್ನದೇ ಜಿಲ್ಲೆಗೆ ಕಳುಹಿಸಿಕೊಟ್ಟರು. ಅದು ನಮ್ಮದೇ ಜಿಲ್ಲೆಯಾಗಿದ್ದರಿಂದ ಮತ್ತು ಪರಿಚಯ ಊರುಗಳೇ ಇರುವುದರಿಂದ ನನ್ನ ಕುಟುಂಬ ಕೂಡ ಆ ಕೆಲಸಕ್ಕೆ ಒಪ್ಪಿಗೆ ನೀಡಿತು. ಆದರೆ ನಾನು ಕೆಲಸಕ್ಕೆ ಸೇರಿಕೊಂಡ ನಂತರ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಕೆಲಸಕ್ಕೆ ಸೇರಿಕೊಂಡು ಒಂದು ತಿಂಗಳೂ ಆಗಿಲ್ಲ. ಆಗಲೇ ಕಿರಿಕಿರಿಗಳು ಆರಂಭವಾದವು. ನಾನು ಕೆಲಸ ಮಾಡುವ ಈ ಕ್ಷೇತ್ರದಲ್ಲಿ ಎಲ್ಲವೂ ಸರಿಯಿರುತ್ತೆ ಎಂದು ಹೇಳಲಾಗುವುದಿಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವ ವರದಿಗಾರರಿಗೆ ಯಾವುದೇ ಸುರಕ್ಷತೆಯ ಮಾರ್ಗಸೂಚಿಗಳು ಇಲ್ಲ. ಮಾಧ್ಯಮ ಸಂಸ್ಥೆಗಳಿಗೆ ನಾವು ಕೊಡುವ ಸುದ್ದಿ ಮಾತ್ರ ಬೇಕು. ನಮ್ಮ ಸುರಕ್ಷತೆಯ ಬಗ್ಗೆ ಅದು ಯೋಚಿಸುವುದೇ ಇಲ್ಲ. ಹುಡುಗಿಯರಿಗಷ್ಟೇ ಅಲ್ಲ, ಹುಡುಗರಿಗೂ ಇದು ಅನ್ವಯಿಸುತ್ತದೆ. ಆದರೆ ಹೆಚ್ಚಿನ ತೊಂದರೆ ಆಗುವುದು ಮಹಿಳಾ ಪ್ರತಿನಿಧಿಗಳಿಗೆ. ಜಿಲ್ಲಾ ಕೇಂದ್ರಗಳಲ್ಲಿ ಸಂಸ್ಥೆಯ ವಾಹನಗಳು ಇರುವುದಿಲ್ಲ. ನಮ್ಮದೇ ಸ್ವಂತ ವಾಹನ ಬೇಕು. ಕ್ಯಾಮೆರಾಮನ್‌ಗಳನ್ನು ಅದು ಕೊಡುವುದಿಲ್ಲ. ನಾವೇ ಕ್ಯಾಮೆರಾ ಹಿಡಿದುಕೊಂಡು ಚಿತ್ರೀಕರಣ ಮಾಡಬೇಕು. ನಮಗೆ ಏನೇ ತೊಂದರೆಯಾದರೂ, ಸುದ್ದಿ ಮಿಸ್ ಆಗುವಂತಿಲ್ಲ. ಸುದ್ದಿಯನ್ನು ಕಳುಹಿಸದೇ ಇದ್ದಾಗ ಮುಖ್ಯಸ್ಥರಿಂದ ಬೈಗುಳ ಕೇಳಬೇಕು. ಸುದ್ದಿ ವಾಹಿನಿಗಳು ಈಗ ಹೇಗಾಗಿವೆ ಅಂದರೆ, ಅವರಿಗೆ ಟಿಆರ್‌ಪಿ ತರುವಂತಹ ಸುದ್ದಿಗಳೇ ಆಗಬೇಕು. ಕಾಂಟ್ರವರ್ಸಿ ಆಗುವಂತಹ ನ್ಯೂಸ್ ಇರಬೇಕು. ಇಂತಹ ಸುದ್ದಿಗಳನ್ನು ಕಳುಹಿಸದೇ ಇದ್ದಾಗ ನಾವು ಕೆಲಸಕ್ಕೆ ಅನ್‌ಫಿಟ್ ಅಂತ ಅನಿಸಿಕೊಳ್ಳುತ್ತೇವೆ. ಅಂತಹ ಸುದ್ದಿಗಳನ್ನು ಮಾಡಿದಾಗ ಅದರಿಂದ ನಮ್ಮ ಮೇಲೆ ಆಗುವಂತಹ ಪರಿಣಾಮವನ್ನು ಸುದ್ದಿ ಸಂಸ್ಥೆಗಳು ಗಮನಿಸುವುದೇ ಇಲ್ಲ. ಸುದ್ದಿಯ ಸ್ಥಳದಲ್ಲಿ ನಮ್ಮ ಮೇಲೆ ಅಟ್ಯಾಕ್ ಆಗಬಹುದು. ಜೀವ ಬೆದರಿಕೆ ಬರಬಹುದು. ನನ್ನ ಕುಟುಂಬಕ್ಕೂ ತೊಂದರೆ ಆಗಬಹುದು. ಆಗ ನಮ್ಮ ಬೆನ್ನಿಗೆ ಸಂಸ್ಥೆಗಳು ನಿಲ್ಲುತ್ತವೆ ಎನ್ನುವುದು ಸುಳ್ಳು. ಕೆಲಸ ಮಾಡುವಂತಹ ಸಂದರ್ಭದಲ್ಲಿ ಅವುಗಳು ನಮಗೆ ನೆರವಾಗಬಹುದು. ಕೆಲಸ ಬಿಟ್ಟ ನಂತರ ಕಾನೂನು ರೀತಿಯ ಕ್ರಮಗಳು ಇದ್ದರೆ, ಅವುಗಳನ್ನು ನಾವೇ ಮಾಡಿಕೊಳ್ಳಬೇಕು. ಜಿಲ್ಲಾ ಮಟ್ಟದ ಪತ್ರಕರ್ತರು ಇಂತಹ ಅನೇಕ ಸಮಸ್ಯೆಗಳನ್ನು ಈಗಲೂ ಎದುರಿಸುತ್ತಿದ್ದಾರೆ. ಹಾಗಾಗಿ ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡಲು ತುಂಬಾ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಅದರಲ್ಲೂ ರಾತ್ರಿ ಕೆಲಸ ಮಾಡುವ ವಿಚಾರದಲ್ಲಿ ನನ್ನ ಸಮಾಜ ಅಥವಾ ಕುಟುಂಬ ರಾಜಿ ಮಾಡಿಕೊಳ್ಳುವುದೇ ಇಲ್ಲ. ಮನೆ ಮರ್ಯಾದೆಯ ಪ್ರಶ್ನೆ ಇಟ್ಟುಕೊಂಡು ನಮ್ಮ ಜೀವ ತಿಂದು

ಬಿಡುತ್ತದೆ. ಅದೊಂದು ಸಲ ಏನಾಯ್ತು ಅಂದರೆ, ರಿಪೋರ್ಟಿಂಗ್ ಮುಗಿಸಿಕೊಂಡು ಮನೆಗೆ ಹೋಗಬೇಕಾಗಿತ್ತು. ಆ ಊರಿನಿಂದ ಜಿಲ್ಲಾ ಕೇಂದ್ರಕ್ಕೆ ಬರಲು ಬಸ್ ಇಲ್ಲ. ಖಾಸಗಿ ವಾಹನಗಳು ಕೂಡ ಸಿಗಲಿಲ್ಲ. ಅದೇ ಊರಿನ ಒಬ್ಬ ವ್ಯಕ್ತಿಗೆ ಮನವಿ ಮಾಡಿಕೊಂಡು ಹೊರಟಾಗ ರಾತ್ರಿಯಾಗಿತ್ತು. ಮನೆಯಲ್ಲೂ ಆತಂಕ ಶುರುವಾಗಿತ್ತು. ಮನೆಗೆ ಬಂದಾಗ ತಡರಾತ್ರಿ. ಮನೆ ಒಳಗೆ ಹೋಗುತ್ತಿದ್ದಂತೆಯೇ ಜಗಳ ಶುರು. ಮತ್ತೊಂದು ಸಲ ಹೀಗೇ ಬಸ್ ಸಿಗದೇ ಇದ್ದಾಗ ಒಂದು ಕೀಲೋ ಮೀಟರ್ ದೂರ ನಡೆದುಕೊಂಡು ಬಂದಿದ್ದೆ. ಮನೆಯಲ್ಲಿ ಗೊತ್ತಾಗಿ ರಾದ್ಧಾಂತವೇ ಆಯಿತು. ಇಷ್ಟೆಲ್ಲ ಕೆಲಸ ಮಾಡಿದರೂ, ನಮಗೆ ಸಿಗುವ ಸಂಬಳ ಕೂಡ ಅಷ್ಟೇ. ಬೆಂಗಳೂರಿನಲ್ಲಿ ನನ್ನಷ್ಟೇ ಕೆಲಸ ಮಾಡುವವರಿಗೆ ಕೊಡುವ ಸಂಬಳಕ್ಕೂ ಮತ್ತು ನಾನು ಜಿಲ್ಲಾ ಕೇಂದ್ರದಲ್ಲಿ ತಗೆದುಕೊಳ್ಳುವ ಸಂಬಂಳಕ್ಕೂ ಅಜಗಜಾಂತರ ವ್ಯತ್ಯಾಸ ಇರುತ್ತದೆ. ಬೆಂಗಳೂರಿನಲ್ಲಿ ಸಿಗುವ ಸವಲತ್ತುಗಳು ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವವರಿಗೆ ಸಿಗುವುದಿಲ್ಲ. ಪ್ರತಿ ತಿಂಗಳೂ ಸರಿಯಾಗಿ ಸಂಬಳ ಕೈ ಸೇರುವುದಿಲ್ಲ. ಹಾಗಾಗಿ ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡಲು ಹುಡುಗಿಯರು ಒಪ್ಪುವುದಿಲ್ಲ. ಒಪ್ಪಿದರೂ ಸಂಸ್ಥೆಗಳು ಆರ್ಥಿಕ ಹೊರೆಯ ನೆಪವನ್ನು ಹೇಳಿ ಕಳುಹಿಸುವುದಿಲ್ಲ. ಒಂದಷ್ಟು ದಿನ ಕೆಲಸ ಮಾಡಿದೆ. ಇನ್ನೂ ಕೆಲಸ ಮಾಡುವುದಕ್ಕೆ ಅಸಾಧ್ಯ ಎಂದು ಗೊತ್ತಾಗಿ ರಾಜೀನಾಮೆ ನೀಡಿದೆ. ಆ ಕೆಲಸ ಬಿಟ್ಟ ನಂತರ ಈಗ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ಮೀಡಿಯಾದ ಚಹರೆ ಇನ್ನೂ ಬದಲಾಗಿಲ್ಲ ಅಂತ ಕೇಳಿದ್ದೇನೆ. ಅದು ಮಹಿಳೆಯರ ವಿಷಯದಲ್ಲಿ ಬದಲಾಗಲ್ಲ ಅನಿಸತ್ತೆ" ಎಂದರು.

ಮೇಲಿನ ಎರಡೂ ಪ್ರಕರಣಗಳನ್ನು ಗಮನಿಸಿದಾಗ ಜಿಲ್ಲಾ ಕೇಂದ್ರಗಳಲ್ಲಿಯ ಕೆಲಸದ ಸ್ವರೂಪ ಮತ್ತು ಸಮಸ್ಯೆಗಳು ಎರಡೂ ವಿಭಿನ್ನವಾಗಿವೆ. ಬೆಂಗಳೂರಿನಂತಹ ನಗರಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸಿಗುವ ಸೌಲಭ್ಯ ಮತ್ತು ಜಿಲ್ಲಾ ಅಥವಾ ತಾಲೂಕು ಕೇಂದ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸಿಗುವ ಸೌಲಭ್ಯ ಒಂದೇ ಆಗಿಲ್ಲ ಎನ್ನುವುದನ್ನು ಗಮನಿಸಬೇಕು. ಜಿಲ್ಲಾ ಕೇಂದ್ರಗಳಲ್ಲಿ ಮಹಿಳಾ ಪ್ರತಿನಿಧಿಗಳು ಕೆಲಸ ಮಾಡದೇ ಇರುವ ಕಾರಣ ಕುಟುಂಬ ವ್ಯವಸ್ಥೆಯ ಲೋಪದೋಷಗಳು ಮತ್ತು ಕೆಲಸ ಕೊಟ್ಟಂತಹ ಸಂಸ್ಥೆಗಳು ಮಹಿಳೆಯರಿಗೆ ನೀಡದೇ ಇರುವ ಭದ್ರತೆ ಕೂಡ ಕಾರಣವಾಗಿದೆ.

ಇವುಗಳ ಜೊತೆಗೆ ಕುಟುಂಬ ವ್ಯವಸ್ಥೆಯು ಹೇಗೆ ಕಾರಣವಾಗಿದೆ ಅಂದರೆ, ಬೆಂಗಳೂರಿನಂತಹ ಸಿಟಿಯಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆಯ ಬಗ್ಗೆ ಗಮನ ನೀಡಲಾಗಿದೆ. ಅಲ್ಲದೇ, ಬಹುತೇಕ ಮಹಿಳಾ ಪ್ರತಿನಿಧಿಗಳು ತಮ್ಮ ಕುಟುಂಬದೊಂದಿಗೆ ಇಲ್ಲ. ಹಾಗಾಗಿ ತಡರಾತ್ರಿ ಅವರು ಮನೆಗೆ ಬಂದರೂ, ವಿರೋಧದ ಮಾತುಗಳನ್ನು ಆಡುವಂತಹ ಕುಟುಂಬದ ಸದಸ್ಯರಿಂದ ಅವರಿಗೆ ವಿನಾಯತಿ ಸಿಕ್ಕಿದೆ.

ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವಂತಹ ಮಹಿಳೆಯರು ನಾನಾ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ತಾವು ಕೆಲಸ ಮಾಡುವ ಸಂಸ್ಥೆಗಳೇ ಜಿಲ್ಲಾ ಕೇಂದ್ರದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಕಂಡಿತಾ ಅವರು ಕೆಲಸ ಮಾಡಲು ಮುಂದೆ ಬರುತ್ತಾರೆ ಎನ್ನುವುದನ್ನು ಮಹಿಳಾ ಪ್ರತಿನಿಧಿಗಳೇ ಹೇಳಿಕೊಂಡಿದ್ದಾರೆ. ತಮ್ಮ ಮಗಳು ಸುರಕ್ಷಿತವಾಗಿ ಕೆಲಸ ಮಾಡುತ್ತಿದ್ದಾಳೆ ಎಂಬ ನಂಬಿಕೆ ಅವರ ಕುಟುಂಬಕ್ಕೆ ಬಂದರೆ, ಕುಟುಂಬದ ಸದಸ್ಯರೂ ಸಹ ಆತಂಕವಿಲ್ಲದೇ ಇರುತ್ತಾರೆ. ಹಾಗಾಗಿ ಯಾವುದೇ ಒತ್ತಡವಿಲ್ಲದೇ ಮಹಿಳೆಯರು ಕೆಲಸ ಮಾಡುತ್ತಾರೆ ಎನ್ನುವುದು ಅವರ ಮಾತುಗಳಲ್ಲಿ ವ್ಯಕ್ತವಾಗಿದೆ.

ಮೇಲಿನ ಮೊದಲ ಪ್ರಕರಣದಲ್ಲಿ ಸುಷ್ಮಾ ಅವರು ಜಿಲ್ಲಾ ವರದಿಗಾರರಾಗಿ ಕೆಲಸ ಮಾಡಿದಾಗ ಅಲ್ಲಿ ಕಂಡು ಬಂದ ಸಮಸ್ಯೆಗಳು ತೀರಾ ಗಂಭಿರವಾಗಿರುವುದನ್ನು ಗುರುತಿಸಿಕೊಂಡು ಕೆಲಸವನ್ನೇ ಬಿಟ್ಟಿರುವುದನ್ನು ಕಾಣಬಹುದು. ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವ ಮಹಿಳಾ ಪ್ರತಿನಿಧಿಗಳ ಕುಟುಂಬದ ಒತ್ತಡ ಹೆಚ್ಚಿರುತ್ತದೆ. ಮಗಳಿಗೆ ಕೆಲಸ ಸಿಕ್ಕಿತ್ತಲ್ಲ ಎನ್ನುವ ಖುಷಿಗೆ ಮೊದಲು ತಮ್ಮ ಮಗಳನ್ನು ಕೆಲಸಕ್ಕೆ ಸೇರಿಸುವ ಕುಟುಂಬದ ಮುಖ್ಯಸ್ಥರು, ಕೆಲಸಕ್ಕೆ ಸೇರಿಕೊಂಡ ನಂತರ ಕೆಲಸದ ಸ್ವರೂಪವನ್ನು ಗಮನಿಸುತ್ತಾರೆ. ತಮ್ಮ ಮಗಳು ಕಷ್ಟಪಡುತ್ತಿದ್ದಾಳೆಂದು ಗೊತ್ತಾಗುತ್ತಿದ್ದಂತೆಯೇ ಕೆಲಸ ಬಿಡಿಸುವಂತಹ ಒತ್ತಡವನ್ನು ಹಾಕುತ್ತಾರೆ. ತಮ್ಮ ಕುಟುಂಬದ ಗೌರವದ ಪ್ರಶ್ನೆ ಬಂದಾಗ ಯಾವುದೇ ಕಾರಣಕ್ಕೂ ಅವರು ಕೆಲಸ ಮುಂದುವರೆಸಲು ಬಿಡುವುದಿಲ್ಲ. ಅದರಲ್ಲೂ ಮಹಿಳೆಯರು ಮನೆಯಿಂದ ಆಚೆ ಹೋಗಿ ಕೆಲಸ ಮಾಡುವುದು ಅಪರಾಧ ಎನ್ನುವಂತಹ ವಾತಾವರಣ ನಮ್ಮ ಸಮಾಜದಲ್ಲಿದೆ. ನಮ್ಮ ಈ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರು ಮನೆಯಾಚೆ ಹೋಗಿ ದುಡಿಯುವುದನ್ನು ಅದು ನಿರಾಕರಿಸುತ್ತದೆ. ಏಕೆಂದರೆ ಮಹಿಳೆಯರು ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗಿರಬೇಕು. ಅಡುಗೆ ಮನೆಯೇ ಅವಳ ಕಾರ್ಯಕ್ಷೇತ್ರ ಆಗಿರಬೇಕು. ಮಕ್ಕಳ ಲಾಲನೆ ಪಾಲನೆ ಇವರ ಕರ್ತವ್ಯವಾಗಿರಬೇಕು ಎಂಬಂತಹ ನಿಯಮಗಳು ಕುಟುಂಬದಲ್ಲಿವೆ, ಈ ಕಾರಣಕ್ಕೆ ಮಹಿಳೆಯರು ಕುಟುಂಬದ ಒಳಗೇ ಇರಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ಮೊದಲ ಪ್ರಕರಣದಲ್ಲಿ ಸುಷ್ಮಾ ಅವರು ಹೇಳುವಂತೆ ತಾವು ಲೇಟಾಗಿ ಮನೆಗೆ ಬಂದ ಕಾರಣಕ್ಕಾಗಿ ತಮ್ಮ ತಂದೆಯಿಂದ ನಿಂದನೆಗೆ ಒಳಗಾಗಬೇಕಾಯಿತು. ಕೆಲಸ ಮುಗಿಸಿಕೊಂಡು ಮಹಿಳೆಯು ತಡವಾಗಿ ಬಂದರೆ ಅವಳನ್ನು ಅನುಮಾನದಿಂದ ನೋಡುವಂತಹ ವಾತಾವರಣ ನಮ್ಮ ಸಮಾಜದಲ್ಲಿದೆ. ಅದರಲ್ಲೂ ಮಹಿಳೆಗೆ ಮದುವೆ ಆಗದಿದ್ದರೆ ಅವಳನ್ನು ಕೆಟ್ಟ ದೃಷ್ಟಿಯಿಂದ ನೋಡುವಂತಹ ಉದಾಹರಣೆ ಕೂಡ ನಮ್ಮ ಕಣ್ಮುಂದಿವೆ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಮಹಿಳೆಯರಿಗೆ ಇಂತಿಷ್ಟೇ ಹೊತ್ತು ಕೆಲಸ ಮಾಡಬೇಕು ಎಂಬ ನಿಯಮವಿಲ್ಲ. ಇದ್ದರೂ ಅದು ಜಾರಿ ಆಗುವುದಿಲ್ಲ. ಸುದ್ದಿ ಯಾವ ಹೊತ್ತಿನಲ್ಲಾದರೂ ಹುಟ್ಟಬಹುದು. ಹಾಗೆಯೇ ಸುದ್ದಿ ಹಿಂದೆ ಹೋದರೆ, ಮಹಿಳೆಯನ್ನು ಮತ್ತೊಂದು ರೀತಿಯಲ್ಲಿ ಕಾಣುವ ಪರಿಸ್ಥಿತಿ ನಮ್ಮ ಈ ಕುಟುಂಬ

ವ್ಯವಸ್ಥೆಯಲ್ಲಿದೆ. ಇವೆಲ್ಲವೂ ನಮ್ಮ ಪಿತೃಪ್ರಧಾನ ಮೌಲ್ಯಗಳ ಬಳುವಳಿ ಎನ್ನುವುದನ್ನು ಮರೆಯಬಾರದು. ಇಂತಹ ಕಾರಣಗಳನ್ನೇ ಕೊಟ್ಟು ಮಹಿಳೆಯರನ್ನು ಮನೆಯಲ್ಲಿಯೇ ಕಟ್ಟಿಹಾಕುವಂತಹ ಕೆಲಸ ಇಂದಿಗೂ ನಡೆಯುತ್ತಿರುವುದನ್ನು ಕಾಣಬಹುದು. ಮನೆಯ ಅಥವಾ ಕುಟುಂಬದ ಮರ್ಯಾದೆ ಉಳಿಯಬೇಕಾದರೆ ಅಥವಾ ಹಾಳು ಮಾಡಬೇಕಾದರೆ ಅದಕ್ಕೆ ಮಹಿಳೆಯೇ ಕಾರಣ ಎಂಬುದನ್ನು ಈಗಾಗಲೇ ಸ್ಥಾಪಿತ ಗ್ರಹಿಕೆಯಾಗಿಬಿಟ್ಟಿದೆ. ಹಾಗಾಗಿ ಮಹಿಳೆಯರು ಹೊಸ್ತಿಲು ದಾಟಿಕೊಂಡು ಹೋಗಬಾರದು. ಒಂದುವೇಳೆ ಹೋದರೆ ಕತ್ತಲು ಆವರಿಸಿಕೊಳ್ಳುವ ಮುನ್ನ ಮನೆಯಲ್ಲಿರಬೇಕು. ಇವೆಲ್ಲವೂ ಮಹಿಳೆಯರ ಚಲನವಲನದ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವುದರ ಸಂಕೇತಗಳಾಗಿವೆ. ಹಾಗಾಗಿ ಸುಷ್ಮಾ ಅವರಿಗೆ ಚಲನವಲನದ ಸ್ವಾತಂತ್ರ್ಯವನ್ನು ನಿರಾಕರಿಸಿದ್ದನ್ನು ನಾವು ಕಾಣಬಹುದಾಗಿದೆ. ಎಲ್ಲಿಯವರೆಗೆ ಮನೆಯ ಮರ್ಯಾದೆಗೆ ಧಕ್ಕೆ ಬರುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯರನ್ನು ದುಡಿಸಿಕೊಳ್ಳುತ್ತದೆ ವ್ಯವಸ್ಥೆ. ಒಂದುವೇಳೆ ಮಹಿಳೆಯಿಂದ ಕುಟುಂಬದ ಗೌರವಕ್ಕೆ ಧಕ್ಕೆಯುಂಟಾಗುತ್ತದೆ ಎಂದು ಕಂಡು ಬಂದರೆ ತಾನು ಸುರಕ್ಷಿತ ಸ್ಥಳದಲ್ಲಿ ನಿಂತುಕೊಂಡು, ಮಹಿಳೆಗೆ ನಿರ್ಬಂಧ ಹಾಕುತ್ತದೆ. ಇದು ಪಿತೃಪ್ರಧಾನ ವ್ಯವಸ್ಥೆಯ ಒಳ ರಾಜಕಾರಣವಲ್ಲದೇ ಮತ್ತೇನೂ ಅಲ್ಲ. ಹಾಗಾಗಿಯೇ ಸುಷ್ಮಾ ಅವರು ಜಿಲ್ಲಾ ಕೇಂದ್ರದ ವರದಿಗಾರಿಕೆಯನ್ನು ಬಿಟ್ಟು ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಹಾಗೆಯೇ ಇನ್ನೊಂದು ಪ್ರಕರಣದಲ್ಲಿಯೂ ಸಹ ಪಿತೃಪ್ರಧಾನ ಮೌಲ್ಯಗಳು ಮಾಧ್ಯಮ ಕ್ಷೇತ್ರದಲ್ಲಿ ಹೇಗೆಲ್ಲ ಕೆಲಸ ಮಾಡುತ್ತವೆ ಎಂಬುದನ್ನು ತೋರಿಸಿಕೊಡುತ್ತದೆ. ಮಹಿಳೆಯರ ಬದುಕಿನ ಕೇಂದ್ರ ಮಹಿಳೆಯರೇ ಆಗಿರುವುದಿಲ್ಲ. ಅದರ ಕೇಂದ್ರ ಬೇರೊಬ್ಬರಾಗಿರುತ್ತಾರೆ. ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡಿರುವ ಮಹಿಳೆಯರು ಹೇಳಿಕೊಂಡಿರುವ ಸಮಸ್ಯೆಗಳನ್ನು ಅವಲೋಕಿಸಿದಾಗ, ಮಹಿಳೆಯರು ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡಲು ಸಿದ್ಧರಿದ್ದಾರೆ. ಆದರೆ, ಕುಟುಂಬ ವ್ಯವಸ್ಥೆ ಮತ್ತು ಸಂಸ್ಥೆಗಳೇ ಕೆಲಸಕ್ಕೆ ಕಳುಹಿಸಲು ನಿರಾಕರಿಸಿದ್ದನ್ನು ಕಾಣಬಹುದು. ಸಕಲ ಸವಲತ್ತುಗಳನ್ನು ಮತ್ತು ಸುರಕ್ಷತೆಯನ್ನು ಸಂಸ್ಥೆಗಳು ಮತ್ತು ಕುಟುಂಬಗಳು ಮಹಿಳೆಯರಿಗೆ ಒದಗಿಸಿದರೆ ಎಂತಹ ವಾತಾವರಣದಲ್ಲೂ ಅವರು ಕೆಲಸ ಮಾಡಬಲ್ಲರು ಎನ್ನುವುದನ್ನು ಈಗಾಗಲೇ ನಿರೂಪಿಸಿದ್ದಾರೆ.

ಉ. ಸಾರ್ವಜನಿಕರಿಂದ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಎದುರಿಸಿದ ಸಮಸ್ಯೆಗಳು : ಮಾಧ್ಯಮ ಕ್ಷೇತ್ರ ಎನ್ನುವುದು ಸಾರ್ವಜನಿಕ ಪ್ರಪಂಚಕ್ಕೆ ತೆರೆದುಕೊಂಡ ಸಂಸ್ಥೆಗಳಲ್ಲಿ ಒಂದು. ಹಾಗಾಗಿ ಸಮಾಜದಲ್ಲಿ ನಡೆಯುವ ಎಲ್ಲ ಬದಲಾವಣೆಗಳು ಮತ್ತು ಬೆಳವಣಿಗೆಗಳು ಜನರಿಗೆ ಬಹು ಬೇಗನೇ ತಿಳಿದುಬಿಡುತ್ತವೆ. ಸಮಾಜಕ್ಕೂ ಮತ್ತು ಮಾಧ್ಯಮಕ್ಕೂ ನೇರವಾದ ಸಂಬಂಧವಿದೆ. ಹಾಗಾಗಿ ಸಮಾಜದಲ್ಲಿ ನಡೆಯುವ ಯಾವುದೇ ಬದಲಾವಣೆಗಳನ್ನು ನೇರವಾಗಿ ಜನರಿಗೆ ತಲುಪಿಸುವ ಮತ್ತು ಅವರನ್ನು ಅರಿವಿನ ದಾರಿಗೆ ತರುವ ಕಾರ್ಯ ಮಾಧ್ಯಮ ಸಂಸ್ಥೆಗಳಿಂದ ನಡೆಯುತ್ತಿದೆ. ಹಾಗೆಯೇ ಮಾಧ್ಯಮದಲ್ಲಿ ಕೆಲಸ ಮಾಡುವ ಕೆಲಸಗಾರರೂ ಕೂಡ ಇದೇ ರೀತಿಯಲ್ಲಿ ಸಮಾಜದೊಂದಿಗೆ ನೇರ ಸಂಬಂಧ

ಇಟ್ಟುಕೊಂಡಿರುತ್ತಾರೆ. ಮಾಧ್ಯಮದ ವರದಿಗಾರರು ಸಮಾಜ ಮಧ್ಯೆಯೇ ನಿಂತುಕೊಂಡು ಕೆಲಸ ಮಾಡಬೇಕಾಗಿದ್ದರಿಂದ ಎಷ್ಟೋ ಸಂದರ್ಭಗಳಲ್ಲಿ ಅವರಿಗೆ ಸಾರ್ವಜನಿಕರಿಂದ ಸಮಸ್ಯೆಗಳನ್ನು ಎದುರಿಸಬೇಕಾದ ಅನಿವಾರ್ಯತೆಗಳು ಎದುರಾಗಿವೆ. ಪುರುಷರಿಗಿಂತ ಮಹಿಳಾ ಪ್ರತಿನಿಧಿಗಳಿಗೇ ಹೆಚ್ಚು ಸಮಸ್ಯೆಗಳು ಆಗಿರುವುದನ್ನು ಕಾಣಬಹುದಾಗಿದೆ. ಈ ಕಾರಣಕ್ಕಾಗಿಯೇ ಎಷ್ಟೋ ಮಹಿಳೆಯರು ಮಾಧ್ಯಮ ಕ್ಷೇತ್ರವನ್ನು ಬಿಟ್ಟು ಹೋಗಲು ನಿರ್ಧರಿಸಿದ ಉದಾಹರಣೆಗಳೂ ಸಿಗುತ್ತವೆ. ಸಾರ್ವಜನಿಕರ ಮಧ್ಯೆ ನಿಂತುಕೊಂಡು ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಸಾರ್ವಜನಿಕರಿಂದ ತೊಂದರೆಗೆ ಒಳಗಾದ ವರದಿಗಾರ್ತಿಯರು ತಮ್ಮ ಅನುಭವಗಳನ್ನು ಮುಂದಿನಂತೆ ಹಂಚಿಕೊಂಡಿದ್ದಾರೆ. ಅವರು ಸಾರ್ವಜನಿಕರಿಂದ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸಿದ್ದಾರೆ ಎಂಬುದನ್ನು ಅವರ ಹೇಳಿಕೆಗಳಿಂದಲೇ ವಿಶ್ಲೇಷಿಸಲಾಗಿದೆ.

ಸಿನಿಮಾ ವರದಿಗಾರ್ತಿ ಅಮೃತಾ ಅವರು ಹೇಳುವಂತೆ "ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ನಮ್ಮನ್ನು ನೋಡುಗರು ಒಂದು ರೀತಿಯಲ್ಲಿ ಆಕರ್ಷಕ ವಸ್ತು ಅಂತಾನೇ ಬೆರಗಿನಿಂದ ನೋಡುತ್ತಾರೆ. ನನ್ನ ಅನುಭವಕ್ಕೆ ಬಂದಂತೆ ನಾನು ಒಂದು ಖಾಸಗಿ ಚಾನೆಲ್‌ನಲ್ಲಿ ಸಿನಿಮಾಕ್ಕೆ ಸಂಬಂಧಿಸಿದ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದೆ. ಈ ಕಾರ್ಯಕ್ರಮವನ್ನು ನಿರೂಪಿಸುವಾಗ ಟಿವಿ ಪರದೆಯ ಮೇಲೆ ನಮ್ಮನ್ನು ಅತ್ಯಂತ ಸುಂದರವಾಗಿ ಮತ್ತು ಗ್ಲಾಮರ್ ರೀತಿಯಲ್ಲಿ ತೋರಿಸುತ್ತಾರೆ. ಆ ರೀತಿ ಕಾಣುವುದು ಅಥವಾ ಕಾಣಿಸಿಕೊಳ್ಳುವುದು ನಮ್ಮ ಆಯ್ಕೆ ಆಗಿರುವುದಿಲ್ಲ. ಬದಲಾಗಿ ಕಾರ್ಯಕ್ರಮದ ನಿರ್ಮಾಪಕರು ಹೇಳಿದಂತೆ ನಾವು ಕೇಳಬೇಕಾಗುತ್ತದೆ. ಹಾಗಾಗಿ ಆವರು ಯಾವ ರೀತಿಯ ಕಾಸ್ಟ್ಯೂಮ್ ಧರಿಸುವಂತೆ ಹೇಳುತ್ತಾರೋ, ನಾವು ಅದೇ ರೀತಿಯಲ್ಲಿ ಮೇಕಪ್ ಮತ್ತು ಡ್ರೆಸ್ ಮಾಡಬೇಕಾಗುತ್ತದೆ. ನಾವು ಹೀರೋ ಅಥವಾ ಹೀರೋಯಿನ್ ಸಂದರ್ಶನ ಮಾಡುವಾಗ ಅವರಷ್ಟೇ ಸುಂದರವಾಗಿ ಕಾಣುವಂತೆ ರೆಡಿ ಮಾಡಿಸಲಾಗುತ್ತದೆ. ಹಾಗಾಗಿ ಬಗೆಬಗೆಯ ಕಾಸ್ಟ್ಯೂಮ್‌ಗಳಲ್ಲಿ ನಾವೂ ಕಾಣಿಸಿಕೊಳ್ಳಬೇಕಾಗುತ್ತದೆ. ಹೀಗೆ ಕಲರ್‌ಫುಲ್ ಕಾರ್‍ಯಕ್ರಮವನ್ನು ನಿರೂಪಿಸುವ ನಾನು, ಒಂದಷ್ಟು ದಿನಗಳ ನಂತರ ನಮ್ಮೂರಿಗೆ ಹೋಗಬೇಕಾಗಿ ಬಂತು. ನಾನು ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹೋದಾಗ ಅಲ್ಲಿದ್ದ ಕೆಲವರು ಜನ ನನ್ನನ್ನು ನೋಡಿ ತಮ್ಮೊಳಗೆ ಮಾತಾಡುತ್ತಿದ್ದರು. ಕುತೂಹಲದಿಂದ ನನ್ನನ್ನೇ ದಿಟ್ಟಿಸುತ್ತಿದ್ದರು. ಹುಡುಗರ ಗುಂಪೊಂದು ನನ್ನ ಹತ್ತಿರಕ್ಕೆ ಬಂದು ಕೆಟ್ಟ ರೀತಿಯಲ್ಲಿ ಕಾಮೆಂಟ್ ಕೂಡ ಮಾಡಿದರು. ಮೇಡಮ್ ನೀವು ಬಿಡಿ ಸಖತ್ ಆಗಿ ಕಾಣ್ತೀರಾ. ಸಖತ್ ಹಾಟ್ ಮಗಾ. ನಿಮ್ಮ ಕಾರ್ಯಕ್ರಮವನ್ನು ನಾವು ನೋಡ್ತಾನೆ ಇರ್ತೀನಿ. ಹೀರೋಯಿನ್ ರೀತಿಯಲ್ಲಿಯೇ ನೀವು ಡ್ರೆಸ್ ಮಾಡ್ತೀರಿ ಅಂದ್ರು. ಅವರ ಮಾತಿಂದ ನನಗೆ ತೀರಾ ಮುಜುಗರ ಆಯ್ತು. ತಿರುಗಿ ಮಾತಾಡೋಣ ಅಂದರೆ, ರಂಪಾಟ ಆಗುತ್ತದೆ. ಕೆಟ್ಟ ಮೂಡ್‌ನಿಂದ ಪ್ರವಾಸ ಮಾಡುವುದು ಬೇಡ ಅಂತ ಸುಮ್ಮನಾಗಿಬಿಟ್ಟೆ. ನಾವು ಟಿವಿ ಪರದೆಯ ಮೇಲೆ ಹೇಗೆ ಕಾಣುತ್ತೇವೆಯೋ ಹಾಗೆಯೇ ನಮ್ಮನ್ನು ಸಮೀಕರಿಸುತ್ತಾರೆ. ಅದರೊಂದಿಗೆ ನಮ್ಮ

ವ್ಯಕ್ತಿತ್ವವನ್ನೂ ಅಳೆದುಬಿಡುತ್ತಾರೆ. ತುಂಬಾ ಜನರನ್ನು ನಾನು ನೋಡಿದ್ದೇನೆ. ಅವರ ಮಾತನ್ನೂ ಕೇಳಿದ್ದೇನೆ. ಅವರೆಲ್ಲ ನನಗೊಂದು ಆಕರ್ಷಣೆ ಇದೆ, ಕಾಸ್ಟ್ಯೂಮ್ ಚೆನ್ನಾಗಿದೆ. ಮೇಕಪ್ ಚೆನ್ನಾಗಿದೆ, ಹೇರ್ ಸ್ಟೈಲ್ ಚೆನ್ನಾಗಿದೆ, ಹಾಟಾಗಿ ಕಾಣ್ತೀರಾ ಅಂತ ಕಾಮೆಂಟ್ ಮಾಡುತ್ತಾರೆಯೇ ವಿನಃ ನಮ್ಮ ಬುದ್ಧಿಮತ್ತೆಯ ಬಗ್ಗೆ ಮಾತಾಡಿದ್ದನ್ನು ಕೇಳಲೇ ಇಲ್ಲ. ಅವರು ಯಾಕೆ ಹಾಗೆ ಅಂತ ತುಂಬಾ ಯೋಚಿಸಿದ್ದೇನೆ. ತುಂಬಾ ಕಷ್ಟಪಟ್ಟು ಸ್ಟೋರಿಗಳನ್ನು ಮಾಡಿರುತ್ತೇವೆ. ಒಳ್ಳೆಯ ವಿಷಯವನ್ನು ಹೇಳಿರುತ್ತೇವೆ. ಆದರೆ, ಸಿನಿಮಾ ನಾಯಕಿಯರೊಂದಿಗೆ ನಮ್ಮನ್ನು ಹೋಲಿಸುತ್ತಾರೆ. ನಮಗೂ ಗ್ಲಾಮರ್ ಲೇಬಲ್ ಅಂಟಿಸುತ್ತಾರೆ. ನನ್ನನ್ನು ಒಬ್ಬ ಮನುಷ್ಯಳಂತೆ ನೋಡುವುದೇ ಇಲ್ಲ. ನಿಜಕ್ಕೂ ಇದು ಬೇಸರದ ಸಂಗತಿ" ಎಂದರು.

ಚಾಂದಿನಿ ಅವರು ಹೇಳುವಂತೆ "ನಾನು ಚಾನೆಲ್‌ವೊಂದರಲ್ಲಿ ಸಿನಿಮಾ ಮತ್ತು ಫ್ಯಾಶನ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಸಿನಿಮಾ ಸುದ್ದಿಗಳು ಯಾವತ್ತಿಗೂ ಕಲರ್‌ಫುಲ್. ಹೆಚ್ಚು ಜನರು ನೋಡುವಂತಹ ಕಾರ್ಯಕ್ರಮಗಳಲ್ಲಿ ಸಿನಿಮಾ ಸುದ್ದಿಗಳೇ ಹೆಚ್ಚಾಗಿರುತ್ತವೆ. ಈ ಕೆಲಸವೇ ವಿಭಿನ್ನ. ಶೂಟಿಂಗ್ ನಡೆಯುವ ಸ್ಥಳಕ್ಕೆ ಹೋಗಿ ಸುದ್ದಿಗಳನ್ನು ತರುತ್ತೇವೆ. ಸಿನಿಮಾಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು ಎಲ್ಲಿಯೇ ನಡೆದರೂ ನಾವು ಅಲ್ಲಿಗೆ ಹೋಗುತ್ತೇವೆ. ನಟ, ನಟಿಯರ ಸಂದರ್ಶನ, ನಿರ್ಮಾಪಕರ ಮತ್ತು ನಿರ್ದೇಶಕರೊಂದಿಗೆ ಮಾತುಕತೆ ಹೀಗೆ ನಾನಾ ರೀತಿಯ ಕಾರ್ಯಕ್ರಮಗಳನ್ನು ನಾವು ಮಾಡುತ್ತೇವೆ. ಇಂತಹ ಸಂದರ್ಭದಲ್ಲಿ ಹಲವು ಕಿರುಕುಳಗಳನ್ನು ನಾವು ಎದುರಿಸಬೇಕಾಗುತ್ತದೆ. ಅದರಲ್ಲೂ ಔಟ್‌ಡೋರ್‌ಗೆ ಹೋಗಿ ಸುದ್ದಿ ತರುವಾಗ ಸಾಕಷ್ಟು ಜನರು ಬಂದಿರುತ್ತಾರೆ. ಕಲಾವಿದರ ಅಭಿಮಾನಿಗಳು ತುಂಬಿರುತ್ತಾರೆ. ಅವರ ಮಧ್ಯೆ ಹೋಗಿ ಸುದ್ದಿ ತರುವುದು ಕಷ್ಟದ ಮಾತು. ಆ ಸಂದರ್ಭದಲ್ಲಿ ತುಂಬಾನೇ ಕಿರಿಕಿರಿ ಆಗುತ್ತದೆ. ನನ್ನದೇ ಜೀವನದಲ್ಲಿ ಅಂಥದ್ದೊಂದು ಕಹಿ ಘಟನೆ ಆಗಿದೆ.

ಅದೊಂದು ಸಿನಿಮಾ ಮುಹೂರ್ತದ ಸಂದರ್ಭ. ಆ ಚಿತ್ರಕ್ಕೆ ಕನ್ನಡದ ಸ್ಟಾರ್ ನಟರೊಬ್ಬರು ಹೀರೋ. ಹೆಸರಾಂತ ನಾಯಕಿಯೂ ಅಲ್ಲಿದ್ದರು. ಮುಹೂರ್ತದ ಸುದ್ದಿಯನ್ನು ಕವರ್ ಮಾಡಲು ನಾನು ಹೋಗಿದ್ದೆ. ಹೆಸರಾಂತ ತಾರಾ ಬಳಗವೇ ಸಿನಿಮಾದಲ್ಲಿ ಇರುವುದರಿಂದ ಆ ಕಾರ್ಯಕ್ರಮವನ್ನು ಅಲ್ಲಿಂದಲೇ ಲೈವ್ (ನೇರ ಪ್ರಸಾರ) ಮಾಡಬೇಕಾಗಿತ್ತು. ಸ್ಪಾಟ್‌ಗೆ ಹೋದಾಗ ಸಾವಿರಾರು ಜನರು ಅಲ್ಲಿದ್ದರು. ಕಾಲು ಇಡುವುದಕ್ಕೂ ಜಾಗ ಇರದಷ್ಟು ಅಭಿಮಾನಿಗಳು ತಮ್ಮ ನೆಚ್ಚಿನ ನಟನನ್ನು ನೋಡಲು ಬಂದಿದ್ದರು. ಅವರ ನಡುವೆಯೇ ನಿಂತು ನಾನು ಲೈವ್ ಮಾಡಬೇಕಿತ್ತು. ಜನಜಂಗುಳಿ ತೋರಿಸುತ್ತಾ ಅದನ್ನು ವಿವರಿಸಬೇಕಿತ್ತು. ಜನರ ಮಧ್ಯೆ ಧೈರ್ಯವಾಗಿ ನುಗ್ಗಿದೆ. ಅಲ್ಲಿ ಜಮಾಯಿಸಿದ್ದ ಕೆಲ ಹುಡುಗರು ಬೇಕು ಅಂತಾನೇ ನನ್ನ ಮೈ ಮುಟ್ಟಿ ಕಿರಿಕಿರಿ ಮಾಡುತ್ತಿದ್ದರು. ಕೆಟ್ಟಕೆಟ್ಟದ್ದಾಗಿ (ಡಬ್ಬಲ್ ಮೀನಿಂಗ್ ಶಬ್ದಗಳು) ಮಾತಾನಾಡುತ್ತಿದ್ದರು. ನನ್ನ ಟೆನ್‌ಷನ್‌ನಲ್ಲಿ ನಾನು. ಅವರು ಯಾರು ಎಂದು ಕಂಡುಹಿಡಿಯಲು ಆಗದಂತಹ ಪರಿಸ್ಥಿತಿ. ಗುಂಪಿನ ಮಧ್ಯೆ ಹೋಗಿ ಕೆಲಸ ಮಾಡುವಾಗ ಈ ತರಹದ ಕಿರಿಕಿರಿಗಳು

ಸಾಮಾನ್ಯ ಅನಿಸಿಬಿಟ್ಟವೆ. ಆ ರೀತಿ ಆದಾಗ ಮನಸ್ಸಿಗೆ ತುಂಬಾ ಬೇಸರ ಆಗುತ್ತದೆ. ನಾವು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇವೆ ಅಂತ ಕೋಪ ಬರುತ್ತದೆ. ಆ ಸಮಯದಲ್ಲಿ ಅವರೊಂದಿಗೆ ಜಗಳಕ್ಕೆ ನಿಂತರೆ, ನಮ್ಮ ಕೆಲಸ ಆಗುವುದಿಲ್ಲ. ನೇರ ಪ್ರಸಾರ ಇರುವುದರಿಂದ ನಮ್ಮ ಮೇಲೂ ಅದರ ಪರಿಣಾಮ ಬೀರುತ್ತದೆ. ಹಾಗಾಗಿ ಹಿಂಸೆಯ ಮಧ್ಯೆಯೇ ಕೆಲಸ ಮಾಡುವಂತಹ ಅನಿವಾರ್ಯತೆ ಬಂದು ಬಿಡುತ್ತದೆ. ಈ ರೀತಿಯ ಕಿರುಕುಳ ಅನೇಕ ಬಾರಿ ಆಗಿದೆ. ಎಷ್ಟೋ ಸಲ ನಾನು ಬೈದದ್ದೂ ಇದೆ. ಆಗ ಅವರು ಮತ್ತೊಂದು ರೀತಿಯಲ್ಲಿ ನನಗೆ ತೊಂದರೆ ಕೊಡುವುದಕ್ಕೆ ನೋಡುತ್ತಾರೆ. ಹಾಗೆ ಮಾಡಿದ್ದೂ ಇದೆ. ಜನರ ಮಧ್ಯೆ ಹೋಗಿ ಕೆಲಸ ಮಾಡಲು ನಿಜಕ್ಕೂ ಭಯ ಆಗುತ್ತದೆ" ಅಂದರು.

ಸಾರ್ವಜನಿಕ ನಡುವಳಿಕೆಯ ಬಗ್ಗೆ ಇನ್ನೂ ಅರಿವಿನ ಕೆಲಸವಾಗಿಲ್ಲ. ಹಾಗಾಗಿಯೇ ಸಂತೆ, ಜಾತ್ರೆ, ಜನಜಂಗುಳಿಯ ಸಂದರ್ಭದಲ್ಲಿ ಮಹಿಳೆಯರಿಗ ಚುಡಾಯಿಸುವ, ಅಸಭ್ಯವಾಗಿ ವರ್ತಿಸುವಂತಹ ಕೆಲಸಗಳು ನಡೆಯುತ್ತಲೇ ಇವೆ. ಇಂತಹ ಘಟನೆಗಳು ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರನ್ನೂ ಬಿಟ್ಟಿಲ್ಲ ಎಂಬುದು ಮೇಲಿನ ವರದಿಗಾರ್ತಿಯರ ಅನುಭವಗಳಿಂದ ಗೊತ್ತಾಗುತ್ತದೆ.

ಮಹಿಳೆಯನ್ನು ಒಬ್ಬ ಮನುಷ್ಯಳನ್ನಾಗಿ ನೋಡುವ ಮನಸ್ಥಿತಿ ಪುರುಷ ಸಮಾಜಕ್ಕೆ ಇನ್ನೂ ಬಂದಿಲ್ಲ. ಪುರುಷ ಕಣ್ಣುಗಳು ಇನ್ನೂ ಅವಳ ದೇಹ ಕೇಂದ್ರಿತವಾಗಿಯೇ ನೋಡುತ್ತಿವೆ. ಅವಳನ್ನು ಭೋಗದ ವಸ್ತು ಎಂಬಂತೆಯೇ ಚಿತ್ರಿಸುತ್ತಿವೆ. ಈ ಕಾರಣದಿಂದಾಗಿಯೇ ಜನಜಂಗುಳಿಯ ಮಧ್ಯೆ ಮಹಿಳೆಯು ಕೆಲಸ ಮಾಡುವಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಾಳೆ. ಅವಳನ್ನು ವರದಿಗಾರ್ತಿಯನ್ನಾಗಿ ನೋಡದೇ ಒಬ್ಬ ಮಹಿಳೆಯನ್ನಾಗಿ ನೋಡುತ್ತಿರುವುದರಿಂದ ಸಮಸ್ಯೆಗಳು ಉದ್ಭವಿಸುತ್ತಿವೆ. ಹಾಗೆ ಅವರನ್ನು ನೋಡಲು ಸುದ್ದಿ ವಾಹಿನಿಗಳು ಕಾರಣ ಎನ್ನುವುದನ್ನು ಮರೆಯಬಾರದು. ಸುದ್ದಿ ವಾಹಿನಿಗಳು ಕೂಡ ತನ್ನ ಮಹಿಳಾ ಪ್ರತಿನಿಧಿಯನ್ನು ಗ್ಲಾಮರ್ ಗೊಂಬೆಯಂತೆಯೇ ಚಿತ್ರಿಸಲಾಗುತ್ತದೆ. ಜನರನ್ನು ಸೆಳೆಯಲು ನಾನಾ ತಂತ್ರಗಳನ್ನು ಮಾಡಲಾಗುತ್ತದೆ. ಸಿನಿಮಾದ ನಾಯಕಿಯೋ ಅಥವಾ ತಮ್ಮ ಚಾನೆಲ್‌ನ ಪ್ರತಿನಿಧಿಯೋ ಎಂಬ ಗೊಂದಲ ಮೂಡುವಂತೆ ನಿರೂಪಕಿಯ ಕಾಸ್ಟ್ಯೂಮ್ ಮತ್ತು ಮೇಕಪ್ ಇರುತ್ತದೆ. ಪುರುಷ ಕಣ್ಣುಗಳಿಗೆ ಪ್ರಚೋದಿಸುವಂತೆ ಚಾನೆಲ್ ಪ್ರತಿನಿಧಿಗಳನ್ನು ತೋರಿಸುವುದರಿಂದ ಕೆಟ್ಟ ಘಟನೆಗಳಿಗೆ ಆ ಮಹಿಳೆಯರು ಈಡಾಗುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿತ್ವ ವಿರೂಪ : ಇನ್ನೊಂದು ಪ್ರಕರಣದಲ್ಲಿ ವಿಮಲಾ ಅವರು ಹೇಳುವಂತೆ "ನಾನು ಮಹಿಳೆ ಅನ್ನುವ ಕಾರಣಕ್ಕಾಗಿ ಹೇಗೆಲ್ಲ ಮಾನಸಿಕ ಹಿಂಸೆ ಕೊಡುತ್ತಾರೆ ಅಂದರೆ, ನಾನು ಈ ಮೀಡಿಯಾ ಕ್ಷೇತ್ರದಲ್ಲಿ ಬೆಳೆಯುವುದೇ ಬೇಡ ಅಂತ ಅವರು ತೀರ್ಮಾನಿಸಿ ಬಿಡ್ತಾರೆ. ನನಗೆ ಜಾತಿ, ಧರ್ಮ, ಹೆಣ್ಣು, ಗಂಡು ಹೀಗೆ ಕೀಳರಿಮೆ ಇಲ್ಲ. ತಪ್ಪು

ಎಲ್ಲಿ ಕಾಣುತ್ತದೆಯೋ ಅದರ ಬಗ್ಗೆ ಮಾತಾಡುತ್ತೇನೆ. ಈ ಕಾರಣದಿಂದಾಗಿಯೇ ಹೆಚ್ಚು ಟಾರ್ಗೆಟ್ ಆಗಿದ್ದೇನೆ. ನನ್ನ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹುಡುಗರು ಅತೀ ಕೆಟ್ಟ, ಕೊಳಕು ಭಾಷೆಯಲ್ಲಿ ಬರೆದು ಮಾನಸಿಕ ಕಿರುಕುಳ ಕೊಟ್ಟರು. ಕೇವಲ ನನ್ನ ಬಗ್ಗೆ ಮಾತ್ರವಲ್ಲ ನನ್ನ ಫ್ಯಾಮಿಲಿಯನ್ನೂ ಅವರು ಎಳೆದು ತರುತ್ತಿದ್ದರು. ಸೊಂಟದ ಕೆಳಗಿನ ಮಾತುಗಳನ್ನಾಡುವುದು, ಕೊಳಕಾದ ಕಾಮೆಂಟ್ ಮಾಡುವುದು (ಅವುಗಳನ್ನೆಲ್ಲಾ ಹೇಳೋಕಾಗಲ್ಲ) ಹೀಗೆ ನಾನಾ ರೀತಿಯ ನಿಂದನೆಗಳಿಗೆ ನಾನು ಒಳಗಾಗಿದ್ದೇನೆ. ಮಹಿಳೆಯರು ನೇರವಾಗಿ ಮಾತನಾಡುವುದೇ ತಪ್ಪು ಎನ್ನುವ ಮಟ್ಟಿಗೆ ಅವರ ಕಾಮೆಂಟ್ ಇರುತ್ತದೆ. ಮಹಿಳೆಯರ ಅಭಿವೃದ್ಧಿ ಸಹಿಸದ ಕೆಲವು ಪುರುಷರು ಹೀಗೆ ಕೆಟ್ಟ ಕಟ್ಟದಾಗಿ ಮಾತನಾಡಲು ಪ್ರಾರಂಭಿಸುತ್ತಾರೆ. ಸಾಮಾಜಿಕ ಜಾಲತಾಣದಲ್ಲಿ ನನ್ನ ಕುಟುಂಬವನ್ನೂ ಅವರು ಎಳೆದು ತಂದ ಕಾರಣಕ್ಕಾಗಿ ನಾನು ತುಂಬಾನೇ ನೊಂದುಕೊಂಡಿದ್ದೆ. ಮಾನಸಿವಾಗಿ ತುಂಬ ನೋವನ್ನು ಅನುಭವಿಸಿದ್ದೇನೆ. ಏನ್ ಮಾಡೋದು ನಾವು ಮಾಡೋ ಕೆಲಸದಿಂದ ಮನೆಯವರೂ ಸಹ ನಿಂದನೆಗೆ ಒಳಗಾಗಬೇಕಾಗುತ್ತದೆ. ನನ್ನ ಕಾರಣಕ್ಕಾಗಿ ನನ್ನ ಕುಟುಂಬ ಕಟಕಟೆಯಲ್ಲಿ ನಿಲ್ಲುತ್ತದೆ ಎಂಬ ಅರಿವಾಗಿ ಅಳೂನೇ ಬರುತ್ತದೆ. ಏನೂ ಮಾಡುವುದಕ್ಕೆ ಆಗಲ್ಲ. ಅನಿವಾರ್ಯವಾಗಿ ನಾನು ಅದನ್ನೆಲ್ಲಾ ಸಹಿಸಿಕೊಂಡಿದ್ದೇನೆ" ಎಂದು ಹೇಳಿದರು.

ಗಿಫ್ಟ್ ಕೊಡುವ ಮೂಲಕ ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರ ಮೇಲೆ ನಿಯಂತ್ರಣದ ಪ್ರಯತ್ನ :

ಇನ್ನೊಂದು ಪ್ರಕರಣದಲ್ಲಿ ಮೀನಾ ಅವರು ಹೇಳುವಂತೆ "ರಾಜಕಾರಣಿಗಳ ವೈಯಕ್ತಿಕ ಪ್ರೆಸ್‌ಮೀಟ್‌ಗೆ ವರದಿ ಮಾಡಲು ಹೋದಾಗ ನಾನಾ ರೀತಿಯ ಕಿರಿಕಿರಿಗಳು ಆಗುತ್ತಲೇ ಇರುತ್ತವೆ. ಅದರಲ್ಲೂ ಪ್ರಭಾವಿ ರಾಜಕಾರಣಿಗಳ ಪತ್ರಿಕಾಗೋಷ್ಠಿಗಳಲ್ಲಿ ಸ್ವಲ್ಪ ಜಾಸ್ತಿ ಎನ್ನಬಹುದು. ಯಾಕೆಂದರೆ ಅವರ ಬೆಂಬಲಿಗರು ಕೂಡ ಕಿರಿಕಿರಿಗಳ ಒಂದು ಭಾಗವಾಗಿರುತ್ತಾರೆ. ತಮ್ಮ ನಾಯಕನ ಸುದ್ದಿಯು ಚೆನ್ನಾಗಿ ಬರಬೇಕು ಎನ್ನುವ ಕಾರಣಕ್ಕಾಗಿ ಜನನಾಯಕರು ಮತ್ತು ಹಿಂಬಾಲಕರು ನಮಗೆ ಗಿಫ್ಟ್‌ಗಳ ಆಮೀಷ ತೋರಿಸುತ್ತಾರೆ. ನಾವೇನಾದರೂ ಅವರು ಕೊಡುವ ಉಡುಗೊರೆಯನ್ನು ತಗೆದುಕೊಂಡರೆ ಅಲ್ಲಿಂದ ಮತ್ತೊಂದು ರೀತಿಯ ಹಿಂಸೆ ಶುರುವಾಗುತ್ತದೆ. ಸುಖಾಸುಮ್ಮನೆ ಫೋನ್ ಮಾಡುತ್ತಾರೆ. ತಮ್ಮ ನಾಯಕನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. ಸರಕಾರದ ಮಟ್ಟದಲ್ಲಿ ವೈಯಕ್ತಿಕ ಕೆಲಸಗಳೇನಾದರೂ ಇದ್ದರೆ ಹೇಳಿ ಮೇಡಮ್, ಸಾಹೇಬ್ರಿಗೆ ಹೇಳಿ ಮಾಡಿಸ್ತೀನಿ ಅಂತ ಮಾತಾಡ್ತಾರೆ. ಇಂತಹ ಆಸೆಗಳಿಗೆ ಬಲಿಯಾಗಿ ಲೈಂಗಿಕ ಕಿರುಕುಳಕ್ಕೂ ಬಲಿಯಾದವರನ್ನು ನಾನು ಕಣ್ಣಾರೆ ಕಂಡಿದ್ದೇನೆ. ಎಲ್ಲರೂ ಹಾಗೆಯೇ ಮಾಡುತ್ತಾರೆ ಅಂತ ನಾನು ಹೇಳುತ್ತಿಲ್ಲ. ಈ ರೀತಿಯ ಕಿರಿಕಿರಿಗಳನ್ನು ಕಂಡಿದ್ದೇನೆ. ನನಗೂ ಕೂಡ ಹಲವಾರು ರೀತಿಯಲ್ಲಿ ಗಿಫ್ಟ್ ಕೊಡಲು ಬಂದಿದ್ದರು. ನಾನು ಅದನ್ನು ನಿರಾಕರಿಸಿಯೂ ಕಿರಿಕಿರಿ ಅನುಭವಿಸಿದ್ದೇನೆ. ನಾನು ಸೊಕ್ಕಿನ ಹೆಂಗಸು ಅಂತ ಅವರಿಂದ ಅನಿಸಿಕೊಂಡಿದ್ದೇನೆ.

ಅಂತಹ ಗಿಫ್ಟ್‌ಗಳನ್ನು ಬೇಡ ಅಂದಿದ್ದಕ್ಕೆ ನಾನು ಗಾಂಧಿ ಮೊಮ್ಮಗಳು ಅಂತ ಜರದಿದ್ದನ್ನೂ ಕೇಳಿದ್ದೇನೆ. ರಾಜಕಾರಣಿಗಳ ಮತ್ತು ಅವರ ಬೆಂಬಲಿಗರ ಮಾತುಗಳನ್ನು ಕೇಳದೇ ಇದ್ದರೆ, ಆಫೀಸ್‌ವರೆಗೂ ನಮ್ಮ ಬಗ್ಗೆ ಮಾತುಗಳು ಬರುತ್ತವೆ. ಇಲ್ಲಸಲ್ಲದ ಆರೋಪ ಮಾಡಿ, ನಮ್ಮ ಕೆಲಸಕ್ಕೆ ತೊಂದರೆ ಕೊಡುವವರೂ ಕೂಡ ಇದ್ದಾರೆ. ಗಿಫ್ಟ್ ಪಡೆದರೆ ಒಂದು ರೀತಿಯ ಹಿಂಸೆ, ತಗೆದುಕೊಳ್ಳದೇ ಇದ್ದರೆ ಮತ್ತೊಂದು ರೀತಿಯ ತೊಂದರೆ. ಅಂದರೆ, ಗಿಫ್ಟ್ ನೆಪದಲ್ಲಿ ನಮ್ಮನ್ನು ನಿಯಂತ್ರಿಸಲು ಅವರು ನೋಡುತ್ತಾರೆ. ಅನೇಕ ಬಾರಿ ಇಂತಹ ಕೆಟ್ಟ ಅನುಭವಗಳು ನನಗೂ ಆಗಿವೆ. ಈ ಬಗೆಯ ಹಿಂಸೆಗಳನ್ನು ಅನುಭವಿಸುತ್ತಲೇ ಕೆಲಸದಲ್ಲಿ ಮುಂದುವರೆದಿದ್ದೇನೆ. ಒಂದು ರೀತಿಯಲ್ಲಿ ಈಗದು ಅಭ್ಯಾಸವಾಗಿದೆ. ನನ್ನ ಹತ್ತಿರಕ್ಕೆ ಗಿಫ್ಟ್ ತಗೆದುಕೊಂಡು ಬರಲು ಹಿಂಜರಿಯುತ್ತಾರೆ. ಯಾಕೆಂದರೆ ಅವರ ಕಣ್ಣಲ್ಲಿ ನಾನು ಸೊಕ್ಕಿನ ಹೆಂಗಸು" ಎಂದರು.

ಹೀಗೆ ಸಾರ್ವಜನಿಕರು ಎಂದು ಕರೆಯಲ್ಪಡುವ ಸಮಾಜದ ಜನರು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರ ಬಗೆಗೆ ಒಂದು ಬಗೆಯ ಆಲೋಚನೆ ಹೊಂದಿರುತ್ತಾರೆ. ಹಾಗಾಗಿಯೇ ಸಾರ್ವಜನಿಕ ಸ್ಥಳಗಳಲ್ಲಿ ಕೆಲಸ ಮಾಡುವಾಗ ಪತ್ರಕರ್ತೆಯರು ಹಲವು ಬಗೆಯ ಹಿಂಸೆಗಳನ್ನು ಅನುಭವಿಸಿದ್ದನ್ನು ಕಾಣಬಹುದು. ಮೇಲಿನ ಮೊದಲ ಪ್ರಕರಣದಲ್ಲಿ ಮಹಿಳಾ ಪ್ರತಿನಿಧಿಯೇ ಹೇಳಿದಂತೆ, ಟಿವಿ ಪರದೆಯ ಮೇಲೆ ಕಾಣಿಸಿಕೊಂಡಂತಹ ನಿರೂಪಕಿಯರು ನಿಜ ಜೀವನದಲ್ಲೂ ಹಾಗೆಯೇ ಇರುತ್ತಾರೆ ಎಂಬ ಕಲ್ಪನೆ ಜನಸಾಮಾನ್ಯರದ್ದು. ಅಲ್ಲದೇ, ನಾಯಕಿಯರ ಜತೆ ಅವರ ಸಮೀಕರಣ ಕೂಡ ನಡೆದು ಬಿಡುತ್ತದೆ. ಪಾತ್ರ ಮತ್ತು ವ್ಯಕ್ತಿಯ ನಡುವಿನ ವ್ಯತ್ಯಾಸವನ್ನು ಗುರುತಿಸುವ ಸೂಕ್ಷ್ಮತೆಯನ್ನು ಸಮಾಜ ಕಳೆದುಕೊಂಡು ಬಿಟ್ಟಿದೆ. ಹಾಗಾಗಿಯೇ ಹೆಣ್ಣನ್ನೂ ಈಗಲೂ ದೇಹದೃಷ್ಟಿಯಿಂದ ನೋಡಲಾಗುತ್ತಿದೆ. ಈ ಕಾರಣವೇ ಮಹಿಳೆಯರ ಮೇಲಿನ ದೌರ್ಜನ್ಯಕ್ಕೂ ಕಾರಣವಾಗಿದೆ.

ಎರಡನೇ ಪ್ರಕರಣದಲ್ಲಿ ಚಾಂದಿನಿಯವರು ಕೂಡ ಸಾರ್ವಜನಿಕರಿಂದ ಹಿಂಸೆಗೆ ಒಳಗಾಗಿರುವುದನ್ನು ಕಾಣಬಹುದು. ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಕಂಡು ಕುಚೋದ್ಯದ ಮಾತುಗಳನ್ನು ಆಡುವುದು, ಆ ಮೂಲಕ ಅವರ ಲೈಂಗಿಕತೆಯನ್ನು ಕೆಣಕುವುದು, ಮಹಿಳೆಯರ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತಹ ಕೆಲಸಗಳನ್ನು ಮಾಡುವುದು ಕಂಡುಬರುತ್ತದೆ. ಮಹಿಳೆಯರ ಮೈಯನ್ನು ಮುಟ್ಟುವುದರ ಮೂಲಕ ವಿಕೃತ ಆನಂದ ಪಡುವಂತಹ ಪುರುಷರ ಮನಸ್ಥಿತಿ ಕೂಡ ಆತಂಕಕ್ಕೀಡು ಮಾಡುತ್ತದೆ. ಉಳಿದ ಪ್ರಕರಣಗಳಲ್ಲಿಯೂ ಸಹ ಪುರುಷ ವ್ಯವಸ್ಥೆಯು ಮಹಿಳೆಯರನ್ನು ಯಾವಾಗಲೂ ಕಾಮಾಲೆ ಕಣ್ಣಿನಿಂದಲೇ ನೋಡುವುದನ್ನು ತೋರಿಸುತ್ತದೆ. ಮಹಿಳೆಯರ ಲೈಂಗಿಕತೆಯ ಮೇಲೆ ಪುರುಷ ವ್ಯವಸ್ಥೆಯು ಯಾವಾಗಲೂ ಹದ್ದಿನ ಕಣ್ಣುಗಳನ್ನಿಟ್ಟಿರುತ್ತದೆ. ಹಾಗಾಗಿಯೇ ಮಹಿಳೆಯರನ್ನು ಒಬ್ಬ ವ್ಯಕ್ತಿಯನ್ನಾಗಿ ಗುರುತಿಸದೇ, ದೇಹದ ಮೂಲಕವೇ ಗುರುತಿಸುತ್ತಿರುವುದು ಒಂದು ವಿಪರ್ಯಾಸದ ಸಂಗತಿ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಸಮಾಜದಲ್ಲಿನ ಜನರಿಂದ

ಹಲವು ಲೈಂಗಿಕ ಹಿಂಸೆಗಳನ್ನು ಅನುಭವಿಸಿರುವುದು ಮೇಲಿನ ಪ್ರಕರಣಗಳಿಂದ ತಿಳಿದುಬರುತ್ತದೆ. ಹೆಣ್ಣಿನ ಲೈಂಗಿಕತೆಯ ಬಗೆಗೆ ಸಮಾಜಕ್ಕೆ ಮತ್ತು ಪ್ರಭುತ್ವಕ್ಕೆ ನಿಜವಾದ ಗೌರವವಿಲ್ಲ. ಹೆಣ್ಣಿನ ಲೈಂಗಿಕತೆ ಎನ್ನುವುದು ಈ ನಾಗರೀಕತೆಯ ಅಧೀನವಾಗಿ ಉಳಿದುಬಿಟ್ಟಿದೆ. ಹೆಣ್ಣು ಒಂದು ಅನುಭೋಗದ ವಸ್ತುವೆಂದು ಕಾಣುವ ನಾಗರೀಕತೆಗಾಗಲಿ, ತನ್ನ ವಂಶೋದ್ಧಾರಕ್ಕಾಗಿ ಇರುವ ಒಂದು ಯಂತ್ರವೆಂದೇ ನಡೆಸಿಕೊಳ್ಳುತ್ತಲೇ ತೋರಿಕೆಯಲ್ಲಿ ತಾಯಿ ಎಂದು ಗೌರವಾನ್ವಿತವಾಗಿ ಹೇಳುವ ಸಭ್ಯ ನಾಗರೀಕತೆಗಾಗಲಿ, ತನ್ನ ಪ್ರಯೋಗಗಳಿಗೆ ಸುಲಭವಾಗಿ ದಕ್ಕುವ ಒಂದು ಪಶುವೆಂದು ಕಾಣುವ ಪ್ರಭುತ್ವಕ್ಕಾಗಲಿ ಹೆಣ್ಣು ಎಂದಿಗೂ ಒಂದು ವ್ಯಕ್ತಿಯಾಗಿ ಕಾಣುವುದಿಲ್ಲ. ಅವಳೊಂದು ದೇಹವಾಗಿ ಮಾತ್ರ ಉಳಿದು ಬಿಡುತ್ತಾಳೆ"**(ಶ್ರೀಮತಿ ಎಚ್.ಎಸ್. 2004, ಪು–67)**.

ಹೀಗೆ ಮೇಲಿನ ಎಲ್ಲ ಪ್ರಕರಣಗಳನ್ನು ಗಮನಿಸಿದರೆ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರನ್ನು ಸಾರ್ವಜನಿಕರು ಯಾವತ್ತೂ ವ್ಯಕ್ತಿಯಾಗಿ ನೋಡದಿರುವುದು ಕಂಡುಬರುತ್ತದೆ. ಮಹಿಳೆಯರು ಹಿಂಸೆಗೆ ಒಳಗಾಗಿದ್ದು ಅಥವಾ ಮುಜುಗರಕ್ಕೆ ಒಳಗಾಗಿದ್ದು ಲೈಂಗಿಕತೆಯ ಕುರಿತಾಗಿ ಮಾತನಾಡಿದಾಗ ಮತ್ತು ಆ ಮೂಲಕ ಆಕೆಯ ವ್ಯಕ್ತಿತ್ವವನ್ನು ಹೀಯಾಳಿಸಿದಾಗ ತುಂಬಾ ನೊಂದುಕೊಂಡಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಸಾರ್ವಜನಿಕರಿಂದ ಹಲವು ಕಾರಣಗಳಿಗಾಗಿ ಹಿಂಸೆಯನ್ನು ಅನುಭವಿಸಿರುವುದು ಕಂಡುಬರುತ್ತದೆ. ವಿದ್ಯುನ್ಮಾನ ಮಾಧ್ಯಮವು ಇಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಿದೆ. ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ, ಮಹಿಳಾ ಕೆಲಸಗಾರರ ಸಂಖ್ಯೆ ತುಸು ಹೆಚ್ಚಿದೆ. ಸಾರ್ವಜನಿಕರ ಇಂತಹ ವರ್ತನೆಯ ಕಾರಣದಿಂದಾಗಿ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಕಡಿಮೆಯಾದರೂ ಅಚ್ಚರಿ ಪಡಬೇಕಿಲ್ಲ. ಅಲ್ಲದೇ, ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಪತ್ರಕರ್ತೆಯರು ಬಹುತೇಕವಾಗಿ ಸಮಾಜದ ಮಧ್ಯೆ ನಿಂತು, ಸಾರ್ವಜನಿಕರ ಕುಂದು ಕೊರತೆಗಳನ್ನು ಸುದ್ದಿ ಮಾಡುತ್ತಾರೆ. ಸಾರ್ವಜನಿಕರ ನೋವು ನಲಿವುಗಳಿಗೆ ಸ್ಪಂದಿಸುತ್ತಾರೆ. ಜನರಿಂದಲೇ ಸುದ್ದಿ ಮಾಧ್ಯಮಗಳ ಜನಪ್ರಿಯತೆ ಇರುವುದರಿಂದ, ಅಂತಹ ಜನರಿಂದಲೇ ಇಂದು ಮಹಿಳಾ ಪ್ರತಿನಿಧಿಗಳು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಜನರೇ ಟಿಆರ್‌ಪಿಯ ಮೂಲ ಆಗಿದ್ದರಿಂದ ಸುದ್ದಿ ಸಂಸ್ಥೆಗಳು ತನ್ನ ಪ್ರತಿನಿಧಿಗಳಿಗೆ ಯಾವ ರೀತಿಯ ಸುರಕ್ಷತೆ ಕೊಡುತ್ತದೆ ಎಂಬ ಚರ್ಚೆ ಕೂಡ ಆಗುತ್ತಿದೆ. ಒಟ್ಟಾರೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರಿಂದಲೂ ತೊಂದರೆ ಒಳಗಾಗಿದ್ದನ್ನು ಕಾಣಬಹುದು.

ಊ. ಸರ್ಕಾರಿ ಅಧಿಕಾರಿಗಳಿಂದ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಎದುರಿಸಿದ ಸಮಸ್ಯೆಗಳು : ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಸರ್ಕಾರಿ ಇಲಾಖೆಯ ಅಧಿಕಾರಿಗಳಿಂದಲೂ ಹಿಂಸೆಗೆ ಒಳಗಾಗಿರುವುದನ್ನು ಕಾಣಬಹುದು. ಸ್ಟುಡಿಯೋದಲ್ಲಿ ಕೆಲಸ ಮಾಡುವ ಮಹಿಳೆಯರಿಗಿಂತ ಫೀಲ್ಡ್‌ಗೆ ಹೋಗಿ ಸುದ್ದಿ ತರುವ

ಮಹಿಳೆಯರು ಹೆಚ್ಚಾಗಿ ಕಿರುಕುಳಕ್ಕೆ ಒಳಗಾಗುತ್ತಾರೆ. ಅದರಲ್ಲೂ ಅಪರಾಧ ವರದಿಗಾರಿಕೆ ಮಾಡುವ ಮಹಿಳೆಯರು ಈ ಬಗೆಯ ಹಿಂಸೆಗಳಿಗೆ ಒಳಗಾಗಿದ್ದನ್ನು ಕಾಣಬಹುದು. ಈ ವಿಭಾಗದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಸರಕಾರಿ ಅಧಿಕಾರಿಗಳಿಂದ ಯಾವ ಬಗೆಯಲ್ಲಿ ಹಿಂಸೆಗೆ ಒಳಗಾಗಿದ್ದಾರೆ ಎಂಬುದನ್ನು ಅವರ ಮಾತಿನಲ್ಲಿಯೇ ಹೇಳುವುದರ ಮೂಲಕ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಖಾಸಗಿ ವಾಹಿನಿಯಲ್ಲಿ ಕ್ರೈಂ ರಿಪೋರ್ಟರ್ ಆಗಿರುವ ಮಹಿಳಾ ಪ್ರತಿನಿಧಿಯೊಬ್ಬರು ಹೇಳಿದಂತೆ "ನಾನು ಕ್ರೈಂ ರಿಪೋರ್ಟಿಂಗ್ ವಿಭಾಗದಲ್ಲಿ ವರದಿಗಾರ್ತಿಯಾಗಿ ಕೆಲಸ ಮಾಡುತ್ತಿದ್ದೇನೆ. ಅದೊಂದು ದಿನ ಕೊಲೆಯೊಂದರ ಸುದ್ದಿ ಮಾಡಲು ನಾನು ತೆರಳಿದ್ದೆ. ಕೊಲೆ ನಡೆದ ಸ್ಥಳದಲ್ಲಿ ನನಗೆ ಬೇಕಾದ ಹಲವು ಮಾಹಿತಿಯನ್ನು ಕಲೆ ಹಾಕಿದೆ. ಮತ್ತಷ್ಟು ಸುದ್ದಿಗಾಗಿ ನಾನು ಪೊಲೀಸ್ ಅಧಿಕಾರಿಯೊಬ್ಬರನ್ನು ಭೇಟಿ ಮಾಡಬೇಕಿತ್ತು. ಇಂತಹ ಸುದ್ದಿಗಳನ್ನು ಮಾಡುವಾಗ ಸಂಬಂಧ ಪಟ್ಟ ಠಾಣಾ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡುತ್ತೇವೆ. ಅಪರಾಧ ಜಗತ್ತಿನ ಅನೇಕ ವಿಷಯಗಳನ್ನು ನಮಗೆ ತಿಳಿಸುವುದೇ ಪೊಲೀಸ್ ಇಲಾಖೆ. ಹಾಗಾಗಿ ಕೊಲೆ ನ್ಯೂಸ್‌ಗೆ ಸಂಬಂಧವಾಗಿ ನಾನು ಒಬ್ಬ ಪೊಲೀಸ್ ಅಧಿಕಾರಿಯನ್ನು ಭೇಟಿ ಮಾಡಿದೆ. ನನಗಿರುವ ಉತ್ಸಾಹಕ್ಕೆ ಅಂದು ಅವರು ತುಂಬಾನೇ ಪ್ರೋತ್ಸಾಹ ನೀಡಿದರು. ನನಗೆ ಯಾವೆಲ್ಲ ಮಾಹಿತಿ ಬೇಕಿತ್ತೋ ಎಲ್ಲವನ್ನೂ ಕೊಟ್ಟರು. ಇನ್ನೇನಾದರೂ ಮಾಹಿತಿ ಬೇಕಾದರೆ ಕೇಳೋಣ ಅಂತ ಅವರ ಮೊಬೈಲ್ ನಂಬರ್ ತೆಗೆದುಕೊಂಡು ಬಂದೆ. ಅವರು ನನ್ನ ನಂಬರ್ ಕೂಡ ಪಡೆದುಕೊಂಡರು. ಹೀಗೆಯೇ ಅವರು ಪರಿಚಯವಾದರು. ನಂತರದ ದಿನಗಳಲ್ಲಿ ಅವರು ನನಗೆ ಅವರೇ ನ್ಯೂಸ್ ಕೊಡುತ್ತಿದ್ದರು. ಅನೇಕ ಮಾಹಿತಿಗಳನ್ನು ಅವರು ನೀಡುತ್ತಿದ್ದರು. ಅವರ ಸಹಕಾರದಿಂದಾಗಿ ನನಗೂ ಒಳ್ಳೊಳ್ಳೆ ನ್ಯೂಸ್ ಮಾಡಲು ಸಾಧ್ಯವಾಯಿತು. ತೀರಾ ಪರಿಚಿತರು ಎನ್ನುವಂತೆ ಅವರು ನನ್ನೊಂದಿಗೆ ಮಾತನಾಡಲು ಶುರು ಮಾಡಿದರು. ಒಂದು ದಿನ ಅವರು ಫೋನ್ ಮಾಡಿ ನನ್ನನ್ನು ಕಾಫಿಗೆ ಕರೆದರು. ಅವರು ಪೊಲೀಸ್ ಅಧಿಕಾರಿ. ನಾನು ಪತ್ರಕರ್ತೆ. ಇವರು ಯಾಕೆ ನನ್ನನ್ನು ಕಾಫಿಗೆ ಕರೆಯುತ್ತಾರೆ ಅಂತ ಅನುಮಾನ ಶುರುವಾಯಿತು. ಒಂದೆರಡು ಬಾರಿ ನಾನು ಬಿಝಿ ಆಗಿದ್ದೇನೆ ಅಂತ ತಪ್ಪಿಸಿಕೊಂಡೆ. ನಂತರವೂ ಅವರು ತುಂಬಾ ಒತ್ತಾಯ ಮಾಡುವುದಕ್ಕೆ ಶುರು ಮಾಡಿದರು. ಅವರ ವರ್ತನೆಯನ್ನು ನನಗೆ ಅರ್ಥ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಡಿನ್ನರಿಗೆ ಬನ್ನಿ ಎನ್ನುತ್ತಿದ್ದರು. ನನ್ನ ಬೇಕು ಬೇಡಿಕೆಗಳನ್ನು ಕೇಳೋಕೆ ಶುರು ಮಾಡಿದರು. ಅವರು ಆಡುತ್ತಿದ್ದ ಮಾತುಗಳು ಪರೋಕ್ಷವಾಗಿ ಮಂಚಕ್ಕೆ ಬರ್ತೀರಾ ಎನ್ನುವಂತೆ ಇದ್ದವು. ನನಗಂತೂ ಭಯ ಶುರುವಾಯ್ತು. ಅವರಿಂದ ಅನೇಕ ಮಾಹಿತಿಗಳನ್ನು ಪಡೆದಿದ್ದೇನೆ. ಒಳ್ಳೊಳ್ಳೆ ಸ್ಟೋರಿಗಳನ್ನು ಮಾಡಿದ್ದೇನೆ. ಏನಪ್ಪ ಮಾಡೋದು ಅಂತ ಗೊಂದಲ ಶುರುವಾಯಿತು. ಅವರಿಂದ ತಪ್ಪಿಸಿಕೊಳ್ಳಲು ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ. ಕೊನೆಗೆ ಒಂದು ನಿರ್ಧಾರಕ್ಕೆ ಬಂದುಬಿಟ್ಟೆ. ಕ್ರೈಂ ವರದಿಗಾರಿಕೆಯನ್ನೇ ಬಿಡೋಣ

ಅಂತ ತೀರ್ಮಾನ ಮಾಡಿ, ಬೇರೆ ವಿಭಾಗಕ್ಕೆ ಶಿಫ್ಟ್ ಮಾಡಿಸಿಕೊಂಡೆ. ಅವರ ನಂಬರ್ ಅನ್ನು ಕೂಡ ಡಿಲಿಟ್ ಮಾಡಿದೆ. ನನಗೆ ಸುದ್ದಿ ಕೊಡುವ ನೆಪದಲ್ಲಿ ಅವರು ನನ್ನೊಂದಿಗೆ ವಿಚಿತ್ರವಾಗಿ ವರ್ತಿಸೋಕೆ ಶುರು ಮಾಡಿದ್ದರು. ಅದನ್ನು ಲೈಂಗಿಕ ಕಿರುಕುಳ ಅನ್ನಲೇ ಅಥವಾ ಇನ್ನೇನು ಅನ್ನಬೇಕೋ ಗೊತ್ತಿಲ್ಲ. ಒಟ್ಟನಲ್ಲಿ ಆ ಅಧಿಕಾರಿ ನನ್ನೊಂದಿಗೆ ಆ ರೀತಿ ನಡೆದುಕೊಂಡ. ಅವರಿಂದಾಗಿಯೇ ನಾನು ವಿಭಾಗವನ್ನೇ ಬದಲಾಯಿಸಬೇಕಾಯಿತು' ಅಂತಾರೆ.

ಈ ಮೇಲಿನ ಪ್ರಕರಣದಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಅಧಿಕಾರಿಗಳು ಕೂಡ ಸಹಾಯ ಮಾಡುವ ನೆಪದಲ್ಲಿ ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಅದೊಂದು ಸರಕಾರಿ ಹುದ್ದೆ, ಅವರು ಅಧಿಕಾರಿ ಎಂಬುದಕ್ಕಿಂತಲೂ ಅವನೊಬ್ಬ ಪುರುಷ ಅನ್ನುವುದನ್ನು ಮರೆಯಬಾರದು. ಹಾಗಾಗಿಯೇ ವರದಿಗಾರ್ತಿಗೆ ಕಿರುಕುಳ ತಪ್ಪಿಲ್ಲ. ಈ ರೀತಿಯ ತೊಂದರೆ ಮಾಡುವುದು, ಕಿರುಕುಳ ಕೊಡುವುದು ತಪ್ಪು ಅಂತ ಅಧಿಕಾರಿಗೆ ಗೊತ್ತಿದ್ದರೂ, ಅವನು ನ್ಯಾಯ ಸ್ಥಾನದಲ್ಲಿ ಕೂತು ನೊಂದವರಿಗೆ ಧೈರ್ಯ ಹೇಳಬೇಕಾದವನು ಈ ರೀತಿ ವರ್ತಿಸಿದ್ದಾನೆ ಅಂದರೆ, ಅದೊಂದು ಪುರುಷ ಮನಸ್ಥಿತಿ ಅಷ್ಟೆ. ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರ ಆಲೋಚನೆಗಳು ತುಂಬಾ ಬಲಿಷ್ಠವಾಗಿರುತ್ತವೆ. ಅವುಗಳನ್ನು ಚಾಚೂ ತಪ್ಪದೇ ಪಾಲಿಸಿಕೊಂಡು ಬರುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಪುರುಷನಿಗೆ ಅಧಿಕಾರ ಎನ್ನುವ ಮಹಾದಂಡ ಸಿಕ್ಕರಂತೂ ತುಂಬಾನೇ ಸ್ವಾರ್ಥಿಯಾಗುತ್ತಾನೆ. ಹಾಗಾಗಿಯೇ ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವಂತಹ ಮಹಿಳೆಯರಿಗೆ ಸುದ್ದಿಯನ್ನು ಕೊಡುವ ನೆಪದಲ್ಲಿ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹವಣಿಸಿರುವುದು ಕಂಡುಬರುತ್ತದೆ. ಇದೊಂದು ನಾಚಿಕೇಡಿನ ಸಂಗತಿ ಕೂಡ. ಹೀಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಸರಕಾರಿ ಅಧಿಕಾರಿಗಳಿಂದಲೂ ಹಿಂಸೆಯನ್ನು ಅನುಭವಿಸಿರುವುದು ಕಂಡುಬರುತ್ತದೆ.

5.3. ಧರ್ಮದ ಹಿನ್ನೆಲೆ ಕಾರಣದಿಂದ ಎದುರಾಗುವ ಸಮಸ್ಯೆಗಳು

ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹಲವು ರೀತಿಯ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾರೆ. ಇಂತಹ ಸಮಸ್ಯೆಗಳು ಅವರನ್ನು ಕಾಡುವುದಕ್ಕೆ ಧರ್ಮದ ಮೌಲ್ಯಗಳು ಕೂಡ ಕಾರಣವಾಗಿವೆ. ಧರ್ಮದ ಕಟ್ಟುಪಾಡು, ನಿಯಮಗಳು ಮತ್ತು ಸಿದ್ಧ ಮೌಲ್ಯಗಳು ಮಹಿಳೆಯರನ್ನು ಇನ್ನಿಲ್ಲದಂತೆ ಶೋಷಿಸುತ್ತಿವೆ. ಈ ಧರ್ಮಗಳು ಮತ್ತು ಅವುಗಳ ಆಚರಣೆ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸುತ್ತಿವೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಹೀಗೆ ಅದು ಯಾವುದೇ ಧರ್ಮವಾಗಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಿಯಮಗಳನ್ನೇ ರೂಪಿಸಿವೆ. ಹಾಗಾಗಿ ಮಹಿಳೆಯರು ಈ ಸಿದ್ಧ ನಿಯಮಗಳನ್ನು ದಾಟುವಂತಿಲ್ಲ. ಅವುಗಳ ಆಚರಣೆಯನ್ನು ಮೀರಿ ಹೋಗುವಂತಿಲ್ಲ. ಒಂದುವೇಳೆ ಮೀರಿದರೆ ಅಂತಹ ದಿಟ್ಟ

ಮಹಿಳೆಯರನ್ನು ಆಯಾ ಧರ್ಮದಿಂದಲೇ ಬಹಿಷ್ಕಾರ ಹಾಕುವಂತ ಕೆಲಸಗಳು ಹಿಂದೆಯೂ ನಡೆಯುತ್ತಿತ್ತು, 21ನೇ ಶತಮಾನದಲ್ಲೂ ನಡೆಯುತ್ತಿವೆ. ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಕಟ್ಟಿಹಾಕಿರುವುದಂತೂ ಸತ್ಯ. ಇಂತಹ ಧರ್ಮದ ಕಾರಣಕ್ಕಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿವ ಮಹಿಳೆಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅದರಲ್ಲಿಯೂ ಮುಸ್ಲಿಂ ಧರ್ಮದ ಮಹಿಳೆಯರು ಉದ್ಯೋಗ ಮಾಡಲು ಮನೆಯಿಂದ ಹೊರಬರುವುದಕ್ಕಾಗಿಯೇ ಸಾಹಸ ಮಾಡಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ಈ ಮಹಿಳೆಯರಿಗೆ ಅನೇಕ ನಿರ್ಬಂಧಗಳನ್ನು ಹೇರಲಾಗಿದೆ. ಆದರೂ, ಮನೆಯವರ ಮತ್ತು ಧರ್ಮದ ಮುಖಂಡರ ಮಾತನ್ನು ಧಿಕ್ಕರಿಸಿ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಅಂತಹ ಮಹಿಳೆಯರು ಧರ್ಮದ ಕಾರಣದಿಂದಾಗಿ ಹಿಂಸೆಗಳಿಂದಾಗಲಿ ಅಥವಾ ಕಿರುಕುಳಗಳಿಂದಾಗಲಿ ಮುಕ್ತರಾಗಿಲ್ಲ. ಉದ್ಯೋಗ ಕ್ಷೇತ್ರದಲ್ಲಿಯೂ ಸಹ ಧರ್ಮದ ಕಾರಣದಿಂದಾಗಿ ಮಹಿಳೆಯರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ. ಧರ್ಮದ ಕಾರಣದಿಂದಾಗಿಯೇ ನೊಂದುಕೊಂಡಿರುವ ಮತ್ತು ತಮ್ಮಿಂದ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡಲು ಕಷ್ಟವಾಗುತ್ತಿದೆ ಎಂದು ಹೇಳಿರುವ ಪ್ರಕರಣಗಳು ಕೂಡ ಇವೆ. ಅವುಗಳನ್ನು ನೋಡುವುದಾದರೆ,

ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡುವ ಬೇಗಂ ಎಂಬುವವರು ಹೇಳುವಂತೆ "ಹುಡುಗಿಯರು ರಾಜಕೀಯ, ಕ್ರೈಂ ವರದಿಗಾರಿಕೆ ಮಾಡುವಾಗ ಅವಳು ಮಹಿಳೆ ಅನ್ನುವ ಕಾರಣಕ್ಕಾಗಿ ಅನೇಕ ನಿಂದನೆಗಳನ್ನು ಎದುರಿಸಬೇಕಾಗುತ್ತದೆ. ವರದಿಗಾರ್ತಿಯರು ಎದುರಿಸುವ ನಾನಾ ರೀತಿಯ ಕಿರುಕುಳದ ಜೊತೆಗೆ ನಾನು ಜಾತಿ ಧರ್ಮದ ವಿಚಾರವಾಗಿಯೂ ಕಿರಿಕಿರಿ ಅನುಭವಿಸಿದ್ದೂ ಇದೆ. ನಾನೊಂದು ಅಲ್ಪಸಂಖ್ಯಾತರ ಧರ್ಮಕ್ಕೆ ಸೇರಿದ ಹುಡುಗಿ. ಈ ಕಾರಣಕ್ಕಾಗಿಯೇ ಮತ್ತೊಂದು ಪ್ರಬಲ ಧರ್ಮ ಅಥವಾ ಜಾತಿಯ ಸಮುದಾಯ ಮತ್ತು ವ್ಯಕ್ತಿಗಳಿಂದ ತೊಂದರೆ ಅನುಭವಿಸಿದ್ದೇನೆ. ನಾನು ಒಂದು ಧರ್ಮಕ್ಕೆ ಸೇರಿದ ಹುಡುಗಿ ಅನ್ನುವ ಕಾರಣಕ್ಕಾಗಿಯೇ ಪ್ರಮುಖ ಪಕ್ಷವೊಂದರ ಕಾರ್ಯಕ್ರಮ ವರದಿಗೆ ನನ್ನನ್ನು ಕಳುಹಿಸುತ್ತಿರಲಿಲ್ಲ. ಹೋಗಲೇಬೇಕಾದ ಅನಿವಾರ್ಯತೆ ಎದುರಾದಾಗ ನನ್ನನ್ನು ಪರಿಚಯಿಸಿಕೊಳ್ಳದಂತೆ ನನ್ನ ವಿಭಾಗದ ಮುಖ್ಯಸ್ಥರು ಎಚ್ಚರಿಕೆ ನೀಡಿ ಕಳುಹಿಸುತ್ತಿದ್ದರು. ಎಲ್ಲರಿಗೂ ತಿಳಿದಿರುವಂತೆ ರಾಜಕಾರಣದಲ್ಲಿ ಜಾತಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ. ಹೀಗಾಗಿಯೇ ವರದಿಗಾರಿಕೆಗೆ ಕಳುಹಿಸುವಾಗಲೂ ಯಾವ ಜಾತಿಯ ಪತ್ರಕರ್ತರನ್ನು ಕಳುಹಿಸಿದರೆ ಸೂಕ್ತ ಎಂಬ ಚರ್ಚೆಯೂ ನಡೆದಿದ್ದಿದೆ. ಆಯಾ ಜಾತಿಗೆ ಅಥವಾ ಧರ್ಮಕ್ಕೆ ಸೇರಿದ ಪತ್ರಕರ್ತರಿದ್ದರೆ ಸುಲಭವಾಗಿ ಸುದ್ದಿ ಸಿಗುತ್ತದೆ ಅಥವಾ ಆಯಾ ಸಮುದಾಯದ ರಾಜಕಾರಣಿ ಮಾತಾಡುತ್ತಾನೆ ಎಂಬುದು ಕೂಡ ಅಷ್ಟೇ ಸತ್ಯ. ನಾನು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವಳು ಅನ್ನುವ ಕಾರಣಕ್ಕಾಗಿಯೇ ಬೇರೆ ಸಮುದಾಯದ ರಾಜಕಾರಣಿಗಳು, ನಾಯಕರು ನನ್ನೊಂದಿಗೆ ಮಾತನಾಡುತ್ತಿರಲಿಲ್ಲ. ನನಗೆ ಸುದ್ದಿ ಸಿಗುತ್ತಿರಲಿಲ್ಲ.

ನಮ್ಮ ಜಾತಿ ಧರ್ಮದ ಬಗ್ಗೆ ನಿನಗೇನು ಗೊತ್ತಾಗುತ್ತಮ್ಮ ಅಂತ ನೇರವಾಗಿಯೂ ಕೇಳಿದ್ದೂ ಇದೆ. ಹಾಗಾಗಿ ಅನೇಕ ಸುದ್ದಿಗಳು ನನಗೆ ತಪ್ಪಿದ್ದೂ ಇದೆ. ಧರ್ಮ ಮತ್ತು ಜಾತಿಯು ಅನೇಕ ಬಾರಿ ನನ್ನ ಕೆಲಸದ ಮೇಲೆ ಪರಿಣಾಮ ಬೀರಿದೆ. ಹಾಗಾಗಿಯೇ ನನ್ನನ್ನು ರಾಜಕೀಯ ಕ್ಷೇತ್ರದ ವರದಿಗಾರಿಕೆಯಿಂದ ಕೈ ಬಿಟ್ಟಿದ್ದೂ ಇದೆ" ಎಂದು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಮತ್ತೊಂದು ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡುವ ಜುಬೇದಾ ಅವರು ಹೇಳುವಂತೆ "ನಾನು ಮುಸ್ಲಿಂ ಸಮುದಾಯದ ಹುಡುಗಿ ಎನ್ನುವ ಕಾರಣಕ್ಕಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಹರಸಾಹಸ ಪಡಬೇಕಾಯಿತು. ಈ ಕ್ಷೇತ್ರಕ್ಕೆ ಕಾಲಿಡುವುದು ನನ್ನಂಥವರಿಗೆ ಅಷ್ಟು ಸುಲಭವಲ್ಲ. ಎಷ್ಟೋ ಜನರು ನನಗೆ ನೇರವಾಗಿಯೇ ನೀವು ತೀರಾ ಕನ್ಸರ್‌ವೇಟಿವ್ ಆಗಿರುವ ಧರ್ಮದವರು. ನಿನಗೆ ಯಾಕೆ ಬೇಕಿತ್ತು ಈ ಕೆಲಸ ಅಂತ ಹೇಳಿದವರೂ ಇದ್ದಾರೆ. ನನ್ನದೇ ಸಮುದಾಯದವರು ಇದೊಂದು ಹರಾಮಿ ಕೆಲ್ಸ ಅಂತ ಅಂತ ಬೈದಿದ್ದಾರೆ. ನಾನು ಓಪನ್ನಾಗಿ ಕೂದಲು ಬಿಟ್ಟುಕೊಂಡು ನ್ಯೂಸ್ ಓದುವುದನ್ನು ಅವರು ಧಿಕ್ಕರಿಸುತ್ತಾರೆ. ಅದು ಅವರ ಪಾಲಿಗೆ ಹರಾಮಿ ಕೆಲಸವಂತೆ. ಮೀಡಿಯಾ ಅನ್ನುವುದು ನನ್ನ ಸಮುದಾಯದ ಕೆಲ ಮುಖಂಡರಿಗೆ ಕರಪ್ಟ್ ಕ್ಷೇತ್ರ. ಬ್ಲ್ಯಾಕ್ ಮೇಲ್ ಮಾಡಿ ಬದುಕುವಂತಹ ಜನರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಇದ್ದಾರಂತೆ. ಹಾಗಾಗಿ ಮೀಡಿಯಾದಲ್ಲಿ ಕೆಲಸ ಮಾಡುವ ನಮ್ಮನ್ನೂ ಒಳಗೊಂಡಂತೆ ಹರಾಮ್ ಅಂತ ಕರೆಯುತ್ತಾರೆ. ಅದೇ ಹರಾಮ್ ಅನ್ನುವ ಪದ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ನನ್ನದೇ ಸಮುದಾಯದ ಹುಡುಗರಿಗೆ ಅನ್ವಯಿಸುವುದಿಲ್ಲ. ಅವರಿಗೆ ಹರಾಮ್ ಪದ ಬಳಕೆ ಆಗಲ್ಲ. ವಿದ್ಯುನ್ಮಾನ ಮಾಧ್ಯಮದಲ್ಲಿ ನನ್ನ ಸಮುದಾಯದ ಹುಡುಗಿಯರು ಕೆಲಸ ಮಾಡಿದರೆ ಹರಾಮ್ ಎಂಬ ಮಾತನ್ನು ಹೇಳಿಸಿಕೊಳ್ಳಬೇಕು. ಹುಡುಗರಿಗೆ ಅದರಿಂದ ಮಾಫಿ. ಸಖತ್ ರಿಯಾಯತಿ ಇದೆ" ಅಂತಾರೆ.

ಹಾಗೆಯೇ ಖಾಸಗಿ ವಾಹಿನಿಯೊಂದರಲ್ಲಿ ಕೆಲಸ ಮಾಡುವ ನಸ್ರೀನ್ ಎಂಬುವವರು ಹೇಳುವಂತೆ "ನಾನು ಮೊದಲು ಆ್ಯಂಕರ್ ಆಗಿ ವಾಹಿನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡೆ. ನ್ಯೂಸ್ ಓದುವುದನ್ನು ನೋಡಿದ್ದ ನನ್ನ ಸಂಬಂಧಿಕರೊಬ್ಬರು ನನಗೆ ಫೋನ್ ಮಾಡಿ, ನೀನೇನು ಟಿವಿಯಲ್ಲಿ ಕಾಣಿಸಿಕೊಳ್ಳೋದು. ಅಲ್ಲಿ ಕೆಲಸ ಮಾಡುವುದಾದರೆ, ಕ್ಯಾಮೆರಾ ಮುಂದೆ ಕೂರುವುದಾದರೆ ಬುರ್ಕಾ ಹಾಕಿಕೊಳ್ಳಲೇಬೇಕು ಅಂತ ವಾದ ಮಾಡಿದರು. ನಾನು ಕೆಲಸ ಮಾಡ್ತಾ ಇರೋದು ಉರ್ದು ಚಾನೆಲ್‌ನಲ್ಲಿ ಅಲ್ಲ. ಕನ್ನಡದ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಅದು ಹೇಗೆ ಸಾಧ್ಯ? ಬುರ್ಕಾ ಯಾಕೆ ಹಾಕಿಕೊಂಡು ಸುದ್ದಿ ಓದಬೇಕು ಅಂತ ನಾನೂ ವಾದ ಮಾಡಿದೆ. ಅವರು ಕೇಳಲಿಲ್ಲ. ಸ್ವತಃ ನನ್ನ ಕುಟುಂಬದ ಸದಸ್ಯರಿಗೆ ಫೋನ್ ಮಾಡಿ, ಕಂಪ್ಲೇಂಟ್ ಮಾಡಿದರು. ಮನೆಯಲ್ಲೂ ಪ್ರೆಸರ್ ತಂದರು. ಆಗ ನಾನು ಆ ಕೆಲಸವನ್ನೇ ಬಿಡಬೇಕಾದ ಪರಿಸ್ಥಿತಿ ಬಂತು. ಬುರ್ಕಾ ವಿಷಯದಲ್ಲಿ ನಾನು ಮನೆಯವರಿಗೆ ತುಂಬಾನೇ ತಿಳಿಸಿ

ಹೇಳಿದೆ. ಬುರ್ಕಾ ಹಾಕಿಕೊಂಡು ನ್ಯೂಸ್ ಓದೋಕೆ ಯಾಕೆ ಆಗಲ್ಲ ಅಂತ ಪರಿಸ್ಥಿತಿಯನ್ನು ವಿವರಿಸಿದೆ. ಮಗಳಿಗೆ ಒಳ್ಳೆಯ ಭವಿಷ್ಯವಿದೆ ಎನ್ನುವ ಕಾರಣಕ್ಕಾಗಿ ನನ್ನ ಕುಟುಂಬ ನ್ಯೂಸ್ ಓದಲು ಒಪ್ಪಿಕೊಟ್ಟರೂ, ಸಮುದಾಯದ ಮುಖಂಡರು ಮತ್ತು ಸಂಬಂಧಿಕರು ಅದನ್ನು ಒಪ್ಪುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಸ್ವಲ್ಪ ದಿನ ನೋಡಿ ನಾನೂ ಹಠಕ್ಕೆ ಬಿದ್ದು ಕೆಲಸ ಮಾಡಲು ಶುರು ಮಾಡಿದೆ. ಮೊದ ಮೊದಲು ನಿರಂತರವಾಗಿ ನನ್ನ ಕೆಲಸಕ್ಕೆ ತೊಂದರೆ ಮಾಡಲು ನೋಡಿದರು. ಫೇಸ್‌ಬುಕ್‌ನಲ್ಲಿ ಕೆಟ್ಟದಾಗಿ ಮಸೇಜ್ ಮಾಡೋರು. ಯಾರಿಂದಲೂ ನನ್ನ ಫೋನ್ ನಂಬರ್ ಸಂಗ್ರಹಿಸಿ ಕರೆ ಮಾಡುತ್ತಿದ್ದರು. ನೀನು ಹರಾಮಿ ಕೆಲ್ಸ ಮಾಡ್ತಿದ್ದೀಯಾ. ಧರ್ಮ ವಿರೋಧಿಯಾಗಿದ್ದೀಯಾ? ನೀನು ಬೇರೆ ಧರ್ಮಕ್ಕೆ ಸೇರಿಕೋ. ನೀನು ಸತ್ತ ನಂತರ ನಮ್ಮ ಧರ್ಮದ ಪ್ರಕಾರ ನಿನ್ನನ್ನು ದಫನ್ ಮಾಡಲು ಬಿಡುವುದಿಲ್ಲ. ನಿನ್ನ ಹೆಣವನ್ನು ಸುಡ್ತೀವಿ. ಹೀಗೆ ಏನೇನೋ ಮಸೇಜ್ ಕಳಿಸೋರು. ಕೊನೆ ಕೊನೆಗೆ ಹೇಗಾಯಿತು ಅಂದರೆ, ನನ್ನ ಜೀವಕ್ಕಿಂತ ನನ್ನ ಫ್ಯಾಮಿಲಿ ಬಗ್ಗೆ ನನಗೆ ಆತಂಕ ಶುರುವಾಯ್ತು. ನನ್ನ ಕುಟುಂಬಕ್ಕೆ ಧೈರ್ಯ ತುಂಬುತ್ತಾ, ನನಗೆ ಆಗುತ್ತಿರುವ ಕಷ್ಟಗಳನ್ನು ನನ್ನ ಫ್ಯಾಮಿಲಿಗೆ ತಿಳಿಸದೇ ನಾನೇ ಸಹಿಸಿಕೊಂಡು ಎರಡು ವರ್ಷದಿಂದ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದೇನೆ. ಒಂದೊಂದು ಸಾರಿ ಈ ಧರ್ಮ ಜಾತಿಗಳ ಬಗ್ಗೆ ಅಸಹ್ಯ ಅನಿಸುತ್ತದೆ. ಅದರಲ್ಲೂ ಹೆಣ್ಣು ಮಕ್ಕಳಿಗೇ ಈ ರೀತಿಯ ಕಟ್ಟುಪಾಡುಗಳೇ ಯಾಕೆ ಎಂಬ ಪ್ರಶ್ನೆ ಮೂಡುತ್ತದೆ. ಇದು ನನ್ನೊಬ್ಬಳದ್ದೇ ಕತೆಯಲ್ಲ, ನನಗಿಂತ ಮೊದಲು ವಿದ್ಯುನ್ಮಾನ ಮಾಧ್ಯಮಕ್ಕೆ ಬಂದಿರುವ ಅನೇಕ ಹುಡುಗಿಯರ ಸಮಸ್ಯೆಯೂ ಆಗಿದೆ. ನನಗೆ ಆದ ಶೋಷಣೆ, ಅಪಮಾನ, ಅನ್ಯಾಯವನ್ನು ಅವರೊಂದಿಗೆ ಹಂಚಿಕೊಂಡಾಗ ಅವರು ಕೂಡ ಇದೆಲ್ಲವನ್ನೂ ಎದುರಿಸುತ್ತಾ ಕೆಲಸ ಮಾಡಿದ್ದಾರೆ. ಇನ್ನೂ ಮಾಡುತ್ತಲೇ ಇದ್ದಾರೆ. ಹಾಗಂತ ನನ್ನ ಸಮುದಾಯದವರು ಕೆಟ್ಟವರು ಅಂತ ನಾನು ಹೇಳುತ್ತಿಲ್ಲ. ಕೆಲವರು ನನಗೆ ಸಪೋರ್ಟ್ ಮಾಡಿದವರೂ ಇದ್ದಾರೆ. ಇವತ್ತು ನಾನು ಮಾಧ್ಯಮ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಂತಿದ್ದೇನೆ ಅಂದರೆ ಕೆಲವರ ಬೆಂಬಲ ಕೂಡ ಕಾರಣವಾಗಿದೆ' ಎನ್ನುತ್ತಾರೆ.

ಮೇಲಿನ ಪ್ರಕರಣಗಳನ್ನು ಗಮನಿಸಿದಾಗ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮಹಿಳೆಯರು ತಾವು ತಮ್ಮ ಧರ್ಮದ ಆಚರಣೆ, ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬ ಕಾರಣಕ್ಕೆ ಕಿರಿಕಿರಿ ಅನುಭವಿಸಿದ್ದನ್ನು ಕಾಣಬಹುದು. ಸಮೂಹ ಮಾಧ್ಯಮಗಳನ್ನು ಸಂವಿಧಾನದ ನಾಲ್ಕನೆಯ ಅಂಗ ಎಂದು ಬಣ್ಣಿಸಲಾಗಿದೆ. ಹಾಗಾಗಿ ಅದರ ಆಲೋಚನೆ ಯಾವಾಗಲೂ ಜಾತ್ಯಾತೀತ ಆಗಿರಬೇಕು. ಧರ್ಮ ಮತ್ತು ಜಾತಿಯ ಬಂಧನಗಳಿಂದ ಅದು ಬಿಡಿಸಿಕೊಂಡಿರಬೇಕಿತ್ತು. ಆದರೆ, ಈ ಆಶಯದ ವಿರುದ್ಧದ ಘಟನೆಗಳು ನಡೆದಿರುವುದನ್ನು ಕಾಣಬಹುದು.

ಈ ಮಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರೇ ಹೇಳಿಕೊಂಡಂತೆ ವಿದ್ಯುನ್ಮಾನ ಮಾಧ್ಯಮ ಕೂಡ ಜಾತಿಯಾಧಾರಿತವಾಗಿ ಕೆಲಸ ಮಾಡುತ್ತಿದೆ. ಅಲ್ಲಿ ಕೆಲಸ ಮಾಡುವ

ಮಹಿಳೆಯರನ್ನು ಜಾತಿ ಆಧಾರದಲ್ಲಿಯೇ ನಡೆಸಿಕೊಳ್ಳುತ್ತಿರುವುದು ಕಂಡುಬರುತ್ತವೆ. ಧರ್ಮದ ಕಾರಣಕ್ಕಾಗಿಯೇ ರಾಜಕೀಯ ವರದಿ ಮಾಡುವುದರಿಂದ ವಂಚಿತಳಾಗಿರುವ ಉದಾಹರಣೆ ಕೂಡ ನಮ್ಮ ಕಣ್ಮುಂದಿದೆ.

ಬಹುಮುಖ್ಯವಾಗಿ ಗುರುತಿಸಬಹುದಾದ ಮತ್ತೊಂದು ಸಂಗತಿ ಅಂದರೆ, ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವ ಮುಸ್ಲಿಂ ಸಮುದಾಯದ ಮಹಿಳೆಯರ ಕೆಲಸವನ್ನು ಹರಾಮಿ ಎಂದು ಜರಿಯುವುದು. ಈ ಸಮುದಾಯದ ಮುಖಂಡರಿಗೆ ವಿದ್ಯುನ್ಮಾನ ಮಾಧ್ಯಮದ ಕೆಲಸವೆಂದರೆ ಅದೊಂದು ರೀತಿಯಲ್ಲಿ ಹರಾಮಿ ಕೆಲಸವಂತೆ. ಹಾಗಾಗಿ ಈ ಕ್ಷೇತ್ರದಲ್ಲಿ ಮಹಿಳೆಯರು ಕೆಲಸ ಮಾಡಬಾರದು ಎಂಬ ಮಾತನ್ನೂ ಆಡಿದ್ದಾರೆ. ಹಾಗಾಗಿ ಮಾಧ್ಯಮ ಕ್ಷೇತ್ರವು ಮಹಿಳೆಯರಿಗೆ ಕೆಲಸ ಮಾಡಲು ಸೂಕ್ತವಲ್ಲ ಎಂಬ ಅಭಿಪ್ರಾಯಕ್ಕೂ ಬರಲಾಗಿದೆ. ಈ ಕ್ಷೇತ್ರದಲ್ಲಿ ಮಹಿಳೆಯರು ಹಾಳಾಗುತ್ತಾರೆ ಮತ್ತು ತಮ್ಮ ಧರ್ಮದ ವಿರುದ್ಧ ನಡೆದುಕೊಳ್ಳುತ್ತಾರೆ ಅನ್ನುವ ಭಾವನೆ ಕೆಲ ಮುಖಂಡರದ್ದು.

ಅದೇ ಈ ಸಮುದಾಯದ ಹುಡುಗರಿಗೆ ಈ ರೀತಿಯ ಕಷ್ಟಗಳು ಎದುರಾಗುವುದಿಲ್ಲ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವುದು ಇಸ್ಲಾಂ ಧರ್ಮದ ಪುರುಷರು ಹರಾಮಿ ಅನಿಸಿಕೊಳ್ಳುವುದಿಲ್ಲ. ಮುಕ್ತವಾಗಿ ಹುಡುಗರಿಗೆ ಕೆಲಸ ಮಾಡಲು ಬಿಟ್ಟಿದೆ. ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಪುರುಷರು ಯಾವ ರೀತಿಯ ಕೆಲಸವಾದರೂ ಮಾಡಬಹುದು. ಯಾವ ರೀತಿಯಲ್ಲಿ ಬೇಕಾದರೂ ಟಿವಿ ಪರದೆಯಯ ಮೇಲೆ ಕಾಣಿಸಿಕೊಳ್ಳಬಹುದು. ಧರಿಸುವ ಬಟ್ಟೆ, ಹೇರ್‌ಸ್ಟೈಲ್ ಕೂಡ ತಮ್ಮಿಚ್ಛೆಯಂತೆ ಪುರುಷರು ಧರಿಸಬಹುದು. ಆದರೆ, ಮಹಿಳೆಯರಿಗೆ ಅನೇಕ ಕಟ್ಟುಪಾಡುಗಳನ್ನು ವಿಧಿಸಲಾಗುತ್ತಿದೆ ಎನ್ನುವುದು ಅವರ ಮಾತಿನಲ್ಲಿಯೇ ವ್ಯಕ್ತವಾಗಿದೆ. ಈ ಎಲ್ಲ ಕಾರಣದಿಂದಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುತ್ತಿರುವ ಮಹಿಳೆಯರು ಧರ್ಮದ ಕಾರಣ್ಣಕಾಗಿ ಈ ಬಗೆಯ ಹಿಂಸೆಯನ್ನು ಅನುಭವಿಸುತ್ತಿರುವುದನ್ನು ಕಾಣಬಹುದು.

ಇಸ್ಲಾಂ ಧರ್ಮದಲ್ಲಿ ಬುರ್ಖಾ ಪದ್ಧತಿಯಿದೆ. ಇಲ್ಲಿನ ಮಹಿಳೆಯರು ಬುರ್ಖಾವನ್ನು ಹಾಕಿಕೊಳ್ಳಬೇಕು ಎಂಬುದು ಕಡ್ಡಾಯವಾಗಿ ಪಾಲಿಸಿಕೊಂಡು ಬರಲಾಗುತ್ತಿದೆ. ನಸ್ರೀನ್ ಅವರು ಇದನ್ನು ಪಾಲಿಸುತ್ತಿಲ್ಲ ಎಂಬ ಕಾರಣಕ್ಕೆ ಇಸ್ಲಾಂ ಧರ್ಮದ ಕೆಲ ಮುಖಂಡರಿಂದ ನಿಂಧನೆಗೆ ಒಳಗಾಗಿರುವುದನ್ನು ಕಾಣಬಹುದು. ನಸ್ರೀನ್ ಅವರು ಇವುಗಳನ್ನು ಲೆಕ್ಕಿಸದೇ ಕೆಲಸ ಮಾಡಿದಾಗ ಹಲವು ರೀತಿಯ ತೊಂದರೆಗಳನ್ನು ಅನುಭವಿಸಿದ್ದು ಕಂಡು ಬರುತ್ತದೆ. ಅಂದರೆ, ಈ ಧರ್ಮವು ತಮ್ಮ ಸಮುದಾಯದ ಮಹಿಳೆಯರನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಹಲವು ರೀತಿಯ ಕಟ್ಟುಪಾಡುಗಳನ್ನು ವಿಧಿಸಿರುವುದು ಕಂಡು ಬರುತ್ತದೆ. ಸಾಂಪ್ರದಾಯಿಕ ನಂಬಿಕೆಗಳನ್ನು ಮಹಿಳೆಯರ ಮೇಲೆ ಹೇರಿರುವುದನ್ನು ಕಾಣುತ್ತದೆ. ಇಂತಹ ಧರ್ಮದ ಕಟ್ಟುಪಾಡುಗಳು ಎಷ್ಟೊಂದು ಬಲಿಷ್ಠವಾಗಿರುತ್ತವೆ ಎಂದರೆ ಇದನ್ನು ಮೀರಿದವರಿಗೆ ಶಿಕ್ಷೆ ವಿಧಿಸುವಂತಹ


ಘಟನೆಗಳು ಅಲ್ಲಲ್ಲಿ ನಡೆದಿವೆ. ಅವರಷ್ಟೇ ಅಲ್ಲ, ಅವರ ಕುಟುಂಬದ ಸದಸ್ಯರಿಗೆ ಅವುಗಳ ತೊಂದರೆಯನ್ನುಂಟು ಮಾಡಿದ ಉದಾಹರಣೆಗಳು ಕೂಡ ಇವೆ. ಹಾಗಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸಕ್ಕೆಂದು ಸೇರಿಕೊಂಡ ನಸ್ರೀನ್ ಅವರು ಮೊದ ಮೊದಲು ತಮ್ಮ ಕುಟುಂಬದಿಂದ ವಿರೋಧಗಳನ್ನು ಎದುರಿಸಿದ್ದಾರೆ. ಈ ವಿರೋಧಕ್ಕೆ ಕಾರಣ ಧರ್ಮದ ಆಚರಣೆಗಳೇ ಆಗಿವೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಒಟ್ಟಾರೆಯಾಗಿ ಧರ್ಮದ ಕಾರಣದಿಂದಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಾಗ ಮಹಿಳೆಯರು ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಒಂದು ಕಡೆ ಮಾಧ್ಯಮ ಕ್ಷೇತ್ರದಲ್ಲಿನ ಮುಖ್ಯಸ್ಥರಿಂದ ಮತ್ತೊಂದು ಕಡೆ ಕೆಲಸದ ಸ್ಥಳದಲ್ಲಿ ಅಧಿಕಾರಿಗಳಿಂದ ಮತ್ತು ಧರ್ಮದ ಕಾರಣದಿಂದಾಗಿಯೂ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಕಛೇರಿಯ ಆಚೆ ಅಂದರೆ ಫೀಲ್ಡಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಲೇ ಇರುವುದನ್ನು ಮೇಲಿನ ಪ್ರಕರಣಗಳಿಂದ ತಿಳಿಯಬಹುದಾಗಿದೆ. ಇವುಗಳ ಪ್ರಮಾಣವನ್ನು ಕೋಷ್ಟಕದಲ್ಲಿ ಮುಂದಿನಂತೆ ನೋಡಬಹುದು.

ಕೋಷ್ಟಕ 5..2

ಉದ್ಯೋಗಕ್ಕೆ ಸೇರಿಕೊಂಡ ನಂತರ ಎದುರಾಗುವ ಸಮಸ್ಯೆಗಳು

5.2.2. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ಕಾರಣಗಳು	ಹೌದು		ಇಲ್ಲ		ಈ ಪ್ರಶ್ನೆಗೆ ಮೌನ ವಹಿಸಿದವರು	
ರಾಜಕೀಯ ವರದಿಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು	102	63.75%	28	17.5%	30	18.75%
ಕ್ರೈಂ ವರದಿಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು	96	60%	08	5%	56	35%
ಜಿಲ್ಲಾ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳು	156	97.5%	00	00	04	2.5%
ಸಾರ್ವಜನಿಕರಿಂದ ಮಹಿಳೆಯರು ಎದುರಿಸಿದ ಸಮಸ್ಯೆಗಳು	140	87.5%	12	7.5%	08	5%
ಸರ್ಕಾರಿ ಅಧಿಕಾರಿಗಳಿಂದ ಮಹಿಳೆಯರು ಎದುರಿಸಿದ ಸಮಸ್ಯೆಗಳು	48	30%	60	37.5%	52	32.5%
ಧರ್ಮ ಕಾರಣದಿಂದ ಎದುರಾದ ಸಮಸ್ಯೆಗಳು	52	32.5%	36	22.5%	72	45%



ರೇಖಾಚಿತ್ರ 5.2.2. ಸಾರ್ವಜನಿಕ ಕ್ಷೇತ್ರದಲ್ಲಿ ವೃತ್ತಿ ನಿರ್ವಹಣೆಯ ಸಂದರ್ಭದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು

ಮೇಲಿನ ಕೋಷ್ಟಕ ಮತ್ತು ರೇಖಾಚಿತ್ರವನ್ನು ಗಮನಿಸಿದಾಗ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಸಾರ್ವಜನಿಕ ಕ್ಷೇತ್ರದಲ್ಲಿ ವೃತ್ತಿ ನಿರ್ವಹಣೆಯಲ್ಲಿ ತೊಡಗಿದ್ದಾಗ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಿರುವುದು ಕಂಡುಬರುತ್ತದೆ. ಮುಖ್ಯವಾಗಿ ರಾಜಕೀಯ ವರದಿಗಾರಿಕೆ ಮಾಡುವ ಸಂದರ್ಭದಲ್ಲಿ ಪತ್ರಕರ್ತೆಯರು ಸಮಸ್ಯೆಗಳನ್ನು ಎದುರಿಸಿದ ಪ್ರಮಾಣ ಶೇ. 63.75ರಷ್ಟಿದ್ದರೆ, ಈ ಸಂದರ್ಭದಲ್ಲಿ ಯಾವುದೇ ತೊಂದರೆಗಳು ಸಂಭವಿಸುವುದಿಲ್ಲ ಎಂದು ಹೇಳುವವರ ಪ್ರಮಾಣ ಶೇ.17.5ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಉತ್ತರಿಸದೇ ಮೌನವಹಿಸಿದವರ ಪ್ರಮಾಣ ಶೇ.18.75ರಷ್ಟಿದೆ. ಅಂದರೆ ರಾಜಕೀಯ ವರದಿಗಾರಿಕೆಯ ಸಂದರ್ಭದಲ್ಲಿ ಮಹಿಳಾ ವರದಿಗಾರರು ಅತೀ ಹೆಚ್ಚಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದು ಮೇಲಿನ ಸಂಖ್ಯೆಗಳಿಂದ ಗುರುತಿಸಬಹುದಾಗಿದೆ. ಇನ್ನು ಕ್ರೈಂ ವರದಿಯನ್ನು ಮಾಡುವ ಸಂದರ್ಭದಲ್ಲಿ ಶೇ.60ರಷ್ಟು ಮಹಿಳೆಯರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೆ. ಈ ವಿಭಾಗದ ವರದಿಗಾರಿಕೆಯು ತುಂಬಾ ಅಪಾಯಕಾರಿ ಎಂಬುದು ಅವರ ವಾದ. ಇನ್ನು ಇದನ್ನು ನಿರಾಕರಿಸುವವರ ಪ್ರಮಾಣ ಶೇ.5ರಷ್ಟಿದೆ. ಜೊತೆಗೆ ಈ ಪ್ರಶ್ನೆಗೆ ಮೌನವಹಿಸಿದವರ ಪ್ರಮಾಣ ಶೇ.35ರಷ್ಟಿದೆ. ಇವರು ಯಾವುದೇ ನಿರ್ಧಾರಕ್ಕೆ ಬಾರದೇ ಮೌನವಹಿಸಿದ್ದಾರೆ. ಅವರಿಗೆ ಈ ಕುರಿತಾಗಿ ತಮ್ಮ ಸ್ಪಷ್ಟ ನಿರ್ಧಾರವನ್ನು ಹೇಳಲು ಹಿಂಜರಿದಿರುವುದು ಕಂಡುಬರುತ್ತದೆ. ಇನ್ನು ಜಿಲ್ಲಾ ವರದಿಗಾರಿಕೆಯಲ್ಲಿ ಮಹಿಳೆಯರ ಪ್ರಮಾಣ ಮಾತ್ರ ತುಂಬಾ ಕಡಿಮೆ ಇದೆ. ಇದಕ್ಕೆ ಹಲವಾರು ಸಮಸ್ಯೆಗಳು ಇರುವುದನ್ನು ಮೇಲಿನ ಪ್ರಕರಣಗಳಿಂದ ತಿಳಿಯಬಹುದು. ಹಾಗಾಗಿ ಜಿಲ್ಲಾ ವರದಿಗಾರಿಕೆಯ ಸಂದರ್ಭದಲ್ಲಿ ಸಮಸ್ಯೆಗಳು ಬಹಳಷ್ಟಿವೆ ಎಂಬುದನ್ನು ಒಪ್ಪಿಕೊಳ್ಳುವವರ



ಪ್ರಮಾಣ ಶೇ.97.5ರಷ್ಟಿದ್ದು, ಈ ಸಮಸ್ಯೆಗಳ ಬಗೆಗೆ ಯಾವುದೇ ಅರಿವು ಇಲ್ಲದಿರುವವರು ಅಂದರೆ ಜಿಲ್ಲಾ ವರದಿಗಾರಿಕೆಯ ಕುರಿತಾಗಿ ಯಾವುದೇ ಮಾಹಿತಿ ಇರದಿರುವವರು ಮತ್ತು ಮೌನ ವಹಿಸಿರುವುದನ್ನು ಕಾಣಬಹುದು. ಇವರ ಪ್ರಮಾಣ ಶೇ.2.5ರಷ್ಟಿದೆ. ಜಿಲ್ಲಾ ಕೇಂದ್ರಗಳಲ್ಲಿ ಮಹಿಳಾ ವರದಿಗಾರರಿಗೆ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಆ ಕಾರಣಕ್ಕಾಗಿ ಅಲ್ಲಿ ಮಹಿಳೆಯರು ಕೆಲಸ ಮಾಡಲು ಮುಂದೆ ಬರುವುದಿಲ್ಲ ಎಂಬ ಅಂಶ ಬೆಳಕಿಗೆ ಬರುತ್ತದೆ. ಇನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ವೃತ್ತಿ ಕ್ಷೇತ್ರ (ಫೀಲ್ಡ್)ದಲ್ಲಿ ಕೆಲಸ ಮಾಡುವ ಮಹಿಳಾ ವರದಿಗಾರ್ತಿಯರು ಸಾರ್ವಜನಿಕರಿಂದಲೂ ಹಿಂಸೆಗೆ ಒಳಗಾಗಿದ್ದಾರೆ. ಅವರ ಪ್ರಮಾಣ ಶೇ.87.50ರಷ್ಟಿದ್ದರೆ, ಹಾಗೇನಿಲ್ಲ ಎನ್ನುವವರ ಪ್ರಮಾಣ ಶೇ7.5ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಮೌನ ವಹಿಸಿದವರ ಪ್ರಮಾಣ ಶೇ.5ರಷ್ಟಿದೆ. ಇನ್ನು ಸರ್ಕಾರಿ ಅಧಿಕಾರಿಗಳಿಂದ ಹಿಂಸೆಗೆ ಒಳಗಾಗುತ್ತೇವೆ ಎಂಬುದನ್ನು ಒಪ್ಪಿಕೊಳ್ಳುವವರ ಪ್ರಮಾಣ ಶೇ.30ರಷ್ಟಿದ್ದರೆ, ಇಲ್ಲ ಎನ್ನುವವರ ಪ್ರಮಾಣ ಶೇ.37.5ರಷ್ಟಿದೆ. ಹಾಗೆಯೇ ಮೌನ ವಹಿಸಿದವರ ಪ್ರಮಾಣ ಶೇ.32.5ರಷ್ಟಿದೆ. ಇನ್ನು ಧರ್ಮದ ಕಾರಣಕ್ಕಾಗಿ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುವವರ ಪ್ರಮಾಣ ಶೇ.32.5ರಷ್ಟಿದ್ದರೆ, ಇಲ್ಲ ಎನ್ನುವವರ ಪ್ರಮಾಣ ಶೇ.22.5ರಷ್ಟಿದೆ. ಧರ್ಮದ ವಿಚಾರ ತುಂಬಾ ಸೂಕ್ಷ್ಮವಾದ ವಿಚಾರವಾಗಿರುವುದರಿಂದ ಇದರ ಕುರಿತಾಗಿ ಯಾರೂ ಮುಕ್ತವಾಗಿ ಮಾತನಾಡಲು ಇಚ್ಛಿಸುವುದಿಲ್ಲ. ಹಾಗಾಗಿ ಈ ಪ್ರಶ್ನೆಗೆ ಯಾವುದೇ ಉತ್ತರವನ್ನು ಕೊಡದೇ ಮೌನವಹಿಸಿದವರ ಪ್ರಮಾಣ ಶೇ.45ರಷ್ಟಿದೆ. ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಅದರಲ್ಲಿಯೂ ಕಛೇರಿಯ ಆಚೆ ಕೆಲಸದಲ್ಲಿ ತೊಡಗಿಕೊಂಡಿರುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಮೇಲಿನ ಪ್ರಕರಣಗಳು ಮತ್ತು ಕೋಷ್ಟಕಗಳಿಂದ ತಿಳಿಯಬಹುದಾಗಿದೆ.

ಜಾಗತೀಕರಣದ ಈ ಸಂದರ್ಭದಲ್ಲಿ ವಿದ್ಯುನ್ಮಾನ ಮಾಧ್ಯಮವು ಉದ್ಯಮವಾಗಿ ರೂಪುಗೊಂಡಿದೆ. ಸ್ಪರ್ಧಾತ್ಮಕತೆ ಹೆಚ್ಚಾಗುತ್ತಿರುವುದು ಕಂಡು ಬರುತ್ತಿದೆ. ಈ ಎಲ್ಲ ಕಾರಣಕ್ಕಾಗಿಯೇ ಈ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಸ್ತ್ರೀ-ಪುರುಷರ ನಡುವೆ ಯಾವಾಗಲೂ ಪೈಪೋಟಿ ಇದ್ದೇ ಇರುತ್ತದೆ. ಈ ಸ್ಪರ್ಧೆಯಲ್ಲಿ ಯಾರು ಯಶಸ್ಸು ಕಾಣುತ್ತಾರೆಯೋ ಅವರಿಗೆ ಸನ್ಮಾನ, ಗೌರವಾದರಗಳು ದೊರೆಯುತ್ತವೆ. ಈ ಕಾರಣಕ್ಕಾಗಿ ಈ ವಲಯದಲ್ಲಿ ಹಲವು ರೀತಿಯ ಲಿಂಗ ತಾರತಮ್ಯಗಳು ಏರ್ಪಟ್ಟಿರುವುದು ಕಂಡುಬರುತ್ತದೆ. ಮಹಿಳೆಯರು ಈ ವಲಯಕ್ಕೆ ಸೇರಬೇಕೆಂದರೆ ಮೊದಲು ಕುಟುಂಬದಿಂದ ಹಿಡಿದು ಸಮಾಜದಿಂದಲೂ ವಿರೋಧಗಳನ್ನು ಎದುರಿಸಬೇಕಾದ ಅನಿವಾರ್ಯತೆ ಇದೆ. ಕುಟುಂಬದ ಸದಸ್ಯರ ಮನವೊಲಿಸಿ ಈ ವಲಯಕ್ಕೆ ಮಹಿಳೆಯರು ಸೇರಿಕೊಂಡಿದ್ದರೂ ಅವರು ಸಮಸ್ಯೆಗಳಿಂದ ಅಥವಾ ಹಿಂಸೆಗಳಿಂದ ಮುಕ್ತರಾಗಿಲ್ಲ

ಎನ್ನುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ಈ ಲಿಂಗ ತಾರತಮ್ಯದ ಕಾರಣವಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರು ಹಲವಾರು ಸಮಸ್ಯೆಗಳಿಂದ ನರಳುತ್ತಿರುವುದು ಕಂಡುಬರುತ್ತದೆ.

ಉಲ್ಲೇಖಗಳು

1. ವಿಜಯಶ್ರೀ ಸಬರದ (ಸಂ), 2005, ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
2. ಶ್ರೀಮತಿ ಎಚ್.ಎಸ್., 2004, ಹೆಣ್ಣು–ಹೆಂಗಸು, ಬ್ಯಾಲದಕೆರೆ ಪ್ರಕಾಶನ, ಮಂಡ್ಯ.

ಅಧ್ಯಾಯ : 6

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ವೃತ್ತಿ ಕಾರಣದಿಂದಾಗಿ ಎದುರಿಸುವ ಕೌಟುಂಬಿಕ ಸಂಘರ್ಷಗಳು

6.1 ಹುಡುಗಿಯರ ನೆಲೆಯಿಂದ ವೃತ್ತಿ ಆಯ್ಕೆ ; ಕುಟುಂಬದ ನೆಲೆಯಿಂದ ವೃತ್ತಿ ನಿರಾಕರಣೆ

6.2 ಮದುವೆಯಾಗಬೇಕೆಂದಾಗ ಎದುರಿಸುವ ಸಂಘರ್ಷ

6.3 ಮದುವೆಯ ನಂತರ ಎದುರಿಸುವ ಸಂಘರ್ಷ

6.4 ತಾಯ್ತನ : ವೃತ್ತಿ ನಿರ್ವಹಣೆಯಲ್ಲಿನ ಸಂಘರ್ಷ

6.5 ಜಾತಿ ಮತ್ತು ಧರ್ಮಗಳ ಕಾರಣದ ಸಂಘರ್ಷ

ಅಧ್ಯಾಯ : 6

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ವೃತ್ತಿ ಕಾರಣದಿಂದಾಗಿ ಎದುರಿಸುವ ಕೌಟುಂಬಿಕ ಸಂಘರ್ಷಗಳು

ಹುಟ್ಟಿನಿಂದ ಮಹಿಳೆಯರು ಒಂದಿಲ್ಲೊಂದು ರೀತಿಯಲ್ಲಿ ಸಂಘರ್ಷಗಳನ್ನು ಎದುರಿಸುತ್ತಲೇ ಸಾಗುತ್ತಿದ್ದಾರೆ. ಹುಟ್ಟಿನಿಂದ ಹಿಡಿದು ಸಾಯುವತನಕ ಸಮಾಜದಲ್ಲಿ ಅವಳಿಗೆ ಸಿಗುವುದು ಗೌಣಸ್ಥಾನ, ಕನಿಷ್ಠ ದರ್ಜೆ. ತನ್ನಿಷ್ಟದ್ದನ್ನು ಪಡೆಯುವುದಕ್ಕಾಗಿ ಆಕೆ ಸದಾ ಸಂಘರ್ಷಗಳನ್ನು ಮಾಡಬೇಕಾದ ಅನಿವಾರ್ಯತೆಯಿದೆ. ಮತ್ತೊಂದು ವಿಪರ್ಯಾಸವೆಂದರೆ ತಾನು ಹುಟ್ಟಿದ ಕುಟುಂಬದಿಂದಲೇ ಈ ಸಂಘರ್ಷಗಳನ್ನು ಆಕೆ ಎದುರಿಸಬೇಕಿದೆ. ತಾನು ಶಿಕ್ಷಣ ಪಡೆಯುವುದರಿಂದ ಹಿಡಿದು, ನೌಕರಿ ಪಡೆಯುವತನಕ ಅವಳು ಹೋರಾಟ ಮಾಡಲೇಬೇಕು. ಆದರೆ, ಪುರುಷ ಹಾಗಿಲ್ಲ. ಅವನು ಬೇಡವೆಂದು ಹಠ ಹಿಡಿದರೂ, ಅವನಿಗೆ ಒತ್ತಾಯ ಮಾಡಿಯಾದರೂ ಶಿಕ್ಷಣ ಕೊಡಿಸುತ್ತಾರೆ. "ಉದ್ಯೋಗಂ ಪುರುಷ ಲಕ್ಷಣಂ" ಎಂದು ಹೇಳಿ ದುಡಿಮೆ ಕಳುಹಿಸಲು ಪ್ರೋತ್ಸಾಹಿಸುತ್ತಾರೆ. ಸಂವಿಧಾನದಲ್ಲಿ ಸಮಾನತೆಯ ಹಕ್ಕು ನೀಡಿದ್ದರೂ, ಅದು ಮಹಿಳಾ ವಿಚಾರದಲ್ಲಿ ಇನ್ನೂ ನಿರಾಕರಣೆಯ ಹಕ್ಕಾಗಿದೆ. ತನಗೆ ಬೇಕೆನಿಸಿದ್ದನ್ನು ಪಡೆಯಲು ಆಕೆ ಸಂಘರ್ಷಕ್ಕೆ ಎದುರುಗೊಳ್ಳುವ ಅನಿವಾರ್ಯತೆ ಇಂದಿಗೂ ಇದೆ. ಅವಳಿಗೆ ಈ ಸಂಘರ್ಷದ ಬದುಕೇ ಅಂತಿಮನಾ ಎಂಬ ಆತಂಕವೂ ಸೃಷ್ಟಿಯಾಗಿದೆ.

ವಿದ್ಯುನ್ಮಾನ ಮಾಧ್ಯಮ ಆಧುನಿಕ ಜಗತ್ತಿನ ಆವಿಷ್ಕಾರ. 21ನೇ ಶತಮಾನದಲ್ಲಿ ಮಹಿಳೆಯರನ್ನು ಹೆಚ್ಚು ಆಕರ್ಷಿಸಿದ ಕ್ಷೇತ್ರ ಕೂಡ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಉದ್ಯೋಗವನ್ನು ಅರಸಿಕೊಂಡು ಈ ಕ್ಷೇತ್ರಕ್ಕೆ ಬಂದಿದ್ದೂ ಇದೆ. ಈ ಬರುವಿಕೆ ಆಕೆಗೆ ಸುಲಭವಾಗಿಲ್ಲ ಅನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಮಾಧ್ಯಮ ಎನ್ನುವುದು ಅಭಿವ್ಯಕ್ತಿಯ

ಆಕರವಾಗಿದ್ದರೂ, ಆಕೆಯು ತನ್ನ ವೈಯಕ್ತಿಕ ಯಾವುದೇ ಭಾವನೆಗಳನ್ನು ತನ್ನ ಕೆಲಸದ ಮೇಲೆ ವ್ಯಕ್ತಪಡಿಸಿಕೊಳ್ಳದೇ, ಮಾಧ್ಯಮದ ನಗುಭಾವನೆಗೆ ತೆರೆದುಕೊಳ್ಳಬೇಕಾದ ಸಂದಿಗ್ಧತೆ ಆಕೆಯ ಮುಂದಿದೆ. ಇಂತಹ ಸಾಕಷ್ಟು ಸಂದಿಗ್ಧತೆಗಳನ್ನು ಆಕೆ ಎದುರಿಸಿದ್ದಾಳೆ. ಇದಕ್ಕೆ ತಾಜಾ ಉದಾಹರಣೆ ಕೊಡುವುದಾದರೆ, ಛತ್ತೀಸ್‌ಘಡ್‌ನಲ್ಲಿ ಐಬಿಸಿ24 ಹೆಸರಿನ ನ್ಯೂಸ್ ಚಾನೆಲ್‌ನ ಆ್ಯಂಕರ್ ಸರ್‌ಪ್ರೀತ್ ಕೌರ್ ಬೆಳಿಗ್ಗೆ ನ್ಯೂಸ್ ಓದುವಾಗ ಲೈವ್‌ನಲ್ಲಿ ಮಹಸಮುಂದ್ ಜಿಲ್ಲೆಯ ಪಿತಾರಾ ಎಂಬಲ್ಲಿ ಕಾರೊಂದು ಅಪಘಾತವಾದ ಸುದ್ದಿ ಬ್ರೇಕಿಂಗ್ ನ್ಯೂಸ್ ಆಗಿ ಬರುತ್ತದೆ. ಸ್ಥಳದಿಂದ ಸುದ್ದಿ ಮಾಡುತ್ತಿದ್ದ ವರದಿಗಾರ ಆ್ಯಂಕರ್ ಜತೆ ಮಾತಾಡುತ್ತಾ, ಅಪಘಾತವಾದ ಕಾರಿನಲ್ಲಿ ಒಟ್ಟು ಐದು ಜನರಿದ್ದರು ಎಂದು ವರದಿ ಮಾಡುತ್ತಾನೆ. ಈ ಐವರಲ್ಲಿ ಮೂವರು ಸ್ಥಳದಲ್ಲಿಯೇ ಅಸುನೀಗಿದ್ದಾರೆ ಎಂದು ಸುದ್ದಿ ಕೊಡುತ್ತಾನೆ. ನಂತರ ಘಟನೆಯಲ್ಲಿ ನಿಧನರಾದ ಮೂವರು ಹೆಸರನ್ನು ಒಂದೊಂದಾಗಿ ಹೇಳುತ್ತಾ ಬರುತ್ತಾನೆ. ಸತ್ತಿರುವ ಆ ಮೂವರಲ್ಲಿ ಹರ್ಷಾದ್ ಕವಾಡೆ ಕೂಡ ಒಬ್ಬರು. ಈತ ನ್ಯೂಸ್ ಓದುತ್ತಿರುವ ಸರ್‌ಪ್ರೀತ್ ಅವರ ಮುದ್ದಿನ ಗಂಡ. ತನ್ನ ಪತಿಯೇ ಬಲಿಯಾಗಿರುವ ಸುದ್ದಿಯನ್ನೂ ಆಕೆ ಓದುತ್ತಾಳೆ. ಸುದ್ದಿ ಮುಗಿಯುತ್ತಿದ್ದಂತೆಯೇ ಮತ್ತೆ ಘಟನೆ ನಡೆದ ಸ್ಥಳವನ್ನು ತೋರಿಸಲಾಗುತ್ತದೆ. ನ್ಯೂಸ್ ರೂಮ್‌ನಿಂದ ಆಚೆ ಬರುವ ಸರ್‌ಪ್ರೀತ್ ಅಕ್ಷರಶಃ ಪ್ರಜ್ಞೆ ಕಳೆದುಕೊಳ್ಳುತ್ತಾಳೆ. ಆಕೆಗೆ ಅಲ್ಲಿ ಅಭಿವ್ಯಕ್ತಿಸುವ ಸ್ವಾತಂತ್ರ್ಯ ಇಲ್ಲದಿರುವ ಕಾರಣಕ್ಕಾಗಿ ಮತ್ತು ಆ ನೋವನ್ನು ತಡೆಹಿಡಿದ ಕಾರಣಕ್ಕಾಗಿ ಮತ್ತಷ್ಟು ಖಿನ್ನತೆಗೆ ಒಳಗಾಗುತ್ತಾಳೆ. ಆದರೆ, ಸುದ್ದಿ ವಾಚಿಕೆಯ ಬಗ್ಗೆ ಚರ್ಚೆ ಆಗಿದ್ದೇ ಬೇರೆ. ಅವಳ ವೃತ್ತಿಪರತೆ ಬಗ್ಗೆ ಹೆಮ್ಮೆಯಿಂದ ಮಾಧ್ಯಮ ಸಮಾಜ ಮಾತಾಡಿತು. ಈ ಘಟನೆಯನ್ನು ಉದಾಹರಣೆಯನ್ನಾಗಿ ತಗೆದುಕೊಂಡು ಮಾಧ್ಯಮದ ಕೆಲಸವೆಂದರೆ ಹೀಗೆ ಇರುತ್ತದೆ ಎಂದು ಪ್ರಚಾರ ಮಾಡಲಾಯಿತು. ಯಾರೂ ಸರ್‌ಪ್ರೀತಿಯ ನೋವನ್ನು ಗಮನಿಸಲೇ ಇಲ್ಲ.

ಹೌದು, ಸುದ್ದಿವಾಚಕಿ ತನ್ನ ಗಂಡನೇ ಸತ್ತಿದ್ದ ಸುದ್ದಿಯನ್ನು ಓದಿದರು. ಆ ಕ್ಷಣದಲ್ಲಿ ತಾನು ನಿರ್ವಹಿಸುತ್ತಿದ್ದ ಕಾರ್ಯಕ್ಕೆ ಯಾವುದೇ ತೊಂದರೆ ಆಗದಂತೆ ಕೆಲಸ ನಿಭಾಯಿಸಿದರು. ಸುದ್ದಿಯನ್ನು ಅರ್ಧಕ್ಕೆ ನಿಲ್ಲಿಸದೇ ಪೂರ್ಣವಾಗಿ ಓದಿ ತಮ್ಮ ವೃತ್ತಿ ಪ್ರಜ್ಞೆ ಮೆರೆದರು. ಅವಳ ಕಾರ್ಯಕ್ಕಾಗಿ ಚಾನೆಲ್‌ನ ಮುಖ್ಯಸ್ಥರು ಕೂಡ ಹಾಡಿಹೊಗಳಿದರು. ಆದರೆ, ಆಕೆಯ ಒಳಗಿನ ಅಭಿವ್ಯಕ್ತಿಸುವ ಸಂಘರ್ಷವನ್ನು ಯಾರೂ ಗುರುತಿಸಲಿಲ್ಲ. ಈ ಕುರಿತು ಸಣ್ಣ ಮಟ್ಟದ ಚರ್ಚೆ ಕೂಡ ನಡೆಯಲಿಲ್ಲ.

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಇಂದು ಅನೇಕ ಕೌಟುಂಬಿಕ ಸಂಘರ್ಷಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಕುಟುಂಬದೊಂದಿಗೆ ವೃತ್ತಿ ಆಯ್ಕೆ ಹಾಗೂ ನಿರ್ವಹಣೆಯ ಸಂಘರ್ಷ, ಮದುವೆ ಮತ್ತು ವೃತ್ತಿ ನಿರ್ವಹಣೆಯ ಸಂಘರ್ಷ, ತಾಯ್ತನದ ಜವಾಬ್ದಾರಿ ಮತ್ತು ವೃತ್ತಿ ನಿರ್ವಹಣೆಯಲ್ಲಿನ ಸಂಘರ್ಷ, ಜಾತಿ ಮತ್ತು ಧಾರ್ಮಿಕ ಕಾರಣದ ಸಂಘರ್ಷ ಇದರ ಜೊತೆಗೆ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ಹೊಸದೊಂದು ಸಂಘರ್ಷ ಶುರುವಾಗಿದೆ. ಅದು ಮದುವೆಯಾಗಬೇಕೆಂದಾಗ ಎದುರಿಸುವ ಸಂಘರ್ಷ. ಇವೆಲ್ಲವುಗಳ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

6.1 ಹುಡುಗಿಯರ ನೆಲೆಯಿಂದ ವೃತ್ತಿ ಆಯ್ಕೆ ; ಕುಟುಂಬದ ನೆಲೆಯಿಂದ ವೃತ್ತಿ ನಿರಾಕರಣೆ

ಇತರ ಜೀವಿಯಂತೆಯೇ ಈ ಮಾನವ ಶಿಶು ಕೂಡ ಒಂದು ಜೀವಿಯಾಗಿಯೇ ಹುಟ್ಟು ಪಡೆಯುತ್ತದೆ. ನಂತರದಲ್ಲಿ ಸಮಾಜ, ಕುಟುಂಬಗಳು ಅದನ್ನು ಲಿಂಗಾಧಾರಿತವಾಗಿ ರೂಪಿಸಿ ಹೆಣ್ಣು ಅಥವಾ ಗಂಡು ಎಂದು ವಿಭಾಗಿಸಿ ಕರೆದುಕೊಳ್ಳುತ್ತದೆ. ಹುಟ್ಟುವ ಪೂರ್ವದಲ್ಲಿಯೇ ಹೆಣ್ಣಿನ ಹುಟ್ಟನ್ನು ನಿರಾಕರಿಸುವ ಮನಸ್ಥಿತಿಯಲ್ಲಿದೆ ನಮ್ಮ ಸಮಾಜ. ಈ ಕಾರಣದಿಂದಾಗಿಯೇ ಹೆಣ್ಣು ಭ್ರೂಣಹತ್ಯೆಯಂತಹ ದುಷ್ಕೃತ್ಯಗಳು ನಮ್ಮ ನಾಗರೀಕ ಸಮಾಜದಲ್ಲಿ ಇಂದಿಗೂ ನಡೆಯುತ್ತಿವೆ. ಹುಟ್ಟಿದ ಮಗು 'ಹೆಣ್ಣು' ಎಂದು ಗೊತ್ತಾಗುತ್ತಿದ್ದಂತೆಯೇ ಕುಟುಂಬ ಅಭಿವ್ಯಕ್ತಿಸುವ ರೀತಿ ಕೂಡ ಭಿನ್ನವಾಗಿಯೇ ಇರುತ್ತದೆ. ಸುಶಿಕ್ಷಿತರೂ ಒಳಗೊಂಡಂತೆ ಗಂಡು ಹುಟ್ಟಿದರೆ ಸಿಹಿ ಹಂಚುವುದು, ಹೆಣ್ಣು ಹುಟ್ಟಿದಾಗ ಅಯ್ಯೋ ಅನ್ನುವ ಪ್ರತಿಕ್ರಿಯೆಯಲ್ಲಿಯೇ ತಾರತಮ್ಯ ಅಭಿವ್ಯಕ್ತಿಗೊಳ್ಳುತ್ತದೆ.

ನಮ್ಮದು ಶ್ರೇಷ್ಠ ಸಂಸ್ಕೃತಿ, ಸುಖೀ ಕುಟುಂಬ ಎನ್ನುವ ಪರಿಕಲ್ಪನೆಯ ಒಳಗೆ ಮಹಿಳೆಯ ನಡವಳಿಕೆ, ಆಲೋಚನೆಗಳು ಹೇಗಿರಬೇಕು ಎನ್ನುವುದು ನಿರ್ಧಾರಿತವಾಗಿದೆ. ಹೆಣ್ಣು ಮಗು ಕುಟುಂಬದೊಳಗೆ ಹೇಗೆ ಬೆಳೆಯಬೇಕು ಅನ್ನುವುದನ್ನು ಸಿದ್ಧಮಾದರಿಯ ನಡವಳಿಕೆ ಅಪೇಕ್ಷಿಸುತ್ತದೆ. ಹಾಗಾಗಿ ಅದೇ ಮಾದರಿಯಲ್ಲಿಯೇ ಹೆಣ್ಣು ಮಗುವನ್ನು ಬೆಳೆಸುತ್ತದೆ. ಇದು ಅವಳು ಎದುರಿಸುವ ಮೊದಲ ಕೌಟುಂಬಿಕ ಸಂಘರ್ಷವಾಗಿದೆ. ಶತಶತಮಾನಗಳಿಂದಲೂ ಹೆಣ್ಣು ಗಂಡು ನಡುವಿನ ಅಸಮಾನತೆಯು ತಾರ್ಕಿಕತೆಗೆ ನಿಲುಕದೇ ಸಾಗುತ್ತಿದೆ. ಹಾಗಾಗಿ ಲಿಂಗಾಧಾರಿತ ಅಸಮಾನತೆ ಬಗ್ಗೆ ಹಲವು ದಶಕಗಳಿಂದ ತೀವ್ರ ಚರ್ಚೆ ಪ್ರಾರಂಭವಾಗಿದೆ. ಮಹಿಳಾ ಸಮಾನತೆಗಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗಿದ್ದರೂ, ಕಾಯ್ದೆ ಕಾನೂನುಗಳನ್ನು ತರಲಾಗಿದ್ದರೂ, ಇನ್ನೂ ಹೆಣ್ಣು ಗಂಡು ಎಂಬ ಭೇದ ಮಾತ್ರ ನಿಂತಿಲ್ಲ. ಇದರಿಂದಾಗಿ

ಕೌಟುಂಬಿಕ ವಲಯದಲ್ಲಿ ಸ್ತ್ರೀ ಕುಟುಂಬದ ಕಟ್ಟುಪಾಡುಗಳಿಗೆ ಒಳಗಾಗಿ ಜೀವನ ನಡೆಸುತ್ತಿದ್ದಾಳೆ. ಕೌಟುಂಬಿಕ ಚೌಕಟ್ಟಿನಲ್ಲಿಯೇ ಆಕೆ ಒತ್ತಾಯದಿಂದ ಬದುಕುತ್ತಿದ್ದಾಳೆ. ಮಹಿಳೆಯನ್ನು ಭಾರತೀಯ ಸಂಸ್ಕೃತಿಯ ರಾಯಭಾರಿಯನ್ನಾಗಿ ಮಾಡಿರುವ ಈ ವ್ಯವಸ್ಥೆ, ಅವಳಿಗೆ ತ್ಯಾಗಿಯ ಪಟ್ಟವನ್ನೂ ಕಟ್ಟಿದೆ. ಹಾಗಾಗಿ ಅವಳು ತನ್ನ ಕುಟುಂಬಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಾಗಿರುತ್ತಾಳೆ. ಮಹಿಳೆಯ ಬಗ್ಗೆ ಆಕೆಯ ಇರುವಿಕೆಯ ಬಗ್ಗೆ ನಕಾರಾತ್ಮಕ ಭಾವನೆಗಳನ್ನು ಹೊಂದಿರುವ ಮನು, ಮಹಿಳೆಯರನ್ನು ಒಂದು ಚೌಕಟ್ಟಿನಲ್ಲಿ ಬಂಧಿಸಿದ್ದಾನೆ. ಹಾಗಾಗಿ ಸಮಾಜದಲ್ಲಿ ಇನ್ನೂ ಸಮಾನತೆ ಎಂಬುದು ಇಲ್ಲದಾಗಿದೆ.

ಭಾರತದಲ್ಲಿ ಮಹಿಳೆಯು ದುಡಿಮೆಗೆ ಹೇಗೆ ಪ್ರವೇಶಿಸಿದಳು ಎಂಬುದಕ್ಕೆ ನಿಖರವಾದ ಮಾಹಿತಿ ಸಿಗದೇ ಹೋದರೂ, ನಮ್ಮದು ಕೃಷಿ ಪ್ರಧಾನ ಸಮಾಜ ಆಗಿರುವುದರಿಂದ ಹೊಲದಲ್ಲಿ ಕೆಲಸ ಮಾಡುವ ಮೂಲಕ ದುಡಿಮೆಗೆ ಪ್ರವೇಶ ಮಾಡಿದಳು ಎನ್ನಲಾಗುತ್ತಿದೆ. ನಂತರ ಪಶು ಸಂಗೋಪನೆ, ಗುಡಿ ಕೈಗಾರಿಕೆ, ಚಿಕ್ಕಪುಟ್ಟ ಕೈಗಾರಿಕೆಗಳಲ್ಲಿ ಕೆಲಸ ಮಾಡುವುದು ಹೀಗೆ ಶುರುವಾದ ದುಡಿಮೆ ಇಂದು ಎಲ್ಲಾ ರಂಗದಲ್ಲೂ ಮಹಿಳೆಯನ್ನು ತೊಡಗಿಸಿಕೊಂಡಿದೆ. ಭಾರತದ ಸಂವಿಧಾನವು ಸ್ತ್ರೀ–ಪುರುಷರಿಗೆ ಸಮಾನವಾದ ಹಕ್ಕುಗಳನ್ನು ನೀಡಿರುವುದರಿಂದ ಮತ್ತು ಅಭಿವ್ಯಕ್ತಿಸುವ, ಚಲಿಸುವ ಸ್ವಾತಂತ್ರ್ಯ ಕೊಟ್ಟಿರುವುದರಿಂದ, ಮನೆಯಿಂದಾಚೆ ಮಹಿಳೆ ಬರುತ್ತಿದ್ದಾಳೆ. ಆದರೂ, ಕೂಡ ಕೌಟುಂಬಿಕ ಸುಳಿಯಲ್ಲಿ ಸಿಕ್ಕಿರುವ ಮಹಿಳೆಗೆ ದುಡಿಮೆಯ ಸ್ವಾತಂತ್ರ್ಯ ದೊರಕಿಲ್ಲ. ಉದ್ಯೋಗದಲ್ಲಿರುವ ಮಹಿಳೆ ವಿವಾಹಿತವಾಗಿದ್ದರೆ ಅವಳ ಕುಟುಂಬ ಜೀವನ ಏರುಪೇರಾಗುತ್ತದೆ. ಗಂಡ ಮಕ್ಕಳ ಕಡೆ ಗಮನ ಹರಿಸಲು ಆಗದೇ ಇರುವ ಕಾರಣಕ್ಕಾಗಿ ದಾಂಪತ್ಯದಲ್ಲಿ ಬಿರುಕು ಉಂಟಾಗಬಹುದು ಎಂಬ ಆತಂಕದಿಂದಾಗಿ ವೃತ್ತಿಯನ್ನು ಮಾಡಲು ಮಹಿಳೆಯರಿಗೆ ನಿರಾಕರಿಸಲಾಗುತ್ತಿದೆ.

ಮೊದ ಮೊದಲು ವಿದ್ಯಾಭ್ಯಾಸ ಪಡೆದ ಮಹಿಳೆಯರನ್ನು ಉದ್ಯೋಗಕ್ಕೆ ಕಳುಹಿಸುವುದು ಶೋಚನೀಯ ಸಂಗತಿಯಾಗಿತ್ತು. ಒಂದುವೇಳೆ ಉದ್ಯೋಗಕ್ಕೆ ತೆರೆದುಕೊಂಡರೆ ಅಂತಹ ಮಹಿಳೆಯರನ್ನು ಅನುಮಾನದಿಂದ ನೋಡಲಾಗುತ್ತಿತ್ತು. ಇದು ಈಗಲೂ ಮುಂದುವರೆದಿದೆ. ಮುಖ್ಯವಾಗಿ ಹೆಣ್ಣು ಮಕ್ಕಳು ದುಡಿಮೆಗಾಗಿ ಹೊರಗೆ ಕಳುಹಿಸುವುದನ್ನೂ ಈಗಲೂ ಒಂದಷ್ಟು ಕುಟುಂಬಗಳು ಹಾಗೆಯೇ ಭಾವಿಸುತ್ತಿದೆ. ಇದು ಕೂಡ ಮಹಿಳೆಯರ ವೃತ್ತಿಯ ನಿರಾಕರಣೆಗೆ ಬಹು ಮುಖ್ಯ ಕಾರಣವಾಗಿದೆ. ಮಹಿಳೆಯರನ್ನು ಕೆಲವು ಸಾಂಪ್ರದಾಯಿಕ ಆಚರಣೆಗಳಿಂದ ಬಂಧಿಸಿಡಲಾಗಿದೆ. ಹಾಗಾಗಿಯೇ ಮಹಿಳೆಯರು ಇಂದು ಶಿಕ್ಷಣಕ್ಕೆ ತೆರೆದುಕೊಳ್ಳಲು

ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಒಂದುವೇಳೆ ಮಹಿಳೆಗೆ ಉನ್ನತ ಶಿಕ್ಷಣವನ್ನು ಕೊಡಿಸಿದರೆ, ಆಕೆ ಉನ್ನತ ಸ್ಥಾನದಲ್ಲಿ ಇದ್ದರೆ ಮದುವೆ ಸಂದರ್ಭದಲ್ಲಿ ತೊಂದರೆ ಆಗುತ್ತದೆ ಅನ್ನುವ ನಂಬಿಕೆ ಈಗಲೂ ಇದೆ. ಉನ್ನತ ಶಿಕ್ಷಣ, ಉನ್ನತ ಸ್ಥಾನದಲ್ಲಿರುವ ಹುಡುಗಿಗೆ ಅದೇ ಸ್ಥಾನಮಾನಕ್ಕೆ ಹೊಂದಿಕೊಳ್ಳುವ ಹುಡುಗ ವಿವಾಹಕ್ಕೆ ಸಿಗುವುದಿಲ್ಲ. ಆಕಸ್ಮಾತ್ ಸಿಕ್ಕರೆ ಕುಟುಂಬದಲ್ಲಿ ಬೇರೆ ರೀತಿಯ ಸಮಸ್ಯೆಗಳನ್ನು ಆಕೆ ಎದುರಿಸಬೇಕಾಗುತ್ತದೆ ಎಂದು ಕುಟುಂಬದವರು ವೃತ್ತಿಗೆ ಕಳುಹಿಸಲು ಹಿಂದೇಟು ಹಾಕುವಂತಹ ಉದಾಹರಣೆಗಳೂ ಸಿಗುತ್ತವೆ. ಇದನ್ನು ಈ ವೃತ್ತಿಯಲ್ಲಿರುವ ಅನೇಕ ಮಹಿಳಾ ಉದ್ಯೋಗಿಗಳು ಒಪ್ಪಿಕೊಂಡಿದ್ದಾರೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಈ ಬಗೆಯ ಸಮಸ್ಯೆಗಳನ್ನು ಎದುರಿಸಿರುವುದು ಕಂಡುಬರುತ್ತದೆ. ಇವರು ಯಾವೆಲ್ಲ ಸಮಸ್ಯೆಗಳನ್ನು ಎದುರಿಸಿದ್ದಾರೆ ಎಂಬುದನ್ನು ತಮ್ಮದೇ ಅನುಭವಗಳನ್ನು ಬಿಚ್ಚಿಟ್ಟಿದ್ದಾರೆ. ಅವುಗಳನ್ನು ಮುಂದಿನಂತೆ ವಿಶ್ಲೇಷಿಸಲಾಗಿದೆ.

ವಾಹಿನಿಯೊಂದರಲ್ಲಿ ಕೆಲಸ ಮಾಡುವ ಕಾರುಣ್ಯ ಅವರು ತಮ್ಮ ಕುಟುಂಬದವರು ತನ್ನ ವೃತ್ತಿಯನ್ನು ಹೇಗೆ ನಿರಾಕರಿಸಿದರು ಅನ್ನುವ ಕುರಿತು ಹೇಳಿದ್ದು ಹೀಗೆ..

"ಬೆಂಗಳೂರಿನಿಂದ ನೂರಾರು ಕಿಲೋ ಮೀಟರ್ ದೂರದಲ್ಲಿದೆ ನನ್ನೂರು. ವಿದ್ಯುನ್ಮಾನ ಮಾಧ್ಯಮ ಬಹುತೇಕ ಕೇಂದ್ರ ಕಚೇರಿಗಳು ಇರುವುದು ಇದೇ ಬೆಂಗಳೂರಿನಲ್ಲಿ. ಹಾಗಾಗಿ ನಾನು ಕೆಲಸ ಹುಡುಕಿಕೊಂಡು ಬಂದಿದ್ದು ಬೆಂಗಳೂರಿಗೆ. ಸದ್ಯ ಖಾಸಗಿ ವಾಹಿನಿಯಲ್ಲಿ ಪತ್ರಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಈಗ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ ಅಂದರೆ, ಅದಕ್ಕೆ ನನ್ನ ಕುಟುಂಬದ ಸಹಕಾರವೇ ಕಾರಣ. ನನ್ನನ್ನು ಟಿವಿಯಲ್ಲಿ ನೋಡಿದಾಗಲೆಲ್ಲ ಅವರು ನನ್ನ ಬಗ್ಗೆ ಹೆಮ್ಮೆ ಪಡುತ್ತಾರೆ. ಅವರಿಗೆ ಆತಂಕ ಎಂದರೆ, ನನ್ನ ಒತ್ತಡದ ಜೀವನದ ಬಗ್ಗೆ. ನಮಗೆ ಬೇಕಾದಾಗ ರಜೆ ಸಿಗಲ್ಲ. ಹುಷಾರಿಲ್ಲದ ವೇಳೆಯಲ್ಲೂ ನಾನು ಕೆಲಸದಲ್ಲೇ ಇರುತ್ತೇನೆ. ಮನೆಯಲ್ಲಿ ಏನಾದರೂ ತೊಂದರೆ ಅಂತ ಆದರೆ, ತಕ್ಷಣವೇ ಸ್ಪಂದಿಸುವುದಕ್ಕೆ ಆಗುವುದಿಲ್ಲ. ಈ ಕಾರಣಕ್ಕಾಗಿ ಇಂತಹ ಕೆಲಸ ನಿನಗೆ ಬೇಕಾ? ಅಂತ ಮನೆಯಲ್ಲಿ ಕೇಳಿದ್ದು ಇದೆ. ಅದರಲ್ಲೂ ನಮ್ಮ ಜೀವನಕ್ಕೆ ಯಾವುದೇ ಭದ್ರತೆ ಇಲ್ಲ. ಯಾವತ್ತು ಏನು ಬೇಕಾದರೂ ನಮಗೆ ಆಗಬಹುದು. ಎಷ್ಟೋ ವರದಿಗಾರರು ಕೊಲೆಯಾಗಿಯೂ ಹೋಗಿರುವ ಉದಾಹರಣೆಗಳು ಇವೆ. ನಾವೆಲ್ಲ ಅಧಿಕಾರಿಗಳ, ರಾಜಕಾರಣಿಗಳ, ಪ್ರಭಾವಿ ವ್ಯಕ್ತಿಗಳ ತಪ್ಪುಗಳನ್ನು ಎತ್ತಿ ತೋರಿಸುವಂತಹ ನ್ಯೂಸ್ ಮಾಡಿರುತ್ತೇವೆ. ಅಪಮಾನದಿಂದಲೋ ನಮ್ಮ ಮೇಲಿನ ಕೋಪಕ್ಕಾಗಿಯೋ ಅವರು ನಮಗೆ

ಬೆದರಿಕೆಯನ್ನೂ ಹಾಕಿರುತ್ತಾರೆ. ಈ ವಿಷಯ ಮನೆಯಲ್ಲಿ ಗೊತ್ತಾದಾಗ ಸಹಜವಾಗಿಯೇ ಅವರಿಗೂ ಭಯವಾಗುತ್ತದೆ. ಇಂತಹ ಸಂದರ್ಭದಲ್ಲಿ ಆತಂಕಗೊಂಡವರು ಕೆಲಸ ಬಿಟ್ಟು ಬರುವಂತೆ ಕುಟುಂಬದಿಂದ ಒತ್ತಡ ಬರುತ್ತದೆ. ಒಂದು ಸಾರಿ ಹೀಗೆ ಆಯಿತು. ನಾನು ಒಬ್ಬ ಅಧಿಕಾರಿಯ ವಿರುದ್ಧ ವರದಿಯನ್ನು ಮಾಡಿದ್ದೆ. ಸುದ್ದಿಯ ಇಂಪ್ಯಾಕ್ಟ್ ಪ್ರಬಲವಾಗಿತ್ತು. ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವವರೆಗೂ ಹೋಗಿತ್ತು. ಇದರಿಂದ ಆ ಅಧಿಕಾರಿ ನನಗೆ ಬೆದರಿಸಲು ನೋಡಿದ. ಅವರ ಯಾವ ಬೆದರಿಕೆಗೂ ನಾನು ಬಗ್ಗಲಿಲ್ಲ. ನನಗೆ ಗೊತ್ತಿರುವವರಿಂದ ಹೇಳಿಸಿದ. ನಾನು ಅವರ ಮಾತನ್ನು ಕೇಳಲಿಲ್ಲ. ಹಾಗಾಗಿ ಅವರಿಗೆ ನನ್ನ ಮೇಲೆ ವಿಪರೀತ ಕೋಪ ಬಂದಿತ್ತು. ನನ್ನ ವೀಕ್ನೆಸ್ ಏನು ಅಂತ ಅವರು ಕಂಡು ಹಿಡಿದರು. ಸೀದಾ ನಮ್ಮ ಮನೆಗೆ ಕರೆ ಮಾಡಿ ನನ್ನ ತಂದೆ ತಾಯಿಗೆ ನನ್ನ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ಆಡಿದ್ದರು. ಅವರ ಮಾತನ್ನು ನಂಬಿದ್ದ ನನ್ನ ಕುಟುಂಬ. ತಕ್ಷಣವೇ ನನಗೆ ಕಾಲ್ ಮಾಡಿದರು. ಅಮ್ಮ ಮಾಡಿದ್ದ ಕರೆ ಸ್ವೀಕರಿಸುತ್ತಿದ್ದಂತೆಯೇ ನನ್ನ ತಾಯಿ ಬೈಯೋಕೆ ಶುರು ಮಾಡಿದರು. ಯಾವುದೇ ಕಾರಣಕ್ಕೂ ನೀನು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವುದು ಬೇಡ. ಈಗಲೇ ಕೆಲಸ ಬಿಟ್ಟು ಬಾ ಅಂತ ಹೇಳಿದ್ರು. ಯಾಕೆ ಎಂದು ಕೇಳಿದ್ರೆ ವಿಷಯ ಏನು ಅಂತ ಹೇಳೋದಕ್ಕೆ ತಯಾರಿಲ್ಲ. ನನಗೂ ಟೆನ್ಷನ್. ನಮ್ಮ ತಂದೆಗೆ ನಾನೇನು ಅನ್ನೋದು ಗೊತ್ತಿದ್ದರೂ ಅವರು ಕೂಡ ಏನು ಹೇಳುತ್ತಿಲ್ಲ. ಮನೆಗೆ ಬಂದುಬಿಡು ಅನ್ನುವುದಷ್ಟೇ ಅವರ ಆಗ್ರಹವಾಗಿತ್ತು. ತುಂಬಾ ಯೋಚಿಸಿದೆ. ಪಾಲಕರು ನನಗೆ ಅಷ್ಟೊಂದು ಒತ್ತಡ ಹಾಕುತ್ತಿದ್ದಾರೆ ಅಂದರೆ, ಏನೇ ಆಗಿರಲೇಬೇಕು ಅಂತ ಯೋಚಿಸಿದೆ. ನನಗೆ ನಾನೇ ಸಮಾಧಾನ ತಗೆದುಕೊಂಡೆ. ಅದೇ ದಿನ ರಾತ್ರಿ ಮತ್ತೆ ಮನೆಗೆ ಕಾಲ್ ಮಾಡಿದೆ. ಆವಾಗ ವಿಷಯ ಗೊತ್ತಾಯಿತು. ಅಧಿಕಾರಿಯು ನನ್ನ ಬಗ್ಗೆ ಸಲ್ಲದ ಮಾತುಗಳನ್ನು ಹೇಳಿ ಸಖತ್ತಾಗಿಯೇ ನನ್ನ ತಂದೆ ತಾಯಿಯನ್ನು ಹೆದರಿಸಿದ್ದ. ನಂತರ ನನ್ನ ಕುಟುಂಬಕ್ಕೆ ಎಲ್ಲ ವಿವರವನ್ನೂ ತಿಳಿಸಿ ಹೇಳಿದೆ. ಆಗ ಅಮ್ಮ ಮತ್ತು ಅಪ್ಪ ಸಮಾಧಾನ ಮಾಡಿಕೊಂಡ್ರು. ಇದು ನನಗೆ ಆದಂತಹ ವೈಯಕ್ತಿಕ ಅನುಭವ. ನಾನು ಕೆಲಸ ಮಾಡುವುದು ಮನೆಯಲ್ಲಿ ಒಪ್ಪಿಗೆ ಇದ್ದರೂ ಸಹಿತ ಒಂದೊಂದು ಸಾರಿ ಇಂತಹ ಸಂದರ್ಭಗಳು ಎದುರಾದಾಗ ಬಹಳ ಹುಷಾರಿಂದ ಅವುಗಳನ್ನು ಹ್ಯಾಂಡಲ್ ಮಾಡಬೇಕಾಗುತ್ತದೆ. ಇಲ್ಲಾಂದ್ರೆ ನಮ್ಮ ಕೆಲಸಾನೆ ಕಳೆದುಕೊಳ್ಳಬೇಕಾಗುತ್ತದೆ. ಕೆಲಸ ಮಾಡೋ ಸ್ಥಳದಲ್ಲಿ ನಮ್ಮ ಲೈಫ್‌ಗೆ ಮತ್ತು ಕೆಲಸಕ್ಕೆ ಸೆಕ್ಯೂರಿಟಿ ಅಂತ ಇದ್ದರೆ ಮನೆಯಲ್ಲಿನ

ತಂದೆ ತಾಯಿ ಆತಂಕ ಪಡುತ್ತಿರಲಿಲ್ಲವೇನೋ? ಇದರ ಹೊರತಾಗಿ ಯಾವತ್ತೂ ನನಗೆ ಈ ಕೆಲಸದ ವಿಷಯದಲ್ಲಿ ಕುಟುಂಬದಿಂದ ತೊಂದರೆ ಆಗಿಲ್ಲ.' ಅಂದರು.

ಮತ್ತೊಂದು ವಾಹಿನಿಯಲ್ಲಿ ವರದಿಗಾರ್ತಿಯಾಗಿ ಕೆಲಸ ಮಾಡುತ್ತಿರುವ ಶಿವಾನಿ ಕೂಡ ತಮ್ಮ ಕುಟುಂಬದ ಸದಸ್ಯರ ವೃತ್ತಿ ನಿರಾಕರಣೆಯ ಬಗ್ಗೆ ಹೇಳಿದ್ದಿಷ್ಟು "ನಾನು ಹಳ್ಳಿ ಹಿನ್ನೆಲೆಯಿಂದ ಬಂದ ಹುಡುಗಿ. ನಮ್ಮದು ಪಕ್ಕಾ ಸಂಪ್ರದಾಯಸ್ಥ ಕುಟುಂಬ ಬೇರೆ. ನಮ್ಮಂತಹ ಕುಟುಂಬದ ಹುಡುಗಿಯರು ಮನೆಯಿಂದ ಆಚೆ ಬಂದು ಕೆಲಸ ಮಾಡುವುದೇ ಕಷ್ಟ. ಕೆಲಸವಲ್ಲ ಕಾಲೇಜು ಶಿಕ್ಷಣ ಕಲಿಯುವುದು ಕಷ್ಟ. ಅಂಥದರಲ್ಲಿ ನಾನು ಸ್ನಾತಕೋತ್ತರ ಪದವಿ ಮಾಡಿಕೊಂಡೆ. ಪತ್ರಿಕೋದ್ಯಮದಲ್ಲಿಯೇ ನಾನು ಓದಿದ್ದರಿಂದ ಇದೇ ವೃತ್ತಿಯನ್ನೇ ಮಾಡಬೇಕಾದ ಅನಿವಾರ್ಯತೆ ಇತ್ತು. ನನ್ನ ಆಯ್ಕೆ ಪ್ರಿಂಟ್ ಮೀಡಿಯಾ ಆಗಿತ್ತು. ಆದರೆ ಕೆಲಸ ಸಿಕ್ಕಿದ್ದು ವಿದ್ಯುನ್ಮಾನ ಮಾಧ್ಯಮದಲ್ಲಿ. ನಮ್ಮ ಕುಟುಂಬಕ್ಕೆ ಈ ಕ್ಷೇತ್ರದಲ್ಲಿ ಕೆಲಸ ಹೇಗಿರುತ್ತದೆ ಅಂತ ಗೊತ್ತಿರಲಿಲ್ಲ. ಹಾಗಾಗಿ ಅವರು ನನ್ನನ್ನು ಕೇಳಲಿಲ್ಲ, ನಾನೂ ಅವರಿಗೆ ಕಾರ್ಯ ವೈಖರಿಯ ಬಗ್ಗೆ ಹೇಳಲಿಲ್ಲ. ಯಾವಾಗ ನಾನು ಟಿವಿಯಲ್ಲಿ ಕಾಣಿಸಿಕೊಳ್ಳುವುದಕ್ಕೆ ಶುರು ಮಾಡಿದೆನೋ, ಅದರಲ್ಲೂ ಸಿನಿಮಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ ಅಂತ ಗೊತ್ತಾಯಿತೋ, ನನ್ನ ತಂದೆಗೆ ಈ ವೃತ್ತಿ ಇಷ್ಟವೇ ಆಗಲಿಲ್ಲ. ನಮ್ಮದು ಜನರ ಮಧ್ಯೆ ನಿಂತು ಮಾಡುವ ಕೆಲಸ. ಸಿನಿಮಾ ರಂಗದ ಯಾವುದೇ ಕಾರ್ಯಕ್ರಮವಿರಲಿ, ಜಾತ್ರೆಯ ಬಂದ ಹಾಗೆ ಜನರು ಸೇರಿರುತ್ತಾರೆ. ಅವರ ಮಧ್ಯೆ ನಾನು ನಿಂತುಕೊಂಡು ಸುದ್ದಿ ಮಾಡುವುದು ಅವರಿಗೆ ಇಷ್ಟವಾಗಲಿಲ್ಲ. ಆಗ ಈ ಕೆಲಸವನ್ನು ಮಾಡಲೇ ಬೇಡ ಅಂತ ಹೇಳಲು ಶುರು ಮಾಡಿದರು. ಅವರಿಗೆ ನಾನು ಮಾಡುತ್ತಿರುವ ಕೆಲಸದ ಬಗ್ಗೆ ಮನವರಿಕೆ ಮಾಡಿಕೊಟ್ಟೆ. ಆದರೂ, ಅವರಿಗೆ ಸಮಾಧಾನವಿರಲಿಲ್ಲ. ನಾನೇನಾದರೂ ಟಿವಿಯಲ್ಲಿ ಕಾಣಿಸಿಕೊಂಡರೆ ಸಾಕು ನೂರು ಪ್ರಶ್ನೆಗಳನ್ನು ಕೇಳ್ಳೋರು. ಹೀಗೆ ಸಾಗಿತು ಹಲವು ತಿಂಗಳು. ಸ್ವಲ್ಪ ತಿಂಗಳು ಕಿರಿಕಿರಿ ಮಾಡಿ ಸುಮ್ಮನಾದರು. ನಾನು ನನ್ನ ಪಾಡಿಗೆ ಕೆಲಸ ಮಾಡುತ್ತಿದ್ದೆ. ಆಗ ಮತ್ತೆ ಮನೆಯವರ ಫೋನ್ ಕಾಲ್ ಶುರುವಾಯಿತು. ಅಲ್ಲಿ ಏನಾಗಿತ್ತು ಅಂದರೆ, ಬಹಳಷ್ಟು ಜನ ನಮ್ಮನ್ನ ತುಳಿಯೋಕೆ ಕಾಯ್ದುಕೊಂಡಿರ್ತಾರೆ. ಅವರು ಹೇಗಿರುತ್ತಾರೆ ಅಂದರೆ, ನನ್ನದೇ ಘಟನೆಯನ್ನು ಹೇಳುತ್ತೇನೆ. ಪರಿಚಯಸ್ಥರೊಬ್ಬರು ನಮ್ಮ ಮನೆಗೆ ಬಂದಿದ್ದಾರೆ. ಅಲ್ಲಿ ನನ್ನ ಬಗ್ಗೆಯೇ ಚರ್ಚೆಯಾಗಿದೆ. ನಾನು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮತ್ತು ಸಿನಿಮಾ ವರದಿಗಾರಿಕೆಯನ್ನು ಮಾಡುವ ಬಗ್ಗೆ ನನ್ನ ತಾಯಿಯು ಮನೆಗೆ ಬಂದಿದ್ದ ಪರಿಚಯಸ್ಥರಿಗೆ ಹೇಳಿದ್ದಾರೆ. ನಾನು ಟಿವಿಯಲ್ಲಿ ಕೆಲಸ

ಮಾಡುತ್ತಿದ್ದೇನೆ ಎಂದು ಅವರಿಗೆ ಗೊತ್ತಾಗುತ್ತಿದ್ದಂತೆಯೇ ನನ್ನ ತಾಯಿಗೆ "ಟಿವಿಯಲ್ಲಿ ಕೆಲಸ ಮಾಡೋ ಹುಡುಗಿಯರು ಸರಿ ಇರಲ್ಲ. ಅವರಿಗೆ ಬಹಳ ಜನ ಹುಡುಗರೊಂದಿಗೆ ಅಫೇರ್ ಇರತ್ತದೆ. ಅವರು ಚಾರಿತ್ರಿಕವಾಗಿ ಹಾಳಾಗಿರುತ್ತಾರೆ. ಅಂಥವರನ್ನು ಮುಂದಿನ ದಿನಗಳಲ್ಲಿ ಮದುವೆಯಾಗೋರು ಯಾರು? ಅಂತೆಲ್ಲಾ ಹೆದರಿಸಿದ್ದಾರೆ. ಅವರು ಅಲ್ಲಿಂದ ಹೋದ ನಂತರ ಒಂದೆರಡು ದಿನ ಬಿಟ್ಟು ಮನೆಯಿಂದ ಫೋನ್ ಬಂತು. ನಿಮ್ಮ ಅಮ್ಮನಿಗೆ ಆರೋಗ್ಯ ಸರಿಯಿಲ್ಲ ಬೇಗ ಬಾ ಅಂತ ಹೇಳಿದ್ರು. ರಜೆ ಹಾಕಿಕೊಂಡು ಊರಿಗೆ ಹೊರಟೆ. ಮನೆಗೆ ಬಂದು ನೋಡಿದ್ರೆ ಅಮ್ಮ ಮಂಚದ ಮೇಲೆ ಮಲಗಿದ್ದರು. ಅವರ ಎದುರಿಗೆ ನಿಂತಿದ್ದ ನನ್ನನ್ನು ವಿಚಿತ್ರವಾಗಿ ನೋಡುತ್ತಿದ್ದರು. ಅವರಿಗೆ ಹುಷಾರಿಲ್ಲದ ಕಾರಣಕ್ಕಾಗಿ ಹಾಗೆ ಮಾಡುತ್ತಿದ್ದಾರೇನೋ ಅಂತ ನಾನೂ ಸುಮ್ಮನಾದೆ. ಅವರ ಮಾತಿನಲ್ಲಿ ಗೊಂದಲವಿತ್ತು. ಆತಂಕವೂ ಅವರನ್ನು ಆವರಿಸಿಕೊಂಡಿತ್ತು. ಸಂಜೆಯಾದರೂ ಅವರು ಸರಿ ಹೋದಂತೆ ಕಾಣಲಿಲ್ಲ. ಏನೇನೋ ಪ್ರಶ್ನೆ ಮಾಡುತ್ತಿದ್ದರು. ಅವರು ಯಾಕೆ ಆ ರೀತಿ ಮಾತಾಡುತ್ತಿದ್ದಾರೆ ಅಂತ ನನಗಂತೂ ಅರ್ಥವೇ ಆಗಲಿಲ್ಲ. ಕೊನೆಗೆ ಬಿಚ್ಚಿಕೊಂಡಿತು ಮಹಾನ್ ರಹಸ್ಯ. ಮನೆಗೆ ಬಂದವರು ಹೇಳಿದ ಎಲ್ಲ ವಿಷಯವನ್ನೂ ಅಮ್ಮ ನನಗೆ ಹೇಳಿದರು. ನೀನು ಮದುವೆ ವಯಸ್ಸಿಗೆ ಬಂದಿರುವ ಹುಡುಗಿ. ಟಿವಿಯಲ್ಲಿ ಕೆಲಸ ಮಾಡುವವರ ಬಗ್ಗೆ ಹಾಗೆಲ್ಲ ಮಾತಾಡ್ತಾರೆ ಅಂದರೆ, ನಾಳೆ ನಿನಗೂ ಕಷ್ಟ ಆಗತ್ತೆ. ಬೇಗ ಹುಡುಗನನ್ನು ನೋಡ್ತೀವಿ. ಒಂದು ವರ್ಷ ನೀನು ಮನೆಯಲ್ಲಿ ಇದ್ದರೂ ಪರವಾಗಿಲ್ಲ, ಈ ಕೆಲ್ಸ ಬಿಟ್ಟು ಬಿಡು ಅಂತ ಪಟ್ಟು ಹಿಡಿದರು. ಅವರ ಮಾತು ಕೇಳಿ ನನಗೆ ಬಹಳ ಬೇಸರವಾಯಿತು. ಏನು ಮಾಡೋದು ಅಂತ ತಿಳಿಲಿಲ್ಲ. ಮರುದಿನ ಅಮ್ಮನ ಜೊತೆ ಮತ್ತೆ ಮಾತಾಡಿದೆ. ಸುದ್ದಿ ವಾಹಿನಿಯಲ್ಲಿ ನಾನು ಏನೆಲ್ಲಾ ಕೆಲಸ ಮಾಡುತ್ತೇನೆ ಅನ್ನುವುದನ್ನು ಬಿಡಿಸಿ ಹೇಳಿದೆ. ಆಗ ಅವ್ರಿಗೆ ಸ್ವಲ್ಪ ಸಮಾಧಾನವಾಯ್ತು. ಹುಷಾರಾಗಿ ಕೆಲ್ಸ ಮಾಡು ಅಂತ ಹೇಳಿ ವಾಪಸ್ಸು ಕೆಲಸಕ್ಕೆ ಕಳುಹಿಸಿದರು. ಆದರೂ ಅವರಿಗೆ ಭಯ ಇದ್ದೇ ಇರುತ್ತದೆ. ಇಂತಹ ಇಕ್ಕಟ್ಟಿನ ಪರಿಸ್ಥಿತಿಗಳು ಆಗಾಗ್ಗೆ ಎದುರಾಗಿರೋದು ಉಂಟು' ಅಂತಾರೆ.

ಮತ್ತೊಂದು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಸುವರ್ಣ ಕೂಡ ತಮ್ಮ ಕುಟುಂಬದ ಸದಸ್ಯರ ವೃತ್ತಿ ನಿರಾಕರಣೆಯ ಬಗ್ಗೆ ತಮ್ಮದೇ ಅನುಭವ ಹೇಳಿದ್ದು ಹೀಗೆ, "ನನ್ನದೇ ಅನುಭವದಲ್ಲಿ ಹೇಳುವುದಾದರೆ ನಾವು ಕೆಲಸ ಮಾಡುವಂಥ ವೃತ್ತಿಗಳಿಗೆ ಕುಟುಂಬದ ಸಹಕಾರ ಖಂಡಿತಾ ಬೇಕಾಗುತ್ತದೆ. ಇಲ್ಲದೇ ಇದ್ದರೆ ಮಹಿಳೆಯರು ನಿರುಮ್ಮಳವಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹೇಳಿ ಕೇಳಿ ನಮ್ಮದು ಪುರುಷ ಪ್ರಧಾನ ಸಮಾಜ. ಹಾಗಾಗಿ ಎಲ್ಲ ಕ್ಷೇತ್ರಗಳಲ್ಲೂ

ಮಹಿಳೆಯರ ಬಗ್ಗೆ ಅಪಪ್ರಚಾರ ಮಾಡುವ ಮೂಲಕ ಆ ಕ್ಷೇತ್ರಗಳಿಗೆ ಮಹಿಳೆಯರು ಬಾರದಂತೆ ತಡೆಯಲಾಗುತ್ತಿದೆ ಎನ್ನುವುದು ನನ್ನ ಅನುಮಾನ. ಇತ್ತೀಚಿನ ದಿನಗಳಲ್ಲಿ ನಾನು ಕೆಲಸ ಮಾಡುತ್ತಿರುವ ಮೀಡಿಯಾ ಮತ್ತು ಸಿನಿಮಾ ಕ್ಷೇತ್ರಗಳ ಬಗ್ಗೆ ಕೆಟ್ಟದ್ದಾಗಿ ಬಿಂಬಿಸುವಂಥ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಹಾಗಾಗಿ ಜನರೂ ಕೂಡ ನಮ್ಮನ್ನು ಅದೇ ದೃಷ್ಟಿಯಿಂದ ನೋಡೋಕೆ ಶುರು ಮಾಡಿದ್ದಾರೆ. ಮೀಡಿಯಾದಲ್ಲಿ ಕೆಲಸ ಮಾಡುವ ಹುಡುಗಿಯರು ಅಂದರೆ, ಅವರು ಕೆಟ್ಟು ಹೋಗಿರುತ್ತಾರೆ ಎಂಬ ಭಾವನೆ ಸಮಾಜದಲ್ಲಿದೆ. ಹಾಗಾಗಿ ಈ ಮೀಡಿಯಾಗೆ ಹೋಗಲು ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ಬಿಡುತ್ತಿಲ್ಲ. ಅದರಲ್ಲೂ ಸಿನಿಮಾ ಪ್ರಪಂಚಕ್ಕೆ ಮಹಿಳೆಯರನ್ನು ಕಳುಹಿಸಲು ಇನ್ನೂ ಹಿಂದೇಟು ಹಾಕುವುದನ್ನು ನೋಡುತ್ತೇವೆ. ನನಗೂ ಸಿನಿಮಾದಲ್ಲಿ ನಟಿಸುವ ಆಸೆಯಿತ್ತು. ನನ್ನ ಆಸೆಯಂತೆ ಸಿನಿಮಾದಲ್ಲಿ ನಟಿಸೋಕೆ ಅವಕಾಶವೂ ಸಿಕ್ಕಿತ್ತು. ಖುಷಿಯಿಂದಲೇ ಅಪ್ಪನಿಗೆ ಈ ವಿಷಯ ಹೇಳಿದೆ. ನನ್ನ ಮಾತು ಕೇಳಿ ಅವರು ಕೋಪಿಸಿಕೊಂಡರು. ಯಾವುದೇ ಕಾರಣಕ್ಕೂ ಸಿನಿಮಾ ಇಂಡಸ್ಟ್ರಿಗೆ ಹೋಗ ಕೂಡದು ಅಂ ಹೇಳಿದರು. ನೀನು ಸಿನಿಮಾದಲ್ಲಿ ನಟಿಸುವುದಾರೆ ನಮ್ಮ ಮನೆ ಬಿಟ್ಟು ಹೊರಡು ಅಂದರು. ಅವರಿಗೆ ಸಿನಿಮಾದಲ್ಲಿ ನಟಿಸುವುದು ಅಂದರೆ ಕೆಟ್ಟ ರೀತಿಯ ಕೆಲಸ ಎಂಬ ಭಾವನೆಯಿತ್ತು. ಅಲ್ಲಿ ನಟಿಸುವ ಹುಡುಗಿಯರು ಚಾರಿತ್ರಿಕವಾಗಿ ಶುದ್ಧವಾಗಿರೋದಿಲ್ಲ ಎನ್ನುವುದನ್ನು ಯಾರೋ ತಲೆ ತುಂಬಿಸಿದ್ದರು. ಹಾಗಾಗಿ ಅವರು ನನಗೆ ಅವಕಾಶ ಕೊಡಲಿಲ್ಲ. ಅದಕ್ಕಾಗಿಯೇ ಸಿನಿಮಾದಲ್ಲಿ ನಟಿಸಬೇಕೆನ್ನುವ ನನ್ನ ಆಸೆ ಹಾಗೆಯೇ ಉಳಿಯಿತು. ಮೊದ ಮೊದಲು ನಾನು ನ್ಯೂಸ್ ಚಾನೆಲ್‌ಗೆ ಹೋಗ್ತೀನಿ ಅಂದಾಗಲೂ ನಮ್ಮ ಅಪ್ಪನಿಗೆ ಅಳುಕು ಇತ್ತು. ಆದರೂ ಆ ಅಳುಕಿನಲ್ಲೇ ನನ್ನ ಈ ಕೆಲಸಕ್ಕೆ ಕಳುಹಿಸಿದ್ರು, ಹಾಗಾಗಿ ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಇಲ್ಲಾಂದ್ರೆ ಈ ಕ್ಷೇತ್ರಕ್ಕೆ ಬರುತ್ತಲೇ ಇರಲಿಲ್ಲ. ನಾನು ಜರ್ನಲಿಸಂ ಮುಗಿಸಿದ ಕೂಡಲೇ ಮದುವೆ ಮಾಡಿಬಿಡ್ತಿದ್ರು, ಆದ್ರೆ ನಮ್ಮ ಕ್ಷೇತ್ರ, ಸಮಾಜ ತಿಳಿದುಕೊಂಡ ಹಾಗೆ ಇರಲ್ಲ ಅನ್ನುವುದನ್ನು ಕುಟುಂಬದವರಿಗೆ ತಿಳಿಸಿ ಹೇಳಬೇಕು. ಮತ್ತು ನಾವು ಪ್ರೂವ್ ಮಾಡಬೇಕು. ಆಗ ಅವರಲ್ಲಿ ಭಯ ಇರಲ್ಲ. ಈಗ ಅಪ್ಪ ಅಮ್ಮ ಸುಮ್ಮನೇ ಇದ್ದಾರೆ' ಅಂದರು.

ಚಾನೆಲ್‌ವೊಂದರಲ್ಲಿ ಕೆಲಸ ಮಾಡಿ, ವೃತ್ತಿ ನಿರಾಕರಣೆಯ ಕಾರಣಕ್ಕಾಗಿಯೇ ಕೆಲಸವನ್ನೂ ಬಿಟ್ಟಿರುವ ಮಾಜಿ ಉದ್ಯೋಗಿ ಸುಷ್ಮಾ ತಮ್ಮ ನೋವಿನ ಕಥನವನ್ನು ಹೇಳಿಕೊಂಡಿದ್ದು ಹೀಗೆ, " ಆಗ ನಾನು ಜಿಲ್ಲೆಯೊಂದರಲ್ಲಿ ಚಾನೆಲ್‌ವೊಂದರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದೆ.

ನಾನೊಬ್ಬಳೆ ಮಹಿಳಾ ಪತ್ರಕರ್ತೆ. ಉಳಿದವರು ಹುಡುಗರು. ಇಡೀ ಜಿಲ್ಲೆಯನ್ನು ಸುತ್ತಬೇಕಾಗಿ ಬಂದಿದ್ದರಿಂದ ದೂರದ ಊರಿಗೆ ಹೋಗಿ ರಾತ್ರಿ ಬರಬೇಕಾಗುತ್ತಿತ್ತು. ತೀರಾ ತಡವಾದರೆ, ನನ್ನ ತಂಡದ ಹುಡುಗರೊಬ್ಬರು ನನ್ನ ಮನೆ ಬಾಗಿಲಿಗೆ ಬಂದು ಬಿಟ್ಟು ಹೋಗುತ್ತಿದ್ದರು. ನನಗೆ ಆ ಹುಡುಗರಿಂದ ಯಾವುದೇ ತೊಂದರೆ ಇರಲಿಲ್ಲ. ಹಾಗಾಗಿ ಮನೆಗೆ ಹೋಗಲು ತಡವಾದರೂ ಭಯ ಇರುತ್ತಿರಲಿಲ್ಲ. ಒಂದು ದಿನ ರಾತ್ರಿ 12 ಗಂಟೆಗೆ ಮನೆಗೆ ಹೋದೆ. ನನಗಾಗಿ ಕಾಯುತ್ತಾ ಕುಳಿತಿದ್ದ ನನ್ನ ಅಜ್ಜಿ ತಡವಾಗಿ ಬಂದಿದ್ದಕ್ಕೆ ಸಾವಿರ ಪ್ರಶ್ನೆಗಳನ್ನು ಕೇಳಿದರು. ನನ್ನೊಂದಿಗೆ ಬಂದಿದ್ದ ಹುಡುಗ ಬಗ್ಗೆ ವಿಚಾರಿಸಿದರು. ಆ ಹುಡುಗ ನಿನ್ನನ್ನು ಕಳುಹಿಸುವುದಕ್ಕೆ ಯಾಕೆ ಬರ್‍ತಾನೆ? ಎಲ್ಲಿಗೆ ಇಬ್ಬರು ಹೋಗ್ತೀರಿ? ಅಕ್ಕಪಕ್ಕದ ಜನ ಏನ್ ಮಾತಾಡ್ಕೋತಾರೆ ಅಂತ ನಿನಗೆ ಗೊತ್ತಾ? ಹೀಗೆ ಅಪ್ಪ ಅಮ್ಮನಿಗೂ ಟೆನ್‌ಷನ್ ಆಗೋವಷ್ಟು ಮಾತಾಡಿದ್ರು. ಅಲ್ಲಿಂದ ನನಗೆ ಒಂದು ವಾರ ಮಾತ್ರ ಕೆಲಸ ಮಾಡೋಕೆ ಸಾಧ್ಯವಾಯಿತು. ಆ ನಂತರ ಆ ಕೆಲಸಕ್ಕೆ ರಾಜೀನಾಮೆ ನೀಡಿದೆ. ಸ್ವಲ್ಪ ದಿನಗಳ ನಂತರ ಮತ್ತೆ ಕೆಲಸಕ್ಕೆ ಸೇರಿಕೊಳ್ಳುತ್ತೇನೆ ಅಂತ ಹೇಳಿದೆ. ಅದು ಬೆಂಗಳೂರಿನಲ್ಲಿ ಕೆಲಸ. ಅಪ್ಪ ಅಮ್ಮನನ್ನು ಸಲೀಸಾಗಿ ಒಪ್ಪಿಸಿದೆ. ಅಜ್ಜಿಯನ್ನು ಒಪ್ಪಿಸೋಕೆ ಆಗಲಿಲ್ಲ. ನೀನು ಮದ್ವೆಯಾಗಿ ನಿನ್ನ ಗಂಡನ ಅನುಮತಿ ತೆಗೆದುಕೊಂಡು ಎಲ್ಲಿಗೆ ಬೇಕಾದರೂ ಹೋಗು ಅಂತ ಹೇಳೋಕೆ ಶುರು ಮಾಡಿದರು. ನನಗೆ ಅವರ ಮಾತು ಇಷ್ಟವಾಗಲಿಲ್ಲ. ಅವ್ರಿಗೆ ಕನ್ವಿನ್ಸ್ ಮಾಡೋಕೆ ಪ್ರಯತ್ನಪಟ್ಟೆ. ಅದು ಫಲ ನೀಡಲಿಲ್ಲ. ನೀನು ಹಿಂಗೆಲ್ಲಾ ಅಡ್ಡಿಪಡಿಸಿದ್ರೆ ಚೆನ್ನಾಗಿರಲ್ಲ. ನಾನು ಮದುವೆ ಮಾಡಿಕೊಂಡು ಏನ್ ಸಾಧಿಸಬೇಕಾಗಿದೆ. ನಿನ್ನಹಾಗೆ ಮನೆಯಲ್ಲಿ ಕುಳಿತುಕೊಂಡು ಗಂಡ ಹೇಳಿದ ಕೆಲ್ಸ ಮಾಡೋಕೆ ಆಗಲ್ಲ. ಸಾಯೋವರ್‍ಗೂ ಹೀಗೆ ಜೀವ್ನ ಸಾಗಿಸೋಕೆ ಆಗೊಲ್ಲ ಅಂತ ಅವ್ರಿಗೆ ಎದುರಾಡಿಬಿಟ್ಟೆ. ಇದನ್ನ ಅಪ್ಪ ಅಮ್ಮ ನೋಡಿ ನನ್ನ ಈ ಕೆಲ್ಸಕ್ಕೆ ಕಳಿಸಿಕೊಟ್ರು. ಈಗ ಅಜ್ಜಿ ಇಲ್ಲ. ಇದ್ದಿದ್ರೆ ನಾನು ಏನ್ ಕೆಲ್ಸ ಮಾಡ್ತಿದ್ದೀನಿ ಅಂತ ಅವ್ರಿಗೆ ತಿಳಿಸಿ ಹೇಳ್ತಿದ್ದೆ. ಆದ್ರೆ ಮೊದಮೊದಲು ಮನೇಲಿ ನಮ್ಮ ಅಜ್ಜಿಯಿಂದ ಮಾತ್ರ ವಿರೋಧ ವ್ಯಕ್ತವಾಯಿತು. ಅಪ್ಪ ಅಮ್ಮನಿಂದ ಯಾವುದೇ ವಿರೊಧ ಇರಲಿಲ್ಲ.' ಅಂದರು.

ವಿದ್ಯುನ್ಮಾನ ಮಾಧ್ಯಮದಲ್ಲಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಮಹಿಳೆಯರು ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಕುಟುಂಬದೊಂದಿಗೆ ವೃತ್ತಿ ಆಯ್ಕೆ ಹಾಗೂ ನಿರ್ವಹಣೆಯ ಸಂಘರ್ಷಗಳ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಕಾರುಣ್ಯ ಅವರು ಹೇಳುವಂತೆ "ನಮ್ಮ ಕುಟುಂಬದಲ್ಲಿ ಮಹಿಳೆಯರು ಮನೆಯಿಂದ ಆಚೆ ಹೋಗಿ ಕೆಲಸ ಮಾಡಲು ಅವಕಾಶ ಸಿಗುವುದೇ ಕಷ್ಟದ ಸಂಗತಿ. ಇಂತಹ ಸಂದರ್ಭದಲ್ಲಿ ವೃತ್ತಿ ಕ್ಷೇತ್ರದಲ್ಲಿ

ಏನಾದರೂ ಸಮಸ್ಯೆ ಉಂಟಾದರೆ, ಅದು ನೇರವಾಗಿ ಕುಟುಂಬದ ಸದಸ್ಯರ ಮೇಲೆ ಪರಿಣಾಮ ಬೀರುತ್ತದೆ. ಒಂದು ಸಾರಿ ಇಂತಹ ಸಂದರ್ಭ ಒದಗಿ ಬಂದಿತ್ತು. ಅಂದರೆ ನಾನು ಒಬ್ಬ ಪ್ರತಿಷ್ಠಿತ ವ್ಯಕ್ತಿಯ ಅವ್ಯವಹಾರಗಳನ್ನು ಬಯಲಿಗೆಳೆದಿದ್ದೆ. ಇದರಿಂದ ಚಾನೆಲ್‌ಗೆ ಟಿಆರ್‌ಪಿ. ಚೆನ್ನಾಗಿಯೇ ಬಂದಿತ್ತು. ಆದರೆ ಆ ವ್ಯಕ್ತಿ ಕಡೆಯವರು ನನ್ನ ಮೊಬೈಲ್‌ಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದ. ಮತ್ತು ಆತನ ಬೆಂಬಲಿಗರು ಜೀವ ಬೆದರಿಕೆಯನ್ನು ಹಾಕಿದ್ದರು. ಇವರು ಇಷ್ಟಕ್ಕೆ ಸುಮ್ಮನಾಗಿದ್ದರೆ ಏನೂ ಆಗುತ್ತಿರಲಿಲ್ಲ. ಆದರೆ ಇವರು ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಮನೆಗೆ ಕರೆ ಮಾಡಿ ಅವರಿಗೆ ನನ್ನನ್ನು ಕೊಲೆ ಮಾಡುವುದಾಗಿ ಮತ್ತು ನನಗೆ ತೊಂದರೆ ಕೊಡುವುದಾಗಿ ಹೇಳಿ ಹೆದರಿಸಿದ್ದಾರೆ. ಇದನ್ನು ಕೇಳಿದ ನಮ್ಮ ತಂದೆ ತಾಯಿ ತುಂಬಾ ಗಾಬರಿಗೊಂಡು ನನಗೆ ಫೋನ್ ಮಾಡಿ ನೀನು ಕೆಲಸವನ್ನು ಬಿಟ್ಟು ಊರಿಗೆ ಬಂದುಬಿಡು. ಎಂದು ಖಡಾಖಂಡಿತವಾಗಿ ಹೇಳಿಯೇ ಬಿಟ್ಟರು. ಇದರಿಂದ ನನಗೆ ಗಾಬರಿಯಾಯಿತು. ಅವರ ಆಲೋಚನೆಯಂತೆ ನಾನು ಕೆಲಸ ಮಾಡುವ ಸ್ಥಳದಲ್ಲಿ ಯಾವುದೇ ರೀತಿಯಲ್ಲಿ ಜೀವಕ್ಕೆ ಭದ್ರತೆ ಇಲ್ಲದಿರುವುದರಿಂದ ತುಂಬಾ ಆತಂಕಗೊಂಡಿದ್ದರು. ಹಾಗಾಗಿ ಆ ಕೆಲಸವನ್ನು ಮಾಡಲೇಬೇಡ ಎಂದು ಪಟ್ಟು ಹಿಡಿದು ಕುಳಿತಿದ್ದರು. ನಂತರ ನಾನು ಮನೆಗೆ ತೆರಳಿ ನಡೆದ ಎಲ್ಲಾ ವಿಚಾರಗಳನ್ನು ತಿಳಿಸಿ ಹೇಳಿದಾಗ ನನ್ನ ಬಗ್ಗೆ ಇದ್ದಂತಹ ಆತಂಕ ಕಡಿಮೆಮಾಡಿಕೊಂಡರು. ಈ ರೀತಿಯಲ್ಲಿ ವೃತ್ತಿಗೆ ಸಂಬಂಧಿಸಿದಂತೆ ಕೆಲವು ಸಾರಿ ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ" ಎಂದು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಶಿವಾನಿ ಅವರೇ ಹೇಳಿಕೊಂಡಂತೆ ಅವರು ಪಕ್ಕಾ ಸಂಪ್ರದಾಯಸ್ಥ ಕುಟುಂಬದ ಹಿನ್ನೆಲೆಯಿಂದ ಬಂದವರು. ಈ ಸಂಪ್ರದಾಯ ಅನ್ನುವುದು ಮಹಿಳೆಯನ್ನು ನಾನಾ ರೀತಿಯಲ್ಲಿ ಕಟ್ಟಿ ಹಾಕಿದೆ. ಮನೆಯ ಹೊಸ್ತಿಲು ದಾಟಿ ಹೋಗಬಾರದು ಅನ್ನುವುದರಿಂದ ಹಿಡಿದು, ಆಕೆ ಯಾರ ಜೊತೆ ಮಾತಾಡಬೇಕು, ಯಾವ ಹೊತ್ತಿನಲ್ಲಿ ಓಡಾಡಬೇಕು, ಯಾವ ರೀತಿಯ ಬಟ್ಟೆಗಳನ್ನು ಧರಿಸಬೇಕು ಹೀಗೆ ಮುಂದುವರೆಯುತ್ತದೆ. ಆದರೆ, ಮಾಧ್ಯಮದ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಇದ್ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಕನಿಷ್ಠ 18 ಗಂಟೆಯಾದರೂ ಕೆಲಸ ಮಾಡಬೇಕಾಗುತ್ತದೆ. ಅದು ಹುಡುಗರೇ ತುಂಬಿರೋ ಸಾಮ್ರಾಜ್ಯವಾದ್ದರಿಂದ, ಗಂಡಸರ ಮಧ್ಯೆಯೇ ಇರಬೇಕಾಗುತ್ತದೆ. ಸುದ್ದಿ ಯಾವಾಗ ಸಿಗುತ್ತದೆಯೋ ಗೊತ್ತಿಲ್ಲ. ಹೊತ್ತು ಗೊತ್ತಿಲ್ಲದೇ ಘಟನೆಗಳು ನಡೆಯುವುದರಿಂದ ಹಗಲು ರಾತ್ರಿ

ಕೆಲಸಕ್ಕೆ ಸಿದ್ಧರಿರಬೇಕು. ಗ್ಲಾಮರ್ ಪ್ರಪಂಚದಲ್ಲಿ ಕಾಸ್ಟ್ಯೂಮ್ ಬಗ್ಗೆ ಹೇಳುವುದೇ ಬೇಡ. ಕಾರ್ಯಕ್ರಮಕ್ಕೆ ತಕ್ಕಂತೆ ವೇಷಭೂಷಣಗಳನ್ನು ತೊಡಬೇಕು. ಇಂತಹ ಸಂದರ್ಭದಲ್ಲಿ ಸಂಪ್ರದಾಯಸ್ಥ ಕುಟುಂಬಗಳು ಇದನ್ನು ನಿರಾಕರಿಸುತ್ತವೆ. ಈ ಬಗೆಯ ಘಟನೆ ನನ್ನ ಜೀವನದಲ್ಲೂ ನಡೆದಿದೆ. ನಾನು ಒಂದು ಕಾರ್ಯಕ್ರಮದಲ್ಲಿ ಗ್ಲಾಮರ್ ಆಗಿ ಕಾಣಿಸಿಕೊಂಡಿದ್ದರಿಂದ ಮನೆಯವರಿಂದ ವಿರೋಧವನ್ನು ಕಟ್ಟಿಕೊಳ್ಳಬೇಕಾಯಿತು. ಇದು ನನ್ನ ಕೆಲಸವನ್ನೇ ಕಿತ್ತುಕೊಳ್ಳುವ ಹಂತಕ್ಕೆ ತಲುಪಿತ್ತು. ಅಂದರೆ ನಮ್ಮದು ತುಂಬಾ ಸಂಪ್ರದಾಯಸ್ಥ ಕುಟುಂಬವಾದರೂ ನನ್ನನ್ನು ಮಾಧ್ಯಮ ಪ್ರಪಂಚಕ್ಕೆ ಕೆಲಸ ಮಾಡಲು ಕಳುಹಿಸಿಕೊಟ್ಟಿತ್ತು. ಆದರೆ ನಮ್ಮ ಕುಟುಂಬವನ್ನು ಹೊರತುಪಡಿಸಿ ನಮ್ಮ ಸಂಬಂಧಿಕರು ತುಂಬಾ ಸಂಪ್ರದಾಯವಾದಿಗಳಾಗಿದ್ದರಿಂದ ನಾನು ನಡೆಸಿಕೊಡುವ ಕಾರ್ಯಕ್ರಮವನ್ನು ನೋಡಿ ನಮ್ಮ ತಂದೆ ತಾಯಿಗೆ ಇಲ್ಲ ಸಲ್ಲದ ಮಾತುಗಳನ್ನಾಡಿದ್ದಾರೆ. ಇದನ್ನು ಸಹಿಸಿಕೊಳ್ಳಲಾರದೇ ಒಮ್ಮಿಂದೊಮ್ಮೆಲೇ ನನಗೆ ಕೆಲಸವನ್ನು ಬಿಟ್ಟು ಬಿಡಲು ಸೂಚಿಸಿದರು. ಆದರೆ ನನ್ನ ಕೆಲಸ ಮತ್ತು ಕೆಲಸ ಮಾಡುವ ಸ್ಥಳದ ಬಗ್ಗೆ ಅವರಿಗೆ ಬಹಳಷ್ಟು ತಿಳಿದಿರಲಿಲ್ಲ. ಹಾಗಾಗಿ ಅವರು ಆ ರೀತಿ ಮಾತನಾಡಿದರು. ಕೊನೆಗೆ ನಾನು ನಮ್ಮ ತಂದೆ ತಾಯಿಯನ್ನು ಸಮಾಧಾನ ಪಡಿಸಲು ಹರಸಾಹಸ ಪಡಬೇಕಾಯಿತು. ಹೀಗೆ ನಾನು ಮತ್ತು ನಮ್ಮ ಕುಟುಂಬದ ಸದಸ್ಯರು ಮಾತ್ರ ಚೆನ್ನಾಗಿದ್ದರೆ ಸಾಲದು, ನಮ್ಮ ಸಂಬಂಧಿಕರಿಗೂ ನಾವು ಮಾಡುವ ಕೆಲಸದ ಸ್ವರೂಪದ ಬಗೆಗೆ ಅರಿವು ಮೂಡಿಸುವ ಜರೂರಿದೆ. ಇಲ್ಲದಿದ್ದರೆ ನಾನು ಅನುಭವಿಸಿದ ಕಷ್ಟಗಳನ್ನು ಎದುರಿಸಬೇಕಾಗುತ್ತದೆ" ಎಂದು ಹೇಳಿದರು.

ಸುವರ್ಣ ಅವರದ್ದು ಮತ್ತೊಂದು ರೀತಿಯ ಪ್ರಕರಣ. ಕೆಲಸ ಮಾಡುವ ಸ್ಥಳ ಹಾಗೂ ಕ್ಷೇತ್ರವನ್ನು ಅವಲಂಬಿಸಿ ಹೆಣ್ಣು ಮಕ್ಕಳ ಚಾರಿತ್ರ್ಯದ ಮೌಲ್ಯಮಾಪನ ಮಾಡುವಂತಹ ಕೆಟ್ಟ ಸಂಪ್ರದಾಯವೊಂದು ಮಾಧ್ಯಮದಲ್ಲಿದೆ. ತನ್ನ ಸಹೋದ್ಯೋಗಿಗಳಿಂದಲೇ ಅವಳು ಕೆಟ್ಟ ಮಾತುಗಳನ್ನು ಕೇಳಬೇಕಾದ ಪ್ರಸಂಗವನ್ನೂ ಎದುರಿಸುತ್ತಿದ್ದಾಳೆ. ಹಾಗಾಗಿಯೇ ಆ ಹುಡುಗಿ ಸರಿ ಇಲ್ಲ. ಅವಳು ಬೇರೆ ದಾರಿ ಹಿಡಿದು ಅಧಿಕಾರಿಗಳನ್ನು ಅಥವಾ ರಾಜಕಾರಣಿಗಳನ್ನು ಬುಟ್ಟಿಗೆ ಹಾಕಿಕೊಂಡು ಸುದ್ದಿ ತರ್ತಾಳೆ. ಹೀಗೆ ಏನೆಲ್ಲ ಮಾತುಗಳನ್ನಾಡಿ, ಮೀಡಿಯಾದಲ್ಲಿ ಕೆಲಸ ಮಾಡುವ ಹುಡುಗಿಯರು ಅಂದರೆ ಕೆಟ್ಟು ಹೋಗಿರುತ್ತಾರೆಂಬ ಕೆಟ್ಟ ಸಂದೇಶವೊಂದು ನುಸುಳಿ ಬಿಟ್ಟಿದೆ. ಆ ಕಾರಣಕ್ಕಾಗಿ ಕುಟುಂಬದಲ್ಲಿನ ತಂದೆ ತಾಯಿಗಳು ತಮ್ಮ ಮಗಳ ಭವಿಷ್ಯದ ಬಗೆಗೆ

ಹಲವು ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಹಾಗಾಗಿ ವೃತ್ತಿಕ್ಷೇತ್ರದಲ್ಲಿ ಏನಾದರೂ ಸಮಸ್ಯೆಯುಂಟಾದರೆ ಬಹಳ ಬೇಗನೆ ಆತಂಕಕ್ಕಿಡಾಗುತ್ತಾರೆ.

ಜಿಲ್ಲಾ ಕೇಂದ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರ ಪ್ರಕರಣಗಳು ಮೇಲಿನವುಗಳಿಗಿಂತ ಇನ್ನೂ ವಿಭಿನ್ನ. ಸದ್ಯ ಕರ್ನಾಟಕದಲ್ಲಿ ಒಬ್ಬರೇ ಒಬ್ಬರು ಮಹಿಳಾ ಜಿಲ್ಲಾ ವರದಿಗಾರರು ಸಿಗುವುದಿಲ್ಲ. ಆದರೆ ಇವರು ಜಿಲ್ಲಾ ವರದಿಗಾರರಾಗಿ ಕೆಲವು ತಿಂಗಳು ಕಾಲ ಸೇವೆ ಸಲ್ಲಿಸಿ ನಂತರ ಕುಟುಂಬದ ಒತ್ತಡದಿಂದ ಕೆಲಸವನ್ನು ನಿರಾಕರಿಸುವಂತಾಯಿತು. ಸುಷ್ಮಾ ಹೇಳುವ ಹಾಗೆ "ನಾನು ಜಿಲ್ಲಾ ವರದಿಗಾರ್ತಿಯಾಗಿ ಕಾರ್ಯ ನಿರ್ವಹಿಸುತ್ತಿರುವಾಗ, ನನ್ನ ಕೆಲಸದ ಸ್ವರೂಪ ಬಹಳ ಕಷ್ಟಕರವಾಗಿತ್ತು. ಅಂದರೆ ನಾನು ಇಡೀ ಜಿಲ್ಲೆಯಲ್ಲಿ ಏನಾದರೂ ಸುದ್ದಿಗಳು ಸಿಗುತ್ತವೆಯೋ ಎಂಬುದನ್ನು ಕಾದು ಕುಳಿತು, ಸುದ್ದಿ ಸಿಕ್ಕ ನಂತರ ಅದರ ವರದಿಯನ್ನು ತಯಾರಿಸಿ, ಮುಖ್ಯ ಕಚೇರಿಗೆ ಕಳುಹಿಸಿಕೊಡಬೇಕು. ಇಲ್ಲವಾದಲ್ಲಿ ನಮಗೆ ಸಿಗುವ ಸಂಬಳವೂ ಸರಿಯಾಗಿ ಸಿಗುವುದಿಲ್ಲ. ಇಡೀ ಜಿಲ್ಲೆಯನ್ನು ಕವರ್ ಮಾಡುವ ಒತ್ತಡ ನನಗೆ ಇತ್ತು. ಆದರೆ ನಮ್ಮ ಮನೆಯಲ್ಲಿ ಇದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಏಕೆಂದರೆ ನಾನು ಯಾವ ಸಮಯಕ್ಕೆ ಕೆಲಸಕ್ಕೆ ಹೋಗುತ್ತೇನೋ? ಅಥವಾ ಯಾವ ಸಮಯಕ್ಕೆ ಬರುತ್ತೇನೋ ಎಂಬುದೇ ಮನೆಯವರಿಗೆ ತಿಳಿಯುತ್ತಿರಲಿಲ್ಲ. ಕೆಲವು ಸಲ ಮಧ್ಯರಾತ್ರಿಯಲ್ಲಿ ಬರುತ್ತಿದ್ದೆ. ಹಾಗಾಗಿ ಇದರಿಂದ ಮನೆಯವರು ಬೇಸತ್ತು ನನ್ನ ಕೆಲಸವನ್ನು ಬಿಡಿಸಿಬಿಟ್ಟರು.

ಹೀಗೆ ವ್ಯವಸ್ಥೆಯಲ್ಲಿ ಮಹಿಳೆಯರು ಎಲ್ಲಿಯೇ ಕೆಲಸ ಮಾಡುತ್ತಿರಲಿ, ಯಾವ ವಲಯದಲ್ಲಾದರೂ ಕೆಲಸ ಮಾಡುತ್ತಿರಲಿ ಅವರು ಆ ಕೆಲಸವನ್ನು ಪೂರ್ಣ ಸಮಯದವರೆಗೆ ಮಾಡುತ್ತಾರೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಕೆಲಸದ ಸ್ಥಳದಲ್ಲಿನ ಒತ್ತಡಗಳು ಮಹಿಳೆಯರ ವೃತ್ತಿನಿರಾಕರಣೆಗೆ ಈಡುಮಾಡುತ್ತವೆ. ಅಂದರೆ ವೃತ್ತಿ ಕ್ಷೇತ್ರದಲ್ಲಿ ಮಹಿಳೆಯರು ಧೈರ್ಯದಿಂದ ಕೆಲಸ ಮಾಡುತ್ತಿರುತ್ತಾರೆ. ಇದನ್ನು ಸಹಿಸದ ಕೆಲವರು ಅವರ ಚಾರಿತ್ರ್ಯವಧೆ ಮಾಡುವಲ್ಲಿ ನಿರತರಾಗಿರುತ್ತಾರೆ. ಮುಖ್ಯವಾಗಿ ಕುಟುಂಬದ ಸದಸ್ಯರು ತಮ್ಮ ಭದ್ರತೆಯನ್ನು ಬಯಸುತ್ತಾರೆ. ಇದು ವೃತ್ತಿ ಕ್ಷೇತ್ರದಲ್ಲಿ ಇಲ್ಲದೇ ಇದ್ದಾಗ ಸಹಜವಾಗಿ ಆತಂಕಗೊಳ್ಳುತ್ತಾರೆ. ಹಾಗಾಗಿಯೇ ಅವು ತಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕೆಲಸವನ್ನು ನಿರಾಕರಿಸಲು ಒತ್ತಾಯ ಮಾಡುತ್ತಾರೆ. ಮೊದಲನೆಯ ಪ್ರಕರಣದಲ್ಲಿ ಮಹಿಳೆಯರ ಚಾರಿತ್ರ್ಯವಧೆ ಮಾಡುವುದಲ್ಲದೆ, ಕುಟುಂಬದ ಸದಸ್ಯರೊಂದಿಗೂ ಅಸಭ್ಯವಾಗಿ ಮಾತನಾಡುವ ಮೂಲಕ ವೃತ್ತಿ ನಿರಾಕರಣೆಗೆ ಕಾರಣರಾಗಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಸಂಗತಿ ಎಂದರೆ

ಮಹಿಳೆಯರಾಗಿದ್ದ ಕಾರಣಕ್ಕೆ ಪುರುಷ ವ್ಯವಸ್ಥೆ ಆಕೆಯನ್ನು ಹತ್ತಿಕ್ಕುವ ಕೆಲಸ ಮಾಡುತ್ತದೆ. ಆದರೆ ಪುರುಷರ ವಿಷಯದಲ್ಲಿ ಹಾಗಾಗುವುದಿಲ್ಲ. ಇವರಿಗೆ ಎಲ್ಲಾ ವಲಯಗಳಲ್ಲೂ ವಿಶೇಷವಾದ ಅನುಮತಿ ಮತ್ತು ಮುಕ್ತ ಅವಕಾಶಗಳಿರುತ್ತವೆ. ಇವರಿಗೆ ವೃತ್ತಿನಿರಾಕರಣೆಗೆ ಒಳಗಾಗುವುದಿಲ್ಲ. ಪುರುಷ ವ್ಯವಸ್ಥೆಯ ಈ ಬಗೆಯ ಇಬ್ಬಗೆಯ ನೀತಿಯಿಂದಾಗಿ ಮಹಿಳೆಯರು ತಾವು ಮಾಡುವಂತಹ ಕೆಲಸಗಳನ್ನೂ ಸಹ ಕಳೆದುಕೊಳ್ಳುವಂತಹ ಸ್ಥಿತಿಗೆ ಬಂದು ನಿಂತಿದ್ದಾರೆ. ಮುಖ್ಯವಾಗಿ ಕುಟುಂಬ ಎಂಬುದು ಮಹಿಳೆಯರಿಗೆ ಒಂದು ಚೌಕಟ್ಟನ್ನು ಹಾಕಿಬಿಟ್ಟಿದೆ. ಹಾಗಾಗಿ ಇವರು ಯಾವುದೇ ಕಾರಣಕ್ಕೂ ಆ ಚೌಕಟ್ಟನ್ನು ಮೀರುವ ಹಾಗಿಲ್ಲ. ಅದೇ ರೀತಿಯಲ್ಲಿ ಮಹಿಳೆಯರ ರಕ್ಷಣೆಯ ಹೆಸರಿನಲ್ಲಿ ನಡೆಯುತ್ತಿರುವ ವೃತ್ತಿ ನಿರಾಕರಣೆಗಳು ಸಮಾಜ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಒಟ್ಟಾರೆಯಾಗಿ ಮಹಿಳೆಯರು ಕುಟುಂಬದ ಒತ್ತಡದಿಂದ ತಮ್ಮ ಕೆಲಸಗಳನ್ನು ತಾವೇ ನಿರಾಕರಿಸುವ ಹಾಗೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ.

6.2 ಮದುವೆಯಾಗಬೇಕು ಎಂದಾಗ ಎದುರಾಗುವ ಸಂಘರ್ಷ :

ಭಾರತದಲ್ಲಿ ಮಹಿಳೆಯರ ಪರವಾದ ಹಕ್ಕುಗಳು ಸರಿಯಾದ ನಿಟ್ಟಿನಲ್ಲಿ ಅನುಷ್ಠಾನಗೊಳ್ಳುತ್ತಿಲ್ಲ. ಸಮಾಜದಲ್ಲಿ ಮಹಿಳೆಯರ ಕುರಿತಾದ ಭಿನ್ನ ನಂಬಿಕೆ, ಆಚರಣೆಗಳು ಅವರನ್ನು ಕುಟುಂಬದ ಚೌಕಟ್ಟಿನಲ್ಲಿಯೇ ಜೀವಿಸುವಂತೆ ಮಾಡಿವೆ. ಮಹಿಳೆಯರು ಕುಟುಂಬದ ಆಚೆ ಬರಬಾರದು ಎಂಬ ಪಿತೃಪ್ರಧಾನ ಮೌಲ್ಯಗಳ ಕಾರಣವಾಗಿ ಅವಳು ಆರ್ಥಿಕ ರಂಗದಿಂದ ದೂರವೇ ಉಳಿದಿದ್ದಾಳೆ. ಕೆಲವು ಬೆರಳೆಣಿಕೆಯಷ್ಟು ಮಹಿಳೆಯರು ಆರ್ಥಿಕವಾಗಿ ಸದೃಢರಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಮಹಿಳೆಯರು ಆರ್ಥಿಕವಾಗಿ ಹಿಂದುಳಿದಿರುವುದು ಕಂಡುಬರುತ್ತದೆ. ಇಂತಹ ಸ್ಥಿತಿಯಲ್ಲಿರುವ ಮಹಿಳೆಯರು ವಿವಾಹದ ಕುರಿತಾಗಿ ತಮ್ಮ ಸ್ವಂತ ಅಭಿಪ್ರಾಯವನ್ನು ಅಭಿವ್ಯಕ್ತಿಸಲೂ ಸಾಧ್ಯವಿಲ್ಲದ ಪರಿಸ್ಥಿತಿ ಒದಗಿದೆ. ಆ ಕಾರಣಕ್ಕಾಗಿಯೇ ಕುಟುಂಬದಲ್ಲಿ ಹೆಣ್ಣುಮಕ್ಕಳ ಮಾತುಗಳು ಕಡೆಗಣಿಸಲ್ಪಡುತ್ತಿವೆ. ವಿವಾಹ ಎಂಬುದು ಮಾನವರಿಗೆ ಕಡ್ಡಾಯವಾಗಿ ಆಗಲೇಬೇಕಾದ ಒಂದು ನಿಯಮವಾಗಿ ರೂಪಿಸಲಾಗಿದೆ. ವಿವಾಹವಾಗದೇ ಇರುವ ಮಹಿಳೆಯರನ್ನು ಈ ಸಮಾಜ ನೋಡುವ ಕ್ರಮವೇ ಬೇರೆಯಾಗಿರುತ್ತದೆ. ಹಾಗಾಗಿ ಮಹಿಳೆಯರಿಗೆ ವಿವಾಹ ಎಂಬುದು ಕಡ್ಡಾಯವಾದ ಒಂದು ವಿಧಿಯೇ ಆಗಿದೆ. ಆದರೆ ಉದ್ಯೋಗದಲ್ಲಿರುವ ಮಹಿಳೆಯರು ಅದರಲ್ಲೂ ಅವಿವಾಹಿತ ಮಹಿಳೆಯರು ವಿವಾಹದ ಕಾರಣದಿಂದಾಗಿಯೇ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅದರಲ್ಲೂ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ

ಮಾಡುತ್ತಿರುವ ಮಹಿಳೆಯರು ಈ ವಿವಾಹದ ಕುರಿತಾಗಿ ಅಥವಾ ವಿವಾಹಕ್ಕೆ ಒಳಗಾಗಬೇಕಾದಾಗ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಇವುಗಳ ಜೊತೆಗೆ ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ವಿಚಿತ್ರವಾದ ಬೆಳವಣಿಗೆಯೊಂದು ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಂಡಿದೆ. ಅದು ವಿವಾಹಕ್ಕೆ ಸಂಬಂಧಪಟ್ಟರುವುದು. ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಹುಡುಗಿಯರ ಜೊತೆ ಮದುವೆಯಾಗಲು ಹುಡುಗರು ನಾನಾ ಕಾರಣಗಳನ್ನು ನೀಡಿ ನಿರಾಕರಿಸುತ್ತಿದ್ದಾರೆ. ಅವಳನ್ನು ಒಬ್ಬ ಮನುಷ್ಯಳನ್ನಾಗಿ ನೋಡದೆ, ಆಕೆಯನ್ನ ಅವಳ ವೃತ್ತಿಗೆ ತಳುಕು ಹಾಕಿ ನಿರಾಕರಿಸುತ್ತಿರುವುದು ಆಘಾತಕಾರಿ ಅಂಶವಿದು. ಈ ಕುರಿತು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರೇ ತಮಗಾದ ಅನುಭವಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡುವ ಭವ್ಯ ಅವರು ಮದುವೆಗಾಗಿ ಹುಡುಗನನ್ನು ಹುಡುಕುತ್ತಿರುವ ಸಂದರ್ಭದಲ್ಲಿ ಆ ಹುಡುಗ ನಿರಾಕರಿಸಿದ್ದನ್ನು ಹೇಳುವುದು ಹೀಗೆ, "ನನ್ನ ವೃತ್ತಿಗೂ ಮತ್ತು ಮದುವೆಗೂ ಸಂಬಂಧವಿದೆ ಅಂತ ಗೊತ್ತೇ ಇರಲಿಲ್ಲ. ಚೆನ್ನಾಗಿ ಸಂಬಳ ಇರುವ, ಉದ್ಯೋಗ ಮಾಡುತ್ತಿರುವ ಹುಡುಗಿಯರಿಗೆ ಬೇಗ ಗಂಡು ಸಿಗುತ್ತವೆ ಅನ್ನುವ ಮಾತಿತ್ತು. ಅದು ನನ್ನ ವಿಷಯದಲ್ಲಿ ಸುಳ್ಳಾಗಿದೆ. ಚೆನ್ನಾಗಿ ಸಂಬಳ ಅಲ್ಲದಿದ್ದರೂ, ಬದುಕು ನಡೆಸುವಷ್ಟು ದುಡ್ಡು ಬರುತ್ತದೆ. ನಾನು ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಸಮಾಜದಲ್ಲಿ ನನಗೂ ಒಂದು ಜಾಗ ಇದೆ. ಹಾಗಾಗಿ ಹುಡುಗರು ಬೇಗ ಒಪ್ಪಿಕೊಳ್ಳುತ್ತಾರೆ ಎಂಬ ಭ್ರಮೆ ನನಗಿತ್ತು. ಮದುವೆಯ ವಿಷಯದಲ್ಲಿ ಅದೆಲ್ಲವೂ ಸುಳ್ಳಾಗಿ ಬಿಟ್ಟಿತು. ಇಲ್ಲಿಯವರೆಗೂ ನನಗೆ ನಾಲ್ಕು ಪ್ರಪೋಸಲ್ ಬಂದಿದ್ದವು. ಅವುಗಳಲ್ಲಿ ಇಬ್ಬರು ಹುಡುಗರು ಇಷ್ಟವಾದರು. ಆದರೆ, ಆ ಹುಡುಗರಿಗೆ ನಾನು ಇಷ್ಟವಾಗಲಿಲ್ಲ. ಯಾಕೆ ಪದೇ ಪದೇ ಈ ಪ್ರಪೋಜಲ್ ಕ್ಯಾನ್ಸಲ್ ಆಗ್ತಿವೆ ಅಂತ ನನಗೆ ಅನುಮಾನ ಶುರುವಾಯ್ತು. ಇದರ ಹಿಂದಿನ ರಹಸ್ಯ ಏನಿರಬಹುದು ಅಂತ ಹುಡುಕಿದರೆ, ಅದು ನನ್ನ ವೃತ್ತಿಗೆ ಸಂಬಂಧಿಸಿದ ಕಾರಣವೇ ಆಗಿತ್ತು. ನಾನು ಕ್ರೈಂ ರಿಪೋರ್ಟರ್. ದಿನವೂ ಅಪರಾಧ ಜಗತ್ತಿನ ಬಗ್ಗೆ ಸುದ್ದಿ ಮಾಡುತ್ತೇನೆ. ಹಾಗಾಗಿ ನನ್ನ ವೃತ್ತಿಯನ್ನು ಕಂಡು ಅವರು ಮದುವೆ ಆಗಲು ಹಿಂದೇಟು ಹಾಕಿದರು. ನನಗೂ ಮತ್ತು ನನ್ನ ವೃತ್ತಿಗೂ ಏನ್ ಸಂಬಂಧ? ಮದುವೆ ಆಗ್ತಿರೋದು ನೀವು ನನ್ನ ಜೊತೆ ಅಲ್ವಾ? ಅಂತ ಒಬ್ಬ ಹುಡುಗನನ್ನು ಕೇಳಿದರೆ, ಅವನಿಂದ ಬಂದ ಉತ್ತರ ನನಗೆ ಇನ್ನೂ ಆತಂಕಕ್ಕೆ ದೂಡಿತು. ನಾನು ದಿನವೂ ಮರ್ಡರ್, ಕ್ರಿಮಿನಲ್ಸ್ ಸ್ಟೋರಿ, ಅಕ್ರಮ ಸಂಬಂಧ ಹೀಗೆ ನಾನಾ

ವಿಷಯಗಳ ಸುತ್ತ ಸುದ್ದಿ ಮಾಡುವುದರಿಂದ ನನ್ನ ಮನಸ್ಸಲ್ಲೂ ಕ್ರಿಮಿನಲ್ ಐಡಿಯಾಗಳು ಇರಬಹುದು ಅನ್ನುವ ಆತಂಕ ಅವರದ್ದಂತೆ. ಆದ್ರೆ ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಮದುವೆಯ ನಂತರ ಕೆಲಸವನ್ನೇ ನಾನು ಬಿಡ್ತೀನಿ ಮದ್ವೆ ಆಗ್ತೀರಾ ಅಂತ ಕೇಳಿದೆ. ಅದಕ್ಕೂ ಅವರು ಒಪ್ಪಿಕೊಳ್ಳಲಿಲ್ಲ. ಅಂದರೆ, ನನ್ನ ಮನಸ್ಥಿತಿ ಕ್ರಿಮಿನಲ್ ರೀತಿಯಲ್ಲಿಯೇ ಕೆಲಸ ಮಾಡುತ್ತದೆ ಅನ್ನುವ ಲೆಕ್ಕಾಚಾರ ಅವರದ್ದು. ಒಬ್ಬ ಹುಡುಗ ನೇರವಾಗಿ ಹೀಗೆ ನೀವು ಕ್ರಿಮಿನಲ್ ರೀತಿಯಲ್ಲಿ ಆಲೋಚಿಸ್ತೀರಾ ಅಂತ ಹೇಳಿಬಿಟ್ಟ. ಆ ದಿನ ನಾನು ರಾತ್ರಿಯೆಲ್ಲಾ ನಿದ್ದೆನೇ ಮಾಡಿರ್ಲಿಲ್ಲ. ಮದುವೆ ಅನ್ನೋದನ್ನು ಯಾಕಾಗಿ ಕಡ್ಡಾಯ ಮಾಡಿದ್ದಾರೋ ಅಂತ ಅನ್ನಿಸಿತ್ತು. ನಾನು ಮದುವೆ ಆಗೊಲ್ಲ ಅಂದ್ರೆ ಮನೆಯಲ್ಲಿ ಕೇಳೋದಿಲ್ಲ. ಈ ರೀತಿಯಲ್ಲಿ ಮನಸ್ಸಿಗೆ ತೊಂದರೆಗಳು ಆಗೋದು ತಪ್ಪುವುದಿಲ್ಲ. ಇದನ್ನ ನಾನು ನನ್ನ ಸಹೋದ್ಯೋಗಿ ಹತ್ತಿರ ಸುಮ್ಮನೆ ಹಂಚಿಕೊಂಡೆ. ಮೇಡಂ, ಮದುವೆ ಆಗಬೇಕಾಗಿರುವ ಹುಡುಗರೇ ಹೀಗೆ ವಿಚಾರ ಮಾಡ್ತಿದ್ರೆ ಅವ್ರ ತಂದೆ ತಾಯಿ ಏನೆಲ್ಲಾ ವಿಚಾರ ಮಾಡಬಹುದು. ನೀವೇ ಹೇಳ್ರಿ, ಹುಡುಗನ ತಂದೆ ತಾಯಿಯರೂ ಸಹ ನಿಮ್ಮನ್ನ ಕ್ರಿಮಿನಲ್ ಆಲೋಚನೆ ಇರೋರೇ ಅಂತ ಆಲೋಚಿಸ್ತಾರೆ. ಅಂದ್ರೆ ಕ್ರಿಮಿನಲ್ ಮೈಂಡ್ ಇರೋರು ತಂದೆ ತಾಯಿ ಮಕ್ಕಳನ್ನ ಬೇರೆ ಮಾಡ್ತಾರೆ ಎನ್ನುವ ಮನೋಭಾವ, ಆಲೋಚನೆ ಇರುತ್ತೆ ಅಂತ ಹೇಳಿದ್ರು. ಆವಾಗಿಂದ ನನ್ನ ಮನಸ್ಸು ಸರಿ ಇಲ್ಲ. ಯಾಕಾದ್ರು ಈ ಕೆಲ್ಸ ಮಾಡ್ತಿದ್ದೀನೋ ಅಂತ ಅನಿಸುತ್ತಿದೆ. ವೃತ್ತಿ ಕಾರಣದಿಂದಾಗಿ ಈಗಲೂ ನನಗೆ ಮದುವೆ ಆಗುವುದಕ್ಕೆ ಆಗುತ್ತಿಲ್ಲ' ಎಂದರು.

ಮತ್ತೊಂದು ಪ್ರಕರಣದಲ್ಲಿ ಸುನೀತಾ ಎಂಬುವವರು ಮಾತನಾಡುತ್ತಾ " ಅಪ್ಪ ನನಗೊಂದು ದಿನ ಕಾಲ್ ಮಾಡಿದರು. ಎಷ್ಟು ದಿನ ಅಂತ ಒಬ್ಬೆ ಬೆಂಗಳೂರಿನಲ್ಲಿ ಇರ್ತೀಯಾ? ಕಾಲ ಸರಿಯಿಲ್ಲ. ಒಂಟಿ ಹುಡುಗಿಯರ ಮೇಲೆ ಅತ್ಯಾಚಾರ ಅದು, ಇದು ಅಂತ ನಿಮ್ಮದೇ ಟಿವಿಯಲ್ಲಿ ಬರುತ್ತೆ. ಹಾಗಾಗಿ ನಿನ್ನ ಮದ್ವೆ ಮಾಡ್ಬೇಕು ಅಂತ ತೀರ್ಮಾನ ತಗೊಂಡಿದ್ದೀವಿ ಅಂದ್ರು. ಹೌದು, ಸಹಜವಾಗಿಯೇ ಪಾಲಕರಿಗೆ ಈ ಆತಂಕ ಇದ್ದದ್ದೆ. ಆಯ್ತು ಹುಡುಗನನ್ನು ನೋಡಿ ಅಂತ ಹೇಳಿದೆ. ನಮ್ಮೂರಿನ ಪಕ್ಕದಲ್ಲಿಯೇ ಇರುವ ಹಳ್ಳಿಯೊಂದರ ಸಾಂಪ್ರದಾಯಿಕ ಕುಟುಂಬದಲ್ಲಿನ ಹುಡುಗನಿಗೆ ನನ್ನನ್ನು ತೋರಿಸುವುದು ಅಂತಾಯಿತು. ಆ ಮನೆಯವರು ನಿಮ್ಮ ಮಗಳು ಏನ್ ಕೆಲಸ ಮಾಡ್ತಾಳೆ ಅಂತ ಕೇಳಿದ್ದಾರೆ. ಟಿವಿಯಲ್ಲಿ ರಿಪೋರ್ಟರ್ ಅಂತ ಅಪ್ಪ ಹೇಳಿದಾಗ, ಆಯ್ತು ನಾವೇ ನಿಮಗೆ ಬರೋಕೆ ಹೇಳ್ತೀವಿ ಅಂದ್ರಂತೆ. ಎರಡು ವಾರವಾದರೂ ಅವರು ಹೇಳಲಿಲ್ಲ. ಅಪ್ಪನೇ ಕಾಲ್ ಮಾಡಿ ಕೇಳಿದಾಗ "ಟಿವಿಯಲ್ಲಿ ಕೆಲಸ ಮಾಡೋ ಹುಡುಗಿ ನಮ್ಮ ಮನೆಗೆ

ಸೊಸೆಯಾಗಿ ಬರೋಕೆ ನಮ್ ಕುಟುಂಬ ಒಪ್ತಾ ಇಲ್ಲ' ಅಂದ್ರಂತೆ. ಅಪ್ಪನಿಗೆ ಆತಂಕ ಆಗಿ ನನಗೆ ಕಾಲ್ ಮಾಡಿ ಹುಡುಗ ಒಪ್ಪಲಿಲ್ಲ ಅನ್ನೋದನ್ನ ಹೇಳಿದರು. ಆಗ ನನಗೂ ಅಚ್ಚರಿ ಆಯಿತು. ಯಾಕೆ ನಿರಾಕರಿಸಿದರು ಅನ್ನುವುದನ್ನು ವಿಚಾರಿಸಿದಾಗ ಅವಳು ಬರೀ ಗಂಡಸರ ಜೊತೆನೇ ಇರ್ತಾಳೆ. ಸುದ್ದಿ ಮಾಡೋಕೆ ಬೇರೆ ಊರಿಗೆ ಹೋದಾಗ, ಒಂದೇ ರೂಮ್‌ನಲ್ಲಿ ಇರ್ತಾರಂತೆ. ಹೀಗೆ ಏನೇನೋ ಆಲೋಚನೆ ಅವರದ್ದು. ಹಾಗಾಗಿ ಹುಡುಗನ ತಂದೆ ತಾಯಿ ರಿಜೆಕ್ಟ್ ಮಾಡಿದ್ದರು. ಇದನ್ನ ಕೇಳಿ ತುಂಬಾನೇ ಬೇಜಾರಾಗಿತ್ತು. ನಮ್ಮ ತಂದೆ ತಾಯಿ ಸಹಿತ ಬಹಳ ನೊಂದುಕೊಂಡಿದ್ದರು. ಹಾಗಾಗಿ ನಾನು ಯಾಕಾದ್ರು ಈ ಕೆಲಸಕ್ಕೆ ಬಂದಿದ್ದಿನೋ ಅಂತ ಅನ್ನಿಸಿಬಿಡ್ತು. ಈಗ್ಲೂ ಮದುವೆಗಾಗಿ ಹುಡುಗನ ಹುಡುಕಾಟ ನಡೆದಿದೆ. ನಮ್ಮ ಹಣೆ ಬರಹದಲ್ಲಿ ಮದುವೆ ಆಗೋ ಭಾಗ್ಯ ಇದೆಯೋ ಇಲ್ಲವೋ" ಎಂದು ಹೇಳಿದರು.

ಪ್ರತಿಷ್ಠಿತ ಸುದ್ದಿ ವಾಹಿನಿಯೊಂದರಲ್ಲಿ ರಿಪೋರ್ಟರ್ ಆಗಿ ಕೆಲಸ ಮಾಡುವ ಭಾರತಿ ಅವರದು ಇನ್ನೊಂದು ಕಹಿ ಅನುಭವ. ಅವರು ಹೇಳುವಂತೆ "ಟಿವಿಯಲ್ಲಿ ಕೆಲಸ ಮಾಡುವ ಹುಡುಗಿಯರನ್ನು ಮದುವೆಯಾಗಲು ಹುಡುಗರು ಹಿಂದೇಟು ಹಾಕುತ್ತಾರೆ ಅನ್ನುವ ಅನುಭವ ನನ್ನ ಜೀವನದಲ್ಲೂ ಆಗಿದೆ. ಹಾಗಂತ ಎಲ್ಲರದ್ದೂ ಹೀಗೆ ಆಗಿದೆ ಅಂತಲ್ಲ. ಶ್ರೀಮಂತ ಹುಡುಗರನ್ನು ಮದುವೆಯಾದ ಹುಡುಗಿಯರು ನಮ್ಮ ಚಾನೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ, ಕೆಲವರಿಗೆ ಮಾತ್ರ ಈ ಸಮಸ್ಯೆ ಕಾಡಿದ್ದು ಸುಳ್ಳಲ್ಲ. ನಮ್ಮ ಮನೆಯವರು ಗಂಡು ಹುಡುಕುತ್ತಿದ್ದರು. ಆಗ, ಹುಡುಗನ ಕಡೆಯವರು ಹುಡುಗಿ ಏನ್ ಕೆಲ್ಸ ಮಾಡ್ತಾಳೆ ಅಂತ ಕೇಳಿದ್ದಾರೆ. ಸಿನಿಮಾ ರಿಪೋರ್ಟರ್ ಅಂತ ಹೇಳಿದಾಗ, ಈ ಸಂಬಂಧ ಬೇಡ ಅಂತ ಹುಡುಗನ ಮನೆಯವರು ನೇರವಾಗಿಯೇ ಹೇಳಿದ್ದಾರಂತೆ. ಆದರೆ, ಅವರು ಅದಕ್ಕೆ ಕಾರಣ ಕೊಟ್ಟಿಲ್ಲ. ಯಾಕೆ ಬೇಡ ಅಂದ್ರು ಅಂತ ನನ್ನ ಪಾಲಕರು ನನ್ನನ್ನು ಕೇಳಿದರು. ನನಗೂ ಗೊತ್ತಿಲ್ಲ. ಬೇರೆ ಹುಡುಗ ಸಿಗ್ತಾನೆ ಬಿಡಿ ಅಂತ ಹೇಳಿದೆ. ಅದಕ್ಕೆ ನಮ್ಮ ತಂದೆ ತುಂಬಾ ಬೇಜಾರಾಗಿದ್ರು. ಮತ್ತೆ ನೀನು ಕೆಲ್ಸ ಬಿಟ್ಟು ಬಂದು ಬಿಡಮ್ಮ, ಸ್ವಲ್ಪ ದಿನ ಮನೇಲಿ ಇದ್ರು ಪರವಾಗಿಲ್ಲ. ಏನೂ ಆಗೋಲ್ಲ. ಹೀಗೆ ಸ್ವಲ್ಪ ದಿನ ಮನೇಲಿ ಇರು, ನಿನಗೆ ಒಂದು ಒಳ್ಳೆಯ ಗಂಡು ನೋಡಬಹುದು. ಮತ್ತೆ ಯಾರೂ ರಿಜೆಕ್ಟ್ ಮಾಡಲ್ಲ ಅಂತ ಹೇಳಿದ್ರು. ಅದಕ್ಕೆ ನಾನು ಒಪ್ಪಲಿಲ್ಲ. ನನಗೆ ಮದುವೆ ಆಗದಿದ್ರೂ ಪರವಾಗಿಲ್ಲ ನಾನು ಕೆಲ್ಸ ಮಾಡ್ತೀನಿ. ಕೆಲಸ ಬಿಡುವುದಿಲ್ಲ ಅಂತ ಖಡಾಖಂಡಿತವಾಗಿ ಹೇಳಿಬಿಟ್ಟೆ. ಅದನ್ನ ಅಪ್ಪ ಕೇಳಿ ಮತ್ತೆ ಮದುವೆ ವಿಚಾರಾನೇ ಎತ್ತಿಲ್ಲ. ಅವರ ಮನಸ್ಸಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಹುಡುಗಿಯರ ಬಗ್ಗೆ ಅದೇನು ಭಾವನೆ ಇದೆಯೋ ಗೊತ್ತಿಲ್ಲ.

ಧಾರಾವಾಹಿ ಮತ್ತು ಸಿನಿಮಾಗಳಲ್ಲಿ ಕೆಲಸ ಮಾಡುವ ಹುಡುಗಿಯರು ಸರಿ ಇರಲ್ಲ, ಸಹಬಾಳ್ವೆ ಮಾಡ್ತಿರ್ತಾರೆ, ಡಿವೋರ್ಸ್ ತೆಗೆದುಕೊಳ್ಳುವವರು ಜಾಸ್ತಿ, ಲೇಟ್‌ನೈಟ್ ಪಾರ್ಟಿ ಮಾಡ್ತಿರ್ತಾರೆ, ಗಂಡ ಹೆಂಡ್ತಿ ಒಟ್ಟಿಗೆ ಇರೋದೇ ವಿರಳ ಹೀಗೆ ಏನೇನೋ ರೂಮರ್ಸ್ ಕೇಳಿರ್ತಾರೆ. ಅವುಗಳನ್ನು ನಮಗೂ ಅಪ್ಲೈ ಮಾಡ್ತಾರೆ" ಎಂದು ಹೇಳಿದರು.

ಸುದ್ದಿ ವಾಹಿನಿಯೊಂದರಲ್ಲಿ ಆ್ಯಂಕರ್ ಆಗಿ ಕೆಲಸ ಮಾಡುತ್ತಿರುವ ಸವಿತಾ ಅವರಿಗೆ ಮದುವೆಗಾಗಿ ಹುಡುಗನ ನಿರಾಕರಿಸಲು ಕೊಟ್ಟ ಕಾರಣ ಹೀಗಿದೆ, "ಮದುವೆಯ ವಿಷಯದಲ್ಲಿ ನನಗೂ ಕಹಿ ಅನುಭವ ಆಗಿದೆ. ಮೂರು ಜನ ಹುಡುಗರು ನನ್ನನ್ನು ಮದುವೆ ಆಗಲು ನಿರಾಕರಿಸಿದರು. ಕಾರಣ ನನ್ನ ಉದ್ಯೋಗ. ಒಬ್ಬ ಹುಡುಗ ಸರಕಾರಿ ನೌಕರಿಯಲ್ಲಿದ್ದಾನೆ. ಮತ್ತೊಬ್ಬ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಸರಕಾರಿ ನೌಕರಿಯಲ್ಲಿದ್ದವನು ಕೊಟ್ಟ ಕಾರಣ, ನನ್ನದು ಹೊತ್ತು ಗೊತ್ತಿಲ್ಲದ ಕೆಲಸ. ಮನೆಗೆ ಯಾವಾಗ ಬರ್ತಿನೋ ಗೊತ್ತಿಲ್ಲ. ನೀವು ಕೆಲಸ ಬಿಡ್ತೀನಿ ಅಂದರೆ ಮದ್ವೆ ಆಗ್ತೀನಿ ಅಂದ. ಮದುವೆಗಾಗಿ ಕೆಲಸ ಬಿಡಲು ನನ್ನ ಒಪ್ಪಿಗೆ ಇರಲಿಲ್ಲ. ಅದನ್ನು ಅವನಿಗೆ ತಿಳಿಸಿದೆ. ಹಾಗಾದ್ರೆ ಮದ್ವೆ ಬೇಡ ಅಂದ. ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುವ ಹುಡುಗನದ್ದು ಮತ್ತೊಂದು ತಲ್ಲಣ. ನನ್ನ ಕೆಲಸವೂ ಅನಿಶ್ಚಿತ. ನಿನ್ನ ಕೆಲಸಕ್ಕೂ ಭದ್ರತೆ ಇಲ್ಲ. ಇಬ್ಬರೂ ಮನೆಯಲ್ಲಿ ಕೂತರೆ ಬದುಕಿನ ಗತಿ ಏನು? ಹಾಗಾಗಿ ಅವನೂ ಒಪ್ಪಲಿಲ್ಲ. ಹುಡುಗರ ಮನಸ್ಥಿತಿ ಹೇಗಿದೆ ಅಂದರೆ, ಒಬ್ಬನಿಗೆ ನಾನು ಸೇವಕಿಯಂತೆ ಕೆಲಸ ಮಾಡಬೇಕು. ಮತ್ತೊಬ್ಬನಿಗೆ ಹಣ ತರುವ ಮಶೀನ್ ಆಗಬೇಕು. ಇದು ನಮ್ಮ ಪಾಲಕರಿಗೆ ಅರ್ಥವಾಗಲ್ಲ. ಕೆಲಸದ ಕಾರಣದಿಂದಾಗಿ ಮದ್ವೆ ಆಗುತ್ತಿಲ್ಲ ಅನ್ನುವ ನೋವು ಅವರದ್ದು" ಅಂತಾರೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಹುಡುಗಿಯರು ಮದುವೆಯಾಗಲು ಹಲವಾರು ತೊಂದರೆಗಳನ್ನು ಅನುಭವಿಸುತ್ತಿರುವುದು ಮೇಲಿನ ಪ್ರಕರಣಗಳಿಂದ ಕಂಡುಬರುತ್ತಿದೆ. ಮುಖ್ಯವಾಗಿ ಸಮಾಜ ಮಹಿಳೆಯರು ಯಾವ ಕೆಲಸದಲ್ಲಿ ನಿರತರಾಗಿದ್ದಾರೆ ಎಂಬುದನ್ನು ಆಧರಿಸಿ ಅವರ ವಿವಾಹವನ್ನು ನಿಶ್ಚಯಿಸುತ್ತಾರೆ. ಅಂದರೆ ಮಹಿಳೆಯರು ಮಾಡುವ ಕೆಲಸಕ್ಕೂ ಮತ್ತು ನಿಜ ಬದುಕಿಗೂ ನೇರವಾದ ಸಂಬಂಧವಿರುತ್ತದೆ ಎಂಬ ಆಲೋಚನೆ ವ್ಯವಸ್ಥೆಯದ್ದು. ಹಾಗಾಗಿ ಮೊದಲನೇ ಪ್ರಕರಣದಲ್ಲಿ ಭವ್ಯ ಅವರದ್ದು ಈ ಕಾರಣಕ್ಕಾಗಿಯೇ ಮದುವೆ ಗಂಡುಗಳು ಆಕೆಯನ್ನು ನಿರಾಕರಿಸಿರುವುದು ಕಂಡುಬರುತ್ತದೆ. ಮುಖ್ಯವಾಗಿ ಭವ್ಯ ಮಾಡುತ್ತಿರುವ ಕೆಲಸ ಕ್ರೈಂ ರಿಪೋರ್ಟಿಂಗ್ ಹಾಗಾಗಿ ಆಕೆಯ ಆಲೋಚನೆಗಳೆಲ್ಲವೂ ಅದೇ ರೀತಿಯಲ್ಲಿರುತ್ತದೆ

ಎಂದೂ ಮತ್ತು ಆಕೆ ಅದೇ ರೀತಿಯ ಜೀವನವನ್ನು ನಡೆಸುತ್ತಾಳೆ ಎಂದೂ ಆಲೋಚಿಸುವ ಮನೋಭಾವಗಳಿಂದಾಗಿ ಆಕೆಯನ್ನು ಮದುವೆ ಮಾಡಿಕೊಳ್ಳಲು ನೋಡಿ ಹೋದ ಹುಡುಗರು ಆಕೆಯ ಉದ್ಯೋಗವನ್ನು ಕೇಳಿದ ಕೂಡಲೇ ನಿರಾಕರಿಸಿರುವುದು ಕಂಡುಬರುತ್ತದೆ. ಹಾಗೆಯೇ ಹುಡುಗನ ತಂದೆ ತಾಯಿಗಳೂ ಸಹ ಮಾಧ್ಯಮದಲ್ಲಿ ಕೆಲಸ ಮಾಡುವ ಹುಡುಗಿಯರ ಬಗೆಗೆ ಏನೋ ಒಂದು ಬಗೆಯ ನಿರ್ಲಕ್ಷ್ಯ ಮನೋಭಾವವನ್ನು ಹೊಂದಿರುತ್ತಾರೆ. ಹಾಗಾಗಿಯೇ ಮಾಧ್ಯಮದಲ್ಲಿ ಕೆಲಸ ಮಾಡುವ ಬಹಳಷ್ಟು ಮಹಿಳೆಯರು ವಿವಾಹದಿಂದ ನಿರಾಕರಿಸಲ್ಪಟ್ಟರುತ್ತಾರೆ. ಹಾಗೆಯೇ ಉಳಿದ ಪ್ರಕರಣಗಳಲ್ಲಿಯೂ ಸಹ ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿದಾಗ ಅವರು ಈಗಾಗಲೇ ತಮ್ಮ ಚಾರಿತ್ರ್ಯವನ್ನು ಕಳೆದುಕೊಂಡಿರುತ್ತಾರೆ, ಬೇರೆ ಬೇರೆ ಹುಡುಗರೊಂದಿಗೆ ಅಕ್ರಮ ಸಂಬಂಧ ಹೊಂದಿರುತ್ತಾರೆ ಎಂಬಂತಹ ಆಲೋಚನೆಗಳು ಮಹಿಳೆಯರ ಮಾನಸಿಕ ಸಾಮರ್ಥ್ಯದ ಮೇಲೆ ಪರಿಣಾಮವನ್ನು ಬೀರುತ್ತವೆ. ಹಾಗೆಯೇ ಇತ್ತೀಚಿನ ಒಂದು ಕಾನ್ಸೆಪ್ಟ್ ಲಿವಿಂಗ್ ಟುಗೆದರ್ (ಸಹಬಾಳ್ವೆ ಜೀವನ) ಸಂಬಂಧವನ್ನು ಹೊಂದಿರುತ್ತಾರೆ ಎಂಬುದು ಬಹಳಷ್ಟು ಜನರ ನಂಬಿಕೆ. ಮಹಿಳೆಯರು ಎಂದರೆ ಮನೆಯಲ್ಲಿ ಕೆಲಸ ಮಾಡುವ ಆಳಿನ ರೀತಿಯಲ್ಲಿ ವರ್ತಿಸುತ್ತದೆ ನಮ್ಮ ವ್ಯವಸ್ಥೆ. ಹಾಗಾಗಿಯೇ ಮಹಿಳೆಯರು ಯಾವಾಗಲೂ ಪುರುಷರ ಅಧೀನದಲ್ಲಿಯೇ ಇರಬೇಕು ಎಂಬುದು ವ್ಯವಸ್ಥೆಯ ಆಶಯ. ಅದೇ ಕಾರಣಕ್ಕಾಗಿಯೇ ಮಾಧ್ಯಮದಲ್ಲಿ ಕೆಲಸ ಮಾಡುವ ಹುಡುಗಿಯರು ಈಗಾಗಲೇ ಸ್ವಾವಲಂಬಿ ಜೀವನದ ಕಡೆಗೆ ಮುಖ ಮಾಡಿರುತ್ತಾರೆಂದು, ಅವರು ಪುರುಷನ ಹಿಡಿತದಲ್ಲಿರುವುದಿಲ್ಲ ಎಂಬ ಆಲೋಚನೆಯ ಕಾರಣವಾಗಿ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ವ್ಯವಸ್ಥೆ ಅನುಮಾನದಿಂದೇ ನೋಡುತ್ತದೆ.

ಮಹಿಳೆಯರು ತಡರಾತ್ರಿಯ ಕೆಲಸಗಳಿಗೆ ಕಳುಹಿಸದೇ ಇರುವುದನ್ನು ಇಂದಿಗೂ ಕಾಣುತ್ತೇವೆ. ಇದಕ್ಕೆ ಕಾರಣ ಅವಳಿಗೆ ಚಲನೆಯ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದೇ ಆಗಿದೆ. ಸಂಪ್ರದಾಯ ಸಮಾಜದಲ್ಲಿ ಸೊಸೆಯು ಮನೆಯ ಮರ್ಯಾದೆಯ ಸಂಕೇತ. ಹಾಗಾಗಿಯೇ ತನ್ನ ಸೊಸೆಯು ಹೊರಗೆ ಕಾಣಿಸಿಕೊಳ್ಳಬಾರದು ಎಂಬ ನಿಯಮ. ಇಂತಹ ಮನಸ್ಥಿತಿಯು ಕೌಟುಂಬಿಕ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವುದರಿಂದ ಉದ್ಯೋಗಸ್ಥ ಮಹಿಳೆಯು ಸಂಘರ್ಷವನ್ನು ಎದುರಿಸಬೇಕಾದ ಅನಿವಾರ್ಯತೆಗೆ ಒಳಗಾಗಿದ್ದಾರೆ. ವಿವಾಹ ಎಂಬ ಸಂಸ್ಥೆಯಲ್ಲಿ ಮಹಿಳೆಯರ ಶೀಲ-ಅಶ್ಲೀಲದ ಪ್ರಶ್ನೆಯೇ ಅಧಿಕವಾಗಿ ಕಾಡುತ್ತದೆ. ವಿವಾಹಕ್ಕೂ ಮುನ್ನ ಮಹಿಳೆ ಶೀಲವಂತಳಾಗಿರಬೇಕು, ಸಂಪ್ರದಾಯಸ್ಥಳಾಗಿರಬೇಕು ಎಂಬುದನ್ನು ವ್ಯವಸ್ಥೆ ಬಯಸುತ್ತದೆ.

ಹಾಗೆಯೇ ಪಾತಿವ್ರತ್ಯದ ಪರಿಕಲ್ಪನೆ ತುಂಬಾ ಬಲಿಷ್ಠವಾಗಿರುವುದರಿಂದ ವ್ಯವಸ್ಥೆಯಲ್ಲಿ ಉದ್ಯೋಗಸ್ಥ ಮಹಿಳೆಯರನ್ನು ಈಗಲೂ ಅನುಮಾನದಿಂದಲೇ ಕಾಣುವಂತಹ ಪರಿಸ್ಥಿತಿ ಇದೆ. ಹಾಗಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಕೆಲವು ಮಹಿಳೆಯರು ಇಂದಿಗೂ ವಿವಾಹಕ್ಕೆ ಸಂಬಂಧಿಸಿದಂತೆ ಕಿರುಕುಳಗಳನ್ನು ಅನುಭವಿಸುತ್ತಲೇ ಇದ್ದಾರೆ.

6.3 ಮದುವೆಯ ನಂತರ ಎದುರಿಸುವ ಸಂಘರ್ಷ :

ಶತಮಾನಗಳಿಂದಲೂ ಭಾರತದಲ್ಲಿ ಮಹಿಳೆಯನ್ನು ಸ್ವತ್ತು ಎಂದೇ ಭಾವಿಸಲಾಗಿದೆ. ಮೊದಲಿಗೆ ತಂದೆ, ನಂತರ ಪತಿ, ಆನಂತರ ಮಗನ ಅಧೀನದಲ್ಲಿಯೇ ಆಕೆ ಇರಬೇಕೆಂಬುದು ಪುರುಷಶಾಹಿ ವ್ಯವಸ್ಥೆಯ ಆಶಯ. ಮಹಿಳೆಯರಿಗೆ ತಮ್ಮದೇ ಆದ ಅಸ್ತಿತ್ವವಾಗಲಿ, ಹಕ್ಕುಗಳಾಗಲಿ ಇಲ್ಲ ಎಂಬ ಮನೋಭಾವ ಅವರದ್ದು. ಆದರೆ ವ್ಯವಸ್ಥೆಯಲ್ಲಿ ಮಹಿಳೆ ಪ್ರತಿಯೊಂದನ್ನೂ ಹೋರಾಟದ ಮೂಲಕವೇ ಪಡೆಯಬೇಕಾದ ಜರೂರಿದೆ. ಹಾಗೆಯೇ ಕೆಲವು ಹಕ್ಕುಗಳನ್ನು ಪಡೆದುಕೊಂಡಿದ್ದಾಳೆ. ಸಂವಿಧಾನ ಎಲ್ಲ ಮಾನವರಿಗೆ ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ನೀಡಿದೆ. ಆದರೆ ಇವುಗಳು ವ್ಯವಸ್ಥೆಯಲ್ಲಿ ಜಾರಿಯಲ್ಲಿಲ್ಲ. ಅಂದರೆ ಸ್ತ್ರೀಪುರುಷರ ನಡುವೆ ಅಜಗಜಾಂತರ ವ್ಯತ್ಯಾಸಗಳನ್ನು ಕಾಣುತ್ತೇವೆ.

ಇಂದು ಬಹುಪಾಲು ಮಹಿಳೆಯರು ತಮ್ಮ ಕುಟುಂಬಗಳಲ್ಲಿ ಕುಟುಂಬದ ಸದಸ್ಯರಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಮನೆಯಲ್ಲಿ ದುಡಿಯುವ ಮಹಿಳೆಯರು ಕುಟುಂಬದೊಂದಿಗೆ ನಡೆಸುವ ಸಂಘರ್ಷ ಒಂದು ರೀತಿಯಾದರೆ, ಮನೆ ಮತ್ತು ಹೊರಗೆ ದುಡಿದುಕೊಂಡು ಬರುವ ಮಹಿಳೆಯರ ಸಂಘರ್ಷ ಮತ್ತೊಂದು ಬಗೆಯದ್ದು. ಇಂತಹ ಸಂಘರ್ಷಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ನಿರಂತರವಾಗಿ ಎದುರಿಸುತ್ತಲೇ ಬರುತ್ತಿದ್ದಾರೆ.

ವಿದ್ಯುನ್ಮಾನ ಮಾಧ್ಯಮದಲ್ಲಿನ ಕೆಲಸ ಮಾಡುವ ಮಹಿಳೆಯರು ಮದುವೆಯ ನಂತರ ಅನೇಕ ಕೌಟುಂಬಿಕ ಸಂಘರ್ಷಗಳನ್ನು ಎದುರಿಸಿದ್ದಾರೆ. ಈ ಕುರಿತು ಅವರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡಿ, ಈಗ ಕೌಟುಂಬಿಕ ಸಂಘರ್ಷವನ್ನು ಎದುರಿಸಲಾಗದೇ ಗೃಹಿಣಿಯಾಗಿರುವ ಚೇತನಾ ಹೇಳುವುದು ಹೀಗೆ, "ಸುದ್ದಿ ವಾಹಿನಿಯಲ್ಲಿ ಮದುವೆಯ ನಂತರವೂ ಕೆಲಸ ಮಾಡುವುದಕ್ಕೆ ನಾನಾ ಅಡೆತಡೆಗಳು ಎದುರಾಗುತ್ತವೆ. ಗಂಡ ಒಪ್ಪದೇ ಇರಬಹುದು. ಅತ್ತೆ ಮಾವನೂ ಒಪ್ಪದಿರಬಹುದು. ಅಥವಾ ನನ್ನ ತಂದೆ ತಾಯಿಗಳು

ಕೂಡ ಈ ವಿಷ್ಯದಲ್ಲಿ ಒತ್ತಡ ಹಾಕಬಹುದು. ಮಹಿಳೆಯರು ಮನೆಯಿಂದ ಆಚೆ ಹೋಗಿ ಕೆಲಸ ಮಾಡಬಾರದು ಎಂದು ಹೇಳಿದ ಸಮಾಜದಿಂದ ನಾವು ಬಂದವರು. ನಾವು ಏನೇ ಆಧುನಿಕ ಜಗತ್ತಿಗೆ ತೆರೆದುಕೊಂಡರೂ, ಮಹಿಳೆಯರು ಕೆಲಸ ಮಾಡುವ ವಿಚಾರದಲ್ಲಿ ಇನ್ನೂ ನಾವು ಒಂದು ಹೆಜ್ಜೆ ಹಿಂದೆಯೇ ಇದ್ದೇವೆ. ಮದ್ವೆಯಾದ ನಂತರ ನಾನು ಕೆಲಸಕ್ಕೆ ಹೋಗುತ್ತಿದ್ದೆ. ಎಲ್ಲರಿಗೂ ಗೊತ್ತಿರುವಂತೆ ಸರಕಾರಿ ನೌಕರರಂತೆ ನಮಗೆ ಟೈಮ್ ಹಾಕಿಕೊಂಡು ಕೆಲಸ ಮಾಡುವುದಕ್ಕೆ ಆಗಲ್ಲ. ಹಾಗಾಗಿ ತಡವಾಗಿಯೇ ಮನೆಗೆ ಹೋಗುತ್ತಿದ್ದೆ. ಒಂದೊಂದು ಬಾರಿ ವಾರದ ರಜೆ ಕೂಡ ತಗೆದುಕೊಳ್ಳಲು ಆಗುತ್ತಿರಲಿಲ್ಲ. ಹಬ್ಬಗಳಲ್ಲಿ ಸ್ಪೆಷಲ್ ಪ್ರೋಗ್ರಾಂ ಬೇರೆ ಮಾಡಬೇಕಿದ್ದರಿಂದ ಮನೆಯವರಿಗೆ ಸಮಯ ಕೊಡಲು ಆಗುತ್ತಿರಲಿಲ್ಲ. ಹಾಗಾಗಿ ಗಂಡನ ಮನೆಯವರಿಗೆ ಕೋಪ. ನಮ್ಮ ಅತ್ತೆ ಮಾವ ಇದನ್ನು ನನ್ನ ತಾಯಿ ಮುಂದೆ ಹೇಳಿದ್ದರು. ನನ್ನ ಮಗಳ ಭವಿಷ್ಯ ಏನಾಗುತ್ತದೆಯೋ ಅನ್ನುವ ಆತಂಕ ನನ್ನ ಪಾಲಕರದ್ದು. ಅತ್ತು ಕರೆದು ನನ್ನನ್ನು ಕೆಲಸದಿಂದಲೇ ಬಿಡಿಸಿ ಬಿಟ್ಟರು. ನಾನು ಯಾರನ್ನು ದೂಷಿಸಲಿ? ನಮ್ ಆಫೀಸ್‌ನಲ್ಲಿ ಈ ರೀತಿ ಕೆಲಸ ಮಾಡುವುದು ಅನಿವಾರ್ಯ. ವ್ಯವಸ್ಥೆಯ ಜೊತೆ ಹೊಂದಿಕೊಂಡು ಹೋಗಬೇಕಷ್ಟೆ" ಅಂದರು.

ಮೂರ್‍ನಾಲ್ಕು ಸುದ್ದಿ ವಾಹಿನಿಗಳಲ್ಲಿ ಕೆಲಸ ಮಾಡಿ, ಈಗ ಗಂಡನ ಜತೆ ವಿದೇಶದಲ್ಲಿ ನೆಲೆಸಿರುವ ಅಮೃತಾ ತಮ್ಮದೇ ಅನುಭವ ಹಂಚಿಕೊಂಡಿದ್ದು ಹೀಗೆ "ನಾನು ನನ್ನ ಕೆಲಸವಷ್ಟೇ ಅಲ್ಲ ದೇಶವನ್ನೂ ಬಿಟ್ಟು ಹೋಗಿದ್ದೆ. ನನ್ನ ಗಂಡ ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುತ್ತಾರೆ. ಆರು ತಿಂಗಳ ಪ್ರಾಜೆಕ್ಟ್‌ಗಾಗಿ ಅವರು ವಿದೇಶಕ್ಕೆ ಹೋದರು. ಆರು ತಿಂಗಳಷ್ಟೇ ಅಲ್ವಾ ಅಂತ ನಾನು ನನ್ನ ಅತ್ತೆ ಮಾವನ ಜತೆ ಬೆಂಗಳೂರಿನಲ್ಲಿಯೇ ಇದ್ದೆ. ನಾನು ನನ್ನ ಮೀಡಿಯಾ ಕೆಲಸದಲ್ಲಿ ಬ್ಯುಸಿ ಆದೆ. ಇದ್ದಕ್ಕಿದ್ದಂತೆಯೇ ನನ್ನ ಗಂಡ ಫೋನ್ ಮಾಡಿ, ಒಬ್ಬನಿಗೆ ಇಲ್ಲಿ ಇರೋಕೆ ಕಷ್ಟ ಆಗ್ತಿದೆ. ನೀನೂ ಬಂದ್ಬಿಬಿಡು ಅಂದ್ರು. ಕೆಲ್ಸ ಬಿಟ್ಟು ಹೇಗ್ ಬರಲಿ? ಅಂದೆ. ರಾಜೀನಾಮೆ ಕೊಟ್ಟು ಬಂದ್ಬಿಡು ಅಂದರು. ಕೈ ತುಂಬಾ ನನಗೆ ಸಂಬಳ ಸಿಗ್ತಾ ಇದೆಯಲ್ಲ ಅಂತ ಹೇಳಿದ್ರು. ತುಂಬಾ ಯೋಚ್ನೆ ಮಾಡ್ದೆ. ಆರು ತಿಂಗ್ಳು ಅಷ್ಟೆ ತಾನೆ? ಅಡ್ಜೆಸ್ಟ್ ಮಾಡ್ಕೋ ಅಂತ ಗಂಡನಿಗೆ ಹೇಳಿದೆ. ಅವರು ಒಪ್ಪಲಿಲ್ಲ. ನನ್ನ ಅತ್ತೆ ಮಾವ ಕೂಡ ಗಂಡನ ಜೊತೆಗೆ ಇರಲು ಒತ್ತಾಯ ಮಾಡಿದರು. ಹೌದು, ನನಗೆ ಕೆಲ್ಸ ಮುಖ್ಯ. ಅದರ ಜೊತೆಗೆ ಕುಟುಂಬ ಕೂಡ ಅಷ್ಟೇ ಮುಖ್ಯ ಅಲ್ವಾ? ಹಾಗಾಗಿ ಗಂಡನ ಜೊತೆ ಆರು ತಿಂಗ್ಳು ನಾನೂ ವಿದೇಶದಲ್ಲಿ ಇರಬೇಕಾಯಿತು. ಇಬ್ಬರು ಮತ್ತೆ ವಾಪಸ್ಸು ಇಂಡಿಯಾಗೆ ಬಂದೆವು. ಮತ್ತೆ ನಾನು ಬೇರೆ ಸುದ್ದಿ ವಾಹಿನಿಯಲ್ಲಿ

ಕೆಲಸಕ್ಕೆ ಟ್ರೈ ಮಾಡ್ದೆ. ಎಲ್ಲಿಯೂ ಕೆಲ್ಸ ಸಿಗಲಿಲ್ಲ. ನಾನು ಯಾವುದೇ ಸುದ್ದಿ ವಾಹಿನಿಗೆ ಕೆಲ್ಸ ಕೇಳಿಕೊಂಡು ಹೋಗಲಿ, ಅವರು ಹಿಂದೆ ಕೆಲ್ಸ ಮಾಡಿದ್ದ ಸಂಸ್ಥೆಯಲ್ಲಿ ನನ್ನ ಬಗ್ಗೆ ಕೇಳೋರು. ನಾನು ಅರ್ಧಕ್ಕೆ ಕೆಲ್ಸ ಬಿಟ್ಟೆ ಅನ್ನುವ ಕಾರಣವನ್ನು ನನ್ನ ಹಿಂದಿನ ಸಂಸ್ಥೆ ಹೇಳುತ್ತಿತ್ತು. ನಮಗೂ ಅದೇ ರೀತಿ ಮಾಡಬಹುದು ಎಂದು ಊಹಿಸಿಕೊಂಡು ಬೇರೆ ಸಂಸ್ಥೆಯವರು ಕೆಲ್ಸ ಕೊಡಲಿಲ್ಲ. ಈಗ ಮನೆಯಲ್ಲಿಯೇ ಇದ್ದೇನೆ' ಅಂದರು.

ಈ ಮೇಲಿನ ಎರಡು ಪ್ರಕರಣದಲ್ಲಿಯೂ ಮಹಿಳೆಯ ಸಮಾನತೆ ಹಕ್ಕು, ಸ್ವಾತಂತ್ರ್ಯದ ಹಕ್ಕು, ದುಡಿಮೆಯ ಹಕ್ಕನ್ನು ಸಂಪೂರ್ಣವಾಗಿ ನಿರಾಕರಿಸಿರುವುದು ಕಾಣುತ್ತದೆ. ಮದುವೆಗೂ ಮುನ್ನ ಅದೇ ಉದ್ಯೋಗದಲ್ಲಿದ್ದ ಮಹಿಳೆಗೆ ಮದುವೆಯ ನಂತರ ಆ ಕೆಲಸಕ್ಕೆ ಕಳುಹಿಸಬಾರದು ಅನ್ನುವ ಕೌಟುಂಬಿಕ ಕಟ್ಟುಪಾಡು ಅವಳ ಮೇಲಿನ ಹೇರಿಕೆ ಅಲ್ಲದೇ ಮತ್ತೇನೂ ಅಲ್ಲ.

ಚೇತನಾ ಪ್ರಕರಣದಲ್ಲಿ ತನ್ನ ಗಂಡನ ಮನೆಯವರಿಗೆ ಕೆಲಸದ ಕಾರಣದಿಂದಾಗಿ ಟೈಮ್ ಕೊಡುವುದಕ್ಕೆ ಆಗುತ್ತಿಲ್ಲ ಅನ್ನುವುದೇ ದೊಡ್ಡ ಪ್ರಮಾದವಾಗಿದೆ. ಮಹಿಳೆ ಅಂದರೆ, ಮನೆಗೆಲಸ ಮಾಡುವಂಥವಳು. ಮನೆಗೆಲಸ ಮಾಡದೇ ಇರುವಾಗ ಬೇರೆ ಕೆಲಸ ಯಾಕೆ? ಎಂಬ ಧೋರಣೆ ಕುಟುಂಬದ್ದು. ಬಹಳ ಮುಖ್ಯವಾಗಿ ಹೆಣ್ಣು ಮಕ್ಕಳು ಎಂದರೆ ಕೇವಲ ಮನೆಗೆಲಸಕ್ಕೆ ಮಾತ್ರ ಸೀಮಿತ ಎನ್ನುವಂತಹ ಮನೋಭಾವ ಅಥವಾ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳು ಮಹಿಳೆಯರನ್ನು ಕುಟುಂಬಕ್ಕೆ ಮಾತ್ರ ಸೀಮಿತಳನ್ನಾಗಿಸಿವೆ. ಹಾಗಾಗಿಯೇ ಮಹಿಳೆ ಯಾವುದೇ ಕೆಲಸವನ್ನು ಮಾಡುತ್ತಿದ್ದರೂ ಸಹ ಅವರು ಸರಿಯಾದ ವೇಳೆಗೆ ಮನೆಗೆ ಬಂದು ಸೇರಬೇಕು ಮತ್ತು ಮನೆಗೆಲಸಗಳನ್ನು ಮಾಡಿಕೊಂಡು ಹೋಗಬೇಕು. ಇಲ್ಲವಾದರೆ ಕುಟುಂಬದಿಂದ ದೂಷಿಸಲ್ಪಡುತ್ತಾಳೆ. ಹಾಗೇನಾದರೂ ಮನೆಗೆಲಸ ಮತ್ತು ಹೊರಗಿನ ವೃತ್ತಿಯನ್ನು ಮಾಡುವುದೇ ಆದರೂ ಸಹ ಅವಳು ಇಬ್ಬಗೆಯ ಒತ್ತಡಗಳನ್ನು ಅನುಭವಿಸುತ್ತಿರುತ್ತಾಳೆ. ಅಂದರೆ ಕುಟುಂಬದ ಒತ್ತಡಗಳು ಒಂದು ಕಡೆಯಾದರೆ, ಇನ್ನೊಂದು ಕಡೆ ಕೆಲಸದ ಸ್ಥಳದಲ್ಲಿನ ಒತ್ತಡಗಳು ಎದುರಾಗುತ್ತವೆ. ಹಾಗಾಗಿಯೇ ಈ ಇಬ್ಬಗೆಯ ಒತ್ತಡಗಳನ್ನು ಎದುರಿಸಲಾಗದ ಎಷ್ಟೋ ಮಹಿಳೆಯರು ಕುಟುಂಬದ ಒತ್ತಾಯಕ್ಕೆ ಮಣಿದು ತಾವು ಕೆಲಸ ಮಾಡುವ ಸಂಸ್ಥೆಯಿಂದಲೇ ಹೊರನಡೆದ ಘಟನೆಗಳು ಕಾಣಸಿಗುತ್ತವೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಈ ಬಗೆಯ ಇಬ್ಬಗೆಯ ಒತ್ತಡಗಳಿಗೆ ಮಣಿದು ತಮ್ಮ ಕೆಲಸಗಳನ್ನು ಕಳೆದುಕೊಂಡಿರುವುದನ್ನು ಮೇಲಿನ ಪ್ರಕರಣಗಳಲ್ಲಿ ಕಾಣಬಹುದು.

6.4 ತಾಯ್ತನ ಜವಾಬ್ದಾರಿ : ವೃತ್ತಿ ನಿರ್ವಹಣೆಯಲ್ಲಿನ ಸಂಘರ್ಷ

ಸಮಾಜದಲ್ಲಿ ತಾಯಿಗೆ ಮತ್ತು ತಾಯ್ತನಕ್ಕೆ ಬಹಳಷ್ಟು ಪ್ರಾಮುಖ್ಯತೆ ನೀಡಲಾಗಿದೆ. ಇವುಗಳ ಕುರಿತ ವೈಭವೀಕರಣದ ಚರಿತ್ರೆಗಳು ನಮ್ಮಲ್ಲಿ ಬಹಳಷ್ಟು ಕಾಣಸಿಗುತ್ತವೆ. ಮಾತೃ ದೇವೋ ಭವ ಅನ್ನುವ ಮೂಲಕ ಮಕ್ಕಳನ್ನು ಹೆರುವ ಯಂತ್ರವನ್ನಾಗಿಸಿವೆ. ಯತ್ರ ನಾರ್ಯಂತು ಪೂಜ್ಯಂತೆ ತತ್ರಃ ದೇವತಾಃ ಎಂದು ಹೇಳುವ ಮೂಲಕ ಮಹಿಳೆಯರನ್ನು ವೈಭವೀಕರಿಸಲಾಗುತ್ತಿದೆ. ಹೀಗೆ ಹೇಳುವುದರ ಮೂಲಕ ಮಹಿಳೆಯರನ್ನು ಒಂದು ಚೌಕಟ್ಟಿಗೆ ಕಟ್ಟಿಹಾಕಲಾಗಿದೆ. ಮುಖ್ಯವಾಗಿ ಈ ತಾಯ್ತನದ ಕಾರಣದಿಂದಾಗಿಯೇ ದುಡಿವ ಮಹಿಳೆಯು ಬೇಸತ್ತಿರುವ ಉದಾಹರಣೆಗಳು ನಮ್ಮ ಮುಂದಿವೆ. ಜೊತೆಗೆ ಈ ತಾಯ್ತನಕ್ಕೆ ಬಹಳಷ್ಟು ಪ್ರಾಮುಖ್ಯತೆಯನ್ನು ಕೊಡದ ಮಹಿಳೆಯರೂ ಕಾಣಸಿಗುತ್ತಾರೆ. ಮಹಿಳೆಯರು ವೃತ್ತಿ ಬದುಕನ್ನು ಅತೀ ಗಂಭೀರವಾಗಿ ಸ್ವೀಕರಿಸಿದ್ದರಿಂದ ಮತ್ತು ವೃತ್ತಿ ಬದುಕಿನ ಮೂಲಕ ಆಕೆ ತನ್ನ ಅಸ್ಮಿತೆಯನ್ನು ಕಂಡುಕೊಳ್ಳುತ್ತಿರುವುದರಿಂದ ತಾಯ್ತನವನ್ನೇ ಧಿಕ್ಕರಿಸುವಂತಹ ಮಹಿಳೆಯರನ್ನೂ ನಾವಿಂದು ಕಾಣಬಹುದು. ಆದರೆ, ತಾಯ್ತನ ಧಿಕ್ಕರಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ ವ್ಯವಸ್ಥೆಯಲ್ಲಿ ಮಹಿಳೆಯಾಗಿ ಹುಟ್ಟಿದ ಮೇಲೆ ತಾಯ್ತನದ ನೋವನ್ನು ಅನುಭವಿಸಬೇಕು ಎನ್ನುವುದು ವ್ಯವಸ್ಥೆಯ ಧೋರಣೆ ಮತ್ತು ಇದೊಂದು ಅಘೋಷಿತ ನಿಯಮ. ಹಾಗಾಗಿಯೇ ಮಹಿಳೆಯರು ತಾಯ್ತನವನ್ನು ನಿರಾಕರಿಸುತ್ತಾರೆ ಎಂದು ತಿಳಿದುಬಂದರೂ ಸಹ ಅವರನ್ನು ವ್ಯವಸ್ಥೆ ಸುಮ್ಮನೆ ಬಿಡುವುದಿಲ್ಲ. ಹಾಗಾಗಿ ಇದನ್ನು ಧಿಕ್ಕರಿಸಿದವರಿಗೆ ನಾನಾ ಬಗೆಯ ಕಿರುಕುಳಗಳನ್ನು ಕೊಡಲಾಗುತ್ತದೆ. ಹಾಗೆ ಕಿರುಕುಳಗಳನ್ನು ಕೊಟ್ಟಾದರೂ ತಾಯ್ತನವನ್ನು ಅನುಭವಿಸುವಂತೆ ಒತ್ತಾಯಿಸಲಾಗುತ್ತದೆ. ಆದರೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಈ ತಾಯ್ತನದ ಕಾರಣಕ್ಕಾಗಿ ಹಲವು ಹಿಂಸೆಗಳನ್ನು ಅನುಭವಿಸುವುದರ ಮೂಲಕ ತಮ್ಮ ವೃತ್ತಿಯಿಂದಲೂ ದೂರವಾಗಿರುವ ಅಂಶಗಳು ಕಂಡುಬರುತ್ತವೆ.

ಸುದ್ದಿ ವಾಹಿನಿಯಲ್ಲಿ ವಾರ್ತಾವಾಚಕಿ ಆಗಿರುವ ಸಬೀತಾ ತಮ್ಮದೇ ಅನುಭವ ಹೇಳಿದ್ದು ಹೀಗೆ, "ತಾಯಿಯಾದ ನಂತರ ನಾನು ಸ್ವಲ್ಪ ದಿನಗಳ ಕಾಲ ಕೆಲಸದಿಂದ ದೂರ ಇರಬೇಕಾಗಿ ಬಂತು. ಕಾರಣ ಶಿಫ್ಟ್ ಕೆಲಸ. ನನ್ನದು ಆ್ಯಂಕರ್ ಕೆಲಸ. ಈ ಆ್ಯಂಕರ್ ಕೆಲಸ ಹೇಗಿರುತ್ತದೆ ಅಂದರೆ, ಯಾವಾಗ ಬೇಕಾದರೂ ಕೆಲಸಕ್ಕೆ ಬರಬೇಕಾದ ಅನಿವಾರ್ಯತೆ ಇರುತ್ತದೆ. ನಿರ್ದಿಷ್ಟ ಟೈಮ್ ಅಂತ ಇರಲ್ಲ. ಆಫೀಸ್‌ಗೆ ಬಂದವಳು, ಮನೆಗೆ ಯಾವಾಗ ಹೋಗ್ತೇನೆ ಅಂತಾನೂ ಹೇಳೋಕೆ ಆಗಲ್ಲ. ಸಹೋದ್ಯೋಗಿಗಳು ಬರದೇ ಇದ್ದರೆ ಅಥವಾ ಪ್ರಮುಖವಾದ

ಘಟನೆಯೊಂದು ನಡೆದು ಬಿಟ್ಟರೆ ಅಲ್ಲಿಯೇ ಇರಬೇಕಾಗುತ್ತದೆ. ಪದೇ ಪದೇ ಮನೆಗೆ ಹೋಗ್ತೇನೆ ಅಂತ ಹೇಳೋಕೆ ಆಗಲ್ಲ. ಅಲ್ಲದೇ, ಮಗುವನ್ನು ಮನೆಯಲ್ಲಿ ಬಿಟ್ಟು, ನನಗೂ ಕೆಲಸ ಮಾಡೋಕೆ ಕಷ್ಟ. ಮನೆಯಿಂದಲೂ ಪದೇ ಪದೇ ಕಾಲ್ ಬರ್‍ತಾ ಇರತ್ತೆ. ಮಗುವನ್ನು ನೋಡಿಕೊಳ್ಳಲು ಅತ್ತೆ ಮಾವ, ಅಮ್ಮ ಅಪ್ಪ ಯಾರೇ ಇದ್ದರೂ, ಆ ಮಗುವಿಗೆ ನಾನೇ ಬೇಕು. ಹಾಗಾಗಿ ನಾನು ಕೆಲಸ ಬಿಡಬೇಕಾಗಿ ಬಂತು. ನಮಗೆ ಬೇಕಾದ ರೀತಿಯಲ್ಲಿ ಶಿಫ್ಟ್ ಹಾಕಲು ಚಾನೆಲ್‌ನವರು ಸಿದ್ಧವಾಗಿರಲಿಲ್ಲ. ಈ ಕಾರಣದಿಂದಾಗಿ ಕೆಲಸ ಬಿಟ್ಟುಬಿಟ್ಟೆ. ಒಂದಷ್ಟು ತಿಂಗಳಗಳ ನಂತರ ಆ ಚಾನೆಲ್‌ಗೆ ಮುಖ್ಯಸ್ಥರಾಗಿ ಅನಂತ್ ಚಿನಿವಾರ್ ಬಂದರು. ಅವರಿಗೆ ಮನವಿ ಮಾಡಿದೆ. ನನಗೆ ಬೇಕಾದ ರೀತಿಯಲ್ಲಿ ಸಮಯ ಹೊಂದಿಸಿಕೊಟ್ಟರು. ಹಾಗಾಗಿ ಮತ್ತೆ ನಾನು ಕೆಲಸಕ್ಕೆ ಸೇರಿಕೊಂಡೆ. ಅವರು ಕೊಡದೇ ಇದ್ದರೆ, ನಾನೂ ಮನೆಯಲ್ಲಿ ಇರಬೇಕಾಗುತ್ತಿತ್ತು" ಅಂತಾರೆ.

ಸುದ್ದಿವಾಹಿನಿಯೊಂದರಲ್ಲಿ ಆ್ಯಂಕರ್ ಆಗಿರುವ ಸುಹಾನ್ ಹೇಳುವುದು ಹೀಗೆ "ನಾನು ತಾಯಿ ಆದ ನಂತರ ಕೆಲಸ ಬಿಡಲು ಎರಡು ಕಾರಣಗಳಿವೆ. ಮಗುವಾದ ನಂತರ ಕೆಲಸ ಮಾಡಲು ನನ್ನ ಕುಟುಂಬವೇ ಒಪ್ಪಲಿಲ್ಲ. ಅಲ್ಲದೇ ನಾನೂ ಕೂಡ ಹೆರಿಗೆಯ ಸಮಯದಲ್ಲಿ ದಪ್ಪಾದೆ. ನಾನು ಆ್ಯಂಕರ್ ಆಗಿದ್ದರಿಂದ ತೂಕ ಹೆಚ್ಚಿಸಿಕೊಂಡಿದ್ದ ನನಗೆ ಮತ್ತೆ ಆ ಕೆಲಸ ಸಿಗುವುದಿಲ್ಲ ಅನ್ನುವ ಖಾತರಿ ಇತ್ತು. ಅಲ್ಲದೇ, ಚೂರು ದಪ್ಪಗಿದ್ದ ನನ್ನ ಗೆಳತಿಯರಿಗೆ ಕ್ಯಾಮೆರಾಮನ್ಸ್ 'ಮೇಡಂ.. ಫ್ರೇಮ್ ತುಂಬಿಕೊಂಡಿದ್ದೀರಿ' ಅಂತ ಗೇಲಿ ಮಾಡಿದ್ದನ್ನು ಕೇಳಿದ್ದೆ. ನನಗೂ ಅದೇ ರೀತಿ ಗೇಲಿ ಮಾಡುತ್ತಾರೆ ಅಂತ ಕೀಳರಿಮೆ ಶುರುವಾಯ್ತು. ಹಾಗಾಗಿ ಕೆಲಸ ಮಾಡುವುದನ್ನೇ ಬಿಟ್ಟು. ಸ್ವಲ್ಪ ವರ್ಷಗಳ ನಂತರ ತೂಕ ಇಳಿಸಿಕೊಂಡೆ. ಮತ್ತೆ ಕೆಲ್ಸಕ್ಕೆ ಟ್ರೈ ಮಾಡಿದೆ. ಆದರೆ, ಮುಖ್ಯ ವಾಹಿನಿಗಳಲ್ಲಿ ಕೆಲಸ ಸಿಗಲಿಲ್ಲ. ಈಗ ಮನರಂಜನಾ ವಾಹಿನಿಗಳಲ್ಲಿ ಕೆಲಸ ಮಾಡುತ್ತಿದ್ದೇನೆ' ಅಂತಾರೆ.

ಪತ್ರಕರ್ತೆಯಾಗಿ ಸದ್ಯ ಕೆಲಸ ಬಿಟ್ಟಿರುವ ಸುಮಾ ತಮ್ಮದೇ ಅನುಭವವನ್ನು ಹಂಚಿಕೊಂಡಿದ್ದು ಹೀಗೆ "ತಾಯಿಯಾದ ನಂತರ ಸುದ್ದಿ ವಾಹಿನಿಯಿಂದ ನಾನೇ ದೂರ ಸರಿಯಬೇಕಾಯಿತು. ಹೆರಿಗೆಯ ನಂತರ ಎರಡು ವರ್ಷಗಳ ಕಾಲ ನಾನು ಮನೆಯಲ್ಲಿಯೇ ಇದ್ದೆ. ದಿನವೂ ನನ್ನ ಸ್ನೇಹಿತೆಯರ ಜೊತೆ ವಾಹಿನಿಯ ಕೆಲಸದ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದೆ. ಆದರೆ, ಮಗುವಾದ ನಂತರ ಕುಟುಂಬದ ಜವಾಬ್ದಾರಿಗಳು ಹೆಚ್ಚಾದವು. ಗಂಡ, ಅತ್ತೆ ಮಾವನ, ಇತರ ಕುಟುಂಬದ ಸದಸ್ಯರ ಜೊತೆ ಮಗುವನ್ನೂ ನೋಡಿಕೊಳ್ಳಬೇಕು.

ನನ್ನ ಗಂಡ ಕೂಡ ಕೆಲಸಕ್ಕೆ ಹೋಗುತ್ತಿದ್ದರು. ಹಾಗಾಗಿ ನಾನೇ ಕೆಲಸ ಬಿಟ್ಟೆ. ನನ್ನ ಗಂಡನ ಮನೆಯವರ ಒತ್ತಾಯವೂ ಅದರಲ್ಲಿತ್ತು. ಹಾಗಾಗಿ ತಾಯಿ ಆದ ನಂತರ ಮತ್ತೆ ಕೆಲಸ ಸೇರಿಕೊಳ್ಳಲಿಲ್ಲ' ಅಂತಾರೆ.

ಇಲ್ಲಿರುವ ಮೂರೂ ಪ್ರಕರಣಗಳಲ್ಲಿ ಸುಮಾ ಅವರದ್ದು ತಾಯ್ತನದ ಜತೆಗೆ ವೃತ್ತಿ ನಿರ್ವಹಣೆ ಸವಾಲುಗಳನ್ನು ಬಿಚ್ಚಿಟ್ಟರೆ, ಈ ಸವಾಲುಗಳೇ ಕುಟುಂಬಕ್ಕೆ ಕಿರಿಕಿರಿ ಅನಿಸುವುದರಲ್ಲಿ ಎರಡು ಮಾತಿಲ್ಲ. ತನ್ನ ಮಗುವಿಗೆ ಸಿಗಬೇಕಾದ ಟೈಮ್ ಸಿಗದೇ ಇದ್ದಾಗ, ಯಾವುದೇ ಕಾರಣಕ್ಕೂ ಕುಟುಂಬ ಹೊರಗಿನ ಕೆಲಸಕ್ಕೆ ಕಳುಹಿಸುವುದನ್ನು ಒಪ್ಪಲಾರದು. ತಾಯಿ ಮತ್ತು ತಾಯ್ತನ ಇವೆರೆಡೂ ಜವಾಬ್ದಾರಿಗಳನ್ನು ಏಕಕಾಲಕ್ಕೆ ನಿಭಾಯಿಸುವುದು ಮಹಿಳೆಯರಿಗೆ ಕಷ್ಟದ ಕೆಲಸವೇ ಸರಿ. ಒಂದುವೇಳೆ ನಿಭಾಯಿಸುವ ಸಾಮರ್ಥ್ಯವಿದ್ದರೂ ಸಹ ಕುಟುಂಬ ಆಕೆಯನ್ನು ಅದರಿಂದ ವಿಮುಕ್ತಳನ್ನಾಗಿ ಮಾಡುತ್ತದೆ. ಹಾಗಾಗಿಯೇ ಉದ್ಯೋಗಸ್ಥ ಮಹಿಳೆಯರು ತಾಯ್ತನದ ಕಾರಣಕ್ಕಾಗಿ ಕೆಲಸಗಳನ್ನು ನಿರಾಕರಿಸಿರುವಂತಹ ಉದಾಹರಣೆಗಳು ಕಂಡುಬರುತ್ತವೆ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ತಾಯ್ತನ ಎಂಬುದು ತಮ್ಮ ಅಸ್ತಿತ್ವವನ್ನು ಕಸಿದುಕೊಳ್ಳುವ ಒಂದು ಪ್ರಕ್ರಿಯೆ ಎಂದು ಭಾವಿಸುತ್ತದೆ. ಮುಖ್ಯವಾಗಿ ತಾಯಿ ಮತ್ತು ತಾಯ್ತನಗಳು ಒಂದಕ್ಕೊಂದು ಸಮೀಕರಿಸಿಕೊಂಡಿರುವುದರಿಂದ ಒಂದನ್ನು ನಿರಾಕರಿಸಿ ಇನ್ನೊಂದನ್ನು ಪಡೆಯಲು ಸಾಧ್ಯವಿಲ್ಲ. ಹಾಗಾಗಿಯೇ ಮಹಿಳೆಯರು ಉದ್ಯೋಗದಿಂದ ವಿಮುಖರಾಗುತ್ತಿರುವುದು ಕಂಡುಬರುತ್ತದೆ.

6.5 ಜಾತಿ ಮತ್ತು ಧಾರ್ಮಿಕ ಕಾರಣಗಳಿಂದಾಗುವ ಸಂಘರ್ಷ

ಇಂದು ವ್ಯವಸ್ಥೆಯಲ್ಲಿ ಧರ್ಮದ ನಿಯಮಗಳ ಕುರಿತು ಹಲವಾರು ಚರ್ಚೆಗಳು ನಡೆಯುತ್ತಲೇ ಇವೆ. ಆದರೂ ಸಹ ಧರ್ಮದ ಬೇರುಗಳೇನೂ ಸಡಿಲಗೊಂಡಿಲ್ಲ. ಧರ್ಮ ಎಂದರೇನು? ಜಾತಿ ಎಂದರೇನು? ಎಂಬುದರ ಬಗೆಗೆ ಇನ್ನೂ ಸ್ಪಷ್ಟವಾದ ನಿಲುವಿಗೆ ಬಾರದೇ ಇರುವುದನ್ನು ಕಾಣಬಹುದು. ಧರ್ಮಶಾಸ್ತ್ರಗಳು ಹೇಳುವಂತೆ, ಧರ್ಮವು ಮನುಷ್ಯ ಜೀವನ ಪದ್ಧತಿಯನ್ನು ನಿರೂಪಿಸಿದರೆ, ಮತ ಅದರ ಸ್ಥಾಪಕರ ಆಲೋಚನೆಗಳನ್ನು ಪ್ರತಿನಿಧಿಸುತ್ತದೆ. ಇನ್ನು ಜಾತಿ ಪದ್ಧತಿಯು ವಿವಿಧ ಉದ್ಯೋಗಗಳನ್ನು ನಿರ್ವಹಿಸುವ ಸಮಾಜದ ವಿವಿಧ ವರ್ಗಗಳನ್ನು ಪ್ರತಿನಿಧಿಸಲು ಹುಟ್ಟಿಕೊಂಡ ವ್ಯವಸ್ಥೆಯಾಗಿದೆ.

"ಸಾಮಾಜೀಕರಣದ ಕೊಂಡಿಯಾಗಿ ಕಾರ್ಯನಿರ್ವಹಿಸುವ ಧರ್ಮವು ಆಯಾ ಜಾತಿ, ಸಮುದಾಯಕ್ಕನುಗುಣವಾಗಿ ಮನುಷ್ಯರ ವ್ಯಕ್ತಿತ್ವ ರೂಪಿಸುವಿಕೆಗೆ ಸಹಕಾರಿಯಾಗಿದೆಯೆಂದು ಸಮಾಜ ವ್ಯವಸ್ಥೆಯ ನಂಬಿಕೆಯಾಗಿದೆ. ಉತ್ಪಾದನಾ ಸಾಮಗ್ರಿಗಳ ಅಭಿವೃದ್ಧಿಯಾದಂತೆಲ್ಲ ವರ್ಗ ವಿಭಜನೆಯಿಂದ ವ್ಯವಸ್ಥೆಯು ಕೂಡಿಕೊಂಡಿತು. ವ್ಯವಸ್ಥೆಯಾಭಿವೃದ್ಧಿಯ ಚಾರಿತ್ರಿಕ ಸಂದರ್ಭದಲ್ಲಿ ಧರ್ಮದ ಉದಯವಾಯಿತು. ಪ್ರಬಲ ವರ್ಗಗಳು ದುರ್ಬಲ ವರ್ಗಗಳು ಮೇಲೇಳದಂತೆ, ದಮನಕಾರಿ ಪ್ರವೃತ್ತಿಯಲ್ಲಿಯೇ ಧರ್ಮವು ಅಗತ್ಯವಾಯಿತು. ಪ್ರಬಲರು (ಪುರುಷರು) ಬೆಳೆದು ಬರುತ್ತಿರುವುದರ ಹಿನ್ನೆಲೆಯನ್ನಾಧರಿಸಿ ರೂಪಿತವಾದ ಧರ್ಮವು ಮಹಿಳೆಯರನ್ನು ದುರ್ಬಲ ವರ್ಗದಡಿಯಲ್ಲಿಯೇ ವ್ಯಾಖ್ಯಾನಿಸಿತು. ಧರ್ಮದ ದೃಷ್ಟಿಕೋನವು ಮಹಿಳಾ ಸಂಬಂಧಿತವಾಗಿ ಅಕ್ರಮವಾದುದಾಗಿದೆ. ಮಹಿಳಾ ಬದುಕಿನ ಮೇಲೆ ಧರ್ಮದ ದುಷ್ಪರಿಣಾಮ ದಟ್ಟವಾಗಿದೆ.

ಅಂದರೆ, ಪುರುಷ ಸ್ಥಾಪಿತ ಈ ಧರ್ಮ, ಸಂಸ್ಕೃತಿ, ಆಚಾರ ವಿಚಾರಗಳು ಮಹಿಳೆಯನ್ನು ಎಷ್ಟು ಸಾಧ್ಯವೋ ಅಷ್ಟು ಹಿಡಿತದಲ್ಲಿ ಇಟ್ಟುಕೊಳ್ಳುವ ಪ್ರಯತ್ನ ನಡೆಸಿವೆ. ಎಲ್ಲ ಧರ್ಮಗಳು, ಸಂಸ್ಕೃತಿಗಳೂ ಮಹಿಳೆಯರ ವಿರುದ್ಧವಾಗಿವೆ ಅನ್ನುವುದರಲ್ಲಿ ಸಂಶಯವಿಲ್ಲ. ಕೆಲವು ಧರ್ಮಗಳ ಪ್ರಕಾರ ಸ್ತ್ರೀಯರಿಗೆ ಆತ್ಮವಿಲ್ಲ. ಕೆಲವು ಧರ್ಮಗಳಲ್ಲಿ ಸ್ತ್ರೀಯರಿಗೆ ಮೋಕ್ಷವೇ ಇಲ್ಲ. ವೈದಿಕ ಧರ್ಮದಲ್ಲಂತೂ ಹೆಣ್ಣು ಮಾಯೆ, ಕಂಟಕಿ, ಪಾಪಾತ್ಮ ಎಂದೆಲ್ಲ ಮನುಸ್ಮೃತಿ ಹೇಳುತ್ತದೆ. ಹಾಗಾಗಿ ಕೆಲವು ದೇವಸ್ಥಾನಗಳಲ್ಲಿ ಈಗಲೂ ಮಹಿಳೆಯರಿಗೆ ಪ್ರವೇಶವಿಲ್ಲ. ಅವಳು ಮುಟ್ಟಾಗುತ್ತಾಳೆ, ಮೈಲಿಗೆಯಾಗುತ್ತಾಳೆಂದು ಪೂಜೆಯನ್ನು ನಿರಾಕರಿಸಲಾಗಿದೆ. ಆದರೆ, ದೇವರ ಹೆಸರಿನಲ್ಲಿ ಬೆತ್ತಲೆ ಸೇವೆ, ಬಸವಿ ಬಿಡುವ ಪದ್ಧತಿ ನಿರಾತಂಕವಾಗಿ ನಡೆಯುತ್ತಲೇ ಬರುತ್ತಿದೆ.

ಹೆಣ್ಣು ಹಿಂಸಿಸಲೆಂದೆ, ಭೋಗಿಸಲೆಂದೇ ಇರುವ ವಸ್ತು ಅನ್ನುವಂತೆ ಮನುಸ್ಮೃತಿ ಚಿತ್ರಿಸಿದರೆ, ಮಹಿಳೆಯ ಸ್ವಾತಂತ್ರ್ಯವನ್ನು ದಿಗ್ಬಂಧನಕ್ಕೊಳಪಡಿಸಿರುವ ಮುಸ್ಲಿಂ ಧರ್ಮ. ಹೀಗೆ ಪ್ರತಿಯೊಂದು ಧರ್ಮವೂ ಮಹಿಳೆಯನ್ನು ದೇಹ ಕೇಂದ್ರಿತವಾಗಿಯೇ ನೋಡುತ್ತದೆ. ಬೌದ್ಧ ಧರ್ಮದಲ್ಲಿಯ ಶೋಷಣೆ ಮತ್ತೊಂದು ಬಗೆಯದ್ದು. ಕ್ರಿಶ್ಚಿಯನ್ ಧರ್ಮದಲ್ಲಿ ದೇವರಾಗುವುದು ಏನಿದ್ದರೂ ಅದು ಪುರುಷ ಸಾಧನೆ. ಮಹಿಳೆ ಕೇವಲ ವೀಕ್ಷಕಳೆಂಬಂತೆ ಚಿತ್ರಿಸಲಾಗಿದೆ. ಒಟ್ಟಾರೆ ಯಾವ ಧರ್ಮಗಳು ಮಹಿಳೆಗೆ ಸಿಗಬೇಕಾದ ಸ್ಥಾನ ಮಾನವನ್ನು ಕಲ್ಪಿಸುವಲ್ಲಿ ಸಹಕಾರಿಯಾಗಿಲ್ಲವೆಂದೇ ಸಂಶೋಧಕರು ತಮ್ಮ ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ಈ ಧರ್ಮ ಕಾರಣದಿಂದಾಗಿಯೇ ಅನೇಕ ಉದ್ಯೋಗಸ್ಥ ಮಹಿಳೆಯರು ಕೌಟುಂಬಿಕ ಸಂಘರ್ಷಗಳನ್ನು ಎದುರಿಸುವಂತಾಗಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ, ಅದರಲ್ಲೂ ಕನ್ನಡ ಸುದ್ದಿ ವಾಹಿನಿಗಳಲ್ಲಿ ಬೇರೆ ಬೇರೆ ಜಾತಿಯ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆದರೆ, ಬೇರೆ ಬೇರೆ ಧರ್ಮದವರು ಬೆರಳೆಣಿಕೆಗೂ ಸಿಗುವುದಿಲ್ಲ. ಸದ್ಯ ಮೂರ್ನಾಲ್ಕು ಮಹಿಳಾ ಉದ್ಯೋಗಿಗಳು ಸಕ್ರಿಯವಾಗಿ ಕೆಲಸದಲ್ಲಿ ನಿರತರಾಗಿದ್ದಾರೆ. ಇಬ್ಬರು ವೃತ್ತಿ ತೊರೆದಿದ್ದಾರೆ. ವೃತ್ತಿಯಲ್ಲಿ ತೊಡಗಿಕೊಂಡಿರುವ ಮತ್ತು ಬಿಟ್ಟಿರುವ ಮಹಿಳಾ ಉದ್ಯೋಗಿಗಳು ಅದಕ್ಕೆ ತಮ್ಮದೇ ಆದ ಕೌಟುಂಬಿಕ ಕಾರಣಗಳನ್ನೂ ಕೊಟ್ಟಿದ್ದಾರೆ.

ಸುದ್ದಿ ವಾಹಿನಿಯೊಂದರಲ್ಲಿ ಕೆಲಸ ಮಾಡುವ ನಾಜಿಯಾ ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಧರ್ಮದ ಕಾರಣಕ್ಕಾಗಿ ನಡೆದ ಕೌಟುಂಬಿಕ ಸಂಘರ್ಷವನ್ನು ಬಿಚ್ಚಿಟ್ಟಿದ್ದು ಹೀಗೆ, "ನಾನು ಮುಸ್ಲಿಂ ಆಗಿದ್ದರಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡುವುದು ನನಗೆ ಅಷ್ಟು ಸುಲಭವಾಗಿಲ್ಲ. ತೀರಾ ಕನ್ಸರ್‌ವೇಟಿವ್ ಆಗಿರುವ ನನ್ನ ಧರ್ಮದವರು 'ನಿನಗೆ ಯಾಕೆ ಬೇಕಿತ್ತು ಈ ಕೆಲಸ ಅಂತ ಮಾತಾಡಿದ್ದಾರೆ. ಇದೊಂದು ಹರಾಮಿ ಕೆಲ್ಸ ಅಂತ' ಬೈತಾರೆ. ಓಪನ್ನಾಗಿ ಕೂದಲು ಬಿಟ್ಟುಕೊಂಡು ನ್ಯೂಸ್ ಓದುವುದು ಕೂಡ ಅವರಿಗೆ ಹರಾಮಿ ಕೆಲಸ ಅನಿಸತ್ತೆ. ಮೀಡಿಯಾ ಅನ್ನೋದು ಅವರಿಗೆ ಕರಪ್ಟ್ ಕ್ಷೇತ್ರ. ಯಾರನ್ನೋ ಬ್ಲ್ಯಾಕ್ ಮೇಲ್ ಮಾಡಿ ಬದುಕುವಂತಹ ಜನರು ಕೆಲಸ ಮಾಡುವ ಕ್ಷೇತ್ರ ಅಂದುಕೊಂಡಿದ್ದಾರೆ. ಹಾಗಾಗಿ ಮೀಡಿಯಾದಲ್ಲಿ ಕೆಲಸ ಮಾಡುವ ನಮ್ಮನ್ನೂ ಅವರು 'ಹರಾಮ್' ಅಂತ ಕರೆಯುತ್ತಾರೆ. ನೋಡಿ, ಇದು ಪುರುಷರಿಗೆ ಅನ್ವಯಿಸಲ್ಲ. ಮುಸ್ಲಿಂ ಸಮುದಾಯದ ಹುಡುಗರೂ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ "ಹರಾಮ್' ಪದ ಬಳಕೆಯಾಗಲ್ಲ. ಹುಡುಗಿಯರು ಮಾತ್ರ ಅಂತಹ ಮಾತನ್ನು ಹೇಳಿಸಿಕೊಳ್ಳಬೇಕು' ಅಂತಾರೆ.

ಮತ್ತೊಂದು ಚಾನೆಲ್‌ನಲ್ಲಿ ಕೆಲಸ ಮಾಡುವ ಅಲ್ಪ ಸಂಖ್ಯಾತ ಸಮುದಾಯದ ಹುಡುಗಿ ತನ್ನ ಅನುಭವಗಳನ್ನು ಹಂಚಿಕೊಂಡಿದ್ದು ಹೀಗೆ, "ನಾನು ಮಂಗಳೂರು ಮೂಲದ ಮುಸ್ಲಿಂ ಹುಡುಗಿ. ಕಟ್ಟಾ ಮುಸ್ಲಿಂ ಫ್ಯಾಮಿಲಿಯಲ್ಲಿ ಬೆಳೆದವಳು. ನಮ್ಮ ಧರ್ಮದಲ್ಲಿನ ಮಹಿಳೆಯರು ಹೇಗಿರ್ತಾರೆ, ಹೇಗಿರಬೇಕು ಅಂತ ಹೇಳುವುದನ್ನು ನೀವು ಕೇಳಿರಬಹುದು. ಮುಸ್ಲಿಂ ಹುಡುಗಿಯರಿಗೆ ಶಿಕ್ಷಣ ಸಿಗುವುದೇ ಅಪರೂಪ. ಅಲ್ಲದೇ, ಹೊರಗೆ ಕೆಲಸ ಮಾಡಲು ಬಿಡಲ್ಲ. ಮನೆಯಿಂದ ಆಚೆ ಬಂದರೆ ಬುರ್ಕಾ ಹಾಕಬೇಕು. ನನಗೆ ಇದಾವುದೂ ಇಷ್ಟವಿರಲಿಲ್ಲ. ಎಂಟನೇ ಕ್ಲಾಸ್‌ನಲ್ಲಿ ಇರುವಾಗಲೇ ನನಗೆ ಭರತನಾಟ್ಯ ಕಲಿಯಬೇಕು ಅನ್ನುವ ಆಸೆಯಿತ್ತು. ಯಕ್ಷಗಾನದಲ್ಲಿ ಕುಣಿಯಬೇಕು ಅನ್ನುವ ಬಯಕೆ ಆಗಿತ್ತು. ಅದರಲ್ಲೂ ಮೀಡಿಯಾದಲ್ಲಿ ಆ್ಯಂಕರ್ ಆಗಬೇಕು

ಅನ್ನುವುದು ನನ್ನ ಕನಸಾಗಿತ್ತು. ಹಾಗಾಗಿ ಮೀಡಿಯಾ ಕ್ಷೇತ್ರವನ್ನು ಆರಿಸಿಕೊಂಡು ಬಂದೆ. ಡಿಗ್ರಿ ಮುಗೀತಾ ಇದ್ದಂತೆ ಮನೆಯಲ್ಲಿ ಟಿವಿಯಲ್ಲಿ ಕೆಲಸಕ್ಕೆ ಹೋಗ್ತೀನಿ ಅಂದಾಗ ನನ್ನ ಕುಟುಂಬವೇ ಒಪ್ಪಲಿಲ್ಲ. ಮುಸ್ಲಿಂ ಸಮುದಾಯದ ಮುಖಂಡರ ಕಂಗೆಣ್ಣಿಗೆ ಗುರಿಯಾಗುತ್ತೇವೆ ಅನ್ನುವ ಆತಂಕ ಅವರದ್ದು. ಮೊದ ಮೊದಲು ಬೇಡ ಅಂತಾನೇ ಹೇಳಿದರು. ನನ್ನ ಸಹೋದರನ ಸಹಕಾರದಿಂದಾಗಿ ಮೀಡಿಯಾಗೆ ಬಂದೆ. ಸಮಯ ವಾಹಿನಿಯಲ್ಲಿ ಆ್ಯಂಕರ್ ಆಗಿ ಸೇರಿಕೊಂಡೆ. ನ್ಯೂಸ್ ಓದುವುದನ್ನು ನೋಡಿದ್ದ ನನ್ನ ಫ್ಯಾಮಿಲಿಯ ಸಂಬಂಧಿಕರೊಬ್ಬರು ನನಗೆ ಫೋನ್ ಮಾಡಿ, ನೀನೇನು ಟಿವಿಯಲ್ಲಿ ಕಾಣಿಸಿಕೊಳ್ಳೋದು. ಅಲ್ಲಿ ಕೆಲಸ ಮಾಡುವುದಾದರೆ, ಕ್ಯಾಮೆರಾ ಮುಂದೆ ಕೂರುವುದಾದರೆ ಬುರ್ಕಾ ಹಾಕಿಕೊಳ್ಳಲೇಬೇಕು ಅಂತ ವಾದ ಮಾಡಿದರು. ಇದು ಉರ್ದು ಚಾನೆಲ್ ಅಲ್ಲ ಅಂತ ನಾನು ಹೇಳಿದರೂ ಅವರು ಕೇಳಲಿಲ್ಲ. ಮನೆಯಲ್ಲೂ ಪ್ರೆಸರ್ ತಂದರು. ಕೆಲಸವನ್ನೇ ಬಿಡಬೇಕಾದ ಪರಿಸ್ಥಿತಿ ನನಗೆ ಬಂತು. ಮನೆಯವರಿಗೆ ತಿಳಿಸಿ ಹೇಳಿದೆ. ಹೀಗೆ ಮೂರ್‍ನಾಲ್ಕು ತಿಂಗಳ ಕಾಲ ನಿರಂತರ ನನಗೆ ತೊಂದರೆ ಆಗ್ತಾನೇ ಇತ್ತು. ಫೇಸ್‌ಬುಕ್‌ನಲ್ಲಿ ಕೆಟ್ಟದಾಗಿ ಮಸೇಜ್ ಮಾಡೋರು. ನನ್ನ ನಂಬರ್ ತೆಗೆದುಕೊಂಡು ನೀನು ಹರಾಮಿ ಕೆಲ್ಸ ಮಾಡ್ತಿದ್ದೀಯಾ? ಧರ್ಮ ವಿರೋಧಿಯಾಗಿದ್ದೀಯಾ? ನೀನು ಬೇರೆ ಧರ್ಮಕ್ಕೆ ಸೇರಿಕೋ, ನಿನ್ನ ದಫನ್ ಮಾಡಲ್ಲ, ಸುಡ್ತೀವಿ. ಹೀಗೆ ಏನೇನೋ ಮಸೇಜ್ ಕಳಿಸೋರು. ನನ್ನ ಜೀವಕ್ಕಿಂತ ನನ್ನ ಫ್ಯಾಮಿಲಿ ಬಗ್ಗೆ ನನಗೆ ಆತಂಕ ಆಗೋದು. ಎಲ್ಲವನ್ನೂ ನಿಭಾಯಿಸಿಕೊಂಡು ಎರಡು ವರ್ಷದಿಂದ ಮೀಡಿಯಾದಲ್ಲಿ ಕೆಲಸ ಮಾಡುತ್ತಿದ್ದೇನೆ. ಈಗ ಅಂಥದ್ದೇನೂ ಆತಂಕಗಳು ಇಲ್ಲ.' ಅಂದರು.

ಜೈನ ಧರ್ಮಕ್ಕೆ ಸೇರಿದ ವಾರ್ತಾವಾಚಕಿ ಒಬ್ಬರು ಹೇಳಿದಂತೆ ಧರ್ಮದ ಕಾರಣದಿಂದಾಗಿ ನಡೆಸಿದ ಕೌಟುಂಬಿಕ ಸಂಘರ್ಷವನ್ನು ತೆರೆದಿಟ್ಟಿದ್ದು ಹೀಗೆ, "ಜೈನ್ ಸಮುದಾಯದಲ್ಲಿ ಹುಡುಗಿಯರನ್ನು ಕೆಲಸಕ್ಕೆ ಕಳುಹಿಸುವುದೇ ಇಲ್ಲ. ಅದರಲ್ಲೂ ನಮ್ಮ ಕುಟುಂಬದಲ್ಲಿ ಇನ್ನೂ ಸ್ಟ್ರಿಕ್ಟ್. ನಾನು ಮೀಡಿಯಾದಲ್ಲಿ ಕೆಲಸಕ್ಕೆ ಹೋಗುತ್ತೇನೆ ಅಂತ ಕೇಳಿದಾಗ ಯಾರೂ ಒಪ್ಪಲಿಲ್ಲ. ನಾನು ಪತ್ರಿಕೋದ್ಯಮದಲ್ಲಿ ಎಂಎ ಮಾಡುತ್ತೇನೆ ಅಂದಾಗಲೂ ನಮ್ಮ ಕುಟುಂಬದವರು ಬೇಡ ಅಂತಾನೇ ಹೇಳಿದ್ದರು. ಕನ್ನಡ ಎಂಎ ಮಾಡ್ತೀನಿ ಅಂತ ನಾನು ಸುಳ್ಳು ಹೇಳಿ ಪತ್ರಿಕೋದ್ಯಮದಲ್ಲಿ ಶಿಕ್ಷಣ ಮುಗಿಸಿದ್ದು. ಮೀಡಿಯಾ ಹುಡುಗಿಯರಿಗೆ ಅಲ್ಲ ಅನ್ನುವುದೇ ಈಗಲೂ ಹಲವರ ಭಾವನೆ ಆಗಿದೆ. ಮೀಡಿಯಾದಲ್ಲಿ ಕೆಲಸ ಮಾಡೋಕೆ ಹೋದರೆ, ಎಲ್ಲೆಲ್ಲಿಗೋ ಹೋಗಬೇಕು, ಯಾರ್‍ಯಾರೋ ಜೊತೇನೋ ಇರಬೇಕು. ಹಾಕುವ ಬಟ್ಟೆ ಸರಿ ಇರಲ್ಲ.

ಬರೀ ಪುರುಷರೇ ಇರ್ತಾರೆ. ಹುಡುಗಿಯರಿಗೆ ಅದು ಸೇಫ್ ಅಲ್ಲ ಅಂತ ಕಾರಣಗಳನ್ನು ಕೊಡ್ತಾರೆ. ನಾನು ನನ್ನ ಮನೆಯವರ ಮಾತು ಧಿಕ್ಕರಿಸಿ ಸುದ್ದಿ ವಾಹಿನಿಗೆ ಬಂದು ಜಾಯಿನ್ ಆದಾಗ, ನನ್ನ ಮನೆಯಲ್ಲಿ ನಾನು ಕೆಲಸ ಮಾಡುತ್ತಿದ್ದ ಟಿವಿಯನ್ನೇ ನೋಡ್ತಾ ಇರಲಿಲ್ಲ. ಈ ಮೀಡಿಯಾ ನಮ್ಮ ಜೈನ್ ಸಮುದಾಯಕ್ಕೆ ಅಲ್ಲ ಅನ್ನುವ ಮನೋಭಾವ ಅವರದ್ದು. ಅಲ್ಲದೇ ನನ್ನ ಸಮುದಾಯದ ಮುಖಂಡರು ಕೂಡ ನನ್ನ ಪಾಲಕರ ಜತೆ ಮಾತಾಡಿದ್ದೂ ಇದೆ. ನಿಮ್ಮ ಮಗಳನ್ನ ಯಾಕೆ ಮೀಡಿಯಾಗೆ ಕಳುಹಿಸಿದ್ದು ಅಂತ ಕೇಳಿದ್ದಾರೆ. ಹಾಗಾಗಿ ನನ್ನ ಕುಟುಂಬವು ನನ್ನ ಜತೆ ಮಾತೂ ಕೂಡ ಬಿಟ್ಟಿದ್ದೂ ಇದೆ. ಆಮೇಲೆ ಅವರಿಗೆ ಕೆಲಸದ ಬಗ್ಗೆ ಗೊತ್ತಾಯಿತು. ಹಾಗಾಗಿ ಈಗ ಖುಷಿಯಿಂದ ನೋಡ್ತಿದ್ದಾರೆ.' ಅಂತಾರೆ.

ಈ ಮೂರು ಪ್ರಕರಣಗಳು ಕೂಡ ತಮ್ಮ ಧರ್ಮದ ಕಟ್ಟುಪಾಡುಗಳನ್ನು ಮತ್ತು ಮಹಿಳೆಗೆ ವಿಧಿಸಿರುವ ಚೌಕಟ್ಟುಗಳನ್ನು ವಿವರಿಸುತ್ತವೆ. ಪುರುಷ ಪ್ರಧಾನ್ಯದ ಚೌಕಟ್ಟಿನಲ್ಲಿರುವ ಮುಸ್ಲಿಂ ಮಹಿಳೆ ಕೌಟುಂಬಿಕ ವಲಯಗಳಲ್ಲಿ ಅನೇಕ ನಿರ್ಬಂಧನೆಗಳನ್ನು ಎದುರಿಸಬೇಕಾಗಿದೆ. ಅವಳು ಜೋರಾಗಿ ನಗುವಂತಿಲ್ಲ. ತನಗಿಷ್ಟವಾದ ಬಟ್ಟೆಗಳನ್ನು ಹಾಕುವಂತಿಲ್ಲ. ಪರ ಪುರುಷನೊಂದಿಗೆ ಮಾತಾಡುವಂತಿಲ್ಲ. ಬುರ್ಖಾ ಧರಿಸದೆ ಮನೆಯಿಂದಾಚೆ ಕಾಲಿಡುವಂತಿಲ್ಲ. ಮಾಧ್ಯಮದಲ್ಲಿ ಕೆಲಸ ಮಾಡುವಾಗ ಇದೆಲ್ಲವನ್ನೂ ಪಾಲಿಸುವುದು ಕಷ್ಟ. ಹಾಗಾಗಿಯೇ ನಾಜಿಯಾ ರೀತಿಯ ಉದ್ಯೋಗಿಗಳಿಗೆ ಅವರ ಸಮುದಾಯದ ಕೆಲ ಮುಖಂಡರು "ಹರಾಮಿ' ಅನ್ನುವ ಪದ ಬಳಕೆಯನ್ನು ಮಾಡುತ್ತಾರೆ.

"ಯಾವುದನ್ನು ಧರ್ಮದ ದೃಷ್ಟಿಯಿಂದ ಉಪಯೋಗಿಸಬಹುದೋ ಅದು ಹಲಾಲ್ ಎಂದು ಕರೆಯುವರು. ಯಾವುದನ್ನು ಉಪಯೋಗಿಸಬಾರದು ಎಂದಿದೆಯೋ ಅದನ್ನು ಹರಾಮ್ ಎಂದು ಕರೆಯುತ್ತಾರೆ' (ಪುಣ್ಯಕೋಟಿ, ಡಾ.ಮುಮ್ತಾಜ್ ಅಲಿಖಾನ್, 2010, ಸಪ್ನ, ಪುಟ 2) ಅಂದರೆ, ಸುದ್ದಿ ಓದುವಾಗ, ಯಾವುದೋ ಒಂದು ಕಾರ್ಯಕ್ರಮವನ್ನು ನಿರೂಪಣೆ ಮಾಡಬೇಕಾದ ಸಂದರ್ಭದಲ್ಲಿ ಹೇರ್‌ಸ್ಟೈಲ್ ಮಾಡಿಕೊಳ್ಳುವುದನ್ನು ಆ ವೃತ್ತಿ ಬೇಡುತ್ತದೆ. ಆದರೆ, ಮುಸ್ಲಿಂ ಧರ್ಮದಲ್ಲಿ ಇದಕ್ಕೆ ಅವಕಾಶವಿಲ್ಲ. ಕೂದಲು ಬಿಟ್ಟುಕೊಳ್ಳುವುದು, ಬುರ್ಕಾ ಹಾಕದೇ ಇರುವುದು. ಪರಪುರುಷನ ಎದುರು ಸುಂದರವಾಗಿ ಕಾಣುವುದು ಇವೆಲ್ಲವೂ ಹರಾಮಿಯಲ್ಲಿಯೇ ಬರುತ್ತದೆ. ಇದರ ಜೊತೆ ವಸ್ತ್ರಸಂಹಿತೆ ಕೂಡ ಮುಸ್ಲಿಂ ಮಹಿಳೆಯರನ್ನು ಅಗಾಧವಾಗಿ ಕಾಡುತ್ತಿದೆ. ಕುರಾನಿನ್ವಯ ಮುಸ್ಲಿಂ ಮಹಿಳೆ ಮುಂಗಾಲು, ಮುಂಗೈ, ಮುಖ ಇವಿಷ್ಟನ್ನು ಬಿಟ್ಟು ದೇಹದ ಎಲ್ಲ ಭಾಗಗಳನ್ನು ಮುಚ್ಚಿಕೊಳ್ಳಬೇಕು ಎಂದು ಸೂಚಿಸುತ್ತದೆ. ಹಾಗಾಗಿ ಇಷ್ಟದಂತೆ ಬಟ್ಟೆ ಧರಿಸುವುದಕ್ಕೆ


ಆಗುವುದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಹೆಣ್ಣು ಮಕ್ಕಳು ಕಾಣಬಾರದೆಂದು ಮೂಲಭೂತವಾದಿ, ಸಂಪ್ರದಾಯಸ್ಥ ಪುರುಷರು ಬಯಸುತ್ತಾರೆ. ಜತೆಗೆ ಮಹಿಳೆಯ ಹೊರದುಡಿಮೆ ಕೂಡ ಮುಸ್ಲಿಂ ಧರ್ಮದಲ್ಲಿ ನಿಷೇಧ. ಏಳನೇ ಶತಮಾನದಲ್ಲಿ ಪೈಗಂಬರರು ಸ್ತ್ರೀ ಸ್ವಾತಂತ್ರ್ಯವನ್ನು ಕೊಡಿಸಿದರು. ಆದರೆ, ಇಂದಿಗೂ ಅದು ಜಾರಿಯಾಗಿಲ್ಲ.

ಜೈನ್ ಧರ್ಮದಲ್ಲಿಯೂ ಕೂಡ ಮಹಿಳೆಗೆ ಅನೇಕ ಕಟ್ಟುಪಾಡುಗಳನ್ನು ವಿಧಿಸಿರುವುದನ್ನು ಕಾಣುತ್ತೇವೆ. ಇಲ್ಲಿಯೂ ಮಹಿಳೆಯನ್ನು ಮನೆಯಿಂದಾಚೆ ಕಳುಹಿಸುವುದನ್ನು ಒಪ್ಪುವುದಿಲ್ಲ. ಅಲ್ಲದೇ, ವಸ್ತ್ರಸಂಹಿತೆ ಕೂಡ ಚಾಲ್ತಿಯಲ್ಲಿದೆ. ಪರಪುರುಷನ ಜೊತೆ ಮಾತಾಡುವುದನ್ನೂ ಕೂಡ ನಿರಾಕರಿಸಲಾಗುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಧರ್ಮದ ಹೆಸರಿನಲ್ಲಿ ಮಹಿಳೆಯು ಕೌಟುಂಬಿಕ ಸಂಘರ್ಷವನ್ನು ಎದುರಿಸಬೇಕಾಗುತ್ತದೆ.

ಕೋಷ್ಟಕ 6.1

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಎದುರಿಸುತ್ತಿರುವ ಕೌಟುಂಬಿಕ ಸಮಸ್ಯೆಗಳು

ಕಾರಣಗಳು	**ಹೌದು**		**ಇಲ್ಲ**		**ಈ ಪ್ರಶ್ನೆಗೆ ಮೌನ ವಹಿಸಿದವರು**	
ಹುಡುಗಿಯರ ನೆಲೆಯಿಂದ ವೃತ್ತಿ ಆಯ್ಕೆ : ಕುಟುಂಬದ ನೆಲೆಯಿಂದ ವೃತ್ತಿ ನಿರಾಕರಣೆ	132	82.5%	16	10%	12	7.5%
ಮದುವೆ ಮತ್ತು ವೃತ್ತಿ ನಿರ್ವಹಣೆಯ ಸಂಘರ್ಷ	98	61.25%	42	26.25%	20	12.5%
ಮದುವೆಯ ನಂತರ ಎದುರಿಸುವ ಸಂಘರ್ಷ	118	73.75%	12	7.5%	30	18.75%
ತಾಯ್ತನದ ಜವಾಬ್ದಾರಿ : ವೃತ್ತಿ ನಿರ್ವಹಣೆಯಲ್ಲಿ ಸಂಘರ್ಷ	132	82.5%	08	5%	20	12.5%
ಜಾತಿ ಮತ್ತು ಧಾರ್ಮಿಕ ಕಾರಣಗಳ ಸಂಘರ್ಷ	120	75%	16	10%	24	15%



ರೇಖಾಚಿತ್ರ ಕೋಷ್ಟಕ 6.1 ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರು ಎದುರಿಸುತ್ತಿರುವ ಕೌಟುಂಬಿಕ ಸಮಸ್ಯೆಗಳು

ಮೇಲಿನ ಕೋಷ್ಟಕ ಮತ್ತು ರೇಖಾಚಿತ್ರದಲ್ಲಿ ಸೂಚಿಸಿದಂತೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಕೌಟುಂಬಿಕವಾಗಿ ನಾನಾ ವಿಧದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳು ಅವರ ವೃತ್ತಿ ನಿರಾಕರಣೆಗೂ ಕಾರಣವಾಗುತ್ತಿವೆ. ಮುಖ್ಯವಾಗಿ ಕುಟುಂಬದ ಒತ್ತಡಗಳ ಕಾರಣವಾಗಿ ವೃತ್ತಿ ನಿರಾಕರಣೆ ಮಾಡುವ ಸಂಗತಿಯನ್ನು ಒಪ್ಪಿಕೊಳ್ಳುತ್ತಿರುವವರ ಪ್ರಮಾಣ ಶೇ.82.50ರಷ್ಟಿದ್ದರೆ, ಇದನ್ನು ಒಪ್ಪದೇ ಇರುವವರ ಪ್ರಮಾಣ ಶೇ.10ರಷ್ಟಿದೆ. ಹಾಗೆಯೇ ಈ ಪ್ರಶ್ನೆಗೆ ಯಾವುದೇ ಉತ್ತರವನ್ನು ಕೊಡದೇ ಇರುವವರ ಪ್ರಮಾಣ ಶೇ.7.5ರಷ್ಟಿದೆ.

ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ವಿವಾಹವಾಗಬೇಕಾದ ಸಂದರ್ಭದಲ್ಲಿ ಹಲವು ಸಂಘರ್ಷಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಸಮಸ್ಯೆಗಳನ್ನು ಎದುರಿಸಿದವರ ಪ್ರಮಾಣ ಶೇ.73.75ರಷ್ಟಿದ್ದರೆ, ಇದು ಸಮಸ್ಯೆಯೇ ಅಲ್ಲ ಎಂದು ಅಭಿಪ್ರಾಯಪಟ್ಟವರ ಪ್ರಮಾಣ ಶೇ.7.5ರಷ್ಟಿದ್ದಾರೆ. ಈ ಪ್ರಶ್ನೆಗೆ ಉತ್ತರಿಸದೇ ಮೌನವಾಗಿ ಇರುವವರ ಪ್ರಮಾಣ ಶೇ.18.75ರಷ್ಟಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಾಯ್ತನದ ಕಾರಣದಿಂದಾಗಿ ಸಮಸ್ಯೆಯನ್ನು ಎದುರಿಸಿದವರ ಪ್ರಮಾಣ ಶೇ.82.5ರಷ್ಟಿದ್ದರೆ, ಇದು



ಸಮಸ್ಯೆಯೇ ಅಲ್ಲ ಎಂಬುವವರ ಪ್ರಮಾಣ ಶೇ.5ರಷ್ಟಿದೆ. ಇದನ್ನು ಸಮರ್ಥಿಸದೇ ಅಥವಾ ನಿರಾಕರಿಸದೇ ತಟಸ್ಥ ಮನೋಭಾವನೆ ಹೊಂದಿದವರ ಪ್ರಮಾಣ ಶೇ.12.5ರಷ್ಟಿದೆ.

ಜಾತಿ ಮತ್ತು ಧರ್ಮಗಳ ಕಾರಣಕ್ಕಾಗಿ ವೃತ್ತಿಯಲ್ಲಿ ಸಂಘರ್ಷಗಳನ್ನು ಎದುರಿಸಿದವರ ಪ್ರಮಾಣ ಶೇ.75ರಷ್ಟಿದ್ದರೆ, ಇದು ಸಮಸ್ಯೆಯೇ ಅಲ್ಲವೆಂದು ಹೇಳುವವರ ಪ್ರಮಾಣ ಶೇ.10ರಷ್ಟಿದ್ದಾರೆ. ತಟಸ್ಥ ಮನೋಭಾವ ಹೊಂದಿದವರ ಪ್ರಮಾಣ ಶೇ.15ರಷ್ಟಿದೆ. ಹೀಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಬೇರೆ ಬೇರೆ ಕಾರಣಗಳಿಗಾಗಿ ಕುಟುಂಬದಲ್ಲಿ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಒಟ್ಟಾರೆಯಾಗಿ ಸಮಾಜದಲ್ಲಿ ಸ್ತ್ರೀಯರ ಮತ್ತು ಪುರುಷರ ನಡುವಿನ ಸಂಬಂಧಗಳು ತೋರಿಕೆಗೆ ಸಹಜವಾಗಿರುವಂತೆ ಕಂಡುಬಂದರೂ, ಆಂತರಿಕವಾಗಿ ಲಿಂಗರಾಜಕಾರಣದಿಂದ ಕೂಡಿದವುಗಳಾಗಿವೆ. ಪುರುಷಪ್ರಧಾನ ವ್ಯವಸ್ಥೆಯು ಪುರುಷಾಧಿಪತ್ಯವನ್ನು ಸೃಷ್ಟಿಸಿ ಅದನ್ನು ಕಾಪಾಡಿಕೊಳ್ಳಲು ಪುರುಷರನ್ನು ಪ್ರಧಾನರೆಂದು, ಮಹಿಳೆಯರನ್ನು ಅಧೀನರೆಂದು ನಿರ್ಧರಿಸಿಬಿಟ್ಟಿದೆ. ಜಗತ್ತಿನ ಎಲ್ಲ ಸಮುದಾಯಗಳಲ್ಲೂ ಮಹಿಳೆಯರು ಅಧೀನರಾಗಿಯೇ ಉಳಿದಿದ್ದಾರೆ. ಸಮಾಜದಲ್ಲಿ ಸ್ಥಾಪಿತ ಜ್ಞಾನವಲಯಗಳೆಲ್ಲವೂ ಪುರುಷ ನಿರ್ಮಿತವೇ ಆಗಿವೆ. ಹಾಗಾಗಿ ಈಗಾಗಲೇ ನಿರ್ಮಿಸಲ್ಪಟ್ಟ ಜ್ಞಾನವಲಯದಲ್ಲಿಯೇ ಮಹಿಳೆಯರು ಬದುಕಬೇಕಾದ ಅನಿವಾರ್ಯತೆಯನ್ನು ಹೊಂದಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಯು ಮಹಿಳೆಯರನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಹಲವಾರು ಆಚರಣಾತ್ಮಕ ವಿಧಿ ವಿಧಾನ, ಪದ್ಧತಿಗಳನ್ನು ಜಾರಿಗೆ ತಂದಿತು. ಇವುಗಳು ಮಹಿಳೆಯರ ಎಲ್ಲ ಬಗೆಯ ಸ್ವಾತಂತ್ರ್ಯವನ್ನು ಕಿತ್ತುಕೊಂಡವು. ಇದಕ್ಕೆ ಕಾರಣ ಲಿಂಗ ಅಸಮಾನತೆ. ಸಮಾಜದಲ್ಲಿನ ಲಿಂಗ ಅಸಮಾನತೆಯ ಕುರಿತಂತೆ ಚರ್ಚಿಸಬೇಕಾದರೆ ಮೊದಲು ಕುಟುಂಬದ ಹಂತದಿಂದಲೇ ಆರಂಭಿಸಬೇಕಾಗುತ್ತದೆ. ಏಕೆಂದರೆ ಮಹಿಳೆಯರ ಜೀವನದ ಎಲ್ಲ ಆಗುಹೋಗುಗಳಿಗೆ ಕುಟುಂಬವೇ ಕಾರಣ. ಹಾಗಾಗಿಯೇ ಮಹಿಳೆಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಮಾತನಾಡಿದರೂ, ಅದು ಕುಟುಂಬದಿಂದಲೇ ಆರಂಭವಾಗುತ್ತದೆ.

ವ್ಯವಸ್ಥೆಯಲ್ಲಿನ ಹಲವಾರು ರೂಢಿ, ಸಂಪ್ರದಾಯ, ಆಚರಣೆಗಳ ರೂಪದಲ್ಲಿ ಇಂದಿಗೂ ಮಾನವರಲ್ಲಿ ಹಾಸುಹೊಕ್ಕಾಗಿವೆ. ಇವುಗಳು ಅಸಮಾನ ನೆಲೆಗಳನ್ನು ಹೊಂದಿದ್ದು ಇದರಿಂದ ಹೊರಬರಲು ಪುರುಷಪ್ರಧಾನ ವ್ಯವಸ್ಥೆ ಪ್ರಯತ್ನಿಸುವುದಿಲ್ಲ. ಏಕೆಂದರೆ ಇವುಗಳು ಉದ್ದೇಶ ಪೂರ್ವಕವಾಗಿಯೇ ಜಾರಿಯಲ್ಲಿ ಇರುವಂಥವುಗಳಾಗಿವೆ. ಹಾಗಾಗಿ ಪುರುಷಪ್ರಧಾನ ವ್ಯವಸ್ಥೆ

ಇದನ್ನು ಹಾಗೆಯೇ ಮುಂದುವರೆಸಿಕೊಂಡು ನಡೆದಿದೆ. ಆದರೆ ಜಾರಿಯಲ್ಲಿರುವ ಆಚರಣೆಗಳು ಮಹಿಳೆಯರ ಮೇಲೆ ಹಲವಾರು ಕೆಟ್ಟ ಪರಿಣಾಮಗಳನ್ನು ಬೀರಿರುವುದು ಮತ್ತು ಬೀರುತ್ತಿರುವುದು ವಾಸ್ತವ. ಸಮಾಜದಲ್ಲಿನ ಮೂಢನಂಬಿಕೆಗಳು, ಅನಿಷ್ಟ ಪದ್ಧತಿಗಳು ಮಹಿಳೆಯರ ಮನೋಸ್ಥೈರ್ಯವನ್ನು ಧೃತಿಗೆಡಿಸಿವೆ. ಹಾಗಾಗಿಯೇ ಇವುಗಳು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರ ಮೇಲೆ ಕೆಟ್ಟ ಪರಿಣಾಮವನ್ನು ಬೀರಿವೆ. ಇದರಿಂದ ಅವರು ವೃತ್ತಿನಿರಾಕರಣೆಗೆ ಒಳಗಾಗಿರುವುದನ್ನು ಕಾಣಬಹುದು.

ಅಧ್ಯಾಯ : 7
ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಆರ್ಥಿಕ ಸಮಸ್ಯೆಗಳು

7.1 ಮಹಿಳೆ : ದುಡಿಮೆ ಮತ್ತು ಸಂಬಳ

7.2 ಅಸ್ಮಿತೆ ವೃತ್ತಿ ಬಯಕೆ

ಅಧ್ಯಾಯ : 7

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಆರ್ಥಿಕ ಸಮಸ್ಯೆಗಳು

ಗಂಡು ಹೆಣ್ಣಿನ ಸಾಮಾಜಿಕ, ಕೌಟುಂಬಿಕ ಸ್ಥಾನ ಮಾನಗಳಿಗೂ ಮತ್ತು ಆರ್ಥಿಕ ಸಂಸ್ಥೆಗೂ ನಿಕಟ ಸಂಬಂಧವಿದೆ. ಹಾಗಾಗಿ ಆರ್ಥಿಕ ಸ್ವಾವಲಂಬನೆಯು ಸಾಮಾಜಿಕ ಹಾಗೂ ಕೌಟುಂಬಿಕ ವಲಯದಲ್ಲಿ ಹಲವು ವಿಷಯಗಳತ್ತ ಮಹಿಳೆಯು ಧ್ವನಿ ಎತ್ತಲು ಸಹಾಯಕಾರಿಯಾಗಲಿದೆ. ಲಿಂಗ ಸಮಾನತೆ ಅಂದರೆ ಅದು ಪುರುಷರಿಗೆ ಸರಿಸಮವಾಗುವುದು ಎಂಬ ವ್ಯಾಖ್ಯಾನವಿತ್ತು. ಈ ಹಳೆಯ ಕಾಲದ ವ್ಯಾಖ್ಯಾನವನ್ನು ಇಂದು ಸಾರಾಸಗಟಾಗಿ ತಳ್ಳಿ ಹಾಕುವಂತೆ ಮಾಡಿದ್ದು, ಆರ್ಥಿಕ ಸಬಲತೆ. ತಮ್ಮ ಬದುಕನ್ನು ತಾವೇ ಬಯಸಿದಂತೆ ಕಟ್ಟಿಕೊಳ್ಳುವ ಅಗತ್ಯವಾದ ಸಾಮರ್ಥ್ಯವು ಆರ್ಥಿಕ ಕಾರಣದಿಂದಾಗಿ ಬರುತ್ತದೆ ಅನ್ನುವುದು ಸಾಬೀತಾಗಿದೆ. ಮಹಿಳೆಯರ ಅಭಿವೃದ್ಧಿಯು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಬಲೀಕರಣದಿಂದ ಮಾತ್ರ ಸಾಧ್ಯ ಎಂಬುದನ್ನು ಈಗಾಗಲೇ ಅನೇಕ ಅಧ್ಯಯನಗಳಿಂದ ರುಜುವಾತಾಗಿದೆ. 1974ರ ಸಮಾನತೆಯೆಡೆಗೆ ವರದಿ, 2001ರ ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನಾ ಸಮಿತಿಯ ಮಧ್ಯಂತರ ವರದಿ, 1976ರ ರಾಷ್ಟ್ರೀಯ ಮಹಿಳಾ ಕ್ರಿಯಾ ಯೋಜನೆ ವರದಿಗಳು ಕೂಡ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಆರ್ಥಿಕ ಕಾರಣಗಳನ್ನು ಕೊಟ್ಟಿದೆ. ಆದರೆ, ಆರ್ಥಿಕವಾಗಿ ಇನ್ನೂ ಮಹಿಳೆಯರು ಹಿಂದುಳಿದ ಕಾರಣದಿಂದಾಗಿ ಅವರ ಅಭಿವೃದ್ಧಿ ಸಾಧ್ಯವಾಗಿಲ್ಲ ಎಂದೇ ಹೇಳುತ್ತವೆ ಈ ಎಲ್ಲ ವರದಿಗಳು.

1990ರಲ್ಲಿ ಭಾರತದಲ್ಲಿ ಔದ್ಯೋಗಿಕ ವಲಯದಲ್ಲಿ ಶೇ 35ರಷ್ಟಿದ್ದ ಮಹಿಳೆಯರ ಪಾಲ್ಗೊಳ್ಳುವಿಕೆ 2014ರಲ್ಲಿ ಶೇ 27ರಷ್ಟು ಕುಸಿದಿದೆ ಎಂದರೆ ಅದು ಆತಂಕದ ಸಂಗತಿ. ಏಕೆಂದರೆ 10ವರ್ಷಕ್ಕೂ ಹೆಚ್ಚಿನ ಶಾಲಾ ಶಿಕ್ಷಣ ಪೂರೈಸಿದ ಹೆಣ್ಣು ಮಕ್ಕಳ ಪ್ರಮಾಣ 2005ರಲ್ಲಿ ಶೇ 22.3 ಇದ್ದದ್ದು 2015ರಲ್ಲಿ ಶೇ 35.7ಕ್ಕೆ ಏರಿದೆ. ಹೀಗಿದ್ದೂ ಇವರೆಲ್ಲ ಔದ್ಯೋಗಿಕ ಕ್ಷೇತ್ರದಲ್ಲಿ

ಕಾಣೆಯಾಗಿದ್ದಾರೆ ಎಂಬುದು ನಿರ್ಲಕ್ಷಿಸುವ ಸಂಗತಿಯಲ್ಲ. ಈಗಿರುವ ಅಂಕಿಅಂಶಗಳ ಪ್ರಕಾರ, ಉದ್ಯೋಗ ಕ್ಷೇತ್ರದಲ್ಲಿ ಗ್ರಾಮೀಣ ವಲಯದಲ್ಲಿ ಶೇ 24ರಷ್ಟು ಹಾಗೂ ನಗರ ಪ್ರದೇಶದಲ್ಲಿ ಶೇ 14.7ರಷ್ಟು ಮಾತ್ರ ಮಹಿಳೆಯರ ಪಾಲ್ಗೊಳ್ಳುವಿಕೆ ಇದೆ. ಮುಖ್ಯವಾಗಿ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ. ಇದಕ್ಕೆ ವೇತನ ತಾರತಮ್ಯ, ಸರಿಯಾದ ವೇಳೆಗೆ ವೇತನ ಸಿಗದೇ ಇರುವುದು, ಸಾಲಗಳ ಹೊರೆ ಹೆಚ್ಚಾಗಿರುವುದು ಇವುಗಳು ಮುಖ್ಯ ಕಾರಣಗಳಾಗಿವೆ. ಹಾಗಾಗಿ ಮಹಿಳೆಯರು ಇಂದಿಗೂ ಆರ್ಥಿಕವಾಗಿ ಸುಭದ್ರ ಸ್ಥಿತಿಯಲ್ಲಿ ಬರಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಯಾವ ಯಾವ ಕಾರಣಕ್ಕಾಗಿ ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮಹಿಳೆ : ದುಡಿಮೆ ಮತ್ತು ಸಂಬಳ :

70ರ ದಶಕದಲ್ಲಿ ಸ್ತ್ರೀವಾದದ ಅಲೆ ಬೀಸತೊಡಗಿದಾಗ ಆರ್ಥಿಕ ಸ್ವಾತಂತ್ರ್ಯವೇ ಮಹಿಳಾ ಸಮಾನತೆಯ, ಸಬಲೀಕರಣದ ಪ್ರಮುಖ ಅಸ್ತ್ರ ಎಂದು ಬಿಂಬಿಸಲಾಯಿತು. ಆದರೆ ಇತ್ತೀಚಿನ ನಮ್ಮಲ್ಲಿನ ಜನಗಣತಿಯ ಲೆಕ್ಕಾಚಾರ ಮಹಿಳೆಯರ ಆರ್ಥಿಕತೆಯನ್ನು ಅಥವಾ ಉತ್ಪಾದಕತೆಯನ್ನು ಅನುತ್ಪಾದಕ ಎಂದಿರುವುದು ಕಂಡುಬರುತ್ತದೆ. ಆದರೆ ಮಹಿಳೆಯರು ಕುಟುಂಬದಲ್ಲಿನ ಕೆಲಸಗಳನ್ನು ಉತ್ಪಾದಕ ಕೆಲಸಗಳು ಎಂದು ಗುರುತಿಸಬೇಕೆಂದು ಹಲವು ಹೋರಾಟಗಳು ನಡೆಯುತ್ತಿರುವುದು ಕಂಡುಬರುತ್ತದೆ. ಆದರೆ ಇದು ಇನ್ನೂ ನಿಖರವಾಗಿ ಪರಿಗಣಿತಗೊಂಡಿಲ್ಲ. ಹಾಗಾಗಿಯೇ ಮಹಿಳೆಯರು ಮಾಡುವ ಕೆಲಸಗಳನ್ನು ಅನುತ್ಪಾದಕರೆಯ ನೆಲೆಯಲ್ಲಿ ನೋಡಲಾಗುತ್ತಿದೆ.

ಇಂದು ಮಹಿಳೆಯರು ಮೂರು ಬಗೆಯ ದುಡಿಮೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಒಂದು, ಸಂತಾನೋತ್ಪತ್ತಿ ದುಡಿಮೆಯಾದರೆ, ಎರಡನೆಯದ್ದು ಸಂಗೋಪನಾ ದುಡಿಮೆ. ಮತ್ತೊಂದು ಉತ್ಪಾದನಾ ದುಡಿಮೆ. ಮೊದಲೆರಡರ ದುಡಿಮೆಗೆ ಯಾವುದೇ ಸಂಬಳವಿಲ್ಲ. ಇವು ಲಿಂಗ ನಿರ್ದಿಷ್ಟ ಕೌಟುಂಬಿಕ ದುಡಿಮೆಗಳಾಗಿದ್ದು, ಮಹಿಳೆಯರು ನಿರ್ವಹಿಸಬೇಕಾದ ದುಡಿಮೆಗಳಾಗಿವೆ. ಈ ಕಾರಣದಿಂದಾಗಿಯೇ ಉತ್ಪಾದನಾ ದುಡಿಮೆಯು ಮಹಿಳೆಯರಿಗೆ ಪೂರಕವಾದುದೆಂದು, ಅದು ಬಿಡುವಿನ ವೇಳೆಯಲ್ಲಿ ನಡೆಸುವ ಶ್ರಮವೆಂದು ಪರಿಗಣಿಸಲಾಗಿದೆ. ಹಾಗಾಗಿ ವರ್ಲ್ಡ್ ಇಕನಾಮಿಕ್ ಫೋರಂ ನಡೆಸಿದ ಗ್ಲೋಬಲ್ ಜಂಡರ್ ಗ್ಯಾಪ್ ರಿಪೋರ್ಟ್(2016) ಪ್ರಕಾರ,

ಮಹಿಳೆಯರ ಆರ್ಥಿಕ ಸಹಭಾಗಿತ್ವ ಮತ್ತು ಅವಕಾಶಗಳ ದೃಷ್ಟಿಯಿಂದ ವಿಶ್ವದ 144 ದೇಶಗಳಲ್ಲಿ ಭಾರತ 136ನೇ ಸ್ಥಾನದಲ್ಲಿದೆ.

ಭಾರತದ ವಿವಿಧ ಕ್ಷೇತ್ರಗಳಲ್ಲಿರುವ ಲಿಂಗ ತಾರತಮ್ಯ ವೇತನದಲ್ಲೂ ಇದೆ. ಪುರುಷರಿಗೆ ಹೋಲಿಸಿದರೆ ಉದ್ಯಮ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವ ಮಹಿಳೆಯರು ಶೇ25ರಷ್ಟು ಕಡಿಮೆ ವೇತನ ಪಡೆಯುತ್ತಿದ್ದಾರೆ ಅನ್ನುತ್ತಿದೆ ಮಾನ್‌ಸ್ಟರ್ ನಡೆಸಿರುವ ಸಮೀಕ್ಷೆ. ಇತ್ತೀಚೆಗೆ ವೇತನ ಸಮಾನತೆಯ ಬಗ್ಗೆ ಅಂತಾರಾಷ್ಟ್ರೀಯ ವ್ಯಾಪಾರ ಸಂಘಟನೆಯ ಒಕ್ಕೂಟಗಳು ಪ್ರಕಟಿಸಿದ ವರದಿಯಲ್ಲೂ ವಿಶ್ವದಲ್ಲಿ ಮಹಿಳಾ ಉದ್ಯೋಗಿಗಳು ಪುರುಷ ಉದ್ಯೋಗಿಗಳಿಗಿಂತ 16 ಪ್ರತಿಶತ ಕಡಿಮೆ ವೇತನ ಗಳಿಸುತ್ತಿದ್ದಾರೆ. ಇದು ಮಾಧ್ಯಮದಲ್ಲಿ ದುಡಿಯುವ ಮಹಿಳೆಯನ್ನೂ ಬಿಟ್ಟಿಲ್ಲ. ಇಂಟರ್‌ನ್ಯಾಷನಲ್ ವಿಮೆನ್ಸ್ ಮೀಡಿಯಾ ಫೌಂಡೇಷನ್ ಎಂಬ ಸಂಸ್ಥೆಯು ಭಾರತದಲ್ಲಿ ಮಹಿಳಾ ಪತ್ರಕರ್ತರ ಸಮೀಕ್ಷೆ ನಡೆಸಿ ನೀಡಿದ ವರದಿಯ ಪ್ರಕಾರ, ಬಡ್ತಿ ನೀಡುವಲ್ಲಿ ಮಹಿಳೆಯರಿಗೆ ತಾರತಮ್ಯವೆಸಗಲಾಗಿದೆ ಎಂದು ಶೇಕಡಾ 20.5ರಷ್ಟು ಮಂದಿ ಹೇಳಿಕೊಂಡಿದ್ದಾರೆ. ಶೇಕಡಾ 8.4ರಷ್ಟು ಮಹಿಳೆಯರು ಬಡ್ತಿಯಲ್ಲಿಯ ತಾರತಮ್ಯ ಕಾರಣಕ್ಕಾಗಿ ಮಾಧ್ಯಮ ಸಂಸ್ಥೆಗಳನ್ನು ತಾವು ತೊರೆಯಬೇಕಾಯಿತು ಅಂದಿದ್ದಾರೆ.

ವೇತನ ತಾರತಮ್ಯ ಮತ್ತು ನಿಯಮಿತವಾಗಿ ಸಂಬಳ ಬಾರದೇ ಇರುವುದರಿಂದ ಮಹಿಳೆಯರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತಹ ಹಲವು ಸಮಸ್ಯೆಗಳನ್ನು ವಿದ್ಯುನ್ಮಾನ ಮಾಧ್ಯಮದಲ್ಲಿನ ಮಹಿಳಾ ಉದ್ಯೋಗಿಗಳು ಎದುರಿಸುತ್ತಿದ್ದಾರೆ. ಮಹಿಳೆಯರ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ಅವಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ. ಸಾಮಾಜಿಕ ನ್ಯಾಯ ಮತ್ತು ಶೋಷಣೆಯ ವಿರುದ್ಧ ಹೋರಾಟದಲ್ಲಿ ಪಾಲ್ಗೊಳ್ಳುತ್ತಾಳೆ. ಆದರೆ, ಇಂದು ಅದು ಸಾಧ್ಯವಾಗುತ್ತಿಲ್ಲ. ಕಡಿಮೆ ವೇತನಕ್ಕೆ ತಮ್ಮ ಶ್ರಮವನ್ನು ಮಾರುತ್ತಿರುವ ಮಹಿಳೆಯರು ಸಂಬಳ ತಾರತಮ್ಯದ ಬಗ್ಗೆ ಹೋರಾಟ ಮಾಡುತ್ತಲೇ ಬರುತ್ತಿದ್ದಾರೆ. ಆದರೂ, ಅವಳಿಗೆ ಈವರೆಗೂ ನ್ಯಾಯ ಸಿಕ್ಕಿಲ್ಲ. ಈ ಕಾರಣದಿಂದಾಗಿ ಅವಳ ಸಂಪಾದನೆಯಿಂದಾಗಿ ಮಕ್ಕಳ ಬೇಕು ಬೇಡಿಕೆಗಳು ಸಲೀಸಾಗಿ ನೀಗುತ್ತಿಲ್ಲ. ಕುಟುಂಬದ ಉನ್ನತಿಗೆ ಕಾರಣವಾಗುತ್ತಿದ್ದ ಅವಳ ದುಡಿಮೆಯನ್ನೂ ಈಗ ಅನುಮಾನದಿಂದ ನೋಡುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಕೌಟುಂಬಿಕ ವಲಯವು ಅವಳ ಅಭಿಪ್ರಾಯಕ್ಕೂ ನೀಡುತ್ತಿದ್ದ ಅಲ್ಪಸ್ವಲ್ಪ ಮಾನ್ಯತೆ ಕೂಡ ಕಡಿಮೆ ಆಗುತ್ತಿದೆ. ಸಂಬಳವೇ ಬಾರದೇ ಇದ್ದರೆ, ಅವಳ ಅಭಿಪ್ರಾಯಕ್ಕೆ ಯಾವ ಮಾನ್ಯತೆಯೂ ಇಲ್ಲದಾಗುತ್ತಿದೆ. ಸಂಬಳದ ಕಾರಣದಿಂದಾಗಿಯೇ ಅವಳಿಗೆ ಆರ್ಥಿಕ ಸ್ವಾತಂತ್ರ್ಯ,

ಗೌರವ ಮತ್ತು ಪ್ರತಿಷ್ಠೆ ಸಿಗುತ್ತಿತ್ತು. ಆರ್ಥಿಕ ಸ್ವಾವಲಂಬನೆಯು ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತಿತ್ತು. ಸಂಬಳವೇ ಸರಿಯಾಗಿ ಸಿಗದೇ ಇರುವುದರಿಂದಾಗಿ ಇವೆಲ್ಲವನ್ನೂ ನಿರಾಕರಿಸುವಂತಹ ವಾತಾವರಣ ಸೃಷ್ಟಿಯಾಗಿದೆ. ಆರ್ಥಿಕವಾಗಿ ಮಹಿಳೆ ದುರ್ಬಲಳಾಗುತ್ತಿದ್ದಂತೆಯೇ ಅವಳ ಆರೋಗ್ಯದ ಮೇಲೂ ಅದು ಪರಿಣಾಮ ಬೀರುತ್ತದೆ. ಮಾನಸಿಕವಾಗಿ ಕುಗ್ಗಿ ಹೋಗಬಹುದು ಮತ್ತು ಅವಳಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಕುಟುಂಬ ನಿರಾಕರಿಸಬಹುದು. ಹಾಗಾಗಿ ಆರ್ಥಿಕ ಸಮಸ್ಯೆಗಳು ಮಹಿಳೆಯರ ಉನ್ನತಿಗೆ ಭಾರೀ ಹೊಡೆತ ನೀಡುತ್ತಿವೆ.

ಇಂತಹ ಸಮಸ್ಯೆಗಳಿಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರೂ ಹೊರತಾಗಿಲ್ಲ. ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ಮೇಲ್ನೋಟಕ್ಕೆ ಅವರಿಗೆ ಒಂದಿಷ್ಟು ಹಣ ಸಂಪಾದನೆಯಾದರೂ ಆ ಆದಾಯದಿಂದ ಬದುಕು ನಡೆಸಲು ಸಾಧ್ಯವಿಲ್ಲ ಅನ್ನುವಂತಾಗಿದೆ. ಕಡಿಮೆ ಆದಾಯಕ್ಕೆ ತಕ್ಕಂತೆ ಬದುಕನ್ನು ಹೊಂದಿಸಿಕೊಳ್ಳಲು ಪ್ರಯತ್ನಿಸಿದರೂ, ವಿದ್ಯುನ್ಮಾನ ಮಾಧ್ಯಮದ ಸಂರಚನೆಯ ಸ್ವರೂಪವೇ ಅವರ ದುಡಿಮೆಯನ್ನು ಗ್ಲಾಮರ್ ಲೋಕಕ್ಕೆ ವೆಚ್ಚ ಮಾಡುವುದಕ್ಕೆ ಮತ್ತೆ ಆದಾಯ ಕುಸಿತ ಕಾಣಬೇಕಾಗಿದೆ. ಈ ಕುಸಿತವು ಅವಳನ್ನು ಅಧೈರ್ಯಳನ್ನಾಗಿ ಮಾಡಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯನ್ನೂ ಆರ್ಥಿಕ ಸಮಸ್ಯೆಗಳು ಬಿಟ್ಟಿಲ್ಲ. ಸಂಬಳದ ವಿಷಯದಲ್ಲಿ ಅವಳು ಹೈರಾಣಾಗಿದ್ದಾಳೆ. ಸಿಗುವ ಕಡಿಮೆ ಸಂಬಳದಲ್ಲಿ ಬದುಕನ್ನು ಸರಿದೂಗಿಸಲು ಒಂದು ಕಡೆ ಪ್ರಯತ್ನ ಪಡುತ್ತಿದ್ದರೆ, ಮತ್ತೊಂದು ಕಡೆ ಸಂಬಳವೇ ಸಿಗದೆ ಪರದಾಡುತ್ತಿದ್ದಾಳೆ. ಕೆಲವು ಮಹಿಳೆಯರು ಸರಿಯಾದ ವೇಳೆಗೆ ವೇತನ ಸಿಗದೇ ಇರುವ ಕಾರಣಕ್ಕಾಗಿ ವೃತ್ತಿಯನ್ನು ತೊರೆಯುವಂತಹ ನಿರ್ಧಾರಕ್ಕೂ ಬರುತ್ತಿದ್ದಾರೆ. ಅಲ್ಲದೇ, ಬೇರೆ ಕೆಲಸವನ್ನು ಮಾಡುವುದಕ್ಕೆ ಆಗದೇ ವಾಪಸ್ಸು ಮನೆಗೆ ಹೋಗಿರುವ ಪ್ರಕರಣಗಳು ಕಂಡುಬಂದಿವೆ. ಆರ್ಥಿಕತೆಯ ಕಾರಣದಿಂದಾಗಿಯೇ ಮಹಿಳಾ ಉದ್ಯೋಗಿಗಳು ಮಾನಸಿಕ ಕಿರುಕುಳವನ್ನೂ ಅನುಭವಿಸುತ್ತಿದ್ದಾರೆ. ಇದು ಅವರ ಆರೋಗ್ಯದ ಮೇಲೂ ಪರಿಣಾಮ ಬೀರಿದೆ. ಈ ಎಲ್ಲಾ ಅಂಶಗಳನ್ನು ಅಧ್ಯಯನ ಕ್ಷೇತ್ರವ್ಯಾಪ್ತಿಯಲ್ಲಿ ಕಂಡುಕೊಳ್ಳಲಾಗಿದೆ. ಹಾಗಾಗಿ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಪ್ರಕರಣಗಳನ್ನು ಆಧರಿಸಿ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಕತೃತ್ವದ ಪ್ರಶ್ನೆ : ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಹಲವು ಬಗೆಯಲ್ಲಿ ಕೆಲಸದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ಅವರು ಮಾಡುವಂತಹ

ಕೆಲಸದ ಸ್ಥಳದಲ್ಲಿ ಬಹು ಮುಖ್ಯವಾಗಿ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಈ ಆರ್ಥಿಕತೆಯ ಸಮಸ್ಯೆ ಅವರ ಕೆಲಸಕ್ಕೆ ಅಡ್ಡಿಯನ್ನುಂಟು ಮಾಡಿರುವುದಂತೂ ಸತ್ಯದ ಸಂಗತಿ. ಹಾಗಾಗಿಯೇ ಈ ಮಹಿಳೆಯರಿಗೆ ಈ ಕತೃತ್ವದ ಪ್ರಶ್ನೆ ಬಹುವಾಗಿ ಕಾಡತೊಡಗಿದೆ. ಒಂದು ಅಧ್ಯಯನದ ಪ್ರಕಾರ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರಲ್ಲಿ ಶೇ.10ರಷ್ಟು ಮಹಿಳೆಯರು ಸುಮಾರು ನಲವತ್ತು ಸಾವಿರಕ್ಕೊ ಅಧಿಕ ವೇತನವನ್ನು ಪಡೆಯುತ್ತಿದ್ದಾರೆ. ಹಾಗೆಯೇ ಶೇ50ರಷ್ಟು ಪ್ರಮಾಣದ ಮಹಿಳೆಯರು 15ರಿಂದ 20ಸಾವಿರ ರೂಪಾಯಿಗಳ ಸಂಬಳವನ್ನು ಪಡೆಯುತ್ತಿದ್ದಾರೆ ಎಂದು ಹೇಳುತ್ತದೆ. ಅಂದರೆ ಶೇಕಡಾ 50ರಷ್ಟು ಮಹಿಳೆಯರು ಪ್ರತೀ ತಿಂಗಳು ಅವರಿಗೆ ಲಭ್ಯವಾಗುವಂತಹ ವೇತನದ ಮೇಲೆಯೇ ಅವರ ಜೀವನ ನಿರ್ಧಾರವಾಗಿರುತ್ತದೆ. ಬೆಂಗಳೂರಿನಂತಹ ನಗರಗಳಲ್ಲಿ ಈ ಮೊತ್ತದ ಸಂಬಳ ತುಂಬಾನೇ ಕಡಿಮೆ ಎಂದು ಹೇಳಬಹುದು. ಏಕೆಂದರೆ ಬೆಂಗಳೂರಿನಂತಹ ನಗರ ಪ್ರದೇಶದಲ್ಲಿ ಜೀವನ ನಿರ್ವಹಣೆ ತುಂಬಾ ವೆಚ್ಚದಾಯಕವಾಗಿರುತ್ತದೆ. ಹಾಗಾಗಿ ಅದನ್ನು ಸರಿದೂಗಿಸಿಕೊಳ್ಳುವಂತಹ ವೇತನ ದೊರೆಯುವಂತಾಗಬೇಕು. ಆದರೆ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ವೇತನ ತುಂಬಾ ಕಡಿಮೆ ಇರುವ ಕಾರಣಕ್ಕಾಗಿ ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಈ ವೆಚ್ಚಗಳನ್ನು ಭರಿಸಲಾಗದೇ ಸಾಲದ ಸುಳಿಯಲ್ಲಿ ಸಿಲುಕಿಕೊಂಡ ಮತ್ತು ಉದ್ಯೋಗವನ್ನೇ ಬಿಡುವಂತಹ ಮಟ್ಟಕ್ಕೆ ಆಲೋಚಿಸುವ ಮಟ್ಟಕ್ಕೆ ಹೋಗುತ್ತಿರುವುದು ಕಂಡುಬರುತ್ತದೆ. ಈ ಬಗೆಯ ಕತೃತ್ವದ ಸಮಸ್ಯೆಯನ್ನು ಎದುರಿಸುತ್ತಿರುವ ಮಹಿಳಾ ಪ್ರಕರಣಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿವೆ. ಇವುಗಳನ್ನು ಅವರ ಮಾತಿನಲ್ಲಿಯೇ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಖಾಸಗಿ ವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಪ್ರಗತಿ ಅವರು ತಾವು ಕೆಲಸ ಮಾಡುತ್ತಿರುವ ಸುದ್ದಿವಾಹಿನಿಯಲ್ಲಿ ಯಾವ ಬಗೆಯ ಆರ್ಥಿಕ ಸಮಸ್ಯೆಗಳನ್ನು ಎದುರಿಸಿದ್ದಾರೆ ಎಂಬುದನ್ನು ಅವರ ಮಾತಿನಲ್ಲಿಯೇ ಹೇಳುವುದಾದರೆ "ಸದ್ಯ ನಾನೊಂದು ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಸಂಸ್ಥೆ ಪ್ರತಿ ತಿಂಗಳು ಸರಿಯಾಗಿ ಸಂಬಳವನ್ನು ಕೊಡುವುದಿಲ್ಲ. ಈಗ ನೋಡಿ ನಾಲ್ಕು ತಿಂಗಳಿಂದ ನಮಗೆ ಸಂಬಳ ಆಗಿಲ್ಲ. ಈ ಕುರಿತು ನಾವು ಮುಖ್ಯಸ್ಥರ ಗಮನಕ್ಕೂ ತಂದಿದ್ದೇವೆ. ಅವರು ಬರೀ ಆಶ್ವಾಸನೆ ಕೊಡ್ತಾರೆ. ಮತ್ತೆ ಮೋಸ ಮಾಡುವುದಿಲ್ಲ ತಡವಾದರೂ ಸಂಬಳ ಕೊಡ್ತೀವಿ ಅಂತ ಹೇಳುತ್ತಿದ್ದಾರೆ. ಆದರೆ, ಬೆಂಗಳೂರಿನಂತಹ

ನಗರಗಳಲ್ಲಿ ಪ್ರತಿ ತಿಂಗಳು ಸಂಬಳವನ್ನು ತಗೆದುಕೊಳ್ಳುವವರೇ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಅಂಥದ್ದರಲ್ಲಿ ನಾನು ನಾಲ್ಕು ತಿಂಗಳು ಸಂಬಳವಿಲ್ಲದೇ ಇರುವುದು ತುಂಬಾನೇ ಕಷ್ಟದ ಸಂಗತಿ. ಯಾಕಾಗಿಯಾದ್ರು ಈ ಕೆಲಸಗಳನ್ನು ಮಾಡುತ್ತಿದ್ದೇನೆಯೋ ಅಂತ ಅನ್ನಿಸಿಬಿಡುತ್ತೆ. ಸಂಸ್ಥೆಯವರು ನಮಗೆ ಮೋಸ ಮಾಡುವುದಿಲ್ಲ ಎಂಬ ನಂಬಿಕೆ ಇದೆ. ಅದೇ ನಂಬಿಕೆಯಲ್ಲಿಯೇ ನಾವು ಕೂಡ ಆ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ. ಆದ್ರೆ ಬರೀ ನಂಬಿಕೆಗಳಿಂದ ಹೊಟ್ಟೆ ತುಂಬುವುದಿಲ್ಲ. ಇದು ದೊಡ್ಡ ದುರಂತ. ನನಗೆ ಬರುವ ಸಂಬಳದಲ್ಲಿ ನಾನು ನನ್ನ ತಿಂಗಳ ಖರ್ಚನ್ನು ನೋಡಿಕೊಳ್ಳಬೇಕು ಮತ್ತು ಮನಗೆ ಕಳುಹಿಸಬೇಕು. ಇಂತಹ ಪರಿಸ್ಥಿತಿಯಲ್ಲಿ ನಾನಿದ್ದೇನೆ. ನಾಲ್ಕು ತಿಂಗಳುಗಳ ಕಾಲ ಸಂಬಳ ಬಾರದೇ ಇದ್ದಾಗ ಅನಿವಾರ್ಯವಾಗಿ ನಮ್ಮ ಸ್ನೇಹಿತರಲ್ಲಿ ಸಾಲ ಮಾಡಬೇಕು. ಇದೂ ಕೂಡ ಆಗಿದೆ. ನನ್ನ ಪರಿಸ್ಥಿತಿಯ ಬಗ್ಗೆ ಸ್ನೇಹಿತರಿಗೂ ಗೊತ್ತಿರುವುದರಿಂದ ಅವರು ಸಹಾಯ ಮಾಡಿದ್ದಾರೆ. ಆದರೆ ಇದು ಎಷ್ಟು ದಿನಗಳ ಕಾಲ ಹೀಗೆ ಸಾಲ ಮಾಡಿಕೊಂಡು ಇರಬೇಕು? ಈ ವಿಷಯ ನಮ್ಮ ಮನೆಯಲ್ಲಿ ಗೊತ್ತಾಗಿ ಬಿಡ್ತು. ಆವಾಗಿನಿಂದಲೂ ಮನೆಯಿಂದ ಕೆಲಸ ಬಿಡಲು ಒತ್ತಡಗಳು ಬರುತ್ತಲೇ ಇವೆ. ನಮ್ಮ ಅಪ್ಪ ತುಂಬಾ ಸ್ಟ್ರಾಂಗಾಗಿ ನೀನು ಕೆಲಸ ಮಾಡೋ ಸಂಸ್ಥೆಯವರು ಸರಿಯಾಗಿ ಪ್ರತೀ ತಿಂಗಳು ಸಂಬಳ ಕೊಡದೇ ಇದ್ದರೆ ಹೇಗೆ? ಅದು ಸರಿಯಾಗಿ ಬರ್ಲಿಲ್ಲ ಅಂದ್ರೆ ಊಟ ಹೇಗೆ ಮಾಡ್ಕೊತ್ತಿದ್ದೀಯೋ ಏನೋ? ನಿನ್ನ ಆರೋಗ್ಯ ಹೇಗಿದೆಯೋ ಏನೋ? ನೀನು ನಿನ್ನ ಆರೋಗ್ಯವನ್ನೂ ಕೆಡಿಸಿಕೊಳ್ತಿದಿಯಾ ಅಂತ ಅನ್ನಿಸ್ತಿದೆ. ಅಂತಹ ಕೆಲಸ ಮಾಡಿ ಅವ್ರಿಗೆ ದುಡುದು ಹಾಕೋದಕ್ಕಿಂತ ಆ ಕೆಲ್ಸ ಬಿಟ್ಟು, ಸುಮ್ನೆ ಮನಿಗೆ ಬಂದು ಬಿಡು. ಯಾವುದಾದ್ರೂ ಒಳ್ಳೆ ಹುಡುಗನ್ನ ನೋಡಿ ಮದುವೆ ಮಾಡ್ತೀವಿ. ನೀನು ಆರಾಮಾಗಿ ಗಂಡನ ಮನೆಯಲಿ ಇರಬಹುದು. ಮತ್ತೆ ನಮಗೂ ಜವಾಬ್ದಾರಿ ಬೇಗ ಕಳ್ಚಿದಂಗಾಗತ್ತೈತಿ ಎಂದು ಹೇಳಿಬಿಟ್ಟರು. ನನಗೆ ಗುಡ್ಡಾನೇ ತಲೆಮೇಲೆ ಬಿದ್ದಂಗಾತು. ಯಾಕೆಂದ್ರೆ ನಾನು ಸಮಾಜದಲ್ಲಿ ಏನಾದರೂ ಸಾಧಿಸಬೇಕು ಅಂತ ಛಲ ಇಟ್ಟುಕೊಂಡು ಈ ಕ್ಷೇತ್ರಕ್ಕೆ ಬಂದಿದ್ದೆ. ಅದಕ್ಕೆ ಅಪ್ಪನಿಗೆ ಸಮಾಧಾನ ಹೇಳಿ ಇಲ್ಲೇ ಕೆಲಸ ಮಾಡುತ್ತಿದ್ದೇನೆ. ಆದ್ರೆ ಅದು ಈ ಎಲ್ಲಾ ಕಾರಣಗಳಿಂದ ಸಾಧ್ಯವಾಗುತ್ತಿಲ್ಲವಲ್ಲಾ ಅನ್ನೋ ಕೊರಗು ಈವತ್ತಿಗೂ ಇದೆ. ಸದ್ಯಕ್ಕೆ ಏನೋ ಮ್ಯಾನೇಜ್ ಮಾಡುತ್ತಿದ್ದೇನೆ. ಮುಂದೆ ಏನಾಗುತ್ತದೋ ಗೊತ್ತಿಲ್ಲ.' ಎಂದು ಹೇಳಿದರು.

ಮತ್ತೊಂದು ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡುತ್ತಿರುವ ಅಮೃತಾ ತಮ್ಮ ಆರ್ಥಿಕ ಸಂಕಟಗಳನ್ನು ಹೇಳಿಕೊಂಡಿದ್ದು ಹೀಗೆ, "ನಮ್ಮದು ಕೆಳ ಮಧ್ಯಮ ವರ್ಗದ ಕುಟುಂಬ. ನನ್ನ

ತಾಯಿ ಮತ್ತು ನನ್ನ ತಂಗಿಯ ಜವಾಬ್ದಾರಿ ಕೂಡ ನನ್ನ ಮೇಲಿದೆ. ಅಲ್ಲದೇ, ನನಗೂ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಕೆಲಸ ಮಾಡುವ ಆಸಕ್ತಿ. ಈ ಎರಡೂ ಕಾರಣದಿಂದಾಗಿ ಸುದ್ದಿ ವಾಹಿನಿಯಲ್ಲಿ ಕೆಲಸಕ್ಕೆ ಸೇರಿಕೊಂಡೆ. ನಾನು ಕೆಲಸ ಆರಂಭಿಸಿದ್ದು ಜನಶ್ರೀ ವಾಹಿನಿಯಲ್ಲಿ ಮೊದ ಮೊದಲು ಅದು ಚೆನ್ನಾಗಿಯೇ ರನ್ ಆಯಿತು. ನಮಗೂ ಸರಿಯಾದ ವೇಳೆಯಲ್ಲಿಯೇ ಸಂಬಳ ಸಿಗುತ್ತಿತ್ತು. ವರ್ಷಗಳು ಉರುಳಿದಂತೆ ಮಾಲೀಕರು ಬದಲಾದರು. ಮ್ಯಾನೇಜ್‌ಮೆಂಟ್ ಬದಲಾಗುತ್ತಿದ್ದಂತೆಯೇ ಸಂಬಳದಲ್ಲಿ ವ್ಯತ್ಯಾಸ ಆಗೋಕೆ ಶುರುವಾಯಿತು. ನಮಗೆ ಸಿಗ್ತಾ ಇದ್ದದ್ದೆ ಕಡಿಮೆ ಸಂಬಳ. ಅದೂ ಸರಿಯಾದ ಟೈಮ್‌ಗೆ ಬರ್ತಾ ಇರಲಿಲ್ಲ. ಅಲ್ಲಿಂದ ನನಗೆ ಆರ್ಥಿಕವಾಗಿ ತುಂಬಾನೇ ಹೊಡೆತಾ ಬೀಳ್ತಾ ಬಂತು. ನಾನು ವಾಸವಾಗಿದ್ದದ್ದು ಚಾನೆಲ್‌ನ ಸಮೀಪದಲ್ಲಿಯೇ ಇದ್ದ ಪಿಜಿಯಲ್ಲಿ. ಪ್ರತೀ ತಿಂಗಳು ಪಿಜಿಗೆ ದುಡ್ಡು ಕಟ್ಟೋಕೆ ಕಷ್ಟವಾಯ್ತು. ತಿಂಗಳು ಮುಗಿಯುತ್ತಿದ್ದಂತೆಯೇ ಮಾಲೀಕರು ದುಡ್ಡು ಕೇಳೋರು. ನನ್ನ ಹತ್ತಿರ ದುಡ್ಡು ಇರ್ತಾ ಇರಲಿಲ್ಲ. ಹಾಗಾಗಿ ನನಗದು ಅವಮಾನ ಅನಿಸೋಕೆ ಶುರುವಾಯ್ತು. ಹಾಗಾಗಿ ಕಡಿಮೆ ಬಜೆಟ್‌ನ ಪಿಜಿ ಹುಡುಕಿದೆ. ಅದು ಕೆಲಸ ಮಾಡುವ ಸಂಸ್ಥೆಯಿಂದ ದೂರವಿತ್ತು. ಆಫೀಸ್ ಟೈಮ್‌ನ ಒಂದು ಗಂಟೆ ಮುಂಚೆ ಹೊರಡಬೇಕು. ಮತ್ತೆ ಕೆಲವೊಂದು ಸಾರಿ ಬಸ್‌ಚಾರ್ಜ್ ಕೊಡುವುದಕ್ಕೂ ಸಮಸ್ಯೆ ಆಗುತ್ತಿತ್ತು. ಇಷ್ಟು ಕಷ್ಟಗಳ ನಡುವೆಯೂ ಕೆಲಸ ಮಾಡಬೇಕು ಇದು ಅನಿವಾರ್ಯ. ಮನೆಯಲ್ಲಿ ತಂಗಿ ಮತ್ತು ತಾಯಿಯ ಖರ್ಚು ನೋಡಿಕೊಳ್ಳಬೇಕು. ಅವರು ಸಂಪೂರ್ಣವಾಗಿ ನನ್ನ ಮೇಲೆಯೇ ಅವಲಂಬಿತರಾಗಿದ್ದಾರೆ. ಹಾಗಾಗಿ ನನ್ನ ಖರ್ಚಿನಲ್ಲಿ ಒಂದಷ್ಟು ಕಡಿತ ಮಾಡಿಕೊಂಡೆ. ನನಗಿಷ್ಟವಾಗಿದ್ದು ತಿನ್ನೋಕೆ, ಖರೀದಿಸೋಕೆ ಆಗುತ್ತಿರಲಿಲ್ಲ. ಅಲ್ಲಿಂದ ಮತ್ತೊಂದು ಚಾನೆಲ್‌ಗೆ ಶಿಫ್ಟ್ ಆದೆ. ಅಲ್ಲಿಯೂ ಅದೇ ಹಣೆಬರಹ. ಎರಡು ತಿಂಗಳಿಗೆ ಒಂದು ಬಾರಿ ಸಂಬಳ ಕೊಡೋರು. ಈ ವಿಚಾರಾನ ನನ್ನ ಸೀನಿಯರ್‌ಗೆ ಹೇಳ್ಬೇಕು ಅಂದ್ರೆ ಅವರು ನಮ್ಮ ಮಾತನ್ನ ಕೇಳುವುದಿಲ್ಲ. ಈ ಸಮಸ್ಯೆ ಎಲ್ಲಾರಿಗೂ ಇದೆ. ಆದ್ರೆ ಸಮಸ್ಯೆಗಳ ಸ್ವರೂಪ ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳಿಗೇ ಹೆಚ್ಚಾಗಿರುತ್ತದೆ. ಕುಟುಂಬವನ್ನು ಹೆಣ್ಣುಮಕ್ಕಳು ನಡೆಸುತ್ತಿದ್ದಾರೆ ಎಂದಾದರೆ ಅವರಿಗೆ ಬಹಳ ಸಮಸ್ಯೆಗಳು ಕಾಡ್ತಾ ಇರುತ್ತವೆ. ಒಂದು ಸಾರಿ ನಾಲ್ಕು ತಿಂಗಳು ಆದ್ರೂ ಸಂಬಳ ಕೊಟ್ಟಿರಲಿಲ್ಲ. ಆವಾಗ ನಮ್ಮ ಮನೆಯಲ್ಲಿ ತುಂಬಾ ಸಮಸ್ಯೆ ಆಯ್ತು. ಮನೆಯಲ್ಲಿ ಅಮ್ಮನಿಗೆ ಆರೋಗ್ಯ ಕೈ ಕೊಟ್ಟಿತು. ಅವ್ರನ್ನ ಆಸ್ಪತ್ರೆಗೆ ಕರೆದುಕೊಂಡು ಹೋಗ್ಬೇಕು ಅಂದ್ರೆ ದುಡ್ಡಿನ ಸಮಸ್ಯೆ. ಏನ್ ಮಾಡೋದು ನಾವು ದುಡಿದದ್ದು ಸರಿಯಾದ ಸಮಯದಲ್ಲಿ ಸಿಗೋದಿಲ್ಲ. ಮತ್ತೆ ಸ್ನೇಹಿತರಲ್ಲಿ ಸಾಲ ಮಾಡಿ ಅಮ್ಮನನ್ನು ಆಸ್ಪತ್ರೆಗೆ

ಕರೆದುಕೊಂಡು ಹೋಗಿ ತೋರಿಸಿದೆ. ಮನೆಯಲ್ಲಿ ಏನೇ ತೊಂದರೆಯುಂಟಾದರೂ ಅದನ್ನು ನಾನೇ ಪರಿಹರಿಸಬೇಕು. ಇಲ್ಲವಾದರೆ ಅವರಿಗೆ ತುಂಬಾನೇ ಕಷ್ಟವಾಗುತ್ತದೆ. ಸರಿಯಾದ ಟೈಮಿಗೆ ಸಂಬಳ ಆದ್ರೆ ಏನೂ ತೊಂದರೆ ಆಗಲ್ಲ. ಆದ್ರೆ ನಮ್ಮ ಸಂಬಳ ನಮ್ ಕುಟುಂಬದ ಮೇಲೆಯೂ ತುಂಬಾನೇ ಪರಿಣಾಮ ಬೀರಿತು. ಏನ್ ಮಾಡೋದು ಅನಿವಾರ್ಯ ಕಾರಣಗಳಿಂದ ಈ ಕೆಲಸಗಳನ್ನು ಬಿಟ್ಟು ಹೋಗುವುದಕ್ಕೆ ಆಗೋದಿಲ್ಲ. ಯಾಕಂದ್ರೆ ಇದನ್ನ ಬಿಟ್ಟು ಬೇರೆ ಕೆಲ್ಸ ಹುಡುಕಬೇಕು ಮತ್ತು ಅದು ಸಿಗಬೇಕಂದ್ರೆ ಮತ್ತೆ ತಿಂಗಳುಗಳ ಕಾಲ ಕಾಯಬೇಕು. ಅದಕ್ಕೆ ಸಮಯ ತೆಗೆದುಕೊಳ್ಳುತ್ತದೆ. ಅಲ್ಲಿಯವರೆಗೂ ಖಾಲಿ ಕೂಡೋದಕ್ಕೆ ಆಗೊಲ್ಲ. ಖಾಲಿ ಕುಳಿತರೆ ಮನೇಲಿ ನಡೆಯೋದಿಲ್ಲ. ಹಾಗಾಗಿ ಬೇರೆ ಕೆಲಸ ಸಿಗುವವರೆಗೆ ಇಲ್ಲಿಯೇ ಮಾಡ್ಬೇಕು ಅಂತ ನಿರ್ಧಾರ ಮಾಡಿದ್ದೇನೆ" ಎಂದು ಹೇಳಿದರು.

ಮತ್ತೊಂದು ಖಾಸಗಿ ವಾಹಿನಿಯಲ್ಲಿ ಕೆಲಸ ಮಾಡುವ ಶ್ರಾವ್ಯಾ ಅವರ ಆರ್ಥಿಕ ಸಮಸ್ಯೆ ಹೀಗಿದೆ, "ನಾನು ಉತ್ತರ ಕರ್ನಾಟಕದಿಂದ ಬಂದ ಹುಡುಗಿ. ಸ್ನಾತಕೋತ್ತರ ಪದವಿ ಶಿಕ್ಷಣ ಮುಗಿದ ಕೂಡಲೇ ಮನೆಯಲ್ಲಿ ಕೂರುವುದಕ್ಕೆ ಆಗಲಿಲ್ಲ. ಹಾಗಾಗಿ ಯಾವುದಾದರೂ ಚಾನೆಲ್ ಸಿಕ್ಕರೆ ಕೆಲಸ ಮಾಡೋಣ ಅಂತ ಕಸ್ತೂರಿ ವಾಹಿನಿಗೆ ಸೇರಿಕೊಂಡೆ. ಅಲ್ಲಿ ಸಂಬಳವನ್ನು ತಡವಾಗಿ ಕೊಡುತ್ತಾರೆ ಅಂತ ನನಗೆ ಗೊತ್ತಿತ್ತು. ಆದರೆ, ನಾವು ಕೇಳಿದ ತಕ್ಷಣವೇ ಕೆಲಸ ಸಿಗಬೇಕಲ್ಲ? ಜತೆಗೆ ಯಾವುದೇ ಕೆಲಸ ಕೊಡುವ ಮುನ್ನ ಎಕ್ಸಪಿರಿಯನ್ಸ್ ಏನು? ಅಂತ ಕೇಳುತ್ತಾರೆ. ಆ ಪ್ರಶ್ನೆಗೆ ನನ್ನಲ್ಲಿ ಉತ್ತರ ಇರಲಿ ಅಂತ ಕಸ್ತೂರಿ ನ್ಯೂಸ್ ಸೇರಿಕೊಂಡೆ. ಬೆಂಗಳೂರು ಜೀವನ ನನಗೆ ಹೊಸದು. ನಮ್ಮೂರಿನಲ್ಲಿ ಕಡಿಮೆ ಖರ್ಚಿರುತ್ತದೆ. ಸಿಟಿ ಬದುಕು ಹಾಗಲ್ಲ. ಎಲ್ಲದಕ್ಕೂ ದುಡ್ಡು ಸುರಿಯಬೇಕು.. ಕೆಲಸಕ್ಕೆ ಸೇರಿದ ಎರಡೇ ತಿಂಗಳಲ್ಲಿ ನನಗೆ ಆರ್ಥಿಕ ಬಿಸಿ ತಾಗೋಕೆ ಶುರುವಾಯಿತು. ನನ್ನ ಸೀನಿಯರ್ ಹತ್ತಿರ ಕಷ್ಟ ಹೇಳಿಕೊಳ್ಳೋಕೆ ಶುರು ಮಾಡಿದೆ. ಪಾಪ, ಅವರು ಮೊದ ಮೊದಲು ಸ್ಪಂದಿಸೋರು. ಖರ್ಚಿಗೆ ಅವರೇ ದುಡ್ಡು ಕೊಟ್ಟರು. ಪದೇ ಪದೇ ಅವರನ್ನು ಹೇಗೆ ಕೇಳೋದು? ಬರುವ ಕಷ್ಟಗಳನ್ನು ನುಂಗಿಕೊಂಡು ಸುಮ್ಮನಾಗುತ್ತಿದ್ದೆ. ವಾಪಸ್ಸು ಊರಿಗೆ ಹೋಗೋಣ ಅಂತ ಅನಿಸೋದು. ಸೋಲು ಒಪ್ಪಿಕೊಂಡೆ ಅನ್ನುವ ಕೊರಗು ಕಾಡುತ್ತದೆ ಅಂತ ಉಳಿದುಕೊಂಡೆ. ನಾನು ಡೆಸ್ಕ್‌ನಲ್ಲಿ ಕೆಲಸ ಮಾಡುತ್ತಿದ್ದರಿಂದ ಶಿಫ್ಟ್ ಇರೋದು. ಮುಂಜಾನೆ ಶಿಫ್ಟ್‌ನಲ್ಲಿ ಕೆಲಸ ಮಾಡಿ, ಸಂಜೆ ಬೊಟಿಕ್‌ನಲ್ಲಿ ಕೆಲಸ ಮಾಡುತ್ತಿದ್ದೆ. ರೂಮ್‌ಗೆ ಹೋಗೋದು ತಡವಾಗುತ್ತಿತ್ತು. ನಿದ್ದೆ ಸರಿಯಾಗಿ ಆಗ್ತಿರಲಿಲ್ಲ. ಊಟ ಮಾಡೋಕೇ ತುಂಬಾ ಬೇಜಾರಾಗೋದು. ಇದರಿಂದ ಮಾನಸಿಕವಾಗಿ ತುಂಬಾ

ಕುಗ್ಗಿಹೋಗಿದ್ದೆ. ಇದನ್ನೆಲ್ಲ ಮನೇಲಿ ಹೇಳಿದ್ರೆ ಅವ್ರಿಂದ ಬೈಸಿಕೊಳ್ಳಬೇಕಲ್ಲಾ ಎಂದು ಹೇಳಿ ಅವ್ರಿಗೆ ಹೇಳಿಯೇ ಇಲ್ಲ. ನಮಗೆ ಸಂಬಳ ಸರಿಯಾದ ಟೈಮಲ್ಲಿ ಬಂದರೆ ಯಾವುದೇ ಸಮಸ್ಯೆಗಳು ಇರುವುದಿಲ್ಲ" ಎಂದು ಹೇಳಿದರು.

ಬರುವ ಸಂಬಳದಲ್ಲಿಯೇ ವೇತನ ಉಳಿತಾಯಕ್ಕಾಗಿ ವಾಹಿನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಮಾನಸ ಏನೆಲ್ಲ ಕಷ್ಟ ಪಡುತ್ತಿದ್ದಾರೆಂದು ಹೇಳಿದ್ದು ಹೀಗೆ, "ನಾನು ಓದಿದ್ದು ಬಿಇ ಎಲೆಕ್ಟ್ರಾನಿಕ್ಸ್. ಅಪ್ಪ ಅಮ್ಮ ಬರಹಗಾರರು. ನನಗೂ ಕೂಡ ಸಾಹಿತ್ಯ ಕ್ಷೇತ್ರದ ಮೇಲೆ ಒಲವಿತ್ತು. ಈ ಕಾರಣದಿಂದಾಗಿ ಟಿವಿ ಮೀಡಿಯಾದಲ್ಲಿ ಕೆಲಸಕ್ಕೆ ಸೇರಿಕೊಂಡೆ. ಸುದ್ದಿ ವಾಹಿನಿಗೆ ಬರುವುದಕ್ಕಿಂತ ಮುಂಚೆ ನಾನು ಕಾರ್ಪೊರೇಟ್ ಕಂಪೆನಿಯಲ್ಲಿ ಉದ್ಯೋಗಿಯಾಗಿದ್ದೆ. ಕೈ ತುಂಬಾ ಸಂಬಳ ಸಿಗೋದು. ಆ ಲೈಫ್ ಬೇಡ ಅಂತ ಮೀಡಿಯಾಗೆ ಬಂದೆ. ಕಾರ್ಪೊರೇಟ್ ಸಂಸ್ಥೆಗಳ ಸಂಬಳಕ್ಕೆ ಹೋಲಿಸಿಕೊಂಡರೆ ಚಾನೆಲ್‌ಗಳ ಸಂಬಳ ತೀರಾ ಕಡಿಮೆ. ಕಾರ್ಪೊರೇಟ್ ಸಂಸ್ಥೆಗಳಲ್ಲಿ ನೀವು ಎಷ್ಟು ದುಡೀತೀರಾ? ಕಂಪನಿಗೆ ಎಷ್ಟು ರೆವಿನ್ಯೂ ತರ್ತೀರಾ, ಕೊಟ್ಟಿದ್ದ ಟಾರ್ಗೆಟ್ ಮುಟ್ಟಲಾಗಿದೆಯೇ ಇಲ್ಲವೇ? ಈ ಎಲ್ಲಾ ಆಧಾರಗಳ ಮೇಲೆ ಸಂಬಳ ಫಿಕ್ಸ್ ಆಗತ್ತೆ. ಮೀಡಿಯಾಗಳಲ್ಲಿ ಹಾಗಲ್ಲ. ಬೇರೆಯದ್ದೇ ರೀತಿಯಲ್ಲಿ ಸಂಬಳ ಫಿಕ್ಸ್ ಆಗತ್ತೆ. ಸಂಸ್ಥೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ನೀವು ಪರಿಚಯ ಇದ್ದರೆ, ನೀವು ಬೇರೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ಇನ್ನೊಂದು ಸಂಸ್ಥೆಯ ಅಧಿಕಾರಿ ನಿಮ್ಮನ್ನು ತಮ್ಮ ಕಂಪನಿಗೆ ಕರೆಯಿಸಿಕೊಂಡಿದ್ದರೆ ಹೀಗೆ ನಾನಾ ಕಾರಣಗಳಿಂದ ವೇತನ ನಿಗಧಿಯಾಗಿರುತ್ತದೆ. ಅಂದರೆ ಇವರಿಗೆ ಸಂಬಳ ಸಹಜವಾಗಿ ಇರುವ ಸಂಬಳಕ್ಕಿಂತ ಹೆಚ್ಚು ಇರುತ್ತದೆ. ಇಲ್ಲಿ ಯಾವುದೂ ಕೂಡ ಸಮಾನವಾಗಿ ವೇತನ ಹಂಚಿಕೆಯಾಗಿಲ್ಲ. ನನಗಿಂತ ಕಡಿಮೆ ದರ್ಜೆಯವರಿಗೆ ಸಿಗುವ ಸಂಬಳಕ್ಕಿಂತ ನನಗೆ ಸಿಗುವ ಸಂಬಳದ ಪ್ರಮಾಣ ತುಂಬಾನೇ ಕಡಿಮೆಯಾಗಿದೆ. ಇದನ್ನ ನೆನೆಸಿಕೊಂಡರೆ ತುಂಬಾನೇ ಬೇಜಾರಾಗುತ್ತದೆ. ಇದು ತಿಳಿದಿದ್ರೂ ಸಹ ಅದರ ವಿರುದ್ಧ ಏನೂ ಮಾತಾಡೋಕೆ ಆಗೊಲ್ಲ. ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಕಡಿಮೆ ಸಂಬಳದಲ್ಲಿ ಜೀವನ ನಡೆಸೋದು ತುಂಬಾನೇ ಕಷ್ಟದ ಕೆಲಸ. ನೆಮ್ಮದಿಯ ಜೀವನಕ್ಕೆ ಕೊಂಚ ಹಿನ್ನಡೆಯೂ ಆಗಬಹುದು. ಇರುವುದರಲ್ಲಿಯೇ ಖುಷಿ ಪಡುವತ್ತ ನಾವು ಯೋಚಿಸಬೇಕು. ಸಂಬಳವೇ ಕಡಿಮೆ ಇರುವಾಗ ಮಕ್ಕಳ ಶಿಕ್ಷಣ, ಪೋಷಣೆ ಇದಕ್ಕೆಲ್ಲಾ ತುಂಬಾನೇ ಕಷ್ಟವಾಗುತ್ತದೆ. ಹಾಗೇನೇ ಬರುವ ಸಂಬಳ ನಮ್ಮ ಖರ್ಚಿಗೇ ಸಾಕಾಗೋದಿಲ್ಲ. ಅಂತಹದ್ದರಲ್ಲಿ ಉಳಿತಾಯ ಮಾಡೋದು ದೂರಾನೇ ಉಳಿತು. ಆದರೂ ಮಾಡಲೇಬೇಕಾದ ಅನಿವಾರ್ಯತೆ ಇದೆ. ಈ ಕೆಲಸಕ್ಕೆ

ಯಾಕೆ ಸೇರಿಕೊಂಡೆ ಅಂದರೆ, ಸಮಾಜದಲ್ಲಿ ನಮಗೊಂದು ಐಡೆಂಟಟಿ ಸಿಗತ್ತೆ. ನಮ್ಮನ್ನು ನಾವು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಎಂದು ಬಂದೆ. ಆದರೆ ಇಲ್ಲಿ ಐಡೆಂಟಟಿ ಏನೋ ಸಿಗುತ್ತದೆ ಆದರೆ ಇದೇ ನಮ್ಮ ಬದುಕನ್ನ ಕಟ್ಟಿಕೊಡೋದಿಲ್ಲ. ಆದರೂ ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ಜೀವನ ಮಾಡಬೇಕಾದ ಅನಿವಾರ್ಯತೆ ಇದೆ. ಮತ್ತೆ ಇಲ್ಲಿ ಕೆಲಸ ಬಿಟ್ಟು ಬೇರೆ ಕೆಲಸ ಮಾಡಬೇಕೆಂದರೂ ತುಂಬಾನೇ ಸಮಸ್ಯೆ. ಏಕೆಂದರೆ ಇಲ್ಲ ಈಗಾಗಲೇ ಸೆಟ್ ಆಗಿದ್ದೇವೆ. ಮತ್ತೆ ಬೇರೆ ಕೆಲಸ ಸೆಟ್ ಆಗೋದು ತುಂಬಾನೇ ಕಷ್ಟ. ಅದರಲ್ಲೂ ಕೆಲಸ ನಾವು ಬೇಕೆಂದಾಗ ಸಿಗೋದಿಲ್ಲ. ಕಾಯಬೇಕಾಗುತ್ತೆ. ಇದೆಲ್ಲಾ ಕಷ್ಟಗಳನ್ನ ಮತ್ತೆ ಅನುಭವಿಸೋದು ಬೇಡ ಅಂತೇಳಿ ಇಲ್ಲೇ ಕಲಸ ಮಾಡುತ್ತಿದ್ದೇನೆ" ಎಂದು ಹೇಳಿದರು.

ಭಾರತೀಯ ಸಮಾಜದಲ್ಲಿನ ಮಹಿಳೆಯರ ಸ್ಥಾನಮಾನ ಜಗತ್ತಿನ ಬೇರೆಡೆಗಳಿಗಿಂತ ಭಿನ್ನವಾಗಿರುವುದನ್ನು ಕಾಣಬಹುದು. ಮುಖ್ಯವಾಗಿ ಮಹಿಳೆಯರು ಎಂದರೆ ಕೇವಲ ಕುಟುಂಬ ಮತ್ತು ಮನೆಗೆಲಸಗಳಿಗೆ ಮಾತ್ರ ಸೀಮಿತ ಮಾಡಿರುವುದನ್ನು ನೋಡಬಹುದು. ಬಹುಮುಖ್ಯವಾಗಿ ಮಹಿಳೆಯರ ಸ್ಥಾನಮಾನವನ್ನು ಆಕೆಯ ಪತಿಗಿರುವ ಗೌರವ ಮತ್ತು ಕುಟುಂಬದ ಸ್ಥಾನಮಾನಗಳಿಗೆ ತಳುಕುಹಾಕಿಕೊಂಡಿರುತ್ತದೆ. ಹಾಗಾಗಿಯೇ ಅವರ ಸ್ಥಾನಮಾನವನ್ನು ಗುರುತಿಸುವುದಾದರೆ ಆಕೆಯ ಪತಿಯ ಸ್ಥಾನಮಾನವನ್ನು ಗುರುತಿಸಲೇಬೇಕು. ಇಲ್ಲದಿದ್ದರೆ ಆಕೆಗೆ ಗೌರವಾದರಗಳು ಕಂಡುಬರುವುದಿಲ್ಲ. ಆದರೆ ಮಹಿಳೆಯರು ತಮಗಿಷ್ಟವಾದ ಶಿಕ್ಷಣವನ್ನು ಪಡೆದು, ಅದಕ್ಕೆ ತಕ್ಕಂತಹ ಉದ್ಯೋಗವನ್ನು ಪಡೆದರೂ ಸಹ ಆಕೆಯ ಸ್ಥಾನಮಾನದಲ್ಲಿ ಮಾತ್ರ ಬದಲಾವಣೆಗಳು ಕಂಡುಬರುವುದಿಲ್ಲ. ಆರ್ಥಿಕವಾಗಿ ತನ್ನ ಗಂಡನ ಮೇಲೆಯೇ ಅವಲಂಬನೆಯನ್ನು ಹೊಂದಿರುತ್ತಾಳೆ. ಯಾವಾಗ ಆರ್ಥಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತೋ ಅಂದಿನಿಂದ ಮಹಿಳೆಯರ ಅವನತಿ ಆರಂಭವಾಯಿತು. ಹಾಗಾಗಿಯೇ ಈ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ಹಲವು ಮಹಿಳೆಯರು ಸ್ವತಂತ್ರವಾಗಿ ದುಡಿಯುವ ಅವಕಾಶವನ್ನು ಹೊಂದಿದ್ದರೂ ಸಹ ಆರ್ಥಿಕವಾಗಿ ಸಬಲರಾಗಲು ಹೆಣಗಾಡುತ್ತಿದ್ದಾರೆ. ಅದಕ್ಕೆ ಕಾರಣ ಅವರು ಆಯ್ಕೆ ಮಾಡಿಕೊಂಡ ವಲಯದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು. ಪ್ರತಿಯೊಂದು ವಲಯದಲ್ಲಿಯೂ ಮಹಿಳೆಯರ ಕುರಿತಂತೆ ಅಸಡ್ಡೆ ಮನೋಭಾವ ಇದ್ದೇ ಇರುತ್ತದೆ. ಈ ಅಸಡ್ಡೆ ಮನೋಭಾವ ಮಹಿಳೆಯರನ್ನು ಇನ್ನಿಲ್ಲದಂತೆ ಹಿಂಸಿಸುತ್ತದೆ. ಮೇಲಿನ ಪ್ರಕರಣಗಳನ್ನೆಲ್ಲಾ ಗಮನಿಸಿದರೆ, ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಆರ್ಥಿಕತೆಯ ಸಮಸ್ಯೆಯಿಂದಾಗಿ ಹಲವು

ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಮುಖ್ಯವಾಗಿ ತಾವು ಕೆಲಸ ಮಾಡುತ್ತಿರುವ ಸುದ್ದಿ ಸಂಸ್ಥೆಯವರು ಸರಿಯಾಗಿ ವೇತನವನ್ನು ಕೊಡದೇ ಇರುವ ಕಾರಣಕ್ಕಾಗಿ ಭೀಕರ ಸಮಸ್ಯೆಗಳನ್ನು ಎದುರಿಸುತ್ತಿರುವುದು ಮೇಲಿನ ಪ್ರಕರಣಗಳ ಹೇಳಿಕೆಗಳಿಂದ ತಿಳಿದು ಬರುತ್ತದೆ. ವಿದ್ಯುನ್ಮಾನ ಮಾಧ್ಯಮದಲ್ಲಿ ವೇತನದ ಸಮಸ್ಯೆ ಎಲ್ಲರಿಗೂ ಅಂದರೆ ಪುರುಷ ಉದ್ಯೋಗಿಗಳಿಗೂ ಕಂಡುಬರುತ್ತದೆ. ಆದರೆ ಅದೇ ಸಮಸ್ಯೆಯ ಕಾರಣದಿಂದ ಪುರುಷರು ಇತರೆ ಯಾವುದೇ ಸಮಸ್ಯೆಗಳನ್ನು ಎದುರಿಸುವುದು ಕಂಡುಬರುವುದಿಲ್ಲ. ಮಹಿಳೆಯರಿಗೆ ವೇತನ ಸರಿಯಾಗಿ ಬಾರದೇ ಇರುವ ಕಾರಣದಿಂದ ಕೌಟುಂಬಿಕವಾಗಿ, ವೈಯಕ್ತಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುವುದರ ಜೊತೆಗೆ ಅವರ ವೃತ್ತಿ ನಿರಾಕರಣೆಗೂ ಕಾರಣವಾಗುತ್ತದೆ. ಆದರೆ ಪುರುಷರಿಗೆ ವೇತನದ ಸಮಸ್ಯೆಯ ಕಾರಣದಿಂದ ವೃತ್ತಿನಿರಾಕರಣೆಯ ಸಮಸ್ಯೆ ಕಾಡುವುದಿಲ್ಲ. ಒಂದುವೇಳೆ ಕಾಡಿದರೆ ಅವರಿಗೆ ಇತರೆ ಉದ್ಯೋಗಾವಕಾಶಗಳು ಇರುತ್ತವೆ. ಆದರೆ ಮಹಿಳೆಯರಿಗೆ ಒಂದು ಕೆಲಸವನ್ನು ಬಿಟ್ಟು ಬೇರೆ ಕೆಲಸ ನೋಡಿಕೊಳ್ಳುವುದು ತುಂಬಾ ಕಷ್ಟದ ಸಂಗತಿಯಾಗಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಎಷ್ಟೋ ಮಹಿಳೆಯರು ತಮ್ಮ ವೇತನದಿಂದ ಅವರ ಕುಟುಂಬದ ಪೋಷಣೆಯನ್ನೂ ಮಾಡುತ್ತಿದ್ದಾರೆ. ವೇತನವೇ ಸರಿಯಾದ ಸಮಯಕ್ಕೆ ಬಾರದೇ ಇದ್ದಾಗ ಅದರಿಂದ ಕೇವಲ ಅವರಿಗೆ ವ್ಯಕ್ತಿಗತ ಸಮಸ್ಯೆಗಳಾಗುವುದರ ಜೊತೆಗೆ ಅವರ ಕುಟುಂಬಗಳೂ ಸಹ ಸಮಸ್ಯೆಗೆ ಈಡಾಗುತ್ತಿವೆ. ಇಲ್ಲಿ ಮಾಧ್ಯಮ ಕ್ಷೇತ್ರ ಉದ್ಯಮವಾಗಿ ಮಾರ್ಪಟ್ಟಿರುವುದರಿಂದ ಇಲ್ಲಿ ಎಲ್ಲವೂ ಲಾಭದ ದೃಷ್ಟಿಯಿಂದಲೇ ನೋಡಲಾಗುತ್ತದೆ. ಹಾಗಾಗಿಯೇ ಲಾಭವನ್ನು ಪಡೆಯುವ ಸಲುವಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಎಲ್ಲರನ್ನೂ ಚೆನ್ನಾಗಿಯೇ ಬಳಸಿಕೊಳ್ಳುತ್ತದೆ. ಇಲ್ಲಿ ಬಳಸಿಕೊಳ್ಳುವುದರಲ್ಲಿ ಮಹಿಳೆಯರೇ ಹೆಚ್ಚಾಗಿ ಬಳಕೆಯಾಗಲ್ಪಡುತ್ತಿದ್ದಾರೆ ಎಂದು ಹೇಳಬಹುದು. ಹೀಗೆ ಹೆಚ್ಚೆಚ್ಚು ಕೆಲಸ ಮಾಡುವುದರ ಮೂಲಕ ತಾವು ಕೆಲಸ ಮಾಡುವ ಚಾನೆಲ್‌ಗಳಿಗೆ ಲಾಭವನ್ನು ತಂದುಕೊಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಆದರೆ ಇವರ ರಕ್ಷಣೆಯನ್ನು ಮಾಡಬೇಕಾದ ಚಾನೆಲ್‌ನವರು ಇವರ ಬಗೆಗೆ ಯಾವುದೇ ಕೇರ್ ಮಾಡದೇ ಇರುವುದನ್ನು ಕಾಣಬಹುದು. ಪ್ರತೀ ತಿಂಗಳು ವೇತನವನ್ನು ಸರಿಯಾಗಿ ಕೊಡದೇ ಹೋದರೆ ಕೆಲಸಗಾರರಿಗೆ ತೊಂದರೆಯಾಗುತ್ತದೆ ಎಂದೂ ಯೋಚಿಸದೇ ವೇತನವನ್ನು ತಡೆಹಿಡಿಯುವುದು ಕಂಡುಬರುತ್ತದೆ. ಇದರಿಂದ ಮಹಿಳಾ ಕೆಲಸಗಾರರು ತುಂಬಾನೇ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

ಸುದ್ದಿ ಮಾಧ್ಯಮದವರು ಸರಿಯಾಗಿ ಪ್ರತೀ ತಿಂಗಳು ಸರಿಯಾಗಿ ವೇತನವನ್ನು ಕೊಡದೇ ಹೋದ ಕಾರಣಕ್ಕಾಗಿ ಕೆಲವು ಮಹಿಳೆಯರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾದ ಪರಿಸ್ಥಿತಿಯನ್ನು ಎದುರಿಸಿರುವುದು ಕಂಡುಬರುತ್ತದೆ. ಅಂದರೆ ಮೇಲಿನ ಒಂದು ಪ್ರಕರಣದಲ್ಲಿ ಹೇಳುವಂತೆ ಸರಿಯಾಗಿ ಸಂಬಳ ಕೊಡದೇ ಹೋದರೆ ಕೆಲಸ ಬಿಟ್ಟು ಬರುವಂತೆ ಒತ್ತಾಯಗಳು ಕಂಡುಬರುತ್ತವೆ. ಈ ಒತ್ತಾಯದ ಹಿಂದೆ ಬಹುದೊಡ್ಡ ರಾಜಕಾರಣವಿರುವುದನ್ನು ಕಾಣಬಹುದು. ಏಕೆಂದರೆ ಕೆಲಸ ಬಿಟ್ಟು ಬಂದರೆ ಆಕೆಗೆ ಗಂಡನ್ನು ನೋಡಿ ವಿವಾಹ ಮಾಡಿಬಿಡುತ್ತಾರೆ. ಒಂದು ಸಾರಿ ವಿವಾಹವಾಯಿತು ಎಂದರೆ ಮುಗಿಯಿತು. ಮಹಿಳೆಯರು ತಾವು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಿಲ್ಲ. ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ಕೌಟುಂಬಿಕವಾಗಿ, ಮಾನಸಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ವೇತನ ತಾರತಮ್ಯಗಳೂ ನಡೆಯುತ್ತಿರುವುದು ಕಂಡುಬರುತ್ತದೆ. ಅಂದರೆ ಇನ್‌ಫ್ಲುಎನ್ಸ್ ಇದ್ದು ಕೆಲಸಕ್ಕೆ ಸೇರಿಕೊಂಡರೆ ಅವರಿಗೆ ವೇತನ ಹೆಚ್ಚಿರುತ್ತದೆ ಮತ್ತು ಸರಿಯಾದ ಸಮಯಕ್ಕೆ ವೇತನ ನೀಡಲಾಗುತ್ತದೆ. ಆದರೆ ಅದೇ ಚಾನೆಲ್‌ನಲ್ಲಿ ಕಷ್ಟಪಟ್ಟು ದುಡಿಯುವವರಿಗೆ ಈ ಬಗೆಯ ವ್ಯವಸ್ಥೆಯನ್ನು ಕಲ್ಪಿಸದೇ ಇರುವುದು ಕಂಡುಬರುತ್ತದೆ. ಹಾಗಾಗಿಯೇ ಮಹಿಳಾ ಉದ್ಯೋಗಿಗಳಲ್ಲಿ ಇದು ಹೆಚ್ಚಾಗಿ ಗೋಚರಿಸುತ್ತದೆ. ಇದೂ ಕೂಡ ಮಹಿಳೆಯರಿಗೆ ಅಸಮಾಧಾನವನ್ನುಂಟು ಮಾಡುತ್ತಿದೆ ಎನ್ನಬಹುದು. ವಿದ್ಯುನ್ಮಾನ ಮಾಧ್ಯಮದಲ್ಲಿ ಈ ಬಗೆಯ ತಾರತಮ್ಯತೆ ಕಂಡುಬರುವುದರಿಂದಾಗಿ ಈ ವಲಯವೂ ಕೂಡ ಲಿಂಗ ಅಸಮಾನತೆ, ವೇತನ ತಾರತಮ್ಯದಿಂದ ಮುಕ್ತವಾಗಿಲ್ಲ ಎಂದು ಹೇಳಬಹುದು. ಹಾಗೆಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಪ್ರತಿ ತಿಂಗಳು ವೇತನ ನೀಡುತ್ತಿಲ್ಲವಾದ್ದರಿಂದಾಗಿ ಅವರು ಸಾಲಗಾರರಾಗಿ ಮಾರ್ಪಾಡಾಗುತ್ತಿದ್ದಾರೆ. ಸಾಲಗಾರರಾಗುತ್ತಿರುವುದು ಕೇವಲ ಜೀವನ ನಿರ್ವಹಣೆಗೆ ಸಂಬಂಧಿಸಿದ ವಿಷಯಕ್ಕಲ್ಲ. ವಿದ್ಯುನ್ಮಾನ ಮಾಧ್ಯಮದ ಸ್ವರೂಪವು ಅಪೇಕ್ಷಿಸುವ ಗ್ಲಾಮರ್ ಉಳಿಸಿಕೊಳ್ಳುವ ಕಾರಣಕ್ಕೂ, ಅಂದರೆ ಪ್ರತಿ ತಿಂಗಳು ಸರಿಯಾಗಿ ವೇತನ ಸಿಗದೇ ಅವರ ಜೀವನ ನಿರ್ವಹಣೆಗೆ ತುಂಬಾ ತೊಂದರೆಯಾಗಿದೆ ಮತ್ತು ಅದು ಎಷ್ಟು ಕಷ್ಟ ಎಂದರೆ ಮನೆ ಬಾಡಿಗೆಯನ್ನೂ ಕಟ್ಟಲಾಗದಷ್ಟು ಮತ್ತು ಮನೆಯಲ್ಲಿ ಯಾರಾದರೂ ಕಾಯಿಲೆಯಿಂದ ಬಳಲಿದರೆ ಅವರಿಗೆ ಚಿಕಿತ್ಸೆಯನ್ನು ಕೊಡಿಸಲು ಆಗದೇ ಇರುವಷ್ಟು ಮಟ್ಟಕ್ಕೆ ತೊಂದರೆಯಾಗಿರುವುದು ಕಂಡುಬರುತ್ತದೆ. ಈ

ತೊಂದರೆಗಳನ್ನು ನಿವಾರಿಸಿಕೊಳ್ಳಲು ವೇತನ ಮುಂದಿನ ತಿಂಗಲಾದರೂ ಸಿಗಬಹುದು ಎಂಬ ಆಶಯದೊಂದಿಗೆ ಸಾಲವನ್ನು ಮಾಡಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿರುವುದು ವಿಪರ್ಯಾಸದ ಸಂಗತಿಯೇ ಸರಿ. ಇದು ಹೆಚ್ಚಿನ ಹೊರೆಯಾಗಿ ಮಾರ್ಪಟ್ಟಿದೆ. ಏಕೆಂದರೆ ಸಾಲ ನೀಡುವವರೂ ಸಹ ಪದೇ ಪದೇ ಕೊಡಲು ಸಾಧ್ಯವಿಲ್ಲ. ಹಾಗೆಯೇ ಇವರಿಗೆ ಕೇಳಲೂ ಆಗುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ಇಂತಹ ಸಂದರ್ಭದಲ್ಲಿ ವೇತನದಲ್ಲಿ ಉಳಿತಾಯ ಮಾಡುವುದು ಎಂದರೆ ಅದು ಸಾಧ್ಯವೇ ಇಲ್ಲ. ಅವರಿಗೆ ಸಿಗುವ ವೇತನ ಸರಿಯಾಗಿ ಪ್ರತೀ ತಿಂಗಳೂ ಸಿಕ್ಕರೂ ಸಹ ಅದು ಅವರ ಕುಟುಂಬ ನಿರ್ವಹಣೆಗೇ ಸಾಕಾಗಿ ಹೋಗುತ್ತದೆ. ಆದರೆ ಅದರಲ್ಲಿ ಉಳಿಸುವಿಕೆ ಎನ್ನುವುದು ಸಾಧ್ಯವಿಲ್ಲದ ಸಂಗತಿ ಎಂಬುದನ್ನು ವಕ್ತೃಗಳ ಹೇಳಿಕೆಗಳಿಂದಲೇ ತಿಳಿದುಬರುತ್ತದೆ. ಸಮಾಜದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಅವರು ಹಿಂದಿರುವ ಆದಾಯ ಹಾಗೂ ಸಾಲದ ಮೇಲೆ ನಿರ್ಧಾರವಾಗುತ್ತದೆ. ಆದರೆ ಇಲ್ಲಿ ದುಡಿಯುವ ಮಹಿಳೆಯರಲ್ಲಿ ಹಲವರ ಆದಾಯ ಕಡಿಮೆ ಇರುವುದು ಮತ್ತು ಅದನ್ನು ಉಳಿತಾಯ ಮಾಡಲಾಗದೇ ಇರುವುದು ಕಂಡುಬರುತ್ತದೆ. ಏಕೆಂದರೆ ಅನೇಕ ಮಹಿಳೆಯರ ದುಡಿಮೆಯಿಂದ ಬಂದ ಹಣ ತಮ್ಮ ಖರ್ಚಿಗಿಂತ ಕಡಿಮೆ ಇರುವುದು ಮತ್ತು ಇದರಿಂದ ಸಾಲದ ಹೊರೆ ಹೆಚ್ಚಾಗಿರುವುದರಿಂದ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ತುಂಬಾ ಚಿಂತಾಜನಕವಾಗಿವೆ ಎಂದು ಹೇಳಬಹುದು.

ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಆರ್ಥಿಕವಾಗಿ ತುಂಬಾ ಹಿಂದುಳಿದಿರುವುದನ್ನು ಪ್ರಕರಣಗಳೇ ದೃಢೀಕರಿಸುತ್ತವೆ. ವೇತನ ತಾರತಮ್ಯ, ವೇತನ ಸರಿಯಾದ ಸಮಯಕ್ಕೆ ಆಗದೇ ಇರುವುದು ಈ ಕಾರಣಗಳಿಂದಾಗಿ ಹಲವಾರು ಕೌಟುಂಬಿಕ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ಆದರೆ ಸಂವಿಧಾನದತ್ತವಾಗಿ ಬಂದಿರುವ ಯಾವ ನಿಯಮಗಳೂ ಸಹ ಇಲ್ಲಿ ಪಾಲಿಸಲಾಗುತ್ತಿಲ್ಲ ಎಂಬುದು ವಿಪರ್ಯಾಸದ ಸಂಗತಿಯಾಗಿದೆ. ಇದು ಪಾಲಿಸಬೇಕು ಎಂದಾದರೆ ಈ ವಲಯದಲ್ಲಿ ಸಂಘಟಿತ ಪ್ರಯತ್ನಗಳು ನಡೆಯಬೇಕು. ಅಂದರೆ ಈ ವಲಯ ಅಸಂಘಟಿತ ಕ್ಷೇತ್ರವಾಗಿರುವುದರಿಂದ ಇಲ್ಲಿ ಎಲ್ಲವೂ ಸರಿ ಇರುತ್ತದೆ ಎಂದು ಹೇಳಲಾಗುವುದಿಲ್ಲ. ಮುಖ್ಯವಾಗಿ ಮೇಲೆ ಹೇಳಿದಂತ ಸಮಸ್ಯೆಗಳು ಉಂಟಾದಾಗ ವೈಯಕ್ತಿಕವಾಗಿ ಒಬ್ಬೊಬ್ಬರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿಯೇ ಇವರಲ್ಲಿ ಒಂದು ಸಂಘಟನೆ ಎಂಬುದು ಇದ್ದರೆ ಇವರು ಎದುರಿಸುತ್ತಿರುವ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು.

ಅಧ್ಯಾಯ : 8

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ವೃತ್ತಿ ಕಾರಣದಿಂದಾಗುವ ಆರೋಗ್ಯ ಸಮಸ್ಯೆಗಳು

ಅಧ್ಯಾಯ : 8

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ವೃತ್ತಿ ಕಾರಣದಿಂದಾಗುವ ಆರೋಗ್ಯ ಸಮಸ್ಯೆಗಳು

ವಿಶ್ವಸಂಸ್ಥೆಯು 1945ರಲ್ಲಿ ಘೋಷಿಸಿದಂತೆ 'ಒಂದು ಜೀವಿಯ ದೇಹ, ಮನಸ್ಸು ಸಂಪೂರ್ಣ ಸಮತೋಲನದಲ್ಲಿರುವ ಸ್ಥಿತಿಯನ್ನು ಆರೋಗ್ಯ' ಎಂದು ಕರೆದಿದೆ. ದೈಹಿಕ, ಮಾನಸಿಕ ಮತ್ತು ಸಾಮಾಜಿಕ ನೆಮ್ಮದಿಯ ಸ್ಥಿತಿಯೇ ಆರೋಗ್ಯವೆಂದು ಕರೆಯುವುದು ವಾಡಿಕೆ. ಪೌಷ್ಠಿಕ ಆಹಾರ, ಶುದ್ಧ ಕುಡಿಯುವ ನೀರು, ಉತ್ತಮ ಪರಿಸರ ಮತ್ತು ಸಾಮಾಜಿಕ ಪರಿಸರ (ಜಾತಿ, ಧರ್ಮ, ಲಿಂಗ ಸಮಾನತೆ ಇರುವ ಸಮಾಜ) ಈ ಮೂಲಭೂತ ಸೌಕರ್ಯಗಳು ಸಿಕ್ಕರೆ ಮನುಷ್ಯ ಆರೋಗ್ಯದಿಂದ ಇರಲು ಸಾಧ್ಯವೆಂದು ವೈದ್ಯಶಾಸ್ತ್ರವೇ ದೃಢಪಡಿಸಿದೆ.

ನಮ್ಮ ದೇಶದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಅನುಭವ, ಕಾಳಜಿ ಹಾಗೂ ಪ್ರಾಥಮಿಕ ಆರೋಗ್ಯ ರಕ್ಷಣೆಯನ್ನು ಗಮನಿಸಿದರೆ ಅದು ವೇದಗಳ ಕಾಲದಿಂದಲೇ ಇತ್ತು ಎಂಬುದು ತಿಳಿದು ಬರುತ್ತದೆ. ಕ್ರಿ.ಪೂ 3000ರಲ್ಲಿ ಇಂಡಸ್ ವ್ಯಾಲೀ ಸಿವಿಲಿಸೇಶನ್ ಕಾಲದಲ್ಲೇ ಪರಿಸರವನ್ನು ಶುಚಿಯಾಗಿಡುವಂತಹ ಕಾರ್ಯಕ್ರಮಗಳಾದ ಭೂಮಿಯ ಒಳಗೇ ನೀರು ಹರಿಯುವಿಕೆ, ನಗರಗಳಲ್ಲಿ ಸಾರ್ವಜನಿಕ ಸ್ನಾನಗೃಹಗಳು ಇತ್ಯಾದಿ ಕಂಡು ಬರುತ್ತವೆ. ಆರೋಗ್ಯಕ್ಕೆ ದೈನಂದಿನ ಬದುಕಿನಲ್ಲಿ ಅತೀ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು. ಈ ನಿಟ್ಟಿನಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕ ಪ್ರಗತಿಗೆ ಹೆಚ್ಚು ಗಮನ ಹರಿಸಲಾಗಿತ್ತು. "ಸರ್ವೇ ಸಂತು ನಿರಾಮಯ' ಅಂದರೆ, "ಸರ್ವರೂ ರೋಗದಿಂದ ಮುಕ್ತವಾಗಿರಲಿ' ಎಂಬ ಮಾತು ಶುಭ ಹಾರೈಸುವಾಗೆಲ್ಲ ಹೇಳಲಾಗುತ್ತಿತ್ತು. (ಡಾ.ಕೆ.ಜಯಲಕ್ಷ್ಮಿ, 2006, ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ, ಪುಟ 55)

ಮಾನವ ದೇಹ ಸಮಾನ ಉಷ್ಣತೆ ಪಡೆದಿರಬೇಕು, ದೋಷ ರಹಿತ ಮನಸ್ಸು, ಎಲ್ಲ ಕೆಲಸಗಳಲ್ಲೂ ಉತ್ಸಾಹ, ನೆಮ್ಮದಿ, ಸುಖ ದುಃಖಗಳನ್ನು ಸಮತೋಲನವಾಗಿ ಸ್ವೀಕರಿಸುವ ಮನೋಭಾವ ಇವೆಲ್ಲವೂ ಆರೋಗ್ಯವಂಥ ಲಕ್ಷಣಗಳು ಎನ್ನಲಾಗುತ್ತಿದೆ. ಆದರೂ, ಹಲವು ಕಾರಣಗಳಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುವುದನ್ನು ಗುರುತಿಸಲಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಕಾರಣಗಳಿಂದಾಗಿ ಆರೋಗ್ಯದ ಮೇಲೆ ನಾನಾ ರೀತಿಯ ಪರಿಣಾಮ ಬೀರಿದೆ.

ಲಿಂಗಭೇದ, ಜಾತಿ ಭೇಧವನ್ನು ಸಾಮಾಜಿಕ ಕಾರಣಗಳಾಗಿ ಗುರುತಿಸಬಹುದಾಗಿದ್ದು, ಮಹಿಳೆಯರ ಮತ್ತು ಪುರುಷರ ಆರೋಗ್ಯದ ಕುರಿತಾದ ಭಯಾನಕ ವ್ಯತ್ಯಾಸವೇ ಇದಕ್ಕೆ ಉದಾಹರಣೆಯಾಗಿದೆ. ಜಾತಿಯ ಕಾರಣದಿಂದ ಮೂಲ ಸೌಕರ್ಯಗಳನ್ನು ವಂಚಿಸಲಾಗಿದೆ. ಇದು ಕೂಡ ಅನಾರೋಗ್ಯ ಸಾಮಾಜಕ್ಕೆ ಕಾರಣವಾಗಿದೆ.

ನಿರುದ್ಯೋಗ, ಕಡಿಮೆ ಕೂಲಿ, ಬಡತನದ ಕಾರಣದಿಂದಾಗಿಯೂ ಇಂದು ಆರೋಗ್ಯ ಹಾಳಾಗುತ್ತಿದೆ. ನಿರುದ್ಯೋಗದ ಸಮಸ್ಯೆಯಿಂದಾಗಿ ಮಾನಸಿಕ ಮತ್ತು ಆರ್ಥಿಕ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದೆ ಯುವ ಸಮುದಾಯ. ಈ ಕಾರಣಗಳಿಂದಾಗಿ ನಾನಾ ರೀತಿಯ ದೈಹಿಕ ಮತ್ತು ಮಾನಸಿಕ ರೋಗಗಳನ್ನು ಪತ್ತೆ ಹಚ್ಚಲಾಗಿದೆ. ಬಹುತೇಕ ರೋಗಗಳಿಗೆ ನೇರವಾಗಿ ಬಡತನವೇ ಕಾರಣವಾಗಿದೆ. ಸಾವಿನ ಸಂಖ್ಯೆ ಹೆಚ್ಚಲು ಬಡತನವೇ ಕಾರಣವಾಗಿದೆ. ಬಡತನದಿಂದಾಗಿ ಸರಿಯಾದ ಆಹಾರ ಸಿಗದಿರುವುದು, ಇದರಿಂದಾಗಿ ರಕ್ತಹೀನತೆ ಮುಂತಾದ ತೊಂದರೆಗಳು ಉಂಟಾಗುವುದು, ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಾಧ್ಯವಾಗದೇ ಇರುವುದು ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ರಾಜಕೀಯ ಕಾರಣದಿಂದಲೂ ಅನಾರೋಗ್ಯ ಕಾಣಿಸಿಕೊಳ್ಳುತ್ತಿದೆ. ಆರೋಗ್ಯಕ್ಕೆ ನೀಡಲಾಗುವ ಹಣಕಾಸಿನ ಹಂಚಿಕೆ ಸರಿಯಾದ ರೀತಿಯಲ್ಲಿ ಆಗದೇ ಇರುವುದು ಮತ್ತು ಮೂಲಭೂತ ಸೌಕರ್ಯಗಳನ್ನು ಸಕಾಲಕ್ಕೆ ಒದಗಿಸದೇ ಇರುವ ಕಾರಣಗಳನ್ನು ಇಲ್ಲಿ ಗುರುತಿಸಬಹುದು. ಸರಕಾರಿ ನೀತಿಗಳು ಕೂಡ ಆರೋಗ್ಯವಂಥ ಸಮಾಜಕ್ಕೆ ಮಾರಕವಾಗಿವೆ. ಕೆಲಸಗಾರರು ಪಡೆಯುವ ಸಂಬಳದಲ್ಲಿ ವ್ಯತ್ಯಯ ಮತ್ತು ವ್ಯತ್ಯಾಸದ ಕಾರಣಗಳು ಇದಕ್ಕೆ ಕಾರಣಗಳಾಗಿವೆ. ಇವುಗಳ ಜತೆ ಅನಕ್ಷರತೆ, ಮೂಢನಂಬಿಕೆಯ ಕಾರಣಗಳಿಂದಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುವುದನ್ನು ಕಾಣಬಹುದು.

ಆರೋಗ್ಯವೇ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಬಹುಮುಖ್ಯ ಎನ್ನುವುದು ನಿರ್ವಿವಾದ. ಈ ಆರೋಗ್ಯ ಅನ್ನುವುದು ವ್ಯಕ್ತಿಯ ಭೌತಿಕ ಮತ್ತು ಮಾನಸಿಕ ಸ್ಥಿತಿಗೆ ಅನ್ವಯಿಸುವಂಥದ್ದು. ಅದರಲ್ಲೂ ಭಾರತದಂತಹ ದೇಶದಲ್ಲಿ ಹಲವು ಸಂಪ್ರದಾಯ, ಮೂಢನಂಬಿಕೆ, ಆಚರಣೆಗಳಿಂದಾಗಿಯೇ ಅನಾರೋಗ್ಯಕ್ಕೆ ತುತ್ತಾದ ಉದಾಹರಣೆಗಳನ್ನು ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

ಆರೋಗ್ಯ ಮತ್ತು ಮಹಿಳೆ : ಆರೋಗ್ಯ ಪ್ರತಿ ಜೀವಿಯ ಮೂಲಭೂತ ಹಕ್ಕು. ಭಾರತೀಯ ಸಂವಿಧಾನ ನೀಡಿರುವ ನಿರ್ದೇಶಕ ತತ್ವಗಳಲ್ಲಿ ಆರೋಗ್ಯದ ಹಕ್ಕು ಕೂಡ ಪ್ರಮುಖವಾದದ್ದು. 38, 39(ಇ), 41, 42, 47 ಮತ್ತು 48 ಮುಂತಾದ ವಿಧಿಗಳು ಆರೋಗ್ಯ ಹಕ್ಕಿನ ಬಗ್ಗೆ ಉಲ್ಲೇಖಿಸುತ್ತವೆ. ಅಲ್ಲದೇ, ಸರ್ಕಾರವು ಎಲ್ಲೆಡೆ ಸಾರ್ವಜನಿಕ ಆರೋಗ್ಯ ಸೇವೆಯನ್ನು ಆರಂಭಿಸಬೇಕು. ಆರೋಗ್ಯ ಸೌಲಭ್ಯಗಳು ಒಳ್ಳೆಯ ಗುಣಮಟ್ಟದಿಂದ ಕೂಡಿರಬೇಕು. ಆರೋಗ್ಯ ಕೇಂದ್ರಗಳಲ್ಲಿ ಧರ್ಮ, ಜಾತಿ, ಲಿಂಗ ಅಥವಾ ಇನ್ನಾವುದೇ ತಾರತಮ್ಯ ಎಸಗಬಾರದು ಅಂತಿದೆ. ಆದರೆ, ಮಹಿಳೆಯ ವಿಚಾರದಲ್ಲಿ ಈ ಲಿಂಗ ತಾರತಮ್ಯವು ನಡೆಯುತ್ತಲೇ ಬರುತ್ತಿದೆ.

ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರು ಆರೋಗ್ಯ ದೃಷ್ಟಿಯಿಂದಲೂ ಕೆಳಮಟ್ಟದಲ್ಲಿದ್ದಾರೆ. ಜೀವನ ಚಕ್ರದಲ್ಲಿ ಜೈವಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲರಾಗಿರುವ ಪರಿಸ್ಥಿತಿಯಲ್ಲಿ ಅವರು ಮತ್ತಷ್ಟು ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ಮಹಿಳೆಯರ ಆರೋಗ್ಯದ ವಿಚಾರದಲ್ಲಿ ನಮ್ಮ ಸಮಾಜ ಇಂದಿಗೂ ಹೆಚ್ಚು ಪ್ರಾಮುಖ್ಯತೆ ನೀಡಿಲ್ಲ. ಗಂಡ, ಮಕ್ಕಳು ಮತ್ತು ಮನೆಯವರ ಆರೈಕೆ, ಲಾಲನೆ ಪಾಲನೆಯಲ್ಲಿಯೇ ಆಕೆಯ ಆರೋಗ್ಯ ಕಡೆಗಣನೆಗೆ ಒಳಗಾಗಿದ್ದಾಳೆ. ಪಿತೃಸಂಸ್ಕೃತಿಯ ಕಪಿಮುಷ್ಠಿಯಿಂದ ಆರೋಗ್ಯ ವ್ಯವಸ್ಥೆಯೂ ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ ಅನ್ನುವುದು ವಿಪರ್ಯಾಸದ ಸಂಗತಿಯೇ ಸರಿ. ನಮ್ಮ ಸಮಾಜದಲ್ಲಿ ಪಿತೃಸಂಸ್ಕೃತಿಯ ಅಂಶಗಳು ಗಾಢವಾಗಿದ್ದರಿಂದ ಮಹಿಳೆಯರ ಆರೋಗ್ಯವು ಮತ್ತಷ್ಟು ನಿರ್ಲಕ್ಷ್ಯಕ್ಕೊಳಗಾಗಿದ್ದನ್ನು ಕಾಣಬಹುದಾಗಿದೆ.

ಮಹಿಳೆಯರ ಅನಾರೋಗ್ಯದ ವಿಷಚಕ್ರ ಅವರು ಹುಟ್ಟುವುದಕ್ಕಿಂತ ಮೊದಲೇ ಆರಂಭವಾಗಿರುತ್ತದೆ. ಈ ಚಕ್ರವು ಅವರ ಹುಟ್ಟು, ಶೈವ, ಬಾಲ್ಯ, ಕಿಶೋರಾವಸ್ಥೆ, ಹರೆಯ, ವಿವಾಹ, ಬಸಿರು, ಬಾಣಂತಿತನಗಳ ಸರಣಿಯಲ್ಲಿದ್ದು, ಮಹಿಳೆಯರ ಬಾಳಿನಲ್ಲಿ

ಹಾಸುಹೊಕ್ಕಾಗಿರುವ ಅನಾರೋಗ್ಯ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾಯಿಸಲ್ಪಡುತ್ತಲೇ ಮುಂದುವರೆಯುತ್ತಿದೆ.

ಸ್ವಾತಂತ್ರ್ಯ ನಂತರದಿಂದ ಇದುವರೆಗೂ ಮಹಿಳಾ ಆರೋಗ್ಯವನ್ನು ಕುರಿತು, ಆರೋಗ್ಯ ಕಾರ್ಯನೀತಿಗಳು, ಯೋಜನೆಗಳು, ಕಾರ್ಯಕ್ರಮಗಳು ರೂಪುಗೊಳ್ಳುವಿಕೆ ಹಾಗೂ ಅವುಗಳನ್ನು ಜಾರಿಗೊಳಿಸುವ ಪ್ರಕ್ರಿಯೆಗಳೆಲ್ಲವೂ ಸ್ತ್ರೀ ಅನಾರೋಗ್ಯದ ಮೂಲದಲ್ಲಿರುವ ಸಾಮಾಜಿಕ, ಆರ್ಥಿಕ, ಕೌಟುಂಬಿಕ ಮತ್ತು ಲಿಂಗತ್ವದ ಕಾರಣಗಳನ್ನು ಪರಿಗಣಿಸದೆಯೇ ನಡೆದುಬಂದಿದೆ. ಆದ್ದರಿಂದ ಇಂದಿಗೂ ನಮ್ಮ ದೇಶದ ಮಹಿಳೆಯರ ಆರೋಗ್ಯದಲ್ಲಿ ನಿರೀಕ್ಷಿತ ಗತಿಯ ಪ್ರಗತಿಯಾಗಿಲ್ಲ ಎಂಬುದು ಜಾಗತೀಕರಣದ ಇಂದಿನ ಸಂದರ್ಭದಲ್ಲಿ ದಿನೇ ದಿನೇ ಸುಸ್ಪಷ್ಟವಾಗುತ್ತಿದೆ. (ಡಾ.ಕೆ.ಸರೋಜಾ (2008), ಮಹಿಳಾ ಆರೋಗ್ಯ ಒಂದು ಮರುಚಿಂತನೆ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ)

1987ರಲ್ಲಿ ಸುರಕ್ಷಿತ ತಾಯ್ತನದ ಅಭಿಯಾನ ಮತ್ತು 1995ರ ಬೀಜಿಂಗ್ ಮಹಿಳೆಯರಿಗಾಗಿ ಜಾಗತಿಕ ವೇದಿಕೆ ಮೊಟ್ಟ ಮೊದಲ ಬಾರಿಗೆ ಜಾಗತಿಕ ಮಟ್ಟದಲ್ಲಿ ಮಹಿಳೆಯರ ಆರೋಗ್ಯದ ಮೇಲೆ ದೃಷ್ಟಿ ಹರಿಸಿದವು. ಮೊದಲ ಬಾರಿಗೆ ವಿಶ್ವಸಂಸ್ಥೆಯು 2000 ಇಸವಿಯಲ್ಲಿ ತನ್ನ ಕಾರ್ಯ ಪರಿಧಿಯೊಳಗೆ ಮಹಿಳೆಯ ಆರೋಗ್ಯ ಸ್ಥಾನ ಕಲ್ಪಿಸಿಕೊಟ್ಟಿತು. ಏನೇ ಸ್ಥಾನವನ್ನು ಕಲ್ಪಿಸಿದರೂ, ಈ ಹೊತ್ತಿಗೂ ಆಕೆ ಆರೋಗ್ಯವಂತಳಾಗಿರುವುದಕ್ಕೆ ಸಾಧ್ಯವಾಗಿಲ್ಲ. ಇಡೀ ಜಗತ್ತಿನ ಮಹಿಳೆಯರಲ್ಲಿ ರಕ್ತಹೀನತೆಯಿಂದ ಬಳಲುವವರ ಸಂಖ್ಯೆ ಭಾರತದಲ್ಲೇ ಅತೀಹೆಚ್ಚು ಎನ್ನುತ್ತಿವೆ ಸಂಶೋಧನೆಗಳು. ಶೇ.87ರಷ್ಟು ಗರ್ಭಿಣಿಯರು, ಶೇ.68ರಷ್ಟು ಪ್ರಜನನದ ವಯೋಮಾನದವರು, ಶೇ.60–70ರಷ್ಟು ಹದಿಹರೆಯದ ಹೆಣ್ಣು ಮಕ್ಕಳು ನಮ್ಮ ದೇಶದಲ್ಲಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಸಾಮಾನ್ಯವಾಗಿ ಮಹಿಳಾ ಆರೋಗ್ಯ ಅಂದಾಕ್ಷಣ ತಾಯ್ತನ ಮತ್ತು ಮಗುವಿನ ಆರೈಕೆಗೇ ಬಹುಪಾಲು ಸೀಮಿತಗೊಳಿಸಲಾಗುತ್ತದೆ. ಆದರೆ, ತಾಯ್ತನದಿಂದಾಚೆಗೆ ಒಂದು ಸಮುದಾಯವನ್ನು ಕಟ್ಟುವಲ್ಲಿ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಿ ನಿಲ್ಲುವ ಅಂಶವನ್ನು ಗಮನಿಸಬೇಕಾಗಿದೆ. ಆರೋಗ್ಯವಂತ ಮಹಿಳೆ ತನ್ನ ಕುಟುಂಬ, ಸಮುದಾಯ ಮತ್ತು ಸಮಾಜಕ್ಕಾಗಿ ದುಡಿಯುತ್ತಾಳೆ ಎಂಬುದನ್ನು ಗಮನಿಸಬೇಕಿದೆ. ಈ ಎಲ್ಲವನ್ನು ನಿಭಾಯಿಸುವಲ್ಲಿ ಆಕೆ ಅನೇಕ ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಆ ಒತ್ತಡದ ಕಾರಣಗಳಿಂದಾಗಿಯೇ ಅವಳ ಆರೋಗ್ಯದಲ್ಲಿ ಏರುಪೇರು ಉಂಟಾಗಲಿದೆ. ಕುಟುಂಬದವರಿಗೆ ಸರಿಯಾಗಿ ಆಹಾರ

ಸಿಗದಿರುವುದು. ಜೀವನಕ್ಕೆ ಅಗತ್ಯ ಸಾಮಗ್ರಿಗಳನ್ನು ಕೊಳ್ಳಲು ಹಣದ ಮುಗ್ಗಟ್ಟು, ವಾಸಿಸಲು ಸರಿಯಾದ ಮನೆ ಇಲ್ಲದೇ ಇರುವುದರಿಂದ ಆಕೆ ಆರ್ಥಿಕ ಒತ್ತಡದ ಸಂಕಷ್ಟಕ್ಕೆ ಸಿಲುಕಬಹುದು. ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಹೆಣ್ಣಿಗಿರುವ ಕಡಿಮೆ ಸ್ಥಾನಮಾನ ಮತ್ತು ವರದಕ್ಷಿಣೆಯಂತಹ ಅನಿಷ್ಟ ಪದ್ಧತಿಯು ಮಹಿಳೆಯ ಸಾಮಾಜಿಕ ಒತ್ತಡಕ್ಕೆ ಕಾರಣವಾಗಬಹುದು. ಸರಿಯಾಗಿ ವೇತನ ಸಿಗದೇ ಇರುವುದು. ದುಡಿಯಲು ಸರಿಯಾದ ಅವಕಾಶ ಇಲ್ಲದೇ ಇರುವುದು. ಕೆಲಸದ ಹೆಚ್ಚಿನ ಹೊರೆ. ಔದ್ಯೋಗಿಕ ಅಪಾಯಗಳು. ಕೆಲಸದಲ್ಲಿನ ಅಭದ್ರತೆಯು ಔದ್ಯೋಗಿಕ ಒತ್ತಡಕ್ಕೆ ಕಾರಣವಾಗಬಹುದು. ಕುಟುಂಬದಲ್ಲಿನ ಸ್ಥಾನಮಾನ, ಬೇಗನೆ ವಿವಾಹ, ಮನೆಯವರ ವಿಭಿನ್ನ ನಿರೀಕ್ಷೆಗಳು ಕೌಟುಂಬಿಕ ಒತ್ತಡಗಳನ್ನು ಹಾಕಬಹುದು. ಇವೆಲ್ಲವೂ ಮಹಿಳಾ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಮುಖವಾಗಿ ಕಾಡುವಂತಹ ಅಂಶಗಳು. ಮಹಿಳಾ ಆರೋಗ್ಯವನ್ನು ಭೌತಿಕ, ಮಾನಸಿಕ, ಬೌದ್ಧಿಕ ಮತ್ತು ಸಂತಾನಾರೋಗ್ಯ ಎಂದು ನಾಲ್ಕು ಬಗೆಯಲ್ಲಿ ವಿಭಜಿಸಲಾಗಿದೆ.

ಮಹಿಳಾ ಆರೋಗ್ಯ ಭೌತಿಕ ನೆಲೆಯಲ್ಲಿ : ಸಾಮಾನ್ಯವಾಗಿ ಮಹಿಳೆಯರು ಎರಡು ರೀತಿಯಲ್ಲಿ ದೈಹಿಕ ಶ್ರಮದಿಂದಾದ ತೊಂದರೆ ಎದುರಿಸುತ್ತಿದ್ದಾರೆ. ಪೂರ್ತಿ ದೇಹಕ್ಕೆ ದಣಿವಾಗುವಂತಹ ಶ್ರಮ ಒಂದು ರೀತಿಯದ್ದಾಗಿದ್ದರೆ, ಮತ್ತೊಂದು ಕುಳಿತಲ್ಲಿಯೇ ಮಾಡುವ ಕೆಲಸದಿಂದಾದ ದೈಹಿಕ ತೊಂದರೆ.

ಗಾರೆ ಕೆಲಸ ಮಾಡುವ ಮಹಿಳೆಯರು, ಕಲ್ಲು, ಇಟ್ಟಿಗೆ, ಮಣ್ಣು, ಮರಳು, ಕಟ್ಟಿಗೆ, ರೈತ ಮಹಿಳೆಯರು ತೂಕದ ಧಾನ್ಯಗಳ ಚೀಲ ಮತ್ತು ಕೃಷಿಕ ಬಳಸುವ ಭಾರದ ಉಪಕರಣಗಳು ಹೀಗೆ ನಾನಾ ಕಡೆ ಭಾರವಾದ ವಸ್ತುವನ್ನು ಹೊರುತ್ತಾರೆ. ಭಾರ ಎತ್ತುವ ಕ್ರೀಡಾಪಟು ಕೂಡ ಈ ಯಾದಿಗೆ ಸೇರ್ಪಡೆ ಆಗುತ್ತಾರೆ. ಇಂತಹ ಮಹಿಳಾ ಕೆಲಸಗಾರರಿಗೆ ಸ್ನಾಯು ತೊಂದರೆಗಳು, ಭುಜದ ನೋವು, ಬೆನ್ನು ನೋವು, ಮೂಳೆ ಮುರಿತ, ಗರ್ಭಕೋಶದ ತೊಂದರೆ ಹೀಗೆ ಅನೇಕ ತೊಂದರೆಗಳನ್ನು ಅನುಭವಿಸುತ್ತಾರೆ.

ಬೀಡಿ ಕಟ್ಟುವ ಕೆಲಸ, ಹೂ ಕಟ್ಟುವ ಕೆಲಸ, ಮೇಣಬತ್ತಿ, ಅಗರಬತ್ತಿ ಹೀಗೆ ಗುಡಿ ಕೈಗಾರಿಕೆಯಲ್ಲಿ ಭಾಗವಹಿಸುವ ಮಹಿಳೆಯರು, ಸಾಫ್ಟ್‌ವೇರ್ ಕಂಪೆನಿಯಲ್ಲಿ ಕೆಲಸ ಮಾಡುವ ಮಹಿಳೆಯರು. ಕಚೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರು ಹೆಚ್ಚಾಗಿ ಕುಳಿತಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಇಂತಹ ಮಹಿಳೆಯರು ಈ ವೃತ್ತಿಗೆ ಸಂಬಂಧಪಟ್ಟಂತಹ ಆರೋಗ್ಯ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

ಕೆಲ ಮಹಿಳೆಯರು ಉಷ್ಣತೆ ಹೆಚ್ಚಾಗಿರುವ, ಲೋಹದ ಕೆಲಸಗಳು, ಬೆಂಕಿನಂದಿಸುವ ಕೆಲಸದಲ್ಲಿ ತೊಡಗಿರುವ ಮಹಿಳೆಯರು ಭೌತಿಕ ತೊಂದರೆಗಳನ್ನು ಎದುರಿಸುತ್ತಾರೆ. ಅತೀ ಉಷ್ಣತೆ ಇದ್ದಾಗ ಆಯಾಸ, ತಲೆನೋವು, ವಿಪರೀತ ಸುಸ್ತು ಆಗಬಹುದು. ಗರ್ಭಪಾತ, ನರಗಳ ತೊಂದರೆಗಳನ್ನು ಅವರು ಅನುಭವಿಸಬಹುದು. ಇಂತಹ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರು ಕಡಿಮೆ ತೂಕದ ಮಗುವನ್ನು ಹೆತ್ತು, ಅಕಾಲ ಪ್ರಸವವಾಗುವ ಉದಾಹರಣೆಗಳನ್ನು ವೈದ್ಯರು ನೀಡುತ್ತಾರೆ.

ಸಾಮಾನ್ಯವಾಗಿ ಮಹಿಳೆಯರು ಮನೆ ಮತ್ತು ಆಚೆ ಎರಡೂ ಕಡೆ ಕೆಲಸ ಮಾಡುವ ಅನಿವಾರ್ಯತೆ ಇರುವುದರಿಂದ. ಈ ಎರಡೂ ಕೆಲಸಗಳನ್ನು ಸರಿದೂಗಿಸಲು ಆಕೆ ಮಾನಸಿಕ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾಳೆ. ಮಕ್ಕಳ ಕಾರಣದಿಂದಾಗಿ, ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳ, ಕುಟುಂಬದ ಕಟ್ಟು ಪಾಡು, ಆರ್ಥಿಕ ಕುಸಿತ, ಪದೋನ್ನತಿ, ರಾತ್ರಿ ಕೆಲಸ ಹೀಗೆ ನಾನಾ ಕಾರಣಗಳು ಅವಳ ಮಾನಸಿಕ ಆರೋಗ್ಯವನ್ನು ಹಾಳು ಮಾಡುತ್ತಿವೆ. ಇದರಿಂದಾಗಿ ಆಕೆ ನಿರಾಸೆ, ಜಿಗುಪ್ಸೆ ಹೊಂದುತ್ತಾಳೆ. ಮಾನಸಿಕ ಖಿನ್ನತೆಗೆ ಒಳಗಾಗುತ್ತಾಳೆ. ಮಾನಸಿಕ ಒತ್ತಡದಿಂದಾಗಿ ಆಕೆಗೆ ದೈಹಿಕ ತೊಂದರೆಗಳು ಕೂಡ ಬರಬಹುದು. ವಿಪರೀತ ಒತ್ತಡದಿಂದಾಗಿ, ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆ ಶುರುವಾಗುತ್ತವೆ. ಥೈರಾಯ್ಡ್, ತಲೆನೋವು, ಹೃದ್ರೋಗ ಕೂಡ ಬರಬಹುದು. ಹಾಗೆಯೇ ಎಲ್ಲ ಆರೋಗ್ಯಗಳಂತೆಯೇ ಮಹಿಳೆಯರಿಗೆ ಸಂತಾನಾರೋಗ್ಯವು ಮುಖ್ಯವಾದದು. ಋತುಮತಿ ಆದಾಗಿನಿಂದ ಹಿಡಿದು ಋತುಬಂಧದವರೆಗೂ ಮಹಿಳೆಯು ಸಂತಾನಾರೋಗ್ಯದ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತಾಳೆ. ಈ ಅವಧಿಯಲ್ಲಿ ಆಕೆ ನಾನಾ ರೀತಿಯ ಸಂಕಟಗಳನ್ನು ಎದುರಿಸಬೇಕಾಗುತ್ತದೆ. ಮಹಿಳೆಯರ ದೇಹ ಮತ್ತು ಆಕೆಯ ಗರ್ಭಾಶಯ ಒಂದು ಶಕ್ತಿಕೇಂದ್ರವಾಗಿರುವುದನ್ನು ಕಾಣಬಹುದು. ಇದಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸ್ಪಷ್ಟ.

ಉದ್ಯೋಗಸ್ಥ ಮಹಿಳೆಯರ ಆರೋಗ್ಯ ಸಮಸ್ಯೆ : ದುಡಿಯದೇ ಇರುವ ಪುರುಷನನ್ನು ಕಾಣಬಹುದು. ಆದರೆ, ದುಡಿಯದೇ ಇರುವ ಮಹಿಳೆಯನ್ನು ಯಾವ ದೇಶದಲ್ಲಿಯೂ ಕಾಣುವುದಕ್ಕೆ ಸಾಧ್ಯವಿಲ್ಲ. ಆಕೆ ಮನೆ ಒಳಗೋ ಹೊರಗೋ ಒಂದಿಲ್ಲೊಂದು ರೀತಿಯಲ್ಲಿ ತನ್ನನ್ನು ತಾನು ದುಡಿಮೆಯಲ್ಲಿ ತೊಡಗಿಸಿಕೊಂಡಿರುತ್ತಾಳೆ. ಅದಕ್ಕೆ ನಿಷ್ಠೆಯಾಗಿ ಕೆಲಸ ಮಾಡುತ್ತಾಳೆ. ಹಾಗಾಗಿಯೇ ಬಹುತೇಕ ಮಹಿಳೆಯರ ಮಾನಸಿಕ ಮತ್ತು ದೈಹಿಕ ಆರೋಗ್ಯ

ಸ್ಥಿತಿಗಳಲ್ಲಿ ನಾವು ಭಿನ್ನತೆಯನ್ನು ಕಾಣಬಹುದಾಗಿದೆ. ಮನೆಯನ್ನು ನಿಭಾಯಿಸುವುದರ ಜೊತೆಗೆ ಆಕೆ ಮನೆನಡೆಸಲು ಆದಾಯಗಳಿಸುವುದು ಇಂದು ಅವಶ್ಯಕವಾಗಿದೆ. ಕೇವಲ ಪಟ್ಟಣದಲ್ಲಿರುವ ಹೆಣ್ಣು ಮಕ್ಕಳಿಗೆ ಮಾತ್ರವಲ್ಲ, ಹಳ್ಳಿಗಳಲ್ಲಿ ಬದುಕುತ್ತಿರುವ ಹೆಣ್ಣು ಮಕ್ಕಳಿಗೂ ಕೂಡ ಮನೆ ನಡೆಸಲು ಹೊರಗೆ ದುಡಿಯುವುದು ಅನಿವಾರ್ಯವಾಗಿದೆ. ಭಾರವಾದ ಕೆಲಸ ಮಾಡುವ ಹೆಣ್ಣು ಮಕ್ಕಳು ಸಂಧಿ ನೋವು, ಬೆನ್ನು ಬಾಗುವುದು, ಮೂಳೆ ಮುರಿತ, ಗರ್ಭಾಶಯದ ತೊಂದರೆಗಳು, ಗರ್ಭಪಾತಗಳ ತೊಂದರೆ ಹೀಗೆ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ ಹಳ್ಳಿಗಾಡಿನ ಮಹಿಳೆಗೆ ಇಂದು ಅಪೌಷ್ಠಿಕತೆಯ ಕೊರತೆ ಸಾಕಷ್ಟು ಕಾಡುತ್ತಿರುವುದನ್ನು ಕಾಣಬಹುದಾಗಿದೆ.

ಮನೆಯಲ್ಲೇ ಕೆಲಸ ಮಾಡುವ ಮಹಿಳೆಯೂ ಕೂಡ ತನ್ನದೇ ಆದ ಆರೋಗ್ಯ ಸಮಸ್ಯೆಗಳನ್ನು ಅನುಭವಿಸುತ್ತಿರುವುದನ್ನು ಇಂದು ಕಾಣಬಹುದು. ಗೃಹ ಕೆಲಸ, ಗುಡಿಗಾರಿಕೆಯಂತಹ ಕೆಲಸದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ದೀರ್ಘವಾದ ಕೆಲಸದ ವೇಳೆ, ಕಡಿಮೆ ಸಂಬಳ, ಮಾನಸಿಕ ಕಿರುಕುಳ, ಒತ್ತಡದ ಕೆಲಸ, ಅನಾನುಕೂಲವಾದ ಕೆಲಸದ ಪರಿಸರ, ಕೃಷಿಗೆ ಬಳಸುವ ರಾಸಾಯನಿಕ ಪದಾರ್ಥಗಳ ಬಳಕೆಯಿಂದಾದ ಅನಾರೋಗ್ಯದ ಕಾರಣಗಳಿಂದಾಗಿಯೂ ಅವಳು ಸಂಕಷ್ಟಗಳನ್ನು ಎದುರಿಸುತ್ತಿದ್ದಾಳೆ. ಈ ಕಾರಣಗಳಿಂದಾಗಿ ಗರ್ಭಿಣಿಯರಿಗೆ ಹೆಚ್ಚಿನ ದುಷ್ಪರಿಣಾಮವನ್ನು ಕಾಣಬಹುದು. ಉದ್ಯೋಗಸ್ಥ ಮಹಿಳೆಯರು ಮನೆಯಲ್ಲಿಯೂ ಮತ್ತು ಹೊರಗಡೆಯೂ ದುಡಿಯುವುದರಿಂದ ಆರೋಗ್ಯದಲ್ಲಿ ನಾನಾ ಸಮಸ್ಯೆಗಳನ್ನು ಎದುರಿಸುತ್ತಾರೆ.

ಮಹಿಳಾ ದಿನಾಚರಣೆಯ ಅಂಗವಾಗಿ, ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟವು "ಬಹು ಆಯಾಮದ ಕೆಲಸಗಳಿಂದಾಗಿ ಮಹಿಳೆಯರ ಆರೋಗ್ಯದ ಮೇಲೆ ಗಂಭೀರ ಪರಿಣಾಮ' ಎಂಬ ಹೆಸರಿನಲ್ಲಿ ಇತ್ತೀಚೆಗೆ ಸಮೀಕ್ಷೆಯೊಂದನ್ನು ನಡೆಸಿದೆ. ಇದರ ವರದಿಯ ಪ್ರಕಾರ ದುಡಿಯುವ ಮಹಿಳೆಗೆ ಆಫೀಸಿನ ಮತ್ತು ಮನೆಯ ಕೆಲಸದಲ್ಲಿ ಸರಿಯಾದ ಸಮತೋಲನ ಸಾಧಿಸಲು ಕಷ್ಟವಾಗುತ್ತಿರುವುದನ್ನು ಖಚಿತ ಪಡಿಸಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀಳುವುದನ್ನು ಸಮೀಕ್ಷೆ ಪತ್ತೆ ಮಾಡಿದೆ. 32 ರಿಂದ 58ರ ವಯೋಮಾನದ 288 ಮಹಿಳೆಯರನ್ನು ಈ ಸಮೀಕ್ಷೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿತ್ತು. ಅದರಲ್ಲಿ ಶೇಕಡಾ 75ರಷ್ಟು ಮಹಿಳೆಯರು ಒಂದಲ್ಲ ಒಂದು ಆರೋಗ್ಯ ಸಮಸ್ಯೆಗಳಿಗೆ ಗುರಿಯಾಗಿರುವುದನ್ನು ಪತ್ತೆ ಹಚ್ಚಿದೆ. ಶೇ.78ರಷ್ಟು ಮಹಿಳೆಯರು ಜೀವನಶೈಲಿಯ ಸುದೀರ್ಘ ಮತ್ತು ತೀವ್ರ ನೋವುಗಳಿಂದ

ನರಳುತ್ತಿರುವುದನ್ನು ಸಮೀಕ್ಷೆ ಹೇಳಿದೆ. ಇವುಗಳಲ್ಲಿ ಸ್ಥೂಲಕಾಯತೆ, ಖಿನ್ನತೆ, ತೀವ್ರ ಬೆನ್ನುನೋವು, ಮಧುಮೇಹ, ಅಧಿಕ ರಕ್ತದ ಒತ್ತಡ, ಅಧಿಕ ಕೊಲೆಸ್ಟ್ರಾಲ್, ಹೃದಯ ಮತ್ತು ಮೂತ್ರಪಿಂಡದ ಕಾಯಿಲೆಗಳೂ ಸೇರಿರುವುದು ಆಘಾತಕಾರಿ ಸಂಗತಿ ಎಂದು ಹೇಳಿದೆ. ಸದ್ಯಕ್ಕೆ ಕಿರಿಯ ವಯೋಮಾನದವರು ಇವುಗಳನ್ನು ನಿಭಾಯಿಸುವ ಶಕ್ತಿ ಹೊಂದಿದ್ದರೂ, ಮುಂದಿನ ದಿನಗಳಲ್ಲಿ ಸಮಸ್ಯೆಗಳು ತುಂಬಾ ಅಪಾಯದಿಂದ ಕೂಡಿರುವವು ಎಂದು ಪ್ರಕಟಣೆ ತಿಳಿಸಿದೆ. ಆರ್ಥಿಕ ಹಿಂಜರಿತ ಮತ್ತು ಕಡಿಮೆ ಉದ್ಯೋಗ ಸೃಷ್ಟಿಯಿಂದ ಉದ್ಯೋಗ ಕಳೆದುಕೊಳ್ಳುವುದು ಈ ಪರಿಸ್ಥಿತಿಯನ್ನು ಇನ್ನಷ್ಟು ಕೆಟ್ಟದಾಗಿ ಮಾಡುತ್ತದೆ ಎಂದು ಬಹುತೇಕ ಮಹಿಳೆಯರು ಸಮೀಕ್ಷೆಯಲ್ಲಿ ತಿಳಿಸಿರುವುದು ಪತ್ತೆಯಾಗಿದೆ. ಬಿಡುವಿಲ್ಲದ ವೇಳಾಪಟ್ಟಿ ಮತ್ತು ನಿರಾಕರಣೆಯ ಮನಸ್ಥಿತಿಯಿಂದಾಗಿ ಬಹುತೇಕ ಮಹಿಳೆಯರು ತಮ್ಮ ಸಮಸ್ಯೆಗಳ ನಿವಾರಣೆಗೆ ವೈದ್ಯರ ಬಳಿ ಹೋಗುವುದಿಲ್ಲ ಎಂದು ಈ ಸಮೀಕ್ಷೆಯಲ್ಲಿ ಹೇಳಿಕೊಂಡಿದ್ದಾರೆ. ಅದರಲ್ಲೂ ಕೆಳದರ್ಜೆಯ ವೃತ್ತಿಯಲ್ಲಿರುವವರಿಗೆ ವೈದ್ಯಕೀಯ ವೆಚ್ಚವನ್ನು ಭರಿಸುವುದಕ್ಕೆ ಸಾಧ್ಯವಾಗದ ಹಿನ್ನೆಲೆಯಲ್ಲಿ ವೈದ್ಯರನ್ನು ಕಾಣಲು ಸಾಧ್ಯವಾಗುತ್ತಿಲ್ಲ ಅಂದಿದ್ದಾರೆ.

ಭೌತಿಕ, ರಾಸಾಯನಿಕ, ಜೈವಿಕ, ಮಾನಸಿಕ ಹೀಗೆ ದುಡಿಯುವ ಮಹಿಳೆಯು ನಾನಾ ಕಾರಣಗಳಿಂದಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾಳೆ. ಈ ಉದ್ಯೋಗಸ್ಥ ಸ್ತ್ರೀಯರ ಆರೋಗ್ಯವು ಕೇವಲ ಅವರ ಆರೋಗ್ಯವನ್ನು ಮಾತ್ರ ಹಾಳು ಮಾಡದೇ, ಅವರ ಗರ್ಭದಲ್ಲಿ ಬೆಳೆಯುವ ಮಗುವಿನ ಮೇಲೂ ಪರಿಣಾಮ ಬೀರುತ್ತದೆ. ಅಲ್ಲದೇ, ಸ್ತ್ರೀಯರ ಆರೋಗ್ಯ ಕೆಟ್ಟರೆ ಅದರ ದುಷ್ಪರಿಣಾಮ ಇಡೀ ಕುಟುಂಬ ಮತ್ತು ಸಮಾಜದ ಮೇಲಾಗುತ್ತದೆ ಎನ್ನುವುದನ್ನು ನೆನಪಿಡಬೇಕಿದೆ.

8.1 ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಆರೋಗ್ಯ ಸಮಸ್ಯೆ :

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರು ಅವರ ವೃತ್ತಿ ಕಾರಣದಿಂದಾಗಿಯೇ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಾಮಾನ್ಯವಾಗಿ ಟೆಲಿವಿಷನ್ ಮಾಧ್ಯಮದಲ್ಲಿ ಹಲವು ವಿಭಾಗಗಳಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಕಚೇರಿಯ ಆಚೆ (ಫೀಲ್ಡ್) ಕಾಣುವ ಪತ್ರಕರ್ತೆಯರದ್ದು ಒಂದು ರೀತಿಯ ಸಮಸ್ಯೆಯಾದರೆ, ಸ್ಟುಡಿಯೋದಲ್ಲಿ ಕೆಲಸ ಮಾಡುವವರು, ಡೆಸ್ಕ್‌ನಲ್ಲಿ ಕೆಲಸ ಮಾಡುವವರು ಮತ್ತು ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುವವರು ಅವರದ್ದೇ ಆದ ಕೆಲಸಗಳಿಂದಾಗಿ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಕೆಲ ಆರೋಗ್ಯ ಸಮಸ್ಯೆಗಳು ಸಾಮಾನ್ಯವಾಗಿ ಎಲ್ಲರನ್ನೂ

ಕಾಡುತ್ತಿವೆ. ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಕೆಲವು ಮಹಿಳೆಯರು ತಮ್ಮದೇ ಆದ ಅನುಭವವನ್ನು ಹಂಚಿಕೊಂಡಿದ್ದಾರೆ. ಅವುಗಳನ್ನು ಅವರ ಮಾತಿನಲ್ಲಿಯೇ ಹೇಳುವುದರ ಮೂಲಕ ವಿಶ್ಲೇಷಿಸಲಾಗಿದೆ.

ಖಾಸಗಿ ವಾಹಿನಿಯೊಂದರಲ್ಲಿ ಕೆಲಸ ಮಾಡುವ ಪತ್ರಕರ್ತೆ ಮತ್ತು ನಿರೂಪಕಿ ನಾಜಿಯಾ ತಮ್ಮ ಆರೋಗ್ಯ ಸಮಸ್ಯೆಯ ಬಗ್ಗೆ ಹೇಳಿಕೊಂಡಿದ್ದು ಹೀಗೆ, "ಮಾಧ್ಯಮ ಸಂಸ್ಥೆಗಳೇ ಘೋಷಿಸಿಕೊಂಡಂತೆ ದಿನದ ಇಪ್ಪತ್ನಾಲ್ಕು ಗಂಟೆ ಕೆಲಸ ಮಾಡುವ ಕ್ಷೇತ್ರವಿದು. ಹಾಗಾಗಿ ಸಹಜವಾಗಿಯೇ ಒತ್ತಡ ಇದ್ದೇ ಇರುತ್ತದೆ. ನಾನು ಈವರೆಗೂ ಮೂರು ಸುದ್ದಿ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದೇನೆ. ಒತ್ತಡ ಇಲ್ಲದೇ ಕೆಲಸ ಮಾಡಿದ ಉದಾಹರಣೆಗಳೇ ಇಲ್ಲ. ಕೆಲಸದ ಟೆನ್‌ಷನ್ ಹೇಗಿರುತ್ತದೆ ಅಂದರೆ, ನಿದ್ದೆ ಬರಲ್ಲ. ಹೊಟ್ಟೆ ತುಂಬಾ ಊಟ ಮಾಡುವುದಕ್ಕೂ ಆಗಲ್ಲ. ಒಂದೊಂದು ಬಾರಿ ವಾರದ ರಜೆ ಇರಲ್ಲ. ಮನರಂಜನೆಯ ಮಾತು ದೂರವೇ ಉಳಿಯಿತು. ದಿನವೂ ಒತ್ತಡದಲ್ಲಿಯೇ ಕೆಲಸ ಮಾಡಬೇಕು ಅಂದರೆ, ಆರೋಗ್ಯದ ಸ್ಥಿತಿ ಏನಾಗಬೇಡ? ಈ ಕೆಲಸದ ಕಾರಣದಿಂದಾಗಿಯೇ ನಾನು ಹಲವು ರೀತಿಯ ಆರೋಗ್ಯ ಸಮಸ್ಯೆ ಎದುರಿಸಿದ್ದೇನೆ. ಆಸ್ಪತ್ರೆಗೆ ದಾಖಲು ಆಗಿದ್ದೇನೆ. ಈ ವೃತ್ತಿಗೆ ಸಂಬಂಧಿಸಿದಂತೆ ಯಾವೆಲ್ಲ ಆರೋಗ್ಯ ಸಮಸ್ಯೆಗಳು ನನಗೆ ಎದುರಾಗಿವೆ ಅಂದರೆ, ಹೈಪರ್ ಥೈರಾಯ್ಡ್ ಆಯಿತು. ತಲೆ ನೋವು, ಜ್ವರ ಬರೋದು ಕಾಮನ್. ಆರೋಗ್ಯ ಸಮಸ್ಯೆಯಿಂದಾಗಿಯೇ ನನಗೆ ಎರಡು ಬಾರಿ ಅಬಾರ್ಷನ್ ಕೂಡ ಆಯಿತು. ಆರೋಗ್ಯದ ವಿಷಯದಲ್ಲಿ ಹುಡುಗರಿಗಿಂತ ಹುಡುಗಿಯರೇ ಮೀಡಿಯಾದಲ್ಲಿ ಹೆಚ್ಚು ಸಫರ್ ಆಗುತ್ತಿದ್ದಾರೆ. ಸುಮ್ಮನೆ ನನ್ನದೇ ಒಂದು ಉದಾಹರಣೆ ಕೊಡುತ್ತೇನೆ ನೋಡಿ. ಬೆಳಿಗ್ಗೆ ನಾಲ್ಕು ಗಂಟೆಗೆ ಏಳಬೇಕು. ಮನೆಯಲ್ಲಿಯೇ ನೂರೆಂಟು ಕೆಲಸಗಳು. ಅಡುಗೆ ಮಾಡೋದು, ಅಪ್ಪ ಅಮ್ಮನ ಆರೈಕೆ. ಗಂಡನಿಗೂ ನಾವೇ ಊಟ ತಿಂಡಿ ರೆಡಿ ಮಾಡಿ ಕೊಡಬೇಕು. ರಾಶಿ ಬಟ್ಟೆಗಳು. ಮನೆಯ ಕೆಲಸ ಮಾಡಿಯೇ ಹೈರಾಣಾಗಿರುತ್ತೇವೆ. ಈ ಮಧ್ಯೆ ಏನೋ ಒಂದು ಘಟನೆ ನಡೆದು ಬಿಡುತ್ತದೆ. ಆಫೀಸ್‌ನಿಂದ ಕಾಲ್, ಘಟನೆ ನಡೆದ ಸ್ಪಾಟ್‌ಗೆ ಹೋಗಿ, ಅಲ್ಲಿಂದ ನ್ಯೂಸ್ ಕಳಿಸಿ ಅಂತಾರೆ. ಮನೆಯಲ್ಲಿದ್ದರು ನಮಗೆ ಊಟ ಮಾಡಿರುವುದಕ್ಕೆ ಆಗುವುದಿಲ್ಲ. ಘಟನೆ ನಡೆದ ಸ್ಥಳಕ್ಕೆ ಹೋಗಬೇಕು. ಮೊದಲೇ ಉಪವಾಸ ಇರುತ್ತೇವೆ. ಅಲ್ಲಿ ನೀರು ಕೂಡ ಕುಡಿಯುವುದಕ್ಕೆ ಪುರುಸೊತ್ತು ಇರಲ್ಲ. ಆಫೀಸ್‌ನಿಂದ ಫೋನ್ ಮೇಲೆ ಫೋನ್. ಅವರಿಗೆ ನಾವೇ ಮೊದಲು ಸುದ್ದಿ ಕೊಡುವ ಧಾವಂತ. ಘಟನೆ ನಡೆದ ಸ್ಥಳಕ್ಕೆ ಹೋದರೆ, ಅಷ್ಟು ಸುಲಭಕ್ಕೆ ಮಾಹಿತಿಯೇ ನಮಗೆ ಲಭ್ಯವಾಗಲ್ಲ. ಈ ಕಡೆ ಆಫೀಸ್ ಫೋನ್,

ಆ ಕಡೆ ಮಾಹಿತಿಯ ಅಲಭ್ಯದ ಟೆನ್‌ಷನ್. ಮಾಹಿತಿ ಸಿಗಲ್ಲ ಅಂತ ಹೇಳುವುದಕ್ಕೆ ಆಗಲ್ಲ. ನಮ್ ಸೀನಿಯರ್ ಉಗಿತಾರೆ. ನಾನು ಕೆಲಸಕ್ಕೆ ಬಾರದವಳು ಅಂತ ಬ್ರ್ಯಾಂಡ್ (ಮುದ್ರೆ ಒತ್ತುವುದು) ಮಾಡ್ತಾರೆ. ಆ ಟೆನ್‌ಷನ್. ಈ ಕಡೆ ಹಸಿವೆ. ಟೆನ್‌ಷನ್‌ನಿಂದ ತಲೆನೋವು ಶುರುವಾಗತ್ತೆ. ಕಷ್ಟಪಟ್ಟು ಸುದ್ದಿ ಕೊಟ್ಟು ಮನೆಗೆ ಬಂದರೆ, ನಿದ್ದೆ ಬರಲ್ಲ. ಮತ್ತೆ ನಾಳೆಯ ಚಿಂತೆ. ನೆಮ್ಮದಿ ಮತ್ತು ಊಟ ಎರಡೂ ಇಲ್ಲದೇ ಇದ್ದರೆ ಏನೆಲ್ಲ ಕಾಯಿಲೆಗಳು ಬರಬಹುದು ಯೋಚ್ನೆ ಮಾಡಿ. ಮನೆಯಿಂದ ಶುರುವಾಗುವ ಈ ಟೆನ್‌ಷನ್ ಆಫೀಸ್ ಮುಗಿಸಿಕೊಂಡು ಮನೆಗೆ ಬಂದರೂ ಬಿಡಲ್ಲ. ಹಾಗಾಗಿ ನಾನು ಥೈರಾಯ್ಡಿ ಸಮಸ್ಯೆಯಿಂದ ಬಳಲಬೇಕಾಯಿತು. ಈ ಕೆಲಸದ ಒತ್ತಡದಲ್ಲಿ ಅದನ್ನು ಗುರುತಿಸದೇ ಹೋದೆ. ಹಾಗಾಗಿ ತೂಕ ಹೆಚ್ಚಾಯಿತು. ತೂಕ ಹೆಚ್ಚಾದರೂ ನಮಗೆ ಕೆಲಸದಲ್ಲಿ ಸಮಸ್ಯೆ. ಹೇಗೋ ಸಮಯ ಹೊಂದಿಸಿಕೊಂಡು ಡಾಕ್ಟರ್‌ನ ಮೀಟ್ ಮಾಡಿ ಚೆಕ್ ಮಾಡಿಸಿದಾಗ ನನಗಾಗ ಹೈಪರ್ ಥೈರಾಯ್ಡ್ ಆಗಿದೆ ಅಂದ್ರು. ಒಬ್ಬ ಡಾಕ್ಟರ್ ಕ್ಯಾನ್ಸರ್ ಮೊದಲ ಹಂತದಲ್ಲಿದೆ ಅಂತ ಹೆದರಿಸಿಯೂ ಬಿಟ್ಟಿದ್ದರು. ಈ ಎಲ್ಲ ಕಾರಣದಿಂದಾಗಿ ಮಿಸ್ ಕ್ಯಾರಿ ಆಯಿತು. ಇದು ಕೇವಲ ನನ್ನ ಮೇಲೆ ಮಾತ್ರ ಪರಿಣಾಮ ಬೀರಲಿಲ್ಲ, ಬದಲಾಗಿ ನಮ್ಮ ಅತ್ತೆ ಮಾವಂದಿರೂ ಸಹ ಬಹಳ ಹಿಂಸೆಯನ್ನು ಅನುಭವಿಸಿದರು. ಹೀಗೆ ಒಂದು ಬಾರಿ ಆದರೆ ಸುಧಾರಿಸಿಕೊಳ್ಳಬಹುದು ಆದರೆ ಮೇಲಿಂದ ಮೇಲೆ ಎರಡು ಬಾರಿಯಾದರೆ ಇದನ್ನು ಸಹಿಸಿಕೊಳ್ಳಲು ಆಗಲಿಲ್ಲ. ಹಾಗಾಗಿ ಈ ಕೆಲಸವನ್ನೇ ಬಿಟ್ಟು ಬಿಡೋಣ ಅಂತ ನಿರ್ಧಾರ ಮಾಡಿದ್ದೆ. ಆದ್ರೆ ಮನೆಯಲ್ಲಿ ಒತ್ತಡಗಳು ಇರುವುದರಿಂದ ಅನಿವಾರ್ಯವಾಗಿ ಈ ಕೆಲಸವನ್ನು ಮಾಡುತ್ತಿದ್ದೇನೆ" ಎಂದು ಹೇಳಿದರು.

ಮತ್ತೊಂದು ಖಾಸಗಿ ಸುದ್ದಿ ವಾಹಿನಿಯಲ್ಲಿ ಕೆಲಸ ಮಾಡುತ್ತಿರುವ ಸಬಿತಾ ಅವರದ್ದು ಮತ್ತೊಂದು ರೀತಿಯ ಆರೋಗ್ಯ ಸಮಸ್ಯೆ ಎದುರಾಗಿದೆ. "ನಾನು ವಾರ್ತಾ ವಾಚಕಿ (ನ್ಯೂಸ್ ರೀಡರ್) ಮತ್ತು ವರದಿಗಾರ್ತಿ ಎರಡೂ ವಿಭಾಗದಲ್ಲಿ ಕೆಲಸ ಮಾಡಿದ ಅನುಭವವಿದೆ. ಎರಡು ವಿಭಿನ್ನ ನೆಲೆಯಲ್ಲಿ ಕೆಲಸಗಳನ್ನು ಕೇಳುತ್ತವೆ. ಎರಡೂ ಕೆಲಸಕ್ಕೆ ಬೇರೆ ಬೇರೆ ಸಿದ್ಧತೆ ಬೇಕು. ಹೀಗಾಗಿ ಎರಡನ್ನೂ ಒಟ್ಟಿಗೆ ನಿಭಾಯಿಸುವ ಸಂದರ್ಭದಲ್ಲಿ ನನಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳು ಆಗಿವೆ. ಆ್ಯಂಕರ್ಸ್ ತಮ್ಮ ಸೌಂದರ್ಯದ ಜೊತೆಗೆ ಧ್ವನಿಯನ್ನು ಕಾಪಾಡಿಕೊಳ್ಳುವುದು ತುಂಬಾ ಮುಖ್ಯ. ಈ ಸಮಸ್ಯೆಯನ್ನು ನಾನು ತುಂಬಾ ಸಲ ಅನುಭವಿಸಿದ್ದೇನೆ. ಆರ್ಥಿಕ ಕಾರಣ ನೀಡಿ, ಸುದ್ದಿ ವಾಹಿನಿಗಳು ಕಡಿಮೆ ಸಂಖ್ಯೆ ಆ್ಯಂಕರ್ಸ್‌ಗೆ ಕೆಲಸ ಕೊಟ್ಟಿರುತ್ತಾರೆ. ಅವರೇ ಹೆಚ್ಚು ಹೊತ್ತು ಕೆಲಸ ಮಾಡಬೇಕು. ಹೀಗಾಗಿ ಧ್ವನಿಗೆ ರೆಸ್ಟ್

ಸಿಗುವುದಿಲ್ಲ. ವಿಪರೀತ ಗಂಟಲು ನೋವು ಆಗೋದು. ಹುಡುಗರಂತೆ ರಫ್ ವಾಯ್ಸ್ ಇದ್ದರೆ ಮಹಿಳೆಯರಿಗೆ ನಿರೂಪಣೆ ಮಾಡಲು ಬಿಡುವುದಿಲ್ಲ. ಹುಡುಗಿಯರ ವಾಯ್ಸ್ ಸಾಫ್ಟ್ ಅಂತಾನೇ ಕೆಲಸ ಸಿಕ್ಕಿರುತ್ತದೆ. ಅಲ್ಲದೇ, ಕೆಲಸದ ಒತ್ತಡದಿಂದಾಗಿ ನಾನು ನಿದ್ರಾಹೀನತೆಯಿಂದ ಬಳಲಿದ್ದೇನೆ. ನಿದ್ದೆ ಇಲ್ಲ ಅಂದರೆ, ವಾಯ್ಸ್ ಸರಿ ಇರಲ್ಲ. ಅಲ್ಲದೇ ಕಣ್ಣು ಕೆಳಗೆ ಡಾರ್ಕ್ ಸರ್ಕಲ್ ಆಗುತ್ತದೆ. ಕಣ್ಣಿನ ಸುತ್ತ ಕಪ್ಪುಪಟ್ಟ ಆವರಿಸಿಕೊಂಡರೆ ಕ್ಯಾಮೆರಾದಲ್ಲಿ ನಾವು ಚೆನ್ನಾಗಿ ಕಾಣಲ್ಲ ಅನ್ನುವ ಆತಂಕ. ಯಾವುದೋ ಒಂದು ಶಿಫ್ಟ್‌ಗೆ ನಾವು ಹೊಂದಿಕೊಂಡಿರುತ್ತೇವೆ. ಅಲ್ಲಿಯೂ ಬದಲಾಣೆ ಮಾಡುತ್ತಾರೆ. ಹೊಸ ಶಿಫ್ಟ್‌ಗೆ ಮತ್ತೆ ಹೊಂದಿಕೊಳ್ಳಲು ಮತ್ತಷ್ಟು ಪರದಾಡಬೇಕು. ಮಾನಸಿಕವಾಗಿ ತುಂಬಾ ಹಿಂಸೆ ಅನುಭವಿಸಬೇಕಾಗುತ್ತದೆ. ಇದರಿಂದಾಗಿ ಊಟ ಸೇರುವುದಿಲ್ಲ. ನಿದ್ದೆಯೂ ಇಲ್ಲದೇ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅಸಿಡಿಟಿ ಕಾಮನ್ ಆಗಿದೆ. ಇವೆಲ್ಲ ತೊಂದರೆಗಳಿಂದಾಗಿ ಸೌಂದರ್ಯದ ಜೊತೆ ಧ್ವನಿಯ ಮೇಲೂ ಪರಿಣಾಮ ಬೀರುತ್ತದೆ. ಸೌಂದರ್ಯ ಮತ್ತು ಧ್ವನಿಯ ಸಮಸ್ಯೆ ಎದುರಾದರೆ, ನ್ಯೂಸ್ ಅನ್ನು ಸರಿಯಾಗಿ ಓದಲು ಆಗುವುದಿಲ್ಲ. ಕೆಲಸ ಮಾಡಲು ಆಗುತ್ತಿಲ್ಲ ಎಂದಾದರೆ ಆ ದಿನದ ವೇತನ ಕಟ್ ಆಗುವ ಸಾಧ್ಯತೆ ಇರುತ್ತದೆ. ಕೆಲವು ಸಾರಿ ನಮ್ಮ ಸೀನಿಯರ್‌ಗಳಿಂದ ನಿಂದನೆಗಳು ಎದುರಾಗುತ್ತವೆ. ಜೊತೆಗೆ ನಾವು ನಮ್ಮ ವಾಯ್ಸ್ ಅನ್ನು ಕಾಪಾಡಿಕೊಳ್ಳಲು ಎಣ್ಣೆ ಪದಾರ್ಥಗಳನ್ನು ತಿನ್ನುವುದನ್ನು ಬಿಡಬೇಕಾಗುತ್ತದೆ. ನಮಗೆ ಇಷ್ಟವಾದ ಆಹಾರವನ್ನು ತಿನ್ನುವುದು ಕೂಡ ಕಷ್ಟದ ಸಂಗತಿ" ಎಂದು ಹೇಳಿದರು.

ಪ್ರತಿಷ್ಠಿತ ಸುದ್ದಿ ವಾಹಿನಿಯಲ್ಲಿ ಪತ್ರಕರ್ತೆಯಾಗಿರುವ ಭವ್ಯಾ ತಮ್ಮ ಆರೋಗ್ಯ ಸಮಸ್ಯೆಯನ್ನು ಹೇಳಿಕೊಂಡಿದ್ದು ಹೀಗೆ, "ನನ್ನದು ಕ್ರೈಂ ರಿಪೋರ್ಟರ್ ಕೆಲಸ. ಸಾಮಾನ್ಯವಾಗಿ ಅಪಾಯಕ್ಕೆ ಎಡೆಮಾಡುವಂತಹ ಜಾಗಗಳಲ್ಲಿಯೇ ನಮ್ಮ ಕೆಲಸ ಇರುತ್ತದೆ. ಹಾಗಾಗಿ ಸಹಜವಾಗಿಯೇ ನಾವು ಒತ್ತಡಗಳ ಮಧ್ಯೆ ಕೆಲಸ ಮಾಡಬೇಕಾಗುತ್ತದೆ. ಯಾವುದೋ ಒಂದು ಮರ್ಡರ್ ಆಗಿದೆ ಅಂದ್ಕೊಳ್ಳಿ.. ಆ ಸ್ಪಾಟ್‌ಗೆ ಹೋಗುವ ಟೈಮ್ ಅಷ್ಟೇ ನಮಗೆ ಗೊತ್ತಿರುತ್ತದೆ. ಅಲ್ಲಿಂದ ವಾಪಸ್ಸು ಮನೆಗೆ ಯಾವಾಗ ಬರುತ್ತೇವೆ ಅಂತ ಗೊತ್ತೇ ಇರಲ್ಲ. ಮರ್ಡರ್ ಆದ ವ್ಯಕ್ತಿಯ ಅಂತ್ಯಕ್ರಿಯೆ ಮಾಡಿ, ಅವರ ಕುಟುಂಬ ಮತ್ತು ಪೊಲೀಸ್ ಮನೆ ಸೇರಿಕೊಂಡಿರುತ್ತಾರೆ. ನಾವಿನ್ನೂ ಅದೇ ಕೆಲಸದಲ್ಲಿ ಇರುತ್ತೇವೆ. ಸರಿಯಾಗಿ ಊಟ ಮಾಡುವುದಕ್ಕೆ ಆಗಲ್ಲ. ನೀರು ಕುಡಿದುಕೊಂಡೇ ಇರಬೇಕು. ಕ್ರೈಂ ಸುದ್ದಿಗಳೆಂದರೆ ಗೊತ್ತಲ್ಲ, ಯಾವಾಗ ಏನ್ ಉಲ್ಟಾ ಹೊಡೆಯತ್ತೋ ಹೇಳುವುದಕ್ಕೆ ಆಗಲ್ಲ. ಆ ಟೆನ್‌ಷನ್ ಮಧ್ಯೆ ನಿದ್ದೆ ಕೂಡ ಆಗಲ್ಲ. ಹೀಗೆ ಪದೇ

ಪದೇ ಆಗಿದ್ದರಿಂದ, ನಾನು ತಿಂಗಳ ಸಮಸ್ಯೆಯಿಂದ ಬಳಲಿದ್ದೇನೆ. ಇತ್ತೀಚಿನ ದಿನಗಳಲ್ಲಿ ಈ ಸಮಸ್ಯೆ ಹೆಣ್ಣುಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು ಸಹಜ ಅಂತ ತಿಳಿದುಕೊಂಡರೂ ಸಹ ನಮ್ಮ ವಿಚಾರದಲ್ಲಿ ಇದು ತುಂಬಾನೇ ಸಮಸ್ಯೆಯನ್ನು ಉಂಟುಮಾಡುತ್ತದೆ. ಇದಕ್ಕೆ ಸಂಬಂಧಿಸಿದ ಒಂದು ಘಟನೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ಏಕೆಂದರೆ ಇಂತಹ ಸಮಸ್ಯೆ ಬಂದಾಗ ಯಾವ ಹುಡುಗಿಯೂ ಕೂಡ ಕೆಲಸದಲ್ಲಿ ನಿರತಳಾಗುವುದಿಲ್ಲ. ಇದೇ ಬೆಂಗಳೂರಿನಲ್ಲಿ ಒಂದು ಮರ್ಡರ್ ಕೇಸ್ ಕುರಿತಾಗಿ ನ್ಯೂಸ್ ಮಾಡಬೇಕಿತ್ತು. ಆವಾಗ ನನ್ನ ಆರೋಗ್ಯ ತುಂಬಾನೇ ಹದಗೆಟ್ಟಿತ್ತು. ಅದು ತಿಂಗಳ ಮುಟ್ಟಿನ ಸಮಯ. ಮೊದಲ ದಿನ ಮತ್ತು ಎರಡನೆಯ ದಿನ ಹೊಟ್ಟೆನೋವು ಬಹಳ ಕಾಣಿಸಿಕೊಳ್ಳುತ್ತದೆ. ಅಂತಹ ಸಮಯದಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಎದುರಾಯಿತು. ನಾನು ನನ್ನ ಸಮಸ್ಯೆಯನ್ನು ಲೆಕ್ಕಿಸದೇ ರಿಪೋರ್ಟ್ ಮಾಡಿದೆ. ನಂತರ ಒಂದುವಾರ ಕಾಲ ಬೆಡ್ ರೆಸ್ಟ್ ತಗೆದುಕೊಂಡೆ. ಇದರಿಂದ ಆರೋಗ್ಯದಲ್ಲಿ ಬಹಳ ವ್ಯತ್ಯಾಸಗಳು ಕಾಣಿಸಿಕೊಂಡವು. ಅಂದರೆ ಪಿರಿಯೇಡ್ಸ್ ಟೈಮ್‌ನಲ್ಲಿ ಮಹಿಳೆಯರಿಗೆ ವಿಶ್ರಾಂತಿ ಬೇಕಾಗುತ್ತದೆ. ಆದರೆ ನಾನು ಅದನ್ನು ಲೆಕ್ಕಿಸದೇ ಕೆಲಸಕ್ಕೆ ಹೋದ ಕಾರಣವಾಗಿ ಜ್ವರ ಬಂತು. ಕೈ ಕಾಲುಗಳ ಸೆಳೆತ, ಮತ್ತು ಮುಖ್ಯವಾಗಿ ಹಿಂದೆಂದಿಗಿಂತಲೂ ರಕ್ತಸ್ರಾವ ತುಂಬಾನೇ ಆಯಿತು. ಇದು ಯಾರಿಗೂ ಗೊತ್ತಾಗುವುದಿಲ್ಲ. ಇದನ್ನು ಬಹಿರಂಗವಾಗಿ ಹೇಳುವುದಕ್ಕೂ ಆಗುವುದಿಲ್ಲ. ಇಂತಹ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಆರೋಗ್ಯದ ಸಮಸ್ಯೆಗಳನ್ನು ಪ್ರತಿ ತಿಂಗಳು ಹೇಳಿ ರಜೆ ಮಾಡುವ ಹಾಗಿಲ್ಲ. ಮಾಡಿದರೆ ನಮ್ಮ ವರ್ಕ್ ಬಗ್ಗೆನೇ ಅನುಮಾನಗಳು ಆರಂಭವಾಗುತ್ತವೆ. ಇದು ತುಂಬಾ ಕಾಂಪಿಟೇಟಿವ್ ದುನಿಯಾ. ಇಲ್ಲಿ ನಾವು ಸ್ವಲ್ಪ ನಿಧಾನವಾದರೂ ನಮ್ಮನ್ನು ಹಿಂದಿಕ್ಕಿ ಮುನ್ನುಗ್ಗಿಕೊಂಡು ಹೋಗುವವರು ತುಂಬಾ ಜನರು ಇದ್ದಾರೆ. ಆ ಕಾರಣಕ್ಕಾಗಿ ನಾನು ನನ್ನ ಆರೋಗ್ಯವನ್ನೂ ಲೆಕ್ಕಿಸದೇ ಕೆಲಸದಲ್ಲಿ ನಿರತಳಾಗಿರುತ್ತೇನೆ. ಕೆಲವು ಸಂದರ್ಭಗಳಲ್ಲಿ ಮಾನಸಿಕವಾಗಿ ಕುಗ್ಗಿ ಹೋಗಿರುತ್ತೇನೆ. ಮಾನಸಿಕವಾಗಿ ಕುಗ್ಗಿ ಹೋದರೆ, ಕೆಲಸ ಮಾಡುವುದಕ್ಕೆ ಆಗಲ್ಲ. ಆವಾಗ ಈ ಕೆಲಸ ಯಾಕಾಗಿಬೇಕು ಎಂದು ಬೇಜಾರಾಗುತ್ತದೆ" ಎಂದು ಹೇಳಿದರು.

ಸಿನಿಮಾ ವಿಭಾಗದಲ್ಲಿ ಕೆಲಸ ಮಾಡುವ ಪತ್ರಕರ್ತೆ ಮತ್ತು ನಿರೂಪಕಿ ಶಿವಾನಿ ತಮ್ಮ ವೃತ್ತಿ ಕಾರಣದಿಂದಾಗಿ ಎದುರಿಸುತ್ತಿರುವ ಆರೋಗ್ಯ ಸಮಸ್ಯೆಯನ್ನು ಹೇಳಿಕೊಂಡಿದ್ದು ಹೀಗೆ, "ನಾನು ಸಿನಿಮಾ ವಿಭಾಗದಲ್ಲಿ ವರದಿಗಾರ್ತಿಯಾಗಿ ಕೆಲಸ ಮಾಡುತ್ತಿದ್ದೇನೆ. ನಮಗೆ ಹೆಚ್ಚು ಕೆಲಸ ಇರುತ್ತವೆ. ಏನಿಲ್ಲವೆಂದರೂ ದಿನಕ್ಕೆ ಐದಾರು ಪ್ರೆಸ್‌ಮಿಟ್, ಶೂಟಿಂಗ್ ಸ್ಥಳಕ್ಕೆ ಹೋಗಿ ವರದಿ

ಮಾಡಿಕೊಂಡು ಬರುವುದು, ವಿವಾದ ಆಗಿದ್ದರಂತೂ ಸಂಬಂಧ ಪಟ್ಟವರನ್ನು ಆಫೀಸ್‌ಗೆ ಕರೆಯಿಸುವ ಟೆನ್ಷನ್. ಹೀಗೆ ನಿತ್ಯವೂ ಸಾಕಷ್ಟು ಕೆಲಸಗಳು ಇದ್ದೇ ಇರುತ್ತವೆ. ಚಾನೆಲ್‌ಗಳ ಮಧ್ಯೆ ಪೈಪೋಟಿ ಇರುವುದರಿಂದ ನಮಗೆ ಮೊದಲ ಸುದ್ದಿ ಸಿಗಲಿ ಅನ್ನುವ ಧಾವಂತ. ಈ ಧಾವಂತವೇ ನಮ್ಮ ಆರೋಗ್ಯವನ್ನು ಹಾಳು ಮಾಡುತ್ತಿದೆ. ದೂರದ ಸ್ಥಳಗಳಿಗೆ ಹೋಗಿ ನ್ಯೂಸ್ ಮಾಡಬೇಕು, ಸರಿಯಾದ ವೇಳೆಗೆ ನ್ಯೂಸ್ ತಲುಪಬೇಕು ಹೀಗಾಗಿ ಹೊತ್ತೊತ್ತಿಗೆ ಊಟ ಮಾಡುವುದು ಕಷ್ಟ. ಊಟ ಮಾಡದೇ ಇದ್ದಾಗ ಎಸಿಡಿಟಿ. ಅದರಿಂದಾಗಿ ನಿದ್ದೆ ಬರಲ್ಲ. ಅದು ಮೈಗ್ರೇನ್ ಆಗಿ ಬದಲಾಗುತ್ತದೆ. ವಿಪರೀತ ತಲೆನೋವು. ಒಂದು ಸಾರಿ ಪ್ರೆಸ್‌ಮೀಟ್‌ಗೆ ಹೋಗಬೇಕಾಗಿತ್ತು. ಮಧ್ಯದಲ್ಲಿ ವಾಹನ ಕೈಕೊಟ್ಟುಬಿಡ್ತು. ಆವಾಗ ಪ್ರೆಸ್‌ಮೀಟ್ ಸ್ಥಳಕ್ಕೆ ಹೋಗಿ ನ್ಯೂಸ್ ಕವರ್ ಮಾಡಬೇಕು ಅನ್ನೋ ಟೆನ್ಷನ್ ಬೇರೆ. ಆದ್ರೂ ಲೇಟಾಗಿ ಹೋಗಿ ನ್ಯೂಸ್ ಕವರ್ ಮಾಡಿದೆ. ಮರುಕ್ಷಣವೇ ನಾನು ತಲೆ ಸುತ್ತಿ ಬಿದ್ದು ಬಿಟ್ಟೆ. ಯಾಕೆಂದ್ರೆ ತಿಂಡಿ ಮಾಡೋದಕ್ಕೆ ಸಮಯಾನೇ ಇರ್ಲಿಲ್ಲ. ಬರೀ ಟೆನ್ಷನ್ ಜೀವನ. ನನಗೆ ಹಿಮೋಗ್ಲೋಬಿನ್ ಸಮಸ್ಯೆ ಇದೆ. ಇದು ಆಗಿರೋದು ಇಲ್ಲಿ ಮಾಡೋ ರೆಸ್ಟ್‌ಲೆಸ್ ಕೆಲಸದಿಂದ. ಈ ಕೆಲಸಗಳಿಂದ ನಾವು ಯಾವಾಗ ಊಟ ಮಾಡ್ತೀವೋ, ಯಾವಾಗ ಟಿಫಿನ್ ಮಾಡ್ತಿವೋ ಗೊತ್ತಿಲ್ಲ. ಸರಿಯಾದ ಟೈಮಲ್ಲಿ ಊಟ ಮಾಡೋ ಜನರಿಗೇನೇ ಕಾಯಿಲೆಗಳು ಬರೋದು ತಪ್ಪಲ್ಲ. ಅಂತಹ ಸಂದರ್ಭದಲ್ಲಿ ನಮ್ಮಂಥವರಿಗೆ ಕಾಯಿಲೆಗಳು ಕಾಯ್ಕೊಂಡು ಕುಳಿತಿರುತ್ತವೆ. ಇವುಗಳೆಲ್ಲವನ್ನೂ ನಮ್ಮ ಮುಖ್ಯಸ್ಥರಿಗೆ ಹೇಳೋಕೆ ಆಗೊಲ್ಲ. ಅವ್ರಿಗೆ ಕೆಲ್ಸ ಮುಖ್ಯ. ನಮಗೆ ಏನಾದರೂ ಸರಿ ಅವರ್‍ಯಾರೂ ಕೇರ್ ಮಾಡೊಲ್ಲ. ಇನ್ನೂ ಒಂದು ವಿಷಯ ಹೇಳೋದಾದ್ರೆ ನಮ್ಮ ಮೀಡಿಯಾದ ಸಂಸ್ಥೆಗಳಲ್ಲಿ ಯಾವೊಂದು ಆಸ್ಪತ್ರೆಯ ಸೌಲಭ್ಯವೂ ಇಲ್ಲ. ಹಾಗಾಗಿ ನಮಗೆ ಏನಾದರೂ ಆದ್ರೆ ಪ್ರೈವೇಟ್ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರಬೇಕು ಅಷ್ಟೆ. ಇದಕ್ಕೂ ಸಹ ನಮ್ಮ ಹಣವನ್ನೇ ಖರ್ಚು ಮಾಡಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ" ಎಂದು ಹೇಳುತ್ತಾರೆ.

ಖಾಸಗಿ ಸುದ್ದಿ ವಾಹಿನಿಯಲ್ಲಿ ಪತ್ರಕರ್ತೆ ಅನನ್ಯ ಆರೋಗ್ಯದ ಸಮಸ್ಯೆಯ ಬಗ್ಗೆ ವಿವರಿಸುತ್ತಾ, "ನಾನೊಂದು ಚಾನೆಲ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಆಗ ನಾನು ಸಿನಿಮಾ ರಿಪೋರ್ಟರ್. ನನ್ನ ಸೀನಿಯರ್ ನನಗೊಂದು ಕಾರ್ಯಕ್ರಮ ಮಾಡಿಕೊಡಲು ಕೇಳಿದರು. ಅದು ಮಾದಕ ಗೀತೆಗಳ ಬಗೆಗಿನ ಕಾರ್ಯಕ್ರಮ. ಮಾದಕ ಗೀತೆಗಳಲ್ಲಿ ಹುಡುಗಿ ಹಾಕಿಕೊಂಡಿರುವ ಡ್ರೆಸ್, ಆ ನಟಿ ಕೊಟ್ಟ ಎಕ್ಸ್‌ಪ್ರೆಷನ್, ಸಾಹಿತ್ಯದಲ್ಲಿನ ವಿಶೇಷತೆ ಹೀಗೆ, ಸಿನಿಮಾ ಕ್ಷೇತ್ರದಲ್ಲಿ ನನಗೂ ಆಸಕ್ತಿ ಇರುವ ಕಾರಣಕ್ಕಾಗಿ ಒಪ್ಪಿಕೊಂಡು ಕೆಲಸ ಮಾಡುತ್ತಿದ್ದೆ. ಅದಕ್ಕೆ ನನ್ನ ಸೀನಿಯರ್ ಸ್ಕ್ರಿಪ್ಟ್

ಬರೆಯೋರು. ಮಾದಕ ಗೀತೆಗಳಲ್ಲಿ ಹೆಚ್ಚಾಗಿ ಡಬಲ್ ಮೀನಿಂಗ್ ಬರುವಂತಹ ಪದಗಳು ಬರುತ್ತವೆ. ಅದನ್ನು ಓದಿ, ಇದಕ್ಕೆ ಅರ್ಥ ಹೇಳು ಅಂತ ನನಗೆ ಕೇಳೋರು. ನನಗಂತೂ ಮುಜುಗರ. ಅವರ ಚರ್ಚೆ ಹೇಗಿರುತ್ತಿತ್ತು ಅಂದರೆ, ನನ್ನನ್ನು ಅವರು ಮಾದಕ ಗೀತೆಗೆ ಕುಣಿಯುವ ಹುಡುಗಿಯಂತೆಯೇ ಕಾಣೋಕೆ ಶುರು ಮಾಡಿದರು. ಲೈಂಗಿಕತೆಗೆ ಪ್ರಚೋದನೆ ಮಾಡುವಂತಹ ಪದಗಳನ್ನು ನನ್ನಿಂದ ಹೇಳಿಸೋರು. ಅದರಿಂದಾಗಿ ನಾನು ಮಾನಸಿಕ ಖಿನ್ನತೆಗೂ ಒಳಗಾದೆ. ಇದು ಎಷ್ಟು ಕಷ್ಟ ಅಂದ್ರೆ ಅದನ್ನ ಮನೇಲಿ ಹೇಳೋಕೂ ಆಗೊಲ್ಲ. ಯಾರ ಮುಂದೇನೂ ಹೇಳೋಕಾಗಲ್ಲ. ಕೆಲವು ದಿನಗಳ ಕಾಲ ಇದರ ಸಹವಾಸವೇ ಸಾಕು ಅಂತೇಳಿ ನಾನು ಮನೇಲಿ ಇದ್ದು ಬಿಟ್ಟಿದ್ದೆ. ಇದು ಒಂದು ರೀತಿಯ ಹಿಂಸೆ. ಹಾಗೇನೆ ನಮ್ಮ ಸಹೋದ್ಯೋಗಿಗಳಿಂದಲೇ ಬಹಳಷ್ಟು ಸಾರಿ ಮಾನಸಿಕ ಕಿರುಕುಳಗಳನ್ನು ಅನುಭವಿಸಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಮೈಗ್ರೇನ್ ಸಮಸ್ಯೆಯನ್ನು ಎದುರಿಸುತ್ತಿದ್ದೇನೆ. ಇದನ್ನು ಯಾರಿಗೂ ಹೇಳಿಕೊಂಡಿಲ್ಲ. ನಾವು ಕೆಲಸ ಮಾಡುವಂತಹ ಸಂಸ್ಥೆಗಳು ನಮಗೆ ಯಾವುದೇ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದಿಲ್ಲ. ನಮಗೆ ಎಷ್ಟೇ ಕಷ್ಟಗಳು ಸಂಭವಿಸಿದರೂ ಅವುಗಳ ಬಗೆಗೆ ಯಾವುದೇ ಕನಿಕರವಿರುವುದಿಲ್ಲ. ಹಾಗಾಗಿ ಆರೋಗ್ಯದ ವಿಚಾರದಲ್ಲಿ ತುಂಬಾನೇ ಬೇಜಾರಾಗುತ್ತದೆ. ಹೆಣ್ಣುಮಕ್ಕಳ ಸಮಸ್ಯೆಗಳು ಪುರುಷರಿಗೆ ಅರ್ಥವಾಗೋದಿಲ್ಲ. ಕೆಲಸ ಬಿಟ್ಟರೆ ಬೆಂಗಳೂರಿನಂತಹ ನಗರದಲ್ಲಿ ಬದುಕುವುದು ಕಷ್ಟ ಅಂತ ನನಗೆ ಗೊತ್ತಿತ್ತು. ಮಾನಸಿಕ ಕಿರುಕುಳ ಅನುಭವಿಸಿಕೊಂಡೆ ಸ್ವಲ್ಪ ದಿನ ಕೆಲಸ ಮಾಡಿದೆ. ಏನ್ ಮಾಡೋದು ಅನಿವಾರ್ಯವಾಗಿ ನಾವು ಇಂಥಹ ಕೆಲಸಗಳನ್ನು ಮಾಡಲೇ ಬೇಕು' ಅಂತಾರೆ.

ಗ್ಲಾಮರ್ ಕಾರಣದಿಂದಾಗಿ ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವವರು ಕಾಣಿಸುತ್ತಾರೆ. ಈ ಕುರಿತು ವಾಹಿನಿಯೊಂದರಲ್ಲಿ ಕೆಲಸ ಮಾಡುವ ಸುಷ್ಮಾ ಹೇಳುವುದು ಹೀಗೆ, "ನಮಗೂ ಸುಂದರವಾಗಿ ಕಾಣಬೇಕು ಅಂತ ಆಸೆ ಇರುತ್ತದೆ ನಿಜ. ಆದರೆ, ಅದರಿಂದಾಗಿ ಆರೋಗ್ಯ ಹಾಳಾಗುತ್ತದೆ ಅಂತ ಗೊತ್ತಿದ್ದ ಮೇಲೂ ನಾವು ಮೇಕಪ್, ಲಿಪ್‌ಸ್ಟಿಕ್ ಹೆಸರಿನ ಕೆಮಿಕಲ್‌ಯುಕ್ತ ಪದಾರ್ಥವನ್ನು ಬಳಸುವುದಕ್ಕೂ ಕಾರಣವಿದೆ. ನಾವು ಸುಂದರವಾಗಿ ಕಾಣಬೇಕು ಅಂತ ನಮ್ ಸುದ್ದಿ ಸಂಸ್ಥೆಯೂ ಕೂಡ ಬೇಡುತ್ತದೆ. ಸ್ವಲ್ಪ ಮೇಕಪ್ ಡಲ್ ಅನಿಸಿದರೂ ಕ್ಯಾಮೆರಾಮನ್ ನಮ್ಮ ಸೌಂದರ್ಯದ ಬಗ್ಗೆ ಹೇಳುತ್ತಾನೆ. ಚೆನ್ನಾಗಿ ಕಾಣದೇ ಇದ್ದರೆ ನಮ್ಮ ಕೆಲಸದ ಮೇಲೂ ಅದು ಪರಿಣಾಮ ಬೀರುತ್ತದೆ. ನಾವು ಚೆನ್ನಾಗಿ ಕಾಣದೇ ಇದ್ದರೆ, ಕ್ಯಾಮೆರಾ ಮುಂದೆ ಕೂರುವುದಕ್ಕೆ ಬಿಡುವುದಿಲ್ಲ. ನಾವು ಬಳಸುವ ಮೇಕಪ್ ಕೂಡ

ಗುಣಮಟ್ಟದಲ್ಲಿ ಚೆನ್ನಾಗಿರಲ್ಲ. ಚೆನ್ನಾಗಿರುವುದನ್ನು ಬಳಸಲು ಆರ್ಥಿಕ ಸಮಸ್ಯೆ ಇದೆ. ಹಾಗಾಗಿಯೇ ಕಡಿಮೆ ಗುಣಮಟ್ಟದ ಮೇಕಪ್ ಕಿಟ್ ಬಳಸಲಾಗಿತ್ತು. ಅದರಿಂದಾಗಿ ಮುಖದ ತುಂಬಾ ಮೊಡವೆಗಳು ಕಾಣಿಸಿದವು. ಸತತ ಮೇಕಪ್ ಹಾಕುವುದರಿಂದ ಮುಖ ಕಪ್ಪಾಯಿತು. ಪರಿಣಾಮ ಚರ್ಮದ ಸಮಸ್ಯೆಗಳು ಕಾಣಿಸಿಕೊಂಡವು. ಮೇಕಪ್ ಹಾಕುವಾಗ ಮತ್ತು ತೆಗೆಯುವಾಗ ಕಿರಿಕಿರಿ ಹೇಳಲಿಕ್ಕಾಗದು. ಮೇಕಪ್ ಇಲ್ಲದೇ ಆಚೆ ನಮ್ಮನ್ನು ನೋಡೋಕೆ ಸ್ವಲ್ಪ ಕಷ್ಟವಾಗಬಹುದು. ನಾವು ಗುರುತು ಸಿಗದೇ ಇರಬಹುದು. ನನ್ನನ್ನೂ ಸೇರಿದಂತೆ ಹಲವು ಮಹಿಳೆಯರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ' ಎಂದು ಹೇಳಿದರು.

ಹೀಗೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ನಾನಾ ರೀತಿಯಲ್ಲಿ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿರುವುದು ವಕ್ತೃಗಳ ಮಾತಿನಿಂದಲೇ ಗೋಚರಿಸುತ್ತದೆ. ಮುಖ್ಯವಾಗಿ ಇಲ್ಲಿ ಮೇಲಿನ ವಕ್ತೃಗಳ ಹೇಳಿಕೆಗಳನ್ನು ಆಧರಿಸಿ ಮಹಿಳೆಯರು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಕೆಲಸದ ಒತ್ತಡಗಳ ಕಾರಣವಾಗಿ, ಮಾಧ್ಯಮಗಳ ನೀರೀಕ್ಷೆಗಳ ಕಾರಣವಾಗಿ ಮಹಿಳೆಯರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಕೆಲಸದಲ್ಲಿ ನಿರತರಾದ ಕಾರಣವಾಗಿ ಕೆಲವು ಮಹಿಳೆಯರು ಅಬಾರ್ಷನ್ ನಂತಹ ಸಮಸ್ಯೆಯನ್ನು ಎದುರಿಸಿದ್ದಾರೆ. ಮುಖ್ಯವಾಗಿ ಸಮಾಜದಲ್ಲಿ ಮಕ್ಕಳಾಗದ ಮಹಿಳೆಯರನ್ನು ನೋಡುವ ಕ್ರಮವೇ ಭಿನ್ನವಾಗಿರುತ್ತದೆ. ಹಾಗಾಗಿ ಪ್ರತಿಯೊಬ್ಬ ವಿವಾಹಿತ ಮಹಿಳೆ ತನಗೆ ಆದಷ್ಟು ಬೇಗನೇ ಮಕ್ಕಳಾಗಲೆಂದು ಬಯಸುತ್ತಾಳೆ. ಆದರೆ ಮಕ್ಕಳಾಗುವುದೇ ತಪ್ಪಿದಾಗ ಅದರಿಂದಾಗುವ ಮಾನಸಿಕ ಹಿಂಸೆ ಅಷ್ಟಿಷ್ಟಲ್ಲ. ಇದನ್ನು ಸಮಾಜ ವ್ಯವಸ್ಥೆಯೂ ಸಹ ನಿರಾಕರಣೆಯ ಮನೋಭಾವದಿಂದಲೇ ನೋಡುತ್ತದೆ. ಅಂದರೆ ಹೀಗೆ ಅಬಾರ್ಷನ್ ಆದಂತಹ ಮಹಿಳೆಯರ ಮೇಲೆ ಕರುಣೆಯನ್ನು ತೋರಿದರೂ ಸಹ ಮುಂದೆ ಮಕ್ಕಳನ್ನು ಬಯಸುವುದೇನೂ ನಿಲ್ಲುವುದಿಲ್ಲ. ಆದರೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ತಮ್ಮ ಕೆಲಸಗಳ ಒತ್ತಡದ ಕಾರಣವಾಗಿ ಈ ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿರುವುದದನ್ನು ಕಾಣಬಹುದಾಗಿದೆ.

ಈ ಬಗೆಯ ಆರೋಗ್ಯದ ಸಮಸ್ಯೆಗಳು ಕಂಡುಬಂದಾಗ ವಿದ್ಯುನ್ಮಾನ ಮಾಧ್ಯಮಗಳ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಆರೋಗ್ಯದ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ಮಹಿಳೆಯರ ಮೇಲೆ ಇನ್ನೊಂದು ರೀತಿಯ ಪರಿಣಾಮವನ್ನು ಬೀರುತ್ತವೆ. ಅಂದರೆ ಒಂದು ಸಂಸ್ಥೆ ಕೆಲಸಗಾರರ ಆರೋಗ್ಯದ ವಿಷಯದಲ್ಲಿ ಎಲ್ಲ ಬಗೆಯ ಸುರಕ್ಷಾ ಕ್ರಮಗಳನ್ನು

ಒದಗಿಸಿಕೊಡಬೇಕು. ಆದರೆ ಈ ಸುರಕ್ಷಾ ಕ್ರಮಗಳನ್ನು ಒದಗಿಸದೇ ಇರುವುದು ಒಂದು ವಿಪರ್ಯಾಸವೇ ಸರಿ. ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವುದುನ್ನು ಕಾಣಬಹುದು. ಈ ಸುದ್ದಿ ಸಂಸ್ಥೆಗಳು ತಮ್ಮ ಕೆಲಸಗಾರರಿಗೆಂದೇ ಒಂದು ಆಸ್ಪತ್ರೆಯ ಸೌಲಭ್ಯವನ್ನು ಮಾಡಿಕೊಡಬೇಕಾದ ಜರೂರಿದೆ. ಇದರಿಂದ ಮಹಿಳೆಯರ ಆರೋಗ್ಯ ಸುಧಾರಿಸಲು ಸಾಧ್ಯವಾಗುತ್ತದೆ.

ಉಲ್ಲೇಖಗಳು

1. ಜಯಲಕ್ಷ್ಮಿ ಕೆ, ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ, 2006,
2. ಸರೋಜಾ ಕೆ, ಮಹಿಳಾ ಆರೋಗ್ಯ ಒಂದು ಮರುಚಿಂತನೆ, 2008, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಅಧ್ಯಾಯ ಒಂಬತ್ತು

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಬಲೀಕರಣದ ಕನಸು, ನನಸು ಹಾಗೂ ಕನವರಿಕೆಗಳು

9.1 ಸಮಾರೋಪ

9.2 ಅಧ್ಯಯನ ಫಲಿತಗಳು

ಅಧ್ಯಾಯ ಒಂಬತ್ತು

ವಿದ್ಯುನ್ಮಾನ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರ ಸಬಲೀಕರಣದ ಕನಸು, ನನಸು ಹಾಗೂ ಕನವರಿಕೆಗಳು

ಜಾಗತೀಕರಣದ ಈ ಸಂದರ್ಭದಲ್ಲಿ ಸಮಾಜದಲ್ಲಿನ ಎಲ್ಲ ವಲಯಗಳೂ ಲಾಭದ ಉದ್ದೇಶದಿಂದಲೇ ಮುನ್ನಡೆಯುತ್ತಿವೆ. ಬಹುಮುಖ್ಯವಾಗಿ ಮಾಧ್ಯಮ ಕ್ಷೇತ್ರವೆಂಬುದು ಕೇವಲ ಲಾಭಗಳಿಕೆಯ ದೃಷ್ಟಿಯಿಂದಲೇ ಸಮಾಜದಲ್ಲಿನ ಬದಲಾವಣೆಗಳನ್ನು ಬಳಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಅದು ಮಹಿಳೆಯರ ದೇಹವನ್ನು ಬಂಡವಾಳವನ್ನಾಗಿಸಿಕೊಂಡು ತಮ್ಮ ಟಿಆರ್‌ಪಿ ಮತ್ತು ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿ. ಟಿವಿ ಮಾಧ್ಯಮದ ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಮಹಿಳೆಯರ ಇರುವಿಕೆ ಬೇಕು. ಇಲ್ಲದಿದ್ದರೆ ಯಾವ ಸಂದರ್ಭದಲ್ಲಿಯೂ ಮಾಧ್ಯಮಗಳು ತಮ್ಮ ಟಿಆರ್‌ಪಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮಹಿಳೆಯರನ್ನು ವಸ್ತುವಿನ ನೆಲೆಯಲ್ಲಿ ಮತ್ತು ಗ್ಲಾಮರ್ ನೆಲೆಯಲ್ಲಿ ನೋಡುತ್ತಿರುವ ಕಾರಣಕ್ಕಾಗಿ ಮಾಧ್ಯಮಗಳ ಟಿಆರ್‌ಪಿ ಹೆಚ್ಚಾಗುತ್ತಿದೆ. ಹಾಗಾಗಿ ಮಹಿಳೆಯರು ಇಲ್ಲದೇ ಇರುವ ಮಾಧ್ಯಮವನ್ನು ಗ್ರಹಿಸಿಕೊಳ್ಳುವುದೂ ಕಷ್ಟದ ಸಂಗತಿ. ಆದರೂ ಮಹಿಳೆಯರ ಸ್ಥಾನಮಾನವೇನೂ ಬದಲಾಗಿಲ್ಲ. ಇವರ ಸ್ಥಿತಿ ಹಾಗೆಯೇ ಇದೆ. ಇದು ಮಾಧ್ಯಮ ವಲಯದಿಂದ ಆರಂಭವಾಗಿದೆ ಎಂದು ಹೇಳಲಾಗುತ್ತಿಲ್ಲ. ಈಗಾಗಲೇ ಗಟ್ಟಿಗೊಂಡಿರುವ ಸ್ಥಾಪಿತ ಗ್ರಹಿಕೆಗಳ ಕಾರಣವಾಗಿ ಮತ್ತು ಅವುಗಳು ಎಲ್ಲ ವಲಯಗಳಿಗೆ ಹಾಗೆಯೇ ಮುಂದುವರೆಯುತ್ತಲೇ ಬಂದಿರುವ ಕಾರಣವಾಗಿ ಮಹಿಳೆಯರ ಅಧೀನತೆ ಮುಂದುವರೆದುಕೊಂಡು ಸಾಗಿರುವುದು ಕಂಡುಬರುತ್ತದೆ. ಈ ತಾರತಮ್ಯ ಮನೋಭಾವ ಕುಟುಂಬದ ಹಂತದಿಂದಲೇ ಆರಂಭವಾಗುತ್ತದೆ. ಮಹಿಳೆಯರು ಎದುರಿಸುತ್ತಿರುವ ಅಧೀನ ನೆಲೆಯ ಸಮಸ್ಯೆಗೆ ಪ್ರಮುಖವಾಗಿ ಸಾಂಪ್ರದಾಯಿಕ ಸಮಾಜವು ಹೆಣ್ಣನ್ನು ಗ್ರಹಿಸಿರುವ ಮತ್ತು

ನಡೆಸಿಕೊಳ್ಳುವ ವಿಧಾನದಲ್ಲಿರುವ ತಾರತಮ್ಯ ಭಾವವೇ ಕಾರಣವಾಗಿದೆ. ಕುಟುಂಬವು ಮಹಿಳೆಯರನ್ನು ಸಂಪನ್ಮೂಲಗಳಿಂದ ದೂರವಿರಿಸುವ ಮೂಲಕ ಜೀವನ ಪರ್ಯಂತ ಕರುಣೆಯ ಪರಿಧಿಯೊಳಗೆ ಬದುಕಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ. ಮಹಿಳೆಯರ ಶ್ರಮ, ದುಡಿಮೆಗಳು ಅವಳ ಸೇವೆ ಕರ್ತವ್ಯಗಳೆಂದು ಪ್ರತಿಪಾದಿಸಲ್ಪಟ್ಟು, ಬೆಲೆಯಿಲ್ಲದ ಅಂದರೆ ಆರ್ಥಿಕ ಮೌಲ್ಯವಿಲ್ಲದ ದುಡಿಮೆಯಾಗಿರುತ್ತದೆ. ಮಹಿಳೆಯೇ ವ್ಯವಹಾರದ ಸರಕಾಗಿದ್ದಾಳೆ. ಗುಲಾಮಗಿರಿಯ ಪ್ರತಿಫಲವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಹೀಗೆ ಹೆಣ್ಣಿನ ಅಧೀನತೆಗೆ ಪಿತೃಪ್ರಧಾನ ಮೌಲ್ಯಗಳ ಸ್ಥಾಪಿತ ಗ್ರಹಿಕೆಗಳು ಕಾರಣವಾಗುತ್ತವೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಜೀವನ ಈ ಪಿತೃಪ್ರಧಾನ ಮೌಲ್ಯಗಳಿಂದ ಹೊರತಾಗಿಲ್ಲ. ಎಲೆಕ್ಟ್ರಾನಿಕ್ ಮೀಡಿಯಾ ಆಧುನಿಕ ಜಗತ್ತಿನ ಆವಿಷ್ಕಾರ, ಮಾಧ್ಯಮ ಎನ್ನುವುದು ಸಂವಿಧಾನದ ನಾಲ್ಕನೇ ಅಂಗ ಎಂದು ಕರೆಯಲ್ಪಟ್ಟರೂ ಮಹಿಳೆಯರು ಪ್ರತೀ ಹಂತದಲ್ಲಿಯೂ ಪುರುಷರಿಂದ ಒಂದಲ್ಲಾ ಒಂದು ರೀತಿಯಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಅಂದರೆ ಇಲ್ಲಿ ಸ್ಥಳಿಯ ಪಿತೃಪ್ರಧಾನ ಮೌಲ್ಯಗಳು ಮಹಿಳೆಯರನ್ನು ಶೋಷಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಹಾಗಾಗಿ ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಸುಧಾರಿಸಿಲ್ಲ ಎಂದೇ ಹೇಳಬಹುದು. ಹೀಗೆ ಮಹಿಳೆಯ ಅಧೀನ ನೆಲೆಗೆ ಅವಳ ಆರ್ಥಿಕ ಅಭದ್ರತೆಯೇ ಪ್ರಮುಖ ಕಾರಣ. ಈ ರೀತಿಯ ಅಭದ್ರತೆಯು ಸೃಷ್ಟಿಗೊಳ್ಳುವುದು ಕುಟುಂಬ ಮೂಲದಿಂದಲೇ ಎಂಬುದು ಗಮನಾರ್ಹ ಸಂಗತಿ. ಹೆಣ್ಣು ಮಕ್ಕಳಿಗೆ ಹುಟ್ಟಿದ ಮನೆಯಲ್ಲಿ ಮತ್ತು ವಿವಾಹದ ನಂತರ ಗಂಡನ ಮನೆಯಲ್ಲಿ ಪುರುಷರಷ್ಟೇ ಸಮಾನ ಹಕ್ಕುಳ್ಳವರು ಎಂಬ ಮನೋಭಾವ ಇನ್ನು ಒಡಮೂಡಿಲ್ಲ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟವನ್ನು ಮಾಡಲೇಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಸಂಬಳದ ಅನಿಶ್ಚಿತತೆ, ಕಡಿಮೆ ಸಂಬಳದ ಹೊರೆ ಇವುಗಳ ಕಾರಣದಿಂದಾಗಿ ಉಂಟಾಗುವ ಆರೋಗ್ಯದ ಸಮಸ್ಯೆ ಹೀಗೆ ಹಲವು ಸಮಸ್ಯೆಗಳನ್ನು ಮಹಿಳೆಯರು ಎದುರಿಸುತ್ತಲೇ ಇದ್ದಾರೆ. ವಿದ್ಯುನ್ಮಾನ ಮಾಧ್ಯದಲ್ಲಿ ಕಾರ್ಯ ನಿರ್ವಹಿಸುವ ಮಹಿಳೆಯರ ಕೌಟುಂಬಿಕ ಸ್ಥಿತಿಗತಿಗಳೂ ಸಹ ತೃಪ್ತಿದಾಯಕವಾಗಿಲ್ಲ ಎನ್ನುವುದನ್ನು ಹಲವು ಪ್ರಕರಣಗಳಿಂದ ಗುರುತಿಸಲಾಗಿದೆ. ಮಾಧ್ಯಮ ಎಂಬುದನ್ನು ಅತ್ಯಂತ ಚೆನ್ನಾಗಿ ರಂಜನೀಯವಾಗಿ. ಗಂಭೀರವಾಗಿ ತೆಗೆದುಕೊಳ್ಳುವ ವ್ಯವಸ್ಥೆ ಅದೇ ಮಾಧ್ಯಮದಲ್ಲಿ ತಮ್ಮ ಮಕ್ಕಳೇ ಕೆಲಸ ಮಾಡುವುದನ್ನು ಸಹಿಸುವುದಿಲ್ಲ. ಏಕೆಂದರೆ ಇದು

ಪಿತೃಪ್ರಧಾನ ವ್ಯವಸ್ಥೆಯ ಮನೋಧೋರಣೆ. ಬೇರೆಯವರ ಹೆಣ್ಣುಮಕ್ಕಳನ್ನು ಮಾಧ್ಯಮದಲ್ಲಿ ನೋಡುವ ಮೂಲಕ ಸಂಭ್ರಮಿಸುವ ಈ ವ್ಯವಸ್ಥೆ ಅದೇ ತಮ್ಮ ಸ್ವಂತ ಮಕ್ಕಳು ಎಂದ ಕೂಡಲೇ ಎಚ್ಚರಗೊಳ್ಳುತ್ತದೆ. ಅದೇ ರೀತಿಯಲ್ಲಿ ಮಾಧ್ಯಮದ ಬಗೆಗೆ ಹಲವು ನಕಾರಾತ್ಮಕ ನಂಬಿಕೆಗಳು ಇರುವ ಕಾರಣಕ್ಕಾಗಿ ಮಹಿಳೆಯರು ಮಾಧ್ಯಮ ಪ್ರಪಂಚಕ್ಕೆ ತೆರೆದುಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಆದರೂ ಮಹಿಳೆಯರು ಮಾಧ್ಯಮ ಪ್ರಪಂಚದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿದ್ದಾರೆ, ಅಸ್ಮಿತೆಗಾಗಿ ಹೋರಾಟ ನಡೆಸಿದ್ದಾರೆ. ವಿದ್ಯುನ್ಮಾನ ಮಾಧ್ಯಮಕ್ಕೆ ಕಾಲಿಟ್ಟಿರುವ ಮಹಿಳೆಯರು ಪ್ರಾಥಮಿಕವಾಗಿ ಪ್ರವೇಶ ಪಡೆಯುವ ಮುನ್ನವೇ ಕುಟುಂಬದಿಂದ ವಿರೋಧಗಳನ್ನು ಎದುರಿಸಿದ್ದಾರೆ. ಹೀಗೆ ಕುಟುಂಬದ ಸದಸ್ಯರ ವಿರೋಧಗಳ ನಡುವೆಯೂ ಮಾಧ್ಯಮ ಪ್ರಪಂಚಕ್ಕೆ ಕಾಲಿಟ್ಟು ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು ಎಂಬಷ್ಟರಲ್ಲಿ ಮತ್ತೆ ಮಾಧ್ಯಮ ವಲಯದಿಂದ ತೊಂದರೆಗಳನ್ನು ಎದುರಿಸಿದ ಪ್ರಕರಣಗಳು ಹೇಳಿಕೆಗಳಿಂದಲೇ ತಿಳಿದುಬರುತ್ತದೆ. ಒಟ್ಟಾರೆಯಾಗಿ ಈ ಅಧ್ಯಯನದಿಂದ ಹಲವು ಅಂಶಗಳು ಬೆಳಕಿಗೆ ಬಂದಿವೆ. ಅವುಗಳೇ ಅಧ್ಯಯನದ ಫಲಿತಗಳಾಗಿದ್ದು ಈ ಕೆಳಗಿನಂತಿವೆ.

ಅಧ್ಯಯನದ ಫಲಿತಗಳು

ವಿದ್ಯುನ್ಮಾನ ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಮಹಿಳೆಯರ ವಾಕ್ ಸ್ವಾತಂತ್ರ್ಯದ ಮೇಲೆ ನಿಯಂತ್ರಣ ಕಂಡು ಬರುತ್ತಿದೆ. ಜೋರಾಗಿ ಮಾತನಾಡಬೇಡ, ಮೆತ್ತಗೆ ಮಾತನಾಡು ಎಂಬ ಸಹೋದ್ಯೋಗಿಗಳ ಮಾತುಗಳು ಅವಳ ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವುದು ಕಂಡುಬರುತ್ತದೆ. ಹಾಗೆಯೇ ಇದು ಸಂವಿಧಾನಕ್ಕೆ ವಿರುದ್ಧವಾದುದು. ಭಾರತದ ಸಂವಿಧಾನ ಪ್ರತಿಯೊಬ್ಬ ಪ್ರಜೆಗೂ ಮಾತನಾಡುವ ಸ್ವಾತಂತ್ರ್ಯವನ್ನು ಕೊಟ್ಟಿದೆ. ಆದರೆ ವ್ಯವಸ್ಥೆಯಲ್ಲಿ ಇದು ಮಹಿಳೆಯರ ವಿಷಯದಲ್ಲಿ ಒಳಗೊಳ್ಳುವುದೇ ಇಲ್ಲ. ಏಕೆಂದರೆ ಸಮಾಜದಲ್ಲಿ ಮಹಿಳೆಯರು ಎಂದರೆ ಮೌನವಾಗಿರಬೇಕು, ಪುರುಷರು ಹೇಳಿದ ಮಾತುಗಳನ್ನು ಕೇಳಬೇಕು, ಪುರುಷರ ಮಾತುಗಳಿಗೆ ಸಹಕರಿಸಬೇಕು ಎಂಬಂತಹ ಅಲಿಖಿತ ನಿಯಮಗಳನ್ನು ರೂಢಿಸಿಕೊಂಡ ಕಾರಣಕ್ಕಾಗಿ ಮಹಿಳೆಯರು ಏರು ಧ್ವನಿಯಲ್ಲಿ ಮಾತನಾಡಬಾರದು ಎಂಬುದನ್ನು ವ್ಯವಸ್ಥೆ ನಿರೀಕ್ಷಿಸುತ್ತದೆ. ಇದು ಎಲ್ಲಾ ವಲಯಗಳಲ್ಲೂ ರೂಢಿಯಲ್ಲಿದೆ. ಇದರ ಕಾರಣವಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಏರು ಧ್ವನಿಯಲ್ಲಿ ಮಾತನಾಡಿದರೆ ಅದನ್ನು ಸಹಿಸದ ಪುರುಷ ವ್ಯವಸ್ಥೆ ಆಕೆಯ ಧ್ವನಿಗೆ, ಮಾತುಗಳಿಗೆ

ಕಡಿವಾಣವನ್ನು ಹಾಕುವುದರ ಮೂಲಕ ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವುದು ಕಂಡುಬರುತ್ತದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರಿಗೆ ಉದ್ಯೋಗದ ಆಯ್ಕೆಯ ಸ್ವಾತಂತ್ರ್ಯವನ್ನೂ ಕಿತ್ತುಕೊಳ್ಳಲಾಗಿದೆ. ಬಹುಮುಖ್ಯವಾಗಿ ಮಹಿಳೆಯರು ಎಂದರೆ ಮನೆಯಿಂದ ಹೊರ ಹೋಗಿ ದುಡಿಯಬಾರದು ಎಂಬ ವ್ಯವಸ್ಥೆಯ ಆಲೋಚನೆಯ ವಿರೋಧವನ್ನು ಕಟ್ಟಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ತಮ್ಮ ಇಷ್ಟದ ವಲಯಕ್ಕೆ ಪ್ರವೇಶ ಪಡೆಯಬೇಕೆಂದರೂ ಅಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದು. ವಿದ್ಯುನ್ಮಾನ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡರೂ ಸಹ ಅಲ್ಲಿ ತಮಗಿಷ್ಟವಾದ ಕೆಲಸ ಸಿಗದೇ ಇರುವುದನ್ನು ಕಾಣಬಹುದು. ಆ ಕೆಲಸಕ್ಕೆ ಇರುವ ಎಲ್ಲ ಅರ್ಹತೆಗಳನ್ನು ಹೊಂದಿದ್ದರೂ ಸಹ ಅದರಿಂದ ವಂಚಿತರಾದ ಎಷ್ಟೋ ಮಹಿಳೆಯರು ಈ ವಲಯದಲ್ಲಿ ಕಾಣಸಿಗುತ್ತಾರೆ. ಇದಕ್ಕೆ ಮಾಧ್ಯಮಗಳು ಹಾಕಿಕೊಟ್ಟಿರುವ ಮಾನದಂಡಗಳು ಕಾರಣ ಎಂದು ಹೇಳಬಹುದು. ವಿದ್ಯುನ್ಮಾನ ಮಾಧ್ಯಮದಲ್ಲಿ ಮಹಿಳೆಯರು ಕೆಲಸ ಮಾಡಬೇಕೆಂದರೆ ಗ್ಲಾಮರ್ ಆಗಿ ಕಾಣಬೇಕು, ವಯಸ್ಸು ಹೆಚ್ಚಾಗಿರಬಾರದು, ದೇಹದ ತೂಕ, ಆಕಾರ ಇಷ್ಟೇ ಇರಬೇಕು ಎಂಬಂತಹ ಮಾನದಂಡಗಳು ಮಹಿಳೆಯರ ಉದ್ಯೋಗದ ಆಯ್ಕೆಯ ಸ್ವಾತಂತ್ರ್ಯವನ್ನು ಕಿತ್ತುಕೊಂಡಿವೆ. ಬಹುಮುಖ್ಯವಾಗಿ ಈ ಕ್ಷೇತ್ರದಲ್ಲಿ ಬುದ್ಧಿವಂತಿಕೆಗೆ ಬೆಲೆಯಿದ್ದರೂ ಸಹ ಅದು ಕ್ಷೇತ್ರಕಾರ್ಯದಲ್ಲಿ ತೊಡಗಿಕೊಳ್ಳಲಷ್ಟೇ ಸೀಮಿತವಾಗಿದೆ. ಇಂತಹ ಮಹಿಳೆಯರು ಟಿ.ವಿ.ಪರದೆಯ ಮೇಲೆ ಕಾಣಿಸಿಕೊಳ್ಳಬೇಕು ಎಂದುಕೊಂಡರೂ ಸಹ ಅದು ಸಾಧ್ಯವಾಗುವುದಿಲ್ಲ. ಹಾಗಾಗಿಯೇ ಈ ಕ್ಷೇತ್ರವು ಮಹಿಳೆಯರ ಈ ಬಗೆಯ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದೆ.

ಕ್ರೈಂ ರಿಪೋರ್ಟರ್‌ಗಳಾಗಿ ಕಾರ್ಯ ನಿರ್ವಹಿಸುತ್ತಿರುವವರು ಕಾನೂನಿನ ಅರಿವನ್ನು ಪಡೆದುಕೊಂಡಿರಬೇಕು ಎಂಬುದು ಮಾಧ್ಯಮದ ನಿಯಮ. ಪ್ರಸ್ತುತ ದಿನಮಾನಗಳಲ್ಲಿ ವರದಿಯಾಗುತ್ತಿರುವ ಕ್ರೈಂ ರಿಪೋರ್ಟ್‌ಗಳಲ್ಲಿ ಕಂಡುಬರುವ ಅಪರಾಧ ಪ್ರಕರಣಗಳು ಭಾಗಶಃ ಮಹಿಳೆಯರ ವಿರುದ್ಧ ನಡೆಯುತ್ತಿರುವ ಅಪರಾಧಗಳಾಗಿರುತ್ತವೆ. ಇಂತಹ ಪ್ರಕರಣಗಳನ್ನು ಸಿದ್ಧ ಮಾದರಿ ಪಾತ್ರಗಳ ನೆಲೆಯಲ್ಲಿಯೇ ವಿಶ್ಲೇಷಿಸಲಾಗುತ್ತಿದೆ ಮತ್ತು ಬಿತ್ತರಿಸಲಾಗುತ್ತದೆ. ಇದು ಪುರುಷಪ್ರಧಾನ ಮನಸ್ಥಿತಿಯನ್ನು ಬಿಂಬಿಸುತ್ತದೆ. ಆದರೆ ಇದನ್ನು ಹೊರತುಪಡಿಸಿ ಲಿಂಗ ಸೂಕ್ಷ್ಮನೆಲೆಯ ದೃಷ್ಟಿಕೋನದ ಅಗತ್ಯತೆ ಇದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರು ವಿವಾಹದ ಆಯ್ಕೆಯ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾರೆ. ಎಷ್ಟೋ ಮಹಿಳೆಯರು ಹೇಳುವಂತೆ ಅವರಿಗೆ ವಿವಾಹದ ವಯಸ್ಸು ಆಗಿದ್ದರೂ ಅವರೊಂದಿಗೆ ಮದುವೆ ಆಗಲು ಗಂಡುಗಳು ಮುಂದೆ ಬರುತ್ತಿಲ್ಲ. ಇದಕ್ಕೆ ಕಾರಣವೂ ಇದೆ. ಇಲ್ಲಿ ಕೆಲಸ ಮಾಡುವ ಮಹಿಳೆಯರ ಶೀಲದ ಪ್ರಶ್ನೆ ಕಾಡುತ್ತಿದೆ. ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರ ಚಾರಿತ್ರ್ಯ ಶುದ್ಧವಾಗಿರುವುದಿಲ್ಲ ಎಂಬ ನಂಬಿಕೆ ಸಮಾಜ ವ್ಯವಸ್ಥೆ ಆಗಿದೆ. ಹಾಗಾಗಿ ಇಲ್ಲಿ ಕೆಲಸ ಮಾಡುವ ಮಹಿಳೆಯರನ್ನು ವಿವಾಹ ಮಾಡಿಕೊಳ್ಳಲು ಮುಂದೆ ಬರುವ ಗಂಡುಗಳಾಗಲಿ ಅಥವಾ ಕುಟುಂಬಗಳಾಗಲಿ ತುಂಬಾನೇ ಕಡಿಮೆ. ಹಾಗಾಗಿಯೇ ಇಲ್ಲಿ ಆಯ್ಕೆ ಸ್ವಾತಂತ್ರ್ಯವಿರುವುದು ಕೇವಲ ಗಂಡಿಗೆ ಮಾತ್ರ. ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಎಷ್ಟೇ ಮುಂದುವರೆದಿದ್ದಾರೆ ಎಂದು ಹೇಳಿದರೂ ವಿವಾಹದ ಆಯ್ಕೆಯ ವಿಚಾರಕ್ಕೆ ಬಂದಾಗ ಪುನಃ ಕುಟುಂಬದ ಒತ್ತಡಕ್ಕೆ ಮಣಿಯಲೇಬೇಕಾದ ಪರಿಸ್ಥಿತಿ ಇರುವುದು ಈ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರ ಹೇಳಿಕೆಗಳಿಂದ ತಿಳಿದುಬರುತ್ತದೆ.

ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯನ್ನು ವ್ಯಕ್ತಿಯಾಗಿ ನೋಡದೇ ಅವರ ವೃತ್ತಿಯೊಂದಿಗೆ ತಳುಕು ಹಾಕಲಾಗುತ್ತಿದೆ. ಕ್ರೈಂ ವಿಭಾಗದಲ್ಲಿ ಕೆಲಸ ಮಾಡುವ ಮಹಿಳೆಯನ್ನು ಅವಳ ವೃತ್ತಿ ಹಿನ್ನೆಲೆಯಲ್ಲಿಯೇ ನೋಡಿ, ನೀನು ಕೂಡ ಕ್ರೈಂ ರೀತಿಯಲ್ಲಿಯೇ ಯೋಚನೆ ಮಾಡುತ್ತೀಯಾ ಎಂಬ ಮಾತುಗಳನ್ನೂ ಆಡಿದ್ದಿದೆ. ಅಲ್ಲದೇ, ಸಿನಿಮಾ ವಿಭಾಗದಲ್ಲಿ ಕೆಲಸ ಮಾಡುವ ಹುಡುಗಿಯರನ್ನು ಅನುಮಾನದಿಂದ ನೋಡುವಂತಹ ಪ್ರವೃತ್ತಿ ಬೆಳೆದಿದೆ. ಈ ಕಾರಣದಿಂದಾಗಿಯೂ ಮದುವೆ ಸಂದರ್ಭದಲ್ಲಿ ವಿವಾಹದ ಆಯ್ಕೆಯನ್ನು ಕಸಿದುಕೊಳ್ಳಲಾಗಿದೆ.

ವಿದ್ಯುನ್ಮಾನ ಮಾಧ್ಯಮವು ಮಹಿಳೆಯರಿಗೆ ಚಲನವಲನದ ಸ್ವಾತಂತ್ರ್ಯವನ್ನು ಕೊಟ್ಟಿದೆ. ಹಾಗೆಯೇ ಸಮಯದ ನಿರ್ಬಂಧವೂ ಇಲ್ಲ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆ ಇದನ್ನು ಪೂರಕವಾಗಿ ಸ್ವೀಕರಿಸಿಲ್ಲ. ಮಾಧ್ಯಮ ವಲಯ ತನ್ನ ಅನುಕೂಲಕ್ಕೆಂದು ಈ ಬಗೆಯ ಸ್ವಾತಂತ್ರ್ಯವನ್ನು ಕೊಟ್ಟಿದ್ದರೂ ಅದನ್ನು ಒಪ್ಪದೇ ಇರುವ ವ್ಯವಸ್ಥೆಯೂ ಇದೆ. ಈ ಕಾರಣಕ್ಕಾಗಿ ಇಲ್ಲಿ ಕೆಲಸ ಮಾಡುವಂತಹ ಮಹಿಳೆಯರು ಸಾಮಾಜಿಕ ಸ್ಥಾನಮಾನದ ಸಮಸ್ಯೆಯನ್ನು, ಕೌಟುಂಬಿಕ ಸಮಸ್ಯೆಗಳನ್ನು ಮತ್ತು ಆರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದರು. ನಮ್ಮ ದೇಶದ ಮಹಿಳೆಯರು ನಡುರಾತ್ರಿಯಲ್ಲಿ ಒಬ್ಬೊಂಟಿಯಾಗಿ ನಿರ್ಭಯವಾಗಿ

ಓಡಾಡುವಂತಹ ವಾತಾವರಣ ನಿರ್ಮಾಣವಾದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಬಂದಂತೆ ಎಂದು. ಆದರೆ ಇದು ಇಂದಿಗೂ ಸಾಧ್ಯವಾಗಿಲ್ಲ. ಹಾಡುಹಗಲೇ ಒಬ್ಬೊಂಟಿಯಾಗಿ ಮಹಿಳೆಯರು ಓಡಾಡದ ಪರಿಸ್ಥಿತಿ ನಮ್ಮಲ್ಲಿ ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರಿಗೆ ಸಮಯದ ನಿರ್ಬಂಧಗಳೇನೂ ಇಲ್ಲ. ಹಾಗೆಂದ ಮಾತ್ರಕ್ಕೆ ಇಲ್ಲಿ ಮಹಿಳೆಯರಿಗೆ ಚಲನವಲನದ ಸ್ವಾತಂತ್ರ್ಯ ಸಿಕ್ಕಿದೆ ಎಂದಲ್ಲ. ಬದಲಾಗಿ ಇದೆ ಆಕೆಯ ಮುಂದಿನ ಭವಿಷ್ಯಕ್ಕೆ ಅಡ್ಡಿಯುಂಟು ಮಾಡಿರುವುದನ್ನು ಪ್ರಕರಣಗಳಿಂದ ತಿಳಿದುಬರುತ್ತದೆ. ರಾತ್ರಿಯ ಸಮಯದಲ್ಲಿ ಕೆಲಸ ಮಾಡುವ ಮಹಿಳೆಯರನ್ನು ವ್ಯವಸ್ಥೆ ಅನುಮಾನದಿಂದಲೇ ನೋಡುತ್ತದೆ. ಹಾಗಾಗಿ ವಿವಾಹದ ಆಯ್ಕೆಯ ಸ್ವಾತಂತ್ರ್ಯ, ಚಲನವಲನದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ದ್ವಂದ್ವಗಳನ್ನು ನಿರ್ಮಾಣ ಮಾಡಿದೆ.

ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳೇನೂ ಸುಧಾರಿಸಿಲ್ಲ. ಇಲ್ಲಿ ವೇತನದ ತಾರತಮ್ಯ, ನಿಗದಿತ ಸಮಯಕ್ಕೆ ವೇತನ ಸಿಗದೇ ಇರುವುದು ಮತ್ತು ಕೆಲಸಕ್ಕೆ ಸಂಭಾವನೆ ಕೊಡದೆ ಇರುವ ಸಂದರ್ಭಗಳೇ ಹೆಚ್ಚಾಗಿರುವ ಕಾರಣದಿಂದ ಇಲ್ಲಿ ದುಡಿಯುತ್ತಿರುವ ಮಹಿಳೆಯರು ಆರ್ಥಿಕವಾಗಿ ಸದೃಢಸ್ಥಿತಿಯಲ್ಲಿ ಇಲ್ಲದೇ ಇರುವುದು ಕಂಡುಬರುತ್ತದೆ.

ವಿದ್ಯುನ್ಮಾನ ಮಾಧ್ಯಮ ವಲಯ ಅಸಂಘಟಿತ ಕ್ಷೇತ್ರವಾಗಿದ್ದು, ಇಲ್ಲಿ ಯಾವುದೇ ಸಂಘಟನೆಗಳು ಕಂಡುಬರುತ್ತಿಲ್ಲ. ಅಂದರೆ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವ ಕೆಲಸಗಾರರು ಯಾವುದೇ ಸಂಘಟನೆಗಳನ್ನು ಹೊಂದಿಲ್ಲ. ಇದರಿಂದ ಮಹಿಳೆಯರು ಸಾಮಾಜಿಕವಾಗಿ ಮತ್ತು ಕೌಟುಂಬಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಪ್ರಕರಣಗಳ ಹೇಳಿಕೆಗಳಿಂದಲೇ ತಿಳಿದುಬರುತ್ತದೆ.

ವಿದ್ಯುನ್ಮಾನ ಮಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರನ್ನು ಮಾಧ್ಯಮಗಳು ಅನ್ಯರೆಂದೇ ಭಾವಿಸುತ್ತಿವೆ. ಹಾಗಾಗಿಯೇ ಇಲ್ಲಿ ಯಾವುದೇ ಭಾವನಾತ್ಮಕ ಸಂಬಂಧಗಳು ಕಂಡುಬರುವುದಿಲ್ಲ. ಮಹಿಳೆಯರು ಯಾವುದಾದರೂ ಸಮಸ್ಯೆಗಳಿಗೆ ಸಿಲುಕಿಕೊಂಡರೆ ಅದನ್ನು ಪರಿಹರಿಸಬೇಕು ಎಂಬ ಆಲೋಚನೆಯೂ ಸಹ ಮಾಧ್ಯಮ ಮಾಲೀಕರಿಗೆ ಇಲ್ಲದಾಗಿದೆ. ಹಾಗಾಗಿಯೇ ಮಹಿಳೆಯರಿಗೆ ಸುರಕ್ಷತೆಯ ಪ್ರಶ್ನೆ ಎದುರಾಗಿದೆ.

ಮಾಧ್ಯಮಗಳು ಸಂವಿಧಾನದ ಆಶಯದಂತೆ ನಡೆದುಕೊಳ್ಳಬೇಕು ಮತ್ತು ಇಲ್ಲಿ ಕೆಲಸ ಮಾಡುವಂತಹ ಕೆಲಸಗಾರರಿಗೆ ಪ್ರತ್ಯೇಕವಾದ ಕಾನೂನು ಚೌಕಟ್ಟುಗಳನ್ನು ಅಥವಾ ಕಾರ್ಮಿಕ ಕಾಯಿದೆಗಳನ್ನು ರೂಪಿಸುವ ಅಗತ್ಯತೆ ಇದೆ. ಇಲ್ಲಿಯವರೆಗೂ ಯಾವುದೇ ಕಾರ್ಮಿಕ ಕಾಯಿದೆ ಈ ವಲಯದ ಕೆಲಸಗಾರರಿಗೆ ಒಳಗೊಳ್ಳದೇ ಇರುವುದನ್ನು ಕಾಣಬಹುದು. ಇದರಿಂದಾಗಿಯೇ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರು, ಪುರುಷರು ಎಲ್ಲರೂ ಉದ್ಯೋಗದ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಈ ಉದ್ಯೋಗದ ಅಭದ್ರತೆ ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚಾಗಿ ಕಾಡಿದೆ.

ಸರಕಾರಿ ಸಾಮ್ಯದ ದೂರದರ್ಶನ ವಾಹಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಸಂಘಟಿತರಾಗಿರುವುದು ಕಂಡು ಬರುತ್ತದೆ. ಅಲ್ಲದೇ ಈ ವೃತ್ತಿಯನ್ನು ಅವರು ಸರಕಾರಿ ವೃತ್ತಿಯೆಂದೇ ಭಾವಿಸಲಾಗಿದ್ದರಿಂದ, ಅಲ್ಲಿನ ಮಹಿಳೆಯರಿಗೆ ಸಿಗಬೇಕಾದ ಸವಲತ್ತುಗಳು, ಮೀಸಲಾತಿಗಳು, ಬಡ್ತಿ ಮತ್ತಿತರ ಸೌಲಭ್ಯಗಳು ಕಾನೂನು ರೀತಿಯಲ್ಲಿ ಸಿಗುತ್ತಿವೆ. ಖಾಸಗಿ ವಾಹಿನಿಗಳಿಗೆ ಹೋಲಿಸಿಕೊಂಡರೆ ದೂರದರ್ಶನ ಚಂದನ ವಾಹಿನಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಗ್ಲಾಮರ್, ವಯಸ್ಸು ಇಂತಹ ಮಾನದಂಡಗಳಾಗಿ ಇರುವುದಿಲ್ಲ. ಅವರು ಕಾನೂನಿನಡಿಯಲ್ಲಿ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಹಾಗಾಗಿ ಅವರಿಗೆ ಉದ್ಯೋಗದ ಅಭದ್ರತೆ ಕಾಡುತ್ತಿಲ್ಲ.

ಖಾಸಗಿ ಮಾಧ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಗ್ಲಾಮರ್, ವಯಸ್ಸು, ದೇಹದ ರಚನೆ ಹೀಗೆ ಹಲವಾರು ನಿರ್ಬಂಧಗಳಿವೆ. ಇವುಗಳ ಕಾರಣಕ್ಕಾಗಿ ಉದ್ಯೋಗದ ಅಭದ್ರತೆಯನ್ನು ಅವರು ಎದುರಿಸುತ್ತಿದ್ದಾರೆ. ಪುರುಷರಿಗೆ ಯಾವುದೇ ನಿರ್ಬಂಧಗಳು ಇಲ್ಲವಾಗಿವೆ. ಆದರೆ ಈ ಬಗೆಯ ಉದ್ಯೋಗದ ಅಭದ್ರತೆಯಾಗಲೀ, ಇನ್ನಿತರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ವೈದ್ಯಕೀಯ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳಲು ಒಂದು ಪ್ರತ್ಯೇಕ ಕಾನೂನಿನ ಅಗತ್ಯತೆ ಇದೆ. ಅಥವಾ ಈಗಾಗಲೇ ಜಾರಿಯಲ್ಲಿರುವ ಕಾರ್ಮಿಕ ಕಾಯಿದೆಗಳ ವ್ಯಾಪ್ತಿಗೆ ಮಾಧ್ಯಮ ವಲಯವು ಒಳಗೊಳ್ಳುವ ಜರೂರಿದೆ.

ಒಟ್ಟಾರೆಯಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಕೆಲಸ ಮಾಡುವಂತಹ ಮಹಿಳೆಯರಲ್ಲಿ ಆತ್ಮ ವಿಶ್ವಾಸ, ಆತ್ಮ ಗೌರವ ಮತ್ತು ಸ್ವಾಭಿಮಾನಗಳು ಹೆಚ್ಚಾಗಬೇಕಾಗಿದೆ. ಮುಖ್ಯವಾಗಿ ಕಾನೂನು ಸೌಲಭ್ಯಗಳನ್ನು ತಮ್ಮ ಹಕ್ಕಿನ ರೂಪದಲ್ಲಿ ಪಡೆಯುವಂತಹ ರೀತಿಯಲ್ಲಿ ಅವರ ಚಿಂತನೆಗಳಲ್ಲಿ ಬದಲಾವಣೆಯನ್ನು ತರಬೇಕಾದ ಅನಿವಾರ್ಯತೆ ಇದೆ. ಹಾಗೆಯೇ ಮಹಿಳೆಯರನ್ನು

ಸಮಸ್ಯೆಗಳಿಂದ ಸಂರಕ್ಷಿಸಲು ಮಹಿಳಾ ಸಂಘಟನೆಗಳ ಅಗತ್ಯತೆ ಇದೆ. ಅವರು ತಮಗೆ ದೊರೆತ ಅವಕಾಶಗಳನ್ನು ನಿರ್ಭಯವಾಗಿ ಉಪಯೋಗಿಸಿಕೊಳ್ಳುವಂತಹ ಪರಿಸ್ಥಿತಿಗಳನ್ನು ನಿರ್ಮಿಸಬೇಕಾದ ಅಗತ್ಯತೆ ಇದೆ. ಈ ಪರಿಸ್ಥಿತಿಗಳು ನಿರ್ಮಾಣವಾದರೆ ಸಹಜವಾಗಿಯೇ ಮಾಧ್ಯಮದಲ್ಲಿನ ಸಮಸ್ಯೆಗಳ ಕುರಿತಂತೆ ಪ್ರಶ್ನೆಗಳು ಉದ್ಭವಿಸುತ್ತವೆ ಮತ್ತು ಅವುಗಳನ್ನು ಪರಿಹರಿಸಿಕೊಳ್ಳುವ ಮಾರ್ಗಗಳು ದೊರೆಯುತ್ತವೆ. ಹಾಗೆಯೇ ಮಹಿಳೆಯರು ಭಾವನಾತ್ಮಕ ಜಗತ್ತಿನಿಂದ ಹೊರಬರಬೇಕಾಗಿದೆ. ಮಹಿಳೆಯೊಬ್ಬಳು ಕುಟುಂಬದ ಬಗೆಗೆ ಹೊಂದಿರುವ ಭಾವನಾತ್ಮಕತೆ, ಅವಲಂಬಿತ ಸ್ಥಿತಿ ಮತ್ತು ಸಾಮಾಜಿಕ ಒತ್ತಡಗಳು ಪುರುಷನ ಕ್ರೌರ್ಯವನ್ನು ಹೆಚ್ಚಿಸುವಷ್ಟೇ ಸುಲಭವಾಗಿ ಅವುಗಳನ್ನು ಮುಚ್ಚಿಹಾಕುತ್ತವೆ. ಈ ಭಾವನಾತ್ಮಕತೆ ಮಹಿಳೆಯರು ತಮ್ಮ ಹಕ್ಕಿನ ರೂಪದಲ್ಲಿ ಪಡೆಯಬಹುದಾದ ಎಲ್ಲ ಸೌಲಭ್ಯಗಳಿಂದ ವಂಚಿತರನ್ನಾಗಿಸುತ್ತದೆ. ಆ ಕಾರಣಕ್ಕಾಗಿ ಮಹಿಳೆಯರು ಭಾವನಾತ್ಮಕತೆ ಎಂಬ ಭ್ರಮಾ ಲೋಕದಿಂದ ಹೊರಬರಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಅವರಿಗೆ ಕುಟುಂಬದಲ್ಲಿನ ಲಿಂಗ ರಾಜಕಾರಣ ಮಾಧ್ಯಮ ವಲಯದಲ್ಲಿಯೂ ಹೇಗೆ ಮುಂದುವರೆದುಕೊಂಡು ಹೊರಟಿವೆ ಎಂಬುದರ ಕುರಿತಂತೆ ಅರಿವು ಮೂಡಿಸುವ ಅಗತ್ಯತೆ ಇದೆ. ಒಟ್ಟಾರೆಯಾಗಿ ಸಂವಿಧಾನದ ಆಶಯದಂತೆ ವಿದ್ಯುನ್ಮಾನ ಮಾಧ್ಯಮದಲ್ಲಿ ಅಮೂಲಾಗ್ರ ಬದಲಾವಣೆಗಳು ನಡೆಯಬೇಕಾದ ಅನಿವಾರ್ಯತೆ ಇದೆ. ಇದರಿಂದ ಮಹಿಳೆಯರಿಗೆ ಅತೀ ಹೆಚ್ಚಿನ ಪ್ರಯೋಜನಗಳಾಗುವುದರ ಜೊತೆಗೆ ಅವರು ಆರ್ಥಿಕವಾಗಿ ಸಬಲರಾಗುತ್ತಾರೆ.

ಅನುಬಂಧಗಳು

ಅನುಬಂಧ–1 : ಪಾರಿಭಾಷಿಕ ಪದಕೋಶ

ಅನುಬಂಧ–2 : ವಕ್ತೃ ವಿವರ

ಅನುಬಂಧ–3 : ಉಲ್ಲೇಖಿತ ಗ್ರಂಥಗಳು

ಅನುಬಂಧ–4 : ಪರಾಮರ್ಶನ ಗ್ರಂಥಗಳು

ಅನುಬಂಧ–5 : ಫೋಟೋಗಳು

ಅನುಬಂಧ – 1

ಟೆಲಿವಿಷನ್ ಸುದ್ದಿ ವಾಹಿನಿಯ ಪಾರಿಭಾಷೆ ಸೂಚಿ

ಟಿಆರ್‌ಪಿ :

ಟಿಆರ್‌ಪಿಯ ವಿಸ್ತೃತ ರೂಪ ಟೆಲಿವಿಷನ್ ರೇಟಿಂಗ್ ಪಾಯಿಂಟ್. ಟೆಲಿವಿಷನ್ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಇದು ಸೂಚಿಸುತ್ತದೆ. ಒಂದು ಸೂಚಿತ ಅವಧಿಯಲ್ಲಿ, ಒಂದು ಭೌಗೋಳಿಕ ಮಾರುಕಟ್ಟೆಯಲ್ಲಿ ಎಷ್ಟು ಜನರು ಕಾರ್ಯಕ್ರಮವನ್ನು ನೋಡುತ್ತಿದ್ದಾರೆ ಎಂದು ಪ್ರತಿಬಿಂಬಿಸುವ ಅಥವಾ ಸೂಚಿಸುವ ವ್ಯವಸ್ಥೆ ಇದಾಗಿದೆ. ಈ ಸಂಖ್ಯೆಗಳು ಪ್ರಸಾರ ಮಾಡುತ್ತಾ ಇರುವ ವಾಹಿನಿಗೆ ಯಾವ ಕಾರ್ಯಕ್ರಮ, ಯಾವ ಹೊತ್ತಿನಲ್ಲಿ, ಎಷ್ಟು ಬಗೆಯ, ಯಾವ ವಯಸ್ಸಿನ, ಯಾವ ಲಿಂಗದ, ವರ್ಗದ, ಯಾವ ಬಗೆಯ ವಸ್ತುಗಳನ್ನು ಖರೀದಿಸುವ ಶಕ್ತಿ ಇರುವ ಜನ ನೋಡಿದರು ಎಂಬ ಲೆಕ್ಕ ಸೂಚಿಯನ್ನು ಇದು ನೀಡುತ್ತದೆ. ಜಾಹೀರಾತುದಾರರು ಈ ಮೌಲ್ಯಮಾಪನದ ಆಧಾರದಲ್ಲಿಯೇ ತಮ್ಮ ಸಾಮಗ್ರಿಗಳನ್ನು ಖರೀದಿಸಬಲ್ಲ ಜನರು ಯಾವ ಕಾರ್ಯಕ್ರಮದ ಜೊತೆಗೆ ಇದ್ದಾರೆ ಎಂದು ತಿಳಿದುಕೊಂಡು, ತಾವು ಹೂಡುವ ಹಣಕ್ಕೆ ತಕ್ಕ ಫಲಿತಾಂಶ ನೀಡಬಹುದಾದ ಕಾರ್ಯಕ್ರಮಕ್ಕೆ ಜಾಹೀರಾತು ನೀಡುತ್ತಾರೆ.

ಟಿಆರ್‌ಪಿ :

ಟಿಆರ್‌ಪಿ ಅಂದರೆ "ಟೆಲಿವಿಷನ್ ರೇಟಿಂಗ್ ಪಾಯಿಂಟ್" ಅಂತಾದರೂ, ವಿದ್ಯುನ್ಮಾನ ಮಾಧ್ಯಮದಲ್ಲಿ ಟಿಆರ್‌ಪಿ ಎನ್ನುವ ಪದವನ್ನು ಮತ್ತೊಂದು ರೀತಿಯಲ್ಲೂ ಬಳಸುವುದನ್ನು ಕಾಣುತ್ತೇವೆ. ಈ ಮಾಧ್ಯಮದಲ್ಲಿ ದುಡಿಯುವ ಮಹಿಳೆಯರೇ ಹೇಳಿಕೊಂಡಂತೆ, ಮಹಿಳೆಯರನ್ನು ಇಲ್ಲಿ ಟಿಆರ್‌ಪಿ ಅಂತ ವ್ಯಂಗ್ಯವಾಗಿ ಕರೆಯುವುದಕ್ಕೆ ಬಳಸುತ್ತಾರಂತೆ. ಜ್ಯೋತಿಷ್ಯ, ಸಿನಿಮಾ, ಲೈಫ್‌ಸ್ಟೈಲ್ ಇಂತಹ ಕಾರ್ಯಕ್ರಮಗಳ ನಿರೂಪಣೆ ಯಾರು ಮಾಡಬೇಕು ಎಂಬ ಪ್ರಶ್ನೆ ಬಂದಾಗ, ಟಿಆರ್‌ಪಿ ಇದ್ದಾರಲ್ಲ ಅವರನ್ನು ಕರೀರಿ ಎಂಬ ಪದ ಬಳಕೆ ಮಾಡುತ್ತಾರಂತೆ.

ಸ್ಟಿಂಗ್ ಆಪರೇಷನ್ :

ಎದುರಿಗಿದ್ದವರಿಗೆ ಗೊತ್ತೇ ಆಗದಂತೆ ರಹಸ್ಯ ಕ್ಯಾಮೆರಾ ಬಳಸಿ ಚಿತ್ರೀಕರಣ ಮಾಡುವುದೇ ಕುಟುಕು ಕಾರ್ಯಾಚರಣೆ ಅಥವಾ ಸ್ಟಿಂಗ್ ಆಪರೇಷನ್. ಪತ್ರಿಕೆಗಳು, ಸುದ್ದಿ ವಾಹಿನಿಗಳು ಕುಟುಕು ಕಾರ್ಯಾಚರಣೆ ಮಾಡುವ ಸಂಪ್ರದಾಯವನ್ನು ಮೊದಲಿನಿಂದಲೂ

ಮಾಡಿಕೊಂಡು ಬಂದಿವೆ. ರಾಜ್ಯಸಭಾ ಚುನಾವಣೆಯಲ್ಲಿ ಶಾಸಕರ ಕುದುರೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸುದ್ದಿ ವಾಹಿನಿಗಳು ಸ್ಟಿಂಗ್ ಆಪರೇಷನ್ ಮಾಡಿ ಭಾರೀ ವಿವಾದಕ್ಕೂ ಸಿಲುಕಿಕೊಳ್ಳಬೇಕಾಯಿತು. ಅಲ್ಲದೇ ಇದೊಂದು ನ್ಯಾಯ ಸಮ್ಮತ ಪತ್ರಿಕೋದ್ಯಮ ಅಲ್ಲ ಎಂಬ ಚರ್ಚೆ ಕೂಡ ಈ ಕುರಿತು ನಡೆದಿದೆ. ಕುಟುಕು ಕಾರ್ಯಾಚರಣೆ ಕುರಿತಂತೆ ಅನೇಕ ಬಾರಿ ಕೋರ್ಟ್ ಮೆಟ್ಟಲು ಏರಿದ ಘಟನೆಗಳೂ ನಡೆದಿವೆ. ಕರ್ನಾಟಕದ ಸಚಿವರೊಬ್ಬರ ಮನೆಯಲ್ಲಿ ನಡೆದ ಕುಟುಕು ಕಾರ್ಯಾಚರಣೆ ಕುರಿತು, ವರದಿಗಾರ್ತಿಯೊಬ್ಬರು ಹೈಕೋರ್ಟ್ ಮೆಟ್ಟಲು ಕೂಡ ಏರಿದ್ದರು. ದೇಶದ ಪ್ರಜೆ ಯಾವುದೇ ವೃತ್ತಿ ಅಥವಾ ವ್ಯಾಪಾರದಲ್ಲಿ ತೊಡಗಿಕೊಳ್ಳುವ ಹಕ್ಕಿನ ಅಡಿ 19(1)(ಜಿ) ಕಲಂ ಅಡಿಯಲ್ಲಿ ಕುಟುಕು ಕಾರ್ಯಾಚರಣೆ ನಮ್ಮ ಹಕ್ಕು ಎನ್ನುವುದು ಪತ್ರಕರ್ತೆಯ ಪ್ರಶ್ನೆಯಾಗಿತ್ತು. ಆದರೆ, ಹೈಕೋರ್ಟ್ ಈ ಕಲಂನಲ್ಲಿ ಕುಟುಕು ಕಾರ್ಯಾಚರಣೆ ನಡೆಸುವುದು ಹಕ್ಕಿನ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಅನಿಸಿಕೆ ವ್ಯಕ್ತಪಡಿಸಿತ್ತು. ಈಗಲೂ ಕೂಡ ಸ್ಟಿಂಗ್ ಆಪರೇಷನ್ ಕುರಿತು ಪರ ಮತ್ತು ವಿರೋಧದ ಮಾತುಗಳು ಕೇಳಿ ಬರುತ್ತಲೇ ಇವೆ. ಭಾರತದಲ್ಲಿ ಮೊದಲು ಕುಟುಕು ಕಾರ್ಯಾಚರಣೆ ಮಾಡಿ ಸುದ್ದಿಯಾಗಿದ್ದು ತೆಹೆಲ್ಕಾ ಅಂತರ್ಜಾಲ ಪತ್ರಿಕೆ. ಇದು ವಿಡಿಯೋ ಕುಟುಕು ಕಾರ್ಯಾಚರಣೆ ಮಾಡಿತ್ತು. ಕನ್ನಡದಲ್ಲಿ ಇಂಥದ್ದೊಂದು ಪರಂಪರೆಯನ್ನು ಬೆಳೆಸಿದ್ದು ಟಿವಿ 9. ಆರಂಭದ ದಿನದಿಂದ ಈವರೆಗೂ ಒಂದಲ್ಲೊಂದು ರೀತಿಯಲ್ಲಿ ಕುಟುಕು ಕಾರ್ಯಾಚರಣೆ ಮಾಡುತ್ತಲೇ ಬಂದಿದೆ. ಸುವರ್ಣ ಸುದ್ದಿ ವಾಹಿನಿಯಲ್ಲಿ ವಿಜಯಲಕ್ಷ್ಮಿ ಶಿಬರೂರ್‌ರ ಕವರ್ ಸ್ಟೋರಿ ಸ್ಟಿಂಗ್ ಆಪರೇಷನ್ ಮೂಲಕ ಪ್ರಸಿದ್ಧಿ.

ತನಿಖಾ ಪತ್ರಿಕೋದ್ಯಮ :

ತೊಂಬತ್ತರ ದಶಕದಿಂದೀಚೆಗೆ ತನಿಖಾ ಪತ್ರಿಕೋದ್ಯಮ ಜೀವ ಪಡೆದಿದೆ. ಭಾಗಲ್‌ಪುರದ ಜೈಲಿನೊಳಗೆ ಕೈದಿಗಳಿಗೆ ನೀಡಲಾಗುತ್ತಿದ್ದ ಹಿಂಸೆಯನ್ನು ಪತ್ರಕರ್ತನೊಬ್ಬ ಸಮಾಜದ ಮುಂದೆ ತನಿಖಾ ಪತ್ರಿಕೋದ್ಯಮದ ಮೂಲಕ ತೆರೆದಿಟ್ಟರು. ನಂತರ ಚಂಬಲ್ ಕಣಿವೆ ರಹಸ್ಯ ಸೇರಿದಂತೆ ಹಲವು ಪ್ರಕರಣಗಳು ತನಿಖಾ ಪತ್ರಿಕೋದ್ಯಮದ ಮೂಲಕವೇ ಸಮಾಜಕ್ಕೆ ಗೊತ್ತಾಯಿತು. ಇಲ್ಲಿಂದ ತನಿಖಾ ಪತ್ರಿಕೋದ್ಯಮ ಜನಪ್ರಿಯವಾಯಿತು.

ಪ್ರಕರಣವೊಂದರ ಬೆನ್ನತ್ತಿ ತನಿಖೆ ಮಾಡಿ, ಸುದ್ದಿ ತರುವುದೇ ತನಿಖಾ ಪತ್ರಿಕೋದ್ಯಮ. ಸ್ಟಿಂಗ್ ಆಪರೇಷನ್ ಶ್ರಮ ಬೇಡದ ವರದಿಗಾರಿಕೆ. ಆದರೆ, ತನಿಖಾ ಪತ್ರಿಕೋದ್ಯಮ ಹಾಗಲ್ಲ. ಸಂಬಂಧ ಪಟ್ಟ ದಾಖಲೆಗಳನ್ನು ಕಲೆ ಹಾಕಬೇಕು, ಓದಬೇಕು ಮತ್ತು ಪ್ರಕರಣದ ಜಾಡು

ಹಿಡಿದು ಸತ್ಯದ ಕುರುಹು ಹುಡುಕಬೇಕು. ಹೀಗಾಗಿಯೇ ಈ ತನಿಖಾ ಪತ್ರಿಕೋದ್ಯಮದ ವಿಭಾಗವನ್ನು ಆರಿಸಿಕೊಳ್ಳುವವರು ಕಡಿಮೆ. ಇದನ್ನು ಅಪಾಯಕಾರಿ ಪತ್ರಿಕೋದ್ಯಮ ಅಂತಲೂ ಕರೆಯುತ್ತಾರೆ. ತನಿಖಾ ವರದಿಗಾರರು ಸಾಕಷ್ಟು ರಿಸ್ಕ್ ತಗೆದುಕೊಂಡು ಕೆಲಸ ಮಾಡುತ್ತಾರೆ. ಪ್ರಾಣ ಹೋಗುವಂತಹ ಸನ್ನಿವೇಶಗಳನ್ನು ಅವರು ಎದುರಿಸಬೇಕಾಗುತ್ತದೆ. ವರದಿಯ ನಂತರ ಮಾನನಷ್ಟ ಪ್ರಕರಣಗಳಲ್ಲಿ ಕೋರ್ಟ್‌ಗೆ ಅಲೆಯುವುದನ್ನು ಕಾಣಬಹುದಾಗಿದೆ.

ಬ್ರೇಕಿಂಗ್ ನ್ಯೂಸ್ :

ಹೊಸ ಸುದ್ದಿಯನ್ನು ತ್ವರಿತಗತಿಯಲ್ಲಿ ಮತ್ತು ತಾವೇ ಮೊದಲು ಪ್ರಕಟಿಸುವುದನ್ನು ಬ್ರೇಕಿಂಗ್ ನ್ಯೂಸ್ ಅಥವಾ ಸ್ಫೋಟಕ ಸುದ್ದಿಯೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಎಲ್ಲ ಸುದ್ದಿ ವಾಹಿನಿಗಳ ಮಧ್ಯೆ ಇಂದು ಪೈಪೋಟಿ ಇದೆ. ಸುದ್ದಿ ಕೊಡುವ ವಿಚಾರದಲ್ಲೂ ಭಾರೀ ಪೈಪೋಟಿಗೆ ಇಳಿಯುತ್ತವೆ. ತಮ್ಮ ಪ್ರತಿಸ್ಪರ್ಧಿ ಚಾನೆಲ್‌ಗಿಂತಲೂ ಮೊದಲೇ ತನ್ನ ಪ್ರೇಕ್ಷಕರಿಗೆ ಸುದ್ದಿ ತಲುಪಿಸಲು ನ್ಯೂಸ್‌ಗಳನ್ನು ಬ್ರೇಕ್ ಮಾಡುತ್ತಲೇ ಇರುತ್ತವೆ. ಈ ಕ್ರಮವನ್ನು ಸ್ಪರ್ಧಾತ್ಮಕ ಯುಗದ ಮೀಡಿಯಾ ಲಕ್ಷಣವೆಂದೂ ಬಣ್ಣಿಸಲಾಗುತ್ತಿದೆ. ಬ್ರೇಕಿಂಗ್ ನ್ಯೂಸ್ ಕುರಿತು ಅನೇಕ ಬಾರಿ ಅಪಸ್ವರಗಳು ಕೂಡ ಕೇಳಿ ಬಂದಿವೆ. ಮೊದಲು ಸುದ್ದಿ ಕೊಡುವ ಭರದಲ್ಲಿ ಅಚಾತುರ್ಯಗಳು ಆಗಿದ್ದೇ ಹೆಚ್ಚು. ಹಾಗಾಗಿ ಸುದ್ದಿಯನ್ನು ಬ್ರೇಕ್ ಮಾಡುವಾಗ ನಿಖರತೆಯ ಕಡೆಗೆ ಗಮನ ಕೊಡುವುದು ಒಳಿತು ಅನ್ನುವ ಅಭಿಪ್ರಾಯ ಕೂಡ ವ್ಯಕ್ತವಾಗಿದೆ. ಬ್ರೇಕಿಂಗ್ ಸುದ್ದಿ ಕೊಡುವ ಭರಾಟೆಯಲ್ಲಿ ಯಾರದ್ದೋ ಸುದ್ದಿ, ಇನ್ನಾರದ್ದೋ ಫೋಟೋ ಹಾಕುವ, ಸುಳ್ಳು ಸುದ್ದಿಗಳನ್ನು ಪರಿಶೀಲನನೆ ಮಾಡದೇ ಹಾಕುವ ಸಂಪ್ರದಾಯ ಕೂಡ ನಡೆದುಕೊಂಡು ಬಂದಿದೆ. ಇದು ಕೂಡ ಬ್ರೇಕಿಂಗ್ ನ್ಯೂಸ್ ಫಲ ಎನ್ನಲಾಗುತ್ತಿದೆ. ಇಂತಹ ಅವಘಡಗಳ ಮಧ್ಯೆಯೇ ಬ್ರೇಕಿಂಗ್ ನ್ಯೂಸ್ ಚಾನೆಲ್‌ಗಳ ಪಾಲಿನ ಹಾಟ್ ಕೇಕ್.

ನ್ಯೂಸ್ ರೀಡರ್ :

ಸುದ್ದಿ ನಿರೂಪಕರೇ ಆಂಗ್ಲ ಭಾಷೆಯ ನ್ಯೂಸ್ ರೀಡರ್. ಇವರು ಆಯಾ ಹೊತ್ತಿನ ಸಿದ್ಧ ಸುದ್ದಿಗಳನ್ನು ಓದುವಂತವರು. ನಾನಾ ಕ್ಷೇತ್ರಗಳ, ವಾಹಿನಿಯ ವರದಿಗಾರರು ಕಳುಹಿಸಿದ ಸುದ್ದಿಯನ್ನು ಒಪ್ಪವಾಗಿ ಓದುವಂತವರನ್ನು ನ್ಯೂಸ್ ರೀಡರ್ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇವರು ಸ್ಟುಡಿಯೋ ಕೇಂದ್ರಿತ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ನ್ಯೂಸ್ ರೀಡರ್ ಆಗಲು ಹಲವು ಅರ್ಹತೆಗಳು ಇವೆ. ಸುಂದರವಾಗಿರಬೇಕು, ಇಂತಿಷ್ಟೇ ವಯಸ್ಸಿನವರು ಇರಬೇಕು. ಸ್ಪಷ್ಟವಾಗಿ ಮಾತನಾಡಲು

ಬರುತ್ತಿರಬೇಕು... ಹೀಗೆ ಹಲವು ಮಾನದಂಡಗಳ ಮೂಲಕ ನ್ಯೂಸ್ ರೀಡರ್ ಆಯ್ಕೆ ನಡೆಯುತ್ತದೆ.

ಡೆಸ್ಕ್ ಕೆಲಸ :

ವರದಿಗಾರರು ಕಳುಹಿಸಿದ ಎಲ್ಲ ಸುದ್ದಿಗಳನ್ನು ಜನರಿಗೆ ಅರ್ಥವಾಗುವಂತೆ ತಲುಪಿಸುವ ಜವಾಬ್ದಾರಿ ಡೆಸ್ಕ್‌ನದ್ದು. ಇಲ್ಲಿ ಬರಹಗಾರರು ಇರುತ್ತಾರೆ. ಸುದ್ದಿಯನ್ನು ಕ್ರಿಯಾತ್ಮಕವಾಗಿ ತಲುಪಿಸುವ ಜವಾಬ್ದಾರಿ ಡೆಸ್ಕ್‌ನದ್ದು. ಸುದ್ದಿಯು ಪ್ರಸಾರ ಆಗುವುದಕ್ಕೂ ಮುಂಚೆ, ಸುದ್ದಿ ತಿದ್ದುವುದು ಮತ್ತು ಬರೆಯುವ ಜವಾಬ್ದಾರಿ ಕೂಡ ಈ ಡೆಸ್ಕಿನದ್ದು. ಸುದ್ದಿ ಯಾವ ರೂಪದಲ್ಲಿ ಪ್ರಸಾರ ಆಗಬೇಕು ಅನ್ನುವ ಸಲಹೆಯನ್ನು ಕೂಡ ಇದು ಕೊಡುತ್ತದೆ.

ಔಟ್‌ಪುಟ್ :

ಯಾವುದೋ ಮೂಲೆಯಿಂದ ಕಚೇರಿಗೆ ಬಂದ ಸುದ್ದಿಯು ವಿವಿಧ ವಿಭಾಗಳ ಮೂಲಕ ಹಾಯ್ದು, ಪ್ರಸಾರ ಆಗುವುದನ್ನೇ ಔಟ್‌ಪುಟ್ ಎಂದು ಕರೆಯುತ್ತಾರೆ. ಕಚ್ಚಾ ಸುದ್ದಿಯೊಂದು ಡೆಸ್ಕ್‌ನಲ್ಲಿ ಸುದ್ದಿ ಸ್ವರೂಪ ಪಡೆದುಕೊಂಡು, ಅದಕ್ಕೆ ತಕ್ಕದಾದ ವಿಡಿಯೋ ಜೊತೆ ಮಾಡಿ, ನ್ಯೂಸ್ ಆ್ಯಂಕರ್‌ಗೆ ತಲುಪಿ, ಅಲ್ಲಿಂದ ನೋಡುಗರಿಗೆ ಆ ಸುದ್ದಿಯನ್ನು ತಲುಪಿಸುವ ಕೆಲಸವನ್ನು ಔಟ್‌ಪುಟ್ ಟೀಮ್ ಮಾಡುತ್ತದೆ.

ಇನ್‌ಪುಟ್ :

ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಮುಖವಾಗಿ ಐದು ಬ್ಯುರೋಗಳು ಬರುತ್ತವೆ. ಸಿನಿಮಾ, ರಾಜಕೀಯ, ಅಪರಾಧ, ಕ್ರೀಡೆ, ಮೆಟ್ರೊ ಈ ಎಲ್ಲ ಬ್ಯುರೋಗಳಿಗೂ ಒಬ್ಬೊಬ್ಬರು ಮುಖ್ಯಸ್ಥರು ಇರುತ್ತಾರೆ. ಪ್ರತಿ ಬ್ಯುರೋ ಕೂಡ ತಮ್ಮದೇ ಆದ ರಿಪೋರ್ಟರ್ಸ್ ಹೊಂದಿರುತ್ತಾರೆ. ಇವರೆಲ್ಲರೂ ಸಂಗ್ರಹಿಸಿದ ಸುದ್ದಿಗಳು ತಲುಪುವ ಜಾಗ ಇನ್‌ಪುಟ್. ಸಂಗ್ರಹಿಸಿದ ಎಲ್ಲ ಸುದ್ದಿಗಳು ಮುಂದೆ ಔಟ್‌ಫುಟ್ ವಿಭಾಗಕ್ಕೆ ಹೋಗುತ್ತವೆ.

ಪ್ರೋಗ್ರಾಮ್ ಆ್ಯಂಕರ್ಸ್ :

ಸುದ್ದಿಯ ಮಧ್ಯೆ ಅರ್ಧಗಂಟೆ ಅಥವಾ ಒಂದು ಗಂಟೆಯ ಕಾರ್ಯಕ್ರಮಗಳು ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾಗುತ್ತವೆ. ಅಂತಹ ಕಾರ್ಯಕ್ರಮಗಳ ನಿರೂಪಕರು. ಸಿದ್ಧಗೊಂಡಿರುವ ಸ್ಕ್ರಿಪ್ಟ್‌ಗಳನ್ನು ಆಯಾ ಘಟನೆಗೆ ತಕ್ಕಂತೆ ನಿರೂಪಿಸುವ ಜವಾಬ್ದಾರಿ ಇವರದ್ದು. ನ್ಯೂಸ್ ಆ್ಯಂಕರ್ ನೇರಪ್ರಸಾರದಲ್ಲಿ ಕಾಣಿಸಿಕೊಂಡರೆ, ಇವರದ್ದು ಮುದ್ರಿತ ಕಾರ್ಯಕ್ರಮವಾಗಿರುತ್ತದೆ.

ನ್ಯೂಸ್ ಆ್ಯಂಕರ್ಸ್ :

ಸುದ್ದಿಗಳನ್ನು ಓದುವವರು ನ್ಯೂಸ್ ಆ್ಯಂಕರ್ಸ್. ಇವರು ಸುದ್ದಿಯನ್ನು ನೇರ ಪ್ರಸಾರದಲ್ಲಿ ಓದುವುದರ ಜತೆಗೆ ಆಯಾ ಘಟನೆಗೆ ತಕ್ಕಂತೆ ಸ್ಪಂದಿಸುವ ಚಾತುರ್ಯ ಹೊಂದಿರುತ್ತಾರೆ. ಸರಾಗವಾಗಿ, ಎಲ್ಲಿಯೂ ತಪ್ಪಾಗದಂತೆ ಓದುವ ಕಲೆಯನ್ನು ಇವರು ಕರಗತ ಮಾಡಿಕೊಂಡಿರುತ್ತಾರೆ. ಯಾವುದೇ ಘಟನೆಯ ಬಗ್ಗೆ ಸುದ್ದಿ ಓದುವಾಗ ಉದ್ವೇಗಕ್ಕೆ ಒಳಗಾಗದ ರೀತಿಯಲ್ಲಿ ಇವರಿಗೆ ತರಬೇತಿ ಕೂಡ ಕೊಡಲಾಗಿರುತ್ತದೆ. ಇವರು ಚಾನೆಲ್‌ನ ಬಹಿರಂಗ ಮುಖ ಕೂಡ. ಚಾನೆಲ್ ಏನು ಹೇಳಬೇಕು ಅಂತ ಹೊರಟದೆಯೋ ಅದನ್ನು ಆ್ಯಂಕರ್ ಮೂಲಕ ಹೇಳಿಸುತ್ತಾರೆ. ತುಂಬಾ ಮಹತ್ವದ ಹುದ್ದೆ ಕೂಡ. ಒಂದು ನಿಮಿಷದ ಸುದ್ದಿಯನ್ನು ಕೊಡಲು ಹಲವು ವಿಭಾಗಗಳು ಕೆಲಸ ಮಾಡುತ್ತವೆ. ಈ ಎಲ್ಲರ ಶ್ರಮವನ್ನು ಪ್ರೇಕ್ಷಕರಿಗೆ ತಲುಪಿಸುವುದೇ ಆ್ಯಂಕರ್ ಜವಾಬ್ದಾರಿ.

ಜರ್ನಲಿಸ್ಟ್ :

ವರದಿಗಾರರು, ಉಪಸಂಪಾದಕರು, ಹಿರಿಯ ವರದಿಗಾರರು, ಸುದ್ದಿ ಸಂಪಾದಕರು, ಸಂಪಾದಕರ ಈ ವಲಯಕ್ಕೆ ಜರ್ನಲಿಸ್ಟ್ ಎಂದು ಕರೆಯುತ್ತಾರೆ. ಸುದ್ದಿಯನ್ನು ಹೆಕ್ಕುವುದು ಮತ್ತು ಅದನ್ನು ನೋಡುಗ ಅಥವಾ ಓದುಗನಿಗೆ ತಲುಪಿಸುವುದು ಇವರ ಕೆಲಸವಾಗಿದೆ.

ಮೆಟ್ರೊ ಬ್ಯೂರೋ :

ಮೆಟ್ರೊ ಅನ್ನುವುದು ಆಧುನಿಕ ಸಿಟಿಯ ಕಲ್ಪನೆ. ಅಮೆರಿಕಾದ ಸಿಎನ್‌ಎನ್ ಚಾನೆಲ್ ಸಿಟಿ ಬ್ಯೂರೋ ಅಂತ ಇದನ್ನು ಕರೆಯುವುದಕ್ಕೆ ಶುರು ಮಾಡಿತು. ಮಹಾನಗರಗಳು ಬೆಳೆದು, ಮೆಟ್ರೊ ಸಿಟಿಯ ಕಲ್ಪನೆ ಬಂದ ನಂತರ ಮೆಟ್ರೊ ಬ್ಯೂರೋ ಶುರುವಾಯಿತು. ಹೆಚ್ಚಾಗಿ ನಗರಕ್ಕೆ ಸಂಬಂಧಿಸಿದ ಸುದ್ದಿಗಳು ಇಲ್ಲಿರುತ್ತವೆ. ಈ ತಂಡ ಕೇವಲ ನಗರ ಕೇಂದ್ರಿತ ಸುದ್ದಿಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತದೆ.

ಫೀಲ್ಡ್ :

ಫೀಲ್ಡ್ ಅನ್ನು ಸರಳವಾಗಿ ಅಖಾಡ ಅಂತ ಕರೆಯಬಹುದು. ಕ್ಷೇತ್ರ, ಸಮಾಜ ಅಂತಲೂ ಹೇಳುತ್ತಾರೆ. ಸಮಾಜದಿಂದಲೇ ಸುದ್ದಿ ಹುಟ್ಟುವುದರಿಂದ ಇಂಥದ್ದೊಂದು ಹೆಸರು ಬಂತು. ಆದರೆ, ಈ ಪದವು ತುಂಬಾ ಜನಪ್ರಿಯವಾಗಿದ್ದು ರೌಡಿಸಂ ಕ್ಷೇತ್ರದಲ್ಲಿ. ಅವರು ಹೆಚ್ಚಾಗಿ ಈ ಪದವನ್ನು ಬಳಸುತ್ತಾರೆ. ಕಾರ್ಯಕ್ಷೇತ್ರಕ್ಕೆ ಇಳಿದು ಕೆಲಸ ಮಾಡುವುದನ್ನು ಫೀಲ್ಡ್ ಎಂಬರ್ಥದಲ್ಲಿ ಹೇಳುತ್ತಾರೆ.

ಲೈಫ್ ಸ್ಟೈಲ್ ಬ್ಯೂರೋ :

ಆಧುನಿಕ ಜೀವನಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಸಂಗ್ರಹಿಸುವುದು ಲೈಫ್ ಸ್ಟೈಲ್ ಬ್ಯೂರೋ ಕೆಲಸ. ಫ್ಯಾಶನ್, ಉಡುಗೆ ತೊಡುಗೆ ಹೀಗೆ ನಾನಾ ಕಾರ್ಯಕ್ರಮಗಳು ಈ ಅಡಿಯಲ್ಲಿ ಬರುತ್ತವೆ. ಜೀವನ ಶೈಲಿಗೆ ಸಂಬಂಧಿಸಿದ ಕಾರ್ಯಕ್ರಮವನ್ನು ನಿರ್ವಹಿಸುವ ವಿಭಾಗವಿದು.

ಟೆಲಿ ಪ್ರಾಮ್ಟರ್ :

ಟೆಲಿ ಅನ್ನುವುದು ಟೆಲಿಕಾಸ್ಟ್ ಪದದ ಸಂಕ್ಷಿಪ್ತ ರೂಪ. ಬಿತ್ತರಿಸುವುದು ಅನ್ನುವುದು ಕನ್ನಡದ ಅವತರಣಿಕೆ. ಯಾವುದನ್ನು ಬಿತ್ತರ ಮಾಡುವ ಮುಂಚೆ ಒಂದು ಬಾರಿ ಖಾತರಿಪಡಿಸಿಕೊಳ್ಳುವುದನ್ನು ಟೆಲಿಪ್ರಾಮ್ಟರ್ ಎಂದು ಕರೆಯುತ್ತಾರೆ. ಸುದ್ದಿ ಓದುವವರ ಮುಂದೆ ಇರುವ ಈ ಯಂತ್ರವು ಓದುವ ಸುದ್ದಿಗಳನ್ನು ಸುದ್ದಿ ನಿರೂಪಕರಿಗೆ ಒದಗಿಸುತ್ತದೆ. ಇದನ್ನೇ ನೋಡಿಕೊಂಡು ಸುದ್ದಿ ಓದುತ್ತಿದ್ದಾರೆ.

ಪೇಯ್ಡ್ ಪ್ರೋಗ್ರಾಮ್ :

ಇತ್ತೀಚಿನ ದಿನಗಳಲ್ಲಿ ಇದು ಜನಪ್ರಿಯ ಪದವಾಗಿದೆ. ಬಹುತೇಕ ಸುದ್ದಿ ವಾಹಿನಿಗಳಲ್ಲಿ ಕಾಸು ಕೊಟ್ಟು ಪ್ರಚಾರ ಪಡೆಯುತ್ತಾರೆ. ಇದನ್ನೇ ಪೇಯ್ಡ್ ಪ್ರೋಗ್ರಾಮ್ ಎಂದು ಕರೆಯಲಾಗುತ್ತದೆ. ಜ್ಯೋತಿಷಿ, ಸಿನಿಮಾ ಸಂಬಂಧಿ ವಿಶೇಷ ಕಾರ್ಯಕ್ರಮಗಳು, ರಾಜಕಾರಣಿಗಳ ಬರ್ತ್‌ಡೇ ಸಮಾರಂಭದ ಸುದ್ದಿ, ಪ್ರಾಪರ್ಟಿ ವ್ಯವಹಾರಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಹೀಗೆ, ಅನೇಕ ಕಾರ್ಯಕ್ರಮಗಳನ್ನು ಪ್ರಸಾರದ ವೆಚ್ಚ ಕೊಟ್ಟು ಪ್ರಚಾರ ತಗೆದುಕೊಳ್ಳುತ್ತಾರೆ. ಇದೇ ಪೇಯ್ಡ್ ಪ್ರೋಗ್ರಾಮ್.

ಪ್ರೈಮ್ ಟೈಮ್ :

ಅತೀ ಹೆಚ್ಚು ಜನ ಟಿವಿಯನ್ನು ವೀಕ್ಷಣೆ ಮಾಡುವ ಸಮಯವನ್ನು ಪ್ರೈಮ್ ಟೈಮ್ ಎಂದು ಕರೆಯಲಾಗುತ್ತದೆ. ಟೆಲಿವಿಷನ್‌ನಲ್ಲಿ ಫಿಕ್ಸ್ಡ್ ಪ್ರೋಗ್ರಾಮ್ ಚಾರ್ಟ್ ಅಂತ ಇದೆ. ಬೆಳಿಗ್ಗೆ ಆರು ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆವರೆಗೆ ಯಾವ ವಿಷಯವನ್ನು ಯಾವಾಗ ಹೇಳಬೇಕು ಎಂದು ನಿರ್ಧರಿಸುವ ಚಾರ್ಟ್ ಅದು. ಈ ಚಾರ್ಟ್ ಅತೀ ಹೆಚ್ಚು ಜನ ಟಿವಿ ವೀಕ್ಷಣೆ ಮಾಡುವ ಸಮಯ ಯಾವುದು ಅಂತ ಗೊತ್ತು ಮಾಡಿದೆ. ಸಾಯಂಕಾಲ ಆರು ಗಂಟೆಯಿಂದ ಹನ್ನೊಂದು ಗಂಟೆಯ ಅವಧಿಯನ್ನು ಪ್ರೈಮ್ ಟೈಮ್ ಎಂದು ನಿಗಧಿ ಮಾಡಿದೆ.

ಕ್ರೈಂ ರಿಪೋರ್ಟರ್ :

ಅಪರಾಧ ಸುದ್ದಿಗಳನ್ನು ನೋಡುಗರಿಗೆ ಅಥವಾ ಪ್ರೇಕ್ಷಕರಿಗೆ ತಲುಪಿಸುವುದು ಕ್ರೈಂ ರಿಪೋರ್ಟರ್ ಕೆಲಸ. ಕಾನೂನು ಬಾಹೀರ ಎಲ್ಲ ಚಟುವಟಿಕೆಗಳ ವಿಷಯಗಳನ್ನೂ ಇವರು ಸಂಗ್ರಹಿಸುತ್ತಾರೆ. ಇದು ತುಂಬಾ ಕಠಿಣ ಕೆಲಸ ಎಂದೂ ಬಣ್ಣಿಸಲಾಗುತ್ತಿದೆ. ಈ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಕಾನೂನು ತಿಳುವಳಿಕೆ ಕೂಡ ಇರಬೇಕಾಗುತ್ತದೆ.

ಸಾಫ್ಟ್ ಸ್ಟೋರಿ :

ಸಿನಿಮಾ, ಫ್ಯಾಶನ್, ಜ್ಯೋತಿಷ್ಯ, ಲೈಫ್ ಸ್ಟೈಲ್, ಸಾಂಸ್ಕೃತಿಕ ಕಾರ್ಯಕ್ರಮಗಳು ಹೀಗೆ ಕಠಿಣ ಶ್ರಮ ಬೇಡದ ಮತ್ತು ತೀರಾ ಕಷ್ಟಪಡದಂತೆ ತರುವ ಸುದ್ದಿಯನ್ನು ವಿದ್ಯುನ್ಮಾನ ಮಾಧ್ಯಮವು ಸಾಫ್ಟ್ ಸ್ಟೋರಿ ಎಂದು ವ್ಯಾಖ್ಯಾನಿಸಿದೆ.

ಹಾರ್ಡ್ ಸ್ಟೋರಿ :

ಪೊಲಿಟಿಕಲ್, ಕ್ರೀಡೆ, ಕ್ರೈಂ, ಎಕನಾಮಿಕ್ಸ್‌ಗೆ ಸಂಬಂಧಿಸಿದ ಸುದ್ದಿಗಳನ್ನು ವಿದ್ಯುನ್ಮಾನ ಮಾಧ್ಯಮವು ಹಾರ್ಡ್ ಸ್ಟೋರಿ ಎಂದು ಕರೆಯುತ್ತದೆ. ಯಾವ ಸುದ್ದಿಯು ಸಾಕಷ್ಟು ಶ್ರಮ ಬೇಡುತ್ತದೆಯೋ, ಅಥವಾ ಕಠಿಣತೆಯಿಂದ ಕೂಡಿರುತ್ತದೆಯೋ ಅದನ್ನು ಹಾರ್ಡ್ ಸ್ಟೋರಿ ಎಂದು ಕರರೆಯುತ್ತಾರೆ.

ಎಕ್ಸ್‌ಕ್ಲೂಸಿವ್ ಸುದ್ದಿ :

ಎಲ್ಲಿಯೂ ಬಾರದೇ, ಕೇವಲ ತಮಗಷ್ಟೇ ಸಿಕ್ಕ ಸುದ್ದಿಯನ್ನು ಎಕ್ಸ್‌ಕ್ಲೂಸಿವ್ ಸುದ್ದಿ ಎಂದು ಕರೆಯುತ್ತಾರೆ. ತಮ್ಮ ವಾಹಿನಿಗೆ ಮಾತ್ರ ಸಿಕ್ಕು, ಬೇರೆಲ್ಲೂ ಬಾರದ ಸುದ್ದಿಯೇ ಎಕ್ಸ್‌ಕ್ಲೂಸಿವ್. ತಮ್ಮ ಚಾನೆಲ್‌ನಲ್ಲಿ ಮಾತ್ರ ಪ್ರಸಾರವಾಗುತ್ತಿರುವ ಸುದ್ದಿಗಳನ್ನು ಸಾಮಾನ್ಯವಾಗಿ ಎಕ್ಸ್‌ಕ್ಲೂಸಿವ್ ಎಂದು ಹೇಳುತ್ತಾರೆ.

ಗ್ಲಾಮರ್ :

ಮಹಿಳೆಯನ್ನು ಸಾಮಾನ್ಯವಾಗಿ ಗ್ಲಾಮರ್ ಎಂದು ಕರೆಯುತ್ತಾರೆ. ಅವಳ ಬುದ್ಧಿಮತ್ತೆಕ್ಕಿಂತ ಅವಳ ಸೌಂದರ್ಯದಿಂದ ಗುರುತಿಸುವುದನ್ನು ಗ್ಲಾಮರ್ ಎಂದು ಹೇಳಲಾಗುತ್ತಿದೆ. ಬಾಹ್ಯ ಸೌಂದರ್ಯ ಕೂಡ ಮಾರಾಟ ವಸ್ತು. ಅದು ಕೂಡ ಗ್ಲಾಮರ್ ಅನಿಸಿಕೊಳ್ಳುತ್ತದೆ.

ಬೈಟ್ :

ವ್ಯಕ್ತಿಗಳ ಪ್ರತಿಕ್ರಿಯೆ ಪಡೆಯುವುದನ್ನು ಬೈಟ್ ಎಂದು ಕರೆಯುತ್ತಾರೆ. ಯಾವುದೇ ವಿಷಯದ ಬಗ್ಗೆ ವ್ಯಕ್ತಿಯಿಂದ ಮಾತಾಡಿಸಿ, ಅವನ ಅಭಿಪ್ರಾಯ ಪಡೆಯುವುದನ್ನು ಬೈಟ್ ಎಂದು ಹೇಳುತ್ತಾರೆ.

ಬೀಟ್ :

ವರದಿಗಾರಿಕೆಗಾಗಿ ಆಯ್ಕೆ ಮಾಡಿಕೊಳ್ಳುವ ಕ್ಷೇತ್ರವನ್ನು ಬೀಟ್ ಎಂದು ಕರೆಯುತ್ತಾರೆ. ಯಾವ ಕ್ಷೇತ್ರವನ್ನು ಅವರು ಆಯ್ಕೆ ಮಾಡಿಕೊಂಡಿರುತ್ತಾರೆ, ಅದೇ ಕ್ಷೇತ್ರದ ಸುದ್ದಿಯತ್ತ ಅವರು ಹೆಚ್ಚಾಗಿ ಗಮನ ಹರಿಸುತ್ತಾರೆ.

ಅನುಬಂಧ 2
ವಕ್ತೃ ವಿವರ

ಹೆಸರು	ವಯಸ್ಸು	ವಾಹಿನಿ	ವೃತ್ತಿ
ಲಕ್ಷ್ಮೀ	೨೫	ಖಾಸಗಿ	ವರದಿಗಾರ್ತಿ
ಮಂಜುಳಾ	೩೦	ಖಾಸಗಿ	ನ್ಯೂಸ್ ರೀಡರ್
ಜ್ಯೋತಿ	೩೫	ಖಾಸಗಿ	ವರದಿಗಾರ್ತಿ
ಪವಿತ್ರಾ	೨೬	ಖಾಸಗಿ	ಆ್ಯಂಕರ್
ರಿಜ್ವಾನಾ	೩೦	ಖಾಸಗಿ	ವಾರ್ತಾವಾಚಕಿ
ವಿಜಯಲಕ್ಷ್ಮಿ	೩೫	ಖಾಸಗಿ	ಕ್ರೈಂ ಚೀಫ್
ಪಲ್ಲವಿ	೪೦	ಖಾಸಗಿ	ಸಂಕಲನ
ಮೇನಕಾ	೩೭	ದೂರದರ್ಶನ	ಪ್ರೋಗ್ರಾಮ್
ಝೂನ್ಸಿ	೩೬	ಖಾಸಗಿ	ಹೆಡ್
ಸಂಜನಾ	೪೦	ದೂರದರ್ಶನ	ಪ್ರೋಗ್ರಾಮ್
ಅರ್ಚನಾ	೨೯	ಖಾಸಗಿ	ವರದಿಗಾರ್ತಿ
ರಕ್ಷಿತಾ	೩೦	ಖಾಸಗಿ	ವರದಿಗಾರ್ತಿ
ಸೌಮ್ಯ	೪೫	ಖಾಸಗಿ	ಔಟ್‌ಪುಟ್
ಮೀರಾ	೨೬	ಖಾಸಗಿ	ಡೆಸ್ಕ್
ಅಮೃತಾ	೩೨	ದೂರದರ್ಶನ	ಡೆಸ್ಕ್
ನಾಜಿಯಾ	೩೦	ಖಾಸಗಿ	ವಾರ್ತಾವಾಚಕಿ
ಸಾಕ್ಷಿ	೨೩	ಖಾಸಗಿ	ರಿಪೋರ್ಟರ್
ಭವ್ಯ	೨೯	ದೂರದರ್ಶನ	ಡೆಸ್ಕ್
ಸುನಂದಾ	೨೪	ಖಾಸಗಿ	

ಪ್ರಮಿಳಾ	೩೪	ಖಾಸಗಿ	ವರದಿಗಾರ್ತಿ
ಸುಜಯ್	೨೩	ಖಾಸಗಿ	ವರದಿಗಾರ್ತಿ
ಕೇಶವ	೩೫	ಖಾಸಗಿ	ವರದಿಗಾರ
ಮಂಜು	೪೩	ದೂರದರ್ಶನ	ಬುಲಿಟಿನ್
ವಿವೇಕ	೨೪	ಖಾಸಗಿ	ವರದಿಗಾರ
ವಿಮಲಾ	೨೬	ಖಾಸಗಿ	ಚೀಫ್
ಶೀಲಾ	೩೨	ಖಾಸಗಿ	ವರದಿಗಾರ್ತಿ
ಶಮಾ	೩೫	ಖಾಸಗಿ	ವರದಿಗಾರ್ತಿ
ನಾಸೀರ್	೨೪	ಖಾಸಗಿ	ವರದಿಗಾರ್ತಿ
ನಸ್ರೀನ್	೨೮	ಖಾಸಗಿ	ಡೆಸ್ಕ್
ಭಾರತಿ	೩೦	ದೂರದರ್ಶನ	ಎಡಿಟಿಂಗ್
ಚಂದ್ರಕಲಾ	೨೯	ಖಾಸಗಿ	ಆ್ಯಂಕರ್
ರಾಜೇಶ್ವರಿ	೩೧	ಖಾಸಗಿ	ನ್ಯೂಸ್
ಭಾವನಾ	೨೮	ಖಾಸಗಿ	ವರದಿಗಾರ್ತಿ
ಸೌಮ್ಯ	೩೨	ಖಾಸಗಿ	ವರದಿಗಾರ್ತಿ
ರಶ್ಮಿ	೨೮	ಖಾಸಗಿ	ವರದಿಗಾರ್ತಿ
ಸುನಿತಾ	೩೧	ಖಾಸಗಿ	ಡೆಸ್ಕ್
ಚೇತನಾ	೩೦	ಖಾಸಗಿ	ಕ್ರೈಂ ರಿಪೋ
ಸವಿತಾ	೨೭	ಖಾಸಗಿ	ಸಿನಿಮಾ
ಸಬೀನಾ	೩೫	ಖಾಸಗಿ	ವರದಿಗಾರ್ತಿ
ಸುಹಾನಾ	೩೮	ಖಾಗಿಸ	ವರದಿಗಾರ್ತಿ
ಸುಮಾ	೩೪	ದೂರದರ್ಶನ	ಡೆಸ್ಕ್
ನಮಿತಾ	೨೭	ಖಾಸಗಿ	ವರದಿಗಾರ್ತಿ

ಪ್ರಗತಿ	೨೮	ಖಾಸಗಿ	ಔಟ್‌ಫುಟ್
ಶ್ರಾವ್ಯ	೩೨	ಖಾಸಗಿ	ವರದಿಗಾರ್ತಿ
ಮಾನಸಾ	೩೬	ಖಾಸಗಿ	ಸಂಕಲನ
ರೇಖಾ	೩೩	ಖಾಸಗಿ	ವರದಿಗಾರ್ತಿ
ಪದ್ಮಾ	೨೫	ಖಾಸಗಿ	ವರದಿಗಾರ್ತಿ
ಬಬಿತಾ	೨೩	ಖಾಸಗಿ	ನ್ಯೂಸ್
ರಶ್ಮಿ	೩೦	ಖಾಸಗಿ	ವರದಿಗಾರ್ತಿ
			ಮೇಕಪ್

(ವಕ್ತೃಗಳ ಅಪೇಕ್ಷೆಯಂತೆ ಮೂಲ ಹೆಸರುಗಳನ್ನು ಬದಲಾಯಿಸಲಾಗಿದೆ**)

ಅನುಬಂಧ-3
ಉಲ್ಲೇಖಿತ ಗ್ರಂಥಗಳು

1. ಡಾ.ಆಂಜನಪ್ಪ ಬಿ.ಎಚ್, ಮಹಿಳೆ ಮತ್ತು ದುಡಿಮೆ, 2006, ಸೃಷ್ಟಿ ಪಬ್ಲಿಕೇಷನ್, 1ನೇ ಕ್ರಾಸ್, 1ನೇ ಮೇನ್, ಗೋವಿಂದಪ್ಪ ಲೇಔಟ್, ನಾಗಶೆಟ್ಟ ಹಳ್ಳಿ, ಬೆಂಗಳೂರು
2. ಕಲಾವತಿ ಬಿ.ಜಿ, ಮಾಧ್ಯಮ ಮತ್ತು ಮಹಿಳೆ, 2010, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,
3. ಕೃಷ್ಣಯ್ಯ ಎಂ.ಎಚ್, ಡಾ. ವಿಜಯಾ (ಸಂಪಾದನೆ) 2007, ಬೆಂಗಳೂರು ದರ್ಶನ ಸಂಪುಟ 3, ಉದಯಭಾನು ಕಲಾ ಸಂಘ, ಬೆಂಗಳೂರು
4. ಡಾ.ಕೆ.ಸರೋಜಾ, ಮಹಿಳಾ ಆರೋಗ್ಯ ಒಂದು ಮರುಚಿಂತನೆ, 2008, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
5. ಗುರು ಮಹೇಶ್, ವಿಮೆನ್ ಅಂಡ್ ಮಾಸ್ ಮೀಡಿಯಾ : ದ ಇಂಡಿಯನ್ ಸಿನೆರಿಯೋ, 2010, ಜನವರಿ–ಮಾರ್ಚ್ 5 ಕಮ್ಯೂನಿಕೇಟರ್ ಸಂಚಿಕೆ.
6. ಡಾ.ಚಂದ್ರಮತಿ ಸೋಂದಾರವರ, ಚಿಪ್ಪೊಡೆದ ಮೌನ, 2004, ಅಭಿರುಚಿ ಪ್ರಕಾಶನ, ಮೈಸೂರು
7. ಜಯಲಕ್ಷ್ಮಿ ಕೆ, ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ, 2006,
8. ಜಯರಾಮ್ ಅಡಿಗ ಎಂ. ಮತ್ತು ಡಿ.ಯಶೋದಾ (ಸಂ), 2013, ಪತ್ರಕರ್ತೆಯ ಪುರಾವೆಗಳು, ಪ್ರೆಸ್‌ಕ್ಲಬ್ ಪ್ರಕಾಶನ, ಬೆಂಗಳೂರು.
9. ಟುಚ್‌ಮನ್ ಗಯೆ (ಸಂ) ದ ಸಿಂಬಾಲಿಕ್ ಅನಿಹಿಲೇಷನ್ ಆಫ್ ವಿಮೆನ್ ಬೈ ದಿ ಮಾಸ್ ಮೀಡಿಯಾ, 1978, ಆಕ್ಸ್‌ಫರ್ಡ್ ಯೂನಿವರ್ಸಿಟಿ, ಲಂಡನ್
10. ನಾಗೇಶ್ ಹೆಗಡೆ (ಸಂ), ಮಾಧ್ಯಮ ಕರ್ನಾಟಕ, 2012, ಉದಯಭಾನು ಕಲಾಸಂಘ ಬೆಂಗಳೂರು.
11. ಮುಮ್ತಾಜ್ ಅಲಿಖಾನ್, ಪುಣ್ಯಕೋಟಿ, 2010, ಸಪ್ನ ಬುಕ್ ಹೌಸ್, ಬೆಂಗಳೂರು.
12. ಪಿ.ಎಸ್ ಶಂಕರ್, ಸ್ತ್ರೀ ಪ್ರಜನನ ವ್ಯವಸ್ಥೆ, 2014, ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ ಹುಬ್ಬಳ್ಳಿ.
13. ಬೈರ್ಲೆ ಕೆರೊಲಿನ್, ಗ್ಲೋಬಲ್ ರಿಪೋರ್ಟ್ ಆನ್ ದ ಸ್ಟೇಟಸ್ ಆಫ್ ವಿಮೆನ್ ಇನ್ ದ ನ್ಯೂಸ್ ಮೀಡಿಯಾ, 2011, ಇಂಟರ್ ನ್ಯಾಷಿನಲ್ ವಿಮೆನ್ಸ್ ಮೀಡಿಯಾ ಫೌಂಡೇಷನ್, ವಾಸಿಂಗ್ಟನ್ ಡಿಸಿ.
14. ವಿಜಯಶ್ರೀ ಸಬರದ (ಸಂ), 2005, ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
15. ಸರೋಜಾ ಕೆ, ಮಹಿಳಾ ಆರೋಗ್ಯ ಒಂದು ಮರುಚಿಂತನೆ, 2008, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

16. ಸತ್ಯಪ್ರಕಾಶ್ ಎಂ.ಆರ್, ಡಾ.ಬಿ.ಕೆ ರವಿ, ಮಾಧ್ಯಮ– ಉದ್ಯಮ, 2008, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು
17. ಡಾ.ಸಿ.ಡಿ.ವೆಂಕಟೇಶ್ (ಸಂ), ಮಹಿಳಾ ಅಧ್ಯಯನದ ನೆಲೆಗಳು, 2010, ಶ್ರೀಶಿರಡಿ ಸಾಯಿ ಎಂಟರ್ ಪ್ರೈಸಸ್, 5ನೇ ಮುಖ್ಯರಸ್ತೆ, ಗಾಡಿಮುದ್ದಣ್ಣ, ಕಾಮಾಕ್ಷಿ ಪಾಳ್ಯ ಹೊಸ ಬಡಾವಣೆ, ಬೆಂಗಳೂರು–79
18. ಸಿಬಂತಿ ಪದ್ಮನಾಭ ಕೆ.ವಿ, ಮಾಧ್ಯಮ ಶೋಧ, 2013, ಪಂಚಮಿ ಮೀಡಿಯಾ ಪಬ್ಲಿಕೇಷನ್, ಕೆಂಪೇಗೌಡ ನಗರ, ಮಾಗಡಿ ಮೇನ್ ರೋಡ್, ಬೆಂಗಳೂರು 91
19. ಡಾ.ಸುನಂದಾ ಕುಲಕರ್ಣಿ, ಉದ್ಯೋಗಸ್ಥ ಮಹಿಳೆಯರು ಮತ್ತು ಆರೋಗ್ಯ, 2012, ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿರಸ್ತೆ, ಬೆಂಗಳೂರು
20. ವಿಜಯ ಕುಮಾರ್, ಹೆಚ್, ಮಾಧ್ಯಮ ಮತ್ತು ಮಾರುಕಟ್ಟೆ, 2012, ಗೀತಾಂಜಲಿ ಪುಸ್ತಕ ಪ್ರಕಾಶನ, ಮೈಸೂರು.
21. ಡಾ.ವಿಜಯ, ನುಡಿ ರಂಗೋಲಿ, 2017, ನಾಕುತಂತಿ ಪ್ರಕಾಶನ, ಬನಶಂಕರಿ 2ನೇ ಹಂತ, ಬೆಂಗಳೂರು.
22. ಶ್ರೀಮತಿ ಎಚ್.ಎಸ್., ಹೆಣ್ಣು–ಹೆಂಗಸು, 2004, ಬ್ಯಾಲದಕೆರೆ ಪ್ರಕಾಶನ, ಮಂಡ್ಯ.
23. ಶ್ರೀಮತಿ ಎಚ್.ಎಸ್. (ಸಂ), ಮಹಿಳಾ ಅಧ್ಯಯನ, 2000, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
24. ಶ್ರೀಮತಿ ಎಚ್.ಎಸ್ ಶ್ರೀಮತಿ, ಮೂಲ : ಜೆರಾಲ್ಡಿನ್ ಫೋರ್ಬ್ಸ್, ಆಧುನಿಕ ಭಾರತದಲ್ಲಿ ಮಹಿಳೆ, 2012, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು
25. ಡಾ.ಎಚ್.ಎಸ್.ಶ್ರೀಮತಿ (ಸಂ), ಮಹಿಳಾ ಅಧ್ಯಯನ ಸಂ 2 ಸಂಚಿಕೆ 1, 2000, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
26. ಡಾ.ಎ.ಮೋಹನ ಕುಂಟಾರ್, ಮಾಧ್ಯಮಗಳು ಮತ್ತು ಭಾಷಾಂತರ, 2016, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅನುಬಂಧ – 4

ಪರಾಮರ್ಶನ ಗ್ರಂಥಗಳು

1. ಅಂಜನಪ್ಪ ಬಿ.ಹೆಚ್, ಮಹಿಳೆ ಮತ್ತು ದುಡಿಮೆ, 2006, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು
2. ಅಂದನೂರು ಶೋಭಾ ಮತ್ತು ಶ್ರೀಲಕ್ಷ್ಮಿ ಬಿ.ಬಿ (ಸಂ), 1988, ಮಹಿಳೆಯರ ಮುನ್ನಡೆ, ಮಾನಿನಿ ಪ್ರಕಾಶನ ಬೆಂಗಳೂರು.
3. ಅಂದನೂರು ಶೋಭಾ (1988) ಮಹಿಳೆಯ ಮುನ್ನಡೆ, ಮಾನಸಿ ಪ್ರಕಾಶನ, ಬೆಂಗಳೂರು.
4. ಅಖಿಲೇಶ್ವರಿ. ಆರ್, ಪೋರ್ಟ್ರೆಯಲ್ ಆಫ್ ವಿಮೆನ್ ಇನ್ ಇಂಡಿಯನ್ ಮೀಡಿಯಾ, 1988 ವಿದುರ.
5. ಅಖಿಲೇಶ್ವರಿ. ಆರ್, ವಿಮೆನ್ ಜರ್ನಲಿಸ್ಟ್ಸ್: ಸ್ಟಿಲ್ ವೇಯಿಟಿಂಗ್ ಇನ್ ದ ವಿಂಗ್ಸ್, 1984 ವಿದುರ.
6. ಅಗರ್‌ವಾಲ್ ವೀರ್ ಬಾಲ ಮತ್ತು ವಿ.ಎಸ್.ಗುಪ್ತ, ಹ್ಯಾಂಡ್‌ಬುಕ್ ಆಫ್ ಜರ್ನಲಿಸಂ ಅಂಡ್ ಮಾಸ್ ಕಮ್ಯೂನಿಕೇಷನ್, 2001, ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪನಿ, ನ್ಯೂ ದೆಹಲಿ.
7. ಅಜೀಜ್ ಅಬ್ದುಲ್ ಮತ್ತು ವಾಸುಕಿ ಕೆಜಿ (ಸಂ), ಕರ್ನಾಟಕದ ಆರ್ಥಿಕತೆ, 1997, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
8. ಅನ್ನಪೂರ್ಣೇಶ್ವರಿ ಎನ್, ಮಹಿಳಾ ಶಿಕ್ಷಣ ಮತ್ತು ಅಭಿವೃದ್ಧಿ, 2002, ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ, ಮೈಸೂರು.
9. ಅನುಸೂಯಾ ಕಾಂಬಳೆ, ವಿಚಾರ ಸಾಹಿತ್ಯ ಹೆಣ್ಣು, ವೈಚಾರಿಕತೆ, 1999, ಸಾಹಿತ್ಯ ಪ್ರಕಾಶನ, ರಾಯಭಾಗ.
10. ಅಬೂಬಕ್ಕರ್ ಸಾರಾ (ಸಂ), ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, 2007, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ಅಬ್ರಹಾಂ ನರ್ಗಿಸ್, ವಿಮೆನ್ಸ್ ಲಿಬರೇಷನ್ಸ್ ಅಂಡ್ ಇಂಡಿಯನ್ ಮೀಡಿಯಾ, 1988, ವಿದುರ.
12. ಅಬ್ರೋಲ್ ಉಷಾ, ವಂದನಾ ಥಾಪರ್, ಖಾನ್, ಎನ್ ಮತ್ತು ಪರುಲ್ ಶ್ರೀವಾಸ್ತವ (1992) ಟೆಲಿವಿಷನ್ ವಿವಿಂಗ್ ಅಮಾಂಗ್ ಚಿಲ್ಡ್ರನ್, *ಕಮ್ಯುನಿಕೇಟರ್.*
13. ಅಮರೇಶ್ ನುಗಡೋಣಿ, ಕನ್ನಡ ಸಂಶೋಧನೆಯ ವೈಧಾನಿಕತೆಗಳು, 2008, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
14. ಅಶೋಕ್ ಕುಮಾರ್ ಗುಮ್ಮಿ, ಪತ್ರಿಕಾರಂಗ ವೃತ್ತಿಪರ ಸಂಘ ಸಂಸ್ಥೆಗಳು, 1999, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.

15. ಅಹುಜಾ ಬಿ.ಎನ್, ಆಡಿಯೊ ವಿಶುಯಲ್ ಜರ್ನಲಿಸಮ್, 2000, ಸುರ್ಜಿತ್ ಪಬ್ಲಿಕೇಷನ್ಸ್, ಡೆಲ್ಲಿ.
16. ಆಶಾದೇವಿ ಎಂ.ಎಸ್, ಸ್ತ್ರೀಮತವನ್ನುರಿಸಲಾದೀತೆ?, 2005, ಅಕ್ಷರ ಪ್ರಕಾಶನ, ಸಾಗರ
17. ಇಂದಿರಾ ಆರ್, ಮಹಿಳೆ ಮತ್ತು ಸಮಾಜ ಮತ್ತು ಸಂಸ್ಕೃತಿ, 2002, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂ1ಪಿ
18. ಇಂದಿರಾ ಆರ್, ಭಾರತೀಯ ಸಮಾಜ, 1995, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
19. ಇಂದಿರಾ ಆರ್, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, 2000, ರಾಘವ ಟ್ರಸ್ಟ್, ಮೈಸೂರು.
20. ಇಂದಿರಾ ಜೈಪ್ರಕಾಶ್, ಸ್ತ್ರೀವಾದಿ ಮನೋವಿಜ್ಞಾನ, 2009, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ
21. ಇಬ್ರಾಹೀಮ್ ಸಯೀದ್, ಮಹಿಳೆ ಮತ್ತು ಸಮಾಜ, 2001, ಶಾಂತಿ ಪ್ರಕಾಶನ, ಮಂಗಳೂರು
22. ಎಲಸ್ಸಿಯರ್ ಥಾಮಸ್, ಮೀಡಿಯಾ ಆರ್ಕಿಯಾಲಜಿ ಆಸ್ ಸಿಂಪ್ಟಮ್, 2016, ನ್ಯೂ ರೆವ್ಯೂ ಆಫ್ ಫಿಲಂ ಅಂಡ್ ಟೆಲಿವಿಷನ್ ಸ್ಟಡೀಸ್.
23. ಉಷಾ ಎಂ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, 2005, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
24. ಉಷಾ ಎಂ, ಮಹಿಳೆ ಮತ್ತು ಜಾತಿ, 2005, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
25. ಉಷಾ ಎಂ, ಭಾಷಾಂತರ ಮತ್ತು ಲಿಂಗ ರಾಜಕಾರಣ, 2012, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
26. ಉಷಾರಾಣಿ ಎನ್, ಮಾಧ್ಯಮ ಮತ್ತು ಮಹಿಳೆ, 2002, ರಾಧಾಟ್ರಸ್ಟ್, ಮಂಡ್ಯ
27. ಒಡೆಯರ್ ಡಿ ಹೆಗ್ಗಡೆ ಮತ್ತು ಅನ್ನಪೂರ್ಣೇಶ್ವರಿ, ಮಹಿಳಾ ಅಧ್ಯಯನಗಳು, ಆರ್ಥಿಕ ನೆಲೆಗಳು ಮತ್ತು ಆಯಾಮಗಳು, 2003, ಮಾನವ ಅಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು
28. ಒಡೆಯರ್ ಡಿ ಹೆಗ್ಗಡೆ ಮತ್ತು ಅನ್ನಪೂರ್ಣೇಶ್ವರಿ, ಮಹಿಳಾ ಹಕ್ಕುಗಳು, 2006, ಹೆಗ್ಗಡೆ ಪ್ರಕಾಶನ, ಮಂಡ್ಯ
29. ಒಡೆಯರ್ ಡಿ ಹೆಗ್ಗಡೆ, ಭಾರತದಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯ, 2007, ಅರ್ಜುನ್ ಪಬ್ಲಿಷಿಂಗ್ ಹೌಸ್, ಮೈಸೂರು
30. ಓನೊ ಮಾರ್ಕ್ ಹುಕಿಲ್ ರ್ಯೋಟ ಮತ್ತು ಚಂದ್ರಶೇಖರ ವಲ್ಲತ್, ಎಲೆಕ್ಟ್ರಾನಿಕ್ ಕಮ್ಯುನಿಕೇಷನ್ ಕನ್ವರ್ಜೆನ್ಸ್–ಪಾಲಿಸಿ ಚಾಲೆಂಜಸ್ ಇನ್ ಏಷಿಯಾ, 2000, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

31. ಕನ್ನೇಶ್ವರ ಎಮ್.ಎಸ್, ಲೋಕಧ್ವನಿ ಪತ್ರಿಕೆ–ಒಂದು ಅಧ್ಯಯನ, 2003, ಸ್ನಾತಕೋತ್ತರ ಪದವಿಗಾಗಿ ಸಾದರಪಡಿಸಿದ ಪ್ರಬಂಧ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

32. ಕಬ್ಬೂರ ಕೆ.ಎಸ್, ಭಾರತದಲ್ಲಿ ಪ್ರಜಾಪ್ರಭುತ್ವ, 1992, ಪ್ರಸಾರಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗ.

33. ಕಾಮತ್, ಎಂ.ವಿ, ವೃತ್ತಿ ಪತ್ರಿಕೋದ್ಯಮ, 1990, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು

34. ಕವಿತಾ ರೈ ಬಿ.ಆರ್ (2002) ಮಹಿಳಾ ಅಸ್ತಿತ್ವದ ಸಂಕಥನ, ಸಿ.ವಿ.ಜಿ ಬೆಂಗಳೂರು

35. ಕವಿತಾ ರೈ, ವಿವಾಹ ಮತ್ತು ಕುಟುಂಬ, ಮಂಟಪ ಮಾಲೆ 149, 2007, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

36. ಕಾನ್ವೆ ಕೈಲೆ, ಕಲ್ಚರಲ್ ಟ್ರಾನ್ಸ್‌ಲೇಸನ್, ಗ್ಲೋಬಲ್ ಟೆಲಿವಿಷನ್ ಸ್ಟಡೀಸ್ ಅಂಡ್ ದ ಸರ್ಕುಲೇಷನ್ ಆಫ್ ಟೆಲಿನಾವೆಲ್ಸ್ ಇನ್ ದ ಯುನೈಟೆಡ್ ಸ್ಟೇಟ್ಸ್, ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಕಲ್ಚರಲ್ ಸ್ಟಡೀಸ್, 2012, ಯೂನಿವರ್ಸಿಟಿ ಆಫ್ ನಾರ್ತ್ ಡಕೋಟಾ.

37. ಕಿಶೋರಿ ನಾಯಕ್ ಕೆ (ಸಂ), ಮಹಿಳಾ ಅಧ್ಯಯನ : ಸಾಧ್ಯತೆಗಳು ಮತ್ತು ಸವಾಲುಗಳು, 2007, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

38. ಕಿಶೋರಿ ನಾಯಕ್ ಕೆ, ಸ್ತ್ರೀವಾದಿ ನೆಲೆಗಳು ಹಾಗೂ ನಿಲುವುಗಳು, 1999, ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು

39. ಕುಪ್ಪಿಟ್ ಎಂ ಮತ್ತು ಸ್ಟಾಕ್‌ಬ್ರಿಡ್ಜ್, ಫ್ಯಾಮಿಲಿಸ್ ಅಂಡ್ ಎಲೆಕ್ಟ್ರಾನಿಕ್ ಎಂಟರ್‌ಟೈನ್‌ಮೆಂಟ್, 1996, ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಅಥಾರಿಟಿ, ಕ್ಯಾನ್‌ಬೆರ.

40. ಕುಮಾರ್ ಹರೀಶ್, ಫೋಕ್ ಮೀಡಿಯಾ ಅಂಡ್ ರೂರಲ್ ಡೆವಲಪ್‌ಮೆಂಟ್, 2006, ಇಂಡಿಯನ್ ಮೀಡಿಯಾ ಸ್ಟಡೀಸ್ ಜರ್ನಲ್.

41. ಕುಮಾರಪ್ಪ ಜಿ (ಅನು), ಮಾತೆಯರು ಮಾನ್ಯರಾಗಿದ್ದಾಗ, 1997, ನವ ಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.

42. ಕುಮಾರಪ್ಪ ಜಿ(ಅನು), ಮಹಿಳೆ–ಬಿಡುಗಡೆಯ ಹಾದಿಯಲ್ಲಿ, 1992, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಕರ್ನಾಟಕ, ಭಾರತ.

43. ಕೃಷ್ಣ, ಕನ್ನಡ ಟೆಲಿವಿಷನ್ ಸುದ್ದಿ ವಾಹಿನಿಗಳು:ಒಂದು ಅಧ್ಯಯನ, 2012, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾ ಪ್ರಬಂಧ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ, ಭಾರತ.

44. ಕೇಶವಶರ್ಮ ಕೆ, ಸ್ತ್ರೀವಾದಿ ಆಖ್ಯಾನ, 2005, ಸಾರಾ ಎಂಟರ್‌ಪ್ರೈಸಸ್, ಮೈಸೂರು

45. ಕೊಹ್ಲಿ, ಖಂಡೇಕರ್, ವನಿತ, ಇಂಡಿಯನ್ ಮೀಡಿಯಾ ಬಿಸಿನೆಸ್, 2006, ನ್ಯೂ ದೆಹಲಿ : ಕಾನ್ಸೆಪ್ಟ್ ಪಬ್ಲಿಷರ್ಸ್.

46. ಕೋಹ್ಲಿ, ವನಿತಾ ಮತ್ತು ಖಾಂಡೇಕರ್, ದಿ ಇಂಡಿಯನ್ ಮೀಡಿಯಾ ಬಿಸಿನೆಸ್, 2006, ರೆಸ್ಪಾನ್ಸ್ ಬುಕ್ಸ್, ನವ ದೆಹಲಿ, ಎರಡನೇ ಆವೃತ್ತಿ.
47. ಖಾದ್ರಿ ಅಚ್ಯುತನ್ ಎಸ್, ಟೆಲಿವಿಷನ್ ವರದಿಗಾರಿಕೆ, 2008, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
48. ಗಲ್ಲಾಘರ್ ಮಾರ್ಗರೇಟ್, ವಿಮೆನ್, ಮೀಡಿಯಾ ಅಂಡ್ ಡೆಮಾಕ್ರಾಟಿಕ್ ಸೊಸೈಟಿ: ಇನ್ ಪರ್ಸುಟ್ ಆಫ್ ರೈಟ್ಸ್ ಅಂಡ್ ಫ್ರೀಡಮ್ಸ್, ಡಿವಿಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್, 2002, ಯುನೈಟೆಡ್ ನೇಷನ್ಸ್, ನ್ಯೂಯಾರ್ಕ್, www.un.org/women/daw
49. ಗಾಯತ್ರಿ ಎನ್, ಬಿಡುಗಡೆಯ ಹಾದಿಯಲ್ಲಿ, 1996, ನವ ಕರ್ನಾಟಕ ಪ್ರಕಾಶನ, ಬೆಂಗಳೂರು
50. ಗಾಯತ್ರಿ ಎನ್, ಮಹಿಳಾ ಚಳುವಳಿಯ ಮಜಲುಗಳು, 1998, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಕರ್ನಾಟಕ.
51. ಗಾಯತ್ರಿ ಎನ್, ಸಂಚಲ, 2010, ಮಾ–ಲೆ ಪ್ರಕಾಶನ ಬೆಂಗಳೂರು
52. ಗಾಯತ್ರಿ ಎನ್, ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ, 2012, ಲಡಾಯಿ ಪ್ರಕಾಶನ, ಗದಗ.
53. ಗೀತಾ ಕೆ.ಎಸ್, ಮಹಿಳೆ, ಕಾನೂನು ಮತ್ತು ನ್ಯಾಯ, 2008, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
54. ಗೀತಾ ಕೃಷ್ಣಮೂರ್ತಿ, ಮಹಿಳೆ ಸಮಾಜ ಮತ್ತು ಕಾನೂನು, 2001, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
55. ಗುಂಡಪ್ಪ ಡಿ.ವಿ, ವೃತ್ತ ಪತ್ರಿಕೆ, 1988, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು.
56. ಗುಡಿಹಳ್ಳಿ ನಾಗರಾಜ್(ಸಂ), ಪತ್ರಕರ್ತರ ಸ್ಮರಣೆ ಸಂಚಿಕೆ, ಪತ್ರಕರ್ತರ 25ನೇ ರಾಜ್ಯ ಸಮ್ಮೇಳನ, ಸಂಪುಟ–40, ಸಂಚಿಕೆ–3, 2003, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ(ರಿ), ಬೆಂಗಳೂರು.
57. ಗುರು ಮಹೇಶ ಚಂದ್ರ, ಬಿ.ಪಿ, ವಿಮೆನ್ ಅಂಡ್ ಮಾಸ್ ಮೀಡಿಯಾ: ದ ಇಂಡಿಯನ್ ಸಿನೆರಿಯೊ, . 1996, ಕಮ್ಯುನಿಕೇಟರ್, ಜನವರಿ–ಮಾರ್ಚ್: 5–10.
58. ಗೋಪಾಲಕೃಷ್ಣರಾವ್ ಕೆ.ಎಲ್(ಅನು), ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ, 2007, ಪ್ರಗತಿ ಪ್ರಕಾಶನ, ಮಾಸ್ಕೋ.
59. ಗೌಡ ವಿ.ಹೆಚ್, ಮಹಿಳೆ ಮತ್ತು ಕಾನೂನು, 2004, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್ ಮೈಸೂರು.
60. ಘೋಷ್ ಭಾಸ್ಕರ್, ದೂರದರ್ಶನ್ ಡೇಸ್, 2005, ವೈಕಿಂಗ್, ನ್ಯೂ ಡೆಲ್ಲಿ.

61. ಚಕ್ರವರ್ತಿ ಮನು ಎನ್, ಭಾರತೀಯ ಸ್ತ್ರೀ ವಾದ, 1993, ಅಕ್ಷರ ಚಿಂತನ ಮಾಲೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ.
62. ಚಟರ್ಜಿ ಪಿ.ಸಿ, ಬ್ರಾಡ್‌ಕ್ಯಾಸ್ಟಿಂಗ್ ಇನ್ ಇಂಡಿಯಾ, 1987, ಸೇಜ್ ಪ್ರಕಾಶನ, ಅಂತಾರಾಷ್ಟ್ರೀಯ ಸಂವಹನ ಸಂಸ್ಥೆ ಸಹಯೋಗ.
63. ಚಂದೂನವರ ಜೆ.ಎಂ, ಪತ್ರಕರ್ತರಾಗಿ ಮೋರೆ ಹನುಮಂತರಾಯರು : ಒಂದು ಅಧ್ಯಯನ, 2008, ಮಧುರಾ ಪ್ರಕಾಶನ, ಧಾರವಾಡ
64. ಚಂದ್ರಶೇಖರ್ ಟಿ.ಆರ್, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, 2001, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.
65. ಚಂದ್ರಶೇಖರ್ ಟಿ.ಆರ್, ಕರ್ನಾಟಕ ಜನಗಣತಿ–2011, 2002, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
66. ಚಂದ್ರಶೇಖರ್ ಬಿ.ಎಸ್, ಸಂವಹನ ಮಾಧ್ಯಮಗಳು, 2003, ಪ್ರಸಾರಂಗ ಕನ್ನಡ ವಿಶ್ವವಿದ್ಯಾಯಲಯ ಹಂಪಿ.
67. ಚಂದ್ರಶೇಖರ್ ಟಿ.ಆರ್, ಕರ್ನಾಟಕ ಅಭಿವೃದ್ಧಿ ಸಾಮಾಜಿಕ ನೆಲೆಗಳು, 2003, ಸಿವಿಜಿ ಪಬ್ಲಿಕೇಷನ್ ಬೆಂಗಳೂರು.
68. ಚಂದ್ರಶೇಖರ್ ಟಿ.ಆರ್, ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ, 2010, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
69. ಚಂದ್ರಶೇಖರ್ ಆರ್.ವಿ, ಸಮಕಾಲೀನ ಮಹಿಳೆ ಮತ್ತು ಆರೋಗ್ಯ, 2010, ಅನ್ನದಾನಿ ಭೈರವ ಪ್ರಕಾಶನ, ಬೆಂಗಳೂರು
70. ಚಂದ್ರ ಪೂಜಾರಿ ಎಂ, ಸಂಶೋಧನಾ ಜವಾಬ್ದಾರಿ, 2005, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
71. ಚಿತ್ತರಗಿ ಪ್ರಶಾಂತ್, ಮಕ್ಕಳ ದೂರದರ್ಶನ ವೀಕ್ಷಣೆಯಲ್ಲಿ ಪೋಷಕರ ನಿಯಂತ್ರಣ : ಒಂದು ಅಧ್ಯಯನ, 1997, ಅಪ್ರಕಟಿತ ಪ್ರೌಢ ಪ್ರಬಂಧ, ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪ್ರತಿಕೋದ್ಯಮ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
72. ಛಾಯಾಧಾತರ್, ಸರಸ್ವತಿ ರಿಸಬೂಡ (ಅನು), ಸ್ತ್ರೀ–ಪುರುಷ, 1997, ಇಳಾ ಪ್ರಕಾಶನ, ಬೆಂಗಳೂರು.
73. ಜವರಯ್ಯ ಮ.ನ, ಜಾತಿ ಸತಿ ಮತ್ತು ಮಹಿಳೆ, 2000, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು.
74. ಜಾನ್‌ಸನ್ ನಿಕೊಲಸ್, ಎಲೆಕ್ಟ್ರಾನಿಕ್ ಕಮ್ಯುನಿಕೇಷನ್ ಕನ್ವರ್ಜೆನ್ಸ್, 2003, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ಇಂಡಿಯಾ, ಪು.16.

75. ಜೆಫ್ರಿ, ರಾಬಿನ್, ಇಂಡಿಯನ್ ನ್ಯೂಸ್ ಪೇಪರ್ ರೆವಲ್ಯೂಷನ್, ಕ್ಯಾಪಿಟಲಿಸಮ್, ಪೊಲಿಟಿಕ್ಸ್ ಅಂಡ್ ದ ಇಂಡಿಯನ್ ಲ್ಯಾಂಗ್ವೇಜ್ ಪ್ರೆಸ್, 1997, ಆಕ್ಸ್‌ಫರ್ಡ್ ವಿವಿ ಪ್ರಕಾಶನ.
76. ಜೋಗಿ, ನಿಮ್ಮ ಮನೆಯ ಟಿವಿಗೆ ಡಿಟಿಎಚ್ ಲಗ್ಗೆ, 2000, ಕನ್ನಡ ಪ್ರಭ, ವಾಣಿಜ್ಯ ಪುರುವಣಿ, 6 ನವೆಂಬರ್.
77. ಜ್ಯೋತ್ಸ್ನಾ ಕಾಮತ್, ಮಹಿಳೆ : ಒಂದು ಅಧ್ಯಯನ, 1999, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.
78. ಜೋಶಿ ಸಿ.ಟಿ, ಪತ್ರಿಕಾ ನೀತಿ ಸಂಹಿತೆ, ಪತ್ರಿಕೋದ್ಯಮ ಪುಸ್ತಕಮಾಲೆ –14, 2004, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
79. ಟುಚ್‌ಮನ್ ಗಯೆ (ಸಂ), ಹೆಲ್ತ್ ಅಂಡ್ ಹೋಮ್ಸ್ : ಇಮೇಜಸ್ ಆಫ್ ವಿಮೆನ್ ಇನ್ ದ ಮೀಡಿಯಾ, 1978, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಲಂಡನ್.
80. ದಸ್ತಗಿರಿಸಾಬ್ ದಿನ್ನಿ (ಸಂ), ಜಾಗತೀಕರಣ ಮತ್ತು ಸಂಸ್ಕೃತಿ, 2004, ಕನಸು ಪ್ರಕಾಶನ,
81. ದಾಸ್ ಸೌರವ್ ಅಂಡ್ ಶಲೊಮ ಥಾಕೂರ್, ಪೋಟ್ರಯಲ್ ಆಫ್ ಜೆಂಡರ್ ಇನ್ ಮೀಡಿಯಾ ಅಂಡ್ ಇಟ್ಸ್ ರೋಲ್ ಇನ್ ಪ್ರಮೋಟಿಂಗ್ ಜೆಂಟರ್ ವಯಲೆನ್ಸ್ ಇನ್ ರಿಯಲ್ ಲೈಫ್, 2016, ಉದ್ಗಮ್ ವಿಗ್ಯಾತಿ – ದ ಆರಿಜಿನ್ ಆಫ್ ನಾಲೆಡ್ಜ್
82. ದೀಕ್ಷಿತ್ ಶ್ರೀಧರ್, ಇಂಟರ್‌ನೆಟ್ ಪತ್ರಿಕೋದ್ಯಮ, 2004, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
83. ದುರ್ಗದಾಸ್ ಬಸು, ಲಾ ಆಫ್ ದ ಪ್ರೆಸ್, 1996, ಪ್ರೆಂಟಿಸ್ ಹಾಲ್ ಆಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮೂರನೇ ಆವೃತ್ತಿ.
84. ದೇವೇಂದ್ರಕುಮಾರ್ ಹಕಾರಿ, ಸಮೂಹ ಸಂವಹನ (ವೃತ್ತ ಪತ್ರಿಕೆ ವರದಿ ಲೇಖನ), 2001, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
85. ದೇಸಾಯಿ ಎಂ.ವಿ ಮತ್ತು ನೀನನ್, ಸೇವಂತಿ, ಬಿಯೋಂಡ್ ದೋಸ್ ಹೆಡ್‌ಲೈನ್, ಇನ್‌ಸೈಡರ್ಸ್ ಆನ್ ದ ಇಂಡಿಯನ್ ಪ್ರೆಸ್, 1996, ದ ಮೀಡಿಯಾ ಫೌಂಡೇಷನ್, ನವದೆಹಲಿ.
86. ಧರಣಿದೇವಿ ಮಾಲಗತ್ತಿ, ಸ್ತ್ರೀವಾದ ಮತ್ತು ಭಾರತೀಯತೆ, 1998, ಚೇತನ ಬುಕ್‌ಹೌಸ್, ಮೈಸೂರು.
87. ನಡಗೇರಿ ಎಸ್.ಆರ್, ಕಾನೂನು ಮತ್ತು ಮಹಿಳೆ, 2005, ಶ್ರೀರಾಜಗುರು ಪ್ರಕಾಶನ, ಬಿಜಾಪೂರ.
88. ನಂಜಮಣ್ಣಿ ಎಂ, ಸಾಮಾಜಿಕ ಮಾನವಶಾಸ್ತ್ರ, 1971, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

89. ನಾಗರಾಜ್ ಕೆ.ವಿ, ನಾಗಾಚಾರ್ ಪಿ, ಪತ್ರಿಕಾ ವೃತ್ತಿ, 1999, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
90. ನಾಗಾರ್ಜುನ ಹಾಮ (ಸಂ), ಸ್ತ್ರೀವಾದಿ ಚಿಂತನೆಗಳು, 2010, ದೇಸಿ ಪುಸ್ತಕ, ಬೆಂಗಳೂರು.
91. ನಾಡಿಗ ಕೃಷ್ಣಮೂರ್ತಿ, ಭಾರತೀಯ ಪತ್ರಿಕೋದ್ಯಮ, 1969, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.
92. ನಿರೂಪಮಾ (1996), ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ, ಆರತಿ ಪಬ್ಲಿಕೇಷನ್, ಬೆಂಗಳೂರು.
93. ನೀನನ್ ಎಸ್, ಟ್ರೀಟ್‌ಮೆಂಟ್ ಆಫ್ ವಿಮೆನ್ ಇನ್ ಪ್ರಿಂಟ್ ಮೀಡಿಯಾ, ಇನ್ ಎಂಪವರಿಂಗ್ ವಿಮೆನ್ ಥ್ರೂ ಮೀಡಿಯಾ, 1991, ವರ್ಲ್ಡ್ ಅಸೋಸಿಯೇಷನ್ ಫಾರ್ ಕ್ರಿಶ್ಚಿಯನ್ ಕಮ್ಯೂನಿಕೇಶನ್, ಬೆಂಗಳೂರು, ಕರ್ನಾಟಕ.
94. ನೀಲಾ ಕೆ, ಬದುಕು ಬಂದೀಖಾನೆ, 2002, ಜನವಾದಿ ಮಹಿಳಾ ವೇದಿಕೆ, ಗುಲ್ಬರ್ಗಾ
95. ನೇಮಿಚಂದ್ರ (ಸಂ), ಮಹಿಳಾ ಲೋಕ, 2005, ನವ ಕರ್ನಾಟಕ ಪ್ರಕಾಶನ, ಬೆಂಗಳೂರು
96. ನೇಮಿಚಂದ್ರ, ಮಹಿಳಾ ಅಧ್ಯಯನ, 2001, ಅಂಕಿತ ಪುಸ್ತಕ, ಬೆಂಗಳೂರು
97. ಪರಮಶಿವಮೂರ್ತಿ, ಸಂವಹನ ಕನ್ನಡ, 1997, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
98. ಪಾವರ್, ಶೆಟ್ಟಿ, ಟೆಲಿವಿಷನ್ ಡಿಸ್ರಪ್ಟೆಡ್, ದ ಟ್ರಾನ್ಸಿಷನ್ ಫ್ರಮ್ ನೆಟ್‌ವರ್ಕ್ ಟು ನೆಟ್‌ವರ್ಕ್ಡ್ ಟಿವಿ, 2006, ಫೋಕಲ್ ಪ್ರೆಸ್.
99. ಪಾರ್ವತಿ ಜಿ ಐತಾಳ್, ಪತ್ರಿಕೋದ್ಯಮ ಮತ್ತು ಭಾಷಾಂತರ, 2007, ಭಂಡಾರ್‌ಕಾರ್ಸ್ ಕಾಲೇಜ್, ಕುಂದಾಪುರ.
100. ಪೂರ್ಣಿಮಾ ಟಿ.ಸಿ, ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ, 2003, ಸಂಶೋಧನಾ ಪ್ರಬಂಧ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
101. ಪ್ರಭಾಮಣಿ, ಮಹಿಳೆ ಮತ್ತು ಧರ್ಮ, 2002, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
102. ಪ್ರಭಾವತಿ ಎಸ್.ವಿ, ಜಾಗತೀಕರಣ ಮತ್ತು ಮಹಿಳೆ, 2006, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
103. ಪ್ರವೀಣ್ ಫರ್ನಾಂಡಿಸ್, 21ನೇ ಶತಮಾನದಲ್ಲಿ ಮಹಿಳಾ ಸಮಾನತೆ, ಅಭಿವೃದ್ಧಿ, ಶಾಂತಿ 2002, ಐಬಿಎಚ್ ಪ್ರಕಾಶನ, ಬೆಂಗಳೂರು
104. ಪ್ರಶಾಂತ್ ಎಚ್.ಡಿ ಮತ್ತು ವೀರಭದ್ರನಾಯ್ಕ ಪಿ, ಸಾಮಾಜಿಕ ತಲ್ಲಣಗಳು ಕಾಳಜಿಗಳು, ಕನಸುಗಳು (ಪ್ರೊ. ಆರ್.ಇಂದಿರಾ ವಿಚಾರ ಸ್ಪಂದನೆ ಸಂಪುಟ), 2015, ರೂಪ ಪ್ರಕಾಶನ, ಮೈಸೂರು.
105. ಫ್ರೈಡ್ ಅಂತೋಣಿ, ರೈಟಿಂಗ್ ಫಾರ್ ವಿಶುಯಲ್ ಮೀಡಿಯಾ, 2007, ಲಿನಾಕರೆ ಹೌಸ್, ಆಕ್ಸ್‌ಫರ್ಡ್, ಯು.ಕೆ

106. ಬಥ್ಲಾ ಸೋನಿಯಾ, ವಿಮೆನ್, ಡೆಮಾಕ್ರಸಿ ಅಂಡ್ ದ ಮೀಡಿಯಾ, 1998, ಸೇಜ್ ಪಬ್ಲಿಕೇಷನ್ಸ್, ನ್ಯೂ ಡೆಲ್ಲಿ, ಇಂಡಿಯಾ.
107. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ; ಶ್ರಮ ಮತ್ತು ಸೃಜನಶೀಲತೆ, 2005, ಅಂಕಿತ ಪ್ರಕಾಶನ, ಬೆಂಗಳೂರು.
108. ಬಾಲನ್ ಎಸ್, ಕನಿಷ್ಠ ವೇತನದ ಹೆಸರಿನಲ್ಲಿ ಹಸಿವಿನ ವೇತನವನ್ನು ನಿಗದಿಗೊಳಿಸಿರುವ ಕರ್ನಾಟಕ ಸರಕಾರ, 2013, ಕರ್ನಾಟಕ ಶ್ರಮಿಕಶಕ್ತಿ, ಬೆಂಗಳೂರು.
109. ಬಾಲಸುಬ್ರಹ್ಮಣ್ಯಂ ಎ.ಎಸ್, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ–ಒಂದು ಅವಲೋಕನ, 2009, ಪತ್ರಿಕೋದ್ಯಮ ಪುಸ್ತಕ ಮಾಲೆ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.
110. ಮಂಗಳ ಚಿ.ನ, ಎಚ್ಚೆತ್ತ ಹಾದಿಯಲ್ಲಿ ಮಹಿಳೆ, 1990, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
111. ಮಂಗಳಾ ಪ್ರಿಯದರ್ಶಿನಿ ಡಿ, ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, 2007, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ
112. ಮನಮೋಹನರಾವ್ (ಸಂ), ನ್ಯೂಸ್ ಇಂಡಿಯಾ ಅಂಡ್ ನ್ಯೂ ಮೀಡಿಯಾ ನಾನ್ ಯಂಗ್ ಟೆಕ್ನಾಲಜಿ ಯೂನಿವರ್ಸಿಟಿ, 2003, ಈಸ್ಟರ್ನ್ ಯೂನಿವರ್ಸಿ ಪ್ರೆಸ್
113. ಮಮತಾ ಜಿ. ಸಾಗರ್, ಮಹಿಳಾ ವಿಷಯ (ಮಹಿಳೆ ಭಾಷೆ ಸಾಹಿತ್ಯ, ಸಂಸ್ಕೃತಿ ಕುರಿತ ಬಿಡಿ ಬರಹಗಳು), 2007, ಇಳಾ ಪ್ರಕಾಶನ, ಬೆಂಗಳೂರು.
114. ಮಹೇಶ್ ಹೆಚ್. (ಸಂ), ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ, 1999, ಐ.ಸಿ.ಆರ್.ಎ ಬೆಂಗಳೂರು.
115. ಮಿತ್ರಾ ಆನಂದ, ಟೆಲಿವಿಷನ್ ಅಂಡ್ ಪಾಪುಲರ್ ಕಲ್ಚರ್ ಇನ್ ಇಂಡಿಯಾ, 1993, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.
116. ಮುಳಗುಂದ ಚ.ವಿ ಮತ್ತು ನಾಗೇಶ್ ಹೆಚ್.ವಿ (ಸಂ), ಆಧುನಿಕ ಮಹಿಳೆ ಮತ್ತು ಸಮಾಜ, 1989, ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ.
117. ಮೂರ್ತಿಶ್ವರಯ್ಯ ಬೇ.ಕಾ, ಮಹಿಳೆ ಸಮಾಜ ಮತ್ತು ಕಾನೂನು, 2008, ಸ್ವಪ್ನ ಬುಕ್ ಹೌಸ್, ಬೆಂಗಳೂರು.
118. ಮೇಯರ್ಸ್ ಎಂ, ನ್ಯೂಸ್ ಕವರೇಜ್ ಆಫ್ ವಯಲೆನ್ಸ್ ಎಗೈನ್ಸ್ಟ್ ವಿಮೆನ್, 1997, ಲಂಡನ್: ಸೇಜ್ ಪಬ್ಲಿಕೇಷನ್ಸ್.
119. ಮೈತ್ರೇಯಿ ಮುಖ್ಯೋಪಾಧ್ಯಾಯ (ಅನು) ವೈದೇಹಿ, ಬೆಳ್ಳಿಯ ಸಂಕೋಲೆಗಳು, 1985, ಅಕ್ಷರ ಪ್ರಕಾಶನ, ಸಾಗರ.
120. ಮೊದಲಿಯಾರ್ ಗಂಗಾಧರ್, ಕನ್ನಡ ಸಿನಿಮಾ, ಇತಿಹಾಸದ ಮಟಗಳಲ್ಲಿ, 1996, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

121. ರವಿ ಬಿ.ಕೆ ಮತ್ತು ಎಂ.ಆರ್.ಸತ್ಯಪ್ರಕಾಶ್, ಮಾಧ್ಯಮ ಉದ್ಯಮ, 2008, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಕರ್ನಾಟಕ, ಭಾರತ.
122. ರಂಗಸ್ವಾಮಿ ಎ.(ಸಂ), ಕರ್ನಾಟಕದಲ್ಲಿ ಮಹಿಳಾ ಚಳವಳಿಗಳು, 2011, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ, ಮೈಸೂರು.
123. ರಂಗನಾಥರಾವ್ ಜಿ.ಎನ್, ಪತ್ರಿಕೋದ್ಯಮ, . 2005, ಕಾಮಧೇನು ಪ್ರಕಾಶನ, ಬೆಂಗಳೂರು.
124. ರತ್ನಮ್ಮ ಕೆ.ಎಸ್, ಮಹಿಳಾ ಮೀಸಲಾತಿ, 2005, ಈಶ್ವರಿ ಪ್ರಕಾಶನ, ಮೈಸೂರು.
125. ರಾಗೌ (ಸಂ), ಮಹಿಳಾ ಅಧ್ಯಯನದ ಆಯಾಮಗಳು, 2008, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಮೈಸೂರು.
126. ರಾಮಚಂದ್ರಪ್ಪ ಬರಗೂರು, ಸಮೂಹ ಮಾಧ್ಯಮಗಳ ಪದವಿವರಣ ಕೋಶ, 2002, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜಪೇಟೆ, ಬೆಂಗಳೂರು.
127. ರಾವ್ ದಿಗುಮಾರ್ತಿ ಭಾಸ್ಕರ ಮತ್ತು ದಿಗುಮಾರ್ತಿ ಪುಷ್ಪಲತಾ ರಾವ್, ವಿಮೆನ್, ಚಾಲೆಂಜಸ್ ಅಂಡ್ ಅಡ್ವಾನ್ಸ್‌ಮೆಂಟ್, 1999, ಡಿಸ್ಕವರಿ ಪಬ್ಲಿಷಿಂಗ್ ಹೌಸ್, ನ್ಯೂ ಡೆಲ್ಲಿ, ಇಂಡಿಯಾ.
128. ರೇಣುಕಾರ್ಯ ಸಿ.ಕೆ, ಮಹಿಳೆ ಮತ್ತು ಅಭಿವೃದ್ಧಿ, 2006, ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಮೈಸೂರು.
129. ರೋಸ್ ಕರೇನ್, ವಿಮೆನ್ ಪಾಲಿಟಿಸಿಯನ್ಸ್ ಅಂಡ್ ಮೇಲ್‌ಸ್ಟ್ರೀಮ್ ಮೀಡಿಯಾ: ಎ ಗೇಮ್ ಆಫ್ ಟು ಸೈಡ್ಸ್ ಅಕೇಷನಲ್ ಪೇಪರ್, 2003, ಸೆಂಟರ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ವಿಮೆನ್ ಇನ್ ಪಾಲಿಟಿಕ್ಸ್, ಸ್ಕೂಲ್ ಆಫ್ ಪಾಲಿಟಿಕ್ಸ್, ಕ್ವೀನ್ಸ್ ಯೂನಿವರ್ಸಿಟಿ, ಬೆಲ್‌ಫಾಸ್ಟ್.
130. ಲೂಥ್ರಾ ಎಚ್.ಆರ್, ಇಂಡಿಯನ್ ಬ್ರಾಡ್‌ಕ್ಯಾಸ್ಟಿಂಗ್, 1986, ಪ್ರಕಾಶನ ವಿಭಾಗ, ವಾರ್ತಾ ಮತ್ತು ಪ್ರಸಾರ ಇಲಾಖೆ, ಭಾರತ ಸರಕಾರ
131. ಲೆಕ್ನರ್ ಸಾರಾ ಮತ್ತು ಅಲ್ರಿಕಾ ಫಾಚೆಟ್, ಇಂಟರ್‌ನ್ಯಾಷನಲ್ ಮೀಡಿಯಾ ಅಂಡ್ ಕಮ್ಯುನಿಕೇಷನ್ ಸ್ಟಾಟಿಸ್ಟಿಕ್ಸ್, 2010, ನಾರ್ಡಿಕಾಮ್, ಯೂನಿವರ್ಸಿಟಿ ಆಫ್ ಗೊಥೆನ್‌ಬರ್ಗ್, ಸ್ವೀಡನ್.
132. ವರದಾ ಶ್ರೀನಿವಾಸ್, ಮಹಿಳೆಯ ಸ್ಥಿತಿ ಗತಿ ಅಂದು ಇಂದು, 1999, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
133. ವಂದನಾಶಿವ (ಅನು) ಮಾಧವ ಐತಾಳ್, ಭತ್ತದ ಚಿಲುಮೆ, 2005, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
134. ವಿಜಯಾ ದಬ್ಬೆ, ನಾರಿ ದಾರಿ ದಿಗಂತ, 1997, ರಚನಾ ಪ್ರಕಾಶನ, ಮೈಸೂರು.

135. ವಿಜಯಶ್ರೀ ಸಬರದ (ಸಂ), ಮಹಿಳೆ ಶೋಷಣೆ ಸವಾಲುಗಳು, 2005, ಪ್ರಸಾರಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

136. ವಿಠಲರಾವ್ ಟ ಗಾಯಕ್ವಾಡ (ಅನು), ಭಾರತೀಯ ಸ್ತ್ರೀ ಜೀವನ, 2009, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

137. ವೆಂಕಟರಾಮಪ್ಪ ಕೆ.ಎನ್, ಸ್ತ್ರೀ ಮತ್ತು ಸಮಾಜ, 1971, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

138. ವೆಂಕಾರೆಡ್ಡಿ ಮಧು ಮತ್ತು ರಘುನಾಥ್ ಶಾಲಿನಿ(ಸಂ), ಅಭಿವ್ಯಕ್ತಿ, 1995, ಉತ್ತರ ಕರ್ನಾಟಕ ಲೇಖಕಿಯರ ಸಂಘ. ಹುಬ್ಬಳ್ಳಿ, ಕರ್ನಾಟಕ.

139. ವೆಂಕೋಬರಾವ್ ಡಿ, ನ್ಯಾಯಕ್ಕಾಗಿ ಮಹಿಳೆಯರ ಹೋರಾಟ, 2000, ದಿವ್ಯಚಂದ್ರ ಪ್ರಕಾಶನ, ಮೈಸೂರು.

140. ಶಂಕರ್‌ರಾವ್ ಚ.ನ, ಭಾರತೀಯ ಸಮಾಜ, 2000, ಜೈ ಭಾರತ ಪ್ರಕಾಶನ, ಮಂಗಳೂರು.

141. ಶಂಕರ್ ನಾರಾಯಣ್‌ರಾವ್ ಎನ್.ಪಿ, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, 1991, ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

142. ಶಮಂತ್, ದುಡಿತ ಮಿಡಿತ, 2001, ಐಬಿಎಚ್ ಪ್ರಕಾಶನ, ಬೆಂಗಳೂರು

143. ಶರ್ಮಾ ಅರ್ಪಿತ, ಪೋಟ್ರಯಲ್ ಆಫ್ ವಿಮೆನ್ ಇನ್ ಮಾಸ್ ಮೀಡಿಯಾ, 2013, ಮೀಡಿಯಾ ವಾಚ್, ಆನ್ ಇಂಟರ್‌ನ್ಯಾಷನಲ್ ರೀಸರ್ಚ್ ಜರ್ನಲ್ ಇನ್ ಕಮ್ಯುನಿಕೇಷನ್ ಅಂಡ್ ಮೀಡಿಯಾ, ಒಡಿಸ್ಸಾ, ಇಂಡಿಯಾ.

144. ಶರ್ಮಾ ಕೆ.ಎಸ್, ಸಮಾಜವಾದಿ ಮಹಿಳೆ, 1978, ಪುರೋಗಾಮಿ ಸಾಹಿತ್ಯ ಪ್ರಕಾಶನ, ಧಾರವಾಡ.

145. ಶರ್ಮ ಜಿತೇಂದ್ರ ಕುಮಾರ್, ಡಿಜಿಟಲ್ ಬ್ರಾಡ್‌ಕಾಸ್ಟಿಂಗ್ ಜರ್ನಲಿಸಮ್, 2003, ದೆಹಲಿ.

146. ಶರತ್ ಹೆಗ್ಡೆ, ಪತ್ರಕರ್ತರು ಮತ್ತು ವೃತ್ತಿಪರತೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಅಧ್ಯಯನ, 2006, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ

147. ಶಿರಸಂಗಿ ಸುನೀಲ್, ಬೆಂಗಳೂರು ದೂರದರ್ಶನ ವಾರ್ತೆಗಳು ಮತ್ತು ಉದಯ ಟಿವಿ ವಾರ್ತೆಗಳು ತುಲನಾತ್ಮಕ ಅಧ್ಯಯನ, 1998, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

148. ಶ್ರೀನಿವಾಸ್ ಸಿರನೂರ್‌ಕರ್, ವಿಜ್ಞಾನೇಶ್ವರ ಮಿತಾಕ್ಷರ, 2005, ಪ್ರಸಾರಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ

149. ಶ್ರೀಬರ್ನಿ ಮೊಹಮ್ಮದಿ ಎ, ವಿಮೆನ್, ಮೀಡಿಯಾ ಅಂಡ್ ಡೆವಲಪ್‌ಮೆಂಟ್ ಇನ್ ಎ ಗ್ಲೋಬಲ್ ಕಾಂಟೆಕ್ಸ್ಟ್, 1994, ಯುನೆಸ್ಕೊ.

150. ಶ್ರೀಮತಿ ಎಚ್.ಎಸ್, ಹೆಣ್ಣು ಹೆಂಗಸು, 2004, ಬ್ಯಾಲದಕೆರೆ ಪ್ರಕಾಶನ, ಮಂಡ್ಯ

151. ಶ್ರೀಮತಿ ಎಚ್.ಎಸ್, ಸ್ತ್ರೀವಾದ, 2002, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
152. ಶ್ರೀಮತಿ ಎಚ್.ಎಸ್, ಚಹರೆ, 1999, ಇಳಾ ಪ್ರಕಾಶನ, ಬೆಂಗಳೂರು
153. ಶ್ರೀಮತಿ ಎಚ್.ಎಸ್ (ಅನು), ದ ಸೆಕೆಂಡ್ ಸೆಕ್ಸ್, 2007, ಅಧ್ಯಯನ ಮಂಡಲಿ, ಬೆಂಗಳೂರು.
154. ಶೇಷಾದ್ರಿ ಕೆ.ಎನ್, ಸಂವಿಧಾನ ಕಾನೂನು ಮತ್ತು ಮಹಿಳೆ, 1985, ಜಾಗೃತ ಭಾರತ, ಧಾರವಾಡ.
155. ಶೈಲಜಾ ಹಿರೇಮಠ, ಮಾತೃಪ್ರಧಾನ ಪರಿಕಲ್ಪನೆ, 2004, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
156. ಶೈಲಜಾ ಹಿರೇಮಠ, ಪಾತರದವರು, 1999, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
157. ಶೈಲಜಾ ಹಿರೇಮಠ, ಮಹಿಳಾ ಕಾರ್ಮಿಕರು, 2012, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.
158. ಶೈಲಜಾ ಎಂ.ಸಿ ಮತ್ತು ಇತರರು, ದುಡಿಯುವ ಕೈಗಳಿಗೆ ಉದ್ಯೋಗ, 2006, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
159. ಶೋಭಾ ಹೆಚ್.ಜಿ, ಸಾಮಾಜಿಕ ಪಿಡುಗುಗಳ ಮಧ್ಯ ಹೆಣ್ಣು, 2004, ಸ್ತ್ರೀ ಜಾಗೃತಿ ಪ್ರಕಾಶನ, ಗಾಂಧೀ ಬಜಾರ್, ಬೆಂಗಳೂರು.
160. ಸಬಿಹಾ ಭೂಮಿಗೌಡ (ಸಂ), ಮಹಿಳೆ ಸಂಘಟನೆ ಹೋರಾಟ, 2008, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
161. ಸಮತಾ ಬಿ ದೇಶಮಾನೆ. ಸಮಾಜಶಾಸ್ತ್ರ ಮತ್ತು ಮಹಿಳೆ, 2003, ಚೇತನ್ ಬುಕ್ ಹೌಸ್, ಬೆಂಗಳೂರು.
162. ಸರಸ್ವತಿ ದು. (ಸಂ), ನೀರದಾರಿ (ದಲಿತ ಮಹಿಳಾ ಪ್ರಜ್ಞೆ– ವಿಭಿನ್ನ ನೆಲೆಗಳಿಂದ), 2014, ಕವಿ ಪ್ರಕಾಶನ, ಉತ್ತರ ಕನ್ನಡ.
163. ಸರಸ್ವತಿ ದು (ಅನು), ಕನಿಷ್ಠ ವೇತನಗಳಿಗೆ ಸಂಬಂಧಪಟ್ಟ ಕಾನೂನು, 2006, ಪ್ರಕಟಣೆ ಆಲ್ಟರನೇಟಿವ್ ಲಾ ಪೋರಂ, ಬೆಂಗಳೂರು.
164. ಸರೋಜ ಕೆ, ಮಹಿಳೆ ಮತ್ತು ಸಮೂಹ ಮಾಧ್ಯಮಗಳು, 2004, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.
165. ಸರೋಜಾ ಕೆ, ಮಹಿಳಾ ಆರೋಗ್ಯ, ಒಂದು ಮರು ಚಿಂತನೆ, 2008, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
166. ಸ್ವಾರ್ಟ್ ಡಬ್ಲು ಮತ್ತು ಹೈಡೆ ಹೌಟನ್, ಟಿವಿ ಅಂಡ್ ರೇಡಿಯೋ ಅನೌನ್ಸಿಂಗ್, 1998, ಮುಫಿಲಿನ್ ಪಬ್ಲಿಕೇಷನ್ಸ್.
167. ಸಿಂಗ್ ಮನೋಜ್‌ಕುಮಾರ್, ಮೇಕಿಂಗ್ ಆಫ್ ನ್ಯೂಸ್, 2007, ಮೋಹಿತ್ ಪಬ್ಲಿಷರ್ಸ್, ನವದೆಹಲಿ.

168. ಸುನಂದಮ್ಮ ಆರ್., ಮಹಿಳಾ ಸಂಸ್ಕೃತಿ, 2005, ಸಮತಾ ಅಧ್ಯಯನ ಕೇಂದ್ರ, ಮೈಸೂರು.
169. ಸುಮಿತ್ರಾಬಾಯಿ ಬಿ.ಎನ್ ಮತ್ತು ಗಾಯಿತ್ರಿ ಎನ್, ಸ್ತ್ರೀವಾದಿ ಪ್ರವೇಶಿಕೆ, 1995, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.
170. ಸುಜ್ಞಾನಮೂರ್ತಿ ಬಿ. (ಅನು), ಕುಟುಂಬ ವ್ಯವಸ್ಥೆ ಮಾರ್ಕ್ಸ್‌ವಾದ–ಸ್ತ್ರೀವಾದ, 2010, ಪಲ್ಲವ ಪ್ರಕಾಶನ, ಚನ್ನಪಟ್ಟಣ.
171. ಸೇನ್‌ಗುಪ್ತ ಕಮಿಟಿ ವರದಿ, ಎಲೆಕ್ಟ್ರಾನಿಕ್ ಮೀಡಿಯಾ, 1996, ಗೌರ್ನಮೆಂಟ್ ಆಫ್ ಇಂಡಿಯಾ, ನ್ಯೂಡೆಲ್ಲಿ.
172. ಹಾಲತಿ ಸೋಮಶೇಖರ್, ಮಹಿಳೆ ಒಂದು ಚಿಂತನೆ, 2012, ವಿಸ್ಮಯ ಪ್ರಕಾಶನ, ಮೈಸೂರು.
173. ಹೇಮಾ ಪಟ್ಟಣಶೆಟ್ಟಿ, ಮರ್ಯಾದೆಯ ಮುಸುಕಿನಲ್ಲಿ, 1992,ಅನನ್ಯ ಪ್ರಕಾಶನ, ಧಾರವಾಡ.
174. ಹೇಮಲತಾ ಮಹಿಷಿ, ಇಪ್ಪತ್ತೊಂದನೆಯ ಶತಮಾನದ ಮಹಿಳೆ, 1999, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅನುಬಂಧ 5

ಸುದ್ದಿ ವಾಹಿನಿಗಳ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿಗಳ ಸಾಂದರ್ಭಿಕ ಛಾಯಾಚಿತ್ರಗಳ ನೋಟ



ನ್ಯೂಸ್ ರೂಮ್‌ನಲ್ಲಿ ಔಟ್‌ಪುಟ್ ಕೆಲಸದಲ್ಲಿ ತೊಡಗಿರುವ ಮಹಿಳಾ ಉದ್ಯೋಗಿಗಳು.




ಸ್ಟುಡಿಯೋದಲ್ಲಿ ಸುದ್ದಿ ಓದಲು ತಯಾರಾಗಿರುವ ವಾರ್ತಾವಾಚಕಿ







ಸುದ್ದಿ ಓದುತ್ತಿರುವ ನ್ಯೂಸ್ ರೀಡರ್



ನ್ಯೂಸ್ ರೂಮ್‌ನಲ್ಲಿ ಮೇಕಪ್ ಮಾಡುತ್ತಿರುವ ಪ್ರಸಾಧನಾ ಕಲಾವಿದೆ.



ಕಾರ್ಯಕ್ರಮದ ಸ್ಥಳದಿಂದ ಸುದ್ದಿ ಕೊಡುತ್ತಿರುವ ವರದಿಗಾರ್ತಿ




ಮುದ್ರಿತ ಕಾರ್ಯಕ್ರಮವನ್ನು ನಿರೂಪಿಸುತ್ತಿರುವ ಆ್ಯಂಕರ್ಸ್







ಸುದ್ದಿ ಸಂಗ್ರಹಿಸುತ್ತಿರುವ ವಾಹಿನಿಗಳ ಮಹಿಳಾ ಪ್ರತಿನಿಧಿಗಳು



ವಾಹಿನಿಯ ಕಚೇರಿಯಲ್ಲಿ ಇನ್‌ಪುಟ್ ಮತ್ತು ಔಟ್‌ಪುಟ್ ಕಾರ್ಯದಲ್ಲಿ ತೊಡಗಿರುವ ಮಹಿಳಾ ಸಿಬ್ಬಂದಿ







ಸುದ್ದಿಗಳ ಚಿತ್ರೀಕರಣದಲ್ಲಿ ತೊಡಗಿರುವ ವಾಹಿನಿಯ ಕ್ಯಾಮೆರಾ ವುಮೆನ್



ನ್ಯೂಸ್ ಓದುವ ಸ್ಟುಡಿಯೋದಲ್ಲಿ ಕುಳಿತು, ಸುದ್ದಿ ಓದುತ್ತಿರುವ ವಾರ್ತಾವಾಚಕಿ ಮತ್ತು ಸ್ಟುಡಿಯೋ ಸಂಪೂರ್ಣ ನೋಟ







ಪಿಸಿಆರ್ ಜತೆ ಕೆಲಸ ಮಾಡುತ್ತಿರುವ ಮಹಿಳಾ ಸಿಬ್ಬಂದಿ. ಪುರುಷ ಸಿಬ್ಬಂದಿ ಕೂಡ ಇದ್ದಾರೆ.



ಸುದ್ದಿಯ ವಿಶ್ಲೇಷಣೆಯಲ್ಲಿ ತೊಡಗಿರುವ ವರದಿಗಾರ್ತಿ








ಸಂಕಲನದ ಕಾರ್ಯದಲ್ಲಿ ಮಹಿಳಾ ಸಿಬ್ಬಂದಿ



ಪುರುಷ ಸಹೋದ್ಯೋಗಿಗಳ ಜತೆ ಫೀಲ್ಡ್‌ನಲ್ಲಿ ವರದಿಗಾರ್ತಿಯರು



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಮಹಿಳಾ ಅಧ್ಯಯನ ವಿಭಾಗ